

# ಸೌಹಾರ್ದ ಸಹಕಾರಿ ಕಾಯಿದೆ
# ಆಡಳಿತ ಕೈಪಿಡಿ


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

ದೂ : 080-23378375-80, ವೆಬ್ ತಾಣ : www.Souharda.coop

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

# ಸೌಹಾರ್ದ ಸಹಕಾರಿ ಕಾಯಿದೆ ಆಡಳಿತ ಕೈಪಿಡಿ


| | | |
|---|---|---|
| **ಪ್ರಕಾಶಕರು** | : | **ವ್ಯವಸ್ಥಾಪಕ ನಿರ್ದೇಶಕರು,**<br>**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**<br>ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ<br>ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055<br>ದೂರವಾಣಿ: 080–23378375–80<br>ಇ–ಮೇಲ್: souharda@souharda.coop<br>ವೆಬ್‌ಸೈಟ್: www.souharda.coop |
| **ಮುದ್ರಣ ವರ್ಷ** | : | ಆಗಸ್ಟ್ 2024 |
| **ಪುಟಗಳು** | : | 276 |
| **ಪ್ರತಿಗಳು** | : | 500 |
| **ಬೆಲೆ** | : | 200/– |
| **ವಿನ್ಯಾಸ** | : | **ಶಂಕರ್ ಎಸ್** |
| **ಮುದ್ರಕರು** | : | **ಶಕ್ತಿ ಪ್ರಿಂಟೆಕ್**<br>ನಂ.16, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,<br>ರಾಮಚಂದ್ರಾಪುರ, ಬೆಂಗಳೂರು–560021 |

# ಸೌಹಾರ್ದ ಸಹಕಾರಿ ಕಾಯಿದೆ ಆಡಳಿತ ಕೈಪಿಡಿ



– ಲೇಖಕರು –

**ಸಿ.ಎನ್. ಪರಶಿವಮೂರ್ತಿ, ಎಂ.ಎಸ್.ಡಬ್ಲ್ಯೂ, ಎಲ್.ಎಲ್.ಬಿ.**

**ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಬೆಂಗಳೂರು.

**2024**



**ನನ್ನ ಪತ್ನಿ**
**ಶ್ರೀಮತಿ ಸರೋಜ ಪರಶಿವಮೂರ್ತಿ**
**ಇವರ**
**ಜ್ಞಾಪಕಾರ್ತ**

**ಈ ಪುಸ್ತಕದ ಹಕ್ಕು ಶ್ರೀ ಸಿ.ಎನ್. ಪರಶಿವಮೂರ್ತಿ ಯವರಿಗೆ ಕಾಯ್ದಿರಿಸಿದೆ.**

## ಮುನ್ನುಡಿ

ಶ್ರೀಯುತ ಸಿ.ಎನ್. ಪರಶಿವಮೂರ್ತಿಯವರು ಸಹಕಾರಿ ಇಲಾಖೆಯ ಹಿರಿಯ ನಿವೃತ್ತ ಅಪರ ನಿಬಂಧಕರು. ಮೈಸೂರಿನಲ್ಲಿ ವಾಸವಾಗಿದ್ದಾರೆ. ಸಹಕಾರಿ ಕಾಯ್ದೆಗಳ ರಚನೆಗೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕಾಯ್ದೆ ರಚನೆ ಹಾಗೂ ಕಾಯ್ದೆಯು ಜಾರಿಗೆ ಬರುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ಸಹಕಾರ ಕಾಯ್ದೆಗಳು ಹಳೆಯದಾಗಿರಲಿ ಹೊಸದಾಗಿರಲಿ ಯಾವುದೇ ಕಲಂನ ನಿರ್ವಹಣೆಯಲ್ಲಿ ವಿವರಣೆಗಳನ್ನು ನೀಡಿ ಕಾನೂನಿನ ಸಮಸ್ಯೆಗಳಿಗೆ ಪರಿಹಾರ ನೀಡುತ್ತಲಿರುವುದು ಮತ್ತು ಸಹಕಾರಿ ಕಾನೂನುಗಳ ಕಲಂನ ವ್ಯಾಖ್ಯಾನಗಳು ಸೇರಿದಂತೆ ಸಹಕಾರಿ ಕ್ಷೇತ್ರದ ಅನೇಕ ವಿಷಯಗಳ ಬಗ್ಗೆ ನಿರಂತರ ಲೇಖನಗಳನ್ನು ಬರೆದು ಸಹಕಾರಿಗಳಿಗೆ ಮಾರ್ಗದರ್ಶನ ಮಾಡುತ್ತಿರುವುದು ಸಹಕಾರಿಗಳಿಗೆಲ್ಲ ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹಿರಿಯ ಸಹಕಾರಿಗಳು ನಿವೃತ್ತ ಸಹಕಾರಿ ಇಲಾಖಾಧಿಕಾರಿಗಳು ಬರೆದಿರುವ ಸಹಕಾರಿ ಕ್ಷೇತ್ರದ ಬಗ್ಗೆ ಮತ್ತು ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಆಯ್ಕೆ ಮಾಡಿ ಪ್ರತಿ ವರ್ಷ ವಾರ್ಷಿಕ ಸಾಮಾನ್ಯ ಸಭೆಯ ದಿನದಂದು ಬಿಡುಗಡೆ ಮಾಡುತ್ತ ಬಂದಿದೆ. ಸಹಕಾರಿಗಳಿಗೆ ಈ ಪುಸ್ತಕಗಳ ಮೂಲಕ ಸಹಕಾರ ಕ್ಷೇತದ್ರ ಬಗ್ಗೆ ಜ್ಞಾನವನ್ನು ಹೆಚ್ಚಿಸುವ ಕಾರ್ಯ ಮಾಡುತ್ತಿದೆ. ಈ ಕಾರ್ಯವನ್ನು ಅನೇಕ ಸಹಕಾರಿಗಳು ಹಾಗೂ ಅಧಿಕಾರಿಗಳು ಕೂಡ ಮೆಚ್ಚಿರುವುದು ಸ್ವಾಗತಾರ್ಹ ಹಾಗೂ ಸಂಯುಕ್ತ ಸಹಕಾರಿಗೆ ಹೆಮ್ಮೆ ತಂದಿದೆ.

ಶ್ರೀಯುತ ಸಿ.ಎನ್. ಪರಶಿವಮೂರ್ತಿ ಇವರು ಕರ್ನಾಟಕ ಆದಾಯ ತೆರಿಗೆ ತೀರ್ಪುಗಳ ಸಂಗ್ರಹ ಇಂಗ್ಲೀಷ್ ಭಾಷೆ, ಕರ್ನಾಟಕ ಹೈಕೋರ್ಟ್ ತೀರ್ಪುಗಳ ಸಂಗ್ರಹ, (ಇಂಗ್ಲೀಷ್ ಭಾಷೆ) ಸೌಹಾರ್ದ ಸಹಕಾರಿ ಕಾಯ್ದೆ ಆಡಳಿತ ಕೈಪಿಡಿ ಕನ್ನಡ ಭಾಷೆ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಶ್ರೇಷ್ಠ ಹಾಗೂ ಉಚ್ಚ ನ್ಯಾಯಾಲಯಗಳ ತೀರ್ಪುಗಳ ಸಂಗ್ರಹ, ಕನ್ನಡ ಭಾಷೆ ಪುಸ್ತಕಗಳನ್ನು ಅತ್ಯಂತ ಶ್ರದ್ಧೆಯಿಂದ ಸಿದ್ಧಪಡಿಸಿದ್ದಾರೆ.

ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ತತ್ವಗಳಲ್ಲಿ ಪ್ರಮುಖವಾಗಿರುವ ಸಹಕಾರ ಶಿಕ್ಷಣ ಹಾಗೂ ಪ್ರಚಾರ ಮತ್ತು ಸಾಮಾಜಿಕ ಕಳಕಳಿ ಎಂಬ ತತ್ವಗಳ ಅನುಷ್ಠಾನದಲ್ಲಿ ಶ್ರೀ ಸಿ.ಎನ್. ಪರಶಿವಮೂರ್ತಿಯವರು ಈ ನಾಲ್ಕು ಪುಸ್ತಕಗಳನ್ನು ಸಿದ್ಧಪಡಿಸಿ ಸಂಯುಕ್ತ ಸಹಕಾರಿಗೆ ಮುದ್ರಣ ಹಾಗೂ ಪ್ರಕಾಶನಕ್ಕಾಗಿ ಒದಗಿಸಿರುವುದಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಹಕಾರಿ ಕ್ಷೇತ್ರದ ಆಸಕ್ತ ಸಹಕಾರಿಗಳು ಸಹಕಾರಿ ಇಲಾಖಾಧಿಕಾರಿಗಳು ಸಹಕಾರಿ ಕಾರ್ಯಕರ್ತರು, ಈ ಎಲ್ಲಾ ಪುಸ್ತಕಗಳ ಪ್ರಯೋಜನವನ್ನು ಪಡೆದು ಸಹಕಾರ ಕ್ಷೇತ್ರದ ಬಗ್ಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಂಯುಕ್ತ ಸಹಕಾರಿಯ ಹಾಗೂ ಶ್ರೀ ಸಿ.ಎನ್. ಪರಶಿವಮೂರ್ತಿಯವರ ಪ್ರಯತ್ನವೂ ಸಾರ್ಥಕವಾಗುತ್ತದೆ.

**– ಜಿ. ನಂಜನಗೌಡ CA**
**ಅಧ್ಯಕ್ಷರು**

## –: ಲೇಖಕರ ಮಾತು :–

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಒಂದು ವಿಶಿಷ್ಟ ಕಾಯಿದೆ. ಈ ಕಾಯಿದೆ ರೂಪಿಸುವಾಗ ಭಾರತ ಸರ್ಕಾರ ಯೋಜನಾ ಆಯೋಗದ ಮುಖಾಂತರ ರಾಷ್ಟ್ರಮಟ್ಟದಲ್ಲಿ ಏಕ ರೂಪ ಸಹಕಾರಿ ಕಾಯಿದೆ ರೂಪಿಸುವ ಪ್ರಯತ್ನವಾಗಿ ಒಂದು ಮಾದರಿ ಸಹಕಾರ ಕಾಯಿದೆಯನ್ನು (ಶ್ರೀ ಚೌಧರಿ ಬ್ರಹ್ಮಪ್ರಕಾಶ್ ಸಮಿತಿ ಮುಖಾಂತರ) ರಾಜ್ಯ ಸರ್ಕಾರಗಳಿಗೆ ರವಾನಿಸಿ, ಅಳವಡಿಸಿಕ್ಕೊಳ್ಳಲು ಸೂಚಿಸಿತು. ಆದರೆ ಬಹಳಷ್ಟು ರಾಜ್ಯಗಳು. ಈ ಸೂಚನೆ ಅಳವಡಿಸಿಕ್ಕೊಳ್ಳಲಿಲ್ಲ. ಕರ್ನಾಟಕ ರಾಜ್ಯ ಈ ಮಾದರಿ ಕಾಯಿದೆಯನ್ನು ಅಳವಡಿಸಿಕ್ಕೊಳ್ಳುವ ಬಗ್ಗೆ 1996–97ರಲ್ಲಿ ಚರ್ಚೆ ಪ್ರಾರಂಭಿಸಿತು. ವಿವಿಧ ಮಟ್ಟದ ಚರ್ಚೆಗಳ ನಂತರ, ಹಿರಿಯ ಸಹಕಾರ ಇಲಾಖಾ ಅಧಿಕಾರಿಗಳು ಅಂತಿಮ ಗೊಳಿಸಿದರು. ಆದರೆ 1959ರ ಕಾಯಿದೆಯಲ್ಲಿಯೇ ಉದಾರೀಕರಣ ನೀತಿ ಅನುಸರಿಸಿ, ಮಾರ್ಪಾಡು ಮಾಡಿದರೆ ಸಾಕೆಂಬ ಭಾವನೆ ಹೊಂದಿದ್ದರು.

ಇದಕ್ಕೆ ಪೂರ್ವದಲ್ಲಿ ಚುನಾಯಿತಿ ಪ್ರತಿನಿಧಿಗಳು ವಿವಿಧ ಸಮ್ಮೇಳನ, ಕಾರ್ಯಗಾರ, ಮತ್ತು ಸಭೆಗಳಲ್ಲಿ, ಸಹಕಾರಿ ಸಂಸ್ಥೆಗಳ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದ ಬಗ್ಗೆ ಏರು ಧ್ವನಿಯಲ್ಲಿ, ಸರ್ಕಾರ/ನಿಬಂಧಕರ ನಿಯಂತ್ರಣದಿಂದ ಮುಕ್ತಿ ನೀಡಬೇಕೆಂದು ಪ್ರತಿಪಾದಿಸುತ್ತಿದ್ದರು. ಈ ಬಗ್ಗೆ ಆಗಿನ ಸಹಕಾರ ಸಚಿವರಾಗಿದ್ದ ಶ್ರೀ ಎಸ್.ಎಸ್.ಪಾಟೀಲ್, ನಿಬಂಧಕರಾಗಿದ್ದ ಶ್ರೀ ವಿ.ಮಧು ಮತ್ತು ಹಿರಿಯ ಅಧಿಕಾರಿಗಳು ಒಂದು ಸಣ್ಣ ಗುಂಪು, ನಿಬಂಧಕರು ಮತ್ತು ಸರ್ಕಾರದ ನಿಯಂತ್ರಣವಿಲ್ಲದ ಒಂದು ಕಾಯಿದೆಯನ್ನು ಪ್ರತ್ಯೇಕವಾಗಿ ರಚಿಸುವುದು ಸೂಕ್ತ ಎಂದು ತೀರ್ಮಾನಿಸಿತು. ಅದಕ್ಕನುಗುಣವಾಗಿ 1959ರ ಸಹಕಾರ ಕಾಯಿದೆಯಲ್ಲಿಯೂ, ಉದಾರೀಕೃತ ನೀತಿ ಅಳವಡಿಸಿಕ್ಕೊಳ್ಳಲು ಮತ್ತು ಅದರ ಜೊತೆಗೆ ಹೊಸದಾಗಿ ಒಂದು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಕಾಯಿದೆ ರಚಿಸಿ, ನಿಬಂಧಕರಿಗೆ ಒಂದು ಸಹಕಾರಿ ಸಂಸ್ಥೆ ನೋಂದಾಯಿಸಲು ಮತ್ತು ಅದರ ನೋಂದಣಿಯನ್ನು ರದ್ದು ಪಡಿಸುವ ಅಧಿಕಾರಕ್ಕೆ ಸೀಮಿತ ಗೊಳಿಸಿ, ಕಾಯಿದೆಯಲ್ಲಿಯೇ ಹುಟ್ಟಿ ಹಾಕಿದ ಪ್ರಜಾಪ್ರಭುತ್ವದಡಿ ರಚನೆಯಾಗುವ ಒಂದು ಸಂಸ್ಥೆಗೆ ನಿಬಂಧಕರ ಎಲ್ಲಾ ಅಧಿಕಾರಗಳನ್ನು ವರ್ಗಾಯಿಸಲು ತೀರ್ಮಾನಿಸಿತು. ಪ್ರಾರಂಭದಲ್ಲಿ ಈ ಸಂಸ್ಥೆಯನ್ನು ನಡೆಸಿಕೊಂಡು ಹೊಗಲು ತೊಡಕಾಗುತ್ತದೆ ಎಂದು ತಿಳಿದಿದ್ದರೂ ಅದನ್ನು ರಚಿಸುವುದು ಸೂಕ್ತ ಎಂದು ತೀರ್ಮಾನಿಸಿ, ಈ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯನ್ನು ರೂಪಿಸಿತು. ಇದರಲ್ಲಿ ನೋಂದಾಯಿಸಿದ ಪ್ರತಿಯೊಂದು ಸಹಕಾರಿ, ಕಾಯಿದೆಯಲ್ಲಿ ಸೃಷ್ಟಿಸಿದ ಸಂಸ್ಥೆ ಸದಸ್ಯತ್ವ ಪಡೆಯಲು ಹಾಗೂ ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಧನ ಪಡೆಯದಂತೆ ನಿರ್ಬಂಧ ವಿಧಿಸಲು ತೀರ್ಮಾನಿಸಿತು.

ಇದಕ್ಕೆ ಪೂರಕವಾಗಿ ರಾಜ್ಯಕ್ಕೆ ಒಂದು ಸಹಕಾರ ನೀತಿ ಇರಬೇಕೆಂದು ತೀರ್ಮಾನಿಸಿ, ರಾಜ್ಯ ಸಂಪುಟದ ಒಪ್ಪಿಗೆ ಪಡೆದು ಜಾರಿಗೆ ತಂದಿತು. ಅದನ್ನು 1999ರ ಗೆಜೆಟ್‌ನಲ್ಲಿ ಪ್ರಕಟಿಸಲಾಯಿತು. ಈ ಸಹಕಾರ ನೀತಿಯಲ್ಲಿ ರಾಜ್ಯಕ್ಕೆ ಎರಡು ಸಹಕಾರ ಕಾಯಿದೆ ಇರಬೇಕೆಂದು ಮತ್ತು 1959ರ ಕಾಯಿದೆಗೆ ಸಮಗ್ರ ತಿದ್ದುಪಡಿ ತಂದು ಅದರಲ್ಲಿಯೂ ಮಾದರಿ ಕಾಯಿದೆಯಂತೆ ನಿಬಂಧಕರ/ಸರ್ಕಾರದ ನಿಯಂತ್ರಣ ಕಡಿತಗೊಳಿಸಲು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ನ್ನು ರೂಪಿಸಿ ಅದರಲ್ಲಿ ನೋಂದಾವಣೆಯಾಗುವ ಸಹಕಾರಿಗಳಿಗೆ ತಮ್ಮನ್ನು ತಾವೇ ನಿಯಂತ್ರಿಸುವ ಅವಕಾಶ ಕಲ್ಪಿಸಲು ನೀತಿ ರೂಪಿಸಲಾಯಿತು. ಅದರಂತೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ನ್ನು ರೂಪಿಸಿ 01.01.2001 ರಿಂದ ಜಾರಿಗೆ ನೀಡಿತು. ಈ ಕಾಯಿದೆಗೆ 2004ರಲ್ಲಿ ಮಾರ್ಪಾಡು ಮಾಡಿ ಕೆಲವು ಅಧಿಕಾರಗಳನ್ನು ನಿಬಂಧಕರಿಗೆ ಮರು ವರ್ಗಾವಣೆ ಮಾಡಿತು. ಪ್ರಮುಖವಾಗಿ ಶಾಸನಬದ್ಧ ವಿಚಾರಣೆ ಮಾಡುವುದು, ಸಮಾಪನೆ ಮಾಡುವುದು.

ಈ ಸೌಹಾರ್ದ ಕಾಯಿದೆ ರೂಪಿಸಿದ ನಂತರ ಕಾಯಿದೆಯಲ್ಲಿ ಸೃಷ್ಟಿಯಾದ "ಸಂಯುಕ್ತ ಸಹಕಾರಿ" ಎಂಬ ರಾಜ್ಯ ಮಟ್ಟದ ಸಂಸ್ಥೆ ಕಾರ್ಯಾರಂಭ ಮಾಡಿತು ಮತ್ತು ಈ ಸಂಯುಕ್ತ ಸಹಕಾರಿ ನಿಬಂಧಕರ ಕೆಲಸ ನಿರ್ವಹಿಸಲು ಪ್ರಾರಂಭವಾಯಿತು. ಆದರೂ ಈ ಕಾಯಿದೆ ಮಾದರಿಯನ್ನು ರಾಷ್ಟ್ರ ಮಟ್ಟದಲ್ಲಿ ಚರ್ಚೆ ಪ್ರಾರಂಭವಾಗಿ ಈ ಕಾಯಿದೆ ಪೂರಕವಾಗಿ ಅಭಿಪ್ರಾಯಾಗಳು ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವ ತನಕ್ಕೆ ತಲುಪಿ, ಅದಕ್ಕೆ 2011 ರಲ್ಲಿ 97ನೇ ಸಂವಿಧಾನ ತಿದ್ದುಪಡಿ ಮೂಲಕ ರಾಷ್ಟ್ರ ಮಟ್ಟದಲ್ಲಿ ಏಕರೂಪ ಸಹಕಾರ ಕಾಯಿದೆ ರೂಪಿಸಲು ಸಹಕಾರಿಯಾಯಿತು. ಸಹಕಾರ ಎಂಬ ವಿಷಯ ರಾಜ್ಯ ಪಟ್ಟಿಯಲ್ಲಿ ಬರುತ್ತಿದ್ದು, ಕಾಯಿದೆ ರೂಪಿಸುವ ಅಧಿಕಾರ ರಾಜ್ಯಗಳಿಗೆ ಇದ್ದರೂ, ಸಂವಿಧಾನ ತಿದ್ದುಪಡಿ ನಂತರ ಪ್ರತಿ ರಾಜ್ಯವೂ ಈ ಕಾಯಿದೆ ರೂಪಿಸುವಂತೆ ಅವಕಾಶ ಕಲ್ಪಿಸಿತು. ಸಂವಿಧಾನದ ಉದ್ದೇಶವನ್ನು ಈ ಕೆಳಕಂಡಂತೆ ರೂಪಿಸಿತು.

**ರಾಜ್ಯ :**

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು."

**ಕೇಂದ್ರ :**

"ರಾಜ್ಯವು ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವ್ಯಕ್ತಿಪರ ವ್ಯವಸ್ಥಾಪನೆ/ನಿರ್ವಹಣೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನ ಪಡತಕ್ಕದ್ದು." (ಅನುಚ್ಛೇದ 43ಬಿ)

ಈ ಉದ್ದೇಶವನ್ನು ಕರ್ನಾಟಕ ರಾಜ್ಯ ಸರ್ಕಾರವು ರೂಪಿಸಿದ ಉದ್ದೇಶಗಳು ಒಂದೇ ಆಗಿದ್ದವು. ಅಂದರೆ ಕರ್ನಾಟಕ ರಾಜ್ಯ ರೂಪಿಸಿದ ಧ್ಯೇಯೋದ್ದೇಶದಿಂದ ಸಂವಿಧಾನ ತಿದ್ದುಪಡಿ ಮಾಡಲಾಗಿದೆ ಎಂದರೆ ತಪ್ಪಾಗಲಾರದು.

ಈ ವಿಶಿಷ್ಟವಾದ ಒಂದು ಸಹಕಾರಿ ಕಾಯಿದೆ ಜಾರಿಯಾದ ದಿನಾಂಕದ 2–3 ವರ್ಷಗಳಲ್ಲಿ ಇದರ ಜಾರಿ ಬಗ್ಗೆ ಸಂಯುಕ್ತ ಸಹಕಾರಿ ಒಂದು ಕೈಪಿಡಿ ರಚಿಸಲು ಕ್ರಮ ಜರುಗಿಸಬೇಕಾಗಿತ್ತು ಹಾಗೂ 2004ರಲ್ಲಿ ತಂದ ಹಲವಾರು ತಿದ್ದುಪಡಿಗಳ ಪೂರ್ವದಲ್ಲಿ ಕೈಪಿಡಿ ತಯಾರಿಸಿ, ಈ ಕಾಯಿದೆಯನ್ನು ಜಾರಿ ಮಾಡುವ ವಿಧಿ ವಿಧಾನಗಳ ಬಗ್ಗೆ ಕಾರ್ಯಪ್ರವೃತ್ತರಾಗಿದ್ದರೆ, ನಿಬಂಧಕರಿಗೆ ಅಧಿಕಾರ ಮರು ವರ್ಗಾವಣೆ ಹೊಂದಿದ ಅಧಿಕಾರಗಳನ್ನು ಸಂಯುಕ್ತ ಸಹಕಾರಿಯ ವ್ಯಾಪ್ತಿಯಲ್ಲಿ ಇರುತ್ತಿತ್ತು ಮತ್ತು ಸಹಕಾರ ಇಲಾಖೆ ಸೌಹಾರ್ದ ಕಾಯಿದೆ ಮೇಲೆ ಇರುವ ಮಲತಾಯಿ ಧೋರಣೆಯನ್ನು ಬದಲಾಯಿಸಬಹುದಾಗಿತ್ತು. ಏಕೆಂದರೆ, ಚುನಾಯಿತ ಪ್ರತಿನಿಧಿಗಳೇ ಸೌಹಾರ್ದ ಸಹಕಾರಿ ಕಾಯಿದೆಯನ್ನು ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬ ನೀತಿಗೆ ಪೂರಕವಾಗಿ ಕೆಲಸ ನಿರ್ವಹಿಸಬಹುದಾಗಿತ್ತು. 20 ವರ್ಷಗಳ ನಂತರ ಸೌಹಾರ್ದ ಸಹಕಾರಿ ಕೈಪಿಡಿ ತಯಾರಿಸಿ ಕಾರ್ಯ ರೂಪಕ್ಕೆ ತರುವುದು ವಿಳಂಬವಾಯಿತು. ಆದರೂ ಮುಂದೆ ಈಗ ಇರುವ ಅಧಿಕಾರಗಳನ್ನು ನಿಬಂಧಕರಿಗೆ ವರ್ಗಾಯಿಸುವ ಪ್ರಕ್ರಿಯೆ ನಿಲ್ಲಿಸಬಹುದು.

ಈಗಾಗಲೇ 1959ರ ಕಾಯಿದೆಗೆ ಒಂದು ಆಡಳಿತ ಕೈಪಿಡಿ ತಯಾರಿಸಲಾಗಿದೆ. ಅದೇ ಮಾದರಿಯಲ್ಲಿ ಸೌಹಾರ್ದ ಸಹಕಾರಿ ಕಾಯಿದೆ ನಿರ್ವಹಣೆಗೆ ಈ ಕೈಪಿಡಿ ತಯಾರಿಸಲು ಆಸಕ್ತಿವಹಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಮತ್ತು ಸಂಯುಕ್ತ ಸಹಕಾರಿ ನಿರ್ದೇಶಕ ಮಂಡಳಿ ಸದಸ್ಯರಿಗೆ ಶುಭಕೋರುತ್ತಾ, ಇದರ ಉಪಯೋಗ, ಸಹಕಾರ ಇಲಾಖಾಧಿಕಾರಿಗಳು, ಸಂಯುಕ್ತ ಸಹಕಾರಿ ಅಧಿಕಾರಿಗಳು ಪಡೆಯುತ್ತಾರೆಂದು ಭಾವಿಸುತ್ತೇನೆ. ಇವರೆಲ್ಲರಿಗೂ ನನ್ನ ವಂದನೆಗಳು.

ಈ ಕೈಪಿಡಿ ತಯಾರಿಸಲು ಸಹಕರಿಸಿದ ನನ್ನ ಕುಟುಂಬ ಸದಸ್ಯರಾದ ದಿ॥ ಸರೋಜ ಪರಶಿವಮೂರ್ತಿ, ಸಿ.ಪಿ. ಕಾತ್ಯಾಯಿನಿ, ಸಿ.ಪಿ. ದಯಾನಂದಮೂರ್ತಿ ಮತ್ತು ಸಿ.ಪಿ. ನಂದಿನಿ ಇವರಿಗೆ ಮತ್ತು ಅಳಿಯಂದಿರು, ಮೊಮ್ಮಕ್ಕಳಿಗೆ ನಾನು ಚಿರಋಣಿ.

ಈ ಕೈಪಿಡಿ ರಚಿಸಲು ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ಜಮಖಂಡಿ ಇವರ ನೆರವು ಹಾಗೂ ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಜೊತೆ ಈ ಕೈಪಿಡಿ ಬೆರಳಚ್ಚು ಮಾಡಿದ ಜೆಎಸ್ಎಸ್ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಶ್ರೀಮತಿ ಅನಿತ ಮತ್ತು ಆ ಸಂಸ್ಥೆಯ ಪದಾಧಿಕಾರಿಗಳ ಸಹಕಾರಕ್ಕೆ ವಂದನೆಗಳು.

**– ಸಿ.ಎನ್.ಪರಶಿವಮೂರ್ತಿ**

# ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಆಡಳಿತ ಕೈಪಿಡಿ

## ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1 | ಲೇಖಕರ ಮಾತು | 6–7 |
| 2 | ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ – ಒಂದು ಹಿನ್ನೋಟ | 10–16 |
| 3 | ಮುನ್ನೋಟ | 17–19 |
| 4 | ಕರ್ನಾಟಕ ಸಹಕಾರ ನೀತಿ | 20–26 |
| 5 | ಸಹಕಾರಿ ತತ್ವಗಳು | 27–34 |
| 6 | 97ನೇ ಸಂವಿಧಾನ ತಿದ್ದುಪಡಿ | 35–42 |
| 7 | ನಿಬಂಧಕರು ಅವರ ಶಾಸನಾತ್ಮಕ ಅಧಿಕಾರಗಳು.<br>1 ಸಹಕಾರಿ ನೋಂದಣಿ<br>2. ಸಹಕಾರಿ ಉಪವಿಧಿಗಳ ತಿದ್ದುಪಡಿ<br>3. ವಿಚಾರಣೆ<br>4. ಅದಿಭಾರ ಅರ್ಜಿ<br>5. ದಾವಾ ಪ್ರಕರಣ<br>6. ವಿಳಂಬ ವಿನಾಯ್ತಿ<br>7 ದಾವಾ ಪ್ರಕರಣ ಇತ್ಯರ್ಥ<br>8. ಸಹಕಾರಿಯ ಸಮಾಪನೆ<br>9. ಅಪರಾಧಗಳು ಮತ್ತು ದಂಡಗಳು | 43–150 |
| 7 | ಸಂಯುಕ್ತ ಸಹಕಾರಿ ಆಡಳಿತಾತ್ಮಕ ರಚನೆ<br>1. ಸಂಯುಕ್ತ ಸಹಕಾರಿ ರಚನೆ<br>2. ರೇಖಾ ಪಟ<br>3. ಸಂಯುಕ್ತ ಸಹಕಾರಿ ಹೊರಡಿಸಿದ ಮಾರ್ಗದರ್ಶಿ/ನಿರ್ದೇಶನ ಸುತ್ತೋಲೆಗಳು<br>4. ನಿಬಂಧಕರು ಮತ್ತು ಸಂಯುಕ್ತ ಸಹಕಾರಿಗೆ ಮಾಹಿತಿ ಒದಗಿಸುವುದು.<br>5. ಸಹಕಾರಿಯ ಮುಖ್ಯಕಾರ್ಯನಿರ್ವಾಹಕ<br>6. ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ | 151–204 |

| | | |
|---|---|---|
| 8 | ಸಹಕಾರಿ ಮಂಡಳಿ ರದ್ದತಿ/ಅಮಾನತ್ತು<br>1. ಆಡಳಿತಾಧಿಕಾರಿ ನೇಮಕ<br>2. ವಿಶೇಷಾಧಿಕಾರಿ ನೇಮಕ<br>3. ಪರಿವೀಕ್ಷಣೆ<br>4. ಸಹಕಾರಿ ಮಂಡಳಿಯ ನಿರ್ದೇಶಕರ ಅನರ್ಹತೆ<br>5. ಸಭೆಗಳು | 205–245 |
| 9 | ಸಹಕಾರಿ ಲೆಕ್ಕಪರಿಶೋಧನೆ | 246–259 |
| 10 | ಸಹಕಾರಿ ಮಂಡಳಿ ರಚನೆ – ಸಹಕಾರ ಚುನಾವಣಾ ಪ್ರಾಧಿಕಾರ<br>1. ಸಹಕಾರಿಗಳ ಮಂಡಳಿಯಲ್ಲಿ ಮೀಸಲಾತಿ | 260–274 |


## ಸಹಕಾರಿ ಘೋಷಣೆಗಳು

ಆರ್ಥಿಕ ಸ್ವಾತಂತ್ರಯಕ್ಕೆ ಸಹಕಾರವೇ ಹೆಬ್ಬಾಗಿಲು

ಸಹಕಾರ ನಮ್ಮ ಬದುಕಿನ ಅವಿಭಾಜ್ಯ ಅಂಗ

ಸಹಕಾರದಿಂದ ಮಾತ್ರ ಶೋಷಣೆ ಮುಕ್ತ ಸಮಾಜ ನಿರ್ಮಾಣ ಸಾಧ್ಯ

ಸಹಕಾರವೇ ಶಕ್ತಿ – ಈ ಶಕ್ತಿಯೇ ಸಾಮೂಹಿಕ ಶೋಷಣೆಗೆ ಮುಕ್ತಿ ದೊರಕಿಸಲು ಪ್ರಬಲ ಅಸ್ತ್ರ

ಸಹಕಾರವೆಂದರೆ ನುಡಿಯುವುದಲ್ಲ, ನಡೆಯುವುದು

ಸಹಕಾರ ಮಾನವನ ಉನ್ನತ ಜೀವನಕ್ಕೊಂದು ಸಾಧನ

ಸಹಕಾರ ಸರ್ವ ಜನ ಕಲ್ಯಾಣ ಮಾರ್ಗ

ಸಹಕಾರ ಸ್ವಾಭಿಮಾನಿಗಳ ಕ್ಷೇತ್ರ

ಸಹಕಾರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುತ್ತದೆ

ಸಹಕಾರ ಸಂಸ್ಥೆಗಳಿಂದ ಸಾಲ ಪಡೆಯುವುದು ನಿಮ್ಮ ಹಕ್ಕು

# ಅಧ್ಯಾಯ – 1
# ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ – ಒಂದು ಹಿನ್ನೋಟ

"ಸಹಕಾರ" ಎಂಬ ಪದ ಪ್ರಯೋಗ ಮಾನವ ಹುಟ್ಟಿದ ದಿನದಿಂದಲೇ ಪ್ರಾರಂಭವಾಗಿದೆ. ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡಿ, ಅವರನ್ನು ಆರ್ಥಿಕವಾಗಿ ಮೇಲೆ ತರುವ ಒಂದು ಪ್ರಯತ್ನ. ಈ ಪ್ರಯತ್ನಕ್ಕೆ "ಎಲ್ಲರಿಗಾಗಿ ನಾನು ನನಗಾಗಿ ಎಲ್ಲರು" ಎಂಬ ಮೂಲತತ್ವಕ್ಕೆ ಅನುಗುಣವಾಗಿ ರಚಿಸಿಕೊಂಡ ಒಂದು ಸಂಘಟನೆ. ಇದರಲ್ಲಿ ಸಮಾನ ಮನಸ್ಕರು ಕೂಡ ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಸಂಸ್ಥೆ ರೂಪ ಹುಟ್ಟಿರುವುದು. ಸಹಕಾರ ಕಾಯಿದೆ ರಚನೆಯಾಗುವ ಪೂರ್ವದಲ್ಲಿ ಈ ರೀತಿ ಗುಂಪುಗಳನ್ನು ರಚಿಸಿಕೊಳ್ಳುತ್ತಿದ್ದ ರಾಜ್ಯಗಳಲ್ಲಿ ತಮಿಳುನಾಡು (ಚೀಟಿ), ಕೇರಳ (ಕುರಿ) ಮತ್ತು ಮಹಾರಾಷ್ಟ್ರದ (ಬಿಘೀನ್ ಕೊಲ್ಲಾಪುರ) ಮತ್ತಿತರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿ ಇದ್ದವು.

ಭಾರತದಲ್ಲಿ ಸಹಕಾರ ಆಂದೋಲನ ಪ್ರಾರಂಭವಾಗುವ ಪೂರ್ವದಲ್ಲಿ ಯೂರೋಪ್ ರಾಷ್ಟ್ರಗಳಲ್ಲಿ ಪ್ರಾರಂಭವಾಗಿ ಬ್ರಿಟಿಷ್ ಆಳ್ವಿಕೆಯಲ್ಲಿ – ಸ್ವಾತಂತ್ರ್ಯ ಹೋರಾಟವನ್ನು ನಿಯಂತ್ರಿಸುವ ನಿಟ್ಟಿನಲ್ಲಿ, ನಿಬಂಧಕರನ್ನು ಕಾಯಿದೆಯಲ್ಲಿ ಸೇರಿಸಿ ಭಾರತಕ್ಕೆ ಒಂದು ಕಾಯಿದೆ ರಚಿಸಿದರು. ಸಹಕಾರ ಕಾಯಿದೆ ರಚನೆಯಾಗುವ ಪೂರ್ವದಲ್ಲಿ ಅಂದರೆ 1891 ರಲ್ಲಿ ಪಂಜಾಬ್ ರಾಷ್ಟ್ರದಲ್ಲಿ ಒಂದು ಜಮೀನು ಕ್ರೋಡೀಕರಿಸಿ, ರೈತರ ಅನೂಕೂಲಕ್ಕೆ ಒಂದು ಸಹಕಾರ ಸಂಘ ಪ್ರಾರಂಭವಾಗಿ ಅದು 1922 ರವರೆಗೂ ಅಸ್ತಿತ್ವದಲ್ಲಿ ಇತ್ತು. ಮತ್ತೊಂದು ಸಹಕಾರ ಸಂಘವನ್ನು 1895 ರಲ್ಲಿ ಪ್ರಾರಂಭಿಸಿ, ಆ ಸಂಘದಲ್ಲಿ 22 ಗ್ರಾಮಗಳನ್ನು ಸೇರಿಸಿ ರಚಿಸಿದರೂ, ಇದು ಬಹಳ ವರ್ಷಗಳು ನಡೆಯಲಿಲ್ಲ. ಬ್ರಿಟಿಷ್ ಆಳ್ವಿಕೆ ಸಮಯದಲ್ಲಿ ಸಹಕಾರ ಸಂಘಗಳ ಸ್ಥಾಪನೆಗೆ ಡೆನ್ಮಾರ್ಕ್ ಮಾದರಿಯಲ್ಲಿ (ಆ ದೇಶದಲ್ಲಿ ಸಹಕಾರ ಸಂಘಗಳು ಒಳ್ಳೆಯ ಕೆಲಸ ನಿರ್ವಹಿಸಿದ್ದವು) ರೂಪಿಸಲು ಪ್ರಯತ್ನಿಸಲಾಯಿತು ಹಾಗೂ ಇಂಗ್ಲೆಂಡಿನ ರಾಕ್‌ಡೇಲ್ ಪಯನೀಯಾರ್ಸ್ ರೂಪಿಸಿ, ಗ್ರಾಹಕ ಚಳುವಳಿ ಬೆಳವಣಿಗೆಗಳನ್ನು ಗಮನದಲ್ಲಿರಿಸಿಕೊಳ್ಳಲಾಯಿತು.

ಭಾರತದ ಸಹಕಾರ ಚಳುವಳಿ ಮತ್ತು ಸಹಕಾರಿ ಕಾಯಿದೆ ಒಂದೇ ಸಮಯದಲ್ಲಿ ಪ್ರಾರಂಭವಾಗಿರುವುದು ದಾಖಲೆಯಲ್ಲಿದೆ. 1892 ರಲ್ಲಿ ಸರ್ ಫ್ರೆಡ್ರಿಕ್ ನಿಕೊಲ್ಸನ್ ಅವರು ಯೂರೋಪ್ ದೇಶದಲ್ಲಿನ ಮಾದರಿ ಅಭ್ಯಾಸ ಮಾಡಲು ನಿಯೋಜಿಸಿ ವರದಿ ಪಡೆದು, ಜರ್ಮನಿಯ ರೇಫೆಸನ್ ಮಾದರಿ ಸಹಕಾರ ಸಂಘಗಳನ್ನು ಪ್ರಾರಂಭಿಸಲು ಶಿಫಾರಸ್ಸುನೊಂದಿಗೆ 1895 ಮತ್ತು 1897 ರಲ್ಲಿ ಎರಡು ಭಾಗದ ವರದಿಯನ್ನು ಸಲ್ಲಿಸಿದ ಆಧಾರದ ಮೇಲೆ, ಬ್ರಿಟಿಷ್ ಆಡಳಿತ, ಸಹಕಾರ ಸಂಘಗಳ ರಚನೆ ಬಗ್ಗೆ ಕ್ರಮ ತೆಗೆದುಕೊಂಡಿದ್ದು. ಸರ್ ಫ್ರೆಡ್ರಿಕ್ ನಿಕೋಲ್ಸನ್ ವರದಿಯನ್ನು ಪ್ರಾಂತ್ಯಗಳಿಗೆ ರವಾನಿಸಲಾಯಿತು.ಇದೆ ಸಂದರ್ಭದಲ್ಲಿ ಆಗಿನ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ಅವರು ಮೂರು ಜನರ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಗೆ ಸರ್ ಎಡ್ವರ್ಡ ಲಾ ರನ್ನು ಅಧ್ಯಕ್ಷರನ್ನಾಗಿ ಮತ್ತು ಸರ್ಕಾರದ ಆರ್ಥಿಕ ಮಂತ್ರಿ (ಸದಸ್ಯ) ರಾಗಿದ್ದ ಸರ್ ಫ್ರೆಢಿಕ್ ನಿಕೋಲ್ಸನ್ ಮತ್ತು ಶ್ರೀ ಡೂಪರ್‌ನೆಕ್ಸ್‌ಗಳನ್ನು ಸದಸ್ಯರನ್ನಾಗಿ ನೇಮಿಸಿದರು. ಈ ಸಮಿತಿ ಸಹಕಾರ ಕಾಯಿದೆ ಮತ್ತು ಸಹಕಾರ ಸಂಘಗಳಿಗೆ ಕೆಲವು ಸವಲತ್ತುಗಳನ್ನು ನೀಡಲು ಕ್ರಮ ಜರುಗಿಸಲು ಸೂಚಿಸಿದರು. ಅದರಂತೆ ಸಹಕಾರ ಕಾಯಿದೆ 1904 (25ನೇ ಮಾರ್ಚ್) ನ್ನು ರಚಿಸಲಾಯಿತು.

ಈ ಸಹಕಾರ ಕಾಯಿದೆ ರಚಿಸುವಾಗ ಅಂತರಾಷ್ಟ್ರೀಯ ಸಹಕಾರ ಒಕ್ಕೂಟ ರಚಿಸಿದ ಆರು ಸಹಕಾರ ತತ್ವಗಳನ್ನು ಆಧಾರವಾಗಿ ಇಡಲಾಯಿತು. ಈ ಸಹಕಾರ ತತ್ವಗಳು (1) ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ (2) ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ (3) ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು (4) ಸ್ವಾಯತ್ತತ್ತೆ ಮತ್ತು ಸ್ವಾತಂತ್ರ್ಯ (5) ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರ ಮತ್ತು (6) ಸಹಕಾರಿಗಳಲ್ಲಿ ಸಹಕಾರ. ಈ ತತ್ವಗಳನ್ನು ಅಂತರಾಷ್ಟ್ರೀಯ ಒಕ್ಕೂಟ ಪುನರ್ ರಚಿಸಿ, ಏಳನೇ ತತ್ವವಾಗಿ (7) ಸಾಮಾಜಿಕ ಕಳಕಳಿ ಎಂಬ ಹೊಸ ತತ್ವವನ್ನು 1995 ರಲ್ಲಿ ರೂಪಿಸಿದೆ.

1904 ರ ಕಾಯಿದೆ ರಚನೆಯಾದ ನಂತರ ಬಹಳಷ್ಟು ರಾಜ್ಯಗಳಲ್ಲಿ ಸಹಕಾರ ಸಂಘಗಳು ನೋಂದಣಿ ಪ್ರಾರಂಭವಾಯಿತು. ಬೇರೆ ಬೇರೆ ರಾಜ್ಯಗಳಲ್ಲಿ 1904 ರಿಂದ ನೋಂದಣಿ ಪ್ರಾರಂಭವಾಯಿತು ಅವುಗಳಲ್ಲಿ (1) ರಾಜ ಜೊಲಿ ಗ್ರಾಮ ಬ್ಯಾಂಕ್, ಜೊರಹಟ್ (2) ಜೊರಹಟ್ ಸಹಕಾರ ಪಟ್ಟಣ ಬ್ಯಾಂಕ್ ಮತ್ತು (3) ಚರಿಗಾಂ ಗ್ರಾಮ ಬ್ಯಾಂಕ್ ಜೊರಹಟ್ ಅಸ್ಸಾಂ 1904 (4) ತಿರೂರು ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕ್ ನಿಯಮಿತ ತಮಿಳುನಾಡು (1904) (5) ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ ದೇವಗಾಂ, ಪಿಪಾರೀಯ, ಮಧ್ಯಪ್ರದೇಶ 1905 (6) ಬೈನ್ಸ್ ಸಹಕಾರ ತ್ರಿಫ್ಟ್ ಮತ್ತು ಸಾಲ ಸಂಘ ಪಂಜಾಬ್ 1905. (7) ಬಿಲಿಪಾಡಾ ಸೇವಾ ಸಹಕಾರ ಸಂಘ ನಿ. ಒರಿಸ್ಸಾ (1905) (8) ಸಹಕಾರ ತ್ರಿಫ್ಟ ಮತ್ತು ಸಾಲ ಸಂಘ (1905), ಕನಗಿನಹಾಳ ಸೇವಾ ಸಹಕಾರ ಸಂಘ ನಿಯಮಿತ ಕರ್ನಾಟಕ 1905 (9) ಕಸಬ ಟಡವಾಲೆ ಸಹಕಾರ ಬಹು ಉದ್ದೇಶಿತ ಸಂಘ, ಮಹಾರಾಷ್ಟ್ರ (1905) (10) ಪ್ರೀಮಿಯರ್ ಪಟ್ಟಣ ಸಾಲ ಸಂಘ ಕಲ್ಕತ್ತ, ಪಶ್ಚಿಮ ಬಂಗಾಳ (1905) ರಲ್ಲಿ ನೋಂದಾಯಿಸಲಾಯಿತು.

ಮುಂಬೈ ಪ್ರಾಂತ್ಯದಲ್ಲಿ 1904 ರ ಕಾಯಿದೆ ರಚನೆಯಾದ ನಂತರ ಪ್ರಥಮ ಸಹಕಾರ ಸಂಘವನ್ನು ಈಗಿನ ಗದಗ ಜೆಲ್ಲೆಯ ಕಣಗಿನಹಾಳದಲ್ಲಿ ಸ್ಥಾಪಿಸಲಾಯಿತು. ಆ ಊರಿನ ಪ್ರಮುಖರಾದ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಅವರನ್ನು ಪ್ರೇರೇಪಿಸಿ, ಸಹಕಾರ ಸಂಘ ಸ್ಥಾಪಿಸಲು

ಆಗಿನ ರಿಜಿಸ್ಟ್ರಾರ್ ಅವರು ಕಣಗಿನಹಾಳದಲ್ಲಿ ವಸತಿ ಮಾಡಿ ಸ್ಥಾಪಿಸಿದರು. ಸ್ಥಾಪಿಸುವ ಪೂರ್ವದಲ್ಲಿ ಶ್ರೀ ಪಾಟೀಲ್ ಅವರ ಶರತ್ತಿಗೆ ಒಪ್ಪಿ ಒಂದು ರೈಲ್ವೆ ನಿಲ್ದಾಣವನ್ನು ಸ್ಥಾಪಿಸಲಾಯಿತು.

ಈ ಕಾಯಿದೆ ಸಾಲ ನೀಡುವುದಕ್ಕಾಗಿ ಪ್ರಾರಂಭಿಸಿದ್ದರಿಂದ, ಇನ್ನಿತರ ಕ್ಷೇತ್ರದಲ್ಲಿ ಸಹಕಾರ ಸಂಘಗಳಿಗೆ ಅವಕಾಶವಿರಲಿಲ್ಲ. ಆದ್ದರಿಂದ 1912 ರಲ್ಲಿ ಉದಾರೀಕರಣದ ಆಧಾರದ ಮೇಲೆ "ಪತ್ತೇತರ ಸಹಕಾರ", ಎಂಬ ವಿಷಯವನ್ನು ಕಾಯಿದೆಗಳನ್ನು ರಚಿಸಿಕೊಂಡವು. ಈ ಬೆಳವಣಿಗೆಯಿಂದ ಪ್ರತಿಯೊಂದು ರಾಜ್ಯ ಸಹಕಾರ ಕಾಯಿದೆ ರಚಿಸುವುದರ ಜೊತೆಗೆ ನಿಬಂಧಕರ ಹುದ್ದೆ ಸೃಷ್ಟಿ ಮಾಡಿ, ಸಹಕಾರ ಸಂಘಗಳ ನಿಯಂತ್ರಣಕ್ಕೆ ಪ್ರಯತ್ನಿಸಿ, ಸಂಖ್ಯಾಭಿವೃದ್ಧಿಗೆ ಪ್ರಯತ್ನಿಸಿದರೇ ಹೊರತು, ಗುಣಾತ್ಮಕ ಬೆಳವಣಿಗೆಗೆ ಅಷ್ಟು ಮಹತ್ವ ನೀಡಲಿಲ್ಲ.

ಕರ್ನಾಟಕಕ್ಕೆ (ಆಗಿನ ಮೈಸೂರು) ಸಂಬಂಧಪಟ್ಟಂತೆ ಸಹಕಾರ ಕಾಯಿದೆ ರಚನೆಯಲ್ಲಿ ಆಗಿಂದಾಗ್ಗೆ ತಿದ್ದುಪಡಿಗಳನ್ನು ತಂದು, ಸಂಘಗಳ ಸಂಖ್ಯೆ ಬಲ ಹೆಚ್ಚಿಸಲು ಮತ್ತು ಆರ್ಥಿಕ ಬೆಳವಣಿಗೆ ಹೆಚ್ಚಿಸಲು ಪ್ರಯತ್ನ ನಡೆಸಿ, ರಾಜ್ಯಗಳ ಪುನರ್‌ವಿಂಗಡಣೆಯಾದ ನಂತರ, ಸಹಕಾರ ಕಾಯಿದೆಗೆ ಒಂದು ರೂಪವನ್ನು 1959ರಲ್ಲಿ ನೀಡಲಾಯಿತು. 1959ರ ಕರ್ನಾಟಕ ರಾಜ್ಯ ಸಹಕಾರ ಕಾಯಿದೆ ಒಂದು ಕ್ರೋಢೀಕೃತ ಕಾಯಿದೆ. ಅಂದರೆ, ಮಹಾರಾಷ್ಟ್ರ ಸಹಕಾರ ಕಾಯಿದೆ, ಹೈದರಾಬಾರ್ ಸಹಕಾರ ಕಾಯಿದೆ, ಮದ್ರಾಸ್ ಸಹಕಾರ ಕಾಯಿದೆ, ಕೊಡಗು ಸಹಕಾರ ಕಾಯಿದೆಗಳ ಒಂದು ಕ್ರೋಢೀಕೃತ ಕಾಯಿದೆ. ಇದರಲ್ಲಿ ಯಾವುದೇ ಧ್ಯೇಯೋದ್ದೇಶವಿರಲಿಲ್ಲ.

ಈ ಕಾಯಿದೆಗೆ 1976, 1984, 1998, 2013, 2014 ಮತ್ತು 2016, 2023, 2024 ರಲ್ಲಿ ಸಮಗ್ರ ತಿದ್ದುಪಡಿಗಳನ್ನು ತರಲಾಗಿದೆ. 1976 ಮತ್ತು 1984ರ ತಿದ್ದುಪಡಿ ಕಾಯಿದೆಯಲ್ಲಿ ಸಹಕಾರ ಸಂಘಗಳನ್ನು ಸರ್ಕಾರ/ನಿಬಂಧಕರು ನಿಯಂತ್ರಿಸಲು ಎಲ್ಲಾ ರೀತಿಯ ಅವಕಾಶಗಳನ್ನು ಸೇರಿಸಲಾಯಿತು. ಈ ಬೆಳವಣಿಗೆಯಿಂದ ಸಹಕಾರ ಸಂಸ್ಥೆಗಳು ಯಾವುದೇ ವ್ಯವಹಾರ ಕೈಗೊಳ್ಳಲು ಹಿಂಜರಿಯುವ ಪ್ರಕ್ರಿಯೆ ಪ್ರಾರಂಭವಾಗಿ, ಸಹಕಾರ ಸಂಸ್ಥೆಗಳು ಸರ್ಕಾರದ ಒಂದು ಅಂಗ ಸಂಸ್ಥೆ ಎಂಬ ಭಾವನೆ ಬೆಳೆಯಿತು. ಉದಾಹರಣೆಗೆ ಸಕ್ಕರೆ ಕಾರ್ಖಾನೆ, ನೂಲಿನ ಗಿರಣಿ ಹಾಗೂ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ಯಂತ್ರೋಪಕರಣಗಳನ್ನು ಖರೀದಿ ಮಾಡಲು ಸಹಕಾರ ಇಲಾಖಾ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಲಹಾ ಸಮಿತಿ ರಚಿಸಿ, ಆ ಸಮಿತಿಯೇ ಯಂತ್ರೋಪಕರಣ ತಯಾರಕರ ಜೊತೆ ಸಮಾಲೋಚಿಸಿ, ದರ ನಿಗದಿಪಡಿಸುವ ಕ್ರಮವಿಡಲಾಯಿತು. ಈ ಬೆಳವಣಿಗೆಯು ಆಡಳಿತ ಮಂಡಳಿಗಳು ಮಾಡಬೇಕಾದ ಕೆಲಸವನ್ನು ಬಹುಸಂಖ್ಯೆಯ ಅಧಿಕಾರಿಗಳು ಇದ್ದಂತಹ ಒಂದು ರಾಜ್ಯ ಮಟ್ಟದ ಸಮಿತಿ ನಿರ್ವಹಿಸಿ, ಸಹಕಾರ ಸಂಘಗಳ ಆಡಳಿತ ಮಂಡಳಿಗಳನ್ನು ನಿಷ್ಕ್ರಿಯಗೊಳಿಸಲಾಯಿತು. ಸಹಕಾರ ಸಂಸ್ಥೆಗಳನ್ನು ನಂಬಲಾಗದು ಎಂಬ ಅಭಿಪ್ರಾಯಕ್ಕೆ ಬಂದು, ಸರ್ಕಾರವೇ ಯಂತ್ರೋಪಕರಣ ಖರೀದಿ ಮಾಡಲಾಯಿತು. ಇದೇ ರೀತಿ ಕ್ರಮಗಳನ್ನು ಮುಂದುವರಿಸಿ, ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇದ್ದರೂ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿ ವ್ಯಕ್ತಿಗಳಿಗೆ 20–30 ವರ್ಷಗಳಿಗೆ ನೀಡಲಾಯಿತು.ಇದರಿಂದ ಸಹಕಾರ ಸಂಘಗಳ ಕೆಲಸವನ್ನು ಸರ್ಕಾರವೇ ಮಾಡಿದಾಗ, ಸಹಕಾರ ಸಂಘಗಳ ಆಡಳಿತ ಮಂಡಳಿಗಳು ಪ್ರತಿರೋಧ ವ್ಯಕ್ತಪಡಿಸಲೇ ಇಲ್ಲ. ಏಕೆಂದರೆ ಆಡಳಿತ ಮಂಡಳಿಗಳ ಮೇಲೆ ಆರೋಪ ಬರುವುದಿಲ್ಲವೆಂಬ ಜವಾಬ್ದಾರಿ ರಹಿತ ನಿಲುವಿನಿಂದ. ಇದರಿಂದ ಸಹಕಾರ ಆಂದೋಲನದ ಬೆಳವಣಿಗೆಗೆ ಧಕ್ಕೆಯಾಗುತ್ತದೆ, ಎಂಬ ನಿಷ್ಠೆ ಜವಾಬ್ದಾರಿಯನ್ನು ಸಹಕಾರ ಸಂಸ್ಥೆಗಳ ನಿರ್ವಹಿಸಲಿಲ್ಲ. ಇದೇ ಕಾರಣಕ್ಕೆ ಸಹಕಾರ ಸೌಹಾರ್ದ ಕಾಯಿದೆ ರಚನೆ ಮಾಡಿದಾಗ ಬಹಳಷ್ಟು ಸಹಕಾರ ಸಂಘಗಳು ಪರಿವರ್ತನೆ ಹೊಂದಲೇ ಇಲ್ಲ. ಅಂದರೆ ಒಂದು ಸಹಕಾರ ಸಂಘದ ನೇತೃತ್ವ ವಹಿಸಿಕೊಳ್ಳಲು ಸರ್ಕಾರದ ಪ್ರತ್ಯಕ್ಷ ಪರೋಕ್ಷ ನೆರವಿನಿಂದ ಅಧಿಕಾರದಲ್ಲಿ ಮುಂದುವರಿಯುವ ದುರಾಸೆಯಿಂದ. (ಸೌಹಾರ್ದ ಕಾಯಿದೆ ಬಗ್ಗೆ ಮುಂದೆ ವಿವರವಾಗಿ ಪ್ರಸ್ತಾಪಿಸಲಾಗಿದೆ) 1976 ಮತ್ತು 1984ರ ಸಮಗ್ರ ತಿದ್ದುಪಡಿ ಕಾಯಿದೆಯಿಂದ ಸಹಕಾರ ಸಂಘಗಳ ಆರ್ಥಿಕ ಸ್ವಾಯತ್ತತೆಯನ್ನು ನಿಯಂತ್ರಿಸಲಾಯಿತು. ಇದರಲ್ಲಿ ಪ್ರಮುಖವಾಗಿ ಸಂಘಕ್ಕೆ ಬೇಕಾದಾಗ ಕಟ್ಟಡ ನಿರ್ಮಿಸಲು ನಿಬಂಧಕರ ಪೂರ್ವಾನುಮತಿ, ವಾಹನ ಖರೀದಿ ಮಾಡಲು ನಿಬಂಧಕರ ಪೂರ್ವಾನುಮತಿ, ಆಡಳಿತ ಮಂಡಳಿ ಸದಸ್ಯರು ಕಾರ್ಯ ವ್ಯಾಪ್ತಿಯಿಂದ ಹೊರಗೆ ಅಧಿಕೃತ ಪ್ರವಾಸ (ವ್ಯವಹಾರಕ್ಕಾಗಿ) ನಿಬಂಧಕರ ಪೂರ್ವಾನುಮತಿ, ಇಂತಹ ಇನ್ನಿತರ ನಿಯಂತ್ರಣವನ್ನು ಸಹಕಾರ ಸಂಸ್ಥೆಗಳ ಮೇಲೆ ಹೇರಲಾಯಿತು. ಇದು ಕಾನೂನಿನಲ್ಲಿ ಯಾವುದೇ ಅವಕಾಶ ಇಲ್ಲದೇ ಇದ್ದರೂ, ನಿಬಂಧಕರು ಸಹಕಾರ ಸಂಘಗಳ ಆಡಳಿತ ಮಂಡಳಿಯನ್ನು ಅಪನಂಬಿಕೆಯಿಂದ ನೋಡಲು ಪ್ರಾರಂಭಿಸಿ, ನಿಯಂತ್ರಣಕ್ಕೆ ಒಳಪಡಿಸಿದರು. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಅಂದರೆ ಕೆಲವು ಸಹಕಾರ ಸಂಘಗಳು ಸ್ವಯಂ ನಿಯಂತ್ರಿಸಿಕೊಳ್ಳದೇ ಸ್ವೇಚ್ಛಾಚಾರದಿಂದ ವರ್ತಿಸಿದ್ದರ ಆಧಾರದ ಮೇಲೆ, ನಿಬಂಧಕರು ನಿಯಂತ್ರಿಸಲು ಪ್ರಯತ್ನಿಸಿದರು. ಆದರೆ ಈ ನಿಯಂತ್ರಣದಿಂದ ಸಹಕಾರ ಆಂದೋಲನದ ಬೆಳವಣಿಗೆಗೆ ಸಹಕಾರಿಯಾಗಲಿಲ್ಲ. ಸಹಕಾರಿ ಮುಖಂಡರು ನಿಬಂಧಕರ/ಸರ್ಕಾರದ ಅವಲಂಬನೆಯತ್ತ ನಿರತರಾದರು.

ಇಂತಹ ಸಮಯದಲ್ಲಿ ಕೇಂದ್ರ ಸರ್ಕಾರ ಯೋಜನಾ ಆಯೋಗದ ಮುಖಾಂತರ (ಬ್ರಹ್ಮಪ್ರಕಾಶ್ ವರದಿ) 1991 ರಲ್ಲಿ ಒಂದು ಮಾದರಿ ಸಹಕಾರ ಕಾಯಿದೆ ರಚಿಸಿ–ರಾಜ್ಯ ಸರ್ಕಾರಗಳು ಅದನ್ನು ಅಳವಡಿಸಿಕೊಳ್ಳಲು ಸೂಚಿಸಿತು.ಏಕೆಂದರೆ ಸಹಕಾರದ ಬಗ್ಗೆ ಕಾಯಿದೆ ರಚಿಸುವ ಅಧಿಕಾರವನ್ನು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತಿದ್ದರಿಂದ. ಈ ಮಾದರಿ ಕಾಯಿದೆಯನ್ನು ಬಹಳಷ್ಟು ರಾಜ್ಯ ಸರ್ಕಾರಗಳು ಅಂಗೀಕರಿಸಲಿಲ್ಲ. ಈ ಮಧ್ಯ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ, ಈ ವಿಷಯ ಚರ್ಚೆಗೆ ಬಂದಾಗ, ಹಾಲಿ ಕಾಯಿದೆಯಲ್ಲಿರುವ ನಿಬಂಧಕರ /ಸರ್ಕಾರದ

ನಿಯಂತ್ರಣವಿರುವ ಕಲಂಗಳನ್ನು ಕೈಬಿಡಲು ತೀರ್ಮಾನಿಸಲಾಯಿತು ಮತ್ತು ನಿಬಂಧಕರ ಜವಾಬ್ದಾರಿಯನ್ನು ನಿಗದಿಪಡಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರ ಸಚಿವರಾಗಿ ಶ್ರೀ ಎಸ್.ಎಸ್. ಪಾಟೀಲ್ ಇದ್ದರು.

1. ಸಹಕಾರ ಸಂಘಗಳ ನೋಂದಣಿ ಮತ್ತು ಉಪನಿಯಮಗಳ ತಿದ್ದುಪಡಿಯನ್ನು ಪ್ರಸ್ತಾವನೆ ಸ್ವೀಕರಿಸಿದ ಮೂರು ತಿಂಗಳಲ್ಲಿ ತೀರ್ಮಾನಿಸದಿದ್ದರೆ ನೋಂದಾವಣೆಯಾಗಿದೆ ಎಂದು ಭಾವಿಸುವುದು(ಕಲಂ 7 ಮತ್ತು ಕಲಂ 12)
2. ಸಹಕಾರ ಸಂಘಗಳನ್ನು ಒಂದುಗೂಡಿಸುವುದು, ವಿಭಜಿಸುವುದು. ಈ ಕಲಂ ಅನ್ನು ಕೈಬಿಡಲಾಯಿತು.
3. ಪ್ರತಿಯೊಬ್ಬ ಸದಸ್ಯನು ಕನಿಷ್ಠ ಪ್ರಮಾಣದ ವ್ಯವಹಾರ ಮಾಡಲೇಬೇಕೆಂಬ ಅವಕಾಶ ಸೇರಿಸಲಾಯಿತು. (ಕಲಂ 17 (2ಎ)) ಮುಂದೆ ಇದೇ ಅವಕಾಶವನ್ನು ಸಂವಿಧಾನದ 97ನೇ ತಿದ್ದುಪಡಿಯಲ್ಲಿ ರಾಷ್ಟ್ರ ಮಟ್ಟಕ್ಕೆ ವಿಸ್ತರಿಸಲಾಯಿತು.
4. ಆಡಳಿತ ಮಂಡಳಿ ಸದಸ್ಯನೇ ಮತ್ತೊಂದು ಸಹಕಾರ ಸಂಘದ ಪ್ರತಿನಿಧಿಯಾಗಿ ಆಯ್ಕೆಯಾಗತಕ್ಕದ್ದು ಮತ್ತು ಅಂತಹ ಪ್ರತಿನಿಧಿಯನ್ನು ಬದಲಾಯಿಸಬೇಕಾದರೆ ಸಾಮಾನ್ಯ ಸಭೆಯ ಅನುಮೋದನೆ ಬೇಕು. (ಕಲಂ 21(1)(ಎ) ಮತ್ತು (3)) ಈ ಅವಕಾಶವನ್ನು 2014ರ ತಿದ್ದುಪಡಿಯಲ್ಲಿ ಆಡಳಿತ ಮಂಡಳಿ 2/3 ರ ಬಹುಮತದಿಂದ ಮಂಡಳಿಯೇ ಬದಲಾಯಿಸಲು ಅವಕಾಶ ಕಲ್ಪಿಸಿದೆ.
5. ವಾರ್ಷಿಕ ಸಾಮಾನ್ಯ ಸಭೆ ವಿಷಯ ಪಟ್ಟಿಯನ್ನು ವಿಸ್ತರಿಸಿ, 25 ವಿಷಯಗಳನ್ನು ಮಹಾಸಭೆಯಲ್ಲಿ ಇಡಬೇಕೆಂಬ ಷರತ್ತು ವಿಧಿಸಲಾಯಿತು. (ಕಲಂ 27) 2013 ರಲ್ಲಿ ಹೆಚ್ಚುವರಿಯಾಗಿ 9 ವಿಷಯಗಳನ್ನು ಸೇರಿಸಲಾಗಿದೆ.
6. ಕಾರ್ಯವ್ಯಾಪ್ತಿಗನುಗುಣವಾಗಿ ಆಡಳಿತ ಮಂಡಳಿ ಸಂಖ್ಯೆಯನ್ನು ನಿರ್ಧರಿಸಲಾಯಿತು ಮತ್ತು ಆಡಳಿತ ಮಂಡಳಿ ಅವಧಿಯನ್ನು ಮೂರು ವರ್ಷಗಳಿಂದ ಐದು ವರ್ಷಗಳಿಗೆ ವಿಸ್ತರಿಸಲಾಯಿತು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗಾಗಿ ಸ್ಥಾನ ಮೀಸಲಿಡಲಾಯಿತು (ವ್ಯಕ್ತಿಗತ ಸದಸ್ಯರೇ ಇರುವ ಸಂಘಗಳಲ್ಲಿ) (ಕಲಂ 28ಎ) 2016ರ ತಿದ್ದುಪಡಿಯಲ್ಲಿ ಪ.ಜಾ ಮತ್ತು ಪ.ಪಂಗಡಕ್ಕೆ ಪ್ರತ್ಯೇಕವಾಗಿ ಒಂದು ಸ್ಥಾನ ಮೀಸಲಿಡಲಾಗಿದೆ.
7. ಆಡಳಿತ ಮಂಡಳಿ ಹೊಸ ಚುನಾವಣೆ ಮಾಡಿ, ಅಧಿಕಾರ ವರ್ಗಾಯಿಸುವ ಜವಾಬ್ದಾರಿಯನ್ನು ನಿಗದಿ ಪಡಿಸಲಾಯಿತು. (ಕಲಂ 28ಬಿ)
8. ಸರ್ಕಾರವು ಸಹಕಾರ ಸಂಸ್ಥೆಗಳಿಗೆ ನಾಮ ನಿರ್ದೇಶನ ಮಾಡುವುದನ್ನು ಕೈಬಿಡಲಾಯಿತು. ಪಾಲು ಬಂಡವಾಳ ಹೊಂದಿದ್ದರೆ ಮಾತ್ರ ಒಬ್ಬರನ್ನು ನಾಮ ನಿರ್ದೇಶನ ಮಾಡಲು ಅವಕಾಶ ಕಲ್ಪಿಸಿತು. (ಕಲಂ 29)
9. ನಿರ್ದೇಶಕರನ್ನು ಅನರ್ಹತೆಗೊಳಿಸಲು ಮತ್ತು ತೆಗೆದು ಹಾಕಲು ಅವಕಾಶ ಕಲ್ಪಿಸಿತು. (ಕಲಂ 29ಸಿ)
10. ನಿರ್ದೇಶಕರನ್ನು ಅನರ್ಹತೆಗೊಳಿಸಲು ಮತ್ತು ತೆಗೆದು ಹಾಕಲು ಇದ್ದ ಎರಡೂ ಕಲಂಗಳನ್ನು ಒಂದು ಗೂಡಿಸಿ ಮಾರ್ಪಡಿಸಲಾಯಿತು. (ಕಲಂ 29ಸಿ ಮತ್ತು 126ಎ)
11. ಪ್ರಥಮಬಾರಿಗೆ ಒಂದು ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನ, ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಿದಿಪಡಿಸಲಾಯಿತು. (ಕಲಂ 29ಜಿ)
12. ಸರ್ಕಾರ ಸಹಕಾರ ಸಂಘಗಳಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಕಿತ್ತು ಹಾಕಲಾಯಿತು. (ಕಲಂ 30ಬಿ)
13. ಸರ್ಕಾರ ಸಹಕಾರ ಸಂಘಗಳ ಆಡಳಿತ ಮಂಡಳಿಯ 1/3 ಸದಸ್ಯರ ನಾಮ ನಿರ್ದೇಶನ ಮಾಡುವ ಅಧಿಕಾರ ಕಿತ್ತು ಹಾಕಲಾಯಿತು. (ಕಲಂ 53ಎ)
14. ಸಹಕಾರ ಸಂಘಗಳ ಅವ್ಯವಹಾರ /ನ್ಯೂನತೆಗಳ ಮೇಲೆ ನಡೆಯುವ ವಿಚಾರಣೆಗೆ ನಿರ್ದಿಷ್ಟ ಅವಧಿಯನ್ನು ನಿರ್ಧರಿಸಲಾಯಿತು (12 ತಿಂಗಳು) (ಕಲಂ 64)
15. ಅಧಿಭಾರ ಅರ್ಜಿ ಮತ್ತು ದಾವಾ ಪ್ರಕರಣಗಳ ಇತ್ಯರ್ಥಕ್ಕೆ 12 ತಿಂಗಳ ಅವಧಿ ನಿಗದಿಪಡಿಸುವುದು. (ಕಲಂ 69 ಕಂ 71)
16. ಲೆಕ್ಕಾಧಿಕಾರಿ, ವಿಚಾರಣಾಧಿಕಾರಿ ಅಥವಾ ತಪಾಸಣಾಧಿಕಾರಿ ಸತ್ಯವಲ್ಲದ ವರದಿ ಸಲ್ಲಿಸಿದಾಗ, ಶಿಕ್ಷೆ ಮತ್ತು ದಂಡ ವಿಧಿಸುವ ಅವಕಾಶ ಕಲ್ಪಿಸಿದ್ದು ಮತ್ತು ತಃಖ್ತೆಗಳನ್ನು ಸಲ್ಲಿಸದಿದ್ದರೆ (ಕಲಂ 109 12ಎ/12ಬಿ)

ಈ ತಿದ್ದುಪಡಿಗಳಿಂದ ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಪಡಿಸುವುದರ ಜೊತೆಗೆ ಸಹಕಾರ ಸಂಸ್ಥೆಗಳಿಗೆ ಸ್ವಾಯತ್ತತೆ ಹೆಚ್ಚಿಸಲು ನಿಯಂತ್ರಣವಿದ್ದ

ಕಲಂಗಳನ್ನು ಕೈಬಿಡಲಾಯಿತು. ಈ ಕಾಯಿದೆ ತಿದ್ದುಪಡಿಯಾದ ನಂತರ ಬಂದ ಸರ್ಕಾರ, ಪುನಃ ನಿಯಂತ್ರಣವಿದ್ದ ಕಲಂಗಳನ್ನು ಮರು ಸ್ಥಾಪನೆ ಮಾಡಿ ನಿಯಂತ್ರಣವನ್ನು ಮತ್ತೆ ಸೇರ್ಪಡೆ ಮಾಡಿತು. ಆ ನಂತರದ ಬೆಳವಣಿಗೆ ಎಂದರೆ 2011ರ ಸಂವಿಧಾನ ತಿದ್ದುಪಡಿ ನಂತರ, ಅದೇ ಮಾದರಿಯಲ್ಲಿ ಉದಾರೀಕರಣ ನೀತಿ ರೂಪಿಸಿ 11.02.2013 ರಿಂದ ಜಾರಿಗೆ ಬಂದಿದೆ. ಅದರಲ್ಲಿ ಪ್ರಮುಖವಾದವು.

1. ಆಡಳಿತ ಮಂಡಳಿ ಸಂಖ್ಯೆಯನ್ನು 21ಕ್ಕೆ ಸೀಮಿತಗೊಳಿಸಿರುವುದು. ಇಬ್ಬರು ತಾಂತ್ರಿಕ ನಿರ್ದೇಶಕರ ಸೇರ್ಪಡೆ ಮತ್ತು ಕಾರ್ಯನಿರತ ನಿರ್ದೇಶಕರು (ಮೂರಕ್ಕೆ ಹೆಚ್ಚಿಲ್ಲದಂತೆ) ಮತ್ತು ವ್ಯಕ್ತಿಗತ ಸದಸ್ಯರಿರುವಲ್ಲಿ ಎರಡು ಮಹಿಳೆಯರಿಗೆ ಮತ್ತು ಒಂದು ಪರಿಶಿಷ್ಟ ಜಾತಿ/ ಜನಾಂಗಕ್ಕೆ ಮೀಸಲಾತಿ (ರಾಜ್ಯ ಸರ್ಕಾರ ಹಿಂದುಳಿದ ವರ್ಗಕ್ಕೆ ಎರಡು ಸ್ಥಾನ ಮೀಸಲಿಟ್ಟಿದೆ). 2014 ಮತ್ತು 2016 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಂದೊಂದು ಸ್ಥಾನ ಮತ್ತು ಹಿಂದುಳಿದ ಪಂಗಡಗಳಿಗೆ ಎರಡು ಸ್ಥಾನವೆಂದು ತಿದ್ದುಪಡಿ ಮಾಡಿದೆ.
2. ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆಗೆ ಪ್ರತ್ಯೇಕ ಸಹಕಾರ ಚುನಾವಣಾ (ಪ್ರಾಧಿಕಾರ) ರಚನೆ.
3. ಸಹಕಾರ ಸಂಘಗಳ ವಾರ್ಷಿಕ ಸಭೆಯನ್ನು ಸೆಪ್ಟೆಂಬರ್ 30ರೊಳಗೆ ನಡೆಸುವುದು. (ರಾಜ್ಯ ಸರ್ಕಾರ ಸೆಪ್ಟೆಂಬರ್ 25ಕ್ಕೆ ನಿಗದಿ ಪಡಿಸಿದೆ)
4. ಲೆಕ್ಕ ಪತ್ರಗಳ ತಪಾಸಣೆಯನ್ನು ಸನ್ನದ್ದು ಲೆಕ್ಕಿಗರಿಂದ ನಡೆಸುವುದು ಮತ್ತು ಸೆಪ್ಟಂಬರ್ ಒಂದನೇ ತಾರೀಖಿನೊಳಗೆ ವರದಿ ಪಡೆದು ಮಹಾಸಭೆ ಒಪ್ಪಿಗೆ ಪಡೆಯುವುದು.
5. ಸಹಕಾರ ಸಂಘಗಳ ಆಡಳಿತ ಅವ್ಯವಹಾರ ನಡೆದಾಗ ಮಂಡಳಿಯನ್ನು ರದ್ದು ಪಡಿಸುವುದು ಅಥವಾ ಅಮಾನತ್ತಿನಲ್ಲಿಡಲು ಅವಕಾಶ ಕಲ್ಪಿಸಿರುವುದು. ಸರ್ಕಾರದ ಸಹಾಯ ಧನ ಪಡೆಯಲಾರದ ಸಂಘಗಳನ್ನು ಅಮಾನತ್ತು/ರದ್ದುಪಡಿಸಲು ಅವಕಾಶ ಇಲ್ಲದಿರುವುದು.
6. ಸದಸ್ಯ ತನಗೆ ಸಂಬಂಧಪಟ್ಟ ಮಾಹಿತಿಯನ್ನು ಅವನು ಸದಸ್ಯನಿರುವ ಸಂಘದಿಂದ ಪಡೆಯಲು ಅವಕಾಶ.
7. ಪ್ರತಿಯೊಂದು ಸಹಕಾರ ಸಂಘ ನಿಬಂಧರಿಗೆ ಸೆಪ್ಟೆಂಬರ್ 30 ರೊಳಗೆ ಮಾಹಿತಿ ಸಲ್ಲಿಸಲೇಬೇಕಾದ ತಃಖ್ತೆಗಳು.
8. ಸಂಬಳ ಬಟವಾಡೆ ಮಾಡುವ ಅಧಿಕಾರಿ, ಸಹಕಾರ ಸಂಘದ ಸಾಲ ಬೇಡಿಕೆ ಕಂತು ಮುರಿದುಕೊಂಡು ಸಂಘಕ್ಕೆ ಮಾಡದಿದ್ದರೆ–ಶಿಕ್ಷೆ ಮತ್ತು ದಂಡ.

ಈ ಮೇಲ್ಕಂಡ ಅವಕಾಶಗಳನ್ನು ಸೇರಿಸಿ ಸಹಕಾರ ಸಂಘಗಳ ಕಾಯಿದೆ 1959ಕ್ಕೆ ದಿನಾಂಕ 11.02.2013 ರಂದು ತಿದ್ದುಪಡಿ ಮಾಡಿ ಜಾರಿಗೆ ತಂದಿದೆ. ಅದರಂತೆ ಕರ್ನಾಟಕ ಸೌಹಾರ್ದ ಕಾಯಿದೆಗೆ ತಿದ್ದುಪಡಿ ತಂದು ಹೆಚ್ಚಿನ ಉದಾರೀಕರಣ ನೀತಿ ಜೊತೆಗೆ, ಕೆಲವು ಹೊಸ ನ್ಯೂನತೆಗಳು ಸೃಷ್ಟಿಯಾಗಿದೆ. ಉದಾಹರಣೆಗೆ ಹಿಂದುಳಿದ ವರ್ಗಕ್ಕೆ ಒಂದು ಮೀಸಲಾತಿಗೆ ಬದಲಾಗಿ ಎರಡು ಮೀಸಲಾತಿ, ಸಹಸದಸ್ಯರನ್ನು ತೆಗೆದುಕೊಳ್ಳಲು ನಿರ್ಬಂಧ ಮತ್ತಿತರೆ. ಆದರೆ ಸಂತೋಷಪಡುವ ವಿಷಯವೆಂದರೆ, ಸೌಹಾರ್ದ ಕಾಯಿದೆಯಲ್ಲಿ 12 ವರ್ಷಗಳ ಹಿಂದೆ ಕರ್ನಾಟಕ ರಾಜ್ಯ ಸರ್ಕಾರ ಮಾಡಿದ ಶೇ.90% ರಷ್ಟು ಅವಕಾಶಗಳನ್ನು ಈಗ ಸಂವಿಧಾನದಲ್ಲಿ ಸೇರಿಸಿ ರಾಷ್ಟ್ರಮಟ್ಟಕ್ಕೆ ವಿಸ್ತರಿಸಲು ಅವಕಾಶ ಕಲ್ಪಿಸಿರುವುದು. ಇದಕ್ಕೆ ಕರ್ನಾಟಕ ಸೌಹಾರ್ದ ಕಾಯಿದೆಯ ವೈಶಿಷ್ಟ್ಯವನ್ನು ನೋಡೋಣ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ, ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಭಿ ಮತ್ತು ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು"

ಸಹಕಾರ ಆಂದೋಲನಕ್ಕೆ ಉತ್ತೇಜನ ನೀಡಲು ಕರ್ನಾಟಕ ಸರ್ಕಾರ ರಾಷ್ಟ್ರದಲ್ಲಿಯೇ ಪ್ರಥಮವಾಗಿ "ಸಹಕಾರ ನೀತಿ"ಯನ್ನು ರೂಪಿಸಿತು. ಈ ನೀತಿಯನ್ವಯ ಸಹಕಾರಿ ಆಂದೋಲನದ ಬೆಳವಣಿಗೆಗೆ ಬೇಕಾದ ಎಲ್ಲಾ ಕಾನೂನಿನ ಮಾರ್ಪಾಟು ಮಾಡಲು ಅವಶ್ಯಕವಿದೆಯೋ ಅದನ್ನು ಮಾಡುವುದರ ಜೊತೆಗೆ, ಪ್ರತ್ಯೇಕವಾಗಿ ಒಂದು ಹೊಸ ಕಾನೂನು ತಂದು ಸಹಕಾರಿಗಳಿಗೆ ಪೂರ್ಣ ಪ್ರಮಾಣದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಕೊಡುವುದು ಮತ್ತು ನಿಬಂಧಕರ (ಸರ್ಕಾರದ) ಮಧ್ಯ ಪ್ರವೇಶ ಇದರಂತೆ ಕಾನೂನು ರೂಪಿಸುವುದು ಎಂದು ತಿಳಿಸಿದೆ. ಅಂದರೆ ಸಹಕಾರಿಗಳೇ ತಮ್ಮ ಜವಾಬ್ದಾರಿ ಅರಿತು, ಆರ್ಥಿಕ ಅಭಿವೃದ್ಧಿಗೆ ತಮ್ಮ ಸಂಪನ್ಮೂಲವನ್ನೇ ಆಧರಿಸಿ ಬೆಳೆಯಬೇಕೆಂಬ ದೃಢ ನಿರ್ಧಾರ ತೆಗೆದುಕೊಳ್ಳಬೇಕು. ನಿಬಂಧಕರು ತಮ್ಮ ಅಧಿಕಾರ ಚಲಾಯಿಸುವಾಗ, ಆ ಅಧಿಕಾರ ಸೀಮಿತವಾಗಿರಬೇಕೆಂದು ಬಯಸಿ ಸಹಕಾರಿ ನೋಂದಣಿ ಮತ್ತು ಅದರ ರದ್ದತಿಗೆ ಸೀಮಿತವಾಗಿ ಅಧಿಕಾರ ಕೊಡಬೇಕೆಂಬ ಆಶಯ ವ್ಯಕ್ತಪಡಿಸಿದೆ. ಸೌಹಾರ್ದ ಸಹಕಾರಿಗಳು ಸರ್ಕಾರದ ಯಾವುದೇ ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯವಿಲ್ಲದೇ, ತನ್ನ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸಿ ಬೆಳೆಸಿಕೊಂಡು ಹೋಗಲು ಅನುವು ಮಾಡಿಕೊಡಲಾಗಿದೆ.

ಈ ಕಾಯಿದೆಯ ಮೂಲ ಉದ್ದೇಶ, ಸರ್ಕಾರದ, ನಿಬಂಧಕರ ನಿಯಂತ್ರಣದಿಂದ ಹೊರತರುವುದು ಮತ್ತು ಸಹಕಾರಿಯನ್ನು ನಡೆಸಿಕೊಂಡು

ಹೋಗುವ ಆಡಳಿತ ಮಂಡಳಿ ಮತ್ತು ಮಹಾಸಭೆಗೆ, ಸದಸ್ಯರ ಬೇಡಿಕೆಗಳನ್ನು ಈಡೇರಿಸಲು ಕಾರ್ಯರೂಪಿಸಲು ಪೂರ್ಣ ಪ್ರಮಾಣದ ಅಧಿಕಾರ ನೀಡಲಾಗಿದೆ. ನಿಬಂಧಕರಿಗೆ ಇರುವ ಅಧಿಕಾರಗಳು ಈ ಕೆಳಕಂಡಂತೆ ಇದೆ.

1. ಒಂದು ಸಹಕಾರಿಯನ್ನು ಶಾಸನಬದ್ಧ ಸಂಸ್ಥೆಯಾಗಿ ನೋಂದಾಯಿಸುವುದು. ನೋಂದಾಯಿಸಿದ ದಿನದಂದೇ ಆ ಸಹಕಾರಿ ಸಂಯುಕ್ತ ಸಹಕಾರಿಯು ಸದಸ್ಯತ್ವ ಪಡೆಯತಕ್ಕದ್ದು.
2. ನೋಂದಾವಣೆಯಾದ ಸಹಕಾರಿಯ ಕಾರ್ಯನಿರ್ವಹಣೆ ಮಾಡುವಾಗ ಬರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ತಂದ ತಿದ್ದುಪಡಿಗಳನ್ನು ನೋಂದಾಯಿಸುವುದು.
3. ಸಹಕಾರಿಯ ಆಡಳಿತ ಮಂಡಳಿ, ಸದಸ್ಯರು, ನಿರ್ದೇಶಕರು ಅಥವಾ ಮತ್ತೊಂದು ಸಹಕಾರಿಯ ಜೊತೆ ಅಧಿಭಾರ ಏರ್ಪಡುವ/ವಿವಾದಗಳನ್ನು ಇತ್ಯರ್ಥ ಪಡಿಸುವುದು.
4. ಯಾವುದೇ ಒಂದು ಸಹಕಾರಿ ವಿಚಾರಣೆ ಮಾಡಲು ಮನವಿ ಸಲ್ಲಿಸಿದಾಗ ವಿಚಾರಣೆ ಮಾಡುವುದು.
5. ಸಹಕಾರಿ ಕಾರ್ಯನಿರ್ವಹಿಸಲು ನಿಷ್ಕ್ರಿಯಗೊಂಡಾಗ, ಸಹಕಾರಿಯ ನೋಂದಣಿ ರದ್ದು ಪಡಿಸುವುದು.
6. ಚುನಾವಣಾಧಿಕಾರಿ ನೇಮಿಸಿ ಚುನಾವಣೆ ನಡೆಸುವುದು.

ಸಂವಿಧಾನದ 97ನೇ ತಿದ್ದುಪಡಿಯ ನಂತರ ಚುನಾವಣೆ ನಡೆಸಲು ಪ್ರತ್ಯೇಕ ಸಹಕಾರ ಚುನಾವಣಾ ಆಯೋಗ (ಪ್ರಾಧಿಕಾರ) 11.02.2013 ರಿಂದ ರಚನೆಯಾಗಿದ್ದು, ಆ ಸಂಸ್ಥೆಯೇ ಚುನಾವಣಾಧಿಕಾರಿ ನೇಮಕ ನಿರ್ದೇಶಕ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುತ್ತಿದೆ.

ಈ ಮೇಲ್ಕಂಡ ತಾತ್ವಿಕ ಹಿನ್ನೆಲೆಯನ್ನು ಗಮನಿಸಿದಾಗ ಒಂದು ಸೌಹಾರ್ದ ಸಹಕಾರಿ ಕಾಯಿದೆ ಜಾರಿಯ ಉದ್ದೇಶ ಸಹಕಾರಿಗಳಿಗೆ ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ ನೀಡುವುದು ಮತ್ತು ಅವುಗಳು ಸ್ವಯಂ ಆಡಳಿತ ನಡೆಸುವುದು ಮತ್ತು ಶಿಸ್ತು ಪಾಲಿಸುವುದು.

ನಿಬಂಧಕರ ಅಧಿಕಾರಗಳನ್ನು (ಸರ್ಕಾರದ) ನಿರ್ಬಂಧಿಸಿದ ನಂತರ, ಸಹಕಾರಿಗಳು ಸಮರ್ಪಕ ಕೆಲಸ ನಿರ್ವಹಿಸುವ ಜವಾಬ್ದಾರಿ ಹೊತ್ತಿದ್ದರೂ, ಎಲ್ಲಾ ಸಹಕಾರಿಗಳೂ, ಅದನ್ನು ಪಾಲಿಸಲೇಬೇಕೆಂದು ಶರತ್ತು ವಿಧಿಸಲಾಗದು. ಅಂತಹ ಸಂದರ್ಭಗಳಲ್ಲಿ ಸಹಕಾರಿಗಳನ್ನು ಒಂದು ಪ್ರಜಾಸತ್ತಾತ್ಮಕ ಸಂಸ್ಥೆಯೇ ನಿರ್ವಹಿಸಬೇಕೆಂಬ ಆಲೋಚನೆ ಮಾಡಿದ ರಾಜ್ಯ ಕರ್ನಾಟಕ. ಇದಕ್ಕಾಗಿ ಕಾಯಿದೆಯಲ್ಲಿಯೇ ಅಧ್ಯಾಯ **iv** ವನ್ನು ಸೃಷ್ಟಿಸಿ, ನಿಬಂಧಕರು ಚಲಾಯಿಸುತ್ತಿದ್ದ (ಹಳೆ ಕಾಯಿದೆಯಲ್ಲಿ) ಎಲ್ಲಾ ಅಧಿಕಾರಗಳನ್ನು (ಮೇಲೆ ಹೇಳಿದ 6 ವಿಷಯಗಳನ್ನು ಹೊರತುಪಡಿಸಿ) "ಸಂಯುಕ್ತ ಸಹಕಾರಿ" ಎಂಬ ಒಂದು ಪ್ರಜಾಸತ್ತಾತ್ಮಕ ಸಂಸ್ಥೆಗೆ ವಹಿಸಿದೆ. ಇದು ಒಂದು ಶಾಸನಬದ್ಧ ಸಂಸ್ಥೆಯಾಗಿರುವುದರಿಂದ, ತಪ್ಪು ನಡೆದ ಸಂದರ್ಭದಲ್ಲಿ ಸಹಕಾರಿಗಳನ್ನು ನಿಯಂತ್ರಿಸಿ ಮಾರ್ಗದರ್ಶನ ನೀಡಲು ಸೃಷ್ಟಿ ಮಾಡಲಾಗಿದೆ.

ಈ ಕಾಯಿದೆ ರಚಿಸಲು ಪ್ರೇರೇಪಣೆ ಮಾಡಿದ ವರದಿ, ಕೇಂದ್ರ ಯೋಜನಾ ಆಯೋಗ ಶ್ರೀ ಚೌಧರಿ ಬ್ರಹ್ಮಪ್ರಕಾಶ್ ಅವರ ನೇತೃತ್ವದಲ್ಲಿ ಕೊಟ್ಟ ವರದಿ.ಈ ವರದಿಯನ್ನಾಧರಿಸಿ ಬೇರೆ ಬೇರೆ ರಾಜ್ಯಗಳು ಹಾಲಿ ಜಾರಿಯಲ್ಲಿದ್ದ ಕಾಯಿದೆಗೆ ತಿದ್ದುಪಡಿ ಅಥವಾ ಮತ್ತೊಂದು ಕಾಯಿದೆ ಜಾರಿಗೆ ತಂದಿದ್ದರೂ, ನಿಬಂಧಕರ ಅಧಿಕಾರವನ್ನು ದೊಡ್ಡ ಮಟ್ಟದಲ್ಲಿ ಮೊಟಕುಗೊಳಿಸಿ ಪ್ರಜಾಸತ್ತಾತ್ಮಕ ಒತ್ತು ಕೊಟ್ಟ ರಾಜ್ಯ ಕರ್ನಾಟಕ.

ಈ ಕಾಯಿದೆ ಜಾರಿಗೆ ಬಂದಾಗ ಸಹಕಾರ ಸಂಘಗಳ ಕಾಯಿದೆ 1959ರಲ್ಲಿ ನೋಂದಣಿಯಾದ ಬಹಳಷ್ಟು ಸಹಕಾರ ಸಂಘಗಳು ವರ್ಗಾವಣೆ ಹೊಂದುತ್ತವೆಂದು ಆಶಯ, ಬಹಳಷ್ಟು ಸಹಕಾರಿ ಮುಖಂಡರು ಮತ್ತು ಹಲವು ಅಧಿಕಾರಗಳಲ್ಲಿತ್ತು. ಅಂದರೆ ಬಹಳಷ್ಟು ಸಂಘಗಳು ಸಹಕಾರಿಯಾಗಿ ಪರಿವರ್ತನೆ ಹೊಂದುತ್ತವೆಂದು. ಏಕೆಂದರೆ, ಸಹಕಾರಿ ಮುಖಂಡರ, ಸಭೆ ಸಮಾರಂಭ, ವಿಚಾರ ಸಂಕಿರಣ, ಕಾರ್ಯಾಗಾರ ಹಾಗೂ ಸಹಕಾರಿ ಸಮ್ಮೇಳನಗಳಲ್ಲಿ, ನಿಬಂಧಕರ ನಿಯಂತ್ರಣ ತೆಗೆದು ಹಾಕಬೇಕೆಂದು ಒಕ್ಕೊರಲಿನಿಂದ ಪ್ರತಿಪಾದಿಸುತ್ತಿದ್ದರು. ಆದರೂ ಬಹಳಷ್ಟು ಸಂಸ್ಥೆಗಳು ವರ್ಗಾವಣೆ ಹೊಂದಲಿಲ್ಲ. ಇದರಿಂದ ಸಹಕಾರಿಗಳು, ಸರ್ಕಾರದ/ನಿಬಂಧಕರ ನಿಯಂತ್ರಣ ಬೇಕೆಂದು ತೀರ್ಮಾನಿಸಿ ದಂತಾಗುತ್ತದೆ. ಅಂದರೆ ಸಹಕಾರಿಗಳು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಲ್ಲ ಎಂದಾಗುತ್ತದೆ. ಇದಕ್ಕೆ ಪೂರಕವಾಗಿ ಸೌಹಾರ್ದ ಕಾಯಿದೆಯಲ್ಲಿ ಕರ್ತವ್ಯ, ಹಕ್ಕು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಸೇರಿಸಿರುವುದರಿಂದ, ಅವುಗಳನ್ನು ನಿರ್ವಹಿಸಲು ಶಕ್ತಿ ಇಲ್ಲವೆಂದು ಅರ್ಥವಾಗಿ, ಹಳೇ ಕಾಯಿದೆಯಲ್ಲಿ ಮುಂದುವರಿಯಲು ತೀರ್ಮಾನಿಸಿದಂತೆ ಕಾಣುವುದಿಲ್ಲವೇ? ಅಥವಾ ಸದಸ್ಯರ ಹಿತ ಮತ್ತು ಅವರ ಆರ್ಥಿಕ ಬೆಳವಣಿಗೆ ಬದಲಾಗಿ, ತಮ್ಮ ಬೆಳವಣಿಗೆಗೆ ಅವಕಾಶಗಳು ಇಲ್ಲವೆಂದೇ ಅಥವಾ ಸರ್ಕಾರದ ನಿಬಂಧಕರ ನಿಯಂತ್ರಣದಲ್ಲಿಯೇ ಮುಂದುವರಿದರೆ, ರಾಜಕೀಯ ಪ್ರಭಾವದಿಂದ ಸಹಕಾರ ಸಂಘಗಳನ್ನು ನಿಯಂತ್ರಿಸಬಹುದೆಂಬ ನಂಬಿಕೆಯಿಂದಲೇ? ಸಹಕಾರ ಸಂಘಗಳ ಕಾಯಿದೆ 1959ರಲ್ಲಿ ಆಡಳಿತ ಮಂಡಳಿಯಲ್ಲಿ

ನಿಯಂತ್ರಣ, ನಾಮನಿರ್ದೇಶನ, ಸರ್ಕಾರದಿಂದ ಸಹಾಯಧನ, ಸಮಿತಿಗಳನ್ನು ರಾಜಕೀಯ ಪ್ರಭಾವದಿಂದ ರದ್ದುಗೊಳಿಸಲು, ಅಥವಾ ರದ್ದುಗೊಳಿಸಿದಂತೆ ಪ್ರಭಾವ ಬೀರಲು ಸಾಧ್ಯವೆಂದು ಅಥವಾ ಸಮಾಪನೆಗೊಳಸದಂತೆ, ಪುನಃಶ್ಚೇತನ ಮಾಡಲು ಸಾಧ್ಯವೆಂಬ ಭಾವನೆಯಿಂದ ಸೌಹಾರ್ದ ಕಾಯಿದೆಗೆ ಬರಲು ಹಿಂಜರಿಯುತ್ತಿರಬೇಕು. ಇದರ ಜೊತೆಗೆ ಸೌಹಾರ್ದ ಕಾಯಿದೆಯಲ್ಲಿ ಸ್ವಾತಂತ್ರ್ಯಕೊಟ್ಟರೂ, ಅದನ್ನು ಸ್ವೇಚ್ಚತೆ ಎಂದು ತಿಳಿಯಲಾಗದೆಂಬ ನಂಬಿಕೆಯಿಂದ ವರ್ಗಾವಣೆಗೆ ಪ್ರಯತ್ನಿಸಿಲ್ಲವೇ ಅಥವಾ ಸಹಕಾರಿ ಇಲಾಖೆ ಅಧಿಕಾರಿಗಳಿಂದ ಸಕಾರಾತ್ಮಕ ಉತ್ತೇಜನ ಸಿಗದೆ ಇರುವುದರಿಂದಲೂ ವರ್ಗಾವಣೆಗೆ ಹಿಂಜರಿಕೆ ಇರಬಹುದು.

ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ನೋಂದಾವಣೆ ಆಗಲು ಕೆಲವು ದೃಡ ನಂಬಿಕೆಗಳು ಅವಶ್ಯಕ. ಪ್ರತಿಯೊಬ್ಬ ಸಹಕಾರಿ ನಿರ್ದೇಶಕ, ಸದಸ್ಯ ಅಥವಾ ಪದಾಧಿಕಾರಿ ಜವಾಬ್ದಾರಿಯುತ, ಸ್ವಜನ ಪಕ್ಷಪಾತಿಯಲ್ಲದ, ಸೇವಾ ಮನೋಭಾವ ಹೊಂದಿದವನಿರಬೇಕು. ಅದಕ್ಕೂ ಮಿಗಿಲಾಗಿ ಸದಸ್ಯರ ಆರ್ಥಿಕ ಬೆಳವಣಿಗೆಯೇ ಸಹಕಾರಿಯ ಮೂಲ ಉದ್ದೇಶ. ಅಂದರೆ ಪ್ರತಿಯೊಬ್ಬ ಸದಸ್ಯನ್ನೂ ಸ್ವಾವಲಂಬಿಯಾಗಿ, ತನ್ನ ಕಾಲ ಮೇಲೆ ನಿಲ್ಲಲು ಅವಕಾಶ ಕಲ್ಪಿಸುವ ಅವಕಾಶ ಪೂರ್ಣ ಪ್ರಮಾಣದಲ್ಲಿ ಈ ಕಾಯಿದೆಯಲ್ಲಿ ಲಭ್ಯ. ಇದನ್ನು ಪಡೆಯಲು ಪ್ರತಿ ಸದಸ್ಯ ಸಹಕಾರಿಯ ಮಹಾಸಭೆ, ಆಡಳಿತ ಮಂಡಳಿಯ ಮುಖಾಂತರ ಪಡೆಯಲು ಅವಕಾಶ ಇದೆ ಹಾಗೂ ಇವುಗಳನ್ನು ಪಡೆಯಲು ಅವನು ಬದ್ಧ ಮತ್ತು ಜವಾಬ್ದಾರಿ ಇದೆ.

ಈ ಕಾಯಿದೆ 1997 ರಲ್ಲಿ ರಚಿಸಿದರೂ ರಾಷ್ಟ್ರಪತಿಯವರ ಒಪ್ಪಿಗೆಯನ್ನು 28.03.2000 ರಂದು ಪಡೆದಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ 10.05.2000 ದಂದು ಪ್ರಕಟಿಸಲಾಗಿದೆ ಹಾಗೂ ಈ ಕಾಯಿದೆಯನ್ನು ರಾಜ್ಯ ಸರ್ಕಾರ ಅಧಿಸೂಚನೆ ಸಂಖ್ಯೆ. ಸಿ.ಎಂ.ಡಬ್ಲ್ಯೂ /61/ಸಿ.ಎಸ್. ಎಫ್./2000 ದಿನಾಂಕ 26.12.2000ದ ಪ್ರಕಟಣೆಯಲ್ಲಿ 01.01.2001 ರಂದು ಈ ಕಾಯಿದೆ ಜಾರಿಗೆ ಬಂದಿದೆ. ವರ್ಗಾವಣೆಯಾದ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರಿಗಳ ಸಂಖ್ಯೆ, ಇನ್ನೂ 10000 ಗಡಿ ದಾಟಿಲ್ಲ, (ಈಗ 5500 ಕ್ಕಿಂತ ಹೆಚ್ಚಿದೆ) ಎಂದರೆ ಸಹಕಾರಿ ಧುರೀಣರು, ಮುಖಂಡರು, ಕಾರ್ಯಕರ್ತರು, ಇನ್ನೂ ಅಪನಂಬಿಕೆಯಿಂದ ಏಕೆ ನೋಡುತ್ತಿದ್ದಾರೆ ತಿಳಿಯದಾಗಿದೆ. ಈ ಕಾರಣದಿಂದಲೇ ಸಂಯುಕ್ತ ಸಹಕಾರಿ, ಸಹಕಾರ ಸಂಘಗಳಲ್ಲಿ, ಸಹಕಾರಿಗಳನ್ನು ಪ್ರೇರೇಪಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಕಾರ್ಯಾಗಾರ, ಸಮ್ಮೇಳನ ನಡೆಸುತ್ತಿದ್ದರೂ ಬೆಳವಣಿಗೆ ಮಂದಗತಿಯಲ್ಲಿ ಸಾಗಿದೆ. ಇದರ ಸುಧಾರಣೆ ಅತಿ ಅವಶ್ಯಕ.

ಈ ಮೇಲ್ಕಂಡ ವಿವರಣೆಯಿಂದ ಗಮನಿಸಬಹುದಾದ ಅಂಶವೆಂದರೆ, ಸಹಕಾರಿ ಕಾಯಿದೆಗೆ ಉದಾರೀಕರಣ ನೀತಿ ಅಳವಡಿಸಿರುವುದು ಕರ್ನಾಟಕ ಸರ್ಕಾರ. ಅದನ್ನು ರಾಷ್ಟ್ರ ಮಟ್ಟದಲ್ಲಿ ಸಂವಿಧಾನ ತಿದ್ದುಪಡಿ ಮುಖಾಂತರ ರಾಷ್ಟ್ರಕ್ಕೆ ವಿಸ್ತರಿಸಿರುವ ಗೌರವ ಕರ್ನಾಟಕ ರಾಜ್ಯಕ್ಕೆ ಸಲ್ಲಬೇಕು.

**ಸಂವಿಧಾನ ತಿದ್ದುಪಡಿ :**

"ಸಹಕಾರ" ಎಂಬ ವಿಷಯ ಸಂವಿಧಾನ ಎರಡನೇ ಪಟ್ಟಿಯಲ್ಲಿ ಬರುತ್ತಿರುವುದರಿಂದ, ಸಹಕಾರ ಬಗ್ಗೆ ಕಾನೂನು ರಚಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ ವರ್ಗಾವಣೆ ಯಾಗಿದೆ.ಅದರಂತೆ ರಾಷ್ಟ್ರದ ಪ್ರತಿಯೊಂದು ರಾಜ್ಯವು ಪ್ರತ್ಯೇಕ ಕಾಯಿದೆಯನ್ನು ರಚಿಸಿಕೊಂಡಿವೆ. ಈ ರಾಜ್ಯ ಕಾಯಿದೆಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿದ್ದು, ಸಾಮ್ಯತೆಗಳಿರಲಿಲ್ಲ. ರಾಷ್ಟ್ರಿಯ ಯೋಜನಾ ಆಯೋಗವು ಬ್ರಹ್ಮಪ್ರಕಾಶ್ ವರದಿಯನ್ನಾದರಿಸಿ ಒಂದು ಮಾದರಿ ಸಹಕಾರಿ ಕಾಯಿದೆಯನ್ನು ಎಲ್ಲಾ ರಾಜ್ಯಗಳಿಗೂ 1991 ರಲ್ಲಿ ರವಾನಿಸಿದ್ದು. ಈ ಮಾದರಿ ಕಾಯಿದೆಯನ್ನು ಆಧರಿಸಿ ವಿವಿಧ ರಾಜ್ಯಗಳು ಹೊಸದಾಗಿ ಉದಾರಿಕೃತ ಕಾಯಿದೆಯನ್ನು ರೂಪಿಸಿದ್ದವು. ಆದರೆ ಎಲ್ಲಾ ರಾಜ್ಯಗಳೂ ಇದನ್ನು ಅಳವಡಿಸಿಕೊಳ್ಳಲಿಲ್ಲ. ಈ ಮಧ್ಯೆ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ 1959ರ ಸಹಕಾರಿ ಕಾಯಿದೆಗೆ ಹೊರತಾಗಿ ಮತ್ತೊಂದು ಕಾಯಿದೆಯನ್ನು ರೂಪಿಸಲು ತೀರ್ಮಾನಿಸಿ "ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯಿದೆ 1997" ರೂಪಿಸಿ 01.01.2001 ರಿಂದ ಜಾರಿ ಮಾಡಿತು. ಈ ಸೌಹಾರ್ದ ಕಾಯಿದೆ ರೂಪಿಸಿದ ಉದ್ದೇಶವನ್ನು ಉಲ್ಲೇಖಿಸಲಾಗಿದೆ. ಈ ಉದ್ದೇಶದಲ್ಲಿ ಸಹಕಾರಿ ಸಂಸ್ಥೆಗಳನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸ್ವನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಲಾಗಿದೆ. ಈ ಕಾಯಿದೆಯನ್ನು ರಾಷ್ಟ್ರ ಮಟ್ಟದಲ್ಲಿ ವಿವಿಧ ವೇದಿಕೆಗಳಲ್ಲಿ ಚರ್ಚೆಗಳಾಗಿತ್ತು. ಆ ನಂತರ ಬೆಳವಣಿಗೆಗಳಲ್ಲಿ ರಾಷ್ಟ್ರ ಮಟ್ಟದ ಸಹಕಾರಿ ಸಂಸ್ಥೆಗಳೆಂದು ಮೂಲಭೂತ ಹಕ್ಕೆಂದು ಪರಿಗಣಿಸಿ ರಾಷ್ಟ್ರ ಎಲ್ಲಾ ಸಹಕಾರಿ ಸಂಸ್ಥೆಗಳು ಕೆಲವು ವಿಷಯಗಳ ಬಗ್ಗೆ ಸೌಮ್ಯತೆ ಇರಬೇಕೆಂದು ಸಂವಿಧಾನ 43ಬಿ ಮತ್ತು 243ಝಡ್ಐ ನಿಂದ 243ಝಡ್ಕ್ಯೂ ವರೆವಿಗೆ ಸೇರ್ಪಡೆ ಮಾಡಿ 2012 ರಲ್ಲಿ ಜಾರಿಗೆ ತಂದಿದೆ. ಈ ಸಂವಿಧಾನ ತಿದ್ದುಪಡಿಯ ನಂತರ ರಾಜ್ಯ ಸರ್ಕಾರಗಳಿಗೆ ಒಂದು ವರ್ಷದ ಅವಧಿಯನ್ನು ನೀಡಿ ರಾಜ್ಯ ಕಾಯಿದೆಗೆ ತಿದ್ದುಪಡಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಅದರಂತೆ ಕರ್ನಾಟಕ ರಾಜ್ಯದಲ್ಲಿ 2013 ರಲ್ಲಿ ತಿದ್ದುಪಡಿಗಳನ್ನು ಮಾಡಿ ಸಂವಿಧಾನ ಆಶಯಗಳನ್ನು ಸೇರಿಸಲಾಗಿದೆ. ಈ ಸಂವಿಧಾನ ತಿದ್ದುಪಡಿ ಕಾಯಿದೆಯಲ್ಲಿ ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿನ ಬಹಳಷ್ಟು ಅಂಶಗಳನ್ನು ಸೇರಿಸಿ ಸಂವಿಧಾನ ತಿದ್ದುಪಡಿ ಮಾಡಿರುವುದರಿಂದ, ರಾಜ್ಯ ಸರ್ಕಾರಕ್ಕೆ ಒಂದು ಮಾದರಿ ಕಾಯಿದೆ ಕೊಟ್ಟ ಶ್ರೇಯಸ್ಸು ಲಭಿಸುತ್ತದೆ. ಈ ಸಂವಿಧಾನ ತಿದ್ದುಪಡಿಯಲ್ಲಿ ಪ್ರಮುಖವಾಗಿ ಪ್ರಸ್ತಾಫಿಸಿದ ಅಂಶಗಳು 1)

ಆಡಳಿತ ಮಂಡಳಿಯ ಗರಿಷ್ಠ ಸಂಖ್ಯೆಯನ್ನು 21ಕ್ಕೆ ಸೀಮಿತಗೊಳಿಸಿರುವುದು. 2)ಸ್ವತಂತ್ರ ಚುನಾವಣಾ ಪ್ರಾಧಿಕಾರವನ್ನು ನಿಯಮಿಸಲು ಮತ್ತು ಚುನಾವಣೆ ಮತ್ತು ಪದಾಧಿಕಾರಿಗಳ ಆಯ್ಕೆಯನ್ನು ಚುನಾವಣಾ ಪ್ರಾಧಿಕಾರ/ಆಯೋಗಕ್ಕೆ ನಿಗದಿ ಪಡಿಸಿರುವುದು. 3) ಲೆಕ್ಕತಪಾಸಣೆಯನ್ನು ಸ್ವತಂತ್ರ ಲೆಕ್ಕತಪಾಸಣಾಧಿಕಾರಿಗೆ (ಸರ್ಕಾರದ ಇಲಾಖೆಯ ಅಧಿಕಾರಗಳನ್ನು ಮೊಟಕುಗೊಳಿಸಿ) ನೇಮಕ ಮಾಡಲು ಸನ್ನದ್ದ ಲೆಕ್ಕಿಕರನ್ನು ನೇಮಿಸುವ ಬಗ್ಗೆ. 4)ಆಡಳಿತ ಮಂಡಳಿಯನ್ನು ಅಮಾನತ್ತು ಅಥವಾ ರದ್ದುಪಡಿಸುವಾಗ 6 ತಿಂಗಳ ಅವಧಿಯನ್ನು ನಿಗಧಿ ಪಡಿಸಿರುವುದು ಮತ್ತು ಸರ್ಕಾರದ ಸಹಾಯ ಧನ ಪಡೆಯದ ಸಹಕಾರಿ ಸಂಘಗಳನ್ನು ರದ್ದುಪಡಿಸುವ ಅಥವಾ ಅಮಾನತ್ತಿನಲ್ಲಿಡುವ ಅಧಿಕಾರವನ್ನು ಕಿತ್ತು ಹಾಕಿರುವುದು. 5)ಪ್ರತಿ ಸಹಕಾರಿ ಸಂಘದ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 30ರೊಳಗೆ ನಡೆಸಲೇಬೇಕೆಂದು ಮತ್ತು 6)ನಿಬಂಧಕರಿಗೆ ಸೆಪ್ಟೆಂಬರ್ 30 ರೊಳಗೆ ನಿಗಧಿ ಪಡಿಸಿದ ತಃಖ್ತೆಗಳನ್ನು ಸಲ್ಲಿಸಲೇಬೇಕು ಎಂಬ ಷರತ್ತುಗಳನ್ನು ವಿದಿಸಿದೆ. ಈ ಸಂವಿಧಾನ ತಿದ್ದುಪಡಿಯನ್ನು ಗುಜರಾತ್ ಉಚ್ಚನ್ಯಾಯಾಲಯ ಅಸಿಂಧು ಎಂದು ಘೋಷಿಸಿದ್ದರೂ, ಕರ್ನಾಟಕ ರಾಜ್ಯ ಸರ್ಕಾರ, ಸಂವಿಧಾನ ತಿದ್ದಪಡಿಯನ್ನು ಕಾಯಿದೆಗೆ ಅಳವಡಿಸಿಕೊಂಡಿರುವುದರಿಂದ ಮತ್ತು ರಾಜ್ಯ ಸರ್ಕಾರ ಕಾಯಿದೆ ಮಾಡುವ ಅಧಿಕಾರ ಚಲಾಯಿಸಿ ಮಾಡುವುದರಿಂದ, ಗುಜರಾತ್ ನ್ಯಾಯಾಲಯ ತೀರ್ಪು ನಮ್ಮ ರಾಜ್ಯಕ್ಕೆ ಅನ್ವಯವಾಗಲಾರದು. ಈ ಸಂವಿಧಾನ ತಿದ್ದುಪಡಿಯ ಆಶಯದಂತೆ ಈಗ ಸಹಕಾರಿ ಸಂಸ್ಥೆಗಳನ್ನು ಸ್ವಾಯತ್ತ, ಸ್ವತಂತ್ರ, ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಬಹುದಾಗಿದ್ದರೂ, ರಾಜ್ಯ ಸರ್ಕಾರ ಕೆಲವು ಮಾರ್ಪಾಡುಗಳನ್ನು ಮಾಡಿರುವುದು/ಮಾಡುತ್ತಿರುವುದು ಸೂಕ್ತವೇ ಎಂಬುದನ್ನು ಸಹಕಾರಿಗಳು/ನ್ಯಾಯಾಲಯ ತೀರ್ಮಾನಿಸಬೇಕು.

**ಟಿಪ್ಪಣಿ : ದಯವಿಟ್ಟು ಮಾನ್ಯ ಸರ್ವೋಚ್ಛ ನ್ಯಾಯಾಲಯ ತೀರ್ಪು ಸಿವಿಲ್ ಅಪೀಲು ನಂ : 9108–9109 2014 ದಿನಾಂಕ ಜುಲೈ 20,02021.**

**ಗಮನಿಸಿ : 97ನೇ ಸಂವಿಧಾನ ತಿದ್ದುಪಡಿ IX B ರಾಜ್ಯಗಳಿಗೆ ಇದರ ಅನ್ವಯಿಕೆಯನ್ನು ರದ್ದುಪಡಿಸಿದೆ.**

ಸಹಕಾರಿ ಆಂದೋಲನಕ್ಕೆ ಕಾಯಿದೆ ರೂಪ ಪಡೆದದ್ದು 1904ರಲ್ಲಿ. ಪ್ರಾರಂಭದಲ್ಲಿ ಸಹಕಾರ ಆಂದೋಲನ ಸರ್ಕಾರ/ನಿಬಂಧಕರ ನಿಯಂತ್ರಣವೇನೂ ಇರಲಿಲ್ಲ. ಆದರೆ ಸಂಸ್ಥೆಯನ್ನು ನೋಂದಾಯಿಸಿ, ಅಂತಹ ಸಂಸ್ಥೆಗಳಿಗೆ ಮಾರ್ಗದರ್ಶಕ, ದಾರ್ಶನಿಕ ಮತ್ತು ಸ್ನೇಹಿತನಂತೆ ಸಲಹೆ ಸೂಚನೆಗಳನ್ನು ನೀಡುವ ಪ್ರವೃತ್ತಿ ಇತ್ತು. ಸಂಸ್ಥೆ ರೂಪ ಪಡೆದ ನಂತರ, ಆಡಳಿತ ನಿರ್ವಹಣೆ, ಹಣಕಾಸು, ಕಾನೂನಿನ ತೊಡಕುಗಳು ಬರಲಾರಂಬಿಸಿದ ನಂತರ, ನಿಬಂಧಕರ ಪ್ರತ್ಯಕ್ಷ/ಪರೋಕ್ಷ ನಿಯಂತ್ರಣ ಪ್ರಾರಂಭವಾಯಿತು. ಸರ್ಕಾರ ಮಟ್ಟದಲ್ಲಿ ಸಹಕಾರ ಸಂಸ್ಥೆಗಳನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಮಧ್ಯ ಸಹಕಾರ ಸಂಸ್ಥೆಗಳು ತೃತೀಯ ಸಾಧನವೆಂದು ರೂಪಿಸಲು ಮತ್ತು ಅದಕ್ಕೆ ಪೂರಕವಾಗಿ ಪ್ರತ್ಯಕ್ಷ/ಪರೋಕ್ಷ ಸಹಕಾರಿಯಾಗಲು ಕಾಯಿದೆಯಲ್ಲಿ ಒಂದು ಅಧ್ಯಾಯವನ್ನು ಸೃಷ್ಟಿಸಿತು (ಅಧ್ಯಾಯ **VI**). ಸರ್ಕಾರದಿಂದ ಪಾಲು ಬಂಡವಾಳ ಮತ್ತು ಸಾಲ, ಸಹಾಯ ಧನ, ನೀಡಲು ಪ್ರಾರಂಭಿಸಿ, ಅದರ ಜೊತೆಗೆ ನಿಯಂತ್ರಣ ಮಾಡುವ ಪ್ರವೃತ್ತಿ ಪ್ರಾರಂಭವಾಯಿತು. ಈ ನಿಯಂತ್ರಣ ಎಷ್ಟು ಪ್ರಮಾಣದಲ್ಲಿ ಹೆಚ್ಚಾಯಿತೆಂದರೆ, ಈ ಸಹಕಾರ ಸಂಸ್ಥೆಗಳು ಸರ್ಕಾರದ ಅಂಗ ಸಂಸ್ಥೆಗಳಂತೆ ಕೆಲಸ ನಿರ್ವಹಿಸಲು ಪ್ರಾರಂಭಿಸಿದವು. 1959ರ ಕ್ರೋಢೀಕೃತ ಕಾಯಿದೆಗೆ, 1976 ಮತ್ತು 1984 ರಲ್ಲಿ ಸಮಗ್ರ ತಿದ್ದುಪಡಿ ತಂದು, ಪೂರ್ಣ ಪ್ರಮಾಣದ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದ ನಂತರ, ಸಹಕಾರಿ ಮುಖಂಡರು ವಿವಿಧ ವೇದಿಕೆಗಳಲ್ಲಿ ನಿಬಂಧಕರ/ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಲು ಒತ್ತಡ ತಂದರು.ಇದಕ್ಕೆ ಪೂರಕವಾಗಿ, ಕೇಂದ್ರ ಸರ್ಕಾರ ಯೋಜನ ಆಯೋಗವನ್ನು ಪರಿಶೀಲಿಸಲು ಸೂಚಿಸಿದ ನಂತರ, ಶ್ರೀ ಚೌದರಿ ಬ್ರಹ್ಮಪ್ರಕಾಶ್ ಸಮಿತಿ ಮೂಲಕ ಒಂದು ಮಾದರಿ ಸಹಕಾರ ಕಾಯಿದೆ ರೂಪಿಸಿ, ರಾಜ್ಯಗಳಿಗೆ ರವಾನಿಸಿ, ಅಳವಡಿಸಿಕೊಳ್ಳಲು ಸೂಚಿಸಿತು. ಈ ಸೂಚನೆಯನ್ನು ಹಲವು ರಾಜ್ಯಗಳು ಕಾರ್ಯರೂಪಕ್ಕೆ ತಂದರೂ, ಪ್ರತ್ಯೇಕ ಕಾಯಿದೆಯನ್ನು ರೂಪಿಸಿದ ರಾಜ್ಯಗಳು ಕಡಿಮೆ. ಎಲ್ಲಾ ರಾಜ್ಯಗಳೂ ಪ್ರತ್ಯೇಕ ಕಾಯಿದೆ ರೂಪಿಸಲಿಲ್ಲ.

ಕರ್ನಾಟಕ ರಾಜ್ಯ ಈ ಮಾದರಿ ಕಾಯಿದೆಯನ್ನು ಅಳವಡಿಸಿಕೊಳ್ಳಲು ಚಿಂತನೆ ಪ್ರಾರಂಭಿಸಿದಾಗ, ಸಹಕಾರ ಸಂಘಗಳ ಕಾಯಿದೆ ಮಾರ್ಪಡಿಸುವಾಗ ಅನುಸರಿಸಬೇಕಾದ ನೀತಿ ರೂಪಿಸಲು, ಮತ್ತು ಉದಾರೀಕರಣ ನೀತಿ ಅಳವಡಿಸಿಕೊಳ್ಳಲು, ರಾಜ್ಯ ಸರ್ಕಾರ ಒಂದು ಸಹಕಾರ ನೀತಿ ರೂಪಿಸಲು ತೀರ್ಮಾನಿಸಿತು. ಶ್ರೀ ಸಿ.ಎನ್. ಪರಶಿವಮೂರ್ತಿ, ಅಪರ ನಿಬಂಧಕರ, ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ, ಅದರ ಸದಸ್ಯರಾಗಿ ಆಗಿನ ಆಡಳಿತ ವಿಭಾಗದ ಅಪರ ನಿಬಂಧಕರಾಗಿದ್ದ ಶ್ರೀ ಎ.ಎಸ್. ಶ್ರೀಕಾಂತ್, ಐಎಎಸ್, ಮತ್ತು ಅಪರ ನಿಬಂಧಕರಾದ ಶ್ರೀ ಎನ್. ಆರ್. ರಂಗಯ್ಯ ಅವರನ್ನು ನೇಮಿಸಿತು. ಈ ಸಮಿತಿ ಒಂದು ಸಹಕಾರ ನೀತಿಯನ್ನು ರೂಪಿಸಿ ಒಂದು ವರದಿಯನ್ನು ನಿಬಂಧಕರ ಮೂಲಕ ರಾಜ್ಯ ಸರ್ಕಾರಕ್ಕೆ ರವಾನಿಸಿತು.

ಈ ವರದಿಯನ್ನು ರಾಜ್ಯ ಸಂಪುಟದಲ್ಲಿ ಮಂಡಿಸಲಾಯಿತು ಮತ್ತು ಅದನ್ನು ಅಂಗೀಕರಿಸಿದ ನಂತರ ಗೆಜೇಟ್ ಪ್ರಕಟಣೆಯನ್ನು ಪ್ರತ್ಯೇಕ ಅಧ್ಯಾಯದಲ್ಲಿ ಸೇರಿಸಲಾಗಿದೆ.

# ಅಧ್ಯಾಯ – 2

# ಮುನ್ನೋಟ

ಇತ್ತೀಚಿನ ದಿನಗಳಲ್ಲಿ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯ ತೀರ್ಪಿನ ಪೂರ್ಣ ಪಾಠವನ್ನು ಪುಸ್ತಕ ರೂಪದಲ್ಲಿ ಉಪಯೋಗಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ತಮ್ಮ ಗಣಕಯಂತ್ರ, ಸೆಲ್‌ಫೋನ್‌ನಲ್ಲಿಯೇ ನೋಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಆದರೆ ನ್ಯಾಯಾ ಪೀಠದ ಆದೇಶವನ್ನು ಪುಸ್ತಕ ರೂಪದಲ್ಲಿ ಓದುವಾಗಿನ ಗಾಂಭೀರ್ಯತೆ, ಯಂತ್ರಗಳ ಮುಖಾಂತರದಲ್ಲಿ ಸಿಗುವುದಿಲ್ಲ. ಆ ಉದ್ದೇಶದಿಂದ ಯುವ ಪೀಳಿಗೆಯ ವಕೀಲರು, ಯಂತ್ರಗಳ ತೀರ್ಪುಗಳನ್ನು ನೋಡುವ ಬದಲು ಪುಸ್ತಕ ರೂಪದಲ್ಲಿ ಪೂರ್ಣ ತೀರ್ಪನ್ನು ಓದಿದಾಗ ಮಾತ್ರ ಅದರ ಗಾಂಭಿರ್ಯತೆ ಅರ್ಥ ಮಾಡಿಕೊಳ್ಳಬಹುದು. ಆದರಲ್ಲಿ ನಾನು ತೀರ್ಪುಗಳ ಸಾರಾಂಶಗಳನ್ನು ನೀಡಲು ಪ್ರಯತ್ನಿಸಿ, ತುರ್ತಾಗಿ ತೀರ್ಮಾನದ ಪ್ರಮುಖ ಅಂಶ ತಿಳಿಯಲಿ ಎಂಬ ಉದ್ದೇಶದಿಂದ ಈ ತೀರ್ಪುಗಳ ಸಾರಾಂಶಗಳನ್ನು ವರ್ಗೀಕರಿಸಲಾಗಿರುವುದರಿಂದ, ಸೇವಾ ನಿಯಮ, ಹಣ ದುರುಪಯೋಗ, ಚುನಾವಣೆ, ವಿವಾದ, ವಿಚಾರಣೆಗಳನ್ನು ತುರ್ತಾಗಿ ಗುರುತಿಸಲು ಅನುಕೂಲ ವಾಗಲೆಂದು ವರ್ಗೀಕರಿಸಿದ್ದರೆ. ಇದರ ಉಪಯೋಗವನ್ನು ಇಲಾಖಾಧಿಕಾರಿಗಳು ಮತ್ತು ವಕೀಲರುಗಳಿಗೆ ಅನುಕೂಲವಾಗಲೆಂದು.

**ಪ್ರಾರಂಭ :**

97ನೇ ಸಂವಿಧಾನ ತಿದ್ದುಪಡಿ ನಂತರ ರಾಷ್ಟ್ರದಲ್ಲಿ ಏಕ ರೀತಿ ಸಹಕಾರ ಕಾಯಿದೆ ರೂಪಿಸಲು ಅವಕಾಶ ಕಲ್ಪಿಸಿದೆ. ಈ ತಿದ್ದುಪಡಿ ನಂತರ ಎರಡು ಕಾಯಿದೆಗಳ ಅವಶ್ಯಕತೆ ಬಗ್ಗೆ ಚರ್ಚೆ ನಡೆಯುತ್ತಿದೆ. ಅಂದರೆ ಸೌಹಾರ್ದ ಕಾಯಿದೆಯ ಅವಶ್ಯಕತೆ ಬಗ್ಗೆ ಶಂಕೆ ವ್ಯಕ್ತ ಪಡಿಸುವ ಪ್ರಯತ್ನ ನಡೆದಿದೆ. ಆದರೆ ಸಂವಿಧಾನದಲ್ಲಿ ಕೆಲವು ವಿಷಯಗಳ ಬಗ್ಗೆ ಮಾತ್ರ ಅವಕಾಶ ಸೇರಿಸಿದ್ದು ಉಳಿದಂತೆ ಎರಡೂ ಕಾಯಿದೆಯಲ್ಲಿ ಸಾಕಷ್ಟು ವಿಭಿನ್ನತೆ ಇದೆ. ಅಂದರೆ

1) ಸಂಯುಕ್ತ ಸಹಕಾರಿ ಎಂದು ಶಾಸನಾತ್ಮಕ ಸಂಸ್ಥೆಯನ್ನು ಸೃಷ್ಟಿಸಿ, ಅದಕ್ಕೆ ನಿಬಂಧಕರ ಅಧಿಕಾರವನ್ನು ನೀಡಿರುವುದು.

2) ಪ್ರತಿಯೊಂದು ನೋಂದಾಯಿತ ಸಹಕಾರಿ ಸಂಯುಕ್ತ ಸಹಕಾರಿಯ ಸದಸ್ಯತ್ವ ಪಡೆಯುವ ಅಧಿಕಾರ.

3) ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಧನ ಪಡೆಯಲು ಇರುವ ನಿರ್ಬಂಧ.

4) ಸದಸ್ಯ ಸಹಕಾರಿಗಳ ಮೇಲೆ ಆಡಳಿತಾತ್ಮಕ ಮಾರ್ಗದರ್ಶನ ನೀಡುವ ಅಧಿಕಾರ.

5) ಮಾದರಿ ಉಪನಿಯಮಗಳನ್ನು ಶಾಸನಾತ್ಮಕವಾಗಿ ತಯಾರಿಸಿ ಅಳವಡಿಸಿಕೊಳ್ಳಲು ನಿರ್ದೇಶನ ನೀಡುವ ಅಧಿಕಾರ.

6) ಸಂಯುಕ್ತ ಸಹಕಾರಿಗೆ ಸದಸ್ಯ ಸಹಕಾರಿ ಆರ್ಥಿಕ ತಃಖ್ತೆ ರವಾನಿಸಬೇಕೆಂಬ ಅವಕಾಶ. ಇತ್ಯಾದಿ,

ಈ ಮೇಲ್ಕಂಡ ಅವಕಾಶಗಳು 1959ರ ಕಾಯಿದೆಯಲ್ಲಿ ಯಾವುದೇ ಒಂದು ಚುನಾಯಿತ ಮಂಡಳಿಗೆ ನೀಡಲು ಅವಕಾಶ ಇಲ್ಲದೇ ಇರುವುದರಿಂದ. ಇದು ಪ್ರತ್ಯೇಕವಾಗಿ ಉಳಿಯಬೇಕು. ಅದಕ್ಕಾಗಿ ಸಂವಿಧಾನದ 97ನೇ ತಿದ್ದುಪಡಿಯಲ್ಲಿ, ಪ್ರಸ್ತಾಪಿಸಿರುವುದು, ಮಂಡಳಿ ರಚನೆ, ಸಾಮಾನ್ಯ ಸಭೆ, ಲೆಕ್ಕತಪಾಸಣೆ, ಮಂಡಳಿ ರದ್ದಾತಿ/ಅಮಾನತ್ತು, ಅಪರಾಧ ಮತ್ತು ದಂಡಗಳ ಹೊರತಾಗಿ ಬೇರೆ ಅವಕಾಶಗಳನ್ನು ನಿಯಂತ್ರಿಸುವ ಅವಕಾಶ ಕಲ್ಪಿಸಿಲ್ಲವಾದ್ದರಿಂದ, ಸೌಹಾರ್ದ ಕಾಯಿದೆ ಒಂದು ರಾಷ್ಟ್ರ ಮಟ್ಟದ ಮಾದರಿ ಕಾಯಿದೆಯಾಗಿ ಉಳಿಯಬೇಕಾದರೆ, ಸಂಯುಕ್ತ ಸಹಕಾರಿ ತನ್ನ ಕೆಲಸ ಕಾರ್ಯಗಳಲ್ಲಿ ಸಮರ್ಪಕ ನಿರ್ವಹಣೆ ಮೂಲಕ ತೋರಿಸಿಕೊಡಬೇಕು.

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರಡಿ ರಚನೆಯಾದ, ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 20ರಲ್ಲಿ ಸಹಕಾರ ಶಿಕ್ಷಣದ ಬಗ್ಗೆ ಪ್ರಸ್ತಾಪಿಸುತ್ತಿದೆ. ಅವರಲ್ಲಿ ಪ್ರಮುಖವಾಗಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಸಾಮರ್ಥ್ಯ ಅಭಿವೃದ್ಧಿ ಮತ್ತು ವ್ಯವಹಾರ ನಿರ್ವಹಣೆ, ವೃತ್ತಿ ನೈಪುಣ್ಯತೆ, ಸಹಕಾರ ತತ್ವಗಳ ಪ್ರಸಾರ ಮತ್ತು ಪ್ರಚಾರ, ಸಹಕಾರಿ ಆಂದೋಲನಕ್ಕೆ ಸಂಬಂಧಿಸಿದ ಪುಸ್ತಕಗಳು ಮತ್ತು ಪತ್ರಿಕೆಗಳ ಪ್ರಕಟಣೆ, ಸಂಶೋದನೆಗೆ ಶಿಕ್ಷಣ ನಿಧಿಯನ್ನು ಉಪಯೋಗಿಸಲು ಅವಕಾಶ ಕಲ್ಪಿಸಿದೆ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರಡಿ ರಚನೆಯಾದ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳ 2004ರ ನಿಯಮ 10ಬಿ ಅಡಿ ಶಿಕ್ಷಣ ನಿಧಿ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಿದ್ದು, ಅದರಲ್ಲಿ ಪ್ರಮುಖವಾದ ಅಂಶಗಳೆಂದರೆ, ಮಾನವ ಸಂಪನ್ಮೂಲ ಅಭಿವೃದ್ಧಿ, ವೃತ್ತಿ ನೈಪುಣ್ಯತೆ, ಸಂಶೋದನೆ ಸಹಕಾರಿ ಪ್ರಚಾರ ಮತ್ತು ಪ್ರಸಿದ್ಧಿ, ಸಹಕಾರಿ ಚಳುವಳಿಗೆ ಸಂಬಂಧಪಟ್ಟ ಪುಸ್ತಕ ಮತ್ತು ನಿಯಕ ಕಲಿಕೆಗಳ ಪ್ರಕಟಣೆ, ಸಂಶೋದನೆಗೆ ಆದ್ಯತೆ ನೀಡಿ ಅವಕಾಶ ಕಲ್ಪಿಸಿದೆ.

ಈ ಮೇಲ್ಕಂಡ ಉದ್ದೇಶಗಳನ್ನು ಪೂರೈಸಲು 1959ರ ಕಾಯಿದೆಯ ಕಲಂ.57(2ಎ) ನಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ. "ಸಹಕಾರ ಸಂಘವು ಅದರ ಒಟ್ಟು ಲಾಭದ ಬಾಕಿ ಮೊತ್ತದ ಪೈಕಿಯಿಂದ ಶೇಕಡ ಎರಡರಷ್ಟನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಇದರ ಆಡಳಿತದಲ್ಲಿರುವ ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ನೀಡತಕ್ಕದ್ದು." ಮತ್ತು

ಕಲಂ.57(2ಎ)ರ ಪರಂತುಕದಲ್ಲಿ "ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ನಿವ್ವಳ ಲಾಭದಲ್ಲಿ ಉಪಪ್ರಕರಣ (2ಎ) ರಲ್ಲಿ ನಿಗದಿ ಪಡಿಸಿರುವ ಶೇಕಡಾ ಎರಡರಷ್ಟು ಶಿಕ್ಷಣ ನಿಧಿಯ ಜೊತೆಗೆ ಶೇಕಡಾ ಒಂದರಷ್ಟನ್ನು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಕ್ಕೆ ವಂತಿಗೆ ನೀಡತಕ್ಕದ್ದು."

ಕಲಂ.57(2ಬಿ) "ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ನೀಡಲು ವಿಫಲವಾದ ಯಾವುದೇ ಸಹಕಾರ ಸಂಘವು ಅದರ ಸದಸ್ಯರಿಗೆ ಲಾಭಾಂಶವನ್ನು ಸಂದಾಯ ಮಾಡತಕ್ಕದ್ದಲ್ಲ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಕಲಂ.10(2)(ಬಿ) ನಲ್ಲಿ "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಶಿಕ್ಷಣ ನಿಧಿಗೆ ಶೇಕಡ ಎರಡು ಪರಂತು, ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ಕೊಡಲು ವಿಫಲವಾದ ಯಾವೊಂದು ಸಹಕಾರಿಯೂ ತನ್ನ ಸದಸ್ಯರುಗಳಿಗೆ ಲಾಭಾಂಶವನ್ನು ಸಂದಾಯ ಮಾಡತಕ್ಕದ್ದಲ್ಲ.

ಈ ಶಿಕ್ಷಣ ನಿಧಿ ಹಣವನ್ನು ಉಪಯೋಗಿಸಲು ನಿಯಮದಲ್ಲಿ ಸಲಹಾ ಸಮಿತಿಗಳನ್ನು ರಚಿಸಲು ಸೂಚಿಸಿದೆ. 1959ರ ಕಾಯಿದೆಯಲ್ಲಿ ಏಳು ಸದಸ್ಯರ ಸಮಿತಿ ರಚಿಸಿದೆ. ಅದರಲ್ಲಿ 6 ಸದಸ್ಯರು ಮಂಡಳಿ ಸದಸ್ಯರಿದ್ದ ಪ್ರಾದೇಶಿಕ ಸಹಕಾರ ನಿರ್ವಹಣ ಸಂಸ್ಥೆಯ ನಿರ್ದೇಶಕರನ್ನು ಹೊರತು ಪಡಿಸಿ, ಶಿಕ್ಷಣ ತಜ್ಞರೇ ಇಲ್ಲ. ನಿಯಮದಲ್ಲಿ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳಕ್ಕೆ ಒಂದು ಪ್ರತ್ಯೇಕ ಸಲಹಾ ಸಮಿತಿ ರಚಿಸಲು ಅವಕಾಶ ಇಲ್ಲದೇ ಇದ್ದರೂ, ಆ ಮಹಾಮಂಡಳ ಒಂದು ಸಲಹಾ ಸಮಿತಿ ರಚಿಸಿ, ಅದರಲ್ಲಿಯೂ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರತಿನಿಧಿ ಹೊರತು ಪಡಿಸಿ ಶಿಕ್ಷಣ ತಜ್ಞರ ಇಲ್ಲ ಮತ್ತು ಇದರಲ್ಲಿ ಮತ್ತೊಂದು ವಿಶೇಷವೆಂದರೆ, ಪಟ್ಟಣ ಸಹಕಾರ ಮಹಾಮಂಡಳದ ಮಂಡಳಿಯಲ್ಲಿ ಸ್ಪರ್ಧಿಸಿ, ನಾಮಪತ್ರ ವಾಪಸ್ ಪಡೆದವರು ಅಥವಾ ಹೊಂದಾಣಿಕೆ ರೂಪದಲ್ಲಿ ಸ್ಥಾನ ಪಡೆದವರು ಸಲಹಾ ಸಮಿತಿ ಸದಸ್ಯರಿದ್ದಾರೆ.

ಕರ್ನಾಟಕ ಸೌಹಾರ್ದ ಕಾಯಿದೆ ನಿಯಮ 10ಬಿ ಅಡಿ ಐದು ಸದಸ್ಯರ ಸಲಹಾ ಸಮಿತಿ ರಚನೆಯಾಗಿದ್ದ ಅದರಲ್ಲಿ ಮಹಾಮಂಡಳದ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಬಾಹ್ಯ ತಜ್ಞರು ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ ನಿರ್ದೇಶಕರಿಗೆ ಅವಕಾಶ ಕಲ್ಪಿಸಿದೆ. ಈ ಮೂರು ಸಲಹಾ ಸಮಿತಿಗಳ ಕೆಲಸ ನಿರ್ವಹಣೆ ಬಗ್ಗೆ ನಿಬಂಧಕರ/ಸರ್ಕಾರ, ಈ ಸಮಿತಿಗಳ ಕಾರ್ಯನಿರ್ವಹಣೆ ಬಗ್ಗೆ ಯಾವುದೇ ಸಮಯದಲ್ಲಿ ತುಲನಾತ್ಮಕ ವಿಮರ್ಷೆ ಮಾಡಿಲ್ಲ. ರಾಜ್ಯ ಸಹಕಾರ ಮಹಾಮಂಡಳಕ್ಕೆ ಸುಮಾರು 30 ಕೋಟಿ, ಪಟ್ಟಣ ಸಹಕಾರ ಮಹಾಮಂಡಳ ಸುಮಾರು ಶೇ.2 ಕೋಟಿ ಮತ್ತು ಸೌಹಾರ್ದ ಸಹಕಾರಿಗೆ ಸುಮಾರು ರೂ.15 ಕೋಟಿ ಸಂಗ್ರಹವಾಗುತ್ತಿದ್ದು, ಈ ಹಣವನ್ನು ಯಾವ ಉದ್ದೇಶಕ್ಕೆ ಬಳಸಬೇಕೋ ಅದರಂತೆ ಬಳಸಲಾಗುತ್ತಿದೆಯೇ ಎಂಬುದನ್ನು ಸರ್ಕಾರ/ನಿಬಂಧಕರು ಪರಿಶೀಲಿಸಬೇಕು. ಏಕೆಂದರೆ, ಈ ಹಣ ಸಹಕಾರ ಸಂಸ್ಥೆಗಳ ಶಾಸನಾತ್ಮಕ ವಂತಿಗೆ, ಮತ್ತು ಇದನ್ನು ಸಹಕಾರ ಆದೋಲನದ ಬೆಳವಣಿಗೆಗೆ ಮಾತ್ರ ಉಪಯೋಗಿಸಬೇಕು. ಈ ಸಲಹಾ ಸಮಿತಿ ಸಭೆಗಳ ಬಗ್ಗೆ ವಿಮರ್ಷಿಸುವಾಗ ನಿಯಮದಲ್ಲಿ ನಿರೂಪಿಸಿರುವ ಉದ್ದೇಶವನ್ನು ತನ್ನ ತ್ರೈಮಾಸಿಕ ಸಭೆಗಳಲ್ಲಿ ವಿಷಯವಾರು ವಿಮರ್ಷೆ ಮಾಡಿ, ಶಿಕ್ಷಣದ ವಿಷಯಗಳು, ಅವಧಿ, ಯಾರಿಗೆ, ವಿಷಯ ತಜ್ಞರು, ತರಬೇತಿಯಿಂದ ಆದ ಅನುಕೂಲತೆಯನ್ನು ವಿಮರ್ಷೆ ಮಾಡುತ್ತಿರುವುದು ಸೌಹಾರ್ದ ಕಾಯಿದೆಯಲ್ಲಿ ರಚನೆಯಾದ ಸಲಹಾ ಸಮಿತಿ ಮಾತ್ರ. ಏಕೆಂದರೆ, ಈ ಸಂಸ್ಥೆ ಒಂದು ಶಾಸನಾತ್ಮಕ ಸಂಸ್ಥೆಯಾಗಿದ್ದು, ಇದರ ಮೂಲ ಉದ್ದೇಶಕ್ಕೆ

ಪೂರಕವಾಗಿ ವಿಷಯಗಳ ಆಯ್ಕೆ, ಸದಸ್ಯ ಸಹಕಾರಿಗಳ ಅವಶ್ಯಕತೆ, ಇವುಗಳನ್ನು ಅರ್ಥೈಸಿಕೊಂಡ ತರಬೇತಿ ವ್ಯವಸ್ಥೆ ಮಾಡುತ್ತಿದೆ. ಉಳಿದ ಎರಡು ಮಹಾಮಂಡಳಗಳ ಸಲಹಾ ಸಮಿತಿ ಸಭೆಗಳು ಮತ್ತು ಅವರು ಶಿಕ್ಷಣ ನಿಧಿ ಉಪಯೋಗಿಸುತ್ತಿರುವ ಬಗ್ಗೆ ನಿಬಂಧಕರು/ಸರ್ಕಾರ ಪರಿಶೀಲಿಸದೇ ಇದ್ದರೆ, ಈ ಸಹಕಾರ ಸಂಘಗಳ ಹಣ, ಸದುಪಯೋಗವಾಗುವ ಸಂಬಂಧ ವಿಮರ್ಷೆ ನಡೆದಿಲ್ಲ.

ಈ ಮುನ್ನೋಟ ಬರೆದ ಉದ್ದೇಶವೆಂದರೆ, ಸಹಕಾರ ಶಿಕ್ಷಣ ನಿಧಿಯನ್ನು ಸಹಕಾರಿ ಸಂಘಗಳು/ಸದಸ್ಯಸಹಕಾರಿಗಳು ನೀಡಿದ ತನ್ನ ಸದಸ್ಯರು, ಆ ಸಂಸ್ಥೆ ಜೊತೆ ಮಾಡಿದ ವ್ಯವಹಾರಿ ಲಾಭದಿಂದ. ಅಂದರೆ ಆ ಶಿಕ್ಷಣ ನಿಧಿ, ಅಂತಹ ಸಂಘಗಳು/ಸಹಕಾರಿ ಸಂಸ್ಥೆಗಳ, ಆಡಳಿತ, ವ್ಯವಸ್ಥಾಪನೆ ಹಣಕಾಸು, ಲೆಕ್ಕಪತ್ರಗಳ, ಕಾನೂನಿನಲ್ಲಿ ನೀಡಿದ ಶಾಸನಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಲು ತಿಳುವಳಿಕೆ ಮತ್ತು ತರಬೇತಿ ನೀಡಲು ಉಪಯೋಗವಾಗಬೇಕು. ಇಲ್ಲವಾದರೆ ಈ ಮಹಾಮಂಡಳಗಳ ಯಾರದೋ ಹಣವೆಂದು, ತಮ್ಮ ಅಭಿವೃದ್ಧಿಗೆ ಉಪಯೋಗಿಸುವುದನ್ನು ತಪ್ಪಿಸುವ ಜವಾಬ್ದಾರಿ ನಿಬಂಧಕರ/ಸರ್ಕಾರಕ್ಕೆ ಇದೆ ಮತ್ತು ಇದು ಅದರ ಜವಾಬ್ದಾರಿ ಕೂಡ.

ಈ ಮುನ್ನೋಟದ ಪ್ರಮುಖ ಉದ್ದೇಶ ಸಹಕಾರ ಕಾನೂನು ಜಾರಿ ಮಾಡುವಾಗ ಕಾರ್ಯಾಂಗ ಹಲವಾರು ತೀರ್ಮಾನಗಳ ಮೇಲೆ ವಿವಾದಗಳು ಏರ್ಪಡುವಾಗ, ಅವುಗಳ ತೊಂದರೆಗೊಳಗಾದವರು ನ್ಯಾಯಾಲಯದಲ್ಲಿ ಪರಿಹಾರ ಪಡೆದಾಗ, ಅವುಗಳ ಮಾರ್ಗದರ್ಶಿ ಸೂತ್ರಗಳಂತೆ ಪಾಲಿಸಲು, ಸಹಕಾರ ಸಂಸ್ಥೆಗಳಿಗೆ ಅನುಕೂಲವಾಗಲು, ಈ ಪುಸ್ತಕದಲ್ಲಿ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯ ತೀರ್ಪುಗಳ ಸಂಕ್ಷಿಪ್ತ ವಿವರಣೆ ನೀಡಲು ಪ್ರಯತ್ನ ಮಾಡಲಾಗಿದೆ. ಈ ಕೆಲಸವನ್ನು ಮೂರು ಮಹಾಮಂಡಳಗಳು ನಿರ್ವಹಿಸುವ ಜವಾಬ್ದಾರಿ ಇದೆ. ಆದರೆ ಇಂತಹ ಪ್ರಯತ್ನಗಳಲ್ಲಿ ಮುಂಚೂಣಿಯಲ್ಲಿರುವುದು ಸೌಹಾರ್ದ ಕಾಯಿದೆಯ ಸಂಯುಕ್ತ ಸಹಕಾರಿ ಮಾತ್ರ. ಏಕೆಂದರೆ, ಈ ಸಂಸ್ಥೆ ಕಾಯಿದೆಯಲ್ಲಿಯೇ ಸೃಷ್ಟಿಯಾದ ಸಂಸ್ಥೆಯಾಗಿದ್ದು ಇದರ ಕಾರ್ಯನಿರ್ವಹಣೆಯಲ್ಲಿ, ಸ್ವತಂತ್ರ ತೀರ್ಮಾನ ಮಾಡಲು ಅವಕಾಶ ಇದೆ. ಅದರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ರಚನೆ 1997ರಲ್ಲಿ ರಚನೆಯಾಗಿದ್ದು, ಈ ಕಾಯಿದೆಯಲ್ಲಿ ರಚನಾಕಾರರು ಈ ಕೆಳಕಂಡಂತೆ ಉಲ್ಲೇಖಿಸಿದ್ದಾರೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ" ಎಂದು ಗುರುತಿಸಿ ಕಾಯಿದೆ ರೂಪಿಸಿದೆ.

97ನೇ ಸಂವಿಧಾನ ತಿದ್ದುಪಡಿಯಲ್ಲಿ ಈ ಮೇಲ್ಕಂಡ ನೀತಿಗೆ ಪೂರಕವಾಗಿ ಮತ್ತು 1991ರ ಉದಾರೀಕರಣದ ಕರಡು ಸಹಕಾರಿ ಮಾದರಿ ಕಾಯಿದೆಗೆ ಪೂರಕವಾಗಿ, ಸಹಕಾರ ಸಂಘಗಳು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಿ. ಸಂವಿದಾನದಲ್ಲಿ ಸಹಕಾರ ವಿಷಯವನ್ನು ಸೇರಿಸಿ, ರಾಷ್ಟ್ರದಲ್ಲಿ ಏಕ ರೀತಿ ಸಹಕಾರ ಕಾಯಿದೆ ರಚನೆ ಮಾಡಲು ಕ್ರಮ ಜರುಗಿಸಿದೆ. ಅಂದರೆ ಕರ್ನಾಟಕ ಸರ್ಕಾರ ರೂಪಿಸಿದ ಸೌಹಾರ್ದ ಕಾಯಿದೆ ರಾಷ್ಟ್ರಕ್ಕೆ ಒಂದು ಮಾದರಿ ಕಾಯಿದೆ ನೀಡಿದೆ. ಈಗಾಗಲೇ 20 ವರ್ಷಗಳು ಸಂದಿರುವುದರಿಂದ, ಈ ಹೊಸ ಕಾಯಿದೆಯಿಂದ ಆದ ಪರಿಣಾಮಗಳ ಬಗೆ, ಸಂಶೋದನೆ ಮತ್ತು ವಿಮರ್ಷೆ ಮಾಡುವ ಅವಶ್ಯಕತೆ ಇದೆ. ಇದನ್ನು ಸರ್ಕಾರ ತುರ್ತಾಗಿ ಮಾಡಬೇಕಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸುತ್ತಾ ಸಹಕಾರ ಶಿಕ್ಷಣದ ಬಗ್ಗೆ ಸಂಯುಕ್ತ ಸಹಕಾರಿ ನೀಡುತ್ತಿರುವ ಪ್ರಾಮುಖ್ಯತೆ ಬಗ್ಗೆ ಹೆಚ್ಚಿನ ವಿಮರ್ಷೆ ಅವಶ್ಯಕ ಮತ್ತು ಇದೇ ಮಾದರಿಯಲ್ಲಿ 1959ರ ಕಾಯಿದೆಯಲ್ಲಿಯೇ ಶಿಕ್ಷಣ ಸಲಹಾ ಸಮಿತಿಗಳು ಕಾರ್ಯನಿರ್ವಹಿಸಿದರೆ ಸಹಕಾರ ಆದೋಲನದ ಬೆಳವಣಿಗೆಗೆ ಶಿಕ್ಷಣ ನಿಧಿ ಹಣ ಉಪಯೋಗಿಸದಂತಾಗುತ್ತದೆ. ಶಿಕ್ಷಣ ನಿಧಿಯನ್ನು ಆಂದೋಲನಕ್ಕಲ್ಲದೆ ಬೇರೆ ಉದ್ದೇಶಕ್ಕೆ ಉಪಯೋಗಿಸದಂತೆ ಸರ್ಕಾರ ಕ್ರಮ ಜರುಗಿಸುವುದು ಅವಶ್ಯಕ, ಏಕೆಂದರೆ ಈ ಮೂರೂ ಮಹಾಮಂಡಳಗಳ ಶಿಕ್ಷಣ ನಿಧಿ ಸಂಗ್ರಹಣ ಜೊತೆಗೆ ವಾರ್ಷಿಕ ವಂತಿಗೆಯನ್ನು ಸದಸ್ಯ ಸಹಕಾರಿಗಳಿಂದ ಪಡೆಯುತ್ತಿವೆ.

# ಅಧ್ಯಾಯ – 3

# ಕರ್ನಾಟಕ ರಾಜ್ಯದ ಸಹಕಾರ ನೀತಿ

ಕರ್ನಾಟಕ ಸರ್ಕಾರವು ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ಒಂದು ಸಹಕಾರ ನೀತಿಯನ್ನು ರೂಪಿಸಿ, ಆ ನೀತಿಯನ್ನು ಸರ್ಕಾರಿ ಆದೇಶ ಸಂಖ್ಯೆ:ಸಿಎಂಡಬ್ಲ್ಯೂ/ 43/ಸಿಎಲ್ಎಂ/1997 ದಿನಾಂಕ: 30–6–1999 ರಂದು ಜಾರಿಗೆ ತಂದಿದೆ. ಇದು ಕರ್ನಾಟಕ ರಾಜ್ಯ ಪತ್ರದಲ್ಲಿ ವಿಶೇಷ ಪತ್ರಿಕೆ, ಭಾಗ–1 ಸಂಖ್ಯೆ 858 ಶುಕ್ರವಾರ ದಿನಾಂಕ: 16.7.1999 ರಂದು ಪ್ರಕಟಣೆಗೊಂಡಿದೆ.

ಕರ್ನಾಟಕ ಸರ್ಕಾರವು ರಾಜ್ಯ ಯೋಜನಾ ಮಂಡಳಿಯ ದಿ: 23–9–1996ರ ನಡೆದ ಸಭೆಯಲ್ಲಿ ಕರ್ನಾಟಕ ಸರ್ಕಾರವು ಒಂದು ಸಹಕಾರ ನೀತಿಯನ್ನು ರೂಪಿಸಬೇಕೆಂದು ಸಲಹೆ ಮಾಡಿತ್ತು. ಅದರಂತೆ ನಿಬಂಧಕರು ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದು, ಆ ನೀತಿಯನ್ನು ವಿವಿಧ ಮಟ್ಟಗಳಲ್ಲಿ ಚರ್ಚಿಸಿ ಇದಕ್ಕಾಗಿಯೇ ಒಂದು ವಿಚಾರಗೋಷ್ಠಿಯನ್ನು 14–9–98ರಂದು ನಡೆಸಿ, ನೀತಿಗೆ ಅಂತಿಮ ರೂಪ ಕೊಡಲಾಗಿದೆ. ಈ ನೀತಿಯನ್ನು ಸರ್ಕಾರವು ಸಿಎಂಡಬ್ಲ್ಯೂ/43/ಸಿಎಲ್ಎಂ/97 ದಿ: 30–6–99 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಜುಲೈ 16, 1999ಕ್ಕೆ ಹೊರಡಿಸಿದೆ. ಈ ನೀತಿಯನ್ವಯವೇ ಸಹಕಾರ ಸಂಘಗಳ ಕಾಯಿದೆಗೆ ಮಾರ್ಗದರ್ಶಿ ಸೂತ್ರವಾಗಿ ಅನುಸರಿಸಲಾಗಿದೆ. ಅಂದರೆ ಸಹಕಾರ ಸಂಘಗಳ ಕಾಯಿದೆ 1959ಕ್ಕೆ, 1998ರಲ್ಲಿ ತಂದ ತಿದ್ದುಪಡಿಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಇವುಗಳನ್ನು ರೂಪಿಸಲಾಗಿದೆ.

**ಪೀಠಿಕೆ:**

1.1. ಯೋಜನಾ ಪರಿಕಲ್ಪನೆಯಲ್ಲಿ ಮೂರನೆಯ ಸಾಧನ ಎಂದು ಪರಿಗಣಿಸಲಾಗಿರುವ ಸಹಕಾರ ವಲಯವು ಸಾಮಾಜಿಕ – ಆರ್ಥಿಕ ಅಭಿವೃದ್ಧಿಯ ಕಾರ್ಯ ವಿಧಾನದಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸುತ್ತಿದೆ. ಆರ್ಥಿಕ ಪರಿಕಲ್ಪನೆಯಾಗಿ ಏಕಸ್ವಾಮ್ಯ ಪದ್ಧತಿಯಂತಹ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ, ಮಧ್ಯವರ್ತಿಗಳು ಹಾಗೂ ಅಸಂಘಟಿತ ಕಾರ್ಮಿಕ ವರ್ಗವನ್ನು ತೊಡೆದುಹಾಕಲು ಸಹಕಾರ ತತ್ವಗಳು ಸಾಂಸ್ಥಿಕ ರಚನೆಗಳಿಗೆ ಒತ್ತಾಯಿಸುತ್ತವೆ. ಅಂತಹ ವಲಯಗಳು ಗಮನಾರ್ಹವಾಗಿ ಹೆಚ್ಚು. ಇಂದು ಸಾಲ, ಕೃಷಿ, ಮಾರಾಟ, ಹೈನುಗಾರಿಕೆ, ಗೃಹ ನಿರ್ಮಾಣ, ರೂಪಾಂತರ ಗ್ರಾಹಕ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಪರಿಸ್ಥಿತಿ ಕರ್ನಾಟಕದಲ್ಲಿ 1947ರಲ್ಲಿ ಕೇವಲ ಮೂರು ಸಾವಿರ ಸಹಕಾರ ಸಂಸ್ಥೆಗಳಿದ್ದು, ಜನಸಂಖ್ಯೆಯ ಶೇಕಡ 15ರಷ್ಟು ಜನರಿಗೆ ಮಾತ್ರ ಪ್ರಯೋಜನಕಾರಿಯಾಗಿದ್ದವು. ಅವುಗಳ ಷೇರು ಬಂಡವಾಳ 75.80 ಲಕ್ಷ ರೂ. ಹಾಗೂ ದುಡಿಯುವ ಬಂಡವಾಳ 360 ಲಕ್ಷ ರೂ. ಮಾತ್ರ ಆಗಿತ್ತು. ಐದು ದಶಕಗಳ ನಂತರ 26000ಕ್ಕೂ ಹೆಚ್ಚು ಸಂಸ್ಥೆಗಳಿದ್ದು, 135 ಲಕ್ಷ ಸದಸ್ಯತ್ವ ಹೊಂದಿ ಆರ್ಥಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿರುವುದು ಹೆಮ್ಮೆಯ ಸಂಗತಿ. ಈ ಸಂಸ್ಥೆಗಳ ಷೇರು ಬಂಡವಾಳ 540 ಕೋಟಿ ರೂ. ಹಾಗೂ ದುಡಿಯುವ ಬಂಡವಾಳ 6860 ಕೋಟಿ ರೂಪಾಯಿ ಇದ್ದು, ಷೇರು ಬಂಡವಾಳದಲ್ಲಿ ಸರ್ಕಾರದ ಪಾಲು 180 ಕೋಟಿ ರೂ. ಆಗಿದೆ. ಈ ಸಂಸ್ಥೆಗಳ ಪೈಕಿ ಸುಮಾರು ಶೇಕಡ 60ರಷ್ಟು ಈಗ ಲಾಭ ಗಳಿಸುತ್ತವೆ. ಇತರೆ ಶೇಕಡ 25ರಷ್ಟು ಸಂಸ್ಥೆಗಳು ಲಾಭವನ್ನಾಗಲೀ ನಷ್ಟವನ್ನಾಗಲೀ ಅನುಭವಿಸಿದೆ ವಹಿವಾಟು ನಡೆಸುತ್ತಿವೆ. ಉಳಿದವು ಅಸ್ತಿತ್ವ ಕಳೆದುಕೊಂಡಿವೆ. ಅಥವಾ ಮುಚ್ಚುವ ಸ್ಥಿತಿಯಲ್ಲಿವೆ. ಇದಲ್ಲದೆ ಕರ್ನಾಟಕದಲ್ಲಿ ಕೃಷಿ ಸಾಲ ವಿತರಣೆಯಲ್ಲಿ ಸಹಕಾರ ಸಂಸ್ಥೆಗಳ ಪಾಲು ಸುಮಾರು ಶೇಕಡ 48, ಗೊಬ್ಬರ ವಿತರಣೆಯಲ್ಲಿ ಶೇಕಡ 31, ಸಕ್ಕರೆ ಉತ್ಪಾದನೆಯಲ್ಲಿ ಶೇಕಡ 43, ಹತ್ತಿ ನೂಲು ಉತ್ಪಾದನೆಯಲ್ಲಿ ಶೇಕಡ 33, ಹಾಲು ಉತ್ಪಾದನೆಯಲ್ಲಿ ಶೇಕಡ 40 ಹಾಗೂ ಸಾರ್ವಜನಿಕ ವಿತರಣೆ ಜಾಲದಲ್ಲಿ ಶೇಕಡ 46 ಆಗಿದೆ.

1.2. ಸರ್ಕಾರಿ ಹತೋಟಿಯ ಸಾರ್ವಜನಿಕ ವಲಯದ ಕೈಗಾರಿಕಾ ಸಂಸ್ಥೆಗಳೊಂದಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಸಹಕಾರ ಸಂಸ್ಥೆಗಳು ಅನೇಕ ದೃಷ್ಟಿಗಳಿಂದ ನಿಶ್ಚಯವಾಗಿ ಉತ್ತಮ ಕಾರ್ಯ ಮಾಡಿವೆ. 1996–97ನೇ ಸಾಲಿನಲ್ಲಿದ್ದಂತೆ, ಸರ್ಕಾರಿ ವಲಯದ ಸಂಸ್ಥೆಗಳಲ್ಲಿ ಸರ್ಕಾರ ಹೂಡಿದ (3252 ಕೋಟಿ ರೂ.) ಹಣದ ಕೇವಲ ಶೇಕಡ 6ರಷ್ಟು ಷೇರು ಬಂಡವಾಳದೊಂದಿಗೆ ಸಹಕಾರ ಸಂಸ್ಥೆಗಳು 96 ಸಾವಿರ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿಕೊಟ್ಟಿದೆ. ಸರ್ಕಾರಿ ವಲಯ ಸೃಷ್ಟಿಸಿದ ಉದ್ಯೋಗ ಅವಕಾಶ 1.63 ಲಕ್ಷ ಮಾತ್ರ. ಅದರಂತೆಯೇ, ರಾಜ್ಯ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿ ವಹಿವಾಟು 7545 ಕೋಟಿ ರೂ.ಗಳಾಗಿದ್ದರೆ, ಸಹಕಾರಿ ವಲಯದ ವಹಿವಾಟು 6860 ಕೋಟಿ ರೂ. ಆಗಿತ್ತು. ಬಹುತೇಕ ಒಂದೇ ರೀತಿಯ ವಹಿವಾಟಿನಿಂದ ಸಹಕಾರ ಸಂಸ್ಥೆಗಳು 1996ರ ಮಾರ್ಚ್ ಅಂತ್ಯದ ವೇಳೆಗೆ 10 ಕೋಟಿ ರೂ. ನಿವ್ವಳ ಲಾಭ ಗಳಿಸಿದ್ದರೆ, ಸರ್ಕಾರಿ ಕೈಗಾರಿಕೋದ್ಯಮಗಳು 55 ಕೋಟಿ ರೂ. ನಷ್ಟ ಅನುಭವಿಸಿವೆ. ಕಡಿಮೆ ಹೂಡಿಕೆ ಹಾಗೂ ಸಾಕಷ್ಟು ಲಕ್ಷ್ಯ ಕೊಡದೇ ಇದ್ದರೂ ಸಹಕಾರ ಸಂಸ್ಥೆಗಳು ಕರ್ನಾಟಕದಲ್ಲಿ ಸರ್ಕಾರಿ ವಲಯದ ಸಂಸ್ಥೆಗಳಿಗಿಂತ ಉತ್ತಮ ಕಾರ್ಯ ಮಾಡಿ ತೋರಿಸುವಲ್ಲಿ ಯಶಸ್ವಿಯಾಗಿವೆಯೆಂಬುದನ್ನು ಈ ವಿಶ್ಲೇಷಣೆ ತೋರಿಸಿಕೊಡುತ್ತದೆ. ಇನ್ನೂ ಹೇಳಬೇಕೆಂದರೆ, ಸಹಕಾರ ಸಂಸ್ಥೆಗಳು ಜನರ ಸೇವೆ ಸಲ್ಲಿಸಲು ಸಮಾಜದ ಪ್ರತಿಯೊಂದು ವರ್ಗದೊಂದಿಗೂ ಸಂಪರ್ಕ ಬೆಳೆಸಿದೆ. ಅಲ್ಲದೇ ಅವು ನಾಯಕತ್ವ ಅಭಿವೃದ್ಧಿಗೆ ಒಂದು ಜಿಗಿ ಹಲಗೆಯನ್ನು ಒದಗಿಸಿದೆ. ವಿದ್ಯುತ್, ಆರೋಗ್ಯ, ಶಿಕ್ಷಣ, ತಯಾರಿಕೆ ಉದ್ಯಮದಂಥ ವಲಯಗಳನ್ನು ಸಹಕಾರ ಕ್ಷೇತ್ರದ ತೆಕ್ಕೆಗೆ ಒಳಪಡಿಸಿದರೆ ಮಾತ್ರ ಅವು ತ್ವರಿತ ಪ್ರಗತಿ ಸಾಧಿಸುವುದು ಸಾಧ್ಯವಾಗುವುದು.

1.3. ಇಷ್ಟಾದರೂ 1991ರ ಹೊಸ ಆರ್ಥಿಕ ನೀತಿ ಹಾಗೂ ಸ್ಪರ್ಧಾತ್ಮಕ ಆರ್ಥಿಕ ಸ್ಥಿತಿಯ ಹೊಸ ಸವಾಲುಗಳನ್ನು ಎದುರಿಸಲು ಸಹಕಾರ ವಲಯವು ಪರಿಶ್ರಮಪೂರಿತ ಪ್ರಯತ್ನ ನಡೆಸುತ್ತಿದೆ. ಉತ್ತಮ ಪರ್ಯಾಯ ಎಂದು ಕಂಡುಬಂದಿರುವ ಸಹಕಾರ ವಲಯಕ್ಕೆ ಹೊಸ ಹೊಸ ಉಪಕ್ರಮಗಳಲ್ಲಿ ತೊಡಗುವಂತೆ ಉತ್ತೇಜನ ನೀಡಲು ಸರ್ಕಾರ ಬದ್ಧವಾಗಿದೆ. ತುಲನಾತ್ಮಕವಾಗಿ ಹುಟ್ಟುವಳಿ ಅಥವಾ ಆದಾಯ ಕಡಿಮೆಯಾಗಿದ್ದು, ಹಣಕಾಸಿನ ಸಂಸ್ಥೆಗಳು ಹೂಡಿಕೆಗೆ ಸಾಲ ಕೊಡಲು ಮುಂದೆ ಬರದ ಉದ್ಯಮಗಳು ಹಾಗೂ ಒಂದಿಲ್ಲ ಒಂದು ಕಾರಣದಿಂದ ವಿಫಲಗೊಂಡಿದ್ದು ಅಥವಾ ಗ್ರಾಹಕರ ದೃಷ್ಟಿಯಿಂದ ವಿಶ್ವಾಸಾರ್ಹತೆ ಕಳೆದುಕೊಂಡ ಸರ್ಕಾರಿ ವಲಯದ ಸಂಸ್ಥೆಗಳ ಪುನಃಶ್ಚೇತನ ಸಹಕಾರ ವಲಯದಿಂದ ಸಾಧ್ಯವಾಗುವಂತೆ ಮಾಡುವುದು ಮೂಲ ಉದ್ದೇಶವಾಗಿದೆ. ಸಹಕಾರ ಸಂಘ ಸಂಸ್ಥೆಗಳು ಉತ್ತಮ ಸದಸ್ಯರನ್ನು ಹೊಂದಿ ಬಲಿಷ್ಠವಾದ ಕಡೆಗಳಲ್ಲೆಲ್ಲಾ ಸರ್ಕಾರ ಅವುಗಳನ್ನು ಸಂಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಉಪಯೋಗಿಸಿಕೊಂಡಿದೆ. ಒತ್ತಾಯ ಅಥವಾ ಒತ್ತಡಗಳು ವಿಫಲವಾದ ಕಡೆಗಳಲ್ಲಿ ಸಹಕಾರ ತತ್ವ ಹಾಗೂ ಶಿಸ್ತು ಯಶಸ್ವಿಯಾಗುವುದು.

1.4. ದುರದೃಷ್ಟ ಸಂಗತಿ ಎಂದರೆ ಸರ್ಕಾರವು ಸತತವಾಗಿ ನೀಡಿದ ಒತ್ತಾಸೆ ಹಾಗೂ ಪ್ರೋತ್ಸಾಹ, ತತ್ಪರಿಣಾಮವಾದ ಸಹಕಾರ ಸಂಸ್ಥೆಗಳ ಕಾರ್ಯ, ನಿರ್ಧಾರ ಹಾಗೂ ಆಡಳಿತದಲ್ಲಿ ಸರ್ಕಾರದ ನಿಯಂತ್ರಣ ಮತ್ತು ವಲಯದ ಆಡಳಿತಕ್ಕೆ ಸಂಬಂಧಪಟ್ಟ ಮಿತಿಮೀರಿದ ಹಾಗೂ ನಿರ್ಬಂಧದ ಶಾಸನ ಕ್ರಮಗಳು ಕೆಳಕಂಡ ಪರಿಸ್ಥಿತಿಯನ್ನು ನಿರ್ಮಿಸಿವೆ.

1. ಸದಸ್ಯರ ಭಾಗಿತ್ವ ಕಡಿಮೆಯಾಗಿದೆ ಹಾಗೂ ಸದಸ್ಯತ್ವದ ಗುಣಮಟ್ಟವೂ ಕ್ಷೀಣಿಸಿದೆ.
2. ಸಹಕಾರ ಸಂಸ್ಥೆಗಳು ಸರ್ಕಾರದ ಸಂಸ್ಥೆಗಳಾಗಿವೆ ಎಂಬ ಭಾವನೆ ಮೂಡಿ ಸಹಕಾರಿ ಉಪಕ್ರಮಕ್ಕೆ ಬದಲಾಗಿ ಸರ್ಕಾರದ ವ್ಯವಸ್ಥೆಯಂತೇ ಆಗಿದೆ.
3. ತನ್ನ ಅಧಿಕಾರಶಾಹಿ ಸಂಸ್ಥೆಗಳ ಮೂಲಕ ಸರ್ಕಾರದ ಕಪಿಮುಷ್ಠಿಯಿಂದಾಗಿ ಜನರು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡು ತಮಗೆ ತಾವೇ ಸಹಾಯ ಮಾಡಿಕೊಳ್ಳುವ ಸಾಮರ್ಥ್ಯವನ್ನು ಕಡೆಗಣಿಸಲಾಗಿದೆ.
4. ಮಿತಿಮೀರಿದ ಸರ್ಕಾರದ ಶಾಸನಾತ್ಮಕ ಹಸ್ತಕ್ಷೇಪ, ತತ್ಪರಿಣಾಮವಾಗಿ ಜನತಂತ್ರಾತ್ಮಕ ಹತೋಟಿ ಇಲ್ಲದಿರುವುದು, ನಾಮಕರಣ ಸಂಸ್ಕೃತಿಗೆ ಮೊರೆ ಹೋಗುವುದು, ಆಗಾಗ ಸಹಕಾರ ಸಂಸ್ಥೆಗಳ ಚುನಾವಣೆಗಳನ್ನು ಮುಂದಕ್ಕೆ ಹಾಕುವುದು. ಇದರಿಂದ ಹೊಸ ನಾಯಕತ್ವದ ಉದಯಕ್ಕೆ ಅಡ್ಡಿ ಆಗುವುದರ ಜೊತೆಗೆ ಪಟ್ಟಭದ್ರ ಹಿತಗಳ ಬಲವೃದ್ಧಿ ಆಗುವುದು.
5. ವೈಜ್ಞಾನಿಕ ಆಡಳಿತ ಪದ್ಧತಿ ಜಾರಿಗೊಳಿಸುವ ಮೂಲಕ ಕಾರ್ಯದಕ್ಷತೆ ಸುಧಾರಣೆಗೆ ಅಗತ್ಯವಾದ ವೃತ್ತಿನಿರತ ಸಿಬ್ಬಂದಿ ಇಲ್ಲದಿರುವುದು.

1.5 ವಲಯವು ತನ್ನದೇ ಆದ ಅಡೆತಡೆಗಳನ್ನು ಹೊಂದಿದ್ದರೂ, ಬಹುತೇಕ ಒಂದು ಶತಮಾನ ಕಳೆದಿರುವ ಸಹಕಾರ ಆಂದೋಲನವು ಭಾರತೀಯ ಸಮಾಜವನ್ನು ಪರಸ್ಪರ ವಿರುದ್ಧದ ಹಿತಾಸಕ್ತಿಯ ವರ್ಗ ಹೋರಾಟದಿಂದ ಸಾರ್ವತ್ರಿಕ ಒಳಿತಿಗಾಗಿ ಹಿತಕರ, ಸ್ನೇಹಪರ, ಸ್ಪರ್ಧಾತ್ಮಕವಾಗುವಂತೆ ಮಾಡುವಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಕೊಡುಗೆ ನೀಡಿದೆ ಎಂಬುದನ್ನು ಒಪ್ಪಲೇಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರವು ಹೊಸ ಆರ್ಥಿಕ ನೀತಿ ಹಾಗೂ ತತ್ಪರಿಣಾಮದ ಆಧುನಿಕ ತಂತ್ರಜ್ಞಾನದೊಂದಿಗೆ ಎದುರಾಗಿರುವ ಸ್ಪರ್ಧಾತ್ಮಕ ಪರಿಸರವು ಈ ವಲಯಕ್ಕೆ ತೀವ್ರ ಸವಾಲನ್ನು ಎಸೆಯುವುದಾದರೂ ಕೆಲವು ಜನರು ಭಾವಿಸಿರುವಂತೆ ಆಂದೋಲನವು ನೆಲ ಕಚ್ಚುವುದಿಲ್ಲ ಎಂದು ತಿಳಿಯಬಹುದಾಗಿದೆ. ಸಹಕಾರ ತತ್ವಗಳ ಚೌಕಟ್ಟಿನೊಳಗೆ ಸ್ವತಂತ್ರ ಉದ್ಯಮ ನಡೆಸಲು ಅಗತ್ಯವಾದ ವಾತಾವರಣವನ್ನು ನಿರ್ಮಿಸುವುದು ಹಾಗೂ ಎಲ್ಲ ವಿಧದ ಅಡೆತಡೆಗಳನ್ನು ಒಡ್ಡಿದ ಸರ್ಕಾರದ ಯಂತ್ರವನ್ನು ಹಿಂತೆಗೆದುಕೊಳ್ಳುವುದು ಇಂದಿನ ಅಗತ್ಯ.

1.6. ಕರ್ನಾಟಕವು ಎಂದಿನಿಂದಲೂ ಅನೇಕ ಸಹಕಾರಿ ಸಾಧನೆಗಳ ಮುಂಚೂಣಿಯಲ್ಲಿದೆ ಹಾಗೂ ಅನೇಕ ಶ್ರೇಷ್ಠ ಸಹಕಾರಿಗಳನ್ನು ಸೃಷ್ಟಿ ಮಾಡಿದೆ. ಪ್ರಥಮ ಕೃಷಿ ಸಾಲ ಸಹಕಾರ ಸಂಘವನ್ನು 1905ರಲ್ಲಿ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಅವರು ಸ್ಥಾಪಿಸಿದರು. "ಸರ್ಕಾರದ ಕನಿಷ್ಠ ಅಥವಾ ಯಾವುದೇ ಹಸ್ತಕ್ಷೇಪವಿಲ್ಲದೆ ಸಣ್ಣ ಗುಂಪುಗಳು ಹಾಗೂ ಜನಸಮುದಾಯಗಳು ಸ್ವತಂತ್ರವಾಗಿ ಚಟುವಟಿಕೆಗಳನ್ನು ಸಂಘಟಿಸುವಂತೆ ನಾವು ಸಹಕಾರವನ್ನು ಒಂದು ಜನಪ್ರಿಯ ಆಂದೋಲನವನ್ನಾಗಿ ಪುನಃಶ್ಚೇತನಗೊಳಿಸಬಹುದು." ಎಂದು ಈಗಿನ ಸರ್ಕಾರವು ಅನೇಕ ಸಂದರ್ಭಗಳಲ್ಲಿ ಒತ್ತಿ ಹೇಳುತ್ತಾ ಬಂದಿದೆ. ಸರ್ಕಾರ ಈಗಾಗಲೇ ಹೊಸ ಕರ್ನಾಟಕ ಸೌಹಾರ್ದ ಸಹಕಾರಿ ಶಾಸನವನ್ನು ರೂಪಿಸಿದೆ. ಹಾಗೂ ಈಗಿನ 1959ರ ಸಹಕಾರ ಸಂಘಗಳ ಶಾಸನಕ್ಕೆ ಸಮಗ್ರ ತಿದ್ದುಪಡಿ ತಂದಿದೆ. ಭಾರತ ಸರ್ಕಾರ ರಚಿಸಿದ ಬ್ರಹ್ಮಪ್ರಕಾಶ್ ಸಮಿತಿಯ ಶಿಫಾರಸ್ಸುಗಳು ಹಾಗೂ ಅವುಗಳನ್ನು ಆಧರಿಸಿದ ಕೇಂದ್ರ ಮಾದರಿ ಶಾಸನಗಳಿಗಿಂತ ರಾಜ್ಯದ ಕ್ರಮಗಳು ಅನೇಕ ವಿಧಗಳಲ್ಲಿ ಹೆಚ್ಚು ಪ್ರಗತಿಪರವಾಗಿವೆ. 1995ರ ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ನಡೆದ ಸಕ್ರಿಯ ಸಹಕಾರಿಗಳ ರಾಜ್ಯ ಮಟ್ಟದ ಸಮ್ಮೇಳನ ನೀಡಿದ ಒಂದು ಹೊಸ ಚಿಂತನೆ ಹಾಗೂ ಕರ್ನಾಟಕ ರಾಜ್ಯ ಯೋಜನಾ ಮಂಡಳಿ 1996ರ ಸೆಪ್ಟೆಂಬರ್ 23ರಂದು ನಡೆದ ತನ್ನ ಐತಿಹಾಸಿಕ ಸಭೆಯಲ್ಲಿ

ಕರ್ನಾಟಕ ಸರ್ಕಾರವು ರಾಜ್ಯಕ್ಕೊಂದು ಸಹಕಾರ ನೀತಿಯನ್ನು ರೂಪಿಸಬೇಕೆಂದು ಕೈಗೊಂಡ ನಿರ್ಧಾರದ ಫಲಶ್ರುತಿಯೇ ಈ ಕ್ರಮವಾಗಿದೆ. 1998ರ ಏಪ್ರಿಲ್ 18ರಂದು ನಡೆದ ರಾಜ್ಯ ಮಟ್ಟದ ವಿಚಾರಗೋಷ್ಠಿಯಲ್ಲಿ ಕರ್ನಾಟಕದ ಹಾಗೂ ಹೊರಗಿನ ಪ್ರಮುಖ ಸಹಕಾರಿಗಳು ಮತ್ತು ಹಿರಿಯ ಗಣ್ಯರು ಸಹಕಾರ ನೀತಿಯ ಕರಡನ್ನು ಪರಿಶೀಲಿಸಿ ಅದನ್ನು ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಬೇಗ ಅಂಗೀಕರಿಸಬೇಕು ಎಂದು ಅಭಿಪ್ರಾಯಪಟ್ಟರು.

1.7 ನೀತಿ ನಿರೂಪಕರ ಮಟ್ಟದಲ್ಲಿ ಕಂಡುಬಂದ ಬದಲಾದ ಮನೋಭಾವ ಹಾಗೂ ಸಹಕಾರಿಗಳಲ್ಲಿ ಮೂಡಿದ ತೀವ್ರ ಉತ್ಸಾಹ ಸಹಕಾರಿ ವಲಯದಲ್ಲಿ ಹೆಚ್ಚಿನ ಸಾಧನೆ ಮಾಡಲು ಅನುವಾಗುವಂತೆ ವ್ಯಾಪಕ ನೀತಿ ರೂಪಿಸಲು ದಾರಿ ಮಾಡಿಕೊಟ್ಟವು.

**2. ಮೂಲ ಉದ್ದೇಶಗಳು :**

**2.1 ರಾಜ್ಯದ ಜನರ ಮನಸ್ಸಿನಲ್ಲಿ ಸಹಕಾರ ಭಾವನೆಯನ್ನು ಮೂಡಿಸುವುದು**

ಪ್ರತಿಯೊಬ್ಬ ವ್ಯಕ್ತಿಯೂ ಜೀವನವನ್ನು ಸಹಕಾರಿ ಪ್ರಯತ್ನ ಎಂದು ಭಾವಿಸಿ ಅದಕ್ಕೆ ತಕ್ಕಂತೆ ಸಾರ್ವತ್ರಿಕ ಜೀವನವನ್ನು ರೂಪಿಸಲು ಇತರರಿಗೆ ಸಹಾಯ ಮಾಡುವಂತೆ ಪ್ರೇರೇಪಿಸುವುದು. ಒಂದು ಯೋಜಿತ ಅರ್ಥ ವ್ಯವಸ್ಥೆಯು ಒಂದು ಸಹಕಾರಿ ಪದ್ಧತಿಯನ್ನು ನೆಚ್ಚಿಕೊಳ್ಳುವುದು ಸಾಧ್ಯವಾಗುವುದಾದರೆ ಅದರು ಒಂದು ಜೀವಂತ ದೇಹದ ಸೂಕ್ಷ್ಮ ಗುಣಗಳನ್ನು ಪುನಶ್ಚೇತನಗೊಳಿಸುವುದು. ಆದ್ದರಿಂದಲೇ ರಾಜ್ಯದ ಜನರಲ್ಲಿ ಇನ್ನಷ್ಟು ಸಹಕಾರ ಭಾವನೆಯನ್ನು ಮೂಡಿಸುವುದು ಅಗತ್ಯ.

**2.2 ಸ್ವಪ್ರೇರಣೆಯಿಂದ ಸಹಕಾರ ಸಂಸ್ಥೆಗೆ ಒತ್ತಾಸೆ ಕೊಡಲು ಜನರಿಗೆ ಉತ್ತೇಜನ ನೀಡುವುದು.**

ಆರಂಭದಲ್ಲಿ ಸರ್ಕಾರವು, ವಿಶೇಷವಾಗಿ ಗ್ರಾಮೀಣ ಸಾಲ ಕ್ಷೇತ್ರದಲ್ಲಿ ಸಹಕಾರ ಸಂಸ್ಥೆಗಳಿಗೆ ಉತ್ತೇಜನ ನೀಡಿತು. ಆದರೆ ಜನರು ತಾವೇ ತಾವಾಗಿ ಸ್ವಪ್ರೇರಣೆಯ ಆಧಾರದ ಮೇಲೆ ಸಹಕಾರ ಸಂಸ್ಥೆಗಳಲ್ಲಿ ಭಾಗಿಯಾಗದಿದ್ದರೆ ಸಹಕಾರ ಸಂಸ್ಥೆಗಳು ಯಶಸ್ವಿಯಾಗುವುದಿಲ್ಲ. ಅದಕ್ಕೆ ವಿರುದ್ಧವಾಗಿ ಸರ್ಕಾರಿ ನೆರವನ್ನೇ ಹೆಚ್ಚಾಗಿ ಅವಲಂಬಿಸಿದರೆ ಅದು ಸಹಕಾರ ತತ್ವಕ್ಕೆ ವಿರುದ್ಧವಾಗುವುದು ಎಂಬ ಅಂಶಗಳು ಮನವರಿಕೆ ಆದವು. ಸ್ವಪ್ರೇರಣೆಯಿಂದ ಸ್ಥಾಪಿತಗೊಂಡ ಸಹಕಾರ ಸಂಸ್ಥೆಯು ಉನ್ನತ ಮಟ್ಟದ ದಕ್ಷತೆಯಿಂದ ಕಾರ್ಯ ಮಾಡಿ ಜನ ಸಮುದಾಯಕ್ಕೆ ಉತ್ತಮ ಸೇವೆ ಸಲ್ಲಿಸುವುದು ಸಾಧ್ಯ ಎಂಬುದು ಅನುಭವಕ್ಕೆ ಬಂದಿತು. ಪಂಡಿತ್ ಜವಹರ್‌ಲಾಲ್ ನೆಹರೂ ಅವರನ್ನು ಉಲ್ಲೇಖಿಸುವುದಾದರೆ ಅವರು "ಇಡೀ ಸಹಕಾರದ ಪರಿಕಲ್ಪನೆ ಸಾರ್ವಜನಿಕ ಒತ್ತಾಸೆಯನ್ನೇ ಆಧರಿಸಿರಬೇಕು ಹಾಗೂ ಅದು ಮೇಲಿನಿಂದ ಸರ್ಕಾರ ಸಂಘಟಿಸಿದ ಆಂದೋಲನದ ಸ್ವರೂಪ ತಾಳಬಾರದು". ಸರ್ಕಾರ ಸಹಾಯ ಮಾಡಬಹುದು ಹಾಗೂ ಅದು ಸಹಾಯ ಮಾಡಬೇಕು. ಆದರೆ ಎಲ್ಲವೂ ಸಾರ್ವಜನಿಕರ ಅನಿಸಿಕೆ, ಅಪೇಕ್ಷೆಗಳಿಂದ, ಸಾರ್ವಜನಿಕ ಅಭಿಪ್ರಾಯ ಹಾಗೂ ಸಾರ್ವಜನಿಕ ಸಹಕಾರದಿಂದ ತಲೆ ಎತ್ತಬೇಕು. ಸರ್ಕಾರವು ಸಹಕಾರ ಆಂದೋಲನದ ಬೆಳವಣಿಗೆಗೆ ಅನುವು ಹಾಗೂ ಒತ್ತಾಸೆ ಮಾಡಿಕೊಟ್ಟು ತನ್ನ ಭರವಸೆಯನ್ನು ಈಡೇರಿಸಬೇಕು.

**2.3 ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ತತ್ವಗಳ ಆಧಾರದ ಮೇಲೆ ರೂಪುಗೊಂಡು ಕಾರ್ಯ ಮಾಡುವುದನ್ನು ಖಚಿತಪಡಿಸಬೇಕು**

ಸಹಕಾರ ಸಂಸ್ಥೆಗಳು ಪರಸ್ಪರ ನೆರವು ಹಾಗೂ ಸಹಾಯದಿಂದ ನಡೆಯುವಂತಹದು. ಅಂದರೆ ಸಹಜವಾಗಿಯೇ ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ತತ್ವಗಳ ಮೇಲೆ ಕಾರ್ಯ ಮಾಡುವುವು ಅಂದ ಹಾಗಾಯಿತು. ಸಹಕಾರ ವಲಯದ ಪಾತ್ರವನ್ನು ಮತ್ತೆ ಸ್ಪಷ್ಟವಾಗಿ ವಿವರಿಸಬೇಕು. ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ ರೂಪಿಸಿರುವ ಸ್ವಸಹಾಯ, ಜನತಂತ್ರ, ಸಮತೆ, ನ್ಯಾಯಧರ್ಮ ಹಾಗೂ ಏಕತೆಯಂಥ ನಾನಾ ತತ್ವಗಳನ್ನು ಆಧರಿಸಿ ಕಾರ್ಯ ಮಾಡುವ ಪರಿಣಾಮಕಾರಿ ಕಾರ್ಯ ಸಾಧನೆ ಎಂದು ಅದನ್ನು ಮತ್ತೆ ದೃಢವಾಗಿ ಗುರುತಿಸುವಂತೆ ಆಗಬೇಕು.

ಒತ್ತಾಸೆ ಹಾಗೂ ಉಸ್ತುವಾರಿ ಹೆಸರಿನಲ್ಲಿ ಸರ್ಕಾರ ಯಾವಾಗ ಹಸ್ತಕ್ಷೇಪ ಮಾಡಿತೋ ಆಗಲೇ ಜನತಂತ್ರದ ಹಿಡಿತ ಸಡಿಲಗೊಂಡಿತು. ನಾಮಕರಣ ಸಂಸ್ಕೃತಿ, ಆಗಾಗ ಚುನಾವಣೆಯ ಮುಂದೂಡಿಕೆ ಪರಿಪಾಠವಾಯಿತು. ಇದರಿಂದ ಸಹಕಾರ ಸಂಸ್ಥೆಗಳಿಗೆ ಹೊಸ ನಾಯಕತ್ವ ಸಿಗದಂತಾಯಿತು. ಪಟ್ಟಭದ್ರಹಿತಗಳು ಕತ್ತು ಹಿಸುಕುವಂತಾಯಿತು.

ಇದಕ್ಕೆ ಮಾರುಕಟ್ಟೆ ಸಹಕಾರ ಸಂಸ್ಥೆಗಳು ಉತ್ತಮ ನಿದರ್ಶನ. ಆದರೆ ನಗರ ಸಹಕಾರಿ ಬ್ಯಾಂಕುಗಳ ವಲಯವು ಸರ್ಕಾರದ ಶಾಸನಬದ್ಧ ಹಸ್ತಕ್ಷೇಪದಿಂದ ಮುಕ್ತವಾಗಿದ್ದು ಆದರ್ಶ ಆರ್ಥಿಕ ಘಟಕಗಳಾಗಿ ತಲೆ ಎತ್ತಿವೆ.

**2.4 ರಾಜ್ಯದ ಸಹಕಾರ ಸಂಸ್ಥೆಗಳು ಪರಮಾವಧಿ ಸ್ವಾಯತ್ತಾಧಿಕಾರ ಹೊಂದಿರುವುದನ್ನು ಖಾತರಿಪಡಿಸುವುದು**

ಸರ್ಕಾರದ ಅನುಚಿತ ಹಸ್ತಕ್ಷೇಪವಿಲ್ಲದೆ ಸಹಕಾರ ಸಂಸ್ಥೆಗಳು ದಕ್ಷತೆಯಿಂದ ಕಾರ್ಯನಿರ್ವಹಿಸಲು ಅವು ತಮ್ಮ ವ್ಯವಹಾರಗಳನ್ನು ಸ್ವತಂತ್ರವಾಗಿ ನಡೆಸಬೇಕು. ಸರ್ಕಾರವು ಮಿತಿಮೀರಿದ ಹಾಗೂ ನಿರ್ಬಂಧಿತ ಶಾಸನಾತ್ಮಕ ಕ್ರಮಗಳನ್ನು ಅನುಸರಿಸಿ ದೈನಂದಿನ ಆಡಳಿತಾತ್ಮಕ ಕಾರ್ಯದಲ್ಲಿ

ಕೈಹಾಕಿದ್ದರಿಂದ ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಅಡಚಣೆ ಉಂಟಾಯಿತು. ಸ್ವಾಯತ್ತಾಧಿಕಾರ ಎಂದರೆ ನಿರ್ಧಾರ ಕೈಗೊಳ್ಳುವುದರಲ್ಲಿ ಹಾಗೂ ಆಂತರಿಕ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರುವುದು ಎಂದರ್ಥ.

**2.5 ಸಹಕಾರ ಸಂಸ್ಥೆಗಳು ಸದಸ್ಯರಿಗೆ ಉತ್ತರವಾದಿಯಾಗಿರುವುದನ್ನು ಖಚಿತಪಡಿಸುವುದು**

ಸ್ವಾಯತ್ತಾಧಿಕಾರ ಎಂದರೆ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಡುವುದು ಎಂದೇನೂ ಅರ್ಥವಲ್ಲ. ಆಡಳಿತ ಸಮಿತಿಯು ಸರ್ವಸದಸ್ಯರ ಸಭೆಗೆ ಉತ್ತರವಾದಿ ಆಗಿರಬೇಕು ಎಂದು ಮಾತ್ರ ಅರ್ಥ. ಅಧಿಕಾರ ಸ್ಥಾನದಲ್ಲಿರುವ ಸದಸ್ಯರು ಸಂಸ್ಥೆಯ ಹಾಗೂ ಸದಸ್ಯರ ಒಳಿತಿಗಾಗಿ ನಿಷ್ಪ ಹಾಗೂ ಅರ್ಪಣಾಭಾವದಿಂದ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂಬುದೇ ಇಂಥ ಉತ್ತರವಾಯಿತ್ವದ ವೈಶಿಷ್ಟ್ಯ.

**2.6 ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಜೀವನದ ಗುಣಮಟ್ಟವನ್ನು ಸತತವಾಗಿ ಸುಧಾರಣೆ ಮಾಡುವ ಸಾಧನಗಳಾಗಿ ಕಾರ್ಯ ಮಾಡುವ ಭರವಸೆ ಕೊಡುವುದು**

ಸಾರ್ವತ್ರಿಕವಾಗಿ ಸಮಾಜಕ್ಕೆ, ವಿಶೇಷವಾಗಿ ಸಂಸ್ಥೆಯ ಸದಸ್ಯರಿಗೆ ಪ್ರಯೋಜನ ಅಥವಾ ಲಾಭಾಂಶ ಒದಗಿ ಬರುವುದನ್ನು ಖಚಿತಪಡಿಸಲು ಅಗತ್ಯವಾದ ನಿರ್ದಿಷ್ಪ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬದಲಾವಣೆ ತರುವ ಗುರಿಯಿಂದ ಸಾಮೂಹಿಕ ಚಟುವಟಿಕೆಗಳನ್ನು ನಡೆಸಲಾಗುವುದು. ವಾಸ್ತವವಾಗಿ ಇದೇ ಸಹಕಾರದ ಸಾರ ಮತ್ತು ಅವಶ್ಯ ಗುಣ, ಜೀವನಮಟ್ಟದ ಸುಧಾರಣೆ ಇದರ ಮೂಲ ಗುರಿ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಸಹಕಾರ ಸಂಸ್ಥೆಗಳನ್ನು ಇದುವರೆಗೂ ಕಾಣುತ್ತಿದ್ದಂತೆ ಸರ್ಕಾರದ ವಿಸ್ತರಿತ ಅಂಗ ಎಂದು ಕಾಣದೆ, ಅವು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ತರುವ ಜೀವನ ಗುಣಮಟ್ಟದಲ್ಲಿ ಸುಧಾರಣೆ ಮಾಡಲು ಶಕ್ತವಾಗಲನುವಾಗುವಂತೆ ಅವುಗಳು ತಮ್ಮ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಅವಕ್ಕೆ ಸ್ವಾತಂತ್ರ್ಯ ನೀಡಬೇಕು.

**2.7 ಸರ್ವ ಸಮಾನ ಸಮಾಜ ಸ್ಥಾಪನೆಗೆ ಹಾದಿ ಕಲ್ಪಿಸಲು ದುರ್ಬಲ ವರ್ಗದ ಏಳಿಗೆಗೆ ಹಾಗೂ ದಾರಿದ್ರ್ಯ ನಿರ್ಮೂಲನೆಗೆ ಸಾಧನಗಳಾಗಿ ಸಹಕಾರ ಸಂಸ್ಥೆಗಳು ಕಾರ್ಯ ನಿರ್ವಹಿಸುವುದನ್ನು ಖಚಿತಪಡಿಸುವುದು.**

ಸರ್ವ ಸಮಾನ ಸಮಾಜ ಸ್ಥಾಪನೆ ಮಾಡಲು ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು, ದುರ್ಬಲ ವರ್ಗಗಳ ಏಳಿಗೆಯ ಹಾಗೂ ದಾರಿದ್ರ್ಯ ನಿರ್ಮೂಲನೆಯ ಸಾಮಾಜಿಕ ಸಾಧನಗಳನ್ನಾಗಿ ಸಹಕಾರ ಸಂಸ್ಥೆಗಳನ್ನು ಪರಿಗಣಿಸಬೇಕು. ಈ ವಲಯದ ಅಭಿವೃದ್ಧಿಯ ಗುರಿ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತಗೊಳಿಸುವುದಲ್ಲ. ಬಡವ ಹಾಗೂ ಧನಿಕರ ನಡುವಣ ಆರ್ಥಿಕ ಅಸಮಾನತೆಯನ್ನು ನಿವಾರಣೆ ಮಾಡುವುದು ಮತ್ತು ಸಮಾಜದ ಒಂದು ವರ್ಗದ ಕೈಯಲ್ಲಿ ಸಂಪತ್ತು ಕೇಂದ್ರೀಕೃತವಾಗುವುದನ್ನು ತಪ್ಪಿಸುವುದು ಅದರ ಉದ್ದೇಶ.

**2.8 ಕೆಳಕಂಡ ಸೇವಾ ಕಾರ್ಯಗಳನ್ನು ಕೈಗೊಳ್ಳಲು ಸ್ವಯಂ ಆಧರಿತ ಸದೃಢ ಆರ್ಥಿಕ ಸೇವಾ ಹಾಗೂ ವ್ಯಾಪಾರಿ ಸಂಸ್ಥೆಗಳಾಗಿ ಸಹಕಾರ ಸಂಸ್ಥೆಗಳು ತಲೆ ಎತ್ತುವಂತೆ ಉತ್ತೇಜನ ನೀಡುವುದು**

**(ಎ) ವಿವಿದೋದ್ದೇಶದ ಘಟಕಗಳು**

ಸಾಲ, ಗ್ರಾಹಕ, ಮಾರಾಟ, ವಸತಿ ನಿರ್ಮಾಣದಂಥ ಸರ್ವಮುಖ ಆರ್ಥಿಕ ಚಟುವಟಿಕೆ ನಡೆಸಲು ಏಕ ಕಿಂಡಿಯ ಸಹಕಾರ ಸಂಸ್ಥೆಗಳು ಬಹಳ ಸೂಕ್ತ. ಗ್ರಾಮಮಟ್ಟದಲ್ಲಿ ಸಹಕಾರ ಸಂಸ್ಥೆಯೊಂದು ಗ್ರಾಮೀಣ ಜೀವನದ ಎಲ್ಲ ಕೃಷಿ ಹಾಗೂ ಕೃಷಿಯೇತರ ಅಗತ್ಯಗಳನ್ನು ಈಡೇರಿಸುವ ಒಂದು ಆಶ್ರಯ ಸಂಸ್ಥೆಯಾಗಿ ಸೇವೆ ಸಲ್ಲಿಸಬೇಕು. ಇಂಥ ಒಂದು ಪರಿಕಲ್ಪನೆಯು ಉತ್ಪಾದಿತ ವಸ್ತುಗಳ ಬೆಲೆ ನಿಗಧಿ ಮಾಡುವಲ್ಲಿ, ಸ್ಪರ್ಧಾತ್ಮಕವಾಗಿ ಅನುಕೂಲಗಳನ್ನು ಒದಗಿಸುವುದರಲ್ಲಿ ಜೊತೆಗೆ ವಾಣಿಜ್ಯ ಅಭಿವೃದ್ಧಿಯನ್ನು ಆರ್ಥಿಕವಾಗಿ ಸುಭದ್ರ ನೆಲೆಗಟ್ಟಿಗೆ ಒಯ್ಯುವಲ್ಲಿ ಪರಿಣಾಮಕಾರಿಯಾಗಿರುವುದು.

**(ಬ) ದಕ್ಷ ರೀತಿಯಲ್ಲಿ ಠೇವಣಿ ಸಂಗ್ರಹಣೆ**

ಸಣ್ಣ ಉಳಿತಾಯಗಳಿಂದ ಠೇವಣಿ ಸೇರಿದಂತೆ ಇವುವರೆಗೂ ಬಳಸದೇ ಇರುವ ಗ್ರಾಮೀಣ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಸಹಕಾರ ಪ್ರಯತ್ನಗಳ ಮೂಲಕವೇ ನಡೆಯಬೇಕು. ಇದರಿಂದ ಲಾಭದಾಯಕ ಹೂಡಿಕೆಯಲ್ಲಿ ಸಂಪನ್ಮೂಲಗಳನ್ನು ತೊಡಗಿಸಲು, ಸಕಾಲದಲ್ಲಿ ಸೂಕ್ತ ಜನರಿಗೆ ತಕ್ಕ ಉದ್ದೇಶಗಳಿಗಾಗಿ ಗ್ರಾಮೀಣ ಸಾಲ ಒದಗಿಸಲು ಸಾಧ್ಯವಾಗುವುದು. ಇದರಿಂದ ಸಹಕಾರ ಸಾಲ ನೀಡಿಕೆ ಯಂತ್ರ ಪರಿಣಾಮಕಾರಿಯಾಗಿ ದಕ್ಷತೆಯಿಂದ ಕಾರ್ಯ ಮಾಡಿದಂತಾಗುವುದು. ಸ್ಥಳೀಯ ಅಪೇಕ್ಷೆ ಹಾಗೂ ಆಶೋತ್ತರಗಳಿಗೆ ತಕ್ಕಂತೆ ಸ್ಥಳದಲ್ಲೇ ವ್ಯಾಪಾರ ವಹಿವಾಟಿನ ನಿರ್ಧಾರ ಕೈಗೊಳ್ಳಲು ಸಂಸ್ಥೆಗಳಿಗೆ ಅಗತ್ಯವಾದ ಹೊಂದಾಣಿಕೆ ಸ್ವಾತಂತ್ರ್ಯ ಲಭಿಸಿದಂತಾಗುವುದು.

**(ಸ) ಮಾನವ ಸಂಪನ್ಮೂಲಗಳ ದಕ್ಷ ಬಳಕೆ**

ವಿವಿದೋದ್ದೇಶದ ಘಟಕಗಳಿಗೆ ವಿಭಿನ್ನ ಕೌಶಲ ಅಗತ್ಯವೆನಿಸಿದ್ದು, ಅಪೇಕ್ಷಿತ ಫಲ ಸಿಗಲು ಲಭ್ಯವಿರುವ ಮಾನವ ಶಕ್ತಿಯನ್ನು ದಕ್ಷತೆಯಿಂದ ಬಳಸುವುದು ಅಗತ್ಯ. ಈ ನಿಟ್ಟಿನಲ್ಲಿ ಅಗತ್ಯ ತರಬೇತಿ ಹಾಗೂ ತಕ್ಕ ಮಾರ್ಗದರ್ಶನ ಪೂರ್ವಭಾವಿ ಷರತ್ತುಗಳೆನಿಸಿವೆ. ಇದು ಸದಸ್ಯರ ಭಾಗಿತ್ವ ಹಾಗೂ ಅರ್ಪಣಾ ಭಾವದ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು. ಇದು ಸದಸ್ಯತ್ವದ ಗುಣಮಟ್ಟವನ್ನು ವೃದ್ಧಿ ಮಾಡುವುದು.

**(ಡ) ಸಾಮೂಹಿಕ ಪ್ರಯತ್ನ ಹಾಗೂ ಹೂಡಿಕೆಗಳ ಮೂಲಕ ತಮ್ಮ ಸಾರ್ವತ್ರಿಕ ಅಗತ್ಯಗಳನ್ನು ಈಡೇರಿಸಿಕೊಳ್ಳಲು ತಮಗೆ ತಾವೇ ಸಹಾಯ ಮಾಡಿಕೊಳ್ಳುವುದು**

ಸಹಕಾರ ತತ್ವಗಳ ಮೂಲಕ ಸ್ವತಂತ್ರ ಉದ್ಯಮ ನಡೆಸಲು ಅಗತ್ಯವಾದ ವಾತಾವರಣ ನಿರ್ಮಿಸಲು ಒತ್ತು ನೀಡಲಾಗಿದೆ. ಸರ್ಕಾರವನ್ನು ಅವಲಂಬಿಸುವುದು ಅಗತ್ಯವೆನಿಸಿದರೆ, ಅದು ಲಾಭಾಂಶ ಅಥವಾ ಆರ್ಥಿಕ ದೃಢತೆ ವೃದ್ಧಿಗೆ ಆಡಳಿತ ನಡೆಸುವ ಕಾರ್ಯತಂತ್ರವನ್ನು ಮೂಲೆಗೆ ತಳ್ಳಿದಂತಾಗಬಾರದು. ಸಹಕಾರ ಸಂಸ್ಥೆಗಳ ಯಶಸ್ಸಿಗೆ ಸಹಕಾರಿ ಉಪಕ್ರಮ ಹಾದಿ ಕಲ್ಪಿಸುವುದೇ ವಿನಾ ಸರ್ಕಾರದ ಪ್ರಯತ್ನವಲ್ಲ.

**(ಇ) ಹಣಕಾಸಿನ ಲಾಭ ಪಡೆಯಲು ಸದಸ್ಯರ ಸೇವೆ ಮಾಡುವುದು**

ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಅಥವಾ ಪ್ರತಿ ವ್ಯವಹಾರದಲ್ಲೂ ಡಿವಿಡೆಂಡ್‌ಗೆ ಒತ್ತಾಸೆ ನೀಡುವುದರ ಜೊತೆಗೆ ಖರೀದಿ ಶಕ್ತಿಯನ್ನು ನ್ಯಾಯೋಚಿತ ಮಟ್ಟದಲ್ಲಿ ಕಾಯ್ದುಕೊಳ್ಳುವ ಮೂಲಕ ಆರ್ಥಿಕ ಲಾಭಾಂಶದ ಗುರಿ ಸಾಧಿಸುವುದು ಉದ್ದೇಶವಾಗಿದೆ. ಸಹಕಾರ ಸಂಸ್ಥೆಗಳು ವೃತ್ತಿ ನೈಪುಣ್ಯದ ಸಂಸ್ಕಾರದೊಂದಿಗೆ ಆರ್ಥಿಕ ಉದ್ಯಮದ ಮನೋಭಾವವನ್ನು ರೂಢಿಸಿಕೊಳ್ಳಬೇಕು.

**(ಫ) ಖಾಸಗಿ ಹಿತಕ್ಕಿಂತ ಪರಸ್ಪರ ಗುರಿಗೆ ಪ್ರಾಧಾನ್ಯ ನೀಡಿ ಲಾಭ ಅಥವಾ ನಷ್ಟವನ್ನು ಸರಿಸಮಾನವಾಗಿ ಹಂಚಿಕೊಳ್ಳುವುದು.**

ಹೂಡಿಕೆದಾರರಾಗಿ, ಕಾರ್ಮಿಕರಾಗಿ, ವಿತರಕರಾಗಿ ಹಾಗೂ ಸರಕು ಮತ್ತು ಸೇವೆಗಳ ಗ್ರಾಹಕರಾಗಿ ಸಹಕಾರ ಸಂಸ್ಥೆಗಳ ಸದಸ್ಯರು ಆರ್ಥಿಕ ಅಭಿವೃದ್ಧಿ ಹೊಂದಲು ನೆರವಾಗುವುದೇ ಪ್ರಮುಖ ಉದ್ದೇಶ. ಹೂಡಿಕೆದಾರರಾಗಿ ಹೆಚ್ಚು ಲಾಭ, ಕಾರ್ಮಿಕರಾಗಿ ಹೆಚ್ಚು ವೇತನ ಸಂಸ್ಕರಣಕಾರರಾಗಿ ಹೆಚ್ಚಿನ ಮೌಲ್ಯ ಸೇರ್ಪಡೆ ಹಾಗೂ ಗ್ರಾಹಕರಾಗಿ ಸ್ಪರ್ಧಾತ್ಮಕ ಬೆಲೆಯಲ್ಲಿ ಉತ್ತಮ ಸರಕು ಹಾಗೂ ಸೇವೆಗಳನ್ನು ಸದಸ್ಯರು ಪಡೆಯಲು ಇದು ನೆರವಾಗಬೇಕು.

**(ಗ) ಹೆಚ್ಚುವರಿ ಹಣವನ್ನು ಮರು ಹೂಡಿಕೆಗಾಗಿ ಅಥವಾ ಸಾರ್ವತ್ರಿಕ ಒಳಿತಿಗಾಗಿ ನೀಡುವುದು**

ಸಹಕಾರ ಸಂಸ್ಥೆಗಳು ತಮ್ಮ ಹೆಚ್ಚುವರಿ ಹಣವನ್ನು ಸದಸ್ಯರ ಸಾಮಾನ್ಯ ಒಳಿತಿಗಾಗಿ ಹಾಗೂ ಅಂಥ ಹೆಚ್ಚುವರಿ ಹಣವನ್ನು ವ್ಯಾಪಾರ ಚಟುವಟಿಕೆ ವಿಸ್ತರಣೆಗಾಗಿ ಮರುಹೂಡಿಕೆ ಮಾಡಿದರೆ ಮಾತ್ರ ಅವುಗಳ ಸೇವೆ ಉತ್ತಮ ಎನಿಸುವುದು. ಇದಕ್ಕೆ ತಕ್ಕ ಉತ್ತೇಜನ ನೀಡಬೇಕು.

**2.9 ಎಲ್ಲ ಸದಸ್ಯರಿಗೂ ತಮ್ಮ ಸಂಸ್ಥೆಯ ವ್ಯವಹಾರದಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಸಹಕಾರ ಸಂಸ್ಥೆಗಳು ಸಮಾನ ಅವಕಾಶ ಕಲ್ಪಿಸುವಂತೆ ಉತ್ತೇಜನ ನೀಡಬೇಕು.**

"ಒಂದು ಷೇರು ಒಂದು ಮತ" ಎನ್ನುವುದಕ್ಕೆ ಪ್ರತಿಯಾಗಿ "ಒಬ್ಬ ವ್ಯಕ್ತಿಗೆ ಒಂದು ಮತ" ಎಂಬ ಪರಿಕಲ್ಪನೆಯು ಸಹಕಾರ ಸಂಸ್ಥೆಗಳಲ್ಲಿ ಇದ್ದು ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಿಗಿಂತ ವಿಭಿನ್ನವಾಗಿದೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ಸದಸ್ಯರು ಎಷ್ಟೇ ಷೇರುಗಳನ್ನು ಹೊಂದಿರಲಿ, ಸಹಕಾರ ಸಂಸ್ಥೆಯ ಆಡಳಿತದಲ್ಲಿ ಸದಸ್ಯರ ಧ್ವನಿ ಸರಿಸಮಾನವಾಗಿರುವುದು. ಅದೇ ಕಾಲಕ್ಕೆ ಒಂದೇ ಷೇರು ಹೊಂದಿರುವುದು ಚುನಾವಣೆಯಲ್ಲಿ ಸ್ಪಧಿಸಲಾಗಲಿ ಅಥವಾ ಆಡಳಿತ ಸಮಿತಿಯ ಸದಸ್ಯರಾಗಲೀ ಅಡ್ಡಿ ಎನಿಸುವುದಿಲ್ಲ. ಇಲ್ಲಿ ಸದಸ್ಯರ ಒತ್ತಾಸೆ ಆಧಾರವೇ ವಿನಾ ಅವರು ಹೊಂದಿರುವ ಷೇರುಗಳ ಸಂಖ್ಯೆಯಲ್ಲ.

**2.10 ಕೆಳಕಂಡ ಗುರಿಗಳನ್ನು ಸಾಧಿಸಲು "ಜನತಾ ಬ್ಯಾಂಕ್‌ಗಳಾಗಿ" ತಲೆ ಎತ್ತಲು ಸಹಕಾರ ಸಂಸ್ಥೆಗಳಿಗೆ ಉತ್ತೇಜನ ನೀಡುವುದು**

(ಅ) ಇದುವರೆಗೆ ಉಪಯೋಗಿಸದೇ ಇರುವ ಗ್ರಾಮೀಣ ಸಂಪನ್ಮೂಲಗಳ ಪರಮಾವಧಿ ಶೇಖರಣೆ.

(ಬ) ಸಣ್ಣ ರೈತಾಪಿ ಜನರು ಮತ್ತು ಗ್ರಾಮೀಣ ಕುಶಲ ಕರ್ಮಿಗಳಿಂದ ಠೇವಣಿ ಸಂಗ್ರಹಿಸುವುದು.

(ಸ) ಸಣ್ಣ ಉಳಿತಾಯಗಳಿಂದ ಠೇವಣಿ ಎತ್ತುವುದು.

(ಡ) ಲಾಭದಾಯಕ ಹೂಡಿಕೆಗಳಿಗೆ ಮಾತ್ರ ಸಂಪನ್ಮೂಲ ಬಳಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು.

(ಇ) ಪ್ರತಿ ಸಹಕಾರ ಸಂಸ್ಥೆಯಲ್ಲೂ ಪ್ರತಿ ಅರ್ಹ ಸದಸ್ಯನಿಗೂ ಸಾಲ ಲಭಿಸುವಂತೆ ಮಾಡುವುದು.

(ಫ) ನ್ಯಾಯೋಚಿತ ಉದ್ದೇಶಕ್ಕೆ ಅರ್ಹ ಸದಸ್ಯನಿಗೆ ಸಕಾಲದಲ್ಲಿ ಸಾಲ ಲಭಿಸುವ ಭರವಸೆ ನೀಡುವುದು.

**2.11 ಸ್ವಾರ್ಥಿಗಳು ಹಾಗೂ ಶೋಷಕರು ಸಹಕಾರ ಸಂಸ್ಥೆಗಳ ದುರ್ಬಳಕೆಗೆ ಮುಂದಾಗುವುದನ್ನು ತಡೆಯುವುದು**

ಸದಸ್ಯರ ಆರ್ಥಿಕ ಒಳಿತಿಗೆ ಸಹಕಾರ ಆಂದೋಲನ ಒತ್ತು ನೀಡುತ್ತದೆ. ಸಹಕಾರ ಆಂದೋಲನದ ಆಧಾರದ ಮೇಲೆ ಸ್ಥಾಪನೆಗೊಂಡ ಸಂಸ್ಥೆಗಳು ಸ್ವಾರ್ಥಿಗಳು ಹಾಗೂ ಶೋಷಕರ ಕೈ ಸೇರುವುದನ್ನು ತಪ್ಪಿಸಬೇಕು. ಹೆಸರಾಂತ ಲೆಕ್ಕ ವಿಮರ್ಶಕರಿಂದ ಸ್ವತಂತ್ರವಾಗಿ ಲೆಕ್ಕ ತಪಾಸಣೆ ಮಾಡಿಸಿದರೆ ಅಂಥ ಸ್ವಾರ್ಥಿಗಳು ಹಾಗೂ ಶೋಷಕರ ವಿರುದ್ಧ ಪರಿಣಾಮಕಾರಿ ಕ್ರಮ ಕೈಗೊಳ್ಳಲು, ಪರಿಣಾಮಕಾರಿ ಯಂತ್ರ ರೂಪಿಸಲು ಸಾಧ್ಯವಾಗುತ್ತದೆ.

**2.12 ಸ್ವತಂತ್ರ ಲೆಕ್ಕತಪಾಸಣೆ ಭರವಸೆ**

ಲೆಕ್ಕ ತಪಾಸಣೆ ಯಾವುದೇ ಆಡಳಿತದ ಒಂದು ಸಮಗ್ರ ಭಾಗವಾಗಿದೆಯಾದರೂ ಆತುರದ ನಿರ್ಧಾರಗಳ ವಿರುದ್ಧ ಅಗತ್ಯ ನಿಯಂತ್ರಣ ಒದಗಿಸಿ ಒಂದು ಸಮತೋಲನ ರಕ್ಷಣೆಯ ಸಾಧನವಾಗಿ ಪರಿಣಮಿಸುವುದು. ಅದು ಅಧಿಕಾರದ ದುರುಪಯೋಗವನ್ನು ತಡೆಗಟ್ಟುವುದರ ಜೊತೆಗೆ ಸರಿಯಾದ ನಿರ್ವಾಹಕರ (ಮ್ಯಾನೇಜರ್‌ಗಳ) ಆಯ್ಕೆಗೂ ನೆರವಾಗುವುದು. ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪತ್ರ ತಪಾಸಣೆಯ ಪಾತ್ರ ಸತತವಾಗಿ ಸದಸ್ಯರಿಗೆ ಶಿಕ್ಷಣ ನೀಡುವುದು ಹಾಗೂ ಆಡಳಿತವು ಲಾಭದಾಯಕವಾಗಬಲ್ಲ ಪರಿಪಕ್ವ ನಿರ್ಧಾರ ಕೈಗೊಳ್ಳಲು ಮಾರ್ಗದರ್ಶನ ನೀಡುವುದು. ಆದರೆ ಇದು ದೈನಂದಿನ ಆಡಳಿತದ ಕುಂದುಕೊರತೆಗಳನ್ನು ಅತಿರಂಜಿತವಾಗಿ ವರ್ಣಿಸುವಂತಾಗಬಾರದು. ಅದು ಆಡಳಿತದ ನಿರ್ಧಾರಗಳಿಗೆ ಸಕಾರಾತ್ಮಕ ಕೊಡುಗೆಗಳನ್ನು ನೀಡಬೇಕು. ವೃತ್ತಿನಿರತ ಸಿಬ್ಬಂದಿಗೆ ಮಾತ್ರ ದಕ್ಷತೆ ವೃದ್ಧಿ ಮಾಡುವುದು ಸಾಧ್ಯ ಎಂಬುದು ಗಮನಾರ್ಹ ಅಂಶ.

2.13 ಸಂಘಗಳ ಆಡಳಿತದಲ್ಲಿ ವೃತ್ತಿ ನೈಪುಣ್ಯತೆಯನ್ನು ಅಳವಡಿಸಿಕೊಳ್ಳುವುದು, ಸಾಲ ನೀಡಿಕೆ, ಮಾರಾಟ, ಸಂಸ್ಕರಣದಂಥ ಪ್ರತಿ ಚಟುವಟಿಕೆಯಲ್ಲೂ ದಕ್ಷ ಆಡಳಿತ ಇರಬೇಕು. ದಕ್ಷ ಆಡಳಿತದಿಂದ ಮಾತ್ರ ಪ್ರತಿ ಚಟುವಟಿಕೆಯೂ ಅಪೇಕ್ಷಿತ ಫಲ ತಂದು ಕೊಡುವುದು ಸಾಧ್ಯ. ಇಂದಿನ ಆಡಳಿತದಲ್ಲಿ ವೇಗ, ಗುಣಮಟ್ಟ, ಉತ್ಪಾದಕತೆ, ಪರಿಣಾಮಕಾರಿತ್ವ ಹಾಗೂ ತಂತ್ರಜ್ಞಾನ ಅಳವಡಿಕೆಗೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ಸಹಕಾರ ವಲಯದ ಆಡಳಿತದಲ್ಲಿ ವೃತ್ತಿ ನೈಪುಣ್ಯತೆ ಇರುವುದು ಇಂದಿನ ಅಗತ್ಯ. ವಲಯವಾರು ತಜ್ಞತೆ ಗುರಿಯಾಗಿರಬೇಕು ಹಾಗೂ ಅಗತ್ಯ ವೃತ್ತಿ ನೈಪುಣ್ಯ ಪಡೆಯದ ಹಾಗೂ ಸ್ಪರ್ಧಾತ್ಮಕ ಆಡಳಿತ ಪದ್ಧತಿಗಳಿಗೆ ಹೊಂದಿಕೊಳ್ಳದಿರುವ ತನ್ನ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲು ಸರ್ಕಾರವು ಎಂದೂ ಹಿಂದುಮುಂದು ನೋಡುವುದಿಲ್ಲ.

**2.14 ರಾಷ್ಟ್ರೀಯ ಉದ್ದೇಶ ಈಡೇರಿಕೆಗೆ ಉತ್ತೇಜನ**

ಯಾವುದೇ ಅರ್ಥವ್ಯವಸ್ಥೆಯ ಗುರಿ ತಲಾವಾರು ವರಮಾನ ಹೆಚ್ಚಿಸುವುದೇ ಆಗಿರುತ್ತದೆ. ಅದು ಪ್ರತಿಯಾಗಿ ಉತ್ಪಾದಿತ ಸರಕು ಹಾಗೂ ಸೇವೆಗಳನ್ನು ಅವಲಂಬಿಸಿರುತ್ತದೆ. ಹಾಗಾಗಲು ಸಾಮಾಜಿಕ ಹಾಗೂ ಶೈಕ್ಷಣಿಕ ಮಟ್ಟಗಳು ಸುಧಾರಿತ ರೀತಿಯಲ್ಲಿ ಇರಬೇಕು. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳು ಪರಿಣಾಮಕಾರಿ ಪಾತ್ರ ನಿರ್ವಹಿಸಬಲ್ಲವು. ಸದಸ್ಯರ ಅಗತ್ಯ ಹಾಗೂ ಸಮಗ್ರ ಸಮುದಾಯ ಅಭಿವೃದ್ಧಿ ಅದರ ಕೇಂದ್ರಬಿಂದುವಾಗಿರಬೇಕು.

**2.15 ಸಹಕಾರ ಸಂಸ್ಥೆಗಳಲ್ಲಿ ಸಹಕಾರ**

ಸಹಕಾರಿಗಳಲ್ಲಿ ಹಾಗೂ ಸಹಕಾರ ಸಂಸ್ಥೆಗಳಲ್ಲಿ ಪರಸ್ಪರ ಸಹಕಾರದ ಭಾವನೆ ಮೂಡಿಸುವುದು ಇದರ ಉದ್ದೇಶ. ಒಂದು ಸಹಕಾರ ಸಂಸ್ಥೆ ಇನ್ನೊಂದು ಸಹಕಾರ ಸಂಸ್ಥೆಯೊಂದಿಗೆ ಕೈಜೋಡಿಸಿದರೆ ಉತ್ತಮ ಕಾರ್ಯ ಸಾಧ್ಯ. ಎರಡೂ ಸಂಸ್ಥೆಗಳ ಗುರಿ ಸದಸ್ಯರಿಗೆ ಸ್ವಸಹಾಯ ಒದಗಿಸುವುದಾಗಿರುವುದೇ ಇದಕ್ಕೆ ಕಾರಣ. ಹಣಕಾಸಿನ ಸಹಕಾರ ಸಂಸ್ಥೆಗಳು ಒಂದುಗೂಡಿ ತಮ್ಮ ಹೆಚ್ಚುವರಿ ಹಣವನ್ನು ಸಾರ್ವತ್ರಿಕ ನಿಧಿಯಂತೆ ಹೂಡಿದರೆ ಅದನ್ನು ಸಹಕಾರಿ ವಲಯದಲ್ಲೇ ಸಂಸ್ಕರಣ ಉದ್ಯಮಗಳಲ್ಲಿ ಒದಗಿಸಬಹುದು. ಇದು ಸರ್ಕಾರದ ಮೇಲಿನ ಹೊರೆಯನ್ನು ಕಡಿಮೆ ಮಾಡುವುದು ಹಾಗೂ ಸಮಗ್ರವಾಗಿ ವಲಯದ ಯಶಸ್ವಿ ಅಭಿವೃದ್ಧಿಗೆ ಉತ್ತೇಜನ ನೀಡುವುದು.

ಈ ಮೂಲ ಉದ್ದೇಶಗಳ ಸಾಧನೆಗಾಗಿ ಸರ್ಕಾರದ ಪ್ರಯತ್ನ

**3.1 ಈಗಿರುವ ಸಹಕಾರ ಶಾಸನಗಳಡಿ ಇರುವ ನಿಯಂತ್ರಣಗಳನ್ನು ಕಡಿಮೆ ಮಾಡಲು ಶಾಸನ ತರುವುದು ಹಾಗೂ ಸಹಕಾರ ಉಪಕ್ರಮಗಳು ಸ್ವತಂತ್ರವಾಗಿ ನಡೆಯುವುದು ಸಾಧ್ಯವಾಗುವಂಥ ವಾತಾವರಣ ಮೂಡಿಸುವುದು.**

3.2 ಸದಸ್ಯರ ಸ್ವಂತ ಸಂಪನ್ಮೂಲಗಳ ಆಧಾರದ ಮೇಲೆಯೇ ಸ್ಥಾಪನೆಗೊಂಡ ಸಹಕಾರ ಸಂಸ್ಥೆಗಳಿಗೆ ಹಾಗೂ ಸರ್ಕಾರದಿಂದ ಯಾವುದೇ

ನೆರವನ್ನು ಕೇಳದ ಸಂಸ್ಥೆಗಳಿಗಾಗಿ ಒಂದು ಹೊಸ ಹಾಗೂ ಪ್ರತ್ಯೇಕವಾದ ಶಾಸನ ರೂಪಿಸುವುದು. ಇಂಥಹ ಒಂದು ಹೊಸ ಶಾಸನವನ್ನು ಆಯ್ಕೆ ಮಾಡಿಕೊಳ್ಳುವ ಸಹಕಾರ ಸಂಸ್ಥೆಗಳು ತಮ್ಮ ಸ್ವಂತ ಉಪಕ್ರಮಗಳಿಂದಲೇ ತಮ್ಮ ವಹಿವಾಟು ನಡೆಸುತ್ತವೆ. ಆಡಳಿತವು ಸಂಪೂರ್ಣವಾಗಿ ತನ್ನ ಸರ್ವಸದಸ್ಯರ ಸಭೆಗೆ ಉತ್ತರದಾರನಾಗಿರುತ್ತದೆ.

3.3 ಪ್ರಜಾಸತ್ತಾತ್ಮಕವಾಗಿ ರಚಿತಗೊಂಡ ಶೃಂಗ ಸಂಸ್ಥೆಯಾದ ಒಂದು ಫೆಡರಲ್ ಸಹಕಾರ ಸಂಸ್ಥೆಯನ್ನು ಒದಗಿಸುವುದು. ಎಲ್ಲ ಸಹಕಾರ ಸಂಸ್ಥೆಗಳ ಆಡಳಿತವನ್ನು ನಿಯಂತ್ರಿಸಿ ಅಗತ್ಯ ನಿರ್ದೇಶನ ನೀಡುವ ಅಧಿಕಾರ ಈ ಸಂಸ್ಥೆಗೆ ನೀಡುವುದು.

3.4 ಎಲ್ಲ ಮಟ್ಟದ ಸಹಕಾರ ಸಂಸ್ಥೆಗಳಿಂದ ಹಂತಹಂತವಾಗಿ ಸರ್ಕಾರದ ಇಕ್ವಿಟಿ ಹಣ ಹಾಗೂ ಸಿಬ್ಬಂದಿಯನ್ನು ಹಿಂದಕ್ಕೆ ಕರೆಸಿಕೊಳ್ಳುವುದು.

3.5 ರಿಜಿಸ್ಟ್ರಾರ್ ಪಾತ್ರವನ್ನು ಮಿತ್ರ, ದಾರ್ಶನಿಕ ಹಾಗೂ ಮಾರ್ಗದರ್ಶಕನಾಗಿರಲು ಮಿತಗೊಳಿಸುವುದು ಮತ್ತು ಅದು ತರಬೇತಿ ಪಡೆದ ಮಾನವ ಶಕ್ತಿ ಹಾಗೂ ತಾಂತ್ರಿಕ ಜ್ಞಾನ ನೀಡಿಕೆಯ ಕೇಂದ್ರವಾಗಿರುವಂತೆ ನೋಡಿಕೊಳ್ಳುವುದು.

3.6 ಸಹಕಾರ ಸಂಸ್ಥೆಗಳು ಸ್ವಪ್ರೇರಣೆಯಿಂದ ಜನ ತಂತ್ರಾತ್ಮಕವಾಗಿ ರೂಪುಗೊಂಡು ಆರ್ಥಿಕ ಉದ್ಯಮಗಳಾಗಿ ಸ್ವಾಯತ್ತಾಧಿಕಾರದಿಂದ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸುವುದು. ಈ ಸಂಸ್ಥೆಗಳು ತಮ್ಮ ಸದಸ್ಯರಿಗೆ ಮಾತ್ರ ಉತ್ತರದಾರರಾಗಿ ಹೊಣೆ ವಹಿಸುವುದು.

3.7 ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಣೆಯ ಸಾಧನಗಳಾಗಿ ಕಾರ್ಯ ಮಾಡಲು ಸಾಧ್ಯವಾಗುವಂಥ ವಾತಾವರಣ ಸೃಷ್ಟಿ ಮಾಡುವುದು.

3.8 ಸಹಕಾರ ತತ್ವಗಳು ಹಾಗೂ ವೃತ್ತಿ ನೈಪುಣ್ಯದ ಆಡಳಿತ ಪದ್ಧತಿ ಅನುಸರಿಸಿ ತಮ್ಮ ವ್ಯವಹಾರ ನಡೆಸುವ ಸಹಕಾರ ಸಂಸ್ಥೆಗಳನ್ನು ಮಾನ್ಯ ಮಾಡಿ ಉತ್ತೇಜನ ನೀಡುವುದು.

3.9 ಸದಸ್ಯರ ಆರ್ಥಿಕ ಹಿತದೃಷ್ಟಿಯಿಂದ ವಿವಿಧೋದ್ದೇಶದ ಘಟಕಗಳಾಗಿ ದಕ್ಷತೆಯಿಂದ ಠೇವಣಿ ಸಂಗ್ರಹಣ ಮಾಡುವ ಹಾಗೂ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ಸ್ಥಳೀಯ ಸಹಕಾರ ಸಂಸ್ಥೆಗಳನ್ನು ಮಾನ್ಯ ಮಾಡುವುದು.

3.10 ರಾಜ್ಯ ಸರ್ಕಾರ ಹಾಗೂ ಲಾಭಗಳಿಸುವ ಸಹಕಾರ ಸಂಸ್ಥೆಗಳು ಸರಿಸಮಾನವಾಗಿ ಕೊಡುಗೆಗಳನ್ನು ನೀಡಬೇಕಾದ "ಸಹಕಾರ ಅಭಿವೃದ್ಧಿ ನಿಧಿ" ಎಂಬ ಒಂದು ಮೂಲ ನಿಧಿಯನ್ನು ರೂಪಿಸುವುದು. ಯಾವುದೇ ವೈಯಕ್ತಿಕ ಸಹಕಾರ ಸಂಸ್ಥೆಯು ತನ್ನ ವಂತಿಕೆಯನ್ನು ವರ್ಷವೊಂದರ ಲಾಭದ ಶೇಕಡ 15ಕ್ಕೆ ಮಿತಗೊಳಿಸುವುದು.

3.11 ರಾಜ್ಯದಲ್ಲಿ ಸಹಕಾರ ಆದರ್ಶ, ಧ್ಯೇಯಗಳನ್ನು ಪ್ರಚಾರ ಮಾಡಲು ಆಡಳಿತ, ಸಂಶೋಧನೆ, ಅಭಿವೃದ್ಧಿ, ಮಾಹಿತಿ, ಶಿಕ್ಷಣ ಹಾಗೂ ಸಂಪರ್ಕ ಸಾಧನಗಳಿಗಾಗಿ ಬಜೆಟ್‌ನಲ್ಲಿ ಹಣ ಮೀಸಲಿಡುವುದು.

3.12 ಒಂದು ಪಂಚಾಯಿತಿ ಪ್ರದೇಶದಲ್ಲಿ ಸಹಕಾರ ಸಂಸ್ಥೆಗಳನ್ನು ವಿವಿಧೋದ್ದೇಶದ ಘಟಕಗಳನ್ನಾಗಿ ಅಭಿವೃದ್ಧಿಪಡಿಸುವುದು ಸಾಧ್ಯವಾಗುವಂಥ ವಾತಾವರಣವನ್ನು ಸೃಷ್ಟಿಸುವುದು. ಈ ಸಂಸ್ಥೆಗಳು ಸಾಲ, ಕೃಷಿ ಹಾಗೂ ಕೃಷಿಯೇತರ ಉಪಕರಣಗಳ ವಿತರಣೆ, ಕೃಷಿ ಹಾಗೂ ಅದಕ್ಕೆ ಸಂಬಂಧಪಟ್ಟ ವಸ್ತುಗಳ ಪೂರೈಕೆ, ಸಂಗ್ರಹಣೆ, ದಾಸ್ತಾನು ಹಾಗೂ ಮಾರುಕಟ್ಟೆ ಸಂಸ್ಕರಣ ಮತ್ತು ಗ್ರಾಹಕ ವಸ್ತುಗಳ ಪೂರೈಕೆಯಂಥ ಸಮಸ್ತ ಕಾರ್ಯವನ್ನು ನಿರ್ವಹಿಸುವುದು.

3.13. ಒಂದು ಪಂಚಾಯಿತಿ ಪ್ರದೇಶದಲ್ಲಿ ಭೂಮಿ, ನೀರು, ಖನಿಜ, ಪ್ರಾಣಿ ಮತ್ತಿತರ ಸಂಪನ್ಮೂಲಗಳ ಬಳಕೆಯಲ್ಲಿ ಪಂಚಾಯಿತಿಗಳೊಂದಿಗೆ ಅರ್ಥಪೂರ್ಣವಾಗಿ ಕಲೆತು ಸಹಕರಿಸಿ ಸಹಕಾರ ಸಂಸ್ಥೆಗಳು ಕಾರ್ಯ ಮಾಡಲು ತಕ್ಕ ಪರಿಸ್ಥಿತಿಯನ್ನು ನಿರ್ಮಿಸುವುದು.

3.14. ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ಆರ್ಥಿಕ ಸಂಪತ್ತನ್ನು ಕ್ರೋಢೀಕರಿಸಲು ಹಾಗೂ ನಾನಾ ಆರ್ಥಿಕ ಯೋಜನೆಗಳನ್ನು ಕೈಗೊಳ್ಳಲು ಸಹಕಾರ ಸಂಸ್ಥೆಗಳೊಂದಿಗೆ ಕೈಗೂಡಿಸಲು ತಕ್ಕ ಪರಿಸ್ಥಿತಿಯನ್ನು ಕಲ್ಪಿಸುವುದು.

3.15. ಗ್ರಾಮೀಣ ಆರ್ಥಿಕ ಅಭಿವೃದ್ಧಿ ಸಾಧನೆಗೆ ರಾಜಕೀಯವಾಗಿ ಜನ ತಂತ್ರಾತ್ಮಕ ರೀತಿಯಲ್ಲಿ ರೂಪುಗೊಂಡ ಪಂಚಾಯಿತಿಗಳು ಹಾಗೂ ಸಹಕಾರ ಸಂಸ್ಥೆಗಳ ನಡುವೆ ಸೂಕ್ತ ಸಹಯೋಗ ಅಗತ್ಯವಾಗಿ ಇರಬೇಕು ಎಂಬುದನ್ನು ಮಾನ್ಯ ಮಾಡುವುದು.

# ಅಧ್ಯಾಯ – 4

# ಸಹಕಾರಿ ತತ್ವಗಳು

**ಕಲಂ.67 : ಸಹಕಾರಿ ತತ್ವಗಳು :**

ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾದ ಸಹಕಾರಿಗಳು, ಸಾಧ್ಯವಾದಷ್ಟು ಮಟ್ಟಿಗೆ, ಈ ಕೆಳಗಿನ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ,

1) ಸಹಕಾರಿಗಳು, ತಮ್ಮ ಸೇವೆಯನ್ನು ಬಳಸಿಕೊಳ್ಳಬಲ್ಲ ಹಾಗೂ ಸದಸ್ಯತ್ವದ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಇಚ್ಛೆಯಿರುವ ಎಲ್ಲಾ ವ್ಯಕ್ತಿಗಳಿಗೆ, ಲಿಂಗಬೇಧವಿಲ್ಲದೆ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ಮುಕ್ತವಾಗಿರುವ ಸ್ವಯಂ ಸೇವಾ ಸಂಸ್ಥೆಗಳಾಗಿರುತ್ತವೆ.

2) ಸಹಕಾರಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು, ಅವುಗಳ ಕಾರ್ಯನೀತಿಯನ್ನು ರೂಪಿಸುವ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವ ಸದಸ್ಯರಿಂದ ನಿಯಂತ್ರಿತವಾದ ಸಂಸ್ಥೆಗಳಾಗಿರುತ್ತವೆ. ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುವ ಪುರುಷರು ಮತ್ತು ಮಹಿಳೆಯರು ಸದಸ್ಯತ್ವಕ್ಕೆ ಜವಾಬ್ದಾರರಾಗಿರುತ್ತಾರೆ. ಪ್ರಾಥಮಿಕ ಸಹಕಾರಿಗಳ ಸದಸ್ಯರು ಸಮನಾದ ಮತಚಲಾವಣೆ ಹಕ್ಕನ್ನು ಹೊಂದಿರುತ್ತಾರೆ (ಒಬ್ಬ ಸದಸ್ಯ, ಒಂದು ಮತ) ಮತ್ತು ಇತರ ಹಂತಗಳಲ್ಲಿ ಸಹಕಾರಿಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿಸಲಾಗಿದೆ.

3) ಸದಸ್ಯರು ತಮ್ಮ ಸಹಕಾರಿಗೆ ನ್ಯಾಯಸಮ್ಮತವಾಗಿ ವಂತಿಗೆ ನೀಡುತ್ತಾರೆ ಮತ್ತು ಅದರ ಬಂಡವಾಳವನ್ನು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆ ಬಂಡವಾಳದ ಕಡೇ ಪಕ್ಷ ಒಂದು ಭಾಗ ಸಾಮಾನ್ಯವಾಗಿ ಸಹಕಾರಿಯ ಸಾಮಾನ್ಯ ಸ್ವತ್ತಾಗಿರುತ್ತದೆ. ಸದಸ್ಯತ್ವದ ಷರತ್ತಾಗಿ ಚಂದಾ ನೀಡಲಾದ ಬಂಡವಾಳದ ಮೇಲೆ ಸಾಮಾನ್ಯವಾಗಿ ಅವು ಸೀಮಿತ ಪರಿಹಾರವನ್ನು ಪಡೆಯುತ್ತವೆ. ಸದಸ್ಯರು, ಹೆಚ್ಚುವರಿ ಹಣವನ್ನು ಈ ಮುಂದಿನ ಯಾವುದೇ ಅಥವಾ ಎಲ್ಲಾ ಉದ್ದೇಶಗಳಿಗೆ ಹಂಚಿಕೆ ಮಾಡುತ್ತಾರೆ; ಕಡೆಯ ಪಕ್ಷ ಮೀಸಲು ನಿಧಿಯ ಒಂದು ಭಾಗ ಅವಿಭಾಜ್ಯವಾಗಿರುವಂತೆ ಅದನ್ನು ಸ್ಥಾಪಿಸುವ ಮೂಲಕ ಸಹಕಾರಿಯ ಅಭಿವೃದ್ಧಿ, ಸಹಕಾರಿಯೊಡನೆ ಸದಸ್ಯರಿಗಿರುವ ವ್ಯವಹಾರಗಳ ಪ್ರಮಾಣಕ್ಕನುಗುಣವಾಗಿ ಸದಸ್ಯರಿಗೆ ಅನುಕೂಲ ಕಲ್ಪಿಸುವುದು ಮತ್ತು ಸದಸ್ಯರಿಂದ ಅನುಮೋದನೆಯಾದ ಇತರ ಚಟುವಟಿಕೆಗಳನ್ನು ಬೆಂಬಲಿಸುವುದು.

4) ಎಲ್ಲಾ ಸಹಕಾರಿಗಳು ಅವುಗಳ ಸದಸ್ಯರಿಂದ ನಿಯಂತ್ರಿತವಾದ ಸ್ವಾಯತ್ತ ಸ್ವಸಹಾಯ ಸಂಸ್ಥೆಗಳಾಗಿವೆ. ಸರ್ಕಾರವೂ ಸೇರಿದಂತೆ ಇತರ ಸಂಘ ಸಂಸ್ಥೆಗಳೊಡನೆ ಸಹಕಾರಿಗಳು ಒಪ್ಪಂದ ಮಾಡಿಕೊಂಡರೆ ಅಥವಾ ಹೊರಗಿನ ಮೂಲಗಳಿಂದ ಬಂಡವಾಳ ಸಂಗ್ರಹಿಸಿದರೆ ಅವು ಅವುಗಳ ಸದಸ್ಯರಿಂದ ಪ್ರಜಾಸತ್ತಾತ್ಮಕ ನಿಯಂತ್ರಣಕ್ಕೊಳಪಡುತ್ತದೆಂಬ ಹಾಗೂ ಅವು ತಮ್ಮ ಸಹಕಾರಿ ಸ್ವಾಯತ್ತತೆಯನ್ನು ಉಳಿಸಿಕೊಂಡು ಬರುತ್ತದೆಂಬ ನಿಬಂಧನೆಗಳ ಮೇಲೆ ಹಾಗೆ ಮಾಡುತ್ತವೆ.

5) ಸಹಕಾರಿಗಳ ಅಭಿವೃದ್ಧಿಗೆ ತಮ್ಮ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಲನುವಾಗುವಂತೆ ಸಹಕಾರಿಗಳು, ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ನೌಕರರಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ. ಇದರಿಂದ ಅವರು ಸಹಕಾರಿಯ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ಅವು ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಯುವಜನರಿಗೆ ಮತ್ತು ಮುಖಂಡರುಗಳಿಗೆ ತಿಳಿಸುತ್ತವೆ.

6) ಸಹಕಾರಿಗಳು ತಮ್ಮ ಸದಸ್ಯರಿಗೆ ಹೆಚ್ಚು ಪರಿಣಾಮಕಾರಿ ಸೇವೆಯನ್ನು ಸಲ್ಲಿಸುತ್ತವೆ ಮತ್ತು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘಟಕಗಳ ಮೂಲಕ ಜೊತೆಗೂಡಿ ಕೆಲಸ ಮಾಡುವುದರಿಂದ ಸಹಕಾರಿ ಆಂದೋಲನವನ್ನು ಬಲಪಡಿಸುತ್ತವೆ.

7) ಸದಸ್ಯರ ಅವಶ್ಯಕತೆಗಳಿಗೆ ಗಮನ ನೀಡುವುದರ ಜೊತೆ ಸಹಕಾರಿಗಳು ಅವುಗಳ ಸದಸ್ಯರು ಒಪ್ಪಿದ ಕಾರ್ಯನೀತಿಗಳ ಮೂಲಕ ಅವರವರ ಕೋಮುಗಳ ಸತತ ಅಭಿವೃದ್ಧಿಗೆ ಶ್ರಮಿಸುತ್ತವೆ.

ಪ್ರಥಮ ಬಾರಿಗೆ ಭಾರತದ ಯಾವುದೇ ರಾಜ್ಯ ಕಾಯಿದೆ ರೂಪಿಸಿದ ಸಹಕಾರಿ ತತ್ವಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯಿದೆ 1997 ರಲ್ಲಿ, ಅದ್ಯಾಯ X ರಲ್ಲಿ, ಸೇರಿಸಿದೆ. ಎಲ್ಲಾ ಕಾಯಿದೆಗಳು ಸಹಕಾರಿ ತತ್ವಗಳನ್ನು ಪಾಲಿಸಬೇಕೆಂದು ಹೇಳಿದ್ದರೂ, ಸಹಕಾರಿ ತತ್ವಗಳು ಯಾವುವು ಎಂದು ಸೂಚಿಸಿಲ್ಲ.

ಸೌಹಾರ್ದ ಕಾಯಿದೆ ರಚನೆ ಉದ್ದೇಶ ಈ ಕೆಳಕಂಡಂತೆ ಹೇಳಿಕೆಯನ್ನು ವಿಧಾನ ಮಂಡಳಿಗಳಿಗೆ ಸರ್ಕಾರ ನೀಡಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ದಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮ ......................."

ಸೌಹಾರ್ದ ಕಾಯಿದೆಯನ್ನು ರಚಿಸುವಾಗ ಸರ್ಕಾರಕ್ಕೆ ಸ್ಪಷ್ಟ ಗುರಿ ಇದ್ದದ್ದು, 1991 ರಲ್ಲಿ ಭಾರತ ಸರ್ಕಾರ ರಾಷ್ಟ್ರದಲ್ಲಿ ಏಕ ರೀತಿ ಸಹಕಾರ ಕಾಯಿದೆ ರೂಪಿಸಲು ಯೋಜನಾ ಆಯೋಗದ ಮುಖಾಂತರ (ಶ್ರೀ ಚೌಧರಿ ಬ್ರಹ್ಮಪ್ರಕಾಶ್ ಸಮಿತಿ) ಮಾದರಿ ಕಾಯಿದೆ ರವಾನಿಸಿ, ರಾಜ್ಯಗಳಿಗೆ ಅದನ್ನು ಅಳವಡಿಸಿಕೊಳ್ಳಲು ಸೂಚಿಸಿತ್ತು. ಅದರ ಅಳವಡಕ್ಕೆ ಸಂದರ್ಭದಲ್ಲಿ, 1959 ಕಾಯಿದೆ ಜೊತೆಗೆ, ಉದಾರೀಕೃತ ಮಾದರಿ ಕಾಯಿದೆ ನೀತಿಯನ್ನು, ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಯಂತ್ರಣ ಕಾಯಿದೆ ರೂಪಿಸಲು ತಾತ್ವಿಕ ತೀರ್ಮಾನ ತೆಗೆದುಕೊಂಡಿತು. ಇದರ ಜೊತೆಗೆ 1959ರ ಕಾಯಿದೆಯಲ್ಲಿನ ಸರ್ಕಾರ/ನಿಬಂಧಕರ ನಿಯಂತ್ರಣವಿರುವ ಬಹಳಷ್ಟು ಅವಕಾಶಗಳನ್ನು ಕಡಿತಗೊಳಿಸಬೇಕೆಂದು ತೀರ್ಮಾನದ ಜೊತೆಗೆ ಪ್ರತ್ಯೇಕ ಸೌಹಾರ್ದ ಕಾಯಿದೆ ರಚಿಸಿ ರಾಷ್ಟ್ರಕ್ಕೆ ಒಂದು ಹೊಸ ಮಾದರಿ ಕಾಯಿದೆ ರೂಪಿಸಲು ತೀರ್ಮಾನಿಸಿತು. ಇದಕ್ಕೆ ಪೂರ್ಣ ಅರ್ಥ ನೀಡಲು ಪ್ರಮುಖ ಚಿಂತನೆ ನಡೆದು ಈ ಸೌಹಾರ್ದ ಕಾಯಿದೆಯಲ್ಲಿ (1) ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಧನ ಪಡೆಯಲು ಅವಕಾಶ ಇರತಕ್ಕದ್ದಲ್ಲ. (2) ಪ್ರತಿಯಿಂದ ನೋಂದಾಯಿತ ಸಹಕಾರಿ ಸಂಯುಕ್ತ ಸಹಕಾರಿಯು ಸದಸ್ಯನಾಗತಕ್ಕದ್ದು. (3) ವಿಚಾರಣೆ/ಪರಿವೀಕ್ಷಣೆ ಮತ್ತು ಲೆಕ್ಕ ತಪಾಸಣೆಗೆ ಉದಾರೀಕರಣ ನೀತಿ ಅನುಸರಿಸಿ ಸಂಯುಕ್ತ ಸಹಕಾರಿಗೆ ಅಧಿಕಾರ ನೀಡುವುದು (4) ಮಂಡಳಿಗಳನ್ನು ರದ್ದು ಪಡಿಸಿ ಆಡಳಿತಾಧಿಕಾರಿ ವಿಶೇಷಾಧಿಕಾರಿ ನೇಮಕ (5) ಸಮಾಪನೆ, ಮತ್ತು ಪ್ರಮುಖವಾಗಿ ನಿಬಂಧಕರ ಅಧಿಕಾರವನ್ನು ಚಲಾಯಿಸಲು ಪ್ರಜಾ ಪ್ರಭುತ್ವದಡಿ ರಚನೆಯಾದ ಒಂದು ಮಂಡಳಿಗೆ, ಶಾಸನಾತ್ಮಕ ಅಧಿಕಾರ ನೀಡುವುದು ಪ್ರಮುಖವಾದ ಅಂಶಗಳು. ಇದರ ಜೊತೆಗೆ ಯಾವುದೇ ಸಹಕಾರಿ ಕಾಯಿದೆಯಲ್ಲಿ ಸೇರಿಸದ, ಸಹಕಾರಿ ತತ್ವಗಳನ್ನು ಕಾಯಿದೆಯಲ್ಲಿ ಸೇರಿಸಬೇಕೆಂದು ತೀರ್ಮಾನ ತೆಗೆದುಕೊಂಡ ಒಂದು ಐತಿಹಾಸಿಕ ಚಿಂತನೆ ಸಹಕಾರಿ ತತ್ವಗಳನ್ನು ಸಂಕ್ಷಿಪ್ತವಾಗಿ ನಮೂದಿಸುವುದಾದರೆ, ಈ ಕೆಳಕಂಡಂತೆ ಅರ್ಥ್ಯಸತಕ್ಕದ್ದು.

1) ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವ

2) ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ

3) ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು

4) ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ

5) ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ

6) ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ ಹಾಗೂ

7) ಸಾಮಾಜಿಕ ಕಳಕಳಿ.

ಸೌಹಾರ್ದ ಕಾಯಿದೆಯಲ್ಲಿ ಕಲಂ.67ರಲ್ಲಿ ಸೇರಿಸಿದ ಏಳು ತತ್ವಗಳಲ್ಲಿ ಪದಗಳ ವ್ಯತ್ಯಾಸ ಇದ್ದರೂ, ಅದೇ ನೀತಿಯನ್ನು ಗುರುತಿಸಿದೆ (1) ಮುಕ್ತವಾಗಿರುವ ಸ್ವಯಂ ಸೇವಾ ಸಂಸ್ಥೆಗಳು (2) ಒಬ್ಬ ಸದಸ್ಯ ಒಂದು ಮತ (3) ಸದಸ್ಯರಿಗೆ ಸೇವೆಗಳನ್ನು ಕಲ್ಪಿಸುವುದು (4) ಸ್ವಾಯತ್ತತೆ (5) ಶಿಕ್ಷಣ ತರಬೇತಿ ಹಾಗೂ ಯುವ ಜನರ ತಯಾರಿ (6) ಸಹಕಾರಿ ಆಂದೋಲನ ಬಲ ಪಡಿಸುವುದು ಮತ್ತು (7) ಕೋಮುಗಳ ಸತತ ಅಭಿವೃಧಿಗೆ ಶ್ರಮಿಸುವುದು.

ಅಂತರ ರಾಷ್ಟ್ರೀಯ ಸಹಕಾರಿ ಒಕ್ಕೂಟ ಪ್ರಾರಂಭದಲ್ಲಿ ಆರು ಸಹಕಾರ ತತ್ವಗಳನ್ನು ರೂಪಿಸಿತ್ತು ಮತ್ತು ಯಾವುದೇ ರಾಷ್ಟ್ರ ಸಹಕಾರ ಕಾಯಿದೆಯಲ್ಲಿ ನೋಂದಾಯಿಸಿದ ಸಂಸ್ಥೆ ಈ ತತ್ವಗಳಿಗೆ ಪೂರಕವಾಗಿರಬೇಕೆಂದು ರೂಪಿಸಿತು. ಈ ತತ್ವಗಳಿಗೆ 1995 ರಲ್ಲಿ ಹೊಸದಾಗಿ ಸಾಮಾಜಿಕ ಕಳಕಳಿ ಎಂಬ ಏಳನೇ ತತ್ವನ್ನು ಸೇರಿಸಿತು. ಈ ತತ್ವಗಳನ್ನು ಒಂದೊಂದಾಗಿ ವಿಮರ್ಷೆ ಮಾಡೋಣ.

ಈ ಲೇಖನದ ಪ್ರಾರಂಭದಲ್ಲಿ ಕಾಯಿದೆ ಕಲಂ.67ರನ್ನು ಉಲ್ಲೇಖಿಸಿದೆ. ಅದರಲ್ಲಿ ಸೌಹಾರ್ದ ಕಾಯಿದೆ ರಚನೆಯ ಉದ್ದೇಶವನ್ನು ವಿವರಿಸಿದೆ. ಈ ಮೇಲ್ಕಂಡ 7 ಸಹಕಾರಿ ತತ್ವಗಳನ್ನು ಸೌಹಾರ್ದ ಕಾಯಿದೆ ಉದ್ದೇಶದಲ್ಲಿ ದಾಖಲಿಸಿದೆ. ಇವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತೆ ನೀಡಬಹುದು.

**1) ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವ :** ಸಹಕಾರ ಸಂಸ್ಥೆ ಪ್ರಾರಂಭಿಸಿದಾಗಿ, ಸಮಾನ ಮನಸ್ಕರು ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಢಿಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಸಂಸ್ಥೆ ಹಾಗೂ ಇದಕ್ಕೆ ಮೂಲ ತತ್ವ "ಎಲ್ಲರಿಗಾಗಿ ನಾನು ಮತ್ತು ನನಗಾಗಿ ಎಲ್ಲರು".

ಅಂದರೆ ಕೂಡಿ ಬಾಳುವುದೇ ಜೀವನ ಎಂದು ಅರ್ಥ್ಯಸತಕ್ಕದ್ದು. ಸಹಕಾರಿ ಸದಸ್ಯನಾಗ ಬಯಸುವ ವ್ಯಕ್ತಿ ಪ್ರವರ್ತಕರ ಜೊತೆ ಸಮಾನ ಮನಸ್ಸಿನಿಂದ ಭಧ್ದನಾಗಬೇಕು. ಮುಕ್ತ ಮನಸ್ಸಿನಿಂದ ಸದಸ್ಯನಾಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ/ರಾಜಕೀಯ ಮುಖಂಡರು ತಮ್ಮ ಪ್ರತಿಷ್ಠೆಗಾಗಿ ಸಹಕಾರಿಗಳ ನೋಂದಣಿ ಮಾಡಿಸಿಕೊಳ್ಳುವಾಗಿ, ಈ ಮೂಲ ನೀತಿಗೆ ಸಹಮತ ಇಲ್ಲದೇ ಇದ್ದರೂ, ಸದಸ್ಯರಾಗುತ್ತಾರೆ. ಸಮಾಜದ ಒಂದು ಮರ್ಗ, ಪಂಗಡ, ಗುಂಪು ತನ್ನ ಪ್ರತಿಷ್ಠೆಗಾಗಿ ಮತ್ತು ತನ್ನವರ ಆರ್ಥಿಕ ಬೆಳವಣಿಗೆಗಾಗಿ ಸಂಸ್ಥೆ ನೋಂದಾಯಿಸುವ ಪ್ರವೃತ್ತಿ ಬೆಳೆಯುತ್ತದೆ. ಇದಕ್ಕೆ ಪೂರಿಕವಾಗಿ ಕಾಯಿದೆಯಲ್ಲಿ ಸಂಯುಕ್ತ ಸಹಕಾರಿ ತನ್ನ ಕ್ಷೇತ್ರಾಧಿಕಾರಿಗಳ ಮೂಲಕ ಸಂಸ್ಥೆಗಳನ್ನು ಹುಟ್ಟು ಹಾಕಲು ಜವಾಬ್ದಾರಿ ನಿರ್ವಹಿಸುತ್ತದೆ. ಇವರಲ್ಲಿ ಸಮಾನತೆಗಿಂತ ಸ್ವಾಹಿತಾಸಕ್ತಿ ಪ್ರಾಮುಖ್ಯತೆ ಪಡೆಯುತ್ತದೆ. ಆರ್ಥಿಕವಾಗಿ ಸಬಲರಾದ ವ್ಯಕ್ತಿಗಳು ಸಹಕಾರಿ ಸ್ಥಾಪಿಸಿ, ತಾನೇ ಬೆಳವಣಿಗೆ ಪ್ರಯತ್ನಿಸುತ್ತವೆ. ಅಂದರೆ ಉಳ್ಳವನೇ ಹೆಚ್ಚು ಗಳಿಸುವುದು. ಸ್ವಯಂ ಪ್ರೇರಿತ ಮುಕ್ತ ಸದಸ್ಯತ್ವಕ್ಕೆ ಮೂಲ ಅರ್ಥದಂತೆ ಸದಸ್ಯತ್ವ ನೀಡುತ್ತಿಲ್ಲ/ಪಡೆಯುತ್ತಿಲ್ಲ. ಸಹಕಾರಿ ತತ್ವಗಳಲ್ಲಿ ನಂಬಿಕೆ ಇಲ್ಲದೇ ಇದ್ದರೂ, ಸದಸ್ಯರಾಗಿ, ಸದಸ್ಯರ ಹಿತಾಸಕ್ತಿಗೆ ಬದಲಾಗಿ ತಮ್ಮ ಹಿತಾಸಕ್ತಿಗೆ ಪೂರಕವಾಗಿ ಸಹಕಾರಿಗಳ ನೋಂದಾವಣೆ ಮಾಡಲಾಗುತ್ತದೆ. ಇದಕ್ಕಾಗಿ ಸಂಯುಕ್ತ ಸಹಕಾರಿ, ಸಾಮಾನ್ಯರಿಗೆ, ಸಹಕಾರಿ ನೋಂದಣಿಯಿಂದ ಸದಸ್ಯನಾಗುವ ವ್ಯಕ್ತಿಯ ಆರ್ಥಿಕ ಬೆಳವಣಿಗೆ ಬಗ್ಗೆ ತಿಳುವಳಿಕೆ ನೀಡಿ, ಅವಶ್ಯಕವಿದ್ದಾಗ ಮಾತ್ರ, ಸಹಕಾರಿಗೆ ನೋಂದಣಿ ಮಾಡಿಸುವ ಪ್ರಯತ್ನ ಅವಶ್ಯಕ. ಮುಕ್ತ ಸದಸ್ಯತ್ವ ಎಂದರೆ ಯಾವುದೇ ವ್ಯಕ್ತಿ ಸಹಕಾರಿ ಸದಸ್ಯನಾಗಬೇಕೆಂದು ಬಯಸಿದಾಗ ಅದನ್ನು ಸಹಕಾರಿ ಬಗ್ಗೆ ನಂಬಿಕೆ ಇದ್ದಾನೆಂದು ಮನದಟ್ಟಾದಾಗ, ಸದಸ್ಯತ್ವ ನೀಡಬೇಕು. ಆದರೆ ಕಾಯಿದೆಯಲ್ಲಿ ಅರ್ಜಿ ಸಲ್ಲಿಸಿದ ವ್ಯಕ್ತಿಗೆ 60 ದಿವಸಗಳಲ್ಲಿ, ಸದಸ್ಯತ್ವದ ಬಗ್ಗೆ ತೀರ್ಮಾನ ತೆಗೆದುಕೊಳ್ಳದೇ ಇದ್ದಾಗ, ಸದಸ್ಯತ್ವ ಸ್ವೀಕರಿಸಲಾಗಿದೆ ಎಂದು ಭಾವಿಸಿಲು ಅವಕಾಶ ಕಲ್ಪಿಸಿರುವುದರಿಂದ, ಮುಕ್ತ ಸದಸ್ಯತ್ವ ಎಂದರೆ, ಅರ್ಜಿ ಕೊಟ್ಟ ಎಲ್ಲರನ್ನು ಸದಸ್ಯರನ್ನಾಗಿ ಮಾಡಿ ಎಂದರ್ಥ. ಇದು ಸಹಕಾರಿ ತತ್ವದ ಮುಕ್ತ ಸದಸ್ಯತ್ವಕ್ಕೆ ಅನ್ವರ್ಥನಾಮ. ಇದರ ಜೊತೆಗೆ ಸಂಯುಕ್ತ ಸಹಕಾರಿ ಸದಸ್ಯತ್ವ ಒಂದು ಸಹಕಾರಿ ನೋಂದಣಿಯಾದ ದಿನದಂದೇ ಸಂಯುಕ್ತ ಸಹಕಾರಿ ಸದಸ್ಯತ್ವ ಪ್ರಾಪ್ತವಾಗುತ್ತದೆ. ಇದರಲ್ಲಿ ಸಹಕಾರಿ ತತ್ವಗಳ ನಂಬಿಕೆ ಅವಶ್ಯಕವೆನಿಸುವುದಿಲ್ಲ. ಸಂಯುಕ್ತ ಸಹಕಾರಿಯಲ್ಲಿ ಈ ಅವಕಾಶ ನೀಡಿರುವ ಉದ್ದೇಶವೆಂದರೆ, 1959ರ ಕಾಯಿದೆಯಲ್ಲಿ ಒಂದು ಜಿಲ್ಲೆಯಲ್ಲಿ 2000 ಸಹಕಾರಿ ಸಂಘಗಳಿದ್ದರೆ, ಸದಸ್ಯತ್ವ ನೀಡುವುದು 200–250 ಸಹಕಾರಿ ಸಂಘಗಳಿಗೆ ಮಾತ್ರ. ಅಂದರೆ ಮಂಡಳಿ ಚುನಾವಣೆಯಲ್ಲಿ ಮತಹಾಕುವ ಸದಸ್ಯರಿಗೆ ಮಾತ್ರ ಸದಸ್ಯತ್ವ ನೀಡಲಾಗುತ್ತಿದನ್ನು ಗಮನಿಸಿ, ಸೌಹಾರ್ದ ಕಾಯಿದೆಯಲ್ಲಿ ನೋಂದಾವಣೆ ದಿನಾಂಕದಂದೇ, ಸಂಯುಕ್ತ ಸಹಕಾರಿ ಸದಸ್ಯತ್ವ ನೀಡಲು ಅವಕಾಶ ಕಲ್ಪಿಸಿದೆ ಎಂಬುದನ್ನು ಗಮನಿಸಬಹುದು.

**2) ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ :** 97ನೇ ಸಂವಿದಾನ ತಿದ್ದುಪಡಿಯಲ್ಲಿ ಈ ನೀತಿಯನ್ನು ಧ್ಯೇಯೋದ್ದೇಶದಲ್ಲಿ ಸೇರಿಸಿದೆ. ಇದನ್ನು ಸೌಹಾರ್ದ ಕಾಯಿದೆಯ ಧ್ಯೇಯೋದೇಶಗಳಲ್ಲಿಯೂ 1997 ರಲ್ಲಿಯೇ ಸೇರಿಸಿದೆ. ಅಂದರೆ ಸಹಕಾರಿ ನೋಂದಣಿ ಮಾಡುವುದು ಸದಸ್ಯರ ಆರ್ಥಿಕ ಬೆಳವಣಿಗೆಗೆ – ಅಂದರೆ ಅವರೇ ಆ ಸಹಕಾರಿಯನ್ನು ನಿಯಂತ್ರಿಸಬೇಕು. ಪ್ರಜಾಪ್ರಭುತ್ವ ನೀತಿಯಲ್ಲಿ ಪ್ರಮುಖ ಅಂಶ, ಚುನಾಯಿತ ಪ್ರತಿನಿಧಿಗಳು – ಅವರ ಆಯ್ಕೆಗೆ, ಸಹಕಾರಿಯ ಪ್ರತಿಯೊಬ್ಬ ಸದಸ್ಯ ಮತ ಚುನಾಯಿಸಿ ಚುನಾಯಿಸಬೇಕು. ಆದರೆ ಒಬ್ಬ ಸದಸ್ಯ ಎಷ್ಟೇ ಷೇರು ಹಣ ಪಾವತಿಸಿದ್ದರೂ, ಅವನಿಗೆ ಒಂದೇ ಮತ. ಕಂಪನಿ ಕಾಯಿದೆಯಡಿ ಸದಸ್ಯ ಹೊಂದಿದ ಷೇರು ಸಂಖ್ಯೆಯ ಮೇಲೆ ಮತಗಳ ಸಂಖ್ಯೆ ನಿಗದಿಯಾಗುವುದು ಸಹಕಾರಿ ಕಾಯಿದೆಗೆ ಅನ್ವಯವಾಗುವುದಿಲ್ಲ. ಪ್ರತಿ ಸದಸ್ಯ ನೀಡಿದ ಒಂದ ಮತದಿಂದ ಆಯ್ಕೆಯಾದ ಮಂಡಳಿ ಸಹಕಾರಿಯ ಆಡಳಿತ ನಿರ್ವಹಣೆ ಮಾಡತಕ್ಕದ್ದು. ಇದಕ್ಕೆ ಹೊರಗಿನ ವ್ಯಕ್ತಿ/ ಸಂಸ್ಥೆ ನಿಯಂತ್ರಿಸಬಾರದು ಎಂಬ ತತ್ವಕ್ಕೆ ಪೂರಕವಾಗಿದೆ. ಇದರ ಜೊತೆಗೆ ಸೌಹಾರ್ದ ಕಾಯಿದೆಯ ಸರ್ಕಾರದ ಪ್ರತ್ಯಕ್ಷ/ಪರೋಕ್ಷ ಸಹಾಯ ಧನ ಪಡೆಯಲು ನಿರ್ಬಂಧ ಇರುವುದರಿಂದ, ಸರ್ಕಾರ ಮಧ್ಯಪ್ರವೇಶ ಮಾಡಲು ಅವಕಾಶವಿಲ್ಲ. ಅದರಂತೆ, ಸಂಯುಕ್ತ ಸಹಕಾರಿಯು ಪ್ರತಿನಿಧಿಯನ್ನು ಸಹಕಾರಿ ಮಂಡಳಿಗೆ ಕಳುಹಿಸಲು ಅವಕಾಶವಿಲ್ಲ. ಅಂದರೆ ಸಹಕಾರಿಯ ಸದಸ್ಯರ ಆಯ್ಕೆ ಮಾಡಿದ ಮಂಡಳಿಯ ಆ ಸಹಕಾರಿಯನ್ನು ನಿಯಂತ್ರಿಸಿದರೆ, ಅದು ಸದಸ್ಯರೇ ನಡೆಸಿದಂತೆ ಎಂದು ಭಾವಿಸತಕ್ಕದ್ದು. ಆದರೆ, ಚುನಾವಣೆ ಸಮಯದಲ್ಲಿ ಸಹಕಾರಿ ಸದಸ್ಯನು ತಮ್ಮ ಮತ ಚಲಾಯಿಸುವಾಗ ಜಾಗೃತರಾಗಿ ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡಿದಾಗ ಮಾತ್ರ ಆ ಸಹಕಾರಿ ಸದಸ್ಯರೇ ನಿಯಂತ್ರಿಸುವ ಎಂಬ ಪದಗಳಿಗೆ ಅರ್ಥ ಬರುತ್ತದೆ.

**1. ಸ್ವಯಂ ಪ್ರೇರಿತ ಹಾಗೂ ಮುಕ್ತ ಸದಸ್ಯತ್ವ :**

ಸಹಕಾರಿ ಸಂಸ್ಥೆಯ ಸ್ಥಾಪನೆಯ ಮೂಲದಲ್ಲಿ ಸಮಾನ ಮನಸ್ಕರು ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಒಟ್ಟುಗೂಡಿಸಿ ಸಂಸ್ಥೆಯನ್ನು ಕಟ್ಟುತ್ತಾರೆ ಎಂದರೆ, ಇದರಲ್ಲಿ ಸಮಾನ ಮನಸ್ಕರಾಗಿರಬೇಕು, ಸ್ವಯಂ ಪ್ರೇರಣೆಯಿಂದ ಸಂಸ್ಥೆ ಕಟ್ಟಬೇಕು ಹಾಗೂ ಮುಕ್ತ ಮತ್ತು ತೆರೆದ ಮನಸ್ಸಿನ ಆಧಾರದ ಮೇಲೆ ಸಹಕಾರ ಸಂಸ್ಥೆ ಸ್ಥಾಪನೆಯಾಗುವುದರಿಂದ, ಇದರಲ್ಲಿ ಯಾವುದೇ ಒತ್ತಾಯಕ್ಕೊಳಗಾಗದೆ, ಒತ್ತಡಕ್ಕೊಳಗಾಗದೆ ಸದಸ್ಯತ್ವ ಸ್ವೀಕರಿಸಬೇಕು. ಇತ್ತೀಚಿನ ದಿನಗಳಲ್ಲಿ ಸಹಕಾರಿ ಕಾಯಿದೆಯಲ್ಲಿ, ರಾಜ್ಯ ಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಸದಸ್ಯತ್ವವನ್ನು ನೀಡುವುದು ಒಂದು ಮೂಲಭೂತ ಹಕ್ಕು ಎಂದು ಪ್ರತಿಪಾದಿಸಲಾಗುತ್ತಿದೆ ಮತ್ತು ಅದಕ್ಕಾಗಿ ರಾಜ್ಯ ಸರ್ಕಾರಗಳು ಒತ್ತಾಯದ ಮೂಲಕ ಸಹಕಾರ ಕಾಯಿದೆಗೆ ತಿದ್ದುಪಡಿ ತಂದು, ಯಾರು ಅರ್ಜಿ ಸಲ್ಲಿಸಿದ್ದಾರೋ ಅವರೆಲ್ಲರಿಗೂ 60 ದಿವಸದೊಳಗಾಗಿ ಸದಸ್ಯತ್ವ ನೀಡದಿದ್ದರೆ, ಸದಸ್ಯನಾಗಿದ್ದಾನೆ ಎಂದು ಸೇರಿಸಲಾಗಿದೆ. ಇದರ ಜೊತೆಗೆ

ಸರ್ಕಾರದ ಯೋಜನೆ ಮೂಲಕವಾಗಿ ಪಾಲು ಬಂಡವಾಳದ ಹಣವನ್ನು ಸರ್ಕಾರವೇ ಭರಿಸುವಂತಹ ಯೋಜನೆಗಳನ್ನು ರೂಪಿಸಲಾಗಿದೆ.ಅಂದರೆ ಮುಕ್ತ ಸದಸ್ಯತ್ವ ಎಂಬುದನ್ನು ಯಾರು ಬೇಕಾದರೂ ಸದಸ್ಯರಾಗಬೇಕೆಂಬ ಅರ್ಥದಲ್ಲಿ ವಿಮರ್ಶಿಸಲಾಗುತ್ತಿದೆಯೇ ಹೊರತು ಸಮಾನಮನಸ್ಕರು ಎಂಬುದಕ್ಕೆ ಬೆಲೆಯಿಲ್ಲದಾಗಿದೆ.

**2 ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ :**

ಸಹಕಾರಿ ಸಂಸ್ಥೆಗಳ ಆಡಳಿತ ನಿರ್ವಹಣೆ ಪ್ರಜಾಸತ್ತಾತ್ಮಕವಾಗಿ ನಡೆಯಬೇಕೆಂದು ಮತ್ತು ಅದನ್ನು ಸದಸ್ಯರೇ ನಿರ್ವಹಿಸಬೇಕು ಎಂಬುದಕ್ಕೆ 1904 ಕಾಯಿದೆಯಲ್ಲಿ ನಿರೂಪಿಸದಿದ್ದರೂ, ಸಹಕಾರಿ ತತ್ವಗಳಲ್ಲಿ, ಈ ಮೇಲ್ಕಂಡ ತತ್ವವನ್ನೂ ಅಳವಡಿಸಬೇಕೆಂದು ಇರುವುದರಿಂದ, ಸಹಕಾರಿ ಕಾಯಿದೆಯಲ್ಲಿ, ಚುನಾಯಿತ ಆಡಳಿತ ಮಂಡಳಿಗಳು ಇರಬೇಕೆಂದು ಅವಕಾಶವನ್ನು ಕಲ್ಪಿಸಲಾಗಿತ್ತು. ಅದೇ ರೀತಿ ಎಲ್ಲಾ ಸಹಕಾರಿ ಕಾಯಿದೆಯಲ್ಲಿ, ಸಹಕಾರಿ ಸಂಸ್ಥೆಗೆ ಒಂದು ಚುನಾಯಿತ ಮಂಡಳಿ ಇರಬೇಕೆಂದು ಅವಕಾಶಗಳನ್ನು ಕಲ್ಪಿಸಲಾಯಿತು.ಸರ್ಕಾರದ ನಿಯಂತ್ರಣ, ಸಹಕಾರಿ ಸಂಸ್ಥೆಗಳ ಮೇಲೆ ಹೇರಲು ಪ್ರಯತ್ನಿಸಿ, ಪ್ರಥಮ ಮಂಡಳಿಯನ್ನು ನಿಬಂಧಕರು/ಸರ್ಕಾರ ನಾಮನಿರ್ದೇಶನ ಮಾಡಲು ಅವಕಾಶವನ್ನು ಉಪನಿಯಮಗಳಲ್ಲಿ ಕಲ್ಪಿಸಲಾಗುತ್ತಿತ್ತು. ಆ ನಂತರದ ಬೆಳವಣಿಗೆಯಲ್ಲಿ ಆಡಳಿತ ಮಂಡಳಿಯ ರಚನೆಯಲ್ಲಿ, ನಿರ್ದೇಕರನ್ನು ನಾಮನಿರ್ದೇಶನ ಮಾಡಲು ನಿಬಂಧಕರಿಗೆ ಅವಕಾಶ ಕಲ್ಪಿಸಲಾಯಿತು. ರಾಜ್ಯ ಸರ್ಕಾರ ಆಡಳಿತ ಮಂಡಳಿಗೆ ಚುನಾವಣೆ ನಡೆದ ನಂತರ ನಾಮ ನಿರ್ದೇಶನದ ಮೂಲಕ 3 ಜನರನ್ನು ಕಲಂ.29 ರಲ್ಲಿಯೂ ಹಾಗೂ 1/3 ಭಾಗ ಸದಸ್ಯರನ್ನು ಕಲಂ.53ಎ ಅನ್ವಯ ನಾಮ ನಿರ್ದೇಶನ ಮಾಡಿ ಸಹಕಾರ ಸಂಘದ ನಿಯಂತ್ರಣಕ್ಕೆ ಸರ್ಕಾರಕ್ಕೆ ಪ್ರಯತ್ನಿಸುತ್ತಿತ್ತು. ಇದರ ಜೊತೆಗೆ ಕಲಂ.54 ರನ್ವಯ ಬಹುಸಂಖ್ಯೆ ನಿರ್ದೇಶಕರನ್ನು (ಹಾಲಿ ಮಂಡಳಿಯ ಸದಸ್ಯರ ಸಂಖ್ಯೆಗಿಂತ) ನಾಮ ನಿರ್ದೇಶನ ಮಾಡಿ ನೇರವಾಗಿ ಸರ್ಕಾರವೇ, ಅಧ್ಯಕ್ಷರನ್ನೂ ನೇಮಿಸಿ, ಸಹಕಾರ ಸಂಘದ ಆಡಳಿತ ಮಂಡಳಿಯನ್ನ ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಳ್ಳುತಿತ್ತು. ಇದಕ್ಕೆ ಉಚ್ಚನ್ಯಾಯಾಲಯದ ತೀರ್ಪಿನ ನಂತರ ಕಲಂ.54 ನ್ನು ಕೈಬಿಡಲಾಗಿದೆ. ಇದರ ಜೊತೆಗೆ ಕಲಂ.29 ಮತ್ತು 53ಎ ಎರಡೂ ಕಲಂಗಳನ್ನು ಕೈಬಿಡಲಾಗಿದೆ ಮತ್ತು ಕಲಂ.28ಎ ನ್ವಯ, ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಸಹಕಾರಿ ಸಂಘಗಳಿಗೂ ಒಬ್ಬ ನಿರ್ದೇಶಕನನ್ನು ಮಾತ್ರ ನಾಮ ನಿರ್ದೇಶನ ಮಾಡಲು, ಸಂವಿಧಾನ ತಿದ್ದುಪಡಿಯ ನಂತರ, ತಿದ್ದುಪಡಿ ಮಾಡಲಾಗಿದೆ.ಇತ್ತೀಚಿಗೆ ಸಂವಿಧಾನದ 97ನೇ ತಿದ್ದುಪಡಿಯ ಮುಖಾಂತರ, ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಸ್ವತಂತ್ರ ಚುನಾವಣಾ (ಪ್ರಾಧಿಕಾರ) ನಡೆಸಬೇಕೆಂದು ತಿದ್ದುಪಡಿಯ ನಂತರ, ರಾಜ್ಯ ಸರ್ಕಾರಗಳು ರಾಜ್ಯ ಸಹಕಾರ ಕಾಯಿದೆಗಳಿಗೆ ತಿದ್ದುಪಡಿ ತಂದು, ಪ್ರತ್ಯೇಕ ಚುನಾವಣಾ ಪ್ರಾಧಿಕಾರ ರಚನೆ ಮಾಡಲಾಗಿದೆ.ಇದಕ್ಕೆ ಪೂರಕವಾಗಿ ಯೋಜನಾ ಆಯೋಗದ 1991 ರ ಮಾದರಿ ಸಹಕಾರ ಕಾಯಿದೆಯನ್ನು ಆಧಾರಿಸಿ ಕರ್ನಾಟಕ ರಾಜ್ಯ ಒಂದು ಪ್ರತ್ಯೇಕ ಕಾಯಿದೆಯನ್ನು ರಚಿಸಿ (1997 ರ ಕರ್ನಾಟಕ ರಾಜ್ಯ ಸೌಹಾರ್ದ ಕಾಯಿದೆ) ರಚಿಸಿ ಪೀಠಿಕೆಯಲ್ಲಿ ಈ ಕೆಳಕಂಡಂತೆ ಸೂಚಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ, ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ, ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು."

ಈ ಮೇಲ್ಕಂಡ ಪೀಠಿಕೆಯನ್ನು ಗಮನಿಸಿದಾಗ ಕರ್ನಾಟಕ ರಾಜ್ಯ 1997 ರಲ್ಲಿ ರೂಪಿಸಿದ ನೀತಿಯನ್ನು ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಅಳವಡಿಸಿಕೊಂಡಿದೆ ಎಂದಾದರೆ, ಕರ್ನಾಟಕ ರಾಜ್ಯ ರೂಪಿಸಿದ 1997 ಸೌಹಾರ್ದ ಸಹಕಾರಿ ಕಾಯಿದೆಯಲ್ಲಿ ರೂಪಿಸಿದ ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ ನೀತಿಯನ್ನು ರೂಪಿಸಿದ ಕರ್ನಾಟಕ ರಾಜ್ಯದ ಕಾಯಿದೆಯೇ ರಾಷ್ಟ್ರ ಮಟ್ಟದ ನೀತಿಯಾಗಿರುವುದನ್ನು ಗಮನಿಸಬಹುದು.

3) **ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿ :** ಸದಸ್ಯರೇ ರಚಿಸಿಕೊಂಡ ಸಹಕಾರಿಯಾಗಿದ್ದು, ಸದಸ್ಯರು ಸಹಕಾರಿಯ ವ್ಯವಹಾರದಲ್ಲಿ ಭಾಗವಹಿಸದಿದ್ದರೆ, ಆ ಸಂಸ್ಥೆ ಬೆಳೆಯಲು ಮತ್ತು ಸದಸ್ಯರಿಗೆ ಸೌಲತ್ತು ನೀಡಲು ಸಾಧ್ಯವಾಗುವುದಿಲ್ಲ. ಸಹಕಾರಿ ಸಂಸ್ಥೆಗಳು ಆರ್ಥಿಕ ಸಂಸ್ಥೆಗಳು – ಧರ್ಮ ಸಂಸ್ಥೆಗಳಲ್ಲ ಅದಕ್ಕಾಗಿ ಸೌಹಾರ್ದ ಕಾಯಿದೆ ಕಲಂ.20(2) ರಲ್ಲಿ ಸಹಕಾರಿ ವ್ಯವಹಾರದಲ್ಲಿ ಭಾಗಿಯಾದಾಗ ಮಾತ್ರ ಅಂತಹ ಸದಸ್ಯ, ಸದಸ್ಯನಾಗಿ ಮುಂದುವರಿಯಲು ಸಾಧ್ಯ ಮತ್ತು ಕನಿಷ್ಠ ಪ್ರಮಾಣದ ವ್ಯವಹಾರವನ್ನು ಸಹಕಾರಿ ಜೊತೆ ಮಾಡದಿದ್ದರೆ ಅಂತಹ ವ್ಯಕ್ತಿಗೆ ಮತದಾನದ ಹಕ್ಕು ಪ್ರಾಪ್ತವಾಗುವುದಿಲ್ಲ ಎಂಬುದನ್ನು ಕಾಯಿದೇ ನಿರ್ಬಂಧಿಸಿದೆ. ಇದಕ್ಕಾಗಿ ಸದಸ್ಯರಿಗೆ ಅವರ ಹೂಡಿದ ಷೇರು ಬಂಡವಾಳದ ಮೇಲೆ ಡಿವಿಡೆಂಡ್ ಪಡೆಯುತ್ತಿದೆ. (1959ರ ಕಾಯಿದೆಯಲ್ಲಿ ಮೀಸಲು ನಿಧಿ ಮತ್ತು ಶಿಕ್ಷಣ ನಿಧಿ ತೆಗೆದಿರಿಸಿದ ನಂತರ ಕಲಂ.57ರಲ್ಲಿ – ಸದಸ್ಯರು ಮಾಡಿದ ವ್ಯವಹಾರದ ಮೇಲೆ ಬೋನಸ್ ನೀಡುವ ಅವಕಾಶ ಕಲ್ಪಿಸಿದೆ) ಸೌಹಾರ್ದ ಕಾಯಿದೆಯಲ್ಲಿ ಸಹಕಾರಿಗಳಿಸಿದ ಲಾಭಾಂಶದಲ್ಲಿ ಮೀಸಲು ನಿಧಿ, ಶಿಕ್ಷಣ ನಿಧಿ ಮತ್ತು ಅನಿರೀಕ್ಷಿತ ನಷ್ಟ ಪರಿಹಾರ ನಿಧಿಗೆ ತೆಗೆದಿರಿಸಿದ ನಂತರ ಉಳಿದ ಲಾಭಾಂಶದಲ್ಲಿ ಸದಸ್ಯರಿಗೆ ಡಿವಿಡೆಂಡ್ ನೀಡಲು ಅವಕಾಶ ಕಲ್ಪಿಸಿದೆ. ಕಲಂ.10(xxi) (ಎ)(ಎ.ಎ)(ಬಿ) ಮತ್ತು (ಸಿ) ಡಿವಿಡೆಂಡ್‌ನ್ನು ಪಾಲು ಬಂಡವಾಳದ ಮೇಲೆ ಶೇ.25% ಕ್ಕೆ ಮೀರದಂತೆ ನೀಡಬಹುದೆಂದಿದ್ದರೂ, ಸಹಕಾರಿ ಗಮನಿಸಬೇಕಾದ ಪ್ರಮುಖ ನೀತಿ ಎಂದರೆ, ಸದಸ್ಯ ಮಾಲೀಕನಾಗಿ ಷೇರು ಹೂಡಿಕೆ ಮಾಡಿದ್ದರೂ, ಲಾಭಾಂಶದಲ್ಲಿ ಭಾಗ ನೀಡಲಾಗಿ,

ಷೇರು ಹೂಡಿಕೆಗೆ ನಿಗದಿ ಪಡಿಸುವ ಡಿವಿಡೆಂಡ್ ಸಹಕಾರಿಗಳು ನೀಡುವ ಗರಿಷ್ಠ ಠೇವಣಿ ಬಡ್ಡಿ ದರಕ್ಕಿಂತ ಹೆಚ್ಚಿರದಂತೆ ನೋಡಿಕೊಳ್ಳುವುದು ಒಂದು ಆರ್ಥಿಕ ಶಿಸ್ತು ಎಂದು ಪರಿಗಣಿಸಿದರೆ, ಅದು ಆ ಸಹಕಾರಿಯ ಆರ್ಥಿಕ ಸಬಲತೆಗೆ ಪೂರಕ ಎಂದು ತಿಳಿಯಬೇಕು.

**ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು :**

ಸಹಕಾರ ಸಂಸ್ಥೆ ರಚನೆಯಾಗುವಾಗ ಸದಸ್ಯರ ಆರ್ಥಿಕ ಸಬಲತೆಯೇ ಮೂಲ ಕಾರಣವಾಗಬೇಕು.ಆದರೆ ಸಹಕಾರ ಸಂಸ್ಥೆ ಸಂಸ್ಥಾಪಕರು, ಅಂದರೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳಲು ಆಸಕ್ತಿ ವಹಿಸುವುದು ವಿರಳ. ಇದಕ್ಕೆ ಮೂಲ ಕಾರಣ, ತಮ್ಮ ಸ್ಥಾನಕ್ಕೆ ಚ್ಯುತಿಯಾಗಬಹುದೆಂದು. ಆದರೆ ಈವರೆವಿಗೂ ಸಹಕಾರಿ ಕಾಯಿದೆಯಲ್ಲಿ ಸ್ಪಷ್ಟವಾಗಿ ಕನಿಷ್ಠ ಪ್ರಮಾಣದ ವ್ಯವಹಾರವನ್ನು ಮಾಡಲೇಬೇಕೆಂಬ ಷರತ್ತುಗಳು ಇರಲಿಲ್ಲ. ಕೆಲವೊಂದು ಪ್ರಸಂಗದಲ್ಲಿ ಮಾತ್ರ ಈ ಅವಕಾಶಗಳನ್ನು ಉಪನಿಯಮಗಳಲ್ಲಿ ಸೇರಿಸಲಾಗಿತ್ತು. ಉದಾ : ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ 180 ದಿವಸಗಳು ಕನಿಷ್ಠ ಅರ್ಧ ಲೀಟರ್ ಹಾಲನ್ನಾದರೂ ಪ್ರಾಥಮಿಕ ಹಾಲು ಸಹಕಾರ ಸಂಘಕ್ಕೆ ಸರಬರಾಜು ಮಾಡಿದ್ದರೆ ಮಾತ್ರ, ಹಾಲು ಉತ್ಪಾದಕರ ಒಕ್ಕೂಟದಲ್ಲಿ ನಿರ್ದೇಶಕರ ಆಯ್ಕೆಯಾಗಲು ಅರ್ಹತೆಯನ್ನು ನಿಗದಿಪಡಿಸಲಾಗಿತ್ತು ಹಾಗೂ ತಾಲ್ಲೂಕು ಮಾರಾಟ ಸಹಕಾರಿ ಸಂಘಗಳಲ್ಲಿ ನಿರ್ದೇಶಕನಾಗಬೇಕಾದರೆ ಅವನು ಪ್ರತಿನಿಧಿಸುವ ಗುಂಪಿನ ಸಹಕಾರಿ ಸಂಘಗಳಿಂದ ಕನಿಷ್ಠ 500 ಕ್ವಿಂಟಾಲು ಆಹಾರೋತ್ಪನಗಳನ್ನು ತಾಲ್ಲೂಕು ಮಾರಾಟ ಸಹಕಾರ ಸಂಘಗಳಿಗೆ ಸರಬರಾಜು ಮಾಡಿದ್ದರೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗಿತ್ತು. ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಗ್ರಾಹಕರ ಮಹಾಮಂಡಳಿಯಲ್ಲಿ ಸದಸ್ಯ ಸಂಘಗಳು ಕನಿಷ್ಠ ಪ್ರಮಾಣದ ವ್ಯವಹಾರ ಮಾಡಬೇಕೆಂದು ನಿಗದಿಪಡಿಸಿದ್ದವು. ಇದಕ್ಕೆ ಸ್ವಹಿತಾಸಕ್ತಿಯಿಂದ ಕೆಲವು ಸಂಘಗಳು ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ/ಆದೇಶ ತಂದು ಅಧಿಕಾರ ಅನುಭವಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಒಂದು ಗಾದೆ ಮಾತನ್ನು ಸೇರಿಸುವುದಾದರೆ "ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ" ಅಂದರೆ ನೊಣ ಬರಬೇಕಾದರೆ ಅದು ಬೆಲ್ಲದ ಅಂಗಡಿಗೆ ಬರಬೇಕೇ ಹೊರತು ಕಬ್ಬಿಣದ ಅಂಗಡಿಗಲ್ಲ. ಈ ಮೇಲ್ಕಂಡ ಅವಕಾಶಗಳನ್ನು ಹೊರತುಪಡಿಸಿ ಯಾವುದೇ ಸಹಕಾರ ಸಂಸ್ಥೆಗಳಿಗೆ, ಅದರ ಸದಸ್ಯರು ಕನಿಷ್ಠ ಪ್ರಮಾಣದ ವ್ಯವಹಾರ ಮಾಡಿದರೆ ಮಾತ್ರ ಮತದಾನದ ಹಕ್ಕು ಮತ್ತು ಸದಸ್ಯತ್ವದಿಂದ ಮುಂದುವರಿಯುತ್ತದೆ ಎಂಬ ಅವಕಾಶವಿರಲಿಲ್ಲ. 97ನೇ ಸಂವಿಧಾನ ತಿದ್ದುಪಡಿಯ ನಂತರ, ಈ ಮೇಲ್ಕಂಡ ತತ್ವದಡಿ ಸದಸ್ಯರು ಸಂಸ್ಥೆ ಜೊತೆ ವ್ಯವಹಾರ ನಡೆಸಲೇಬೇಕೆಂಬ ಷರತ್ತಿಗನ್ವಯ, ರಾಜ್ಯ ಸಹಕಾರ ಕಾಯಿದೆಯಲ್ಲಿ ಮಾರ್ಪಾಡು ಮಾಡಿ ಎರಡು ಷರತ್ತುಗಳನ್ನು ಸೇರ್ಪಡೆಗೊಳಿಸಿದೆ. ಕಲಂ 17ರಲ್ಲಿ ಕನಿಷ್ಠ ಪ್ರಮಾಣದ ವ್ಯವಹಾರ ಮಾಡದಿದ್ದರೆ ಸದಸ್ಯತ್ವ ಕಳೆದುಕೊಳ್ಳುವುದು ಮತ್ತು ಕಲಂ 20 ರನ್ವಯ ಕನಿಷ್ಠ ಪ್ರಮಾಣದ ವ್ಯವಹಾರ ಮಾಡದಿದ್ದರೆ ಮತದಾನದ ಹಕ್ಕು ಕಳೆದುಕೊಳ್ಳತಕ್ಕದ್ದು. ಕಲಂ 27ಎ ಅನ್ವಯ ಕನಿಷ್ಠ ವ್ಯವಹಾರ ಮತ್ತು ಕಳೆದ 5 ವರ್ಷದ ಮಹಾಸಭೆಯಲ್ಲಿ ಕನಿಷ್ಟ ಸತತ ಮೂರು ವರ್ಷಗಳು ಹಾಜರಿರದ್ದರೆ, ಅಂತಹ ಸದಸ್ಯರು ಮೂರು ವರ್ಷಗಳು ಮತದಾನ ಹಕ್ಕನ್ನು ಕಳೆದು ಕೊಳ್ಳುತ್ತಾರೆ ಎಂದು ನಿಗದಿಪಡಿಸಲಾಗಿದೆ.ಇದರಿಂದ ಈ ಸಹಕಾರಿ ತತ್ವದ ಅನುಸರಣೆಗಾಗಿ ಈಗ ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಳೆದ 2-3 ವರ್ಷಗಳಿಂದ ನ್ಯಾಯಾಲಯದಿಂದ ಆದೇಶ ಪಡೆದು ಹಲವಾರು ಸಹಕಾರಿ ಸಂಸ್ಥೆಗಳ ಮಹಾಸಭೆಯಲ್ಲಿ ಹಾಜರಿ, ಮತದಾನದ ಹಕ್ಕು ಪಡೆಯುತ್ತಿವೆ ಮತ್ತು ಸರ್ಕಾರವೂ ಈ ಬಗ್ಗೆ ವ್ಯವಹಾರ ಮತ್ತು ಸಾಮಾನ್ಯ ಸಭೆ ಬಗ್ಗೆ ಮಾರ್ಪಾಡು ಮಾಡುವ ಪ್ರಯತ್ನ ನಡೆಸಿದೆ.

**4) ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ :** ಕಾಯಿದೆ ರಚಿಸಿದಾಗ ಸಹಕಾರಿ ಒಂದು ಸ್ವಾಯತ್ತ ಮತ್ತು ಸ್ವಾತಂತ್ರ ಸಂಸ್ಥೆ ಎಂದು ಧ್ಯೇಯೋದ್ದೇಶದಲ್ಲಿಯೇ ಘೋಷಿಸಿರುವುದರಿಂದ, ಸಹಕಾರಿಗಳು ನಿಯಂತ್ರಿಸುವ ಪ್ರಸಂಗ ಬರುವುದು, ಆ ಸಹಕಾರಿ ಮಂಡಳಿ, ನೌಕರ ಶಾಹಿ, ಕಾಯಿದೆ ನಿಯಮದಲ್ಲಿ ಉಪವಿಧಿಗಳನ್ನು ನಿರ್ಭಂದಗಳನ್ನು ಮುರಿದಾಗ ಮಾತ್ರ, ಸಂಯುಕ್ತ ಸಹಕಾರಿ ಅಥವಾ ನಿಬಂಧಕರು ಮಧ್ಯಪ್ರವೇಶಕ್ಕೆ ಅವಕಾಶವಿದೆ. ಸಹಕಾರಿ ತೆಗೆದುಕೊಳ್ಳುವ ಎಲ್ಲಾ ವ್ಯವಹಾರಿ ನೀತಿ ಮತ್ತು ಸದಸ್ಯರ ಹಿತಾಸಕ್ತಿಗೆ ಪೂರಕವಾಗಿ ಕೆಲಸ ಮಾಡಲು ಸಹಕಾರಿ ಮಂಡಳಿಗೆ ಪೂರ್ಣ ಆರ್ಥಿಕ ಸ್ವಾತಂತ್ರ್ಯ - ಕಾಯಿದೆಯಲ್ಲಿಯೇ ನೀಡಲಾಗಿದೆ. ಇದಕ್ಕೆ ಪೂರಕವಾಗಿ ಸಹಕಾರಿ, ತನ್ನ ಕಾರ್ಯಾನಿರ್ವಹಣೆಯಲ್ಲಿ ಸ್ವಯಂ ನಿಯಂತ್ರಣ ಹೇರಿಕೊಳ್ಳಲು, ಅಂದರೆ ಕಾಯಿದೆ, ನಿಯಮ, ಉಪವಿಧಿಗಳನ್ನು ನಿರ್ಭಂದಗಳಿಗೊಳಪಟ್ಟ ಸಹಕಾರಿ ಅಭಿವೃದ್ಧಿಗೆ ಮಧ್ಯಪ್ರವೇಶ ಮಾಡುವ ಅವಕಾಶ ಸಂಯುಕ್ತ ಸಹಕಾರಿ ಮತ್ತು ನಿಬಂಧಕರು ನೀಡಲಾಗಿಲ್ಲ.

**ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ :**

ಸಹಕಾರಿ ಸಂಸ್ಥೆಗಳು ಸ್ವಾಯತ್ತ, ಸ್ವತಂತ್ರ ಸಂಸ್ಥೆಗಳೆಂದು, ಸಹಕಾರಿ ತತ್ವಗಳಲ್ಲಿ ತಿಳಿಸಿದ್ದರೂ, ಈ ಸಂಸ್ಥೆಗಳನ್ನು ಆ ರೀತಿ ಕಾಯಿದೆಯಲ್ಲಿ ಗುರುತಿಸಿಯೇ ಇರಲಿಲ್ಲ. ಸ್ವಯಂ ಸ್ಫೂರ್ತಿಯಿಂದ ಸಮಾನ ಮನಸ್ಕರು ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡಿದ್ದರೂ, ಸ್ವತಂತ್ರ ತೀರ್ಮಾನ ಸಾಮಾನ್ಯವಾಗಿ ನಿಬಂಧಕರ ಒಪ್ಪಿಗೆ ಅಥವಾ ಪೂರ್ವಾನುಮತಿ ಪಡೆಯುವುದು ರೂಢಿಯಲಿತ್ತು. ಇದಕ್ಕೆ ನಿಬಂಧಕರು ಸಹ ಅನುಮೋದಿಸುತ್ತಿದ್ದರು. ಉದಾ: ಯಾವುದೇ ಸಂಘದ ಅಧಿಕಾರಿಗಳು/ಅಧಿಕಾರೇತರಗಳು ಸಂಘದ ಕಾರ್ಯವ್ಯಾಪ್ತಿಯಿಂದ ಹೊರಗೆ ಪ್ರವಾಸ ಮಾಡಬೇಕಾದರೆ ನಿಬಂಧಕರ ಪೂರ್ವಾನುಮತಿ ಪಡೆಯಬೇಕೆಂದು ಸುತ್ತೋಲೆ ಹೊರಡಿಸಿದ್ದರು. ಅಂದರೆ ವ್ಯವಹಾರಿಕ ಸ್ವಾತಂತ್ರ್ಯ ಇರಲಿಲ್ಲ. 97ನೇ ಸಂವಿಧಾನದ ತಿದ್ದುಪಡಿಯ ನಂತರ ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಪೀಠಿಕೆಯಲ್ಲಿನ ಅಂಶಗಳನ್ನು ಸಂವಿಧಾನದ ಅನುಚ್ಛೇದ 43ಬಿ, 243ಝುಡ್ಐ ನಲ್ಲಿ ಸಹಕಾರಿ

ಸಂಸ್ಥೆಗಳು ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿಯಂತ್ರಿಸುವ, ಸಂಸ್ಥೆಗಳೆಂದು ಗುರುತಿಸಿರುವುದರಿಂದ, ಪ್ರತಿಯೊಂದು ಸಹಕಾರಿ ಸಂಸ್ಥೆಯು, ತನ್ನ ಆರ್ಥಿಕ ಚಟುವಟಿಕೆಗಳಲ್ಲಿ ನಿಬಂಧಕರ/ಸರ್ಕಾರದ ನಿಯಂತ್ರಣ ಇರಬಾರದೆಂದು ನೀತಿಗೆ ಅನುಗುಣವಾಗಿ, ರಾಜ್ಯ ಕಾಯಿದೆಗಳಲ್ಲಿ ಮಾರ್ಪಾಡು ಮಾಡಲಾಗಿದೆ. ಇದರ ಜೊತೆಗೆ ಮಂಡಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಿ, ಆ ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ ಅನರ್ಹತೆಗೊಳಿಸಲು ಕಲಂ 29ಸಿ ನಲ್ಲಿ ಮಾರ್ಪಾಡು ಮಾಡಲಾಗಿದೆ. ಅಂದರೆ ಸ್ವಾಯತ್ತತೆ ಮತ್ತು ಸ್ವಾತಂತ್ರಕ್ಕೆ ಪ್ರಾಧಾನ್ಯತೆ ಕೊಟ್ಟರೂ, ಅದಕ್ಕೆ ಪೂರಕವಾಗಿ ಆಡಳಿತ ಮಂಡಳಿ ಜವಾಬ್ದಾರಿಗಳು ನಿರ್ವಹಿಸದಿದ್ದರೆ, ಆ ಆಡಳಿತ ಮಂಡಳಿ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಜವಾಬ್ದಾರರಾಗುತ್ತಾರೆ ಮತ್ತು ಅನರ್ಹರಾಗುತ್ತಾರೆ. ಉದಾ : ಸಹಕಾರಿಯ ಲೆಕ್ಕ ಪತ್ರಗಳನ್ನು ಸಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆಯದಿದ್ದರೆ, ಚುನಾವಣೆ ಇದ್ದಾಗ ಚುನಾವಣಾ ಪ್ರಾಧಿಕಾರದ ಮುಖಾಂತರ ಹೊಸ ಆಡಳಿತ ಮಂಡಳಿ ರಚನೆ ಮಾಡದಿದ್ದರೆ ಮತ್ತು ಸೆಪ್ಟೆಂಬರ್ 25ರೊಳಗಾಗಿ ವಾರ್ಷಿಕ ಮಹಾಸಭೆಯನ್ನು ನಡೆಸದಿದ್ದರೆ 5 ವರ್ಷಗಳ ವರೆಗೆ ಅನರ್ಹತೆಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಅಂದರೆ ಸ್ವಾಯತ್ತತೆ ಜೊತೆ ಜವಾಬ್ದಾರಿಯನ್ನು ನಿಗದಿಪಡಿಸಲಾಗಿದೆ.

**5) ಸಹಕಾರಿ ಶಿಕ್ಷಣ, ತರಬೇತಿ ಮತ್ತು ಪ್ರಚಾರ :** ಪ್ರತಿಯೊಂದು ಸಹಕಾರಿ ತಾನು ಗಳಿಸಿದ ಲಾಭಾಂಶದಲ್ಲಿ ಮೀಸಲು ನಿಧಿ ತೆಗೆದಿರಿಸಿದ ನಂತರ, ಲಾಭಾಂಶದ ಶೇ.2% ನ್ನು ಸಂಯುಕ್ತ ಸಹಕಾರಿ ಶಿಕ್ಷಣ ನಿಧಿಗೆ ಪಾವತಿಸತಕ್ಕದ್ದು. (ಶೇ.0.5% ಶಿಕ್ಷಣ ನಿಧಿಯನ್ನು ಮೈಸೂರಲ್ಲಿ ಸ್ಥಾಪಿಸಿರುವ ಸಹಕಾರಿ ಅಕಾಡಮಿಗೆ ನೀಡಲು ಅವಕಾಶ ನೀಡಲಾಗಿದ್ದರೂ, ಇದನ್ನು ಇನ್ನು ಜಾರಿ ಮಾಡಿಲ್ಲ). ಈ ಶಿಕ್ಷಣ ನಿಧಿ ನಿರ್ವಹಿಸಲು ಸೌಹಾರ್ದ ಸಹಕಾರಿ ನಿಯಮ 10ಬಿ ನಡಿ ಶಿಕ್ಷಣ ನಿಧಿ ನಿರ್ವಹಣೆಗೆ ಒಂದು ಸಮಿತಿ ರಚಿಸಲಾಗಿದ್ದು, ಆ ನೀತಿಯನ್ನು ಬಳಸಬಹುದಾದ ಉದ್ದೇಶಗಳನ್ನು ನಿಯಮ 10ಸಿ(2) ರಲ್ಲಿ ಈ ಕೆಳಕಂಡಂತೆ ನಿಗದಿ ಪಡಿಸಿದೆ.

**ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರ :**

ಸಹಕಾರ ಶಿಕ್ಷಣ ಮತ್ತು ತರಬೇತಿಗೆ ಸಂಬಂಧಪಟ್ಟಂತೆ ರಾಜ್ಯ ಮಟ್ಟದಲ್ಲಿ ಒಂದು ಮಹಾಮಂಡಳವನ್ನು ರಚನೆ ಮಾಡಿದ್ದು, ಆ ಮಂಡಳಿಯ ಶಿಕ್ಷಣ ಸಂಸ್ಥೆಗಳ ಮೂಲಕ ತರಬೇತಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.ಇದಕ್ಕಾಗಿ ಕಾಯಿದೆಗೆ ತಿದ್ದುಪಡಿಯನ್ನು ಮಾಡಿ ಲಾಭಾಂಶದ ಶೇ.2 ರಷ್ಟನ್ನು ಶಿಕ್ಷಣ ನಿಧಿಗೆ ವರ್ಗಾಯಿಸತಕ್ಕದೆಂದು ಪಟ್ಟಣ ಸಹಕಾರಿ ಮಹಾಮಂಡಳಕ್ಕೆ ಪಟ್ಟಣ ಬ್ಯಾಂಕ್‌ಗಳು ಹೆಚ್ಚುವರಿಯಾಗಿ ಶೇ.1% ರಷ್ಟು ಶಿಕ್ಷಣ ನಿಧಿ ನೀಡಬೇಕೆಂದು ಸೇರಿಸಲಾಗಿದೆ. [ಕಲಂ.57(2ಎ)] ಮತ್ತು ಈ ಶಿಕ್ಷಣ ನಿಧಿಯನ್ನು ಪಾವತಿಸದೆ ಯಾವುದೇ ಸಹಕಾರಿ ಸಂಸ್ಥೆ ಸದಸ್ಯರಿಗೆ ಲಾಭಾಂಶದ ಮೇಲೆ ಡಿವಿಡೆಂಡ್ ಹಂಚತಕ್ಕದ್ದಲ್ಲವೆಂದು ಷರತ್ತು ವಿಧಿಸಿದೆ.ರಾಜ್ಯ ಮಹಾಮಂಡಳವು 8 ಶಿಕ್ಷಣ ಸಂಸ್ಥೆಯಗಳ ಮುಖಾಂತರ ಮತ್ತು ರಾಜ್ಯ ಮಟ್ಟದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿ ಪ್ರಾಂತೀಯ ಶಿಕ್ಷಣ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ, ಸಂಘಗಳ ಅಧಿಕಾರಿಗಳು, ಅಧಿಕಾರೇತರರು ಮತ್ತು ಇಲಾಖಾ ಅಧಿಕಾರಿಗಳಿಗೆ ತರಬೇತಿ ವ್ಯವಸ್ಥೆ ಮಾಡಲಾಗಿದೆ. ಗುಣಮಟ್ಟದ ಬಗ್ಗೆ ಆಗಿಂದ್ದಾಗೆ ಪ್ರಶ್ನೆಗಳು ಉದ್ಭವಿಸುತ್ತವೆ. ಏಕೆಂದರೆ ಶಿಕ್ಷಣ ಪಡೆದ ಶಿಕ್ಷಣಾಭ್ಯರ್ಥಿಗಳು, ಶಿಕ್ಷಣದ ನಂತರ ಆ ಸಂಸ್ಥೆಯಲ್ಲಿ ಯಾವುದೇ ತರಹದ ವ್ಯತ್ಯಾಸ ಮಾಡದೆ ಇದ್ದಾಗ, ತರಬೇತಿಯ ಗುಣಮಟ್ಟವನ್ನು ವಿಮರ್ಶಿಸಿಬೇಕಾಗುತ್ತದೆ. ಆದರೂ ಸರ್ಕಾರದ ನಿಯಂತ್ರಣವಿಲ್ಲದೆ ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯನ್ನು ಮಾಡಲಾಗಿದೆ.ಪ್ರಚಾರಕ್ಕೆ ಸಂಬಂಧಪಟ್ಟಂತೆ ವಾರ ಪತ್ರಿಕೆಯೊಂದು ಹೊರತರುತ್ತಿದ್ದರೂ, ಅದರ ಗುಣ ಮಟ್ಟದ ಬಗ್ಗೆ ಆಗಿಂದ್ದಾಗೆ ವಿಮರ್ಶೆ ಮಾಡುವುದು ಸೂಕ್ತ. ಇದರ ಜೊತೆಗೆ ರಾಜ್ಯ ಮಹಾಮಂಡಳವು ಅಂದರೆ ಹಾಲು ಮಹಾಮಂಡಳ, ಆಪೆಕ್ಸ್ ಬ್ಯಾಂಕ್, ಪಟ್ಟಣ ಸಹಕಾರ ಮಹಾಮಂಡಳ ಅವರದೇ ಪ್ರತ್ಯೇಕವಾದ ಪ್ರಚಾರ ಪ್ರಕಟಣೆಯನ್ನು ಹೊರಡಿಸುತ್ತಿವೆ. ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಕಲಂ.10(2)(ಬಿ) ಅನ್ವಯ ಶೇ.2% ಶಿಕ್ಷಣ ನಿಧಿ ಪಾವತಿಸಲು ನಿಗದಿ ಪಡಿಸಿದೆ.

ನಿಯಮ 10ಸಿ(2) : ಸಲಹಾ ಸಮಿತಿಯು ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟು ಈ ನಿಧಿಯನ್ನು ಸಹಕಾರಿ ಶಿಕ್ಷಣ ತರಬೇತಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಪಟ್ಟ ಕೆಳಗಿನ ಯಾವುದೇ ಉದ್ದೇಶಗಳಿಗೆ ಉಪಯೋಗಿಸಬಹುದು.

(ಎ) ಸಹಕಾರಿಗಳ ನೌಕರರ, ನಿರ್ದೇಶಕರ (ಪದಾಧಿಕಾರಿಗಳನ್ನು ಒಳಗೊಂಡಂತೆ) ಮತ್ತು ಸದಸ್ಯರ ಶಿಕ್ಷಣ ಹಾಗೂ ಸಹಕಾರ ತತ್ವ ಮತ್ತು ಆಚರಣೆಯಲ್ಲಿ ಸಾರ್ವಜನಿಕರಿಗೆ ಶಿಕ್ಷಣ ನೀಡುವುದುದು;

(ಬಿ) ಸಹಕಾರಿಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ;

(ಸಿ) ಸಹಕಾರಿಗಳ ಅಭಿವೃದ್ಧಿ;

(ಡಿ) ಸಾಮಾನ್ಯವಾಗಿ ಸಹಕಾರಿ ಚಳುವಳಿಯ ಅಭಿವೃದ್ಧಿ;

(ಇ) ವೃತ್ತಿ ನೈಪುಣ್ಯತೆ;

(ಎಫ್) ಸಂಶೋಧನೆ ಮತ್ತು ಅಭಿವೃದ್ಧಿ;

(ಜಿ) ತಾಂತ್ರಿಕ ಸೌಲಭ್ಯಗಳನ್ನು ಇಂದೀಕರಿಸುವುದು;

(ಹೆಚ್) ಶಿಕ್ಷಣ, ತರಬೇತಿ, ಸಂಶೋಧನೆ, ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ;

(ಐ) ಸಹಕಾರಿ ಪ್ರಚಾರ ಮತ್ತು ಪ್ರಸಿದ್ಧಿ;

(ಜೆ) ಸಹಕಾರಿ ಚಳುವಳಿಗೆ ಸಂಬಂಧಪಟ್ಟ ಪುಸ್ತಕ ಮತ್ತು ನಿಯತಕಾಲಿಕೆಗಳ ಪ್ರಕಟಣೆ;

(ಕೆ) ಸಂಶೋಧನೆ, ಸರ್ವೇಕ್ಷಣೆ ಮತ್ತು ಪ್ರಕರಣ ಅಧ್ಯಯನಗಳನ್ನು ನಡೆಸುವುದು;

(ಎಲ್) ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಪ್ರಶಂಸನೀಯ ಸೇವೆ ಸಲ್ಲಿಸಿದವರಿಗೆ ಬಹುಮಾನ ಅಥವಾ ಗೌರವಧನ ಕೊಡುವುದು;

ಈ ನಿಯಮದಂತೆ ಸದಸ್ಯ ಸಹಕಾರಿಗಳಿಗೆ ಅವಶ್ಯಕವಾದ ಮಾಹಿತಿ, ಶಿಕ್ಷಣ, ತರಬೇತಿ, ಕಾರ್ಯಾಗಾರ, ನಡೆಸಲು ಅವಕಾಶ ಕಲ್ಪಿಸಿದೆ. ಸಂಯುಕ್ತ ಸಹಕಾರಿ ರೂಪಿಸಿದ ತರಬೇತಿ ಕಾರ್ಯಕ್ರಮಗಳನ್ನು ಉತ್ತಮ ರೀತಿ ನಡೆಯುತ್ತದೆ ಎಂಬ ಭಾವನೆ ಇದೆ. ಇದರ ಜೊತೆಗೆ ಸದಸ್ಯ ಸಹಕಾರಿಗಳಿಗೆ ಅವಶ್ಯಕವಾದ ಮಾಹಿತಿ ನೀಡಲು ಮಾರ್ಗದರ್ಶನ ಸೂತ್ರಗಳು, ಪುಸ್ತಕಗಳನ್ನು ಪ್ರಚಾರ ಪಡಿಸುತ್ತಿದೆ.

**6) ಸಹಕಾರಿಗಳಲ್ಲಿ ಸಹಕಾರ :** ಪ್ರತಿಯೊಂದು ಸಹಕಾರಿ ಯಶಸ್ಸಿಗೆ ಸದಸ್ಯರ ಭಾಗವಹಿಸುವಿಕೆ ಒಂದು ಪ್ರಮುಖ ಕಾರಣ. ಅದೇ ರೀತಿ ಸಹಕಾರಿ ಆಂದೋಲನ ಯಶಸ್ವಿಗಳಿಸಲು ಒಂದು ಸಹಕಾರಿ ಮತ್ತೊಂದು ಸಹಕಾರಿ ಕೂಡಿ ಆಂದೋಲನ ಯಶಸ್ವಿಗಳಿಸಲು ಸಾಧ್ಯ. ಎರಡೂ ಸಹಕಾರಿ ಸಂಸ್ಥೆಗಳು ಕೂಡಿದರೆ, ಸಹ ಬಾಳುತತ್ವಕ್ಕೆ, ಅಂದರೆ ಸಹಕಾರಿಗಳನ್ನು ಸಹಕಾರ ಎಂಬ ತತ್ವಕ್ಕೆ ಪೂರಕವಾಗಿ ಕೆಲಸ ನಿರ್ವಹಿಸಬೇಕು. ಒಂದು ಕೃಷಿ ಪತ್ತಿನ ಸಹಕಾರಿ ತನ್ನ ಕಾರ್ಯವ್ಯಾಪ್ತಿಯಲ್ಲಿ ಬೆಳೆದ ಆಹಾರ/ವಾಣಿಜ್ಯ ಬೆಳೆಯನ್ನು ಮಾರಾಟ ಸಹಕಾರಿಗೆ ಸ್ಪರ್ಧಾತ್ಮಕ ದರಕ್ಕೆ ಮಾರಾಟ ಮಾಡಬೇಕು ಮತ್ತು ಅದೇ ರೀತಿ ಮಾರಾಟ ಸಹಕಾರಿ, ಒಂದು ಗ್ರಾಹಕ ಸಹಕಾರಿ ಜೊತೆಗೆ ಆ ವಸ್ತುಗಳನ್ನ ಯಥಾರೀತಿ ಅಥವಾ ಸದಸ್ಯನೆ ಕೃಷಿಕರಿಗೆ ಒಳ್ಳೆ ಬೆಲೆಸಿಗುವಂತೆ ನೋಡಿಕೊಳ್ಳವುದು ಮತ್ತು ಗ್ರಾಹಕರಿಗೆ ಸ್ಪರ್ಧಾತ್ಮಕ ದರದಲ್ಲಿ ಗುಣಾತ್ಮಕ ವಸ್ತುಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಆದರೆ ಈವರೆವಿಗೂ ಇಂತಹ ಪ್ರಯತ್ನ ಯಶಗಳಿಸಿಲ್ಲ. ಆದರೆ ಹುನಾಗಾರಿಕೆ ಸಹಕಾರಿಗಳಲ್ಲಿ ಸಹಕಾರ ಎಂಬ ತತ್ವಕ್ಕೆ ಪೂರಕವಾಗಿ ಯಶಸ್ವಿಗಳಿಸಿದೆ. ಪ್ರಾಥಮಿಕ ಹಾಲು ಉತ್ಪಾದಕ ಸಹಕಾರಿಗಳು ಹೈನುಗಾರರಿಂದ ಹಾಲು ಖರೀದಿ ಮಾಡಿ, ಶೀತಲಿಕರಿಸಿ, ಸಹಕಾರಿ ಹಾಲು ಒಕ್ಕೂಟಕ್ಕೆ ಮಾರಾಟ ಮಾಡುತ್ತಿದೆ. ಆ ರೀತಿ ಸಂಗ್ರಹಿಸಿದ ಹಾಲಿನ ಸಂಸ್ಥೆಗೆ ಗ್ರಾಹಕರಿಗೆ ವಿತರಿಸುವುದರ ಜೊತೆಗೆ, ಹೆಚ್ಚುವರಿ ಹಾಲನ್ನು ಹಾಲುಪುಡಿ ಅಥವಾ ಉಪ ಉತ್ಪನ್ನಗಳನ್ನು ತಯಾರಿಸಿ ಗ್ರಾಹಕರಿಗೆ ನೀಡುತ್ತದೆ. ಒಕ್ಕೂಟದ ವ್ಯಾಪ್ತಿಯಿಂದ ಹೊರಗೆ, ರಾಜ್ಯ ಹಾಲು ಮಹಾಮಂಡಳಿ ತನ್ನ ಸಂಸ್ಕರಣಾ ಘಟಕಗಳನ್ನು ಸದಸ್ಯರಿಗೆ ಹೊರರಾಜ್ಯ/ಹೊರಜಿಲ್ಲೆಗೆ ರವಾನಿಸಿ, ಸಹಕಾರಿಗಳಲ್ಲಿ ಸಹಕಾರ ಎಂಬ ನೀತಿಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಹಾಲನ್ನು ನಿಗದಿ ಪಡಿಸಿದ ಅವಧಿಯೊಳಗೆ ಶೀತಲೀಕರಣ/ಸಂಸ್ಕರಣೆ ಮಾಡದಿದ್ದರೆ, ಅದು ಕೆಡುತ್ತದೆ ಎಂಬ ಕಾರಣಕ್ಕೆ ಯಶಸ್ವಿ ಗಳಿಸಿರಬಹುದು. ಆದರೆ ಬೇರೆ ವಸ್ತುಗಳಿಗೆ ಸಂಬಂಧಪಟ್ಟಂತೆ ರೈತರು, ಉತ್ಪಾದನೆಯನ್ನು ತುರ್ತಾಗಿ ಮಾರದೆ, ಅಥವಾ ಖಾಸಗಿಯಾಗಿ ಹೆಚ್ಚು ಲಾಭದ ಆ ಸೇಗೆ ಮಾರಾಟ ಮಾಡಬಹುದು. ಅದಕ್ಕೆ ಪ್ರಮುಖ ಕಾರಣ, ರೈತರು ಪಡೆದ ಕೃಷಿ ಸಾಲದ ಹಣವನ್ನು, ಕೃಷಿ ಉತ್ಪನ್ನಗಳ ಮಾರಾಟ ಹಣದಿಂದ ಮುರಿದುಕೊಳ್ಳುತ್ತಾರೆಂಬ ನೈಜ ಕಾರಣದಿಂದ ಇರಬಹುದು. ಪ್ರತಿಯೊಂದು ಸಹಕಾರಿ ಸ್ವಾಯತ್ತ, ಸ್ವಯಂ ನಿಯಂತ್ರಿತ ಎಂದು ಭಾವಿಸಿ, ಅದರ ಮಂಡಳಿ ಸದಸ್ಯರ ಹಿತಾಸಕ್ತಿಗೆ ಪೂರಕವಾಗಿ ವಿವಿಧ ರೀತಿ/ನೀತಿ ಅನುಸರಿಸಿ, ಸಹಕಾರಿಗಳಲ್ಲಿ ಸಹಕಾರ ಎಂಬ ನೀತಿಯನ್ನು ಅಪ ನಂಬಿಕೆಯಿಂದ ನೋಡುತ್ತಿರುವುದರಿಂದ, ಈ ತತ್ವ ಅಷ್ಟು ಯಶಸ್ವಿ ಗಳಿಸಿಲ್ಲ.

**ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ :**

ಸಹಕಾರಿಗಳಲ್ಲಿ ಸಹಕಾರ ನಮ್ಮ ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಯಾಗಿಲ್ಲ. ಉದಾ:– ಮಾರಾಟಕ್ಕೆ ಸಂಬಂಧಪಟ್ಟಂತೆ ರಾಜ್ಯ ಮಾರಾಟ ಮಹಾಮಂಡಳ ರೈತರು ಬೆಳೆದ ಆಹಾರೋತ್ಪನ್ನಗಳನ್ನು, ತಾಲ್ಲೂಕು ಮಾರಾಟ ಸಂಘಗಳು ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಖರೀದಿ ಮಾಡಿ, ಗ್ರಾಹಕರ ಮಹಾಮಂಡಳ, ಜಿಲ್ಲಾ ಗ್ರಾಹಕ ಸಂಘಗಳು ಮತ್ತು ಪ್ರಾಥಮಿಕ ಗ್ರಾಹಕ ಸಂಘಗಳಿಗೆ ಹಂಚುವ ವ್ಯವಸ್ಥೆ ಮಾಡುತ್ತಿಲ್ಲ. ಅದೇ ರೀತಿ ಉತ್ಪಾದನಾ ಸಂಸ್ಥೆಗಳಿಂದ ರೈತರಿಗೆ ಅವಶ್ಯಕ್ಯವಾದ ಕೃಷಿ ಉಪಕರಣಗಳು, ಔಷಧಗಳು, ಕ್ರಿಮಿನಾಶಕಗಳು, ಗೊಬ್ಬರಗಳು, ಬೀಜಗಳು ಇನ್ನಿತರ ಅವಶಕ್ಯತೆಗಳನ್ನು ತಾಲ್ಲೂಕು ಮಾರಾಟ ಸಹಕಾರ ಸಂಘಗಳು ಹಾಗೂ ಮತ್ತಿತ್ತರ ಸಹಕಾರ ಸಂಘಗಳಿಗೆ ಸರಬರಾಜು ಮಾಡುತ್ತಿಲ್ಲ. ಇದಕ್ಕೆ ಪೂರಕವಾಗಿ ಖರೀದಿ ವ್ಯವಸ್ಥೆಯನ್ನು ಪರಾಮರ್ಶಿಸಿದಾಗ, ಉದಾ: ಕಲಬುರ್ಗಿ (ಗುಲ್ಬರ್ಗ) ದಲ್ಲಿ ಬೇಳೆ ಖರೀದಿ ಮಾಡುವಾಗ, ಮಾರಾಟ ಮಹಾಮಂಡಳ ಪ್ರತಿನಿಧಿ ಖರೀದಿ ಮಾಡಲು ಹೋದ ದಿವಸ ಕ್ವಿಂಟಾಲಿಗೆ 500 ರೂಪಾಯಿ ಹೆಚ್ಚಾಗುತ್ತದೆ ಮತ್ತು ಹೋಗದಿದ್ದ ದಿವಸಕ್ಕೆ ಸಾಮಾನ್ಯ ದರಕ್ಕೆ ಮರಳುತ್ತದೆ. ಅಂದರೆ ಖರೀದಿ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬುದನ್ನು ಇದು ಸಮರ್ಥಿಸುತ್ತದೆ. ಇದೇ ವ್ಯವಸ್ಥೆ ಕೃಷಿ ಪತ್ತಿನ

ವ್ಯವಸ್ಥೆಯನ್ನು ವಿಮರ್ಶಿಸಿದರೆ ರಾಜ್ಯ ಅಪೆಕ್ಸ್ ಬ್ಯಾಂಕ್, ನಬಾರ್ಡ್ ಮೂಲಕ ಪಡೆದ ಕೃಷಿ ಸಾಲದ ವಿತರಣೆಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದೇ ರೀತಿ ಕರ್ನಾಟಕ ರಾಜ್ಯ ಹಾಲು ಮಹಾಮಂಡಳ ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಪ್ರಾಥಮಿಕ ಹಾಲು ಉತ್ಪಾದಕ ಸಂಗ್ರಹವಾದ ಹಾಲನ್ನು ಪಡೆದು ಸಂಸ್ಕರಿಸಿ ಗ್ರಾಹಕರಿಗೆ ವಿತರಣೆ ಮಾಡುವ ವ್ಯವಸ್ಥೆ ಸಮರ್ಪಕವಾಗಿದೆ. ಇದೇ ರೀತಿ ಎಣ್ಣೆ ಬೀಜಗಳ ಮಹಾಮಂಡಳದಲ್ಲಿಯೂ ಇದೇ ವ್ಯವಸ್ಥೆ ಇದ್ದರೂ ಅಷ್ಟು ಸಮರ್ಪಕವಾಗಿಲ್ಲ. ಅಂದರೆ ಸಹಕಾರಿ ಸಂಘಗಳ ವ್ಯವಹಾರ ಕೆಲವು ವಲಯಗಳಲ್ಲಿ ಮಾತ್ರ ಯಶಸ್ಸುಗಳಿಸಿದೆ.

7) **ಸಾಮಾಜಿಕ ಕಳಕಳಿ :** ಸಹಕಾರಿಯ ಸಂಯೋಜನೆ ಸದಸ್ಯರು/ಸಮಾನ ಮನಸ್ಕರು ಕೂಡಿ ರಚಿಸಿದ ಸಂಸ್ಥೆ ಮತ್ತು ಸದಸ್ಯೇತರರ ಜೊತೆ ವ್ಯವಹರಿಸುವುದನ್ನು ಕಾಯಿದೆ ನಿರ್ಬಂದಿಸುತ್ತಿದೆ. ಇದರ ಜೊತೆಗೆ ಸಮಾಜದ ಎಲ್ಲಾ ವರ್ಗದ ಜನರ ಏಳಿಗೆಗೆ ಸರ್ಕಾರಗಳು ಕ್ರಮ ಜರುಗಿಸಬೇಕೇ ಹೊರತು, ಸದಸ್ಯರೇ ರೂಪಿಸಿಕೊಂಡ ಸಹಕಾರಿ ಸಂಪನ್ಮೂಲದಿಂದ ಸಮಾಜದ ಅಭಿವೃದ್ಧಿಗೆ ವ್ಯವಹರಿಸಲು ಈ ಏಳನೇ ತತ್ವವನ್ನು 1995 ರಲ್ಲಿ ಸೇರಿಸಿದೆ. ಇದರಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಒಂದು ಗ್ರಾಮದ/ಪಟ್ಟಣದ, ಅರ್ಹ ವ್ಯಕ್ತಿಗಳು ಸದಸ್ಯರಾಗಬಹುದು. ಅಂತಹ ವ್ಯಕ್ತಿಗಳಿಗೆ ಸಹಕಾರಿ ಸೇವೆ ನೀಡುವುದು, ಅವರು ಆ ಸಹಕಾರಿಯ ಭಾಗವಾಗಿರುವುದರಿಂದ. ಸದಸ್ಯರ ಅರ್ಹತೆ ಗಳಿಸಲಾರದ ಸದಸ್ಯರ, ಸಹಕಾರಿ ಸೇವೆ ಪಡೆಯಲು ನಿರ್ಬಂಧ ಇರುವುದರಿಂದ, ಸದಸ್ಯರ ಎಲ್ಲಾ ಅಗತ್ಯಗಳನ್ನು ಪೂರೈಸಿ, ಉಳಿಯುವ ಹೆಚ್ಚುವರಿ ಸಂಪನ್ಮೂಲವನ್ನು ಸಮಾಜಿಕ ಅಭಿವೃದ್ಧಿಗೆ ಉಪಯೋಗಿಸಬಹುದು. ಕಾಯಿದೆ ಕಲಂ.10 ರಲ್ಲಿ ಲಾಭಾಂಶ ವಿಂಗಡಣೆ ಬಗ್ಗೆ ಅವಕಾಶ ಕಲ್ಪಿಸಿದ್ದು. ಸದಸ್ಯರಿಗೆ ಗರಿಷ್ಠ ಪ್ರಮಾಣದ ಪಾಲು ಬಂಡವಾಳದ ಮೇಲೆ ಡಿವಿಡೆಂಡ್ ಮತ್ತು ಇನ್ನಿತರ ಸೇವೆಗಳನ್ನು ನೀಡದ ನಂತರ ಹೆಚ್ಚುವರಿಯಾಗಿ ಉಳಿದ ಸಂಪನ್ಮೂಲವನ್ನು ಸಮಾಜಿಕ ಅಭಿವೃದ್ಧಿಗೆ ಬಳಸಬಹುದು. ಇದಕ್ಕಾಗಿ ಸಹಕಾರಿ ತನ್ನ ಉಪವಿಧಿಗಳ ಕಲಂ.10 ರಲ್ಲಿನ ಲಾಭಾ ವಿಂಗಡಣೆ ಮಾಡುವಾಗಿ, ಸಮಾಜದ ಅಭಿವೃದ್ಧಿಗೆ ಎಂದು ಒಂದು ನಿಧಿಯನ್ನು ಸ್ಥಾಪಿಸಿ, ಲಾಭಾಂಶದಿಂದ ನಿಧಿ ಸೃಷ್ಟಿಸಬಹುದು ಅಥವಾ ಈಗಾಗಲೆ ಸಹಕಾರಿಯಲ್ಲಿರುವ "ಸಾಮಾನ್ಯ ಕ್ಷೇಮಾಭಿವೃದ್ಧಿ ನಿಧಿ" ಗೆ ಶೇಕಡ ವಾರು ಹೆಚ್ಚು ಹಣ ತೆಗೆದಿರಿಸಿ, ಆ ಹಣವನ್ನು ಸಮಾಜದ ಅಭಿವೃದ್ಧಿಗೆ ಉಪಯೋಸಬಹುದು. ಇದಕ್ಕಾಗಿ ಒಂದು ಉದಾಹರಣೆ ನೀಡುವುದಾದರೆ, ಹಾಲು ಉತ್ಪಾದಕ ಸಹಕಾರಿಗಳು ತಾವು ಪಡೆಯುವ ಹಾಲಿನ ದರದ ಕೆಲವು ಭಾಗವನ್ನು ಜಿಲ್ಲಾ ಒಕ್ಕೂಟಗಳು ಸ್ಥಾಪಿಸಿರುವ ರೈತರ ಅಭಿವೃದ್ಧಿ ನ್ಯಾಸ (ಟ್ರಸ್ಟ್) ಸ್ಥಾಪಿಸಲಾಗಿದೆ. ಪ್ರತಿ ಲೀಟರ್ ಹಾಲಿಗೆ ಶೇಕಡವಾರು ಪ್ರಮಾಣವನ್ನು ಮುರಿದು ಈ ನಿಧಿಗೆ ಜಮಾ, ಮಾಡಲಾಗುತ್ತಿದೆ. ಈ ನಿಧಿಯನ್ನು ಒಕ್ಕೂಟದ ಮಂಡಳಿ ಸದಸ್ಯರು ಸದಸ್ಯರಿದ್ದು, ಅವರ ಕಾರ್ಯ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಮಂಜೂರಿ ಮಾಡುವ ವ್ಯವಸ್ಥೆ ಇದೆ. ಇದಕ್ಕೆ ಪೂರಕವಾಗಿ ವಿಧಾನ ಮಂಡಳ, ಲೋಕ ಸಭೆ, ನಗರ ಪಾಲಿಕೆ ಸದಸ್ಯರಿಗೆ ಕ್ಷೇತ್ರಾಭಿವೃದ್ಧಿಗೆ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಇದೆ. ಇದರಲ್ಲಿನ ಬಹಳಷ್ಟು ನ್ಯೂನತೆಗಳಿಂದ ಕೂಡಿದ್ದರೂ, ಸಮಾಜಿಕ ಅಭಿವೃದ್ಧಿಗೆ ಇಂತಹ ನಿಧಿ ಉಪಯೋಗುಸುತ್ತಾರೆ. ಆದರೆ ಸಹಕಾರಿಗಳು ತಮ್ಮ ಸಂಸ್ಥೆಯ ಲಾಭಾಂಶದಿಂದ ತೆಗೆದಿರಿಸಿದ ನಿಧಿಯಿಂದ, ತಮ್ಮ ಕಾರ್ಯವ್ಯಾಪ್ತಿಯ, ಸಮಾಜದ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಿದರೆ, ಅದು ಈ ತತ್ವಕ್ಕೆ ಪೂರಕವಾಗುತ್ತಿದೆ.

ಸಮಾಜಿಕ ಕಳಕಳಿ ಎಂಬ 7ನೇ ತತ್ವಗಳನ್ನು 1995 ರಲ್ಲಿ ಅಂತರರಾಷ್ಟ್ರೀಯ ಸಹಕಾರ ಒಕ್ಕೂಟ ಸೇರ್ಪಡೆಗೊಳಿಸಿದೆ. ಈ ತತ್ವದ ಉದ್ದೇಶ ಸಹಕಾರಿ ಸಂಸ್ಥೆಗಳು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಬೇಕೆಂದು, ಇದಕ್ಕೆ ಪೂರಕವಾಗಿ ನಾವು ವಿಮರ್ಶಿಸಬೇಕಾದ ಅಂಶಗಳೆಂದರೆ, ಸಮಾನ ಮನಸ್ಕರು ತಮ್ಮ ಸಂಪನ್ಮೂಲವನ್ನು ತಮ್ಮ ಆರ್ಥಿಕ ಬೆಳವಣಿಗಾಗಿ ರಚಿಸಿಕೊಂಡ ಸಂಸ್ಥೆಯೆಂದರೂ, ಸಮಾಜದ ಎಲ್ಲಾ ವರ್ಗದ ವ್ಯಕ್ತಿಗಳು ಸದಸ್ಯರಾಗಬೇಕೆಂದು ಆಶಯದಿಂದ. 97ನೇ ಸಂವಿಧಾನ ತಿದ್ದುಪಡಿಯ ನಂತರ ಸಹಕಾರ ಸಂಘಗಳ ಸ್ಥಾಪನೆ ಒಂದು ಮೂಲಭೂತ ಹಕ್ಕಾಗಿರುವುದರಿಂದ, ಪ್ರತಿಯೊಬ್ಬ ಭಾರತೀಯ ಪ್ರಜೆ ಒಂದಲ್ಲೊಂದು ಸಹಕಾರಿ ಸಂಘದ ಸದಸ್ಯನಾಗಿ ಆ ಸಹಕಾರ ಸಂಸ್ಥೆಯ ಕೊಡಮಾಡುವ ಸೌಲತ್ತುಗಳನ್ನು ಪಡೆದರೆ, ಎಲ್ಲಾ ವರ್ಗದ ಸದಸ್ಯರು ತಮ್ಮ ಆರ್ಥಿಕ ಬೆಳವಣಿಗೆಗೆ ಸಹಕಾರ ಸಂಸ್ಥೆಯನ್ನು ಉಪಯೋಗಿಸಿಕೊಂಡಾಗ, ಸಮಾಜದ ಬೆಳವಣಿಗೆಯೂ ಸಮಾನಾಂತರವಾಗಿ ಬೆಳೆಯುತ್ತದೆ. ಅಂದರೆ ಸಮಾಜಿಕ ಕಳಕಳಿ ತತ್ವವನ್ನು ಮೊದಲನೇ 4 ತತ್ವಗಳನ್ನು ಅಳವಡಿಸಿಕೊಂಡು, ಎಲ್ಲಾ ವರ್ಗದ ಸದಸ್ಯರಿಗೂ ಸೌಲತ್ತುಗಳನ್ನು ಕಲ್ಪಿಸಿದರೆ ಮತ್ತು ಸಮಾಜದ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಿದಾಗ, ಒಂದು ಸಹಕಾರಿ ಸಂಸ್ಥೆಯ ಜವಾಬ್ದಾರಿ ಮೂಲಕ ಸಮಾಜದ ಬೆಳವಣಿಗೆಗೆ ಭಾಗಿಯಾಗಬಹುದು. ಸಹಕಾರಿ ಸಂಸ್ಥೆಯ ಪ್ರತಿಯೊಬ್ಬ ಸದಸ್ಯನ್ನು ಅವಶ್ಯಕ ಸೌಲತ್ತುಗಳನ್ನು ಮತ್ತು ಸೌಲಭ್ಯಗಳನ್ನು ಪಡೆದಾಗ, ಆ ಸಹಕಾರಿ ತನ್ನ ಸಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದಂತಾಗುತ್ತದೆ.

ಸಂಯುಕ್ತ ಸಹಕಾರಿ ಈ ವಿಷಯದಲ್ಲಿ ಮಾರ್ಗದರ್ಶನ ಸೂತ್ರಗಳನ್ನು ರೂಪಿಸಿ, ಪ್ರತಿ ಸಹಕಾರಿ ತನ್ನ ವಾರ್ಷಿಕ ಲಾಭಾಂಶದಲ್ಲಿ ನಿಗದಿ ಪಡಿಸಿದ ದರದಲ್ಲಿ, ಸಾಮಾನ್ಯ ಕಲ್ಯಾಣ ನಿಧಿ ಅಥವಾ ಸಾಮಾಜಿಕ ಅಭಿವೃದ್ಧಿ ನಿಧಿ ಎಂದು ಉಪವಿಧಿಗಳಲ್ಲಿ ಸೇರಿಸಿ ಸಮಾಜಿಕ ಕಳಕಳಿ ತೋರಿಸಬಹುದು ಇದನ್ನು ಸಂಯುಕ್ತ ಸಹಕಾರಿಯ ಮಂಡಳಿ ತಾತ್ವಿಕ ತೀರ್ಮಾನ ತೆಗೆದುಕೊಂಡು ಮಾರ್ಗದರ್ಶನ ಸೂತ್ರಗಳನ್ನು ರೂಪಿಸಬಹುದು.

# ಅಧ್ಯಾಯ – 5

# 97ನೇ ಸಂವಿಧಾನ ತಿದ್ದುಪಡಿ (2011) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997

"ಸಹಕಾರ" ಎಂಬ ವಿಷಯ ಸಂವಿಧಾನದ ಅನುಬಂಧದಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತಿದೆ. ಸಹಕಾರ ವಿಷಯದಲ್ಲಿ ಕಾಯಿದೆ ರೂಪಿಸುವ ಅಧಿಕಾರ ಇರುವುದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುತ್ತಿದೆ. ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳಿಗೆ ಸಹಕಾರ ಸಂಸ್ಥೆ ಸ್ಥಾಪನೆಗೆ ಸಂಬಂಧಪಟ್ಟಂತೆ ಬಹುರಾಜ್ಯ ಸಹಕಾರ ಕಾಯಿದೆ 2002 ಅನ್ವಯವಾಗುತ್ತಿದೆ. ಇದನ್ನು ಕೇಂದ್ರ ಸರ್ಕಾರ ಕಾಯಿದೆ ರೂಪಿಸಿದೆ.

1992ರಲ್ಲಿ ಕೇಂದ್ರ ಸರ್ಕಾರ, ಯೋಜನಾ ಆಯೋಗದ ಮುಖಾಂತರ, ಒಂದು ಮಾದರಿ ಸಹಕಾರ ಕಾಯಿದೆ ರೂಪಿಸಿ, (ಶ್ರೀ ಚೌಧರಿ ಬ್ರಹ್ಮಪ್ರಕಾಶ್ ಸಮಿತಿ) ಅದನ್ನು ರಾಜ್ಯಗಳಿಗೆ ರವಾನಿಸಿತು. ಈ ಮಾದರಿ ಕಾಯಿದೆಯಲ್ಲಿ, ಸಹಕಾರ ಸಂಸ್ಥೆಗಳನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಿ, ನಿಬಂಧಕರು/ಸರ್ಕಾರಕ್ಕೆ ಇದ್ದ ಹಲವು ನಿಯಂತ್ರಣ ಅವಕಾಶವನ್ನು ಕಿತ್ತು ಹಾಕಲು ಸೂಚಿಸಿತ್ತು. ಅದರಂತೆ ಕರ್ನಾಟಕದಲ್ಲಿ ಈ ಕಾಯಿದೆ ಅಳವಡಿಸಿಕ್ಕೊಳ್ಳುವುದರ ಬಗ್ಗೆ ಚರ್ಚೆಗೆ ಬಂದಾಗ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ಕ್ಕೆ ಉದಾರೀಕೃತ ನೀತಿ ಅಳವಡಿಸಿ ಮಾರ್ಪಾಡು ಮಾಡುವುದರ ಜೊತೆಗೆ ಹೊಸದಾಗಿ ಒಂದು ಸೌಹಾರ್ದ ಕಾಯಿದೆ ರೂಪಿಸಲು ತೀರ್ಮಾನಿಸಿತು. ಇದಕ್ಕಾಗಿ ಕರ್ನಾಟಕ ಸರ್ಕಾರ ಒಂದು ಸಹಕಾರ ನೀತಿಯನ್ನು ರೂಪಿಸಿ, ಸಂಪುಟದ ಒಪ್ಪಿಗೆ ಪಡೆದು, ಗೆಜೆಟ್‌ನಲ್ಲಿ ಪ್ರಕಟಿಸಲಾಯಿತು. 1959ರ ಕಾಯಿದೆಯಲ್ಲಿಯೂ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂನಿಯಂತ್ರಣವನ್ನು 1998ರ ತಿದ್ದುಪಡಿಯಲ್ಲಿ ನೀಡಿದ್ದರೂ, 2001 ರಿಂದ 2004 ರವರೆಗೆ ಆ ಕಾಯಿದೆ ತಿದ್ದುಪಡಿತಂದು, ನಿಬಂಧಕರ/ಸರ್ಕಾರದ ನಿಯಂತ್ರಣ ಹೇರಲು ಪ್ರಯತ್ನ ಪಡಲಾಯಿತು.

ಕರ್ನಾಟಕ ಸಹಕಾರಿ ನೀತಿಗೆ ಪೂರಕವಾಗಿ ರಚಿಸಿದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ರಲ್ಲಿ ಸಹಕಾರಿ ಸಂಸ್ಥೆಗಳಿಗೆ ನಿಬಂಧಕರ/ಸರ್ಕಾರದ ನಿಯಂತ್ರಣದಿಂದ ಹೊರಗಿಡುವ ಪ್ರಯತ್ನ ಮಾಡಿದ್ದು ಸಂಸ್ಥೆಯನ್ನು ನೋಂದಾಯಿಸುವುದು, ಉಪವಿಧಿಗಳ ತಿದ್ದುಪಡಿ, ವಿವಾದಗಳ ಇತ್ಯರ್ಥ, ಅಧಿಭಾರ ಅರ್ಜಿ, ನೋಂದಣಿ, ರದ್ದತಿ ಹೊರತು ಪಡಿಸಿ, ಉಳಿದಲ್ಲಿ ಅಧಿಕಾರಗಳು ಕಾಯಿದೆಯಲ್ಲಿಯೇ ರಚಿಸಿದ ಪ್ರಜಾಪ್ರಭುತ್ವದಡಿ ರಚನೆಯಾದ "ಸಂಯುಕ್ತ ಸಹಕಾರಿ" ಎಂಬ ಶಾಸನ ಬದ್ದ ಸಂಸ್ಥೆಗೆ ವರ್ಗಾಯಿಸಿತು. ಆ ನಂತರದ ಬೆಳವಣಿಗೆಗಳನ್ನು ವಿಚಾರಣೆ, ರದ್ದತಿ, ಲೆಕ್ಕತಪಾಸಕರ ಪಟ್ಟಿ ತಯಾರಿಕೆ, ಚುನಾವಣೆ, ವಿಷಯಗಳನ್ನು ಲೆಕ್ಕಪರಿಶೋಧಕರಿಗೆ, ಚುನಾವಣಾ ಪ್ರಾಧಿಕಾರಕ್ಕೆ ಹಾಗೂ ನಿಬಂಧಕರಿಗೆ ವರ್ಗಾವಣೆ ಮಾಡಲಾಯಿತು. ಇದಕ್ಕೆ ಸಂಯುಕ್ತ ಸಹಕಾರಿಯೂ ಸಣ್ಣ ನ್ಯೂನತೆಗಳಿಂದ ಮತ್ತು ದೊಡ್ಡ ಪ್ರಮಾಣದ ಪ್ರತಿರೋಧ ವ್ಯಕ್ತಪಡಿಸದೆ ಇದ್ದುದರಿಂದ, ಆ ಅಧಿಕಾರಗಳು ಬೇರೆ ಪ್ರಾಧಿಕಾರಿಗಳಿಗೆ ವರ್ಗಾವಣೆ ಹೊಂದಿದವು.

ಈ ಸೌಹಾರ್ದ ಕಾಯಿದೆಯಲ್ಲಿನ ಮತ್ತೊಂದು ಪ್ರಮುಖ ಉದ್ದೇಶವೆಂದರೆ, ನೋಂದಾಯಿತ ಪ್ರತಿಯೊಂದು ಸಹಕಾರಿಯೂ, ಸಂಯುಕ್ತ ಸಹಕಾರಿ ಸದಸ್ಯತ್ವ ಪಡೆಯುವುದು. 1959ರ ಕಾಯಿದೆಯಲ್ಲಿನ ಸಹಕಾರ ಮಹಾಮಂಡಳ/ ಜಿಲ್ಲಾ ಒಕ್ಕೂಟಗಳಲ್ಲಿ ಸದಸ್ಯತ್ವ ಪಡೆದ ಸಂಖ್ಯೆ ನೋಂದಾಯಿತ ಸಹಕಾರಿ ಸಂಘಗಳ ಶೇ.20% ಕ್ಕೆ ಮೀರುವುದಲ್ಲ. ಸ್ವಹಿತಾಸಕ್ತಿ, ಸ್ವಜನ ಪಕ್ಷಪಾತದ ಸದಸ್ಯತ್ವ ನೀಡಿಕೆಯಿಂದ, ಚುನಾವಣೆಯಲ್ಲಿ ಗೆಲವು ಸಾಧಿಸುವ ಉದ್ದೇಶದಿಂದ ಎಲ್ಲಾ ಸಹಕಾರ ಸಂಘಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಿಲ್ಲ/ಕೊಳ್ಳುತ್ತಿಲ್ಲ. ಇದರ ಜೊತೆಗೆ ಜಿಲ್ಲಾ ಒಕ್ಕೂಟಗಳ ಮಂಡಳಿ ರಚನೆಯಾದ ಸ್ಥಿತಿಯಲ್ಲಿಯೇ ಮುಂದುವರಿದದ್ದು, ಹೊಸ ಪೀಳಿಗೆ/ಯುವಕರಿಗೆ ಅವಕಾಶವನ್ನು ನೀಡುತ್ತಿಲ್ಲ. ರಾಜ್ಯ ಸಹಕಾರ ಮಹಾಮಂಡಳದ ಮಂಡಳಿಯನ್ನು ಮತ್ತು ಜಿಲ್ಲಾ ಒಕ್ಕೂಟಗಳ ಮಂಡಳಿಯಲ್ಲಿನ ಮಂಡಳಿ ಸದಸ್ಯರಲ್ಲಿ ಕೇಳಿದ 25 ವರ್ಷಗಳಿಂದ ದೊಡ್ಡ ಪ್ರಮಾಣದ ಬದಲಾವಣೆ ಆಗಿಲ್ಲ.

ಅಂದರೆ ಪ್ರಜಾಪ್ರಭುತ್ವ ನೀತಿ ಅಳವಡಿಸಿಕೊಂಡಿದ್ದರೂ – ಪ್ರಾಥಮಿಕ ಹಂತದಿಂದ ರಾಜ್ಯ ಮಟ್ಟದ ಸಹಕಾರಿ ಸಂಸ್ಥೆಗಳಲ್ಲಿ ಮಂಡಳಿ ಸದಸ್ಯರು ಪದಾಧಿಕಾರಿಗಳಲ್ಲಿ ದೊಡ್ಡ ಪ್ರಮಾಣದ ಬದಲಾವಣೆಯಾಗುತ್ತಲೇ ಇಲ್ಲ. ಇದಕ್ಕೆ ಹೊರತಾಗಿ ಸೌಹಾರ್ದ ಕಾಯಿದೆ ಬದಲಾವಣೆ ತರುವ ಅವಕಾಶ ಇದ್ದರೂ, ಈ ಹೊಸ ವ್ಯವಸ್ಥೆಯಲ್ಲಿಯೂ ಅಷ್ಟೆ ದೊಡ ಪ್ರಮಾಣದ ಬದಲಾವಣೆ ತರಲು ಸಾಧ್ಯವಾಗಿಲ್ಲ. ಅದಕ್ಕೆ ಮುಖ್ಯ ಕಾರಣ, ಸ್ವಜನ ಪಕ್ಷಪಾತ, ಸ್ವಹಿತಾಸಕ್ತಿ, ಕುಲಭಾಂದವರಿಗೆ ಅವಕಾಶ, ಇಂತಹ ನ್ಯೂನತೆಗಳಿಂದ ಸಹಕಾರಿ ಮಂಡಳಿ ರಚನೆಯಲ್ಲಿ ಯಾವುದೇ ಮಾರ್ಪಾಡು ಆಗುತ್ತಿಲ್ಲ. ಒಂದು ಸಹಕಾರಿ ಸಂಸ್ಥೆಯಲ್ಲಿ ಹುಟ್ಟು ಹಾಕುವಾಗ, ಆ ಸಂಸ್ಥೆ ಮುನ್ನಡೆಸಲು ಚುನಾಯಿತ ಪ್ರತಿನಿಧಿಗಳಿಗೆ ಸಹಾಯ ಮಾಡಲು ನೌಕರರ ಅವಶ್ಯಕತೆ ಇದ್ದು, ಪ್ರಾರಂಭಿಕ ಹಂತದಲ್ಲಿ ಅಧ್ಯಕ್ಷರು ಮತ್ತು ಅವರ ಹಿಂಬಾಲಕರಿಗೆ ಅವಕಾಶ ಪಡೆಯುತ್ತಿದ್ದು, ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಸಹಕಾರಿಸುವ ಬದಲಾಗಿ, ನೇಮಕ ಮಾಡಿದ ಪದಾಧಿಕಾರಿಗಳಿಗೆ ನಿಷ್ಠೆ ತೋರಿಸುತ್ತಾ, ನೇಮಕ ಮಾಡಿದವರೆ, ಅಧಿಕಾರದಲ್ಲಿ ಇಲ್ಲದೇ ಇದ್ದರೂ, ಆ ಸಂಸ್ಥೆಯೂ ನಿಯಂತ್ರಿಸುವ ಹಕ್ಕು ಪ್ರಾಪ್ತವಾಗುವಂತೆ ನೋಡಿಕೊಳ್ಳುತ್ತಾರೆ.

97ನೇ ಸಂವಿಧಾನ ತಿದ್ದುಪಡಿಯಿಂದ ರಾಜ್ಯದಲ್ಲಿ ಒಂದೇ ಸಹಕಾರಿ ನೀತಿ ಅನುಸರಿಸಿದರೂ, ಅದನ್ನು ಜಾರಿ ಮಾಡುವಾಗ, ಸಹಕಾರಿ ಮುಖಂಡರ ನಿಸ್ವಾರ್ಥ ಸೇವೆ ಅಪೇಕ್ಷೆ ಪಡುವುದು ಸ್ವಾಭಾವಿಕವಿದ್ದರೂ, ಇತ್ತೀಚಿನ, ರಾಜಕೀಯ ಬೆಳವಣಿಗಳಿಂದ ಮಂಡಳಿ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮಗಳು, ನೌಕರರ ನೇಮಕಾತಿ ಅಕ್ರಮಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದು, ಇದನ್ನು ನಿಯಂತ್ರಿಸಬೇಕಾದ ಅವಶ್ಯಕತೆ ಇದೆ. ಆದರೆ ಸಹಕಾರ ಸಂಸ್ಥೆಗಳ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಗಳು ನಡೆಯುವ ಭ್ರಷ್ಟಾಚಾರ, ಅಕ್ರಮಗಳೇ, ಸಹಕಾರಿ ಸಂಸ್ಥೆಗಳಿಗೆ ಮಾದರಿಯಾಗುತ್ತಿವೆ. ಇತ್ತೀಚಿನ ದಿನಗಳಲ್ಲಿ ಮಂಡಳಿ ರಚನೆಯನ್ನು ಒಂದು ಸ್ವಾಯತ್ತ ಸಂಸ್ಥೆಗೆ ನೀಡಿದ್ದರೂ ಚುನಾವಣೆ ನಡೆಸುವ ಅಧಿಕಾರಿಗಳ ಲಾಲಸೆಯಿಂದ, ಮತದಾರರಪಟ್ಟಿ ತಯಾರಿಕೆಯಿಂದ ಹಿಡಿದು – ಚುನಾವಣಾ ಫಲಿತಾಂಶದವರೆಗೆ, ಅಧಿಕಾರಿಗಳ ಭ್ರಷ್ಟತನ, ತಾಂಡವ ವಾಡುತ್ತಿದೆ. ಈ ರೀತಿ ಆಯ್ಕೆಯಾದ ಮಂಡಳಿ ಮಾಡುವ ಮೊದಲ ಪ್ರಯತ್ನವೆಂದರೆ, ಚುನಾವಣೆಗೆ ಖರ್ಚು ಮಾಡಿದ ಹಣವನ್ನು ದುಡಿಯುವುದು, ಅಂದರೆ ನೌಕರರ ನೇಮಕಾತಿ ಮತ್ತು ಸಾಲ ಮಂಜೂರಾತಿ, ಮೂಲಕ ಆದಾಯ ರೂಪ ಕಂಡುಕೊಳ್ಳುವುದು ಹಲವಾರು ಸಹಕಾರಿ ಸಂಸ್ಥೆಗಳಲ್ಲಿ ನಡೆಯುವ ಚುನಾವಣಾ ವೆಚ್ಚಗಳು ವಿಧಾನ ಸಭೆ/ಲೋಕ ಸಭೆ ಚುನಾವಣಾ ವೆಚ್ಚದಂತೆ ಇರುತ್ತಿದೆ. ನೌಕರರ ನೇಮಕಾತಿಯಲ್ಲಿ ಅಭ್ಯರ್ಥಿಗಳಿಂದ ಪಡೆಯುವ ಲಂಚ ಸರ್ಕಾರಿ ನೌಕರಿ ಪಡೆಯುವ ವೆಚ್ಚಕ್ಕೆ ಸಮಾನಂತರವಾಗಿಯೇ ಇರುತ್ತವೆ. ಇಂತಹ ಸಂದರ್ಭದಲ್ಲಿ ನೇಮಕವಾದ ನೌಕರಿಗಳು, ಸಂಸ್ಥೆಗೆ ನಿಷ್ಠೆಯಿಂದ ದುಡಿಯುವಂತೆ ಅಪೇಕ್ಷೆ ಪಡುವುದು ವ್ಯರ್ಥ. ಏಕೆಂದರೆ ಅವರು ಹೂಡಿದ ಬಂಡವಾಳವನ್ನು (ಲಂಚವನ್ನು) ವಸೂಲಿ ಮಾಡುವುದೇ ಪ್ರಥಮ ಕರ್ತವ್ಯ. ಕೆಲವು ತಾಲ್ಲೂಕು ಮಟ್ಟ ಸಂಸ್ಥೆಗಳು ನೌಕರಿಗೆ ಸಂಬಳ ನೀಡಲು, ಸದಸ್ಯರು ಸೃಷ್ಟಿಸಿದ ಆಸ್ತಿಯನ್ನು ಮಾರಾಟ ಮಾಡಿ, ಸಂಬಳ ನೀಡುತ್ತಿವೆ. ಸದಸ್ಯರೇ ಮಾಲಿಕರು ಎಂಬುದನ್ನು ಗಮನಿಸಿದಾಗ ನೌಕರರ ಸಂಬಳ ನೀಡಲು ಸಹಕಾರ ಸಂಸ್ಥೆ ಕಟ್ಟಲಾಗಿದೆ ಎಂದು ಅರ್ಥೈಸಬೇಕೇ?

**97ನೇ ಸಂವಿಧಾನ ತಿದ್ದುಪಡಿ ಕೆಳಗಿನಂತೆ ಸೇರಿಸಲಾಗಿದೆ.**

**ಸಂವಿಧಾನ (ತೊಂಭತ್ತೇಳನೇ ತಿದ್ದುಪಡಿ) ಅಧಿನಿಯಮ, 2011**

| | | |
|---|---|---|
| ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ | | (1) ಈ ಅಧಿನಿಯಮವನ್ನು ಸಂವಿಧಾನ (ತೊಂಭತ್ತೇಳನೇ ತಿದ್ದುಪಡಿ) ಅಧಿನಿಯಮ, 2011 ಎಂದು ಕರೆಯತಕ್ಕದ್ದು.<br>(2) ಇದು ಕೇಂದ್ರ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು. |
| 19ನೇ ಅನುಚ್ಛೇದದ ತಿದ್ದುಪಡಿ | | ಸಂವಿಧಾನದ ಭಾಗ III ರಲ್ಲಿ 19ನೇ ಅನುಚ್ಛೇದದಲ್ಲಿ, ಖಂಡ (1) ರಲ್ಲಿ, ಉಪಖಂಡ (ಸಿ) ನಲ್ಲಿ 'ಯೂನಿಯನ್ನುಗಳನ್ನು' ಎಂಬ ಪದದ ನಂತರ 'ಅಥವಾ ಸಹಕಾರ ಸಂಘಗಳನ್ನು' ಎಂಬ ಪದಗಳನ್ನು ಸೇರಿಸತಕ್ಕದ್ದು. |
| 43ಬಿ ಎಂಬ ಹೊಸ ಅನುಚ್ಛೇದದ ಸೇರ್ಪಡೆ | | ಸಂವಿಧಾನದ ಭಾಗ IV ರಲ್ಲಿ ಅನುಚ್ಛೇದ 43ಎ ನಂತರ, ಈ ಮುಂದಿನ ಅನುಚ್ಛೇದವನ್ನು ಸೇರಿಸತಕ್ಕದ್ದು. ಎಂದರೆ |
| ಸಹಕಾರ ಸಂಘಗಳ ಪ್ರೋತ್ಸಾಹನ | | "43ಬಿ ರಾಜ್ಯವು ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆ/ ನಿರ್ವಹಣೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನ ಪಡತಕ್ಕದ್ದು" |
| ಹೊಸ ಭಾಗ IX ಬಿ ದ ಸೇರ್ಪಡೆ | | 4. ಸಂವಿಧಾನ 'ಭಾಗ IXJ' ದ ನಂತರ, ಈ ಮುಂದಿನ ಭಾಗವನ್ನು ಸೇರಿಸತಕ್ಕದ್ದು. ಎಂದರೆ |

| | | |
|---|---|---|
| ಪರಿಭಾಷೆಗಳು | 243 ಝಡ್‌ಹೆಚ್ | 'ಭಾಗ **IX** ಬಿ'<br>ಸಹಕಾರ ಸಂಘಗಳು<br><br>ಈ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು –<br>ಎ)"ಅಧಿಕೃತ ವ್ಯಕ್ತಿ" ಎಂದರೆ ಅನುಚ್ಛೇದ 243 ಝಡ್‌ಕ್ಯೂ ನಲ್ಲಿ ಹಾಗೆ ಉಲ್ಲೇಖಿಸಿದ ವ್ಯಕ್ತಿ;<br>ಬಿ) "ಸಮಿತಿ/ಮಂಡಲಿ, ಎಂದರೆ ಯಾವುದೇ ಹೆಸರಿನಿಂದ ಕರೆಯಲ್ಪಟ್ಟರೂ ಒಂದು ಸಹಕಾರ ಸಂಘದ ಕೆಲಸ ಕಾರ್ಯಗಳ ನಿರ್ವಹಣೆ/ವ್ಯವಸ್ಥಾಪನೆಯ ನಿಯಂತ್ರಣ ಮತ್ತು ಮಾರ್ಗದರ್ಶನವನ್ನು ವಹಿಸಿಕೊಟ್ಟ ನಿರ್ದೇಶಕರ ಮಂಡಳಿ ಅಥವಾ ಆಡಳಿತ ಮಂಡಳಿ/ ಆಡಳಿತ ಸಮಿತಿ;<br>ಸಿ) 'ಸಹಕಾರ ಸಂಘ' ಎಂದರೆ ರಾಜ್ಯದಲ್ಲಿ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಯಾವುದೇ ಕಾನೂನಿ ನಡಿಯಲ್ಲಿ ನೋಂದಾಯಿತವಾಗಿರುವ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಸಂಘ;<br>ಡಿ) 'ಬಹುರಾಜ್ಯ ಸಹಕಾರ ಸಂಘ' ಎಂದರೆ ಯಾವುದೇ ಒಂದು ರಾಜ್ಯಕ್ಕೆ ಸೀಮಿತ ವಾಗಿರದ ಉದ್ದೇಶಗಳನ್ನುಳ್ಳ ಹಾಗೂ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಹಾಲಿ ಜಾರಿಯಲ್ಲಿರುವ ಯಾವುದೇ ಕಾನೂನಿ ನಡಿಯಲ್ಲಿ ನೋಂದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಲಾದ ಸಂಘ;<br>ಇ) 'ಪದಾಧಿಕಾರಿ' ಎಂದರೆ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ, ಉಪಸಭಾಪತಿ, ಕಾರ್ಯದರ್ಶಿ ಅಥವಾ ಖಜಾಂಚಿ ಹಾಗೂ ಯಾವುದೇ ಸಹಕಾರ ಸಂಘದಲ್ಲಿ ಆಡಳಿತ ಸಮಿತಿಯಿಂದ ಚುನಾಯಿತಗೊಳ್ಳುವ ಇತರ ಯಾವುದೇ ವ್ಯಕ್ತಿ.<br>ಎಫ್) 'ರಿಜಿಸ್ಟ್ರಾರ್' ಎಂದರೆ ಬಹುರಾಜ್ಯ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ನಿಯುಕ್ತಗೊಂಡ ಕೇಂದ್ರೀಯ ರಿಜಿಸ್ಟ್ರಾರ್ ಮತ್ತು ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಯಾವುದೇ ರಾಜ್ಯ ವಿಧಾನ ಮಂಡಲದಿಂದ ರಚಿತವಾದ ಯಾವುದೇ ಕಾನೂನಿನ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ನಿಯುಕ್ತಿ ಗೊಂಡ ಸಹಕಾರ ಸಂಘಗಳ ರಿಜಿಸ್ಟ್ರಾರ್;<br>ಜಿ) 'ರಾಜ್ಯ ಕಾಯಿದೆ' ಎಂದರೆ ಒಂದು ರಾಜ್ಯ ವಿಧಾನ ಮಂಡಲದಿಂದ ರಚಿತ ಗೊಂಡ ಯಾವುದೇ ಕಾನೂನು;<br>ಹೆಚ್) 'ರಾಜ್ಯಮಟ್ಟದ ಸಹಕಾರ ಸಂಘ' ಎಂದರೆ ಇಡೀ ರಾಜ್ಯದ ಕಾರ್ಯ ವ್ಯಾಪ್ತಿಯನ್ನು ಹೊಂದಿರುವ ಸಹಕಾರ ಸಂಘ ಮತ್ತು ರಾಜ್ಯದ ವಿಧಾನ ಮಂಡಲದಿಂದ ರಚಿತಗೊಂಡು ಅನುಮೋದಿಸಲ್ಪಟ್ಟ ಯಾವುದೇ ಕಾನೂನಿನ ರೀತ್ಯಾ ವ್ಯಾಖ್ಯಾನಿಸಿದ ಸಂಘ; |
| ಸಹಕಾರ ಸಂಘಗಳ ಸಂಘಟನೆ | 243 ಝಡ್‌ಐ | ಈ ಭಾಗದ ಉಪಬಂಧಗಳಿಗೆ ಒಳಪಟ್ಟು ರಾಜ್ಯದ ವಿಧಾನ ಮಂಡಲವು ಸ್ವಇಚ್ಛಾ ರಚನೆ, ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳ ಸಂಘಟನೆ, ನಿಯಂತ್ರಣ ಮತ್ತು ಸಮಾಪನೆಗೆ ಸಂಬಂಧಪಟ್ಟಂತೆ ಕಾನೂನನ್ನು ರಚಿಸಬಹುದು. |

| | | |
|---|---|---|
| ಆಡಳಿತ ಸಮಿತಿ ಸದಸ್ಯರ ಸಂಖ್ಯೆ ಮತ್ತು ಪದಾವಧಿ ಹಾಗೂ ಪದಾಧಿಕಾರಿಗಳ ಪದಾವಧಿ | 243 ಝಡ್‌ಜೆ | 1) ರಾಜ್ಯ ವಿಧಾನ ಮಂಡಲವು ರೂಪಿಸುವ ಕಾನೂನಿನಲ್ಲಿ ನಿಗದಿ ಪಡಿಸುವ ಸಂಖ್ಯೆಯಷ್ಟು ನಿರ್ದೇಶಕರನ್ನು ಒಂದು ಸಹಕಾರ ಸಂಘದ ಆಡಳಿತ ಸಮಿತಿಯು ಹೊಂದಿರತಕ್ಕದ್ದು. ಪರಂತು ಯಾವುದೇ ಸಹಕಾರ ಸಂಘದ ಗರಿಷ್ಠ ನಿರ್ದೇಶಕರ ಸಂಖ್ಯೆಯು ಇಪ್ಪತ್ತೊಂದಕ್ಕೆ ಮೀರತಕ್ಕದ್ದಲ್ಲ.<br>ಮತ್ತು ಪರಂತು ರಾಜ್ಯ ವಿಧಾನ ಮಂಡಲವು ರೂಪಿಸುವ ಕಾನೂನಿನಲ್ಲಿ ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಪ್ರತಿ ಸಹಕಾರ ಸಂಘದ ಆಡಳಿತ ಸಮಿತಿಯಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮತ್ತು ಎರಡು ಸ್ಥಾನಗಳನ್ನು ಮಹಿಳೆಯರಿಗೆ, ಅಂತಹ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ ಕಾಯ್ದಿರಿಸಲು ಅವಕಾಶ ಕಲ್ಪಿಸತಕ್ಕದ್ದು.<br>2) ಆಡಳಿತ ಸಮಿತಿಯು ಚುನಾಯಿತ ಸದಸ್ಯರ ಮತ್ತು ಅದರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷ ಇರತಕ್ಕದ್ದು ಹಾಗೂ ಪದಾಧಿಕಾರಿಗಳ ಅವಧಿಯು ಆಡಳಿತ ಸಮಿತಿಯ ಅವಧಿಯ ಜೊತೆಗೆ ಅಂತ್ಯ **(co-terminus)** ವಾಗತಕ್ಕದ್ದು.<br>ಪರಂತು ಆಡಳಿತ ಸಮಿತಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ ಆಡಳಿತ ಸಮಿತಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿದೆಯೋ ಅಂತಹ ವರ್ಗದ ಸದಸ್ಯರೊಳಗೆ ನಾಮಕರಣ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು.<br>3) ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನಿನಲ್ಲಿ ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರ ಸಂಘವು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಆಡಳಿತ ಸಮಿತಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು.<br>ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು, ಖಂಡ (1) ರಲ್ಲಿ ನಿರ್ದಿಷ್ಟ ಪಡಿಸಿದ ಇಪ್ಪತ್ತೊಂದು ನಿರ್ದೇಶಕರ ಜೊತೆಗೆ (ಹೆಚ್ಚುವರಿಯಾಗಿ) ಎರಡಕ್ಕೆ ಮೀರತಕ್ಕದ್ದಲ್ಲ.<br>ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಅಧಿಕಾರವುಳ್ಳವರಾಗಿ ಸಹಕಾರ ಸಂಘದ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳವರಾಗಿರತಕ್ಕದ್ದಲ್ಲ ಅಥವಾ ಆಡಳಿತ ಸಮಿತಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.<br>ಮತ್ತೂ ಪರಂತು, ಒಂದು ಸಹಕಾರ ಸಂಘದ ಕಾರ್ಯಾನುಗುಣ ನಿರ್ದೇಶಕರೂ **(Functional Directors)** ಸಹ ಆಡಳಿತ ಸಮಿತಿಯ ಸದಸ್ಯರಾಗಿರತಕ್ಕದ್ದು ಹಾಗೂ ಖಂಡ (1) ರ ಮೊದಲ ಪರಂತುಕದಲ್ಲಿ ನಿರ್ದಿಷ್ಟ ಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಸದಸ್ಯರನ್ನು ಹೊರಗಿಡತಕ್ಕದ್ದು. |

| | | |
|---|---|---|
| ಆಡಳಿತ ಸಮಿತಿಯ ಸದಸ್ಯರ ಚುನಾವಣೆ | 243 ಝಡ್‌ಕೆ | 1) ರಾಜ್ಯ ವಿಧಾನ ಮಂಡಳವು ರೂಪಿಸುವ ಯಾವುದೇ ಕಾನೂನಿನಲ್ಲಿ ಏನೇ ಹೇಳಲಾಗಿದ್ದರೂ ಸಹ, ನಿರ್ಗಮಿಸುತ್ತಿರುವ ಆಡಳಿತ ಸಮಿತಿಯ ಸದಸ್ಯರ ಪದಾವಧಿಯು ಸಮಾಪ್ತಿಯಾದ ಕೂಡಲೇ ಹೊಸದಾಗಿ ಚುನಾಯಿತರಾದ ಆಡಳಿತ ಸಮಿತಿಯ ಸದಸ್ಯರು ಪದಗ್ರಹಣ ಮಾಡುವುದನ್ನು ಖಾತ್ರಿ ಪಡಿಸಿಕೊಳ್ಳಲು ಅನುವಾಗುವಂತೆ ಆಡಳಿತ ಸಮಿತಿಯ ಅವಧಿಯು ಕೊನೆಗೊಳ್ಳುವ ನಿಕಟಪೂರ್ವದಲ್ಲಿ ಹೊಸ ಆಡಳಿತ ಸಮಿತಿಯ ಸದಸ್ಯರ ಚುನಾವಣೆ ನಡೆಸತಕ್ಕದ್ದು.<br>2) ರಾಜ್ಯದ ವಿಧಾನ ಮಂಡಳವು ರೂಪಿಸುವ ಕಾನೂನಿನಲ್ಲಿ ಯಾವುದೇ ಸಹಕಾರ ಸಂಘದ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಬಂಧದ ಮತದಾರರ ಪಟ್ಟಿ ತಯಾರಿಸುವ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣಗಳು ಅದಕ್ಕಾಗಿ ರಚಿಸಲ್ಪಟ್ಟ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು ಎಂದು ಉಪಬಂಧಿಸತಕ್ಕದ್ದು.<br>ಪರಂತು ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನು ಅಂತಹ ಚುನಾವಣೆಗಳನ್ನು ನಡೆಸುವ ಕಾರ್ಯವಿಧಾನ ಮತ್ತು ಮಾರ್ಗದರ್ಶನಗಳನ್ನು ಒಳಗೊಂಡಿರಬಹುದು. |
| ಆಡಳಿತ ಸಮಿತಿಯ ರದ್ದತಿ ಮತ್ತು ಅಮಾನತ್ತು ಹಾಗೂ ಮಧ್ಯಂತರ ವ್ಯವಸ್ಥಾಪನೆ | 243 ಝಡ್‌ಎಲ್ | 1) ಹಾಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಹೇಳಲಾಗಿದ್ದರೂ ಆರು ತಿಂಗಳಿಗೂ ಮೀರಿದ ಅವಧಿಗೆ ಯಾವುದೇ ಸಹಕಾರ ಸಂಘದ ಆಡಳಿತ ಸಮಿತಿಯನ್ನು ರದ್ದು ಮಾಡತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ.<br>ಪರಂತು ಆಡಳಿತ ಸಮಿತಿಯನ್ನು ಮುಂದಿನ ಸಂದರ್ಭಗಳಲ್ಲಿ ರದ್ದು ಮಾಡಬಹುದು ಅಥವಾ ಅಮಾನತ್ತಿನಲ್ಲಿಡಬಹುದು.<br>**i)** ಅದು ಸತತವಾಗಿ ತಪ್ಪು ಮಾಡುತ್ತಿದ್ದಲ್ಲಿ; ಅಥವಾ<br>**ii)** ಅದು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದಲ್ಲಿ; ಅಥವಾ<br>**iii**) ಅದು ಸಹಕಾರ ಸಂಘದ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಬಾಧಕ/ ಹಾನಿಕರವಾದ ಯಾವುದೇ ಕೃತ್ಯವನ್ನು ಎಸಗಿದಲ್ಲಿ; ಅಥವಾ<br>**iv**) ಅದರ ರಚನೆ ಅಥವಾ ಕೆಲಸ ಕಾರ್ಯಗಳಲ್ಲಿ ಇಕ್ಕಟ್ಟಿನ ಸ್ಥಿತಿ ಉಂಟಾದಲ್ಲಿ; ಅಥವಾ<br>**v**) ಅನುಚ್ಛೇದ 243 ಝಡ್‌ಕೆ ನ ಖಂಡ (2) ರಡಿ ತಿಳಿಸಿದಂತೆ ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನಿನಡಿ ರಚಿತವಾದ ಪ್ರಾಧಿಕಾರವು ಅಥವಾ ಸಂಸ್ಥೆಯು ರಾಜ್ಯ ಕಾಯ್ದೆಯ ಉಪಬಂಧಗಳಿಗನುಗುಣವಾಗಿ ಚುನಾವಣೆ ಯನ್ನು ನಡೆಸಲು ವಿಫಲವಾದಲ್ಲಿ.<br>ಮತ್ತು ಪರಂತು ಸರ್ಕಾರದ ಷೇರು ಅಥವಾ ಸಾಲ ಅಥವಾ ಧನ ಸಹಾಯ ಅಥವಾ ಸರ್ಕಾರದ ಗ್ಯಾರಂಟಿಯಿಲ್ಲದ ಯಾವುದೇ ಸಹಕಾರ ಸಂಘದ ಆಡಳಿತ ಸಮಿತಿಯನ್ನು ರದ್ದುಪಡಿಸುವಂತಿಲ್ಲ ಅಥವಾ ಅಮಾನತ್ತಿನಲ್ಲಿಡುವಂತಿಲ್ಲ.<br>ಮತ್ತೂ ಪರಂತು ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವ ಒಂದು ಸಹಕಾರ ಸಂಘಕ್ಕೆ 1949ರ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮದ ಉಪಬಂಧಗಳೂ ಸಹ ಅನ್ವಯವಾಗುತ್ತವೆ.<br>ಮತ್ತೂ ಅಲ್ಲದೆ ಬಹುರಾಜ್ಯ ಸಹಕಾರ ಸಂಘವಲ್ಲದೆ ಬ್ಯಾಂಕಿಂಗ್ ವ್ಯವಹಾರ ನಡೆಸುವ ಯಾವುದೇ ಸಹಕಾರ ಸಂಘದ ಸಂಬಂಧದಲ್ಲಿ "ಆರು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಒಂದು ವರ್ಷ" ಎಂಬ ಪದಗಳು ಪ್ರತಿ ಯೋಜಿಸಲ್ಪಟ್ಟಲ್ಲಿ ಹೇಗೋ ಹಾಗೆ ಈ ಖಂಡದ ಉಪಬಂಧಗಳು ಕಾರ್ಯರೂಪಕ್ಕೆ ಬರತಕ್ಕದ್ದು.<br>2) ಒಂದು ಆಡಳಿತ ಸಮಿತಿಯನ್ನು ರದ್ದತಿ ಮಾಡಿದ ಸಂದರ್ಭದಲ್ಲಿ, ಅಂತಹ ಸಹಕಾರ ಸಂಘದ ವ್ಯವಹಾರಗಳನ್ನು ನಿರ್ವಹಿಸಲು ನೇಮಕವಾದ ಆಡಳಿತಗಾರನು ಖಂಡ (1)ರಲ್ಲಿ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ಚುನಾವಣೆಗಳನ್ನು ನಡೆಸಲು ಏರ್ಪಡಿಸತಕ್ಕದ್ದು ಮತ್ತು ಚುನಾಯಿತ ಆಡಳಿತ ಸಮಿತಿಗೆ ವ್ಯವಸ್ಥಾಪನೆಯ ಅಧಿಕಾರ/ಪ್ರಭಾರವನ್ನು ವಹಿಸಿಕೊಡತಕ್ಕದ್ದು.<br>3) ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನು ಆಡಳಿತಗಾರರ ಸೇವಾ ಷರತ್ತು/ನಿಬಂಧನೆಗಳನ್ನುಳ್ಳ ಉಪಬಂಧಗಳನ್ನು ಒಳಗೊಂಡಿರಬಹುದು. |

| | | |
|---|---|---|
| ಸಹಕಾರ ಸಂಘಗಳ ಲೆಕ್ಕಪತ್ರಗಳ ಪರಿಶೋಧನೆ | 243 ಝಡ್ಎಂ | 1) ರಾಜ್ಯ ವಿಧಾನ ಮಂಡಳವು ರೂಪಿಸುವ ಕಾನೂನಿನಲ್ಲಿ ಸಹಕಾರ ಸಂಘಗಳ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಅಂತಹ ಲೆಕ್ಕಪತ್ರಗಳನ್ನು ಪ್ರತಿ ಆರ್ಥಿಕ ವರ್ಷದಲ್ಲಿ ಕನಿಷ್ಠ ಒಮ್ಮೆಯಾದರೂ ಪರಿಶೋಧನೆ ಮಡಿಸುವ ಬಗ್ಗೆ ಉಪಬಂಧಗಳನ್ನು ಕಲ್ಪಿಸಬಹುದು.<br>2) ರಾಜ್ಯ ವಿಧಾನಮಂಡಲವು ರೂಪಿಸುವ ಕಾನೂನಿನಲ್ಲಿ ಸಹಕಾರ ಸಂಘಗಳ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ಯೋಗ್ಯವಾಗಲು ಲೆಕ್ಕಪರಿಶೋಧಕರು ಮತ್ತು ಲೆಕ್ಕ ಪರಿಶೋಧಿಸುವ ಸಂಸ್ಥೆಗಳು ಹೊಂದಿರಬೇಕಾದ ಕನಿಷ್ಠ ವಿದ್ಯಾರ್ಹತೆ ಮತ್ತು ಅನುಭವಗಳನ್ನು ನಿಗದಿ ಪಡಿಸತಕ್ಕದ್ದು.<br>3) ಸಹಕಾರ ಸಂಘದ ಸಾಮಾನ್ಯ ಸದಸ್ಯರ ಸಭೆಯು ನೇಮಿಸಿದ ಖಂಡ(2) ರಲ್ಲಿ ಉಲ್ಲೇಖಿಸಿದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪ್ರತಿ ಸಹಕಾರ ಸಂಘವು ತನ್ನ ಲೆಕ್ಕ ಪತ್ರಗಳ ಪರಿಶೋಧನೆ ಮಾಡಿಸತಕ್ಕದ್ದು.<br>ಪರಂತು ರಾಜ್ಯ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಪ್ರಾಧಿಕೃತವಾದ ಪ್ರಾಧಿಕಾರದಿಂದ ಅನುಮೋದಿತ ಲೆಕ್ಕಪರಿಶೋಧಕರ ಅಥವಾ ಲೆಕ್ಕ ಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಿಂದ ಅಂತಹ ಲೆಕ್ಕಪರಿಶೋಧಕರನ್ನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳನ್ನು ನೇಮಕ ಮಾಡತಕ್ಕದ್ದು.<br>4) ಪ್ರತಿ ಸಹಕಾರ ಸಂಘದ ಲೆಕ್ಕಪತ್ರಗಳನ್ನು ತತ್ಸಂಬಂಧದ ಆರ್ಥಿಕ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ ಪರಿಶೋಧಿಸತಕ್ಕದ್ದು.<br>5) ರಾಜ್ಯ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ನಿಗದಿ ಪಡಿಸುವ ರೀತಿಯಲ್ಲಿ ರಾಜ್ಯ ಕಾಯ್ದೆಯಲ್ಲಿ ವಿವರಿಸಿದ ಅಪೆಕ್ಸ್ ಸಹಕಾರ ಸಂಘದ ಲೆಕ್ಕ ಪತ್ರಗಳ ಆಡಿಟ್ ವರದಿಯನ್ನು ವಿಧಾನಮಂಡಳದಲ್ಲಿ ಮಂಡಿಸತಕ್ಕದ್ದು. |
| ಸಾಮಾನ್ಯ ಸದಸ್ಯರ ಸಭೆಗಳನ್ನು ಕರೆಯುವುದು | 243 ಝಡ್ಎನ್ | ರಾಜ್ಯದ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ನಿಗದಿ ಪಡಿಸುವ ಕಲಾಪ ನಿರ್ವಹಣೆಗಾಗಿ ಪ್ರತಿ ಸಹಕಾರ ಸಂಘವು ಆರ್ಥಿಕ ವರ್ಷ ಮುಗಿದ ಆರು ತಿಂಗಳೊಳಗೆ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಎಂದು ಉಪಬಂಧಿಸಬಹುದು. |
| ಸದಸ್ಯರು ಮಾಹಿತಿ ಪಡೆಯುವ ಹಕ್ಕು | 243 ಝಡ್ಓ | 1) ರಾಜ್ಯ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ಯಾವುದೇ ಸಹಕಾರ ಸಂಘವು ಪ್ರತಿ ಸದಸ್ಯನಿಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಲೆಕ್ಕಪುಸ್ತಕಗಳನ್ನು ನೋಡಲು ಹಾಗೂ ತತ್ಸಬಂಧದ ಮಾಹಿತಿ ಮತ್ತು ಲೆಕ್ಕಗಳನ್ನು ಪಡೆಯಲು ಅವನಿಗೆ ಅವಕಾಶ ಇರುವಂತೆ ಉಪಬಂಧಿಸಬಹುದು.<br>2) ಸದಸ್ಯರು ಸಭೆಗಳಿಗೆ ಹಾಜರಾಗಬೇಕಾದ ಕನಿಷ್ಠ ಅಗತ್ಯತೆ ಹಾಗೂ ಸಂಘದಿಂದ ಪ್ರಾಪ್ತವಾಗುವ ಸೇವೆಗಳನ್ನು ಉಪಯೋಗಿಸಿಕೊಳ್ಳಬೇಕಾದ ಕನಿಷ್ಠ ಪ್ರಮಾಣವನ್ನು ನಿಗದಿ ಪಡಿಸಿ ತನ್ಮೂಲಕ ಸಹಕಾರ ಸಂಘದ ಕಾರ್ಯನಿರ್ವಹಣೆಯಲ್ಲಿ ಸದಸ್ಯರ ಭಾಗ ವಹಿಸುವಿಕೆಯನ್ನು ಖಾತ್ರಿ ಪಡಿಸಿಕೊಳ್ಳುವಂತೆ ರಾಜ್ಯ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ಉಪಬಂಧಿಸಬಹುದು.<br>3) ರಾಜ್ಯ ವಿಧಾನಮಂಡಳವು ತನ್ನ ಸದಸ್ಯರಿಗೆ ಸಹಕಾರಿ ಶಿಕ್ಷಣ ಮತ್ತು ತರಬೇತಿಯನ್ನು ಒದಗಿಸಲು ಕಾನೂನನ್ನು ರೂಪಿಸಬಹುದು. |

| | | |
|---|---|---|
| ವಿಧ್ಯುಕ್ತ ವರದಿಗಳ ಸಲ್ಲಿಕೆ | 243 ಝಡ್‌ಪಿ | ಪ್ರತಿ ಸಹಕಾರ ಸಂಘವು ಆರ್ಥಿಕ ವರ್ಷ ಮುಗಿದ ಆರು ತಿಂಗಳೊಳಗೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಮುಂದಿನ ವಿಷಯಗಳನ್ನೊಳಗೊಂಡಂತೆ ವಿಧ್ಯುಕ್ತ ವರದಿಗಳನ್ನು ಸಲ್ಲಿಸತಕ್ಕದ್ದು:–<br>ಎ) ಅದರ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ;<br>ಬಿ) ಅದರ ಪರಿಶೋಧಿತ ಆರ್ಥಿಕ ತಃಖ್ತೆಗಳು;<br>ಸಿ) ಅದರ ಸಾಮಾನ್ಯ ಸದಸ್ಯರ ಸಭೆಯು ಅನುಮೋದಿಸಿದ ಹೆಚ್ಚುವರಿ/ಉಳಿತಾಯ ವಿಲೇವಾರಿಯ ಯೋಜನೆ;<br>ಡಿ) ಸಹಕಾರ ಸಂಘದ ಉಪವಿಧಿಗಳಿಗೆ ಮಾಡಲಾದ ತಿದ್ದುಪಡಿಗಳು ಇದ್ದಲ್ಲಿ ಅವುಗಳ ಪಟ್ಟಿ;<br>ಇ) ಅದರ ಸಾಮಾನ್ಯ ಸದಸ್ಯರ ಸಭೆಯನ್ನು ನಡೆಸಿದ ದಿನಾಂಕ ಮತ್ತು ಅಗತ್ಯವಿದ್ದಾಗ ಚುನಾವಣೆ ನಡೆಸಿದ ದಿನಾಂಕದ ಬಗ್ಗೆ ಘೋಷಣೆ; ಮತ್ತು<br>ಎಫ್) ರಾಜ್ಯ ಸಹಕಾರ ಕಾಯ್ದೆಯ ಉಪಬಂಧಗಳಡಿ ರಿಜಿಸ್ಟ್ರಾರನು ಅಪೇಕ್ಷಿಸುವ ಇತರೆ ಯಾವುದೆ ಮಾಹಿತಿ. |
| ಅಪರಾಧ ಮತ್ತು ದಂಡನೆಗಳು | 243 ಝಡ್‌ಕ್ಯೂ | 1) ರಾಜ್ಯದ ವಿಧಾನಮಂಡಳವು ಸಹಕಾರ ಸಂಘಗಳಿಗೆ ಸಂಬಂಧಿಸಿದ ಅಪರಾಧಗಳ ಮತ್ತು ಅಂತಹ ಅಪರಾಧಗಳಿಗೆ ವಿಧಿಸಬೇಕಾದ ದಂಡನೆಗಳ ಬಗ್ಗೆ ಉಪಬಂಧ ಗಳನ್ನುಳ್ಳ ಕಾನೂನನ್ನು ರಚಿಸಬಹುದು.<br>2) ಖಂಡ (1) ರಡಿ ರಾಜ್ಯದ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ಕೆಳಗಿನ ಕೃತ್ಯಗಳನ್ನು ಮಾಡುವುದನ್ನು ಅಥವಾ ಬಿಟ್ಟುಬಿಡುವುದನ್ನು ಅಪರಾಧಗಳೆಂದು ಒಳಗೊಂಡಿರುವ ಉಪಬಂಧಗಳನ್ನು ಕಲ್ಪಿಸಬಹುದು; ಎಂದರೆ–<br>ಎ) ರಾಜ್ಯ ಕಾಯ್ದೆಯ ಉಪಬಂಧಗಳಡಿ ಪ್ರಾಧಿಕೃತವಾದ ಒಬ್ಬ ವ್ಯಕ್ತಿಗೆ ಒಂದು ಸಹಕಾರ ಸಂಘವು ಅಥವಾ ಅದರ ಒಬ್ಬ ಅಧಿಕಾರಿಯು ಅಥವಾ ಅದರ ಸದಸ್ಯನು ಬುದ್ಧಿ ಪೂರ್ವಕವಾಗಿ ಸುಳ್ಳು ವಿಧ್ಯುಕ್ತ ವರದಿಯನ್ನು ಸಲ್ಲಿಸುವುದು ಅಥವಾ ಸುಳ್ಳು ಮಾಹಿತಿಯನ್ನು ಒದಗಿಸುವುದು ಅಥವಾ ಯಾವುದೇ ವ್ಯಕ್ತಿಯು ಪ್ರಾಧಿಕೃತ ವ್ಯಕ್ತಿಯು ಅವನಿಂದ ಬಯಸಿದ ಮಾಹಿತಯನ್ನು ಬುದ್ಧಿಪೂರ್ವಕವಾಗಿ ಒದಗಿಸದಿರುವುದು;<br>ಬಿ) ರಾಜ್ಯ ಕಾಯ್ದೆಯ ಉಪಬಂಧಗಳಡಿ ನೀಡಲಾದ ಸಮನನ್ನು, ಕೋರಿಕೆಯನ್ನು ಅಥವಾ ಕಾನೂನು ಸಮ್ಮತ ಲಿಖಿತ ಆದೇಶವನ್ನು ಒಬ್ಬ ವ್ಯಕ್ತಿಯು ಬುದ್ಧಿಪೂರ್ವಕ ವಾಗಿ ಅಥವಾ ಯಾವುದೇ ಯುಕ್ತ ಕಾರಣವಿಲ್ಲದೆ ಪಾಲಿಸದಿರುವುದು;<br>ಸಿ) ತನ್ನ ನೌಕರರಿಂದ ಮುರಿದುಕೊಂಡ ಮೊತ್ತವನ್ನು ಅಂತಹ ವ್ಯವಕಲನವನ್ನು **(deduction)** ಮಾಡಿದ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಸಂಬಂಧಪಟ್ಟ ಸಹಕಾರ ಸಂಘಕ್ಕೆ ಸಕಾರಣಗಳಿಲ್ಲದೆ ಸಂದಾಯ ಮಾಡಲು ಉದ್ಯೋಗ ದಾತನು ವಿಫಲನಾಗುವುದು/ತಪ್ಪುವುದು;<br>ಡಿ) ಒಂದು ಸಹಕಾರ ಸಂಘಕ್ಕೆ ಸೇರಿದ ಪುಸ್ತಕಗಳ, ಲೆಕ್ಕಗಳ, ದಸ್ತಾವೇಜುಗಳ, ದಾಖಲೆಗಳ, ನಗದಿನ, ಭದ್ರತೆಗಳ ಮತ್ತು ಇತರ ಸ್ವತ್ತುಗಳ ಸುಪರ್ದನ್ನು ಹೊಂದಿರುವ ಅಧಿಕಾರಿ ಅಥವಾ ಅಭಿರಕ್ಷಕ (ಸುಪರ್ದುದಾರ)ನು ಅಧಿಕೃತ ವ್ಯಕ್ತಿಗೆ ಅಂತಹ ಸುಪರ್ದನ್ನು ಬುದ್ಧಿಪೂರ್ವಕವಾಗಿ ಒಪ್ಪಿಸದಿರುವುದು; ಮತ್ತು<br>ಇ) ಆಡಳಿತ ಸಮಿತಿಯ ಅಥವಾ ಪದಾಧಿಕಾರಿಗಳ ಚುನಾವಣಾ ಪೂರ್ವದಲ್ಲಿ, ಚುನಾವಣಾ ಕಾಲದಲ್ಲಿ ಅಥವಾ ತದನಂತರ ಯಾರೇ ಆಗಲಿ ಭ್ರಷ್ಟಾಚಾರ ಎಸಗುವುದು |
| ಬಹುರಾಜ್ಯ ಸಹಕಾರ ಸಂಘಗಳಿಗೆ ಅನ್ವಯ ವಾಗುವುದು | 243 ಝಡ್‌ಆರ್ | "ರಾಜ್ಯದ ವಿಧಾನಮಂಡಳ", "ರಾಜ್ಯ ಕಾಯ್ದೆ" ಅಥವಾ "ರಾಜ್ಯ ಸರ್ಕಾರ" ಎಂಬ ಪದಗಳಿಗೆ ಯಾವುದೇ ಉಲ್ಲೇಖವು ಅನುಕ್ರಮವಾಗಿ "ಸಂಸತ್ತು" "ಕೇಂದ್ರ ಕಾಯ್ದೆ" ಅಥವಾ "ಕೇಂದ್ರ ಸರ್ಕಾರ" ಎಂಬ ಪದಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಎಂಬ ಮಾರ್ಪಾಡಿಗೆ ಒಳಪಟ್ಟು ಈ ಭಾಗದ ಉಪಬಂಧಗಳು ಬಹುರಾಜ್ಯ ಸಹಕಾರ ಸಂಘಗಳಿಗೆ ಅನ್ವಯವಾಗತಕ್ಕದ್ದು. |

| | | |
|---|---|---|
| ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯ | 243 ಝಡ್‌ಎಸ್ | ಈ ಭಾಗದ ಉಪಬಂಧಗಳು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದು ಹಾಗೂ ಹಾಗೆ ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ಅನ್ವಯಿಸುವಾಗ, ವಿಧಾನ ಸಭೆ ಇಲ್ಲದ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ 'ರಾಜ್ಯ ವಿಧಾನಮಂಡಳ' ಎಂಬ ಪದಕ್ಕೆ ಮಾಡಿದ ಉಲ್ಲೇಖವು ಅನುಚ್ಛೇದ 239 ರಡಿ ನೇಮಕವಾದ "ಆಡಳಿತಗಾರ" ಎಂಬ ಪದಕ್ಕೆ ಮಾಡಿದ ಉಲ್ಲೇಖವೆಂದೂ ವಿಧಾನಸಭೆ ಹೊಂದಿರುವ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಅಂತಹ ಉಲ್ಲೇಖವು "ಆ ವಿಧಾನಸಭೆ" ಎಂಬ ಪದಕ್ಕೆ ಮಾಡಿದ ಉಲ್ಲೇಖವೆಂದೂ ಅರ್ಥೈಸತಕ್ಕದ್ದು.<br>ಪರಂತು ಈ ಭಾಗದ ಉಪಬಂಧಗಳು ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಕೇಂದ್ರಾಡಳಿತ ಪ್ರದೇಶಕ್ಕೆ ಅಥವಾ ಅದರ ಭಾಗಕ್ಕೆ ಅನ್ವಯವಾ ಗತಕ್ಕದ್ದಲ್ಲವೆಂದು ರಾಷ್ಟ್ರಾಧ್ಯಕ್ಷರು ರಾಜ್ಯ ಪತ್ರದಲ್ಲಿ ಅಧಿಸೂಚಿಸಬಹುದು. |
| ಹಾಲಿಯಿರುವ ಕಾನೂನುಗಳ ಮುಂದುವರಿಕೆ | 243 ಝಡ್‌ಟಿ | ಈ ಭಾಗದಲ್ಲಿ ಏನೇ ಹೇಳಲಾಗಿದ್ದರೂ ಸಂವಿಧಾನ (ತೊಂಭತ್ತೇಳನೇ ತಿದ್ದುಪಡಿ) ಅಧಿನಿಯಮ 2011 ಜಾರಿಗೆ ಬರುವ ನಿಕಟಪೂರ್ವದಲ್ಲಿ ಯಾವುದೇ ರಾಜ್ಯದಲ್ಲಿ ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿರುವ/ವಿರುದ್ಧವಾಗಿರುವ ಮತ್ತು ಹಾಲಿ ಜಾರಿಯಲ್ಲಿರುವ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಯಾವುದೇ ಉಪಬಂಧವು ಅದನ್ನು ಈ ಸಂವೈಧಾನಿಕ ತಿದ್ದುಪಡಿಯನ್ವಯ ತಿದ್ದುಪಡಿ ಮಾಡುವವರೆಗೆ ಅಥವಾ ಸಕ್ಷಮ ವಿಧಾನಮಂಡಳವು ಅಥವಾ ಇತರ ಸಕ್ಷಮ ಪ್ರಾಧಿಕಾರವು ನಿರಸನಗೊಳಿಸುವವರೆಗೆ ಅಥವಾ ಈ ತಿದ್ದುಪಡಿ ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾಗುವವರೆಗೆ ಇವೆರಡಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಜಾರಿಯಲ್ಲಿರುತ್ತದೆ. |

**ವಿಶೇಷ ಸೂಚನೆ :–**

ಭಾರತದ ಶ್ರೇಷ್ಠ ನ್ಯಾಯಾಲಯ ಸಿವಿಲ್ ರಿಟ್ ಸಂಖ್ಯೆ 9108–9109/2014 ಮತ್ತಿತರ ಪ್ರಕರಣವನ್ನು ವಿಚಾರಣೆ ನಡೆಸಿ ದಿನಾಂಕ 20.07.2021 ರಂದು 97ನೇ ಸಂವಿಧಾನ ತಿದ್ದುಪಡಿಯನ್ನು ರಾಜ್ಯ ಪಟ್ಟಿಯಲ್ಲಿನ ಎಂಟ್ರಿ 32 (ಅಡಕ–7)ರ ಭಾಗ IXB ಯನ್ನು ಅಸಿಂದು ಎಂದು ಘೋಷಿಸಿದೆ. ಅಂದರೆ ರಾಜ್ಯ ಸರ್ಕಾರಗಳ ಪರಮಾಧಿಕಾರವನ್ನು ಸಮರ್ಥಿಸಿ, ಬಹುರಾಜ್ಯ ಸಹಕಾರಿ ಸಂಸ್ಥೆಗೆ ಮಾತ್ರ ಈ 97ನೇ ತಿದ್ದುಪಡಿ ಅನ್ವಯವಾಗುವಂತೆ ತೀರ್ಪಿತ್ತಿದೆ. ಆದರೆ ಕರ್ನಾಟಕ ಸರ್ಕಾರ, ತನ್ನ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ಕ್ಕೆ ಈಗಾಗಲೇ ತಿದ್ದುಪಡಿ ತಂದಿರುವುದರಿಂದ ಈ ತೀರ್ಪಿನ ಪ್ರಭಾವ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗದು.

# ಅಧ್ಯಾಯ – 6

## ನಿಬಂಧಕರು

ನಿಬಂಧಕರೆಂದರೆ ಸೌಹಾರ್ದ ಕಾಯಿದೆಯಡಿ ನೇಮಕಗೊಂಡ ಒಬ್ಬ ಸರ್ಕಾರದ ಅಧಿಕಾರಿ, ಅವನಿಗೆ ನೆರವು ನೀಡಲು ನೇಮಕವಾದ ಅಪರ ನಿಬಂಧಕರು, ಸಂಯುಕ್ತ ನಿಬಂಧಕರು, ಉಪನಿಬಂಧಕರು ಮತ್ತು ಸಹಾಯಕ ನಿಬಂಧಕರೂ ಸೇರುತ್ತಾರೆ. ಮತ್ತು ನಿಬಂಧಕರ ಎಲ್ಲಾ ಅಧಿಕಾರಗಳನ್ನ ಅಥವಾ ಕೆಲವು ಅಧಿಕಾರಗಳನ್ನು ಪ್ರದತ್ತವಾದ ಅಧಿಕಾರ ನಿರ್ವಹಿಸುವ ವ್ಯಕ್ತಿ ಒಳಗೊಳ್ಳುತ್ತಾನೆ.

ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆಯಡಿ ಸಹಕಾರಿ ಸಂಘಗಳ ನಿಬಂಧಕರನ್ನೇ, ಸೌಹಾರ್ದ ಕಾಯಿದೆ ನಿಬಂಧಕರೆಂದು ಕಾಯಿದೆಯಲ್ಲಿ ಹೆಸರಿಸಿದೆ. ನಿಬಂಧಕರನ್ನು ಸಹಕಾರ ಕಾಯಿದೆ ಜಾರಿಯಾದಾಗಿನಿಂದಲೂ, ಅವರನ್ನು ಸಹಕಾರಿ ಆದೋಲನದ ಸ್ನೇಹಿತ, ದಾರ್ಶನಿಕ ಮತ್ತು ತತ್ವಜ್ಞಾನಿ ಎಂದು ಗುರುತಿಸಲಾಗಿತ್ತು. ಅದನ್ನು 60 ರ ದಶಕದವರೆವಿಗೂ ಪಾಲಿಸುತ್ತಾ ಬಂದಿತ್ತು. ಆದರೆ ಸಹಕಾರ ಆಂದೋನದಲ್ಲಿ ರಾಜಕೀಯ ಮಧ್ಯಪ್ರವೇಶ ಮಾಡುವ ಅವಕಾಶ ಪಡೆದ ನಂತರ, ಈ ನೀತಿಗೆ ಬಹಳಷ್ಟು ಬದಲಾವಣೆಯಾಗಿದೆ. ಅದಕ್ಕೆ ಪ್ರಮುಖ ಕಾರಣ 1959ರ ಸಹಕಾರ ಕಾಯಿದೆ ಅಧ್ಯಾಯ VI ರಲ್ಲಿನ ಸರ್ಕಾರದಿಂದ ಸಹಕಾರ ಸಂಸ್ಥೆಗಳಿಗೆ ಕೊಡಮಾಡುವ ಕೆಲವು ಸವವತ್ತುಗಳಿಂದ. ಇದಕ್ಕೆ ಪೂರಕವಾಗಿ 1976 ಮತ್ತು 1984 ರಲ್ಲಿ ತಂದ ಹಲವಾರ ನಿಯಂತ್ರಣಗಳಿಂದ ಮತ್ತು ಸಹಕಾರ ಇಲಾಖಾಧಿಕಾರಿಗಳ ಮೇಲೆ ರಾಜಕೀಯ ವ್ಯಕ್ತಿಗಳ ಒತ್ತಡದಿಂದ ಈ "ಸ್ನೇಹಿತ, ದಾರ್ಶನಿಕ ಮತ್ತು ತತ್ವಜ್ಞಾನಿ" ಎಂಬ ನೀತಿಗೆ ತಿಲಾಂಜಲಿ ನೀಡಲಾಗಿದೆ. ನಿಬಂಧಕರನ್ನು ನಿಯಂತ್ರಕನೆಂದೇ ಗುರುತಿಸಲಾಗುತ್ತಿದೆ. ಬಲಿಷ್ಟ ರಾಜಕೀಯ ವ್ಯಕ್ತಿಗಳು ಸಹಕಾರ ಸಂಸ್ಥೆಗಳನ್ನು ನಿಯಂತ್ರಿಸಲು ಅಧಿಕಾರಿಗಳು ಮತ್ತು ಅಧಿಕಾರವನ್ನು ಉಪಯೋಗಿಸಿ ನಿಯಂತ್ರಿಸಲು ದೊಡ ಪ್ರಮಾಣದ ಪ್ರಯತ್ನಗಳು ನಡೆದವು. ಸಚಿವರು ಅಧಿಕಾರಿಗಳ ಸಭೆಗಳಲ್ಲಿ ವ್ಯಯಕ್ತಿಕವಾಗಿ ವಿಚಾರಣೆ, ಪರಿವೀಕ್ಷಣೆ, ಲೆಕ್ಕತಪಾಸಣೆ ವರದಿ ಮೇಲೆ ಕ್ರಮ ಜರುಗಿಸಿಲ್ಲವೆಂದು, ಅವರಿಗೆಬೇಕಾದ ಸಂಸ್ಥೆಗಳ ಮೇಲೆ ಕ್ರಮ ಜರುಗಿಸುವಂತೆ ಒತ್ತಡ ತಂದು, ಕೆಲಸ ಮಾಡಿಸಲು ಪ್ರಾರಂಭಿಸಿದ ನಂತರ, ನಿಬಂಧಕರನ್ನು ನಿಯಂತ್ರಕನೆಂದು ಗುರುತಿಸಲಾಯಿತು. ಈ ಮಧ್ಯ 1991ರಲ್ಲಿ ಚೌದರಿ ಬ್ರಹ್ಮಪ್ರಕಾಶ್ ವರದಿ ಅಡಿ ಮಾದರಿ ಸಹಕಾರಿ ಕಾಯಿದೆ ರೂಪಿಸಲು ಸೂಚನೆ ಬಂದಾಗ, ನಿಬಂಧಕರು/ಸರ್ಕಾರದ, ಅಧಿಕಾರವನ್ನು ಸೀಮಿತಗೊಳಿಸುವ ಪ್ರಯತ್ನದ ಫಲವಾಗಿ ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ 1997 ರಲ್ಲಿ ರೂಪಿಸಲಾಗಿದೆ. ಇದರಲ್ಲಿ ಮತ್ತೆ ನಿಬಂಧಕರನ್ನು "ಸ್ನೇಹಿತ, ದಾರ್ಶನಿಕ ಮತ್ತು ತತ್ವಜ್ಞಾನಿ" ಎಂದು ಗುರುತಿಸುವ ಅವಕಾಶ ಪ್ರಾಪ್ತವಾಗಿದೆ. ಏಕೆಂದರೆ ನಿಬಂಧಕರ ಹಲವಾರು ಅಧಿಕಾರಗಳನ್ನು ಪ್ರಜಾಪ್ರಭುತ್ವದಡಿ ರಚನೆಯಾದ "ಸಂಯುಕ್ತ ಸಹಕಾರಿ" ಎಂಬ ಸಂಸ್ಥೆಗೆ ವರ್ಗಾಯಿಸಲಾಗಿದೆ. ಅದರಂತೆ – ಪ್ರಾರಂಭದಲ್ಲಿ ನೊಂದಣಿ ಮತ್ತು ಸಮಾಪನೆ ಹೊರತು ಪಡಿಸಿ, ಉಳಿದ ಅಧಿಕಾರವನ್ನು ವರ್ಗಾಯಿಸುವ ಬಗ್ಗೆ ಚರ್ಚೆಯಾದದ್ದು, ಮೊದಲ ಪ್ರಯತ್ನವಾಗಿ ಎಲ್ಲಾ ಅಧಿಕಾರಗಳನ್ನು ವರ್ಗಾಯಿಸಿದರೆ ಅದನ್ನು ಸ್ವೇಚ್ಚತೆ ಎಂದು ತಿಳಿಯಬಾರದೆಂದು ನೋಂದಣಿ ಜೊತೆಗೆ, ಉಪವಿಧಿಗಳ ತಿದ್ದುಪಡಿ, ವಿಚಾರಣೆ, ದಾವಾ/ಅದಿಭಾರ ಅರ್ಜಿ ವಿಲೇವಾರಿ, ಸಮಾಪನೆಯೂ ನಿಬಂಧಕರ ವ್ಯಾಪ್ತಿಯಲ್ಲಿಯೇ ಉಳಿಸಲಾಗಿದೆ. ಮುಂದೆ "ಸಂಯುಕ್ತ ಸಹಕಾರಿ" ಜವಾಬ್ದಾರಿಯುತ, ಪಾರದರ್ಶಕ ಆಡಳಿತ ನಡೆಸಿದರೆ, ಈ ಅಧಿಕಾರಗಳಲ್ಲಿಯೂ ಹಂಚಿಕೆ ಮಾಡಲು ಅವಕಾಶ ಇದೆ ಎಂದು ಭಾವಿಸಬಹುದು. ನಿಬಂಧಕರ ಶಾಸನಾತ್ಮಕ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗಿದೆ.

ಕರ್ನಾಟಕ ಸರ್ಕಾರ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಶಾಸನಾತ್ಮಕ ಅಧಿಕಾರ ಚಲಾಯಿಸಲು, ನಿಬಂಧಕರ ಅಧಿಕಾರವನ್ನು ವಿವಿಧ ವರ್ಗದ ಅಧಿಕಾರಿಗಳಿಗೆ ಚಲಾಯಿಸಲು ಅಧಿಸೂಚನೆ ಮೂಲಕ ಹೊರಡಿಸಿದ ಆದೇಶಗಳು ಈ ಕೆಳಕಂಡಂತೆ ಇದೆ.

# ಅನುಬಂಧ-6ಎ

## GOVERNMENT OF KARNATAKA

No. CMW 34 CLM 2001

Karnataka Government Secretariat,
M.S. Building, Bangalore,
dated 28.02.2003

### ORDER

In exercise of the powers conferred by sub-section (3) of Section 3 of the Karnataka Souharda Sahakari Act, 1997 (Karnataka Act 17 of 2000) and in supersession of the order *No.* CMW 34 CLM 2001, dated 1st March, 2002, the Government of Karnataka hereby delegates the powers of the Registrar of Cooperative under the said Act, specified in column (3) of the table below, to the officers specified in the corresponding entries in column (2) thereof.

**TABLE**

| **Sl.** No | **Designation** | **Delegated powers under** vafious sections of the Act |
|---|---|---|
| 1. | Assistant Registrar of Co-operatives, in sub-division (Except the Assistant Registrar of Co-operative in Bangalore Urban Districts)<br>(i) All Cooperatives whose area of operation is less than a taluk.<br>(ii) All Cooperatives whose registered offices are situated within the jurisdiction of the Assistant Registrar of Cooperatives concerned irrespective of their area of operation. | Sections:- 5, 6, 11,30(3), 34, 35(3), (4) and(5), 36,37, 39, 40, 41, 44, 45, 48(5)<br>Section 43 |
| 2. | Assistant Registrar of Cooperatives, iR Bangalore Urban District.<br>(i) Cooperatives wboæ area of opersIion is less than a taluk and whose registered office is situated in the jurisdiction of the Assistant Registrar concerned.<br>(ü) All Cooperatives whose registered offices are situated within the jurisdicUon of the Assistant Registrar of Cooperatives concerned irrespective of their area of operation. | Sections:- 5, 6, 11,30(3), 34, 35(3), (4) and (5), 36,37, 39, 40, 41, 44, 45, 48(5)<br>Section 43 |
| 3 | Deputy Registrar of Cooperatives in the District (Except the Deputy Registrar of Cooperatives of Bangalore Urban District)<br>Cooperatives whose area of operation extends to a taluk and below District. | **Sections:-** 5, 6, 11,30(3), 34, 35(3), (4) and (5), 36, 37,39, 40, 41, 44, 45, and 48(5) |
| 4 | Deputy Registrar of Cooperatives I and II of Bangalore Urban District.<br>Cooperatives whose area of operation extends to a taluk and below District and whose registered office is situated within the jurisdiction of Deputy Registrar concerned. | **Sections:-** 5, 6, 11, 30(3), 34, 35(3), (4) and (5), 36, 37,39, 40, 41, 44, 45, and 48(5) |
| 5 | Joint Registrar of Cooperatives in Regional Office (Except Bangalore Region I and II)<br>Cooperative whose area of operation extends to a District but does not extend beyond a region. | Sectlons:- 5, 6, 11, 30(3), 34, 35(3), (4) and(5), 36, 37, 39, 40, 41, 44, 45, and 48(5) |
| 6 | Joint Registrar of Cooperatives in Bangalore Region I and II<br>Cooperatives whose area of operation extends to a District but does not extend beyond a region and whose registered office is situated within the jurisdiction of the Joint Registrar of Cooperatives concerned Region | **Sections:-** 5, 6, 11, 30(3), 34, 35(3), (4) and (5), 36, 37,39, 40, 41, 44, 45, and 48(5) |

BY ORDERAND INTHENAME OF
THE GOVERNOR OF KARNATAKA

(RS. Huchachary) Officer
on Special Duty
Cooperation Department.

## ಅನುಬಂಧ–6ಬಿ

**ಅಧಿಸೂಚನೆ**

**ಅಧಿಸೂಚನೆ ಸಂಖ್ಯೆ:ಸಿಓ:220:ಸಿಎಲ್‌ಎಂ:2005 ದಿನಾಂಕ : 22.08.2005**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997(2000ದ ಅಧಿನಿಯಮ ಸಂಖ್ಯೆ 17) ಪ್ರಕರಣ 3ರ ಉಪ ಪ್ರಕರಣ(3)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹಾಗೂ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ:34:ಸಿಎಲ್‌ಎಂ:2001 ದಿನಾಂಕ 28.02.2003 ಅನ್ನು ಭಾಗಶಃ ಮಾರ್ಪಡಿಸಿ ಮತ್ತು ಅಧಿಸೂಚನೆ ಸಂಖ್ಯೆ :ಸಿಓ:191: ಸಿಎಲ್‌ಎಂ:2004(ಭಾಗ–2) ದಿನಾಂಕ 02.02.2005ನ್ನು ರದ್ದುಗೊಳಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯ ಅಂಕಣ (2) ರಲ್ಲಿ ಸೂಚಿಸಿರುವ ಅಧಿಕಾರಿಗಳಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ರ ಉಪ ಬಂಧಗಳಿಗನುಸಾರ, ಹಂಚಿಕೆ ಮಾಡಿದ ಜಿಲ್ಲೆಗಳ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧ ಪಟ್ಟಂತೆ ಅಂಕಣ (4) ರಲ್ಲಿ ನಿರ್ದಿಷ್ಟಪಡಿಸಿದ ಸಹಕಾರಿಗಳ ರಿಜಿಸ್ಟ್ರಾರನ ಅಧಿಕಾರಗಳನ್ನು ಪ್ರತ್ಯಾಯೋಜಿಸಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳ ಪ್ರವರ್ಗ | ಹಂಚಿಕೆ ಮಾಡಿದ ಜಿಲ್ಲೆಗಳು | ಅಧಿಕಾರಗಳ ಪ್ರತ್ಯಾಯೋಜನೆ |
|---|---|---|---|
| 1 | 2 | 3 | |
| | ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 441 ರ ಪ್ರಕಾರ ನೇಮಕ ಹೊಂದಿದ ಸಹಕಾರಿಗಳ ಜಂಟಿ ರಿಜಿಸ್ಟ್ರಾರ್<br><br>ಕೇಂದ್ರಸ್ಥಾನ ಬೆಂಗಳೂರು<br><br>ಕೇಂದ್ರ ಸ್ಥಾನ ಹುಬ್ಬಳ್ಳಿ | –ಬೆಂಗಳೂರು ಮತ್ತು ಮೈಸೂರು ಪ್ರಾಂತಗಳ ಎಲ್ಲಾ ಜಿಲ್ಲೆಗಳು<br><br>– ಬೆಳಗಾಂ ಮತ್ತು ಗುಲ್ಬರ್ಗಾ ಪ್ರಾಂತಗಳ ಎಲ್ಲಾ ಜಿಲ್ಲೆಗಳು | ಪ್ರಕರಣ: 39, 40. 41ಡಿ 41 ರ ಉಪ ಪ್ರಕರಣ (1) (ಬಿ) (ಸಿ) ಹೊರತು ಪಡಿಸಿ, 44 ಮತ್ತು 45<br><br>ನಿಯಮ: 11 ಮತ್ತು 29<br><br>ಪ್ರಕರಣ: 43 |
| | ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 441 ರ ಪ್ರಕಾರ ನೇಮಕ ಹೊಂದಿದ ಸಹಕಾರಿಗಳ ಸಹಾಯಕ ರಜಿಸ್ಟ್ರಾರ್ ಮತ್ತು ವಸೂಲಿಅಧಿಕಾರಿ<br><br>ಕೇಂದ್ರಸ್ಥಾನ ಬೆಂಗಳೂರು<br><br>ಕೇಂದ್ರ ಸ್ಥಾನ ಹುಬ್ಬಳ್ಳಿ | –ಬೆಂಗಳೂರು ಮತ್ತು ಮೈಸೂರು ಪ್ರಾಂತಗಳ ಎಲ್ಲಾ ಜಿಲ್ಲೆಗಳು<br><br>– ಬೆಳಗಾಂ ಮತ್ತು ಗುಲ್ಬರ್ಗಾ ಪ್ರಾಂತಗಳ ಎಲ್ಲಾ ಜಿಲ್ಲೆಗಳು | ನಿಯಮ: 16, 18 ಮತ್ತು 29 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/–
(ಆರ್.ಎಸ್.ಹುಚ್ಚಾಚಾರಿ),
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

## ಅನುಬಂಧ – 6ಸಿ

**ಅಧಿಸೂಚನೆ**

**ಸಂಖ್ಯೆ: ಸಿಓ 190 ಸಿಎಲ್ಎಂ 2006,ಬೆಂಗಳೂರು,**

**ದಿನಾಂಕ 17 ನೇ ಜನೇವರಿ 2006**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ರ ಪ್ರಕರಣ 3 ರ ಉಪ ಪ್ರಕರಣ (3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಓ 295 ಸಿಎಲ್ಎಂ 2005 ದಿನಾಂಕ 21.08.2006 ನ್ನು ಭಾಗಶಃ ಮಾರ್ಪಡಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ಉಪಬಂಧಗಳಡಿಯಲ್ಲಿ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಸಹಕಾರಿಗಳ ರಿಜಿಸ್ಟ್ರಾರನಿಗೆ ಪ್ರದತ್ತವಾದ ಅಧಿಕಾರಗಳಲ್ಲಿ ಈ ಕೆಳಕಂಡ ಕೋಷ್ಟಕದ ಅಂಕಣ (03) ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಗಳನ್ನು ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳಿಗೆ ಪ್ರದತ್ತಗೊಳಿಸುತ್ತಿದೆ ಅಂದರೆ.–

**"ಕೋಷ್ಟಕ"**

| ಕ್ರ. ಸಂ | ಅಧಿಕಾರಿಗಳ ಪ್ರವರ್ಗ | ಅಧಿನಿಯಮ ಹಾಗೂ ನಿಯಮಗಳಡಿಯಲ್ಲಿ ಪ್ರತ್ಯಾಯೋಜಿಸಲಾದ ಅಧಿಕಾರಗಳು |
|---|---|---|
| **1** | **2** | **3** |
| 1 | ಉಪ ವಿಭಾಗೀಯ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್ | ಪ್ರಕರಣ: 43 ಹಾಗೂ<br>ನಿಯಮ: 16, 18 ಮತ್ತು 29 |
| 2 | ಕರ್ನಾಟಕ ರಾಜ್ಯ ಸಹ ಕಾರಿ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 441 ರ ಪ್ರಕಾರ ನೇಮಕ ಹೊಂದಿದ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್ | ಪ್ರಕರಣ: 43 ಹಾಗೂ<br>ನಿಯಮ: 16, 18 ಮತ್ತು 29 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/–

(ಆರ್.ಎಸ್.ಹುಚ್ಚಾಚಾರಿ),

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

# ಅನುಬಂಧ – 6ಡಿ

**ಅಧಿಸೂಚನೆ**

**ಸಂಖ್ಯೆ: ಸಿಓ:295:ಸಿಎಲ್ಎಂ:2005, ಬೆಂಗಳೂರು, ದಿನಾಂಕ 21 ನೇ ಅಗಸ್ಟ್, 2006**

**ಕರ್ನಾಟಕ ರಾಜ್ಯ ಪತ್ರ, ವಿಶೇಷ ಪತ್ರಿಕೆ ಸಂಖ್ಯೆ 1064, ದಿನಾಂಕ 21.08.2006**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ರ ಪ್ರಕರಣ 3 ರ ಉಪ ಪ್ರಕರಣ (3) ರ ಅಡಿಯಲ್ಲಿ ಪ್ರದತ್ತವಾದ ಅಕಾರಗಳನ್ನು ಚಲಾಯಿಸಿ ಮತ್ತು ಸರ್ಕಾರದ ಅಸೂಚನೆ ಸಂಖ್ಯೆ: ಸಿಓ:220:ಸಿಎಲ್ಎಂ:2005 ದಿನಾಂಕ 22.08.2005 ನ್ನು ಭಾಗಶಃ ಮಾರ್ಪಡಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ಉಪಬಂಧಗಳಡಿಯಲ್ಲಿ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಸಹಕಾರಿಗಳ ರಿಜಿಸ್ಟ್ರಾರನಿಗೆ ಪ್ರದತ್ತವಾದ ಅಧಿಕಾರಗಳಲ್ಲಿ ಈ ಕೆಳಕಂಡ ಕೋಷ್ಟಕದ ಅಂಕಣ (3) ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಗಳನ್ನು ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳಿಗೆ ಪ್ರದತ್ತಗೊಳಿಸುತ್ತಿದೆ ಅಂದರೆ.–

**"ಕೋಷ್ಟಕ"**

| ಕ್ರ. ಸಂ | ಅಧಿಕಾರಿಗಳ ಪ್ರವರ್ಗ | ಅಧಿನಿಯಮ ಹಾಗೂ ನಿಯಮಗಳಡಿಯಲ್ಲಿ ಪ್ರತ್ಯಾಯೋಜಿಸಲಾದ ಅಧಿಕಾರಗಳು |
|---|---|---|
| **1** | **2** | **3** |
| 01 | ಉಪ ವಿಭಾಗೀಯ ಸಹ 'ಕಾರಿಗಳ ಸಹಾಯಕ ರಿಜಿಸ್ಟ್ರಾರ್ | ಪ್ರಕರಣ: 43 ಹಾಗೂ<br>ನಿಯಮ: 16, 18 ಮತ್ತು 29 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/–

(ಆರ್.ಎಸ್.ಹುಚ್ಚಾಚಾರಿ),

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

# ಅನುಬಂಧ – 6ಇ

**ಕರ್ನಾಟಕ ಸರ್ಕಾರ**

**ಸಂಖ್ಯೆ: : ಸಿಒ 176 ಸಿಎಲ್ ಎಂ 2015** **ಕರ್ನಾಟಕ ಸರ್ಕಾರದ ಸಚಿವಾಲಯ**

**ಬಹುಮಹಡಿ ಕಟ್ಟಡ,**

**ಬೆಂಗಳೂರು, ದಿನಾಂಕ: 08.01.2016**

**ಅಧಿಸೂಚನೆ**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ (2000ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ಪ್ರಕರಣ 3ರ ಉಪಪ್ರಕರಣ (3)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ: ಸಿಒ 220 ಸಿಎಲ್ಎಂ 2005 ದಿನಾಂಕ: 22–08–2005 ಹಾಗೂ ಸಂಖ್ಯೆ : ಸಿಒ 295 ಸಿಎಲ್ಎಂ 2005, ದಿನಾಂಕ: 21–08–2006ನ್ನು ರದ್ದುಪಡಿಸಿ ಮತ್ತು ಅಧಿಸೂಚನೆ ಸಂಖ್ಯೆ: ಸಿಒ 335 ಸಿಎಲ್ಎಂ 2005 ದಿನಾಂಕ :2–04.2006 ಅನ್ನು ಭಾಗಶ: ಮಾರ್ಪಡಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ಉಪಬಂಧಗಳಡಿಯಲ್ಲಿ ಸಹಕಾರಿಗಳ ರಿಜಿಸ್ಟ್ರಾರನಿಗೆ ಪ್ರದತ್ತವಾದ ಅಧಿಕಾರಗಳನ್ನು ಈ ಕೆಳಕಂಡ ಕೋಷ್ಟಕದ ಅಂಕಣ (4)ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳನ್ನು ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿರುವ ಸಹಕಾರಿಗಳ ಕಾರ್ಯವ್ಯಾಪ್ತಿಗೆ ಒಳಪಟ್ಟು ಪ್ರಧಾನ ಮಾಡಿದೆ, ಅಂದರೆ:

| ಕ್ರಮ ಸಂಖ್ಯೆ | ಅಧಿಕಾರಿಗಳು | ಸಹಕಾರಿಗಳು | ಪ್ರಧಾನ ಮಾಡಲಾದ ಅಧಿಕಾರಗಳು |
|---|---|---|---|
| 01 | ಉಪ ವಿಭಾಗಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳು (ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳನ್ನು ಹೊರೆತುಪಡಿಸಿ) | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯ ಎಲ್ಲಾ ಸಹಕಾರಿಗಳು | ಪ್ರಕರಣಗಳು:<br>35, 47, 48 ಮತ್ತು 51<br><br>ನಿಯಮ:<br>3, 7(1) ಮತ್ತು 29 |
| 02 | ಬೆಂಗಳೂರು ನಗರ ಜಿಲ್ಲೆಗಳ ಉಪವಿಭಾಗಗಳ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳು | ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್‌ಗಳ ವ್ಯಾಪ್ತಿಯಲ್ಲಿ ನೊಂದಾಯಿತ ಕಛೇರಿ ಹೊಂದಿರುವ ಮತ್ತು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ ಎಲ್ಲಾ ಸಹಕಾರಿಗಳು | ಪ್ರಕರಣಗಳು:<br>35, 47, 48 ಮತ್ತು 51<br><br>ನಿಯಮ:<br>3, 7(1) ಮತ್ತು 29 |
| 03 | ಜಿಲ್ಲಾ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳು (ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳನ್ನು ಹೊರೆತುಪಡಿಸಿ) | ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿ ಮತ್ತು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಡಿಮೆ ಕಾರ್ಯವ್ಯಾಪ್ತಿಯ ಎಲ್ಲಾ ಸಹಕಾರಿಗಳು | ಪ್ರಕರಣಗಳು:<br>35, 47, 48 ಮತ್ತು 51<br><br>ನಿಯಮ:<br>3, 7(1) ಮತ್ತು 29 |
| 04 | ಬೆಂಗಳೂರು ನಗರ ಜಿಲ್ಲೆಗಳ ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳು | ಸಹಕಾರಿಗಳ ಉಪ ರಿಜಿಸ್ಟ್ರಾರ್‌ಗಳ ಕಾರ್ಯ ವ್ಯಾಪ್ತಿಯಲ್ಲಿ ನೊಂದಾಯಿತ ಕಛೇರಿ ಹೊಂದಿರುವ ಮತ್ತು ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿ ಮತ್ತು ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿಯ ಹೊಂದಿರುವ ಎಲ್ಲಾ ಸಹಕಾರಿಗಳು | ಪ್ರಕರಣಗಳು:<br>35, 47, 48 ಮತ್ತು 51<br><br>ನಿಯಮ:<br>3, 7(1) ಮತ್ತು 29 |
| 05 | ಪ್ರಾಂತೀಯ ಸಹಕಾರಿಗಳ ಜಂಟಿ ರಿಜಿಸ್ಟ್ರಾರ್‌ಗಳು | ಜಿಲ್ಲಾ ಮಟ್ಟದ ಕಾರ್ಯವ್ಯಾಪ್ತಿ ಮತ್ತು ವಿಭಾಗೀಯ ಮಟ್ಟದ ಕಾರ್ಯವ್ಯಾಪ್ತಿ ಮೀರದ ಎಲ್ಲಾ ಸಹಕಾರಿಗಳು | ಪ್ರಕರಣಗಳು:<br>35, 47, 48 ಮತ್ತು 51<br>ನಿಯಮ:<br>3, 7(1) ಮತ್ತು 29 |

| | | | |
|---|---|---|---|
| 06 | ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮ–441 ರ ಪ್ರಕಾರ ನೇಮಕ ಹೊಂದಿದ ಸಹಕಾರ ಸಂಘಗಳ ಜಂಟಿ ರಿಜಿಸ್ಟಾರ್ | ಎಲ್ಲಾ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು | ಪ್ರಕರಣಗಳು:<br>35ಎ, 39, 40, 41 (41ರ ಉಪ ಪ್ರಕರಣ (1) (ಬಿ) ಮತ್ತು (ಸಿ) ಹೊರೆತುಪಡಿಸಿ) 44 ಮತ್ತು 45<br>ನಿಯಮ:<br>11, 27 ಮತ್ತು 29 |
| 07 | ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮ–441ರ ಪ್ರಕಾರ ನೇಮಕ ಹೊಂದಿದ ಸಹಕಾರ ಸಂಘಗಳ ಸಹಾಯಕ ರಿಜಿಸ್ಟಾರ್ | ಎಲ್ಲಾ ಕಾರ್ಯ ವ್ಯಾಪ್ತಿಯ ಎಲ್ಲಾ ಸಹಕಾರಿಗಳು | ಪ್ರಕರಣಗಳು: 43<br>ನಿಯಮ:<br>13, 4, 16, 17, 18, 19 ಮತ್ತು 29 |

ನಿಯಮ 441ರಡಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದಕ್ಕೆ ನೇಮಕ ಹೊಂದಿದ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯ ಯಾವುದೇ ಸ್ಥಳದಲ್ಲಿ ಅಗತ್ಯಕ್ಕೆ ತಕ್ಕಂತೆ ಉಪವೇಶನಗಳನ್ನು ನಡೆಸಿ ಕಾರ್ಯ ನಿರ್ವಹಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಂ.ವೆಂಕಟಸ್ವಾಮಿ)

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಸಹಕಾರ ಇಲಾಖೆ

ದೂರವಾಣಿ ಸಂಖ್ಯೆ 080–22032369

ಇವರಿಗೆ

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ. ಮತ್ತು ಆದರ 50 ಪ್ರತಿಗಳನ್ನು ಸಹಕಾರ ಇಲಾಖೆಗೆ ಕೂಡಲೇ ಕಳುಹಿಸಿಕೊಡಲು ಕೋರಲಾಗಿದೆ.

ಪ್ರತಿಗಳು:

1) ಸಹಕಾರ ಸಂಘಗಳ ನಿಬಂಧಕರು, ನಂ.01, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52.
2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ನಂ.17, ಜಯನಿವಾಸ, ಶಂಕರ ಮಠ ರಸ್ತೆ, ಬಸವನಗುಡಿ, ಬೆಂಗಳೂರು–04
3) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು.
4) ಮುಖ್ಯಕಾರ್ಯನಿರ್ವಾಹಣಾಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ನಿರ್ಮಾಣ ಭವನ, ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10
5) ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಆಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ.
7) ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

# ಅನುಬಂಧ – 6ಎಫ್

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು
ದಿನಾಂಕ : 11–12–2002

ಕ್ರ. ಸಿ.ಎಂ.ಡಬ್ಲ್ಯೂ: 83: ಸಿಎಲ್‌ಎಂ : 2002

ಇಂದ,

ಪ್ರಧಾನ ಕಾರ್ಯದರ್ಶಿಗಳು,

ಸಹಕಾರ ಇಲಾಖೆ,

ಕರ್ನಾಟಕ ಸರ್ಕಾರ, ಬೆಂಗಳೂರು–560 001

ಇವರಿಗೆ,

ಸಹಕಾರ ಸಂಘಗಳ ನಿಬಂಧಕರು,

ಬೆಂಗಳೂರು

ಮಾನ್ಯರೇ,

ವಿಷಯ : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 43 (1) (ಸಿ) ರ ಮಾರಾಟಾಧಿಕಾರಿಗಳ ಅಧಿಕಾರವನ್ನು ಸೌಹಾರ್ದ ಕಾಯ್ದೆಯಡಿ ನೋಂದಣಿಯಾದ ಸಹಕಾರಿಗಳ ಅಧಿಕಾರಿಗಳಿಗೆ ಕೊಡುವ ಬಗ್ಗೆ

ಉಲ್ಲೇಖ : ತಮ್ಮ ಕಛೇರಿ ಪತ್ರ ಸಂಖ್ಯೆ : ಆರ್.ಎಸ್.ಆರ್. /ಸೌಕಾ/59/ಎಕ್ಸ್‌ಎಂ /002–03, ದಿನಾಂಕ : 06–8–2002

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಸಿದಂತೆ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ 1997ಕ್ಕೆ ನಿಯಮಗಳ ರಚನಾ ಕಾರ್ಯ ಪ್ರಗತಿಯಲ್ಲಿದ್ದು, ನಿಯಮಗಳ ಅನುಪಸ್ಥಿತಿಯಲ್ಲಿ ಹಾಗೂ ಸಹಕಾರ ಇಲಾಖೆಯಲ್ಲಿ ಕೆಳಹಂತದ ಸಿಬ್ಬಂದಿಯ ಕೊರತೆಯಿರುವುದರಿಂದ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ನೋಂದಣಿಯಾದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಮತ್ತು ಕೃಷಿಯೇತರ ಪತ್ತಿನ ಸಹಕಾರಿಗಳಲ್ಲಿ ಕಿರಿಯ ಸಹಾಯಕ ದರ್ಜೆ ಹಾಗೂ ಮೇಲ್ಪಟ್ಟು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 43(1)(ಸಿ) ಅಧಿಕಾರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟಂತೆ ನೀಡಲು ಸರ್ಕಾರದ ಅನುಮತಿ ನೀಡಲಾಗಿದೆಯೆಂದು ತಮಗೆ ತಿಳಿಸಲು ಆದೇಶಿತನಾಗಿದ್ದೇನೆ.

ಷರತ್ತುಗಳು :

1) ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ/ಕೃಷಿಯೇತರ ಪತ್ತಿನ ಸಹಕಾರಿಗಳಲ್ಲಿ ಕಿರಿಯ ದರ್ಜೆ ಸಹಾಯಕರು ಹಾಗೂ ಮೇಲ್ಪಟ್ಟು ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಅಮಲ್ಜಾರಿ ಅರ್ಜಿಯನ್ನು ಜಾರಿ ಮಾಡುವ ಕಾರ್ಯ ನಿರ್ವಹಿಸತಕ್ಕದ್ದು.

2) ಅಮಲ್ಜಾರಿ ಕಾರ್ಯ ನಿರ್ವಹಿಸಬೇಕಾದ ಪಟ್ಟಣ ಬ್ಯಾಂಕುಗಳ/ಕೃಷಿಯೇತರ ಪತ್ತಿನ ಸಹಕಾರಿಗಳ ಸಿಬ್ಬಂದಿಯ ಸೇವೆಯನ್ನು ಅಮಲ್ಜಾರಿಯ ಕಾರ್ಯಕ್ಕೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯಲ್ಲಿರುವ ಸಂಬಂಧಪಟ್ಟ ನಿಬಂಧಕರ ನಿಯಂತ್ರಣ ನೀಡತಕ್ಕದ್ದು ಹಾಗೂ ಅಮಲ್ಜಾರಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ಟಿ.ಎ. ಮತ್ತು ಡಿ.ಎ. ಗಳನ್ನು ಸಂಸ್ಥೆಯ ವತಿಯಿಂದಲೇ ಭರಿಸುವುದಕ್ಕೆ ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಕೃಷಿಯೇತರ ಪತ್ತಿನ ಸಹಕಾರಿಗಳು ಒಪ್ಪಿಗೆ ನೀಡತಕ್ಕದ್ದು.

3) ಮೇಲ್ಕಂಡ ಸಿಬ್ಬಂದಿಯನ್ನು ಅಮಲ್ಜಾರಿ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸದರಿಯವರು ನಿಬಂಧಕರ ಅಧೀನ ಅಧಿಕಾರಿಗಳೆಂದು ಪಟ್ಟಣ ಸಹಕಾರಿ ಬ್ಯಾಂಕುಗಳು/ಕೃಷಿಯೇತರ ಪತ್ತಿನ ಸಹಕಾರಿಗಳು ನಿರ್ಣಯ ಮಾಡತಕ್ಕದ್ದು ಹಾಗೂ ಅಮಲ್ಜಾರಿಗೆ ಸಂಬಂಧಿಸಿದಂತೆ ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಕೃಷಿಯೇತರರ ಪತ್ತಿನ ಸಹಕಾರಿಗಳು ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

4) ಪಟ್ಟಣ ಸಹಕಾರಿ ಬ್ಯಾಂಕುಗಳು/ಕೃಷಿಯೇತರ ಪತ್ತಿನ ಸಹಕಾರಿಗಳು ತಮ್ಮ ವೃಂದ ಬಲದಲ್ಲಿ ವಸೂಲಾತಿಗೆ ಸಂಬಂಧಿಸಿದ ಕಾರ್ಯವನ್ನು ನಿರ್ವಹಿಸಲು ಸೂಕ್ತ ಹುದ್ದೆಗಳನ್ನು ಸೂಚಿಸತಕ್ಕದ್ದು.

ತಮ್ಮ ವಿಶ್ವಾಸಿ,
ಸಹಿ/–
(ಆರ್.ಎಸ್. ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ

# ಅಧ್ಯಾಯ – 6.1

# ಸಹಕಾರಿ ನೊಂದಣಿ

ನೋಂದಣಿ ಮಾಡಬಹುದಾದ ಸಹಕಾರಿಗಳು :

ಕಾಯಿದೆ ಕಲಂ.4 :

1) ಯಾವುದೇ ಸಹಕಾರಿಯು :

(ಎ) ತನ್ನ ಕಾರ್ಯಾಚರಣೆ ಪ್ರದೇಶದಲ್ಲಿನ ಸದಸ್ಯರ ಹಿತಾಸಕ್ತಿಗಾಗಿ ದುಡಿಯುವುದೇ ತನ್ನ ಮುಖ್ಯ ಉದ್ದೇಶವಾಗಿದ್ದ ಹೊರತು;

(ಬಿ) ಅದರ ಉಪವಿಧಿಗಳು, ಸಹಕಾರಿ ಮೂಲ ತತ್ವಗಳಿಗನುಸಾರವಾಗಿ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೂಲಕ ತನ್ನ ಸದಸ್ಯರು ಆರ್ಥಿಕ ಮತ್ತು ಸಾಮಾಜಿಕ ಪುರೋಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸುತ್ತಿದ್ದ ಹೊರತು, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗತಕ್ಕದ್ದಲ್ಲ.

2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು

(ಎ) ಬೇರೆ ಬೇರೆ ಕುಟುಂಬಗಳಿಗೆ ಸೇರಿದ ಹತ್ತು ಜನರಿಗಿಂತ ಕಡಿಮೆಯಲ್ಲದ ವ್ಯಕ್ತಿಗಳು ಸಹಕಾರಿಯನ್ನು ರಚಿಸಲು ಉದ್ದೇಶಿಸಿದರೆ;

ಅಥವಾ

(ಬಿ) ಒಂದು ಸಹಕಾರಿ ಸಂಘವು ಈ ಅಧಿನಿಯಮದ ಅಡಿ ಸಹಕಾರಿಯಾಗಿ ಪರಿವರ್ತಿತವಾಗಲು, ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಉದ್ದೇಶಿಸಿದರೆ; ಅಥವಾ

(ಸಿ) ಈ ಅಧಿನಿಯಮದ ಅಡಿ ನೋಂದಾಯಿತವಾದ [ಇಪ್ಪತ್ತು ಅಥವಾ ಅದಕ್ಕೂ ಹೆಚ್ಚಿನ ಸಹಕಾರಿಗಳು] ಒಂದು ಒಕ್ಕೂಟ ಸಹಕಾರಿಯಾಗಲು ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಉದ್ದೇಶಿಸಿದರೆ. ಅಂಥವುಗಳನ್ನು [ಬೇರೆ ಬೇರೆ ಸಹಕಾರಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಪ್ಪಿಸುವ ಸಲುವಾಗಿ ಸಹಕಾರಿಯ ನೋಂದಣಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರನು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನ, ಸುತ್ತೋಲೆಗಳಿಗೊಳಪಟ್ಟು] ಈ ಅಧಿನಿಯಮದ ಅಡಿ ಸಹಕಾರಿಯೆಂಬುದಾಗಿ ನೋಂದಾಯಿಸ ಬಹುದು.

(ಪರಂತು, ಯಾವುದೇ ಸಹಕಾರಿಯು ಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ ಅಥವಾ ಅದನ್ನು ನೋಂದಣಿ ಮಾಡುವುದರಿಂದ ಸಹಕಾರಿ ಚಳುವಳಿಯ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಕಂಡು ಬಂದರೆ ಅದು ನೋಂದಾಯಿತವಾಗತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ಸಹಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರಿಯಾಗಿ ನೋಂದಾಯಿತವಾಗತಕ್ಕದ್ದಲ್ಲ ಮತ್ತು ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವು ಗೃಹ ನಿರ್ಮಾಣ ಸಹಕಾರಿಯಾಗಿ ಪರಿವರ್ತಿತವಾಗತಕ್ಕದ್ದಲ್ಲ.

**ಸಹಕಾರಿಯ ನೋಂದಣಿಗಾಗಿ ಅರ್ಜಿ :**

**ಕಾಯಿದೆ ಕಲಂ.5 :**

(1) ಸಹಕಾರಿಯ ನೋಂದಣಿಗಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅರ್ಜಿಯೊಂದಿಗೆ –

(ಎ) ಸಹಕಾರಿಯ ಪ್ರವರ್ತಕರು ಅಥವಾ ಒಕ್ಕೂಟ ಸಹಕಾರಿಯನ್ನು ರಚಿಸಲು ಬಯಸುವ ಸಹಕಾರಿಗಳ ಪ್ರತಿನಿಧಿಗಳು ಅಥವಾ ಈ ಅಧಿನಿಯಮದ ಅಡಿಯಲ್ಲಿ ಸಹಕಾರಿಯಾಗಿ ಪರಿವರ್ತಿತವಾಗಲು ಉದ್ದೇಶಿಸುವ ಸಹಕಾರಿ ಸಂಘದ ಸಾಮಾನ್ಯ ನಿಕಾಯವು ಅಂಗೀಕರಿಸಿದಂತೆ ಅಂಥ ಪ್ರಸ್ತಾವಿತ ಸಹಕಾರಿಯ ಉಪವಿಧಿಗಳ ಮೂಲ ಪ್ರತಿ ಹಾಗೂ ಅದರ ಐದು ಪ್ರತಿಗಳು;

(ಬಿ) ಒಂದು ಸಹಕಾರಿಯನ್ನು ರಚಿಸಲು ಉದ್ದೇಶಿಸುವ ವ್ಯಕ್ತಿಗಳ ಅಥವಾ ಸಹಕಾರಿಗಳ ಹೆಸರುಗಳ ಪಟ್ಟಿ ಮತ್ತು ಒಂದು ಸಹಕಾರಿ ಸಂಘದ

ಸಂದರ್ಭದಲ್ಲಿ, ಅಂಥ ಸಂಘದ ಸಮಿತಿಯ ಸದಸ್ಯರು ಹೆಸರು, ವಿಳಾಸ, ವೃತ್ತಿ ಮತ್ತು ಆರ್ಥಿಕ ಬಾಧ್ಯತೆಗಳೊಂದಿಗೆ ಅಂಥ ಸಂಘದ ಸದಸ್ಯರ ಹೆಸರುಗಳ ಪಟ್ಟಿ;

(ಸಿ) ಉಪವಿಧಿಯನ್ನು ಅಂಗೀಕರಿಸಲಾದ ಸಭೆಯಲ್ಲಿ ಹಾಜರಿದ್ದ ವ್ಯಕ್ತಿಗಳ ಅಥವಾ ಪ್ರವರ್ತಕರ ಅಥವಾ ಹಾಜರಿದ್ದ ಪ್ರತಿನಿಧಿಗಳ ಪೈಕಿ ಕೊನೆಯ ಪಕ್ಷ ಬಹುಸಂಖ್ಯೆಯ ವ್ಯಕ್ತಿಗಳು ಅಥವಾ ಪ್ರವರ್ತಕರು ಅಥವಾ ಪ್ರತಿನಿಧಿಗಳು ವಿಧ್ಯುಕ್ತವಾಗಿ ಸಹಿ ಮಾಡಿರುವ ಸಭಾ ನಡವಳಿಕೆಗಳ ಒಂದು ಯಥಾಪ್ರತಿ ಅಥವಾ ಒಂದು ಸಹಕಾರ ಸಂಘದ ಸಂದರ್ಭದಲ್ಲಿ ಸಾಮಾನ್ಯ ಸಭೆಯ ನಿರ್ಣಯದ ಹಾಗೂ ನಡವಳಿಕೆಗಳ ಒಂದು ಯಥಾ ಪ್ರತಿ;

(ಡಿ) ಕನಿಷ್ಠ ಐನೂರು ರೂಪಾಯಿಗಳು ಅಥವಾ ಗರಿಷ್ಠ ಐದು ಸಾವಿರ ರೂಪಾಯಿಗಳಿಗೊಳಪಟ್ಟು ಒಟ್ಟು ಅಧಿಕೃತ ಷೇರು ಬಂಡವಾಳದ, ಅದು ಯಾವುದೇ ಹೆಸರಿನಿಂದ ಕರೆಯಲ್ಪಡಲಿ, ಶೇಕಡ ಒಂದರಷ್ಟು ನೋಂದಣಿ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ಚಲನ್ನಿನ ಒಂದು ಪ್ರತಿ; ಮತ್ತು

(ಇ) ಒಂದು ಸಹಕಾರ ಸಂಘದ ಸಂದರ್ಭದಲ್ಲಿ, ಆ ಸಹಕಾರ ಸಂಘವು ಸರ್ಕಾರದಿಂದ ಯಾವುದೇ ಷೇರು ಬಂಡವಾಳ ಮತ್ತು ಯಾವುದೇ ಸಾಲಗಳು ಅಥವಾ ಖಾತರಿ ಮತ್ತು ಯಾವುದೇ ಸಹಕಾರ ಸಂಘದಿಂದ ಸಾಲಗಳು ಮತ್ತು ಖಾತರಿಯನ್ನು ಪಡೆದಿಲ್ಲವೆಂಬುದನ್ನು ತೋರಿಸುವ ದಸ್ತಾವೇಜುಗಳು,

–ಇವುಗಳು ಇರತಕ್ಕದ್ದು.

(3) ರಿಜಿಸ್ಟ್ರಾರನಿಗೆ, –

(ಎ) ಅರ್ಜಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಅನುಗುಣ ವಾಗಿದೆಯೆಂದು;

[(ಎಎ) ಪ್ರಸ್ತಾವಿತ ಸಹಕಾರಿಯು ಸುಸ್ಥಿತಿ ವ್ಯವಹಾರದ ಅಗತ್ಯತೆಗಳನ್ನು ಪಾಲಿಸುತ್ತದೆ ಎಂದು ಮತ್ತು ಅದು ಯಶಸ್ವಿಯಾಗುವ ಸಮಂಜಸ ಅವಕಾಶಗಳಿವೆಯೆಂದು;]

(ಬಿ) ಪ್ರಸ್ತಾವಿತ ಉಪವಿಧಿಗಳು 10ನೇ ಪ್ರಕರಣಕ್ಕೆ ಅನುಗುಣವಾಗಿದೆಯೆಂದು; ಮತ್ತು

(ಸಿ) ಪ್ರಸ್ತಾವಿತ ಸಹಕಾರಿಯ ಹೆಸರು ಮತ್ತು ಈ ಅಧಿನಿಯಮದ ಅಡಿ ಈಗಾಗಲೇ ನೋಂದಾಯಿತವಾಗಿರುವ ಒಂದು ಸಹಕಾರಿಯ ಹೆಸರು ಒಂದೇ ಆಗಿಲ್ಲವೆಂದು ಅಥವಾ 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ 7ನೇ ಪ್ರಕರಣದ ಅಡಿ ಈಗಾಗಲೇ ನೋಂದಾಯಿಸಲಾಗಿರುವ ಸಹಕಾರ ಸಂಘವು ಬಳಸಿರುವ ಹೆಸರು ಅದೇ ಆಗಿಲ್ಲವೆಂದು,

– ಮನದಟ್ಟಾದರೆ, ಅವನು ಸಹಕಾರಿಯನ್ನು ಮತ್ತು ಅದರ ಉಪವಿಧಿಗಳನ್ನು ಸಹ ನೋಂದಣಿ ಮಾಡತಕ್ಕದ್ದು ಮತ್ತು ತಾನು ರುಜು ಮಾಡಿ ಮೊಹರು ಹಾಕಿರುವ ನೋಂದಣಿ ಪ್ರಮಾಣ ಪತ್ರವನ್ನು ಮತ್ತು ನೋಂದಾಯಿತ ಉಪವಿಧಿಗಳ ಮೂಲ ಪ್ರತಿಯನ್ನು ಅರ್ಜಿಯಲ್ಲಿ ಹೇಳಲಾಗಿರುವ ಮುಖ್ಯ ಪ್ರವರ್ತಕನಿಗೆ ಅಥವಾ ಸಹಕಾರ ಸಂಘಕ್ಕೆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು. ಅಂಥ ನೋಂದಣಿ ಪ್ರಮಾಣ ಪತ್ರದ ಒಂದು ಪ್ರತಿಯನ್ನು ಉಪವಿಧಿಗಳ ಒಂದು ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಗೆ ಸಹ ಕಳುಹಿಸತಕ್ಕದ್ದು.

[ಪರಂತು, ಒಂದು (ಪ್ರಸ್ತಾವಿತ) ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಈ ಪ್ರಕರಣದಲ್ಲಿ ಹೇಳಿರುವಂತೆ ನೋಂದಣಿಯನ್ನು ರಿಜರ್ವ್ ಬ್ಯಾಂಕಿನ ಪೂರ್ವಾನುಮೋದನೆಯೊಡನೆ ಮಾತ್ರ ಮಾಡತಕ್ಕದ್ದು.]

(4) (3)ನೇ ಉಪ-ಪ್ರಕರಣದಲ್ಲಿ ವಿಧಿಸಲಾದ ಷರತ್ತುಗಳನ್ನು ಪೂರೈಸದಿದ್ದರೆ, ರಿಜಿಸ್ಟ್ರಾರನು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದೀಂದ ತೊಂಬತ್ತು ದಿನಗಳೊಳಗಾಗಿ ನೋಂದಣಿಯನ್ನು ನಿರಾಕರಿಸುವ ಆದೇಶವನ್ನು ನಿರಾಕರಣೆಯ ಕಾರಣಗಳೊಂದಿಗೆ, ರಿಜಿಸ್ಟರ್ಡ್ ಅಂಚೆಯ ಮೂಲಕ ಮುಖ್ಯಪ್ರವರ್ತಕನಿಗೆ ಅಥವಾ ಸಂದರ್ಭಾನುಸಾರ ಸಹಕಾರ ಸಂಘಕ್ಕೆ ತಿಳಿಸತಕ್ಕದ್ದು.

(5) (4)ನೇ ಉಪ-ಪ್ರಕರಣದ ಅಡಿಯಲ್ಲಿನ ಆದೇಶದ ವಿರುದ್ಧ 

(ಎ) ಆದೇಶವನ್ನು ರಿಜಿಸ್ಟ್ರಾರನು ಹೊರಡಿಸಿದ್ದಲ್ಲಿ ಸರ್ಕಾರಕ್ಕೆ; ಅಥವಾ

(ಬಿ) ಆದೇಶವನ್ನು ಇತರ ಯಾರೇ ಅಧಿಕಾರಿಯು ಹೊರಡಿಸಿದ್ದಲ್ಲಿ ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ,

– ಅಪೀಲು ಸಲ್ಲಿಸಬಹುದು.

(6) ರಿಜಿಸ್ಟ್ರಾರನು, (3)ನೇ ಅಥವಾ (4)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ನೋಂದಣಿ ಮಾಡಲು ಅಥವಾ ನೋಂದಣಿ ಮಾಡುವುದನ್ನು ನಿರಾಕರಿಸಲು ತಪ್ಪಿದರೆ, ಸದರಿ ಅವಧಿ ಮುಕ್ತಾಯವಾದ ತರುವಾಯ ಸಹಕಾರಿಯು ಈ ಅಧಿನಿಯಮದ ಅಡಿ ನೋಂದಾಯಿತವಾಗಿದೆಯೆಂದು ಭಾವಿಸತಕ್ಕದ್ದು.

ಸಹಕಾರಿಯ ಸದಸ್ಯರ ಮತ್ತು ಸಾರ್ವಜನಿಕರ, ಆರ್ಥಿಕ ಅಭಿವೃದ್ಧಿ ಮತ್ತು ಸಮುದಾಯದ ಸಾಮಾನ್ಯ ಕಲ್ಯಾಣ ಅಭಿವೃದ್ಧಿಗೊಳಿಸುವುದು, ಆ ಸಹಕಾರಿಯ ಧ್ಯೇಯೋದ್ದೇಶವಾಗಿರಬೇಕು.ಒಂದು ಸಹಕಾರಿ ಸ್ಥಾಪನೆ ಮಾಡುವುದು, ನೋಂದಾವಣೆಯಾದ ನಂತರ ಪ್ರತಿಯೊಬ್ಬ ಸದಸ್ಯನೂ ತನ್ನ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಆಗಬೇಕೆಂಬ ಧ್ಯೇಯೋದ್ದೇಶದಿಂದ, ಸದಸ್ಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದಾಗ, ಸಾಮಾಜಿಕ ಅಭಿವೃದ್ಧಿ ತಾನಾಗಿಯೇ ವೃದ್ಧಿಯಾಗುತ್ತದೆ.ಸಮಾಜದ ಅಭಿವೃದ್ಧಿ ಜೊತೆಗೆ ಸದಸ್ಯರ ಆರ್ಥಿಕ ಬೆಳವಣಿಗೆಗಾಗಿಯೇ ರೂಪಿಸಿಕೊಂಡ ಸಹಕಾರಿಯಾಗಿರುವುದರಿಂದ, ಆ ಉದ್ದೇಶ ಸಾರ್ಥಕಗೊಳಿಸಲು ಸಹಕಾರ ತತ್ವಗಳನ್ನು ಆಧಾರವಾಗಿಟ್ಟುಕೊಳ್ಳತಕ್ಕದ್ದು.

ಸಹಕಾರಿ ಕಾಯಿದೆಯಲ್ಲಿ ಸಹಕಾರ ತತ್ವಗಳನ್ನು ಅಧ್ಯಾಯ ಫಿ ರಲ್ಲಿ ಸೇರಿಸಿದೆ ಮತ್ತು ಆ ತತ್ವಗಳನ್ನು ತಿಳಿಯುವುದು ಅವಶ್ಯಕ. ಈ ತತ್ವಗಳನ್ನು ಅಂತರರಾಷ್ಟ್ರೀಯ ಸಹಕಾರಿ ಒಕ್ಕೂಟ 1963ರಲ್ಲಿ ಪ್ರೊ: ಕರ್ವೆ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ಶಿಫಾರಸ್ಸಿನನ್ವಯ ರೂಪುಗೊಂಡಿದೆ. ಅವುಗಳು ಈ ಕೆಳಕಂಡಂತೆ ಇವೆ.

1. ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ
3. ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ
5. ಸಹಕಾರ ಶಿಕ್ಷಣ
6. ಸಹಕಾರಿಗಳಲ್ಲಿ ಸಹಕಾರ
7. ಸಾಮಾಜಿಕ ಕಳಕಳಿ

ಏಳನೇ ಸಹಕಾರಿ ತತ್ವವನ್ನು 1995ರಲ್ಲಿ ಅಂತರರಾಷ್ಟ್ರೀಯ ಸಹಕಾರಿ ಒಕ್ಕೂಟ, ಹೊಸದಾಗಿ ಸೇರ್ಪಡೆ ಮಾಡಿದೆ.ಒಂದು ಸಹಕಾರಿ ಸ್ಥಾಪನೆ ಮಾಡಿದಾಗ ಅರ್ಹ ಸದಸ್ಯರೆಲ್ಲರೂ ಸದಸ್ಯರಾದಾಗ ಅವರ ಆರ್ಥಿಕ ಅಭಿವೃದ್ಧಿ ಜೊತೆಗೆ ಸಮಾಜದ ಅಭಿವೃದ್ಧಿಯೂ ಸಾಧ್ಯ ಎಂಬುದಕ್ಕೆ ಈ 7ನೇ ತತ್ವವನ್ನು ಸೇರ್ಪಡೆ ಮಾಡಲಾಗಿದೆ.

ಒಂದು ಸಹಕಾರಿ ನೋಂದಾಯಿಸುವಾಗ ಗಮನಿಸಲೇಬೇಕಾದ ಅಂಶಗಳೇನೆಂದರೆ

1. ಸದಸ್ಯರ ಆರ್ಥಿಕ ಹಿತಾಸಕ್ತಿಯನ್ನು ಮತ್ತು ಬೆಳವಣಿಗೆಯನ್ನು ಕಾಣುವುದು.
2. ಸಾಮಾನ್ಯ ಸದಸ್ಯರ ಏಳಿಗೆ ಮತ್ತು ಜನತೆಯ ಬೆಳವಣಿಗೆ. ಮತ್ತು
3. ಸಹಕಾರಿ ವ್ಯವಹಾರವನ್ನು ಅದರ ಧ್ಯೇಯೋದ್ದೇಶಕ್ಕನುಗುಣವಾಗಿ ಜಾರಿ ಮಾಡುವ ಉದ್ದೇಶವಿರಬೇಕು.
4. ಸಹಕಾರಿಯ ಧ್ಯೇಯೋದ್ದೇಶಗಳು ಸಾಮಾಜಿಕ ನ್ಯಾಯತತ್ವಗಳಿಗೆ ಅಸಂಗತವಾಗಿಲ್ಲವೆಂದು
5. ಉಪವಿಧಿಗಳು ಕಾಯಿದೆ, ನಿಯಮಗಳಿಗೆ ವಿರುದ್ಧವಾಗಿಲ್ಲವೆಂದು ಹಾಗೂ
6. ಪ್ರಸ್ತಾವಿತ ಸಹಕಾರಿ ಸುಭದ್ರ ವ್ಯವಹಾರದ ಅಗತ್ಯತೆಗಳನ್ನು ಪಾಲಿಸುತ್ತದೆಂದು ಮತ್ತು ಯಶಸ್ವಿಯಾಗುತ್ತದೆಂದು, ಸಮಂಜಸ ಅವಕಾಶವಿದೆಯೆಂದು ನಂಬಿಕೆ ಬಂದಾಗ ನೋಂದಾಯಿಸಬೇಕು.

ಸಹಕಾರಿಯ ಉದ್ದೇಶವು ಸ್ಪಷ್ಟವಾಗಿರಬೇಕು.ವಿವರವಾಗಿರಬೇಕು. ಮತ್ತು ಗುರಿಯನ್ನು ಇರಿಸಿಕೊಂಡಿರ ಬೇಕು. ಈ ಧ್ಯೇಯೋದ್ದೇಶಗಳು ಕಾಯಿದೆಗೆ ನಿಯಮಕ್ಕೆ ವಿರುದ್ಧವಾಗಿರತಕ್ಕದ್ದಲ್ಲ. ಧ್ಯೇಯೋದ್ದೇಶಗಳ ಪೂರೈಕೆಗಾಗಿ ಸಹಕಾರಿ ಅನುಸರಿಸುವ ನೀತಿ, ನಿಯಮಗಳು, ಉಪವಿಧಿಗಳಲ್ಲಿ ದಾಖಲಾಗಿರತಕ್ಕದ್ದು.

ಸದಸ್ಯರ ಆರ್ಥಿಕ ಬೆಳವಣಿಗೆಯೆಂದರೆ, ಸಹಕಾರಿ ತತ್ವಗಳಲ್ಲಿ ಮೂಲತತ್ವವಾದ "ಎಲ್ಲರಿಗಾಗಿ ನಾನು ಮತ್ತು ನನಗಾಗಿ ಎಲ್ಲರೂ" ಎಂಬುದಕ್ಕೆ ಪೂರಕವಾಗಿ, ಆರ್ಥಿಕವಾಗಿ ಸಬಲರಲ್ಲದ ವ್ಯಕ್ತಿಗಳು ತಮ್ಮ ಅತ್ಯಲ್ಪ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ತಮ್ಮೆಲ್ಲರ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ, ಒಂದು ಸಹಕಾರಿ ಎಂಬುದಕ್ಕೆ ಪೂರಕವಾಗಿರತಕ್ಕದ್ದು. ಸದಸ್ಯರ ಆರ್ಥಿಕ ಬೆಳವಣಿಗೆ ಎಂದರೆ ಪ್ರತಿಯೊಬ್ಬ ಸದಸ್ಯನು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಲು ಸಹಾಯ ಮಾಡುವುದೇ ಸಹಕಾರಿ ಮೂಲ ಉದ್ದೇಶ. ಸವಲತ್ತು ಪಡೆದ ನಂತರ ತಾನು ಸ್ವತಂತ್ರವಾಗಿ ಜೀವನ ನಡೆಸಲು ಸಾಧ್ಯ ಎಂದು ಮನಗಂಡಾಗ ಅಗತ್ಯವಿರುವ ವ್ಯಕ್ತಿಗಳಿಗೆ ಸವಲತ್ತು ಪಡೆಯಲು ಅವಕಾಶ ಕಲ್ಪಿಸುವುದು.

ಸಹಕಾರಿ ನೋಂದಣಿ ಮಾಡುವಾಗ ನೋಂದಣಾಧಿಕಾರಿ ಪ್ರಮುಖವಾಗಿ ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ

1) ತನ್ನ ಕಾರ್ಯಾಚರಣೆ ಪ್ರದೇಶದಲ್ಲಿನ ಸದಸ್ಯರ ಹಿತಾಸಕ್ತಿಗೆ ದುಡಿಯುವ ಉದ್ದೇಶ ಹೊಂದಿರಬೇಕು. ಅಂದರೆ ಒಂದು ಸಹಕಾರಿ ತನ್ನ ವ್ಯವಹಾರಿ ಪ್ರದೇಶದಲ್ಲಿನ ವ್ಯಕ್ತಿಗಳನ್ನು ಮಾತ್ರ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು.

2) ಸಹಕಾರಿ ತನ್ನ ಸದಸ್ಯರ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ದಿ ಹೊಂದಲು ಅವಕಾಶ ಇರಬೇಕು.

3) ಒಕ್ಕೂಟ ಸಹಕಾರಿ ರಚನೆಗೆ ಅವಕಾಶ–20 ಸಹಕಾರಿಗಳ ಪ್ರಸ್ತಾವನೆಗೆ ಸಹಿ ಮಾಡಬೇಕು.

ಇದರ ಜೊತೆಗೆ

1) ನಿಬಂಧಕರು ಸಹಕಾರಿ ಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ ಅಥವಾ ನೋಂದಣಿ ಮಾಡುವುದರಿಂದ ಸಹಕಾರ ಚಳುವಳಿಗೆ ಪ್ರತಿಕೂಲ ಪರಿಣಾಮ ಬೀರುತ್ತಿದ್ದರೆ ನೋಂದಾವಣೆ ಮಾಡತಕ್ಕದ್ದಲ್ಲ. ಹಾಗೂ ಗೃಹ ನಿರ್ಮಾಣ ಉದ್ದೇಶ ಉಳ್ಳ ಒಂದು ಸಹಕಾರಿಯನ್ನು ನೋಂದಾಯಿಸಲು ನಿರ್ಭಂದವಿಧಿಸಿರುವುದನ್ನು ಗಮನಿಸಬೇಕು.

ಸಹಕಾರಿ ನೋಂದಾವಣೆ ಮಾಡಲು ಪೂರ್ವಸಿದ್ಧತೆ:

ಸಮಾನ ಮನಸ್ಕರು ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಒಂದು ಸಹಕಾರಿ ಸ್ಥಾಪನೆ ಮಾಡಬೇಕೆಂದು ಚರ್ಚಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳು

1. ವಿವಿಧ ಕುಟುಂಬಗಳಿಗೆ ಸೇರಿದ 10 ಜನರಿಗೆ ಕಡಿಮೆ ಇಲ್ಲದ/ಒಕ್ಕೂಟ ರಚನೆಗೆ 20 ನೋಂದಾಯಿತ ಸಹಕಾರಿಗಳ ಒಂದು ಪ್ರವರ್ತಕರ ಸಭೆಯನ್ನು ಕರೆಯತಕ್ಕದ್ದು. ಈ ಪ್ರವರ್ತಕರ ಸಭೆಯನ್ನು ಕರೆಯುವಾಗ ಈ ಕೆಳಕಂಡ ನೋಟೀಸ್ ಹೊರಡಿಸತಕ್ಕದ್ದು.

**ಮಾನ್ಯರೇ,**

ನಮ್ಮ ಕಾರ್ಯವ್ಯಾಪ್ತಿಯಲ್ಲಿ ಯಾವುದೇ ಸಹಕಾರಿ ಇಲ್ಲದೇ ಇದ್ದು, ಮತ್ತು ನಮ್ಮ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಒಂದು ಸಹಕಾರಿ ಸ್ಥಾಪನೆ ಅವಶ್ಯಕವೆಂದು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ದಿನಾಂಕ: –––––– ರಂದು ––––––ಸ್ಥಳದಲ್ಲಿ ––––– ಸಮಯಕ್ಕೆ ಸದಸ್ಯರಾಗಬಯಸುವ ವ್ಯಕ್ತಿಗಳ ಒಂದು ಸಭೆಯನ್ನು ಕರೆಯಲಾಗಿದೆ. ಈ ಸಭೆಯಲ್ಲಿ ಚರ್ಚಿಸುವ ವಿಷಯಗಳು ಈ ಕೆಳಕಂಡಂತೆ ಇರುತ್ತವೆ.

1. ಸಭೆಯ ಅಧ್ಯಕ್ಷರನ್ನು ಆಯ್ಕೆ ಮಾಡುವುದು
2. ಸಹಕಾರಿ ಸ್ಥಾಪನೆ ಮಾಡಲು ಅವಶ್ಯಕತೆಯನ್ನು ವಿವರಿಸುವುದು ಮತ್ತು ಮಾಹಿತಿಯನ್ನು ಕೊಡುವುದು
3. ಉದ್ದೇಶಿತ ಕಾರ್ಯವ್ಯಾಪ್ತಿ ಮತ್ತು ಬಂಡವಾಳ ಸಂಗ್ರಹಣೆ ಬಗ್ಗೆ ವಿವರಿಸುವುದು.
4. ಉದ್ದೇಶಿತ ಉಪವಿಧಿಗಳನ್ನು ಪರಿಶೀಲಿಸಿ ತಾತ್ವಿಕ ಒಪ್ಪಿಗೆ ಕೊಡುವುದು.
5. ನಿಬಂಧಕರಿಗೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ತೀರ್ಮಾನಿಸುವುದು

6. ಪ್ರವರ್ತಕರ ಮತ್ತು ಮುಖ್ಯ ಪ್ರವರ್ತಕರ ಆಯ್ಕೆ ಮಾಡುವುದು.
7. ಬ್ಯಾಂಕಿನಲ್ಲಿ ನಿಯೋಜಿತ ಸಹಕಾರಿ ಹೆಸರಿನಲ್ಲಿ ಖಾತೆ ತೆಗೆಯುವ ಬಗ್ಗೆ ಮತ್ತು ಚೆಕ್ ಪುಸ್ತಕಕ್ಕೆ ಸಹಿ ಮಾಡುವವರ ಹೆಸರನ್ನು ನಮೂದಿಸುವ ಬಗ್ಗೆ.

ಈ ಮೇಲ್ಕಂಡ ವಿಷಯಗಳನ್ನು ಚರ್ಚಿಸಲು ನಿಮ್ಮ ಸಹೋದ್ಯೋಗಿಗಳು ಅಥವಾ ಸ್ನೇಹಿತರ ಜೊತೆಗೆ ಆಗಮಿಸಿ ಸಹಕಾರಿ ಸ್ಥಾಪಿಸಲು ಪ್ರೋತ್ಸಾಹಿಸಲು ವಿನಂತಿಸಲಾಗಿದೆ.

ನೋಟೀಸ್ ಹೊರಡಿಸಿದವರ ಹೆಸರು ಮತ್ತು ವಿಳಾಸ

(ದೂರವಾಣಿ ಸಂಖ್ಯೆ ಇದ್ದರೆ ಉಲ್ಲೇಖಿಸುವುದು)

ಸಭೆಯನ್ನು ನಿಗಧಿಪಡಿಸಿದ ದಿನಾಂಕದಂದು ಚರ್ಚಿಸಿದ ವಿಷಯಗಳ ನಡವಳಿಕೆಗಳನ್ನು ದಾಖಲಿಸುವ ಬಗ್ಗೆ.

ಉದ್ದೇಶಿತ ------------------- ಸಹಕಾರಿ ನಿ.,

ಪ್ರವರ್ತಕರ ಸಭೆ ನಡವಳಿಗಳು

ಸಭೆಗೆ ಹಾಜರಿದ್ದ ಎಲ್ಲರನ್ನೂ ಶ್ರೀ/ಶ್ರೀಮತಿ ---------- ಇವರು ಸ್ವಾಗತಿಸಿದರು.ಮೊದಲನೇ ವಿಷಯವಾಗಿ ಸಭಾಧ್ಯಕ್ಷರನ್ನು ಆಯ್ಕೆ ಮಾಡುವ ಬಗ್ಗೆ ವಿಷಯ ಮಂಡಿಸಿದ ಶ್ರೀ/ಶ್ರೀಮತಿ --------- ಇವರು ಶ್ರೀ/ಶ್ರೀಮತಿ -----------ಇವರನ್ನು ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಲು ವಿನಂತಿಸಿದರು.ಅದರಂತೆ ಶ್ರೀ/ಶ್ರೀಮತಿ --------- ಇವರ ಹೆಸರನ್ನು ಅನುಮೋದಿಸಿದರು.ಮತ್ತಾವುದೇ ಹೆಸರು ಪ್ರಸ್ತಾಪವಾಗದೇ ಇದ್ದುದರಿಂದ ಮೇಲೆ ಸೂಚಿಸಿದ ಶ್ರೀ/ಶ್ರೀಮತಿ ---------- ಇವರನ್ನು ಸಭಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಹಕಾರಿ ಸ್ಥಾಪನೆಯ ಬಗ್ಗೆ ಶ್ರೀ/ಶ್ರೀಮತಿ ------- ಇವರು ಉದ್ದೇಶಿತ ಸಹಕಾರಿ ಧ್ಯೇಯೋದ್ದೇಶಗಳು, ಕಾರ್ಯವ್ಯಾಪ್ತಿ, ಕೊಡಮಾಡುವ ಸೌಲಭ್ಯಗಳ ಬಗ್ಗೆ ವಿವರಿಸಿದರು.ಈ ಪ್ರಸ್ತಾವನೆಗೆ ಸಭೆಯ ಅನುಮತಿಯನ್ನು ಕೋರಲಾಯಿತು.ಮತ್ತು ಹಾಜರಿದ್ದ ಎಲ್ಲ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿರುತ್ತಾರೆ.

ನಿಯೋಜಿತ ಸಹಕಾರಿ ಧ್ಯೇಯೋದ್ದೇಶಗಳು, ಕಾರ್ಯವ್ಯಾಪ್ತಿ ಮತ್ತು ಬಂಡವಾಳ ಸಂಗ್ರಹಣೆ, ಸದಸ್ಯರಿಗೆ ಕೊಡಮಾಡುವ ಸವಲತ್ತುಗಳು, ಆಡಳಿತ ಮಂಡಳಿ ರಚನೆ ಇವುಗಳ ಬಗ್ಗೆ ವಿವರಿಸಿದ ನಂತರ ಸಭೆಯು ಸರ್ವಾನುಮತದ ಒಪ್ಪಿಗೆ ನೀಡಿತು.

ಕರಡು ಉಪವಿಧಿಗಳನ್ನು ಶ್ರೀ/ಶ್ರೀಮತಿ ------- ಇವರು ಓದಿ ತಿಳಿಸಿದರು.ಮತ್ತು ಈ ಪ್ರಸ್ತಾವನೆಯನ್ನು ನಿಬಂಧಕರಿಗೆ ರವಾನಿಸುವುದೆಂದು ಅದಕ್ಕೆ ಸಂಬಂಧಪಟ್ಟ ಪತ್ರ ವ್ಯವಹಾರ ಮಾಡಲು ಮುಖ್ಯ ಪ್ರವರ್ತಕರಿಗೆ ಸರ್ವಾನುಮತದಿಂದ ಅಧಿಕಾರ ನೀಡಲಾಯಿತು.

ಪ್ರವರ್ತಕರು ಮತ್ತು ಮುಖ್ಯ ಪ್ರವರ್ತಕರ ಆಯ್ಕೆ ವಿಷಯಕ್ಕೆ ಬಂದಾಗ ಶ್ರೀಮತಿ/ಶ್ರೀ ---------- ಇವರು ಶ್ರೀಮತಿ/ಶ್ರೀ -------------- ಇವರ ಹೆಸರನ್ನು ಮುಖ್ಯ ಪ್ರವರ್ತಕರಾಗಬೇಕೆಂದು ಸೂಚಿಸಿದರು.ಅದಕ್ಕೆ ಶ್ರೀಮತಿ/ಶ್ರೀ ------ ಇವರು ಅನುಮೋದಿಸಿದರು.ಆದ್ದರಿಂದ ಶ್ರೀ/ಶ್ರೀಮತಿ --------------- ಇವರನ್ನು ಮುಖ್ಯ ಪ್ರವರ್ತಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.ಪ್ರವರ್ತಕರ ಆಯ್ಕೆ ವಿಷಯಕ್ಕೆ ಬಂದಾಗ ಈ ಕೆಳಕಂಡ ವ್ಯಕ್ತಿಗಳನ್ನು ಪ್ರವರ್ತಕರೆಂದು ಆಯ್ಕೆ ಮಾಡಲು ಶ್ರೀಮತಿ/ಶ್ರೀ ------------ ರವರು ಸೂಚಿಸಿದರು.ಅದಕ್ಕೆ ಶ್ರೀ/ಶ್ರೀಮತಿ -------- ಇವರು ಅನುಮೋದಿಸಿದರು.ಮತ್ತಾವುದೇ ಪ್ರಸ್ತಾಪಗಳು ಬಾರದೇ ಇದ್ದುದರಿಂದ ಈ ಕೆಳಕಂಡ ವ್ಯಕ್ತಿಗಳನ್ನು ನಿಯೋಜಿತ ಸಹಕಾರಿ ಪ್ರವರ್ತಕರೆಂದು ಅನುಮೋದಿಸಲಾಯಿತು.

| | | | |
|---|---|---|---|
| 1. | 4. | 7. | 10. |
| 2. | 5. | 8. | 11. |
| 3. | 6. | 9. | 12. |

ಮೇಲ್ಕಂಡ ಆಯ್ಕೆಯ ನಂತರ, ಮುಖ್ಯ ಪ್ರವರ್ತಕರು ಮತ್ತು ಪ್ರವರ್ತಕರಿಗೆ ಉದ್ದೇಶಿತ ಸಹಕಾರಿಯ ಪರವಾಗಿ ಸಂಬಂಧಪಟ್ಟ ನಿಬಂಧಕರ ಜೊತೆ ಪತ್ರ ವ್ಯವಹಾರ ಮಾಡಲು ಮತ್ತು ಅವರ ಸೂಚನೆಯಂತೆ ಮುಂದಿನ ಕ್ರಮವಿಡಲು ಅಧಿಕಾರ ನೀಡಲಾಯಿತು. ನಿಬಂಧಕರ ಸೂಚನೆಯಂತೆ

ಸದಸ್ಯರ ನೋಂದಾವಣಿ ಬಗ್ಗೆ ಮತ್ತು ಪಾಲು ಬಂಡವಾಳದ ಸಂಗ್ರಹಣೆ ಬಗ್ಗೆ ವಿಧಿಸುವ ಷರತ್ತುಗಳನ್ನು ಮುಖ್ಯ ಪ್ರವರ್ತಕರು ಮತ್ತು ಪ್ರವರ್ತಕರು ಅನುಸರಿಸಬೇಕೆಂದು ಹಾಗೂ ಸಂಬಂಧಪಟ್ಟ ನಿಬಂಧಕರು ಸೂಚಿಸಿದ ಬ್ಯಾಂಕಿನಲ್ಲಿ ಸಂಗ್ರಹಣೆಯಾದ ಪಾಲು ಬಂಡವಾಳವನ್ನು ಠೇವಣಿಯಾಗಿ ಹೂಡಲು ಮತ್ತು ಅದಕ್ಕೆ ಸಂಬಂಧಪಟ್ಟಂತೆ ಹಣ ಸಂದಾಯ ರಶೀತಿ ಕೊಡುವ ಬಗ್ಗೆ ಮತ್ತು ಲೆಕ್ಕಪತ್ರಗಳನ್ನು ಬರೆದಿಡುವ ಬಗ್ಗೆ ಮುಖ್ಯ ಪ್ರವರ್ತಕರಿಗೆ ಅಧಿಕಾರ ಕೊಡಲಾಯಿತು. ಸಹಕಾರಿ ನೋಂದಣಿ ಆಗುವ ತನಕ ಎಲ್ಲ ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸಲು ಮುಖ್ಯ ಪ್ರವರ್ತಕರು ಮತ್ತು ಪ್ರವರ್ತಕರುಗಳಿಗೆ ಸಂಪೂರ್ಣ ಹಕ್ಕು, ಕರ್ತವ್ಯ, ಜವಾಬ್ದಾರಿಗಳನ್ನು ಕೊಡಲಾಯಿತು.

ಸಭಾಧ್ಯಕ್ಷರ ಸಹಿ

ಈ ಪ್ರಸ್ತಾವನೆಯನ್ನು ನಿಬಂಧಕರು ಸ್ವೀಕರಿಸಿದಾಗ, ಈ ನಿಯೋಜಿತ ಸಹಕಾರಿ ಅವಶ್ಯಕತೆ ಇದೆಯೆಂದು ಮನಗಂಡಾಗ ಮತ್ತು ನಿಯೋಜಿತ ಸಹಕಾರಿ ಹೆಸರಿನ ಬಗ್ಗೆ ವಿವಾದವಿಲ್ಲದಿದ್ದರೆ, ಮುಖ್ಯ ಪ್ರವರ್ತಕರಿಗೆ ಕನಿಷ್ಟ ಸದಸ್ಯರ ಸಂಖ್ಯೆ ಮತ್ತು ಸಂಗ್ರಹಿಸಬೇಕಾದ ಪಾಲು ಬಂಡವಾಳದ ಮಿತಿಯನ್ನು ನಿಗಧಿಪಡಿಸಿ, ಪಾಲು ಬಂಡವಾಳ ಸಂಗ್ರಹಿಸಲು ಲಿಖಿತವಾಗಿ ಮುಖ್ಯ ಪ್ರವರ್ತಕರ ಹೆಸರಿನಲ್ಲಿ ಅಧಿಕಾರ ಕೊಡುವುದು ಮತ್ತು ಯಾವ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬೇಕೆಂದು ನಿರ್ದೇಶನ ನೀಡಿ, ಆ ನಿರ್ದೇಶನದ ಒಂದು ಪ್ರತಿಯನ್ನು ಸಂಬಂಧಪಟ್ಟ ಬ್ಯಾಂಕಿಗೆ ರವಾನಿಸಿ, ನಿಯೋಜಿತ ಸಹಕಾರಿ ಹೆಸರಿನಲ್ಲಿ ಒಂದು ಖಾತೆಯನ್ನು ತೆರೆಯಲು ಸೂಚಿಸುವುದು.

ಮುಖ್ಯ ಪ್ರವರ್ತಕರು ಸಂಗ್ರಹಣೆ ಮಾಡಿದ ಪಾಲು ಬಂಡವಾಳವನ್ನು ಸೂಚಿತ ಬ್ಯಾಂಕಿಗೆ ಠೇವಣಿ ಮಾಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಸಂಗ್ರಹಣೆ ಮಾಡಿದ ದಿನಾಂಕದಿಂದ 7 ದಿನಗಳ ಒಳಗಾಗಿ ಬ್ಯಾಂಕಿಗೆ ಠೇವಣಿ ಮಾಡಿ, ನಗದು ಪುಸ್ತಕದಲ್ಲಿ ದಾಖಲಿಸಿ, ಲೆಕ್ಕ ಪತ್ರಗಳನ್ನು ಇಡುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು. ಹಾಗೂ ನಿಬಂಧಕರು ನಿಯೋಜಿತ ಸಹಕಾರಿ ಪಾಲು ಬಂಡವಾಳ ಸಂಗ್ರಹಣೆಗೆ ಒಪ್ಪಿಗೆ ಕೊಟ್ಟಾಗ, ಎಷ್ಟು ದಿನಾಂಕದೊಳಗೆ ಈ ಕಾರ್ಯವನ್ನು ಪೂರ್ತಿಗೊಳಿಸಬೇಕೆಂದು ದಿನಾಂಕ ನಿಗಧಿಪಡಿಸತಕ್ಕದ್ದು. ನಿಗಧಿಪಡಿಸಿದ ಪಾಲು ಬಂಡವಾಳ ಮತ್ತು ಸದಸ್ಯರನ್ನು ನೋಂದಾವಣಿ ಮಾಡಲು ಸಾಧ್ಯವಾಗದೇ ಇದ್ದ ಪ್ರಸಂಗದಲ್ಲಿ ಹೆಚ್ಚುವರಿ ಅವಧಿ ಬೇಕೆಂದು ಮುಖ್ಯ ಪ್ರವರ್ತಕರು ಮನವಿ ಸಲ್ಲಿಸಿದಾಗ, ಅವಶ್ಯಕತೆಗನುಗುಣವಾಗಿ ಅವಧಿಯನ್ನು ವಿಸ್ತರಿಸಬಹುದು. ಪಾಲು ಬಂಡವಾಳವನ್ನು ಸಾಮಾನ್ಯವಾಗಿ ನಿಬಂಧಕರು ಅವಧಿಯನ್ನು ನಿಗಧಿಪಡಿಸುವಾಗ ಗರಿಷ್ಟ ಅವಧಿ 6 ತಿಂಗಳಿಗಿಂತ ಹೆಚ್ಚಿರಲಾರದಂತೆ ನೋಡಿಕೊಳ್ಳಬೇಕು.ಹಾಗೂ ಸಂಗ್ರಹಿಸಿದ ಹಣವನ್ನು ಬ್ಯಾಂಕಿನಲ್ಲಿ ಜಮಾ ಆಗಿದೆ ಎಂಬ ಬಗ್ಗೆ ಆಗಿಂದಾಗ್ಗೆ ದೃಢೀಕರಿಸಿಕೊಳ್ಳತಕ್ಕದ್ದು.

ನಿಬಂಧಕರ ಒಪ್ಪಿಗೆ ಕೇಳುವ ಪ್ರಸಂಗದಲ್ಲಿ ಮುಖ್ಯ ಪ್ರವರ್ತಕರು ಮತ್ತು ಪ್ರವರ್ತಕರು ಈ ಕೆಳಕಂಡ ವೈಯಕ್ತಿಕ ಮಾಹಿತಿಯನ್ನು ನಿಬಂಧಕರಿಗೆ ಸಲ್ಲಿಸತಕ್ಕದ್ದು.

ಮುಖ್ಯ ಪ್ರವರ್ತಕರು ಮತ್ತು ಪ್ರವರ್ತಕರ ವಿವರ:

ವೈಯಕ್ತಿಕ ವಿವರ :

ಹೆಸರು :

ತಂದೆ/ಗಂಡನ ಹೆಸರು :

ಖಾಯಂ ವಿಳಾಸ :

ವೃತ್ತಿ :

ವಯಸ್ಸು :

ಪ್ರಮಾಣ ಪತ್ರ :

ಈ ಮೇಲಿನ ಎಲ್ಲ ವಿವರಗಳು ನನ್ನ ತಿಳುವಳಿಕೆ ಪ್ರಕಾರ ನಿಜವಿರುತ್ತದೆಂದು ಈ ಮೂಲಕ ಘೋಷಿಸುತ್ತೇನೆ.

ಸಹಿ

ಸ್ಥಳ :

ದಿನಾಂಕ:

ಷೇರು ಹಣ ಸಂಗ್ರಹಣೆ ಮಾಡಲು ಸದಸ್ಯರಾಗಬಯಸುವ ವ್ಯಕ್ತಿಗಳು ನೋಂದಣಿ ಪೂರ್ವದಲ್ಲಿ ಕೊಡುವ ಅರ್ಜಿ ನಮೂನೆ ಈ ಕೆಳಕಂಡಂತೆ ಇರತಕ್ಕದ್ದು.

ನಿಯೋಜಿತ ---------------- ಸಹಕಾರಿ ನಿ.,

ವಿಳಾಸ :

ಭಾವಚಿತ್ರ

ಮುಖ್ಯ ಪ್ರವರ್ತಕರಿಗೆ,

ಈ ಕೆಳಗೆ ಸಹಿ ಮಾಡಿದ ನಾನು ಉದ್ದೇಶಿತ ----------- ಸಹಕಾರಿಯಲ್ಲಿ ಷೇರು ಪಡೆಯಲು ಈ ಅರ್ಜಿ ಸಲ್ಲಿಸುತ್ತಿದ್ದೇನೆ. ನನಗೆ ರೂ.-------- ಮುಖಬೆಲೆಯ --------- ಷೇರುಗಳನ್ನು ಮಂಜೂರು ಮಾಡಲು ಕೋರುತ್ತೇನೆ.

ವೈಯಕ್ತಿಕ ವಿವರ :

ಹೆಸರು :

ತಂದೆ/ಗಂಡ :

ವಯಸ್ಸು :

ವಿಳಾಸ :

ವೃತ್ತಿ :

ದೂರವಾಣಿ ಸಂಖ್ಯೆ:

ಈ ಮೇಲೆ ಹೇಳಿದ ವಿವರಗಳು ಸತ್ಯವಾಗಿರುತ್ತದೆ ಹಾಗೂ ಉದ್ದೇಶಿತ ----ಸಹಕಾರಿ ಉಪವಿಧಿಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

ಸಹಿ

ಸ್ಥಳ:

ದಿನಾಂಕ:

ಈ ಮೇಲ್ಕಂಡ ಅರ್ಜಿಯಂತೆ ಷೇರುಹಣವನ್ನು ಸಂಗ್ರಹಣೆ ಮಾಡಿದಾಗ ಮುಖ್ಯ ಪ್ರವರ್ತಕರು ಸಹಿ ಮಾಡಿ ಕೊಡಬೇಕಾದ ಹಣ ಸಂದಾಯ ರಶೀತಿ ಈ ಕೆಳಕಂಡಂತೆ ಇರತಕ್ಕದ್ದು.

ಸಂಖ್ಯೆ: ದಿನಾಂಕ:

ಶ್ರೀ/ಶ್ರೀಮತಿ ----------- ಇವರಿಂದ ರೂ. ---- ಗಳನ್ನು ನಗದು/ಚೆಕ್/ಡಿಡಿ ಮೂಲಕ ಈ ಕೆಳಗೆ ನಮೂದಿಸಿದ ಹಣವನ್ನು ಸ್ವೀಕರಿಸಿದ್ದೇನೆ.

1. ಷೇರು ಹಣ :
2. ಷೇರು ಶುಲ್ಕ :
3. ಪ್ರವೇಶ ಶುಲ್ಕ :

4. ಚೆಕ್/ಡಿಡಿ ಅಥವಾ ನಗದು :

ಮುಖ್ಯ ಪ್ರವರ್ತಕರ ಸಹಿ

ಸ್ಥಳ:

ದಿನಾಂಕ:

ಒಂದು ಸಹಕಾರಿ ನೋಂದಾವಣೆ ಮಾಡಲು ಉಪವಿಧಿಗಳನ್ನು ರೂಪಿಸಬೇಕು.ಆ ಉಪವಿಧಿಗಳು ಸದಸ್ಯರಿಗೆ ಸಹಕಾರಿ ಧ್ಯೇಯೋದ್ದೇಶಗಳನ್ನು ರೂಪಿಸುವಾಗ ಅವುಗಳು ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಮತ್ತು ಸಂಪೂರ್ಣವಾಗಿ ವಿವರಣಾತ್ಮಕವಾಗಿರತಕ್ಕದ್ದು.ಯಾವ ಉದ್ದೇಶಕ್ಕಾಗಿ ಸಹಕಾರಿ ಸ್ಥಾಪಿಸಲಾಗಿದೆಯೋ, ಆ ಉದ್ದೇಶಕ್ಕೆ ಹೊರತುಪಡಿಸಿ ಯಾವುದೇ ಕಾರ್ಯಕ್ರಮವನ್ನು ಸಹಕಾರಿ ಮಾಡತಕ್ಕದ್ದಲ್ಲ. ಆ ರೀತಿ ಮಾಡಿದಾಗ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸಿದ್ದಕ್ಕಾಗಿ ನಿಬಂಧಕರು/ಸಂಯುಕ್ತ ಸಹಕಾರಿ ಮಧ್ಯಪ್ರವೇಶ ಮಾಡಲು ಅವಕಾಶವಿರುತ್ತದೆ.

ಒಂದು ಸಹಕಾರಿ ನೋಂದಾವಣೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದಾಗ ಆ ಅರ್ಜಿಯಲ್ಲಿ ಇರಲೇಬೇಕಾದ ಕೆಲವು ಅವಶ್ಯಕ ಅಡಕಗಳನ್ನು ಸಲ್ಲಿಸತಕ್ಕದ್ದು.

1) ಕರಡು ಉಪವಿಧಿಗಳ 5 ಪ್ರತಿಗಳು

2) ಅರ್ಜಿದಾರರ ಸಂಖ್ಯೆ 10 ವ್ಯಕ್ತಿಗತ ಸದಸ್ಯರಿಗೆ ಕಡಿಮೆ ಇರತಕ್ಕದ್ದಲ್ಲ/ಒಕ್ಕೂಟ ಸಹಕಾರಿಗೆ 20 ನೋಂದಾಯಿತ ಸಹಕಾರಿಗಳು ಇರಬೇಕು.

3) ನಿಬಂಧಕರು ಆಗಿಂದಾಗ್ಗೆ ನಿಗಧಿಪಡಿಸುವ ಸದಸ್ಯರ ಮತ್ತು ಪಾಲುಬಂಡವಾಳ ಮಿತಿಯಂತೆ ಪರಿಶೀಲಿಸಬೇಕು.

4) ಪ್ರತಿ ಅರ್ಜಿದಾರನ ವಯಸ್ಸು 18ಕ್ಕಿಂತ ಮೀರಿರಬೇಕು. ಅರ್ಜಿದಾರರು ಒಂದೇ ಕುಟುಂಬಕ್ಕೆ ಸೇರಿದ ಸದಸ್ಯರಿರತಕ್ಕದ್ದಲ್ಲ. "ಕುಟುಂಬ" ಎಂಬ ಪದಕ್ಕೆ ಪತಿ, ಪತ್ನಿ ಮತ್ತು ಅವರನ್ನು ಅವಲಂಬಿಸಿರುವ ಮಕ್ಕಳು ಮತ್ತು ತಂದೆ–ತಾಯಿಗಳು ಎಂದು ಅರ್ಥೈಸತಕ್ಕದ್ದು.

5) ಸಹಕಾರಿ ಸದಸ್ಯರಿಗೆ ಸಾಲ ಕೊಡುವ ಉದ್ದೇಶವನ್ನೂ ಹೊಂದಿದ್ದರೆ ಅಥವಾ ಅದೇ ವರ್ಗಕ್ಕೆ ಸೇರಿದವರು ಅಥವಾ ಅದೇ ವೃತ್ತಿ ನಿರತರಾಗಿರತಕ್ಕದ್ದಲ್ಲ.

6) ಪ್ರತಿ ಅರ್ಜಿದಾರರು ನೋಂದಣಿ ಅರ್ಜಿಯಲ್ಲಿ ಸಹಿ ಮಾಡಿರತಕ್ಕದ್ದು.

7) ನಿಗಧಿಪಡಿಸಿರುವ ನೋಂದಣಿ ಶುಲ್ಕವನ್ನು ಪಾವತಿಸಿರಬೇಕು.

**ನೋಂದಣಿ ಅರ್ಜಿಯ ವಿವರಗಳು:**

1. ಸಹಕಾರಿ ಕಲಂ.10 ರನ್ವಯ ಉಪವಿಧಿಗಳಲ್ಲಿ ಇರಬೇಕಾದ ವಿಷಯಗಳನ್ನು ಅನುಸರಿಸಿ ರಚಿಸಿರಬೇಕು.

2. ಉಪವಿಧಿಗಳನ್ನು ರಚಿಸುವಾಗ ಕಾನೂನು ಮತ್ತು ನಿಯಮಗಳಿಗೆ ವಿರುದ್ಧವಾದ ಯಾವುದೇ ಅಂಶಗಳನ್ನು ಸೇರಿಸಿಲ್ಲವೆಂದು ದೃಢೀಕರಿಸತಕ್ಕದ್ದು.

1. ಯಾವ ಸಹಕಾರಿಯ ನೋಂದಣಿ ಅರ್ಜಿ ಬಂದಿದೆಯೋ ಅದರ ಧ್ಯೇಯೋದ್ದೇಶಗಳಲ್ಲಿ ಸದಸ್ಯರ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾನ್ಯ ಜನರ ಏಳಿಗೆಗೆ ರೂಪಿತವಾಗಿರಬೇಕು.

2. ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗಿ ಯಾವುದೇ ಅವಕಾಶಗಳನ್ನು ಕಲ್ಪಿಸಿರತಕ್ಕದ್ದಲ್ಲ.

3. ಸಹಕಾರ ತತ್ವಗಳ ಪೂರಕವಾಗಿ ಅವಕಾಶಗಳನ್ನು ಕಲ್ಪಿಸಿರಬೇಕು. ಹಾಗೂ ಯಾವುದೇ ಸಂದರ್ಭದಲ್ಲಿಯೂ ಈ ಸಹಕಾರಿ ನೋಂದಾಯಿಸಿದರೆ, ಅದು ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಹಾಗೂ ಸಮಾಜದ ಅಭಿವೃದ್ಧಿಗೆ ಪೂರಕವಾಗಿರುವುದರ ಜೊತೆಗೆ ಮುಂದಿನ ವರ್ಷಗಳಲ್ಲಿ ಆ ಸಹಕಾರಿ ಆರ್ಥಿಕವಾಗಿ, ಸಬಲವಾಗಿ ಮುಂದುವರೆದುಕೊಂಡು ಹೋಗುತ್ತದೆಂದು ನಂಬಿಕೆ ಇರತಕ್ಕದ್ದು.

ಈ ಮೇಲ್ಕಂಡ ಅಂಶಗಳನ್ನು ಗಮನಿಸಿ ಒಂದು ಸಹಕಾರಿ ನೋಂದಣಿ ಮಾಡಲು ಪರಿಶೀಲಿಸತಕ್ಕದ್ದು.ಈ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಸದಸ್ಯರ ಆರ್ಥಿಕ ಅಭಿವೃದ್ಧಿಯ ಜೊತೆಗೆ ನೋಂದಾಯಿತ ಸಹಕಾರಿ ಬಹಳಷ್ಟು ಸಮಯ ಸಂಪನ್ಮೂಲವನ್ನು ಕ್ರೋಡೀಕರಿಸಿ ಸದಸ್ಯರ ಅವಶ್ಯಕತೆಗಳನ್ನು ಪೂರೈಸಲು ಹಣಕಾಸಿನ ಲಭ್ಯತೆ ಇರುತ್ತದೆಂಬ ನಂಬಿಕೆಯಿಂದ ನೋಂದಾಯಿಸಬೇಕು.ಪ್ರಾರಂಭದಲ್ಲಿ, ಅಂದರೆ

ನೋಂದಣಿ ಮಾಡುವ ಪೂರ್ವದಲ್ಲಿಯೇ, ಒಂದು ಸಹಕಾರಿ ನೋಂದಾವಣಿ ಮಾಡಿದರೆ ಸುಭದ್ರವಾಗಿರುತ್ತದೆಂಬ ಸ್ವಯಂ ನಿರ್ಧರಿತ ನಂಬಿಕೆ, ನಿಬಂಧಕರಿಗೆ ಇರಬೇಕು.

ಇದಕ್ಕೆ ಪೂರಕವಾಗಿ ನಿಬಂಧಕರು/ಸಂಯುಕ್ತ ಸಹಕಾರಿ ಆಗಿಂದಾಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡುತ್ತಾರೆ.ಆರ್ಥಿಕವಾಗಿ ಸುಭದ್ರವಾಗಿರಲು ನೋಂದಾವಣಿ ಪ್ರಸ್ತಾವನೆಯನ್ನು ಪರಿಶೀಲಿಸುವಾಗ, ಅಗತ್ಯ ಸದಸ್ಯರ ಸಂಖ್ಯೆ ಮತ್ತು ಕ್ರೋಢೀಕರಿಸಬೇಕಾದ ಪಾಲು ಬಂಡವಾಳವನ್ನು ನಿಗಧಿಪಡಿಸುತ್ತಾರೆ.ಈ ರೀತಿ ನಿಗಧಿಪಡಿಸಿದ ಹಾಲಿ ಇರುವ ಸುತ್ತೋಲೆಯನ್ನು (ಕನಿಷ್ಟ ಸದಸ್ಯರು ಮತ್ತು ಪಾಲು ಬಂಡವಾಳದ ಮಿತಿ–ಸುತ್ತೋಲೆಗಳು). ಆ ಮೇಲ್ಕಂಡ ಸುತ್ತೋಲೆಯಲ್ಲಿ ವಿವಿಧ ರೀತಿಯ ಸಹಕಾರಿಗಳಿಗೆ ನಿಗಧಿಪಡಿಸಿದ ಸಂಖ್ಯೆ ಮತ್ತು ಪಾಲು ಬಂಡವಾಳದ ಮಿತಿ ಸೂಚಿಸಿದೆ.ನಿಬಂಧಕರು ಆರ್ಥಿಕ ಸಬಲತೆಯ ಬಗ್ಗೆ ನಿಗಧಿಪಡಿಸಿದ ಪ್ರಾರಂಭಿಕ ಪಾಲು ಬಂಡವಾಳ ಮತ್ತು ಸದಸ್ಯರ ಸಂಖ್ಯೆಯನ್ನು ನಿಗಧಿಪಡಿಸಿದ ನಂತರ ನೋಂದಾವಣೆ ಮಾಡುವ ನಿಬಂಧಕರು ಹೆಚ್ಚುವರಿ ಷರತ್ತುಗಳನ್ನು ವಿಧಿಸತಕ್ಕದ್ದಲ್ಲ.

ಒಂದು ಸಹಕಾರಿ ಆರ್ಥಿಕವಾಗಿ ಸಬಲವಾಗಿ ಕಾರ್ಯನಿರ್ವಹಿಸುತ್ತದೆಂದು ತೀರ್ಮಾನಕ್ಕೆ ಬರುವಾಗ ನಿಬಂಧಕರು ಗಮನಿಸಲೇಬೇಕಾದ ಅಂಶಗಳೇನೆಂದರೆ

1. ಅದರ ಪಾಲು ಬಂಡವಾಳ ಸಾಕಷ್ಟು ಪ್ರಮಾಣದಲ್ಲಿದ್ದು, ಆ ಸಹಕಾರಿ ಸಾಲ ಎತ್ತುವಳಿ ಮಾಡುವ ಸಂಸ್ಥೆಯಾಗಿದ್ದರೆ ಆ ಹಣವನ್ನು ಸಾಲದ ರೂಪದಲ್ಲಿ ಪಡೆಯಲು ಸಾಕಷ್ಟು ಸಂಪನ್ಮೂಲ ಇದೆ ಎಂದು ಮನದಟ್ಟಾಗಬೇಕು.

2.ಸಾಲ ಎತ್ತುವಳಿ ಮಾಡಿದ ನಂತರ ಅದಕ್ಕೆ ಪಾವತಿ ಮಾಡಬೇಕಾದ ಬಡ್ಡಿಯನ್ನು ಸದಸ್ಯರಿಂದ ವಸೂಲಿ ಮಾಡಿಕೊಂಡಾಗ ಹೆಚ್ಚುವರಿ ಸಂಪನ್ಮೂಲ ಸಹಕಾರಿಗೆ ಉಳಿಯಬೇಕು.

3. ಆಡಳಿತಾತ್ಮಕ ವೆಚ್ಚವನ್ನು ಭರಿಸಲು ಸಾಕಷ್ಟು ಹಣ ಹೆಚ್ಚುವರಿಯಾಗಿ ಉಳಿಯಬೇಕು.

4. ಆಸ್ತಿಯಲ್ಲಿ ಚರ ಮತ್ತು ಸ್ಥಿರಾಸ್ತಿಯಲ್ಲಿ ಉಂಟಾಗುವ ಕೊರತೆಗಳು ಮತ್ತು ಡಿಪ್ರಿಷಿಯೇಷನ್ ತೆಗೆದಿರಿಸಲು ಅವಕಾಶವಿರಬೇಕು.

5. ಸದಸ್ಯರಿಗೆ ಅವರು ಹೂಡಿದ ಪಾಲು ಬಂಡವಾಳದ ಮೇಲೆ ಡಿವಿಡೆಂಡ್ ಪಾವತಿಸಲು ಸಂಪನ್ಮೂಲ ಇರಬೇಕು.

6. ಸದಸ್ಯರಿಗೆ ಡಿವಿಡೆಂಡ್ ಪಾವತಿಸುವ ಪೂರ್ವದಲ್ಲಿ ಸಹಕಾರಿ ನಿಧಿಗಳನ್ನು ಸೃಷ್ಟಿ ಮಾಡಲು, ಅಂದರೆ ಕಾಯ್ದಿಟ್ಟ ನಿಧಿ, ಕಟ್ಟಡ ನಿಧಿ ಮತ್ತಿತರ ನಿಧಿಗಳನ್ನು ಸೃಷ್ಟಿಸಲು ಸಂಪನ್ಮೂಲ ಇರಬೇಕು.

7. ಸಹಕಾರಿ ನಿರ್ವಹಿಸಲು ಅಗತ್ಯವಾದ ಕಛೇರಿ ಮತ್ತು ನೌಕರರನ್ನು ನೇಮಕ ಮಾಡಿಕೊಳ್ಳಲು ಸಂಪನ್ಮೂಲ ಇರಬೇಕು.

ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಒಂದು ಸಹಕಾರಿ ಸುಭದ್ರವಾಗಿ ನಡೆದುಕೊಂಡು ಹೋಗಲು ಅಗತ್ಯ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅವಶ್ಯಕವೆಂದು ಮತ್ತು ಅಂತಹ ಶಕ್ತಿ ಒಂದು ಸಹಕಾರಿ ನೋಂದಾವಣಿ ಮಾಡಿದಾಗ, ಮುಂದೆ ಸುಭದ್ರವಾಗಿ ನಡೆದುಕೊಂಡು ಹೋಗುತ್ತದೆಂಬ ನಂಬಿಕೆ ಬಂದ ನಂತರವೇ ನೋಂದಣಿ ಮಾಡಬೇಕು.

ಸಹಕಾರಿ ನೋಂದಣೆ ಮಾಡುವಾಗ ಆರ್ಥಿಕವಾಗಿ ಸಶಕ್ತರಲ್ಲದ ವರ್ಗಕ್ಕೆ ಸಂಬಂಧಪಟ್ಟಂತೆ ಕೆಲವು ವಿನಾಯಿತಿಗಳನ್ನು ಕೊಡುವ ಪ್ರಸಂಗ ಬಂದಾಗ, ಧ್ಯೇಯೋದ್ದೇಶಗಳನ್ನು ಗಮನದಲ್ಲಿಟ್ಟು ಕೆಲವು ವಿನಾಯ್ತಿಗಳನ್ನು ಕೊಡಬಹುದಾಗಿದೆ. ಅವುಗಳಲ್ಲಿ ಹಿಂದುಳಿದ ಪಂಗಡ ಮತ್ತು ಹಿಂದುಳಿದ ಜನಾಂಗಕ್ಕಾಗಿಯೇ ನೋಂದಣಿಯಾಗುವ ಸಹಕಾರಿ, ಮಹಿಳಾ ಸಹಕಾರಿ, ನೊಂದಾಯಿಸುವ ಸಂದರ್ಭದಲ್ಲಿ ಪ್ರಸ್ತಾವನೆಯ ಜೊತೆ, ಆ ಸಹಕಾರಿ ಪ್ರಾರಂಭಿಸುವ ಪೂರ್ವದಲ್ಲಿ ಸದಸ್ಯರ ರೂಪರೇಷೆಗಳು, ಅವಶ್ಯಕವಾದ ಸೇವಾ ಸೌಲಭ್ಯಗಳು, ಸಂಪನ್ಮೂಲ ಕ್ರೋಢೀಕರಣ, ಆ ಸಂಪನ್ಮೂಲವನ್ನು ವಿತರಿಸುವ ವಿಧಿವಿಧಾನಗಳನ್ನು ಗಮನದಲ್ಲಿರಿಸಿಕೊಂಡು, ಮುಂದಿನ 5–10 ವರ್ಷಗಳ ಯೋಜನಾ ವರದಿಯನ್ನು, ಸಹಕಾರಿ ಪ್ರಾರಂಭಿಸುವ ಪೂರ್ವದಲ್ಲಿ ಪಡೆಯತಕ್ಕದ್ದು. ಸಹಕಾರಿ ನೋಂದಾಯಿಸುವಾಗ, ಸಂಬಂಧಪಟ್ಟ ನಿಬಂಧಕರು ಆರ್ಥಿಕವಾಗಿ ಸಬಲವಾಗಿ ನಡೆದುಕೊಂಡು ಹೋಗುತ್ತದೆಂಬ ವೈಯಕ್ತಿಕ ನಂಬಿಕೆಯ ಆಧಾರದ ಮೇಲೆ ನೋಂದಾಯಿಸತಕ್ಕದ್ದು.

ಈ ನೋಂದಾವಣೆಗೆ ಸಂಬಂಧಪಟ್ಟಂತೆ ಪ್ರಸ್ತಾವನೆಯನ್ನು ಕಛೇರಿಯಲ್ಲಿ ಸ್ವೀಕರಿಸಿದಾಗ ಪರಿಶೀಲಿಸಲೇಬೇಕಾದ ಪರಿಶೀಲನಾಂಶಗಳು (ಚೆಕ್‌ಲಿಸ್ಟ್) :

1. ಪ್ರಸ್ತಾವನೆಯನ್ನು ಲಿಖಿತ ರೂಪದಲ್ಲಿ ಪಡೆಯಲಾಗಿದೆಯೇ (ಹೌದು ಅಥವಾ ಇಲ್ಲ)

2. ಮುಖ್ಯ ಪ್ರವರ್ತಕರು ನಿಯಮಗಳಂತೆ ಉಪವಿಧಿಗಳನ್ನು ರಚಿಸಿ ಪ್ರಸ್ತಾವನೆಯನ್ನು 5 ಪ್ರತಿಗಳಲ್ಲಿ ಸಲ್ಲಿಸಿದ್ದಾರೆಯೇ (ಹೌದು ಅಥವಾ ಇಲ್ಲ)
3. ನೋಂದಾವಣಿ ಅರ್ಜಿಯನ್ನು ನಿಗಧಿಪಡಿಸಿದ ನಮೂನೆಯಲ್ಲಿ ಲಗತ್ತಿಸಲಾಗಿದೆಯೇ (ಹೌದು/ಇಲ್ಲ)
4. ಪ್ರಸ್ತಾವನೆಯಲ್ಲಿ ಅರ್ಜಿದಾರರ ಹೆಸರು ಮತ್ತು ವಿಳಾಸ ಮತ್ತು ಮುಖ್ಯ ಪ್ರವರ್ತಕರು ನಿಬಂಧಕರಿಂದ ಪತ್ರ ವ್ಯವಹಾರವನ್ನು ಮಾಡಲು ವಿಳಾಸವನ್ನು ಕೊಡಲಾಗಿದೆಯೇ (ಹೌದು/ಇಲ್ಲ)
5. ವ್ಯಕ್ತಿಗತ ಸದಸ್ಯರಲ್ಲದೆ ಸಹಕಾರಿ ಸಂಸ್ಥೆಯ ಅರ್ಜಿಯಾಗಿದ್ದರೆ ಅದಕ್ಕೆ ಸಂಬಂಧಪಟ್ಟಂತೆ ಠರಾವಿನ ಪ್ರತಿಯನ್ನು ಲಗತ್ತಿಸಲಾಗಿದೆಯೇ (ಹೌದು/ಇಲ್ಲ)
6. ಅರ್ಜಿಯು ನಿಗಧಿಪಡಿಸಿದ ನಮೂನೆಯಲ್ಲಿದೆಯೇ? (ಹೌದು/ಇಲ್ಲ)
7. ನಿಯೋಜಿತ ಸಹಕಾರಿ ಧ್ಯೇಯೋದ್ದೇಶಗಳು, ಸದಸ್ಯರು ಮತ್ತು ಸಮಾಜದ ಆರ್ಥಿಕ ಬೆಳವಣಿಗೆಯನ್ನು ನಮೂದಿಸಲಾಗಿದೆಯೇ (ಹೌದು/ ಇಲ್ಲ)
8. ಸಹಕಾರಿ ಕಾರ್ಯವ್ಯಾಪ್ತಿಯನ್ನು ಸ್ಪಷ್ಟವಾಗಿ ನಮೂದಿಸಲಾಗಿದೆಯೇ? (ಹೌದು/ಇಲ್ಲ)
9. ಸಹಕಾರಿಮಾಡುವ ವ್ಯವಹಾರದ ಬಗ್ಗೆ ಸಹಕಾರ ತತ್ವಗಳನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆಯೇ (ಹೌದು/ಇಲ್ಲ)
10. ನಿಯೋಜಿತ ಸಹಕಾರಿ ಆರ್ಥಿಕವಾಗಿ ಸಬಲವಾಗಿರುವುದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಲ್ಲಿಸಿದ್ದಾರೆಯೇ (ಹೌದು/ಇಲ್ಲ)
11. ನಿಯೋಜಿತ ಸಹಕಾರಿ ಯಶಸ್ಸಿನ ಬಗ್ಗೆ ಯೋಜನಾ ವರದಿಯನ್ನು ಲಗತ್ತಿಸಿದ್ದಾರೆಯೇ (ಹೌದು/ಇಲ್ಲ)
12. ಕಾರ್ಯವ್ಯಾಪ್ತಿಯು ಒಬ್ಬ ಸದಸ್ಯ ಮತ್ತೊಬ್ಬ ಸದಸ್ಯನ ಜೊತೆ ನಿಕಟ ಸಂಬಂಧ ಹೊಂದಲು ಮತ್ತು ಪ್ರಜಾಪ್ರಭುತ್ವದ ಆಡಳಿತ ನಡೆಸಲು ಪೂರಕವಾಗಿದೆಯೇ (ಹೌದು/ಇಲ್ಲ)
13. ಸಹಕಾರಿ ನೋಂದಾವಣಿ ಮಾಡಲು ಕಳುಹಿಸಿರುವ ಪ್ರಸ್ತಾವನೆಯು ಸದಸ್ಯರ ಸಾಮಾನ್ಯ ಅವಶ್ಯಕತೆಗಳನ್ನು ಪೂರೈಸಲು ಅವಕಾಶ ಕಲ್ಪಿಸಲಾಗಿದೆಯೇ (ಹೌದು/ಇಲ್ಲ)
14. ನೋಂದಣಿ ಅರ್ಜಿಯಲ್ಲಿ ಕನಿಷ್ಟ 10 ಸದಸ್ಯರು ಸಹಿ ಮಾಡಿದ್ದಾರೆಯೇ (ಒಕ್ಕೂಟ ಸಹಕಾರಿ ನೋಂದಣಿಗೆ ಕನಿಷ್ಠ 20 ಸದಸ್ಯರು ಸಹಿ ಇರಬೇಕು. (ಹೌದು/ಇಲ್ಲ)
15. ನಿಬಂಧಕರು ನಿಗಧಿಪಡಿಸಿದ ಕನಿಷ್ಟ ಸಂಖ್ಯೆ ಸದಸ್ಯರು ಮತ್ತು ಕನಿಷ್ಟ ಪಾಲು ಬಂಡವಾಳವನ್ನು ಹೂಡಿದ ಸದಸ್ಯರ ಪಟ್ಟಿ, ಸಹಿ ಮತ್ತು ವಿಳಾಸವನ್ನು ಲಗತ್ತಿಸಲಾಗಿದೆಯೇ. (ಹೌದು/ಇಲ್ಲ)
16. ಅರ್ಜಿಯಲ್ಲಿ ಸಹಿ ಮಾಡಿದ ಸದಸ್ಯರೆಲ್ಲರೂ 18 ವರ್ಷಕ್ಕಿಂತ ಹೆಚ್ಚು ವಯಸ್ಸಿನವರೇ (ಹೌದು/ಇಲ್ಲ)
17. ಅರ್ಜಿಯಲ್ಲಿ ಸಹಿ ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ಅದೇ ಗುಂಪಿನ/ಅದೇ ವರ್ಗಕ್ಕೆ ಸೇರಿದವರೇ (ಹೌದು/ಇಲ್ಲ)
18. ಪ್ರತಿ ಅರ್ಜಿದಾರನೂ ವಿಳಾಸದ ಜೊತೆ ಸಹಿ ಮಾಡಿದ್ದಾರೆಯೇ (ಹೌದು/ಇಲ್ಲ)
19. ಸಹಕಾರಿಯ ಉದ್ದೇಶಗಳು ಸ್ವಾಭಾವಿಕ ನ್ಯಾಯಕ್ಕೆ ಮತ್ತು ಸಮಾಜದ ಅಭಿವೃದ್ಧಿಗೆ ಪೂರಕವಾಗಿದೆಯೇ (ಹೌದು/ಇಲ್ಲ)
20. ಪ್ರಸ್ತಾವಿತ ಉಪವಿಧಿಗಳು ಕಾನೂನು ಮತ್ತು ನಿಯಮಗಳಿಗೆ ವಿರುದ್ಧವಾಗಿದೆಯೇ (ಹೌದು/ಇಲ್ಲ)
21. ನಿಯೋಜಿತ ಸಹಕಾರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮತ್ತು ಆರ್ಥಿಕವಾಗಿ ಸಬಲವಾಗಿ ಕಾರ್ಯ ನಿರ್ವಹಿಸಬಹುದೆಂದು ನಂಬಿಕೆ ಹುಟ್ಟಿಸುತ್ತದೆಯೇ (ಹೌದು/ಇಲ್ಲ)
22. ನಿಯೋಜಿತ ಸಹಕಾರಿ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದ್ದರೆ, ಅಂದರೆ ಸಕ್ಕರೆ ಕಾರ್ಖಾನೆ, ನೂಲಿನ ಗಿರಣಿ, ಸಂಸ್ಕರಣ ಸಹಕಾರಿಸಂಬಂಧಪಟ್ಟಿದ್ದರೆ, ಅದಕ್ಕೆ ಪೂರಕವಾಗಿ ತಾಂತ್ರಿಕ ಉಪಯೋಗದ ಪ್ರಮಾಣ ಪತ್ರ ಸಲ್ಲಿಸಲಾಗಿದೆಯೇ (ಹೌದು/ಇಲ್ಲ)

23.ಸಹಕಾರಿ ಪ್ರಸ್ತಾವನೆಯನ್ನು ಸಲ್ಲಿಸುವ ಪೂರ್ವದಲ್ಲಿ ಪಾಲು ಬಂಡವಾಳವನ್ನು ಸಂಗ್ರಹಣೆ ಮಾಡಲು ಮತ್ತು ಬ್ಯಾಂಕ್ ಖಾತೆ ತೆರೆಯಲು ನಿಬಂಧಕರ ಅನುಮತಿ ಪಡೆಯಲಾಗಿತ್ತೇ (ಹೌದು/ಇಲ್ಲ)

24.ಕಲಂ.5(2)(ಡಿ) ಅನ್ವಯ ನೋಂದಣಿ ಶುಲ್ಕ ಪಾವತಿಸಿದ ಬಗ್ಗೆ ದಾಖಲೆ ಸಲ್ಲಿಸಲಾಗಿದೆಯೇ (ಹೌದು/ಇಲ್ಲ)

25.ಸರ್ಕಾರದಿಂದ ಯಾವುದೇ ಸಹಾಯಧನ ಪಡೆದಿಲ್ಲವೆಂದು ದೃಡೀಕರಿಸಿದೆಯೇ (ಹೌದು/ಇಲ್ಲ)

26.ಕಲಂ.4(2)(ಸಿ) ರನ್ವಯ ಗೃಹ ನಿರ್ಮಾಣ ಸಹಕಾರಿ ಅಲ್ಲವೆಂದು ದೃಡೀಕರಿಸಿದೆಯೇ? (ಹೌದು/ಇಲ್ಲ)

27.ನಿಬಂಧಕರ ನಿರ್ದೇಶನಗಳನ್ವಯ ಈ ಸಹಕಾರಿ ನೋಂದಾಯಿಸಲು ಯಾವುದೇ ರೀತಿಯ ಅಡೆತಡೆಗಳಿಲ್ಲವೇ? (ಹೌದು/ಇಲ್ಲ)

28. ಈ ಉಪವಿಧಿಗಳನ್ನು ಸಂಯುಕ್ತ ಸಹಕಾರಿ ನಿಗಧಿಪಡಿಸಿದ್ದರೆ, ಮಾದರಿ ಉಪನಿಯಮದನ್ವಯ ಇದೆಯೇ(ಹೌದು/ಇಲ್ಲ)

29.ಈ ಉಪವಿಧಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997, ಕಲಂ.10ರನ್ವಯ ರಚಿಸಲಾಗಿದೆಯೇ (ಹೌದು/ಇಲ್ಲ)

30.ನಿಯೋಜಿತ ಸಹಕಾರಿ ಹೆಸರು ಯಾವುದಾದರೂ ಜಾತಿ, ವರ್ಗ, ರಾಜಕೀಯ ಸ್ವರೂಪದ ಹೆಸರನ್ನು ಹೊಂದಿದೆಯೇ? (ಹೌದು/ಇಲ್ಲ)

31. ಸಹಕಾರಿ ಹೆಸರು ಯಾವುದೇ ವಿಭಾಗದ ವೃತ್ತಿಯ ಅಥವಾ ಆರ್ಥಿಕ ಉದ್ದೇಶಗಳನ್ನು ಹೊಂದಿದೆಯೇ (ಹೌದು/ಇಲ್ಲ)

32.ಸಹಕಾರಿ ಸದಸ್ಯರ ಬಾಧ್ಯತೆ ನಿಯಮಿತವೇ (ಹೌದು/ಇಲ್ಲ)

33.ಒಂದು ಷೇರು ಮುಖಬೆಲೆ ನಿಗಧಿಪಡಿಸಿದ ಹಣ ಸಾಮಾನ್ಯರಿಗೆ ಎಟುಕುವ ದರದಲ್ಲಿದೆಯೇ (ಹೌದು/ಇಲ್ಲ)

34.ಸಹಕಾರಿ ಸದಸ್ಯರಿಗೆ ಕೊಡಮಾಡುವ ಸಾಲವನ್ನು ಪಡೆಯುವಾಗ, ತಾನು ಸಂಗ್ರಹಿಸಿದ ಪಾಲು ಬಂಡವಾಳ ಮತ್ತು ನಿಧಿಗಳು ಹಾಗೂ ಕಟ್ಟಡ ನಿಧಿಯನ್ನು ಕ್ರೋಢೀಕರಿಸಿ ಅದರಲ್ಲಿ ನಷ್ಟವನ್ನು ತೆಗೆಯಲಾಗಿದೆಯೇ (ಹೌದು/ಇಲ್ಲ)

35.ಸಹಕಾರಿ ಮಹಾಸಭೆಯನ್ನು ನಡೆಸಲು ಕೋರಂ ಸಂಖ್ಯೆಯನ್ನು ನಿಗಧಿಪಡಿಸಲಾಗಿದೆಯೇ (ಹೌದು/ಇಲ್ಲ)

36.ಆಡಳಿತ ಮಂಡಳಿ ಮತ್ತು ಉಪಸಮಿತಿ ಸಭೆಗೆ ಕೋರಂ ನಿಗಧಿಪಡಿಸಲಾಗಿದೆಯೇ (ಹೌದು/ಇಲ್ಲ)

37.ಸಹಕಾರಿ ನಡೆಸುವ ಸಭೆಗಳಿಗೆ ಲೆಕ್ಕಪತ್ರಗಳನ್ನು ಇಡುವ ಬಗ್ಗೆ, ರಿಜಿಸ್ಟರುಗಳು, ಪುಸ್ತಕಗಳು ಮತ್ತು ದಾಖಲೆಗಳು ಮತ್ತು ನಗದು, ಆಸ್ತಿಗಳು, ಜವಾಬ್ದಾರಿಗಳು ಇವುಗಳ ಜವಾಬ್ದಾರಿಯನ್ನು ಸ್ಪಷ್ಟವಾಗಿ ನಿಗಧಿಪಡಿಸಲಾಗಿದೆಯೇ (ಹೌದು/ಇಲ್ಲ)

38.ಸಹಕಾರಿ ಪರವಾಗಿ ಮತ್ತು ವಿರೋಧವಾಗಿ ಪ್ರಕರಣಗಳಲ್ಲಿ ಹಾಜರಾಗಲು ಅವಕಾಶ ಕಲ್ಪಿಸಲಾಗಿದೆಯೇ (ಹೌದು/ಇಲ್ಲ)

39.ಹೆಚ್ಚುವರಿ ಸಂಪನ್ಮೂಲವನ್ನು ಎಲ್ಲಿ ಹೂಡಬೇಕೆಂದು ಸ್ಪಷ್ಟವಾಗಿ ನಮೂದಿಸಲಾಗಿದೆಯೇ (ಹೌದು/ಇಲ್ಲ)

40.ಆಡಳಿತ ಮಂಡಳಿಯ ರಚನೆ, ಆಯ್ಕೆಯಾದ ನಿರ್ದೇಶಕರ ಸಂಖ್ಯೆ, ವೃತ್ತಿಪರನಿರ್ದೇಶಕರ ಸಂಖ್ಯೆ, ಮತ ಚಲಾಯಿಸುವವರ ಹಕ್ಕು, ಸದಸ್ಯರಿಗೆ ಬೇಕಾದ ಅರ್ಹತೆ, ಅವಧಿ ನಿಗಧಿಪಡಿಸಲಾಗಿದೆಯೇ (ಹೌದು/ಇಲ್ಲ)

41. ಪದಾಧಿಕಾರಿಗಳ ಹಕ್ಕು, ಜವಾಬ್ದಾರಿ, ಕರ್ತವ್ಯಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿದೆಯೇ? (ಹೌದು/ಇಲ್ಲ)

42.ಲೆಕ್ಕತಪಾಸಣೆ ಮಾಡಿಸುವುದರ ಬಗ್ಗೆ ಸ್ಪಷ್ಟವಾಗಿ ಸೇರಿಸಲಾಗಿದೆಯೇ? (ಹೌದು/ಇಲ್ಲ)

43. ಸರ್ಕಾರದಿಂದ ಪ್ರತ್ಯಕ್ಷ ಅಥವಾ ಪರೋಕ್ಷ ಸಹಾಯ ಧನ ಪಡೆಯಲು ಅವಕಾಶ ಸೇರಿಸಲಾಗಿದೆಯೇ? (ಹೌದು/ಇಲ್ಲ)

44.ಸಂಯುಕ್ತ ಸಹಕಾರಿ ನಿಬಂಧಕರ ನಿರ್ದೇಶಗಳಿಗೆ ಮತ್ತು ನೀತಿಗಳಿಗೆ ವಿರುದ್ಧವಾಗಿ ಯಾವುದಾದರೂ ಪ್ರಸ್ತಾವನೆಯನ್ನು ಸೇರಿಸಲಾಗಿದೆಯೇ (ಹೌದು/ಇಲ್ಲ)

ಈ ಅಂಶಗಳನ್ನು ಪರಿಶೀಲಿಸಿದ ನಂತರ ನಿಬಂಧಕರು ಪ್ರಸ್ತಾವನೆಯನ್ನು ಅಂಗೀಕರಿಸಬಹುದೆಂದು ತೀರ್ಮಾನಿಸಿದಾಗ, ಆ ಉಪವಿಧಿಗಳನ್ನು ನೋಂದಾಯಿಸಿ ಸಹಿ ಮಾಡಿ ಕಛೇರಿಯ ಸಿಕ್ಕಾ ಜೊತೆ ಆದೇಶ ಹೊರಡಿಸುವುದು. ಈ ಆದೇಶವನ್ನು ಹೊರಡಿಸುವಾಗ ಪ್ರಸ್ತಾವನೆ ಸಲ್ಲಿಸಿದ 90 ದಿವಸದೊಳಗಾಗಿ ನೋಂದಾವಣೆ ಮಾಡತಕ್ಕದ್ದು.ನೋಂದಾವಣಿ ಮಾಡಲು ಸಾಧ್ಯವಾಗದೇ ಇದ್ದರೆ ಸಕಾರಣಗಳನ್ನು ನಮೂದಿಸಿ

ತಿರಸ್ಕರಿಸಲೂಬಹುದು. ನೋಂದಾವಣಿಯನ್ನು ಮಾಡದೇ, ತಿರಸ್ಕರಿಸಲೂ ಆಗದೇ ಇದ್ದ ಸಂದರ್ಭದಲ್ಲಿ 90 ದಿವಸಗಳ ನಂತರ ಸಹಕಾರಿ ಮನವಿಯ ಆಧಾರದ ಮೇಲೆ ನೋಂದಾವಣಿ ಆಗಿದೆಯೆಂದು ಪ್ರಮಾಣ ಪತ್ರ ಕೇಳಿದರೆ, ನಿಬಂಧಕರು ನೊಂದಾವಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು. ನೋಂದಾಯಿತ ಅಂಚೆ ಮೂಲಕ ಮುಖ್ಯ ಪ್ರವರ್ತಕರಿಗೆ ರವಾನಿಸಬೇಕು/ಬಹುದು. ನಿಗದಿಪಡಿಸಿದ 90 ದಿವಸಗಳ ಒಳಗೆ, ನೋಂದಾಯಿಸಲು ನಿಬಂಧಕರು ತೀರ್ಮಾನ ತೆಗೆದುಕೊಳ್ಳದಿದ್ದರೆ ಅಥವಾ ನೋಂದಣಿ ತಿರಸ್ಕರಿಸದಿದ್ದರೆ, ಅವಧಿ ಮುಗಿದ ದಿನಾಂಕದ ನಂತರ ನಿಬಂಧಕರಿಗೆ, ಅವರ ಕಛೇರಿಗೆ ಸಲ್ಲಿಸಿದ ನೋಂದಣಿ ಪ್ರಸ್ತಾವನೆ ಸ್ವೀಕೃತಿ ಪ್ರತಿಯೊಂದಿಗೆ ನೋಂದಾಯಿಸಲಾಗಿದೆ ಎಂದು ಭಾವಿಸಿ, ಸಹಕಾರಿ ನೋಂದಣಿ ಪ್ರರ್ಮಾಣ ಪತ್ರ ನೀಡಲು ಲಿಖಿತ ಮನವಿ ಸಲ್ಲಿಸುವುದು ನಿಯೋಜಿತ ಸಹಕಾರಿಯ ಜವಾಬ್ದಾರಿ, ಹಾಗೂ ಪ್ರಮಾಣ ಪತ್ರ ನೀಡದಿದ್ದರೆ, ಆ ನಿಬಂಧಕರ ಮೇಲಾಧಿಕಾರಿಗೆ ಲಿಖಿತವಾಗಿ ಮನವಿಸಲ್ಲಿಸಿ, ನೋಂದಾಯಿಸುವಂತೆ ನಿರ್ದೇಶನ ನೀಡಲು ಮನವಿ ಸಲ್ಲಿಸತಕ್ಕದ್ದು.

**ಉಪವಿಧಿಗಳು:**

ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ನೋಂದಾವಣೆ ಮಾಡುವ ಪೂರ್ವದಲ್ಲಿ ಉಪವಿಧಿಗಳನ್ನು ಪರಿಶೀಲನೆ ಮಾಡುವಾಗ ಉಪವಿಧಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸತಕ್ಕದ್ದು.

**ಕಲಂ.10 :**

ಸಹಕಾರಿ ಕಾಯಿದೆ ಕಲಂ.10 ರನ್ವಯ ಕಲ್ಪಿಸಿರುವ ಎಲ್ಲ ವಿಷಯಗಳ ಬಗ್ಗೆ ಉಪನಿಯಮಗಳಲ್ಲಿ ಸೇರಿಸಲಾಗಿದೆಯೇ, ಅದರಲ್ಲೂ ಪ್ರಮುಖವಾಗಿ

1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ನಿಯಮಗಳಿಗೆ ಒಳಪಟ್ಟು, ಪ್ರತಿಯೊಂದು ಸಹಕಾರಿಯು ಅದರ ಉಪವಿಧಿಗಳಿಗೆ ಅನುಸಾರವಾಗಿ ಪ್ರಕಾರ್ಯ ನಿರ್ವಹಿಸತಕ್ಕದ್ದು. ಈ ಉಪವಿಧಿಗಳು ಸಾಧ್ಯವಿರುವಷ್ಟರಮಟ್ಟಿಗೆ ಸಹಕಾರಿ ತತ್ವಗಳಿಗೆ ಅನುಗುಣವಾಗಿರತಕ್ಕದ್ದು.

2) ಪ್ರತಿಯೊಂದು ಸಹಕಾರಿಯ ಉಪವಿಧಿಗಳು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸತಕ್ಕದ್ದು ಎಂದರೆ, –

(i) ಸಹಕಾರಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ;

(ii) ಸಹಕಾರಿಯ ಉದ್ದೇಶಗಳು;

(iii) ನಿರ್ದೇಶಕರು ಮತ್ತು ಪದಾಧಿಕಾರಿಗಳೂ ಸೇರಿದಂತೆ ಸದಸ್ಯತ್ವದ ಅರ್ಹತೆಯ ಷರತ್ತುಗಳು, ಸದಸ್ಯತ್ವಕ್ಕೆ ಅನರ್ಹತೆಗಳು ಹಾಗೂ ಸದಸ್ಯತ್ವವನ್ನು ನೀಡುವ, ಹಿಂತೆಗೆದುಕೊಳ್ಳುವ, ತೆಗೆದು ಹಾಕುವ ಅಥವಾ ಮುಕ್ತಾಯಗೊಳಿಸುವ ಬಗೆಗಿನ ಕಾರ್ಯವಿಧಾನ;

(ಎ) [ನಾಮಮಾತ್ರ ಸದಸ್ಯರದ್ದೂ] ಸೇರಿದಂತೆ ಸದಸ್ಯತ್ವದ ಹಕ್ಕುಗಳು, ವಿಶೇಷ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು;

(iv) ಸಹಕಾರಿಯ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು;

(v) ಮಂಡಳಿಯ ಸಭೆಗಳನ್ನು ನಡೆಸುವ ಕಾರ್ಯವಿಧಾನ, ಮತನೀಡುವ ಮತ್ತು ಚುನಾವಣೆಗಳಿಗೆ ಸ್ಪರ್ಧಿಸುವ ಹಕ್ಕೂ ಸೇರಿದಂತೆ ಸದಸ್ಯರ ಹಕ್ಕುಗಳು;

(vi) ಸದಸ್ಯನಿಂದ ಸಹಕಾರಿಗೆ ಬಾಕಿಯಿರುವ ಯಾವುದೇ ಮೊತ್ತ ಸಂದಾಯ ಮಾಡುವುದಕ್ಕೆ ತಪ್ಪಿದರೆ ಆಗುವ ಪರಿಣಾಮಗಳು;

(vii) ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಯಾವುದಾದರೂ ಇದ್ದರೆ ಅದರ ಚುನಾವಣಾ ವಿಧಾನ ಮತ್ತು ಸಾಮಾನ್ಯ ನಿಕಾಯ ಮತ್ತು ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಯಾವುದಾದರೂ ಇದ್ದಲ್ಲಿ, ಅದು ವ್ಯವಹರಿಸಬೇಕಾದ ವಿಷಯಗಳು;

(viii) ಸಾಮಾನ್ಯ ಸಭೆಗಳನ್ನು ನಡೆಸಬೇಕಾದ ವಿಧಾನ ಮತ್ತು ಅಂತಹ ಮತ್ತು ಅದಕ್ಕೆ ಅಗತ್ಯವಿರುವ ಕೋರಂ;

(ix) ****]

(x) ಮಂಡಳಿಯ ರಚನೆ ಹಾಗೂ ಪದಾಧಿಕಾರಿಗಳ ಸಂಖ್ಯೆ [ಮತ್ತು ಮಂಡಳಿಯ ಅಧಿಕಾರಗಳು, ಪ್ರಕಾರ್ಯಗಳು ಹಾಗೂ ಕರ್ತವ್ಯಗಳು];

ಎ) ನಿರ್ದೇಶಕರ ಪ್ರಯಾಣ ಭತ್ಯೆ, ದಿನ ಭತ್ಯೆ, ಸಭಾ ಭತ್ಯೆ, ಮತ್ತು ಇತರ ಭತ್ಯೆಗಳು;]

(xi) ಷೇರು ಬಂಡವಾಳ, ಠೇವಣಿಗಳ, ಡಿಬೆಂಚರುಗಳ, ಸಾಲಗಳ ಮತ್ತು ಸರ್ಕಾರದ ವಂತಿಗೆ ಗಳಲ್ಲದೆ ಸದಸ್ಯರಿಂದ ಬರುವ ಇತರ ವಂತಿಗೆಗಳ ರೂಪದಲ್ಲಿ ನಿಧಿಗಳನ್ನು ಸಂಗ್ರಹಿಸುವ ವ್ಯಾಪ್ತಿ ಮತ್ತು ಷರತ್ತುಗಳು;

(xii) ಅಧ್ಯಕ್ಷ ಅಥವಾ ಸಭಾಪತಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(xiii) ಮುಖ್ಯ ಕಾರ್ಯನಿರ್ವಾಹಕನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(xiv) ಸಹಕಾರಿಯು ಸದಸ್ಯೇತರರೊಂದಿಗೆ ವ್ಯವಹರಿಸಬಹುದಾದ ನಿಬಂಧನೆಗಳು ಮತ್ತು ಷರತ್ತುಗಳು;

(xv) ಒಕ್ಕೂಟ ಸಹಕಾರಿಗಳಿಗೆ ಮತ್ತು ಸಂಯುಕ್ತ ಸಹಕಾರಿಗೆ ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನ;

(xvi) ಸಹಕಾರಿಯ ಅಧಿಕೃತ ಷೇರು ಬಂಡವಾಳದ ಸ್ವರೂಪ ಮತ್ತು ಮೊಬಲಗು;

(xvii) ಒಬ್ಬ ಸದಸ್ಯನು ಹೊಂದಬಹುದಾದ ಗರಿಷ್ಠ ಷೇರುಗಳು;

(xviii) ಸಂದಾಯಿತ ಷೇರು ಬಂಡವಾಳದ ಮೇಲೆ ಸದಸ್ಯರಿಗೆ ಸಂದಾಯ ಮಾಡಬಹುದಾದ ಗರಿಷ್ಠ ಲಾಭಾಂಶ;

(xix) ನಿಧಿಗಳನ್ನು ಬಳಸಬಹುದಾದ ಉದ್ದೇಶಗಳು;

(xx) ಸಂಯುಕ್ತ ಸಹಕಾರಿ ನಿಧಿಗೆ ವಂತಿಗೆ ಮತ್ತು ವಿವಿಧ ನಿಧಿಗಳ ರಚನೆ ಮತ್ತು ಅವುಗಳ ಉದ್ದೇಶಗಳು;

(xxi) ನಿವ್ವಳ ಲಾಭದಲ್ಲಿ ಮುಖ್ಯವಾಗಿ ಈ ಮುಂದಿನವುಗಳ ಬಗ್ಗೆ ಹಣದ ವಿನಿಯೋಗ,–

[(ಎ) ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡ ಇಪ್ಪತ್ತೈದು;

[(ಎ–ಎ) ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪ್ರಾಯೋಜಿಸಿರುವ ಮತ್ತು ಕರ್ನಾಟಕ ಸೊಸೈಟಿಗಳ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿಸಿದ ಸಹಕಾರ ಅಕಾಡೆಮಿ (ನೋಂ), ಮೈಸೂರು ಇದಕ್ಕೆ ಶೇಕಡ 0.50;]

(ಬಿ) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಕಾರ ಶಿಕ್ಷಣ ನಿಧಿಗೆ ಶೇಕಡ ಎರಡು;

ಪರಂತು ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ಕೊಡಲು ವಿಫಲವಾದ ಯಾವೊಂದು ಸಹಕಾರಿಯೂ ತನ್ನ ಸದಸ್ಯರುಗಳಿಗೆ ಲಾಭಾಂಶವನ್ನು ಸಂದಾಯ ಮಾಡತಕ್ಕದ್ದಲ್ಲ;

(ಸಿ) ಅನಿರೀಕ್ಷಿತ ನಷ್ಟ ಅಥವಾ ಸಾದಿಲ್ವಾರುಗಳನ್ನು ಭರಿಸಲು ಕಾರ್ಯಾಚರಣಾ ಮೀಸಲಿಗೆ ಶೇಕಡ ಇಪ್ಪತ್ತು;

(ಡಿ) ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇಕಡ ಐದು;

(ಇ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂಥ ವಿಶೇಷ ನಿಧಿಗಳ ರಚನೆ ಮತ್ತು ಅವುಗಳಿಗೆ ವಂತಿಗೆ;

(ಎಫ್) ನೌಕರರಿಗೆ ಸಂದಾಯ ಮಾಡಬೇಕಾದ ಎರಡು ತಿಂಗಳ ವೇತನವನ್ನು ಮೀರದ ಬೋನಸ್ಸು;

(ಜಿ) ಸದಸ್ಯರಿಗೆ ಲಾಭಾಂಶ;]

(xxii) ಸಹಕಾರಿಗೆ ಉಂಟಾಗಿರುವ ಕಾರ್ಯಾಚರಣಾ ಕೊರತೆಯನ್ನು ಅದರ ಮೀಸಲು ನಿಧಿ ಮತ್ತು ಕಾರ್ಯಾಚರಣಾ ಮೀಸಲು ನಿಧಿಯಿಂದ ತುಂಬಲು ಪ್ರಮಾಣವನ್ನು ಮತ್ತು ಕಾರ್ಯ ವಿಧಾನವನ್ನು ನಿರ್ಧರಿಸುವುದು;

(xxiii) ಲೆಕ್ಕ ಪರಿಶೋಧಕರ ಅಥವಾ ಚಾರ್ಟರ್ಡ್ ಅಕೌಂಟೆಂಟರ ನೇಮಕಾತಿ ವಿಧಾನ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xxiv) ಸಹಕಾರಿಯು ಸಮಾಪನೆಗೊಳ್ಳುತ್ತಿರುವಾಗ ನಿಧಿಗಳನ್ನು ವಿಲೆ ಮಾಡುವ ವಿಧಾನ;

(xxv) ಸಹಕಾರಿಯನ್ನು ಸಮಾಪನ ಮಾಡುವ ಸಂದರ್ಭಗಳು ಮತ್ತು ವಿಧಾನ; ಮತ್ತು

(xxvi) ಉಪವಿಧಿಗಳಲ್ಲಿ ಉಪಬಂಧ ಕಲ್ಪಿಸುವ ಅಗತ್ಯವಿರುವ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯ.

3) ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದೇನೇ ಇದ್ದರೂ, ಒಂದು ಸಹಕಾರಿಯ ಸಂಬಂಧಲ್ಲಿ, ಅದು ಠೇವಣಿಗಳನ್ನು ಸ್ವೀಕರಿಸುವುದಕ್ಕೆ, ನಿಧಿಗಳನ್ನು ಸಾಲವಾಗಿ ಪಡೆಯುವುದಕ್ಕೆ, ಮೀಸಲು ನಿಧಿಯ ನಿರ್ವಹಣೆಗೆ, ಲಾಭಾದ ವಿನಿಯೋಗಕ್ಕೆ, ಸಾಲ ನೀಡಿಕೆಗೆ, ಠೇವಣಿಗಳ ಮತ್ತು ಮುಂಗಡಗಳ ಮೇಲೆ ಬಡ್ಡಿ ದರಗಳನ್ನು ನಿಗಪಡಿಸುವುದಕ್ಕೆ ಸಂಬಂಧಪಟ್ಟಂತೆ ಮತ್ತು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ 6ನೇ ಪ್ರಕರಣದ ಅಡಿಯಲ್ಲಿ ಹೇಳಲಾದ ಸಹಕಾರಿ ಸಂಘಗಳಿಗೆ ಅನ್ವಯವಾಗುವ ಅಂಥ ಇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ (2)ನೇ ಉಪ–ಪ್ರಕರಣದ ಅಡಿಯಲ್ಲಿ ರಚಿಸಿದ ಉಪವಿಧಿಗಳು, ಸದರಿ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್ ಕಾಲಕಾಲಕ್ಕೆ ರಚಿಸಿದ ನಿಯಮಗಳ, ವಿನಿಯಮಗಳ ಉಪಬಂಧಗಳಿಗೆ ಅಥವಾ ಹೊರಡಿಸಿದ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು.

**ಉಪವಿಧಿಗಳು :**

ಕಲಂ.10 ರಲ್ಲಿ ನೀಡಿರುವ ವಿಷಯಗಳ ಬಗ್ಗೆ ಸಹಕಾರಿ ತನ್ನ ಉಪವಿಧಿ ತಯಾರಿಸಿ, ಪ್ರವರ್ತಕರ ಸಭೆಯಲ್ಲಿ ಅನುಮೋದನೆ ಪಡೆದು ನಿಬಂಧಕರಿಗೆ ಪ್ರಸ್ತಾವನೆ ಸಲ್ಲಿಸಬೇಕು. ಈ ಕಲಂ.ನಲ್ಲಿ ನಿಗದಿ ಪಡಿಸಿದ ವಿಷಯಗಳಲ್ಲದೇ, ಸಹಕಾರಿ ಪ್ರವರ್ತಕರು, ಹೆಚ್ಚುವರಿ ವಿಷಯಗಳನ್ನು ಸೇರಿಸಲು ಅವಕಾಶ ಇದೆ. ಆದರೆ ಯಾವುದೇ ವಿಷಯ ಸೇರಿಸುವಾಗ ಕಾಯಿದೆ ಮತ್ತು ನಿಯಮಗಳಲ್ಲಿ ನಿರ್ಭಂಧಿಸಲಾದ ವಿಷಯಗಳನ್ನು ಗಮನಿಸಬೇಕು. ಉದಾಹರಣೆಗೆ ಆಡಿಟ್ ವರದಿಯನ್ನು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆಯಲು, ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 25 ರೊಳಗೆ ನಡೆಸಲು, ನಿಬಂಧಕರಿಗೆ ಸಲ್ಲಿಸಬೇಕಾದ ವರದಿಗಳನ್ನು ಸೆಪ್ಟೆಂಬರ್ ಮೂವತ್ತರೊಳಗೆ ಸಲ್ಲಿಸದಿದ್ದರೆ ಅಥವಾ ಚುನಾವಣೆ ಮಂಡಳಿ ಅವಧಿ ಮುಗಿಯುವ ಪೂರ್ವದ 6 ತಿಂಗಳ ಮೊದಲು ಚುನಾವಣಾ ಪ್ರಾಧಿಕಾರಕ್ಕೆ ಚುನಾವಣೆ ನಡೆಸಲು ಪ್ರಸ್ತಾವನೆ ಸಲ್ಲಿಸಲು ಕಾಯಿದೆಯಲ್ಲಿ ನಿರ್ಭಂಧ ವಿಧಿಸಿದೆ. ಇಂತಹ ನಿರ್ಭಂದಗಳ ವಿರುದ್ದ ಉಪವಿಧಿಗಳಲ್ಲಿ ಅವಕಾಶ ಕಲ್ಪಿಸತಕ್ಕದ್ದಲ್ಲ. ಆದರೆ ಸಾಮಾನ್ಯ ಸಭೆಯನ್ನು ಜೂನ್ ತಿಂಗಳಲ್ಲಿ ನಡೆಸಲು ಅವಕಾಶ ಕಲ್ಪಿಸಿದಾಗ, ಲೆಕ್ಕತಪಾಸಣಾ ವರದಿ, ಆ ದಿನಾಂಕಕ್ಕೆ ಕನಿಷ್ಠ ಒಂದು ತಿಂಗಳ ಮೊದಲು ಸಹಕಾರಿ ಸ್ವೀಕರಿಸುವ ವ್ಯವಸ್ಥೆ ಮಾಡಿದಾಗ, ಅಂತಹ ಅವಕಾಶವನ್ನು ಉಪವಿಧಿಗಳನ್ನು ಸೇರಿಸತಕ್ಕದ್ದು. ಇದು ಕಾನೂನಿನ ಉಲ್ಲಂಘನೆಯಾಗುವುದಿಲ್ಲ. ಇದೇ ರೀತಿ ಕಾನೂನಿನಲ್ಲಿ ನಿರ್ಭಂದಿಸಿದ ವಿಷಯಗಳನ್ನು ಉಪವಿಧಿಗಳಲ್ಲಿ ಸೇರಿಸಲು ಮತ್ತು ಅಂತಹ ಅವಕಾಶ ಸದಸ್ಯರ ಹಿತಾಸಕ್ತಿಯಿಂದ ರೂಪಿಸಲಾಗಿದೆ ಎಂದು ಸಮರ್ಥಿಸಲು ಸಕಾರಣಗಳಿದ್ದರೆ ಅವುಗಳನ್ನು ಉಪವಿಧಿಗಳಲ್ಲಿ ಸೇರಿಸಬಹುದು.

**ನೋಂದಾವಣೆಗೆ ಸಂಬಂಧಪಟ್ಟ ತೀರ್ಪುಗಳು:**

1. ಒಂದೇ ಕಾರ್ಯವ್ಯಾಪ್ತಿಯಲ್ಲಿ ಮತ್ತೊಂದು ಸಹಕಾರ ಸಂಘವನ್ನು ನೋಂದಾಯಿಸಲು ನಿಬಂಧಕರು ಅವಶ್ಯಕವೆಂದು ಮನಗಂಡು ಒಪ್ಪಿಗೆ ಕೊಟ್ಟಾಗ ಅದು ನಿಯಮಬಾಹಿರವಲ್ಲ. ಮತ್ತೊಂದು ಸಹಕಾರ ಸಂಘವನ್ನು ವಿಶೇಷ ಪ್ರಸಂಗವೆಂದು ನೋಂದಾಯಿಸಿದಾಗ ಅಂತಹ ನೋಂದಾವಣೆ ಅಸಿಂಧುವಲ್ಲ. 2006(1) ಕೆಸಿಸಿಆರ್ ಎಸ್ಎನ್ 56

2. ಯಾವುದೇ ಒಂದು ಸಹಕಾರ ಸಂಘವನ್ನು ನೋಂದಣಿ ಮಾಡುವಾಗ ಆರ್ಥಿಕವಾಗಿ ಸಬಲವಲ್ಲವೆಚಿದು ಮತ್ತು ಆ ಸಹಕಾರ ಸಂಘವನ್ನು ನೋಂದಾಯಿಸಿದರೆ ಸಹಕಾರಿ ಆಂದೋಲನಕ್ಕೆ ವಿರುದ್ಧವಾಗುತ್ತದೆಂದು ಮನಗಂಡಾಗ ಆ ಪ್ರಸ್ತಾವನೆಚುನ್ನು ತಿರಸ್ಕರಿಸುವುದು ಅಸಿಂಧುವಲ್ಲ. ಅದು ಒಂದು ಹಕ್ಕೂ ಅಲ್ಲ. ಐಎಲ್ಆರ್ 1990(1) ಕೆಎಆರ್ 665/1989(2) ಕೆಎಲ್‌ಜೆ 356

3. ಯಾವುದೇ ಒಂದು ಸಹಕಾರ ಸಂಘವನ್ನು ನೊಂದಾಯಿಸುವಾಗ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಚು ಗ್ರಾಮವನ್ನು ಸೇರಿಸಿ ನೋಂದಣಿ ಮಾಡಿದಾಗ, ನಿಬಂಧಕರು ಯಾವ ಸಹಕಾರ ಸಂಘದ ವ್ಯಾಪ್ತಿಚುಲ್ಲಿ ಆ ಗ್ರಾಮ ಸೇರಿಕೊಂಡಿದೆಯೋ ಅದನ್ನು ಕೈಬಿಡಲು ಸಂಬಂಧಪಟ್ಟ ಸಂಘಕ್ಕೆ ನಿರ್ದೇಶನ ನೀಡುವುದು ನಿಬಂಧಕರ ಜವಾಬ್ದಾರಿ. 2000(4) ಕೆಸಿಸಿಆರ್ ಎಸ್ಎನ್ 146/2000(3) ಕೆಎಲ್‌ಜೆ 86

4. ಒಂದು ಸಹಕಾರ ಸಂಘವನ್ನು ನೋಂದಾವಣೆ ಮಾಡುವಾಗ ಅದು ಆರ್ಥಿಕ ಸಬಲತೆ ಆಗುವ ಸಾಧ್ಯತೆ ಮತ್ತು ಸಹಕಾರಿ ಆಂದೋಲನಕ್ಕೆ ಪೂರಕವಾಗಿಲ್ಲದಿದ್ದರೆ, ಅಂತಹ ಸಂಘವನ್ನು ನೊಂದಾಯಿಸತಕ್ಕದ್ದಲ್ಲ. ಮತ್ತು ಅದಕ್ಕೆ ಪೂರಕವಾಗಿ ಕಲಂ 12(6)ರನ್ವಯ ನಿರ್ದೇಶನ ನೀಡಿ ತಿದ್ದುಪಡಿ ಮಾಡಬಹುದು. (2000(2) ಕೆಸಿಸಿಆರ್ 867/ಐಎಲ್ಆರ್ 2000(1)ಕೆಎಆರ್ 464/ 2000(3) ಕೆಎಲ್‌ಜೆ 86)

5. ಒಂದು ಸಹಕಾರ ಸಂಘದ ನೋಂದಣಿ ಅರ್ಜಿಯನ್ನು ಸರ್ಕಾರದ ನೀತಿಯನ್ನು ಕಾಯಲಾಗುತ್ತಿದೆ ಎಂಬ ಕಾರಣಕ್ಕೆ ತಡೆಹಿಡಿಯತಕ್ಕದ್ದಲ್ಲ.

ಮತ್ತು ಇದಕ್ಕೆ ಪೂರಕವಾಗಿ ನಿಬಂಧಕರು ಒಂದು ಹಿಂಬರಹ ನೀಡುವಚಿತೆ ಸರ್ಕಾರದ ನೀತಿಯನ್ನು ಕಾಯುವ ಅವಶ್ಯಕತೆ ಇಲ್ಲ. 1992(3) ಕೆಎಲ್‌ಜೆ 659.

6. ಮತ್ತೊಂದು ಸಹಕಾರ ಸಂಘದ ಜೊತೆ ವ್ಯವಹಾರಿಕ ಸಂಘರ್ಷವಾಗುತ್ತದೆಂದು ಒಂದು ಸಂಘದ ನೋಂದಾವಣೆಯನ್ನು ತಡೆಹಿಡಿಯತಕ್ಕದ್ದಲ್ಲ. ಯಾವ ಸಂಘವನ್ನು ನೋಂದಾಯಿಸಬಹುದೆಂದು ನಿಬಂಧಕರು ತೀರ್ಮಾನ ಮಾಡಿದಾಗ ಅದು ಸಿಂಧುವಾಗತಕ್ಕದ್ದು. 1989(1) ಕೆಎಲ್‌ಜೆ 127

7. ಯಾವುದೇ ಒಂದು ಸಹಕಾರ ಸಂಘವನ್ನು ಮುಖ್ಯ ಪ್ರವರ್ತಕರ ಅರ್ಜಿಯ ಮೇಲೆ ನೋಂದಾಯಿಸಲಾಗಿದೆಯೋ, ಅಚಿತಹ ಸಂಘಕ್ಕೆ, ನಿಬಂಧಕರು ಆಡಳಿತ ಮಂಡಳಿಗೆ ಲಿಖಿತ ನಿರ್ದೇಶನ ನೀಡಿ, ಸದಸ್ಯರನ್ನು ಸೇರಿಸಿಕೊಳ್ಳಲು ಮತ್ತು ಅಂತಹ ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಲು ಅಧಿಕಾರವಿದೆಯೆಂದು ನಿರ್ದೇಶನ ಕೊಡತಕ್ಕದ್ದಲ್ಲ. 1998(4) ಕೆಎಲ್‌ಜೆ 471

8. ಯಾವುದೇ ಒಂದು ಸಹಕಾರ ಸಂಘದ ನೌಕರ, ಸಂಘದ ವ್ಯವಹಾರದ ಬಗ್ಗೆ ಕಾರ್ಯ ನಿರ್ವಹಿಸುವಾಗ ಕ್ರಿಮಿನಲ್ ಕಾಯಿದೆಯಡಿ ಕ್ರಮ ಜರುಗಿಸುವಾಗ, ಸಹಕಾರ ಸಂಘವನ್ನು ರಾಜ್ಯ ಎಂದು ತಿಳಿಯತಕ್ಕದ್ದಲ್ಲ. ಆದ್ದರಿಂದ ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರದ ಒಪ್ಪಿಗೆ ಬೇಕಾಗಿಲ್ಲ. ಎಐಆರ್ 1981 ಎಸ್‌ಸಿ 1345/1981 ಸಿಎಲ್‌ಜೆ 871

9. ಕಾನೂನುಬದ್ಧವಾಗಿ ಒಂದು ಸಹಕಾರ ಸಂಘಕ್ಕೆ ನೋಂದಣಿ ಪ್ರಮಾಣ ಪತ್ರ ಜಾರಿ ಮಾಡಿದಾಗ, ಅದು ಸ್ವಾಭಾವಿಕ ನ್ಯಾಯದನ್ವಯ ಇರುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ನೋಂದಣಿ ಆದೇಶ ಜಾರಿ ಮಾಡುವ ಅವಶ್ಯಕತೆ ಇಲ್ಲ. ಎಐಆರ್ 1985 ಎಸ್‌ಸಿ 973

10. ಒಂದು ಸಹಕಾರ ಸಂಘವನ್ನು ರಾಜ್ಯ ಎಂದು ಸಂವಿಧಾನದ 12ನೇ ವಿಧಿಯನ್ವಯ ಕ್ವರೆಯಲಾಗದು. ಆದ್ದರಿಂದ ರಿಟ್ ಅರ್ಜಿಯನ್ನು ಸಂವಿಧಾನದ ವಿಧಿ 226ರನ್ವಯ ಹೊರಡಿಸತಕ್ಕದ್ದಲ್ಲ. 1981 (2)ಕೆಎಲ್‌ಜೆ 533/ಐಎಲ್‌ಆರ್ 1981 (2) ಕೆಎಆರ್ 1039/ಎಐಆರ್ 1982 ಎನ್‌ಓಸಿ 98

11. ಒಂದು ಸಹಕಾರ ಸಂಘದ ಅಧ್ಯಕ್ಷರು ಮತ್ತು ನಿರ್ದೇಶಕರ ಮೇಲೆ ಆರೋಪ ಹೊರಿಸಿದಾಗ ಆ ಆರೋಪವನ್ನು ಸಂಘಕ್ಕೆ ವಿರುದ್ಧವಾಗಿ ಎಂದು ಪರಿಗಣಿಸತಕ್ಕದ್ದಲ್ಲ. ಆದ್ದರಿಂದ ಒಂದು ಸಹಕಾರ ಸಂಘವನ್ನು ಸಂಬಂಧಪಟ್ಟ ಕಕ್ಷಿದಾರ ಎಂದು ತಿಳಿಯತಕ್ಕದ್ದಲ್ಲ. 1967(2) ಎಂಎಲ್‌ಜೆ 149

12. ಒಂದು ಸಹಕಾರ ಸಂಘ ಮಾಡಿಕೊಂಡ ಒಪ್ಪಂದವನ್ನು ರಾಜ್ಯ ಸರ್ಕಾರ ಅಥವಾ ಇನ್ನಾವುದೇ ಪ್ರಾಧಿಕಾರ ಪರಿಶೀಲಿಸುವುದು, ಒಪ್ಪಿಗೆ ಕೊಡುವುದು, ತಿರಸ್ಕರಿಸುವುದು ಅಥವಾ ಮಾರ್ಪಾಡು ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ. ಇಂತಹ ಮಧ್ಯಪ್ರವೇಶಕ್ಕೆ ಸಂಘದ ಉಪನಿಯಮಗಳೇ ನಿಯಂತ್ರಿಸತಕ್ಕದ್ದು. 1981(2) ಕೆಎಲ್‌ಜೆ 533/ಐಎಲ್‌ಆರ್ 1981(2)ಕೆಎಆರ್ 1039/ಎಐಆರ್ 1982 ಎನ್‌ಓಸಿ 98

13. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ಆ ಸಂಘವು ನಡೆಸಬೇಕೆಂದಿರುವ ಧ್ಯೇಯೋದ್ದೇಶಗಳು ಕಾನೂನಿನಲ್ಲಿ ಅಳವಡಿಸಿರುವ ಉದ್ದೇಶಗಳಿಗೆ ವಿರುದ್ಧವಾಗಿ ಇರತಕ್ಕದ್ದಲ್ಲ. Maದು ಸಹಕಾರ ಸಂಘದ ಉಪನಿಯಮಗಳನ್ನು ನೋಂದಾಯಿಸಲು ತಿರಸ್ಕರಿಸಿದಾಗ ಕ್ಥರಣಗಳನ್ನು ತಿಳಿಸಿ ಸಂವಿಧಾನದ ಆರ್ಟಿಕಲ್ 19ರ ವಿರುದ್ಧವಾಗಿ ಇಲ್ಲವೆಂದು ತೀರ್ಮಾನಿಸಬೇಕು. ಐಎಲ್‌ಆರ್ 1990(1) ಕರ್ನಾಟಕ 665/1989(2) ಕೆಎಲ್‌ಜೆ 356.

14. ಸರ್ಕಾರವು ತನ್ನ ಅಧಿಕಾರವನ್ನು ಚಲಾಯಿಸಿ ನಿಬಂಧಕರ ಅಧಿಕಾರವನ್ನು ಕೆಳ ಅಧಿಕಾರಿಗೆ ವರ್ಗಾಯಿಸಿದಾಗ ಆ ಅಧಿಕಾರದ ಮಿತಿಯೊಳಗೆ ಕೆಳ ಅಧಿಕಾರಿ ಅಧಿಕಾರ ಚಲಾಯಿಸಬಹುದು. ಒಂದು ಸಂಘದ ಉಪನಿಯಮಗಳನ್ನು ನೋಂದಾವಣೆ ಮಾಡುವಾಗ ಆ ಕೊಡಮಾಡಲ್ಪಟ್ಟ ಅಧಿಕಾರವನ್ನು ಚಲಾಯಿಸುತ್ತಾನೆ. ಉಪನಿಯಮಗಳ ನೋಂದಾವಣೆಯನ್ನು ತಿರಸ್ಕರಿಸಿದಾಗ ಆ ಆದೇಶವನ್ನು ಪುನರ್ ವಿಮರ್ಶೆ ಮಾಡಲು ನಿಬಂಧಕರಿಗೆ ಸಲ್ಲಿಸತಕ್ಕದ್ದು. ನಿಬಂಧಕರೇ ಉಪನಿಯಮಗಳ ನೋಂದಾವಣೆ ತಿರಸ್ಕರಿಸಿದಾಗ ಅದರ ಮೇಲ್ಮನವಿ ಅಥವಾ ಪುನರ್ ವಿಮರ್ಶೆ ಸರ್ಕಾರಕ್ಕೆ ಇರತಕ್ಕದ್ದು. ಎಐಆರ್ 1973 ಪಾಟ್ನಾ 77(ಡಿಬಿ).

15. ಒಂದು ಸಹಕಾರ ಸಂಘ ತನ್ನ ಸದಸ್ಯರ ಆರ್ಥಿಕ ಬೆಳವಣಿಗೆಗೆ ಮತ್ತು ಸಾಮಾನ್ಯ ಜನರ ಕಲ್ಯಾಣಕ್ಕೆ ನೋಂದಾಯಿಸಬಹುದು. ಉಪನಿಯಮಗಳ ನೋಂದಾವಣೆಯನ್ನು ನೋಂದಾಯಿಸುವಾಗ ಕಲಂ 4ರಲ್ಲಿ ನಿಬಂಧಕರ ವಿವೇಚನೆಗೆ ಎಂದಿದ್ದರೂ ಕಲಂ 7ರ ಎಲ್ಲಾ

ಷರತ್ತುಗಳನ್ನು ಪೂರೈಸಿದಾಗ ನೋಂದಾವಣೆಯನ್ನು ತಿರಸ್ಕರಿಸತಕ್ಕದ್ದಲ್ಲ. ಎಐಆರ್ 1993 ಕರ್ನಾಟಕ 117.

16. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ಮತ್ತೊಂದು ಸಂಘದ ಕಾರ್ಯವ್ಯಾಪ್ತಿಗೆ ವಿಸ್ತರಿಸುವಾಗ ನಿಬಂಧಕರು ಒಂದು ಸಂಘದ ವ್ಯಾಪ್ತಿಯನ್ನು ನಿರ್ಧರಿಸಿ ಆದೇಶ ಹೊರಡಿಸತಕ್ಕದಲ್ಲ. ಆದರೆ ಯಾವ ಸಂಘದ ವ್ಯಾಪ್ತಿಗೆ ಹೊಸ ಸಂಘದ ಕಾರ್ಯವ್ಯಾಪ್ತಿ ವಿಸ್ತರಿಸಬೇಕೋ ಅದಕ್ಕೆ ಅವಕಾಶ ಕಲ್ಪಿಸಿ ಮಾರ್ಪಡಿಸಬೇಕು. 2000(3) ಕರ್ನಾಟಕ ಎಲ್‌ಜೆ 86/2000(4) ಕೆಸಿಸಿಆರ್ ಎಸ್‌ಎನ್ 146.

17. ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ಆ ಸಂಘವು ಆರ್ಥಿಕವಾಗಿ ವಿಕೃತ ಅಥವಾ ಅಸ್ವಸ್ಥ ಸ್ಥಿತಿ ಅಥವಾ ಸಹಕಾರಿ ಆಂದೋಲನಕ್ಕೆ ಉಪಯುಕ್ತವಲ್ಲದ ಬೈಲಾ ತಿದ್ದುಪಡಿಯನ್ನು ಕಲಂ 12(6)ರನ್ವಯ ಮಾರ್ಪಡಿಸುವುದು ಸೂಕ್ತವಲ್ಲ. ಐಎಲ್‌ಆರ್ 94 ಕರ್ನಾಟಕ 2525 (ಡಿಬಿ)/1981(1) ಕರ್ನಾಟಕ ಎಲ್‌ಜೆ ಎಸ್‌ಎನ್ 71(ಡಿಬಿ) ಈ ಉಲ್ಲೇಖದಲ್ಲಿ ಆಧರಿಸಿ 2000(2) ಕೆಸಿಸಿಆರ್ 867/ ಐಎಲ್‌ಆರ್ 2000(1) ಕರ್ನಾಟಕ 264/2000(3) ಕರ್ನಾಟಕ ಎಲ್‌ಜೆ 83.

18. ಒಂದು ಸಹಕಾರ ಸಂಘವನ್ನು ನೋಂದಾಯಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರ ಆ ನೋಂದಾವಣೆ ಬಗ್ಗೆ ತಾತ್ವಿಕ ತೀರ್ಮಾನಕ್ಕೆ ಕಾಯುತ್ತಿದ್ದೇನೆ ಎಂದು ನೋಂದಾವಣೆ ಮುಂದಿಡತಕ್ಕದಲ್ಲ. ಹಾಗೂ ನಿಬಂಧಕರಿಂದ ಈ ರೀತಿಯ ಹಿಂಬರಹ ನೀಡಲು ನಿಬಂಧಕರ ಲಿಖಿತವಾಗಿ ಕೇಳತಕ್ಕದಲ್ಲ. ಹಾಗೂ ಈ ನೋಂದಾವಣೆ ಸರ್ಕಾರದ ನೀತಿಯಂತರ ಇದೆ ಎಂಬುದನ್ನು ಪ್ರಮಾಣಿಕರಿಸಬೇಕಾಗಿಲ್ಲ. 1992(3) ಕೆಎಲ್‌ಜೆ 659.

19. ಸಂಘಗಳಲ್ಲಿ ಸ್ಪರ್ಧೆಯನ್ನು ತಪ್ಪಿಸಲು ಉಪನಿಯಮಗಳ ನೋಂದಾವಣೆ ತಿರಸ್ಕರಿಸಲಾಗದು. ಕಾಯಿದೆ ಕಲಂ 7ರನ್ವಯ ವಿಧಿಸಿರುವ ಷರತ್ತುಗಳನ್ನು ಪೂರೈಸಿದರೆ ನೋಂದಾವಣೆ ಮಾಡತಕ್ಕದ್ದು. 1989(1) ಕೆಎಲ್‌ಜೆ 127.

20. ನಿಬಂಧಕರು ಒಂದು ಸಹಕಾರ ಸಂಘದ ಉಪನಿಯಮಗಳನ್ನು ನೋಂದಾಯಿಸುವ ಸಂದರ್ಭದಲ್ಲಿ ಆ ಸಂಘದ ಉಪನಿಯಮಗಳು ಸಮರ್ಪಕವಾಗಿದೆಯೇ? ಕಾನೂನಿಗೆ ವಿರುದ್ಧವಲ್ಲವೇ? ಆ ಸಂಘದ ಧ್ಯೇಯೋದ್ದೇಶಗಳು ಸಾಮಾನ್ಯ ನ್ಯಾಯ ತತ್ವಕ್ಕೆ ಅನುಗುಣವಾಗಿದೆಯೇ? ಎಂಬುದನ್ನು ಗಮನಿಸಬೇಕು. ಆದರೆ ಮುಖ್ಯ ಪ್ರವರ್ತಕರಿಗೆ ಕೆಲವು ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಬೇಕೆಂದು ಹಾಗೂ ಪದಾಧಿಕಾರಿಗಳಾಗಲು ಅವಕಾಶ ಕೊಡಬೇಕೆಂದು ನಿರ್ದೇಶನ ಕೊಡುವ ಅಧಿಕಾರ ಇಲ್ಲ. 1998(4) ಕೆಎಲ್‌ಜೆ 471.

21. ಒಂದು ಸಹಕಾರ ಸಂಘದ ಬೈಲಾದಲ್ಲಿ ರಿಜಿಸ್ಟ್ರಾರ್‌ರವರಿಗೆ ಪ್ರಥಮ ಆಡಳಿತ ಮಂಡಳಿ ನೋಂದಣಿಯನ್ನು ನಾಮನಿರ್ದೇಶನ ಮಾಡಲು ಅಧಿಕಾರ ಕೊಟ್ಟಿದ್ದರೆ ಆ ಅಧಿಕಾರವನ್ನು ಚಲಾಯಿಸುವಾಗ ಆ ನೋಂದಾಯಿತ ಸಂಘದ ಸದಸ್ಯರಲ್ಲಿ ಮಾತ್ರ ನಾಮ ನಿರ್ದೇಶನ ಮಾಡತಕ್ಕದ್ದು. ಐಎಲ್‌ಆರ್ 1963 ಮೈಸೂರು 488/1963(1) ಮೈಸೂರು ಲಾ ಜರ್ನಲ್ 556. ಈ ತೀರ್ಪು ಈಗ ಅವಶ್ಯಕತೆ ಬರುವುದಿಲ್ಲ. ಹೊಸದಾಗಿ ನೋಂದಾವಣೆಯಾದ ಆಡಳಿತ ಮಂಡಳಿಯನ್ನು ಚುನಾವಣೆ ಮಾಡಿ ಸದಸ್ಯರಲ್ಲಿಯೇ ಆಯ್ಕೆ ಮಾಡಲು ಕಾನೂನನ್ನು ತಿದ್ದುಪಡಿ ಮಾಡಲಾಗಿದೆ.

22. ಒಂದು ಸಹಕಾರ ಸಂಘದ ಉಪನಿಯಮ ಕಾನೂನು ಎಂದು ತಿಳಿಯತಕ್ಕದಲ್ಲ. 1983(1) ಕೆಎಲ್‌ಜೆ 106.

23. ಒಂದು ಸಹಕಾರ ಸಂಘ ರಿಟ್ ಅರ್ಜಿ ಸಲ್ಲಿಸಲು ಬರುವುದಿಲ್ಲ. ಏಕೆಂದರೆ ಅದು Maದು ಕಾನೂನುಬದ್ಧ ಪ್ರಾಧಿಕಾರವಲ್ಲ. ಐಎಲ್‌ಆರ್ 1976(1) ಕರ್ನಾಟಕ 75/1975 ಕೆಎಲ್‌ಜೆ 312/ಕೆಎಆರ್ 1976 ಕರ್ನಾಟಕ(1) (ಡಿಬಿ).

24. ಒಬ್ಬ ಸದಸ್ಯನನ್ನು ಸದಸ್ಯತ್ವದಿಂದ ತೆಗೆದುಹಾಕುವಾಗ ಸಂಘವು ಆ ವಿಷಯವನ್ನು ಪರಿಶೀಲಿಸುವಾಗ ಇತರ ವಿಷಯಗಳ ಪರಿಶೀಲನೆ ಸಮಯದಲ್ಲಿ ಎಂಬ ವಿಷಯವನ್ನು ವಿಷಯದಡಿ ಸದಸ್ಯನನ್ನು ತೆಗೆದಾಗ ಆ ತೀರ್ಮಾನಕ್ಕೆ ಪೂರ್ವದಲ್ಲಿ ಕಾರಣ ಕೇಳುವ ನೋಟೀಸ್ ಎಂದು ಪರಿಗಣಿಸತಕ್ಕದಲ್ಲ. ಒಬ್ಬ ಸದಸ್ಯನಿಗೆ ಆ ಸಹಕಾರ ಸಂಘದ ಸದಸ್ಯತ್ವ ಅವನ ಅಮೂಲ್ಯ ಹಕ್ಕು ಸದಸ್ಯನಾದ ಕೂಡಲೇ ಅವನಿಗೆ ಕೆಲವು ಸೌಲಭ್ಯಗಳು ಲಭಿಸತಕ್ಕದ್ದು. ಆ ಸೌಲಭ್ಯಗಳನ್ನು ಕಿತ್ತುಕೊಳ್ಳಲಾಗದು. ಒಂದು ಸಹಕಾರ ಸಂಘದ ಬೈಲಾದಲ್ಲಿ ಈ ವಿಷಯಕ್ಕೆ ಅವಕಾಶವಿದ್ದರೆ ಅಂತಹ ವಿಷಯವನ್ನು ಸಭೆಯಲ್ಲಿ ಚರ್ಚಿಸಬೇಕಾದರೆ ಸ್ಪಷ್ಟವಾಗಿ ಯಾವ ಸದಸ್ಯನನ್ನು ತೆಗೆಯಲು ವಿಷಯ ಮಂಡಿಸಲಾಗಿದೆ ಮತ್ತು ಆ ವ್ಯಕ್ತಿಗೆ ಅವಕಾಶ ಕೊಡಲಾಗಿದೆಯೇ? ಎಂಬುದು ಮುಖ್ಯ. ಈ ರೀತಿಯ ತೀರ್ಮಾನ ಆಗದೇ ಇರುವುದರಿಂದ ಒಬ್ಬ ಸದಸ್ಯನನ್ನು ಅವಕಾಶ ಕಲ್ಪಿಸದೆ ತೆಗೆದುಹಾಕಿರುವುದು ಸ್ವಾಭಾವಿಕ ನ್ಯಾಯದ ಉಲ್ಲಂಘನೆಯಾಗಿದೆ. ಐಎಲ್‌ಆರ್ 1967(2) ಮೈಸೂರು 388/1969(2) ಮೈಸೂರು ಎಲ್‌ಜೆ 336(ಡಿಬಿ) ಹಾಗೂ ಎಐಆರ್ 1987 ಎಸ್‌ಸಿ 849.

25.ಯಾವುದೇ ಒಂದು ಸಹಕಾರ ಸಂಘವನ್ನು ಮತ್ತೊಂದು ಸಹಕಾರ ಸಂಘದ ವ್ಯಾಪ್ತಿಗೆ ನೋಂದಾಯಿಸತಕ್ಕದ್ದಲ್ಲವೆಂದು ಕಾನೂನಿನಲ್ಲಿ ವಿರೋಧವಿಲ್ಲ. ಸ್ಪರ್ಧೆ ಎಂಬ ಕಾರಣಕ್ಕೆ ನೋಂದಾವಣೆ ತಿರಸ್ಕರಿಸತಕ್ಕದಲ್ಲ. 1989(1) ಕೆಎಲ್‌ಜೆ 127.

26.ಒಂದು ಸಹಕಾರ ಸಂಘದ ಉಪನಿಯಮಗಳು ಸಹಕಾರ ಸಂಘಗಳ ಕಾಯಿದೆಗೆ ವಿರುದ್ಧವಾಗಿದ್ದರೆ ಆ ಉಪನಿಯಮವನ್ನು ನೋಂದಾಯಿಸತಕ್ಕದಲ್ಲ. ಐಎಲ್‌ಆರ್ 1979 ಮೈಸೂರು 330/1964(1) ಮೈಸೂರು ಎಲ್‌ಜೆ 289(ಡಿಬಿ)

27.ಕಾಯಿದೆಯಲ್ಲಿ ತಿದ್ದುಪಡಿ ಮಾಡುವಾಗ ಸಂಘಕ್ಕೆ ವಿವರಣೆ ಕೊಡುವ ಅವಕಾಶ ಕಲ್ಪಿಸಿ ಆದೇಶ ಹೊರಡಿಸಬೇಕು. ಆಡಳಿತ ಮಂಡಳಿ ಮತ್ತು ಮಹಾಸಭೆಗೆ ಬಹಳಷ್ಟು ವ್ಯತ್ಯಾಸವಿದೆ. ಎಐಆರ್ 1981 ಒರಿಸ್ಸಾ 112/51/ 1981 ಸಿಎಲ್‌ಟಿ 421.

28.ಒಂದು ಸಹಕಾರ ಸಂಘವನ್ನು ನೋಂದಾಯಿಸುವಾಗ ನಿಬಂಧಕರು ಪ್ರಸ್ತಾಪಿಸಿದ ಸಹಕಾರ ಸಂಘದ ಧ್ಯೇಯೋದ್ದೇಶಗಳು ಮತ್ತು ನೋಂದಾಯಿಸಿದ ನಂತರ ಆ ಸಂಘವು ಸುಭದ್ರವಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಶಕ್ತಿ ಇದೆ ಎಂದು ಮನಗಂಡು ನೋಂದಾಯಿಸತಕ್ಕದ್ದು. ಆದರೆ ಹಣವಂತರೇ ಈ ಸಂಘದ ಅನುಕೂಲ ಪಡೆಯಲು ಅವಕಾಶವಿದೆ ಎಂಬ ಕಾರಣಕ್ಕೆ ತಕರಾರು ತೆಗೆಯುವಂತಿಲ್ಲ. ನೋಂದಾವಣೆಗೆ ಅವಶ್ಯವಾದ ಷರತ್ತುಗಳನ್ನು ಪೂರೈಸಿದ ನಂತರ ಆ ಷರತ್ತುಗಳಿಗೆ ಮೀರಿ ಮತ್ಯಾವುದೇ ವಿಷಯವನ್ನು ನೋಂದಾವಣೆ ಸಮಯದಲ್ಲಿ ಪರಿಗಣಿಸತಕ್ಕದಲ್ಲ. ಎಐಆರ್ 1960 ಎಪಿ 123.

29.ಒಂದು ಸಂಘದ ಕಾರ್ಯವ್ಯಾಪ್ತಿಚುಲ್ಲಿ ಮತ್ತೊಂದು ಸಂಘವನ್ನು ನೋಂದಾಯಿಸಬಾರದೆಂಬುದು ಕಾನೂನಿಗೆ ವಿರುದ್ಧ. 1968(1) ಎಪಿ ಡಬ್ಲ್ಯೂಆರ್ 52.

30.ಒಂದು ಸಹಕಾರ ಸಂಘ ಒಂದು ಕಾನೂನಿನಡಿ ರಚನೆಯಾದ ಸಂಘ ಅಲ್ಲ. ಆದ್ದರಿಂದ ಒಂದು ಸಹಕಾರ ಸಂಘದ ನೌಕರ ಕಾನೂನಿನ ಅರ್ಥದಲ್ಲಿ ಸರ್ಕಾರಿ ನೌಕರನಂತೆ ಇರುವುದಿಲ್ಲ. ಎಐಆರ್ 1981 ಎಸ್‌ಸಿ 1345.

31. ಒಂದು ಸಹಕಾರ ಸಂಘವನ್ನು ಒಂದು ಸರ್ಕಾರಕ್ಕೆ ಹೋಲಿಸತಕ್ಕದಲ್ಲ. ಹಾಗೂ ಸರ್ಕಾರದ ನಿಯಂತ್ರಣಕ್ಕೆ ಮತ್ತೊಂದು ನಿಯಂತ್ರಣದಡಿ ಕೆಲಸ ನಿರ್ವಹಿಸುವುದಿಲ್ಲ. ಆದ್ದರಿಂದ ಸಹಕಾರ ಸಂಘಕ್ಕೆ ನೇರವಾಗಿ ರಿಟ್ ಅರ್ಜಿ ಸಲ್ಲಿಸಲು ಬರುವುದಿಲ್ಲ. 1981(1) ಕೆಎಲ್‌ಜೆ 533/ ಐಎಲ್‌ಆರ್ 1981(2) ಕರ್ನಾಟಕ 1039.

32.ಕಾಯಿದೆಯಲ್ಲಿ ಒಂದು ಸಹಕಾರ ಸಂಘಕ್ಕೆ ನೋಟೀಸ್ ಜಾರಿ ಮಾಡುವ ಅಧಿಕಾರವಿದ್ದರೆ ಆ ನೋಟೀಸನ್ನು ಸಹಕಾರ ಸಂಘಕ್ಕೆ ತಿಳಿಸಿದರೆ ಸಾಕು. ಪ್ರತಿಯೊಬ್ಬ ಸದಸ್ಯನಿಗೂ ನೋಟೀಸ್ ಜಾರಿ ಮಾಡಬೇಕೆಂಬ ನಿಯಮವಿಲ್ಲ. ಎಐಆರ್ 1985 ಎಸ್‌ಸಿ 973.

33.ಒಂದು ಸಹಕಾರ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರ ಮೇಲೆ ಆರೋಪ ಮಾಡಿದರೆ ಅದನ್ನು ಸಹಕಾರ ಸಂಘದ ಮೇಲೆ ಆರೋಪ ಎಂದು ತಿಳಿಯತಕ್ಕದಲ್ಲ. 1962(2) ಎಂಎಲ್‌ಜೆ 149.

34.ಒಂದು ಸಹಕಾರ ಸಂಘ ತನ್ನ ಆಸ್ತಿಯನ್ನು ಬಾಡಿಗೆಗಾಗಲಿ ಗುತ್ತಿಗೆಗಾಗಲಿ ಕೊಟ್ಟಾಗ ಅದನ್ನು ಪರಿಶೀಲಿಸಲು ಒಪ್ಪಿಗೆ ಕೊಡಲು ತಿರಸ್ಕರಿಸಲು, ಮಾರ್ಪಡಿಸಲು ಅಥವಾ ಇನ್ನಾವುದೇ ರೀತಿಯ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ. ಒಂದು ಸಹಕಾರ ಸಂಘವು ತಾನು ಹೊಂದಿದ ಆಸ್ತಿಯನ್ನು ಯಾವ ರೀತಿ ಉಪಯೋಗಿಸಬೇಕೆಂದು ಉಪನಿಯಮದಲ್ಲಿ ಸೂಚಿಸಲಾಗಿದೆಯೋ, ಆ ರೀತಿ ನಡೆಯತಕ್ಕದ್ದು. ಈ ರೀತಿ ವ್ಯವಹರಿಸಿದಾಗ ಸಂಬಂಧಪಟ್ಟ ಆಡಳಿತ ಮಂಡಳಿ ಸದಸ್ಯರನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡತಕ್ಕದಲ್ಲ. ಹಾಗೂ ಸಹಕಾರ ಸಂಘವನ್ನು ಕಕ್ಷಿದಾರರನ್ನಾಗಿ ಮಾಡದೆ ವ್ಯಕ್ತಿಗತವಾಗಿ ಮಾಡತಕ್ಕದಲ್ಲ. ಎಐಆರ್ 1961 ಕೇರಳ 258.

35.ಒಂದು ಸಹಕಾರ ಸಂಘದ ಮೇಲೆ ಪಡೆದ ಡಿಕ್ರಿಯನ್ನು ಆ ಸಂಘದ ಸದಸ್ಯರ ಮೇಲೆ ಅಂದರೆ ವೈಯಕ್ತಿಕವಾಗಿ ಜಾರಿ ಮಾಡಲಾಗದು. ಏಕೆಂದರೆ ಆ ಸದಸ್ಯನು ಸರ್ಕಾರದ ಭಾಗವಲ್ಲ. ಒಂದು ಸಹಕಾರ ಸಂಘ ಸಮಾಪನೆಗೊಂಡಾಗಲು ಅಂತಹ ಸಂದರ್ಭದಲ್ಲಿ ಆ ಸಂಘದ ಆಸ್ತಿಯು ಸರ್ಕಾರದ ಆಸ್ತಿಯಾಗುವುದಿಲ್ಲ. ಎಐಆರ್ 1957 ಅಲಹಾಬಾದ್ 492.

36.ಒಂದು ಸಹಕಾರ ಸಂಘ ರಿಟ್ ಅರ್ಜಿ ಸಲ್ಲಿಸಲು ಬರುವುದಿಲ್ಲ ಎಂಬ ತೀರ್ಪಿಗೆ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ ವ್ಯತಿರಿಕ್ತ ತೀರ್ಪನ್ನು ನೀಡಿದೆ.

37.ಕಾನೂನಿನ ನಿಯಮಗಳು ಮತ್ತು ಸಹಕಾರ ಸಂಘದ ಉಪನಿಯಮಗಳಿಗೂ ಸ್ವಲ್ಪಮಟ್ಟಿನ ವ್ಯತ್ಯಾಸವಿದೆ. ಉಪನಿಯಮಗಳನ್ನು

ಕಿತ್ತುಹಾಕಬಹುದು. ಆದರೆ ಆ ಉಪನಿಯಮಗಳನ್ನು ಕಾನೂನಿನಡಿಯಲ್ಲಿ ನೋಂದಾಯಿಸಿ ಒಂದು ಒಪ್ಪಂದ ಎಂದಷ್ಟೇ ತಿಳಿಯತಕ್ಕದಲ್ಲ. ಪ್ರತಿಯೊಂದು ಒಪ್ಪಂದವು ಪಕ್ಷಗಳು ಒಮ್ಮತಕ್ಕೆ ಬಂದ ಒಂದು ಉಪನಿಯಮ ಪಕ್ಷಗಳು ಆ ಒಪ್ಪಂದಕ್ಕೆ ಒಪ್ಪಿ ಬದ್ಧರಾಗಿರತಕ್ಕದ್ದು. ಅಂದರೆ ಕಾನೂನಿನ ಅಡಿಯಲ್ಲಿ ಈ ಒಪ್ಪಂದಗಳಿಗೆ ಅಧಿಕಾರ ಪ್ರಾಪ್ತವಾಗುತ್ತದೆ. ಒಂದು ಕಾನೂನಿನಲ್ಲಿ ಯಾವೊಬ್ಬ ಜಾರಿ ಮಾಡುವ ವ್ಯಕ್ತಿ ಅತಿರೇಕ ಮಾಡಿದಾಗ ರಿಟ್ ಮುಖಾಂತರ ಮಧ್ಯಪ್ರವೇಶಿಸಬಹುದು. ಅದೇ ರೀತಿ ಉಪನಿಯಮಗಳನ್ನು ಉಲ್ಲಂಘಿಸಿದಾಗ ಪ್ರಶ್ನಿಸಬಹುದಾಗಿದೆ. ಆದ್ದರಿಂದ ಒಂದು ಸಹಕಾರ ಸಂಘ ರಿಟ್ ಸಲ್ಲಿಸಬಹುದು. 1961 ಎಂಪಿಎಲ್‌ಜೆ 1059.

38. ಒಂದು ಸಹಕಾರ ಸಂಘ ತನ್ನ ಉಪನಿಯಮಗಳನ್ನು ಮಹಾಸಭೆಯ ಠರಾವಿನ ಮುಖಾಂತರ 2/3 ಅಂಶದ ಸದಸ್ಯರು ಒಪ್ಪಿಗೆ ಕೊಟ್ಟರೆ ಅದು ಒಪ್ಪಿಗೆಯಾದಂತೆ ಐಎಲ್‌ಆರ್ 1965 ಮೈಸೂರು 1198.

39. ಒಬ್ಬ ಅನರ್ಹ ಅಧ್ಯಕ್ಷ ರಿಟ್ ಅರ್ಜಿಯನ್ನು ದಾಖಲಿಸಲು ಅಧಿಕಾರ ಇದೆ. ಅರ್ಜಿದಾರ ಸಹಕಾರ ಸಂಘ ಈ ರಿಟ್ ಅರ್ಜಿಯನ್ನು ಅಧ್ಯಕ್ಷರ ಮುಖಾಂತರ ಪರಿಹಾರ ಕೇಳಿ ಸಲ್ಲಿಸಬಹುದಾಗಿದೆ. ಐಎಲ್‌ಆರ್ 1994 ಕರ್ನಾಟಕ 1913.

40. ಒಂದು ಮೀನುಗಾರಿಕೆ ಸಂಸ್ಥೆ ನೋಂದಣಿಗೆ ಸಂಬಂಧಪಟ್ಟಂತೆ, ಒಂದೇ ರೀತಿ ವ್ಯವಹಾರ ಮಾಡುವ ಬಗ್ಗೆ ತಕರಾರು ತೆಗೆದರೂ ಸಹಾಯಕ ನಿಬಂಧಕರ ನೋಂದಣಿ ಮಾಡಿದ್ದರಿಂದ ಉಪನಿಬಂಧಕರು ಮುಂದೆ ಮೇಲ್ಮನವಿ ಸಲ್ಲಿಸಿದಾಗ, ಪ್ರಾರಂಭದಲ್ಲಿ ತಡೆಯಾಜ್ಞೆ ನೀಡಿ ಆದೇಶ ಮಾಡಿದರೂ, ನಂತರ ಆ ತಡೆಯಾಜ್ಞೆ ತೆರವುಗೊಳಿಸಿದಾಗ, ಅದನ್ನು ಪ್ರಶ್ನಿಸಿ ಈ ರಿಟ್ ದಾಖಲಿಸಲಾಗದೆ. ಈ ರಿಟ್ ಅರ್ಜಿಯಲ್ಲಿ ಪರಿಶೀಲಿಸಬೇಕಾದ ಅಂಶವೆಂದರೆ, ರಿಟ್ ಊರ್ಜಿತ ಮಾಡಿ ಅವಕಾಶ ವಿದೆಯೇ, ಎಂಬುದನ್ನು ಪರಿಶೀಲಿಸಿ, ವಾದವಿವಾದಗಳನ್ನು ಕೇಳಿ, ಮೂಲ ದಾವಾ ಮೇಲ್ಮನವಿ ತೀರ್ಮಾನಕ್ಕೆ ಬಾಕಿ ಇರುವುದರಿಂದ ತಡೆಯಾಜ್ಞೆ ತೆರವುಗೊಳಿಸಿದ್ದಕ್ಕೆ, ಈ ರಿಟ್ ಅರ್ಜಿ ಪರಿಗಣಿಸಿದಾಗದು. ಮೂಲ ಅರ್ಜಿಯಲ್ಲಿ ತುರ್ತಾಗಿ ತೀರ್ಮಾನ ಮಾಡಲು ಸೂಚಿಸಿ ರಿಟ್ ತೀರ್ಮಾನ ಮಾಡಿತು.

**(2016 Indlaw KAR 5270)**

41. ಒಂದು ಕೃಷಿ ಪತ್ತಿನ ಸಹಕಾರ ಸಂಘದ ನೋಂದಣಿ ಮಾಡಿದ, ಸಹಾಯಕ ನಿಬಂಧಕರ ಪ್ರಮಾಣ ಪತ್ರವನ್ನು ಪ್ರಶ್ನಿಸಿ ರಿಟ್ 62116/2011 ಸಲ್ಲಿಸಿ ಸಹಾಯಕ ನಿಬಂಧಕರು ಕಲಂ.4 ಮತ್ತು 7 ಹಾಗೂ ನಿಯಮ 3 ನ್ನು ಸರಿಯಾಗಿ ಪಾಲಿಸಿಲ್ಲವೆಂದು ಆದೇಶಿಸಿತು. ಇದಾದ ನಂತರ ಉಪನಿಬಂಧಕರ ಮುಂದೆ ಮೇಲ್ಮನವಿ ಸಲ್ಲಿಸಿದಾಗ, ವಿಚಾರಣೆ ನಡೆಸಿ, ಸಹಾಯಕ ನಿಬಂಧಕರಿಗೆ ಮರು ಪರಿಶೀಲನೆಗೆ ವಾಪಸ್ ಕಳುಹಿಸಿದರು. ಈ ಮರು ಪರಿಶೀಲನೆ, ಈ ನ್ಯಾಯಾಲಯದ ತೀರ್ಮಾನದಂತೆ ನಿರ್ದೇಶನ ಇರಲಿಲ್ಲ ಮತ್ತು ಸಹಾಯಕ ನಿಬಂಧಕರು ಮರು ಪರಿಶೀಲನೆ ಮಾಡುವಾಗ ಈ ರಿಟ್‌ನ ನಾಲ್ಕನೇ ಎದುರುದಾರರನ್ನು ಕಕ್ಷಿದಾರನನ್ನಾಗಿ ಮಾಡಿಕೊಳ್ಳಲಿಲ್ಲ. ಆದ್ದರಿಂದ ಸಹಾಯಕ ನಿಬಂಧಕರು 03.10.2013ರ ಆದೇಶವನ್ನು ಕಿತ್ತುಹಾಕಿ ಈ ರಿಟ್‌ನಲ್ಲಿ ಸೂಚಿಸಿರುವಂತೆ ಕ್ರಮ ಜರುಗಿಸಲು ಸೂಚಿಸಿ ಸಹಾಯಕ ನಿಬಂಧಕರಿಗೆ ಸೂಚಿಸಿ ರಿಟ್ ವಿಲೇವಾರಿ ಮಾಡಿತು.

**(2016 Indlaw KAR 4550)**

42. ಒಂದು ಸಹಕಾರ ಸಂಘ ಹುಬ್ಬಳ್ಳಿ ಕೃಷಿ ಮಾರಾಟ ಸಮಿತಿಗೆ ಒಂದು ಸಂಸ್ಕರಣಾ ಘಟಕ ಸ್ಥಾಪಿಸಲು ಸಲ್ಲಿಸಿದ್ದು ಅರ್ಜಿಯನ್ನು ತೀರ್ಮಾನಿಸದೇ ಹಾಗೆಯೇ ಬಾಕಿ ಉಳಿಸಿರುವುದನ್ನು ಪ್ರಶ್ನಿಸಿ ರಿಟ್ ದಾಖಲಿಸಿದಾಗ ಉಚ್ಚನ್ಯಾಯಾಲಯದಲ್ಲಿ ಮೂರು ತಿಂಗಳಲ್ಲಿ ಅರ್ಜಿಯನ್ನು ಅರ್ಹತೆ ಆಧಾರದಲ್ಲಿ ತೀರ್ಮಾನಿಸಲು ನಿರ್ದೇಶನ ನೀಡಿತು.

**(2017 Indlaw Kar 3496)**

43. ಒಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಎಂಟು ಹಳ್ಳಿಗಳು ಬರುತ್ತಿದ್ದು ಅವುಗಳು ರಚಿಸಿಕೊಂಡಿದ್ದು ಒಂದು ಕೃಷಿ ಪತ್ತಿನ ಸಹಕಾರ ಸಂಘವನ್ನು ಕಲಂ.14 ರಲ್ಲಿ ಒಂದು ಹೊಸ ಸಹಕಾರ ಸಂಘವನ್ನು ರಚಿಸಿರುವುದು ಮತ್ತು ವಿಭಜಿಸುವಾಗ ಸಂಘದ 1150 ಸದಸ್ಯರಲ್ಲಿ 2/3 ಅಂಶದ ಸದಸ್ಯರ ಬಹುಮತ ಇರಲಿಲ್ಲವೆಂದು ರಿಟ್‌ನಲ್ಲಿ ಪ್ರಶ್ನಿಸಿದಾಗ, ಸರ್ಕಾರಿ ವಕೀಲರು ಈ ಅರ್ಜಿ ರಿಟ್ ಸಲ್ಲಿಸಲು ಅರ್ಹವಲ್ಲ ಎಂಬ ವಾದವನ್ನು ಕೇಳಿ, ಅರ್ಜಿದಾರರು ಸೂಕ್ತ ವೇದಿಕೆಯಲ್ಲಿ ಪ್ರಕರಣ ದಾಖಲಿಸಲು (ಕಲಂ.108) ಮತ್ತು ಇನ್ನು ನಾಲ್ಕು ವಾರಗಳಲ್ಲಿ ಅರ್ಜಿ ಸಲ್ಲಿಸಿದರೆ ಅದನ್ನು ತಿರಸ್ಕರಿಸತಕ್ಕದ್ದಲ್ಲವೆಂದು ತೀರ್ಮಾನಿಸಿತು.

**(2017 (1) KLJ 536/2016 Indlaw KAR 7184)**

# ಅಧ್ಯಾಯ – 6.2

# ಸಹಕಾರಿ ಉಪನಿಯಮಗಳ ತಿದ್ದುಪಡಿ:

**ಕಲಂ.11**

1) ಒಂದು ಸಹಕಾರಿಯು ಅದರ ಉಪವಿಧಿಗಳ ಯಾವುದೇ ಉಪಬಂಧವನ್ನು, ಸಾಮಾನ್ಯ ಸಭೆ ಅಥವಾ ಪ್ರಾತಿನಿಧಿಕ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕುಳ್ಳ ಸದಸ್ಯರಲ್ಲಿ ಬಹು ಸದಸ್ಯರು ಅಥವಾ ಹಾಜರಿದ್ದು ಮತ ನೀಡಿದ ಸದಸ್ಯರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸಂಖ್ಯೆಯ ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ ತಿದ್ದುಪಡಿ ಮಾಡಬಹುದು;

ಪರಂತು ಸಾಮಾನ್ಯ ನಿಕಾಯ ಅಥವಾ ಸಂದರ್ಭಾನುಸಾರ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಪ್ರತಿಯೊಬ್ಬ ಸದಸ್ಯನಿಗೂ ಇಪ್ಪತ್ತು ಪೂರ್ಣ ದಿನಗಳಿಗೆ ಕಡಿಮೆಯಿಲ್ಲದಂತೆ ಸಭೆಯ ನೋಟೀಸನ್ನು ಪ್ರಸ್ತಾವಿತ ತಿದ್ದುಪಡಿಯ ಪ್ರತಿಯೊಂದಿಗೆ ನೀಡದ ಹೊರತು ಮತ್ತು ಸಭೆಯ ದಿನಾಂಕದ ನಿಕಟಪೂರ್ವದ ಇಪ್ಪತ್ತು ದಿನಗಳ ಅವಧಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಅಂಥ ನೋಟೀಸನ್ನು ಮತ್ತು ಪ್ರಸ್ತಾವಿತ ತಿದ್ದುಪಡಿಯನ್ನು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸದ ಹೊರತು ಅಂಥ ಯಾವುದೇ ನಿರ್ಣಯವನ್ನು ಅಂಗೀಕರಿಸತಕ್ಕದ್ದಲ್ಲ.

2) ಸಹಕಾರಿಯು ತನ್ನ ಉಪವಿಧಿಯನ್ನು ತಿದ್ದುಪಡಿ ಮಾಡಿದ ಸಂದರ್ಭದಲ್ಲಿ, ತಿದ್ದುಪಡಿಯ ನೋಂದಣಿಗಾಗಿ (3)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ವಿವರಗಳೊಂದಿಗೆ ನಿರ್ಣಯದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ರಿಜಿಸ್ಟ್ರಾರನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು. [ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು. ವಿಳಂಬವಾಗಿ ಸಲ್ಲಿಸಿರುವ ಸಂದರ್ಭದಲ್ಲಿ, ವಿಳಂಬಕ್ಕೆ ಸಕಾರಣಗಳಿವೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅಂತಹ ವಿಳಂಬವನ್ನು ಮನ್ನಿಸಿ, ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಗಣಿಸಬಹುದು.]

3) (2)ನೇ ಉಪ–ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸಲಾದ ಪ್ರತಿಯೊಂದು ಅರ್ಜಿಯನ್ನು ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿರತಕ್ಕದ್ದು ಮತ್ತು ತಿದ್ದುಪಡಿಯನ್ನು ಅಳವಡಿಸಿಕೊಳ್ಳುವ ನಿರ್ಣಯದ ಮೂರು ಪ್ರತಿಗಳೊಂದಿಗೆ ಈ ಮುಂದಿನ ವಿವರಗಳು ಅರ್ಜಿಯೊಂದಿಗಿರತಕ್ಕದ್ದು, ಎಂದರೆ,–

(ಎ) ತಿದ್ದುಪಡಿಯನ್ನು ಅನುಮೋದಿಸಿದಂಥ ಸಭೆ ನಡೆದ ದಿನಾಂಕ;

(ಬಿ) ಅಂಥ ಸಭೆಯ ದಿನಾಂಕದಂದು ಸಹಕಾರಿಯ ಪಟ್ಟಿಯಲ್ಲಿರುವ ಮತ ನೀಡಲು ಅರ್ಹರಾಗಿದ್ದ ಸದಸ್ಯರ ಒಟ್ಟು ಸಂಖ್ಯೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಮತ್ತು ನಿರ್ಣಯಕ್ಕೆ ಮತ ನೀಡಿದ ಅರ್ಹ ಸದಸ್ಯರ ಸಂಖ್ಯೆ.

(ಸಿ) ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಪ್ರಸ್ತಾವಿತ ತಿದ್ದುಪಡಿಗಳು 10ನೇ ಪ್ರಕರಣದ (3)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿವೆ ಎಂದು ತಿಳಿಸಿ ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿದ ಒಂದು ಪ್ರಮಾಣ ಪತ್ರ.

(ಡಿ) ನಿಯಮಿಸಲಾದಂತೆ ನಿಗದಿ ಪಡಿಸುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿನಲ್ಲಿ ಖಜಾನೆ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಿರುವ ದಾಖಲೆ.

4) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನು ಸಾರವಾಗಿರುವಲ್ಲಿ, ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಾಯಿಸತಕ್ಕದ್ದು.

5) ರಿಜಿಸ್ಟ್ರಾರನು, ನೋಂದಣಿಯಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಹಾಗೆ ನೋಂದಾಯಿಸಲಾದ ತಿದ್ದುಪಡಿಯ ಪ್ರತಿಯನ್ನು ತಾನು ಸಹಿ ಮಾಡಿ ಮೊಹರು ಹಾಕಿದ ಪ್ರಮಾಣ ಪತ್ರದೊಂದಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಸಹಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಮಾಣ ಪತ್ರವು ತಿದ್ದುಪಡಿಯು ವಿಧ್ಯುಕ್ತವಾಗಿ ನೋಂದಣಿಯಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. ಅಂಥ ಪ್ರಮಾಣ ಪತ್ರದ ಮತ್ತು ನೋಂದಾಯಿತ ತಿದ್ದುಪಡಿಯ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು.

6) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿಲ್ಲದಿರುವಲ್ಲಿ, ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು. ಇದಕ್ಕೆ ತಪ್ಪಿದರೆ ತಿದ್ದುಪಡಿಯನ್ನು ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕದ್ದು;

ಪರಂತು, ಅಂಥ ತಿದ್ದುಪಡಿಯ ನೋಂದಣಿಯನ್ನು ನಿರಾಕರಿಸುವ ಯಾವುದೇ ಆದೇಶವನ್ನು ಸಹಕಾರಿಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡದ ಹೊರತು ಹೊರಡಿಸತಕ್ಕದ್ದಲ್ಲ.

7) ರಿಜಿಸ್ಟ್ರಾರನು (6)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ನಿರಾಕರಣೆಯ ಆದೇಶವನ್ನು, ನಿರಾಕರಣೆಯ ಕಾರಣಗಳೊಂದಿಗೆ ಅದನ್ನು ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು.

8) (6)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಅಪೀಲನ್ನು ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ,-

(ಎ) ಆದೇಶವನ್ನು ರಿಜಿಸ್ಟ್ರಾರನು ಹೊರಡಿಸಿರುವಲ್ಲಿ, ಸರ್ಕಾರಕ್ಕೆ; ಅಥವಾ

(ಬಿ) ಆದೇಶವನ್ನು ಇತರ ಯಾರೇ ಅಧಿಕಾರಿಯು ಹೊರಡಿಸಿರುವಲ್ಲಿ, ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ, ಸಲ್ಲಿಸಬಹುದು;

9) ಉಪವಿಧಿಗಳ ತಿದ್ದುಪಡಿಯು ನೋಂದಣಿಯ ದಿನಾಂಕದಿಂದ ಅಥವಾ ನೋಂದಣಿಯಾಗಿದೆ ಎಂದು ಭಾವಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ನಿಯಮ 3ಎ : ಉಪವಿಧಿ ತಿದ್ದುಪಡಿಗೆ ಶುಲ್ಕ :

ಪ್ರಕರಣ 11ರ ಪ್ರಕಾರ ಉಪವಿಧಿ ತಿದ್ದುಪಡಿಗೆ ಪ್ರಸ್ಥಾವನೆ ಸಲ್ಲಿಸುವ ಸಂದರ್ಭದಲ್ಲಿ ಕೆಳಗೆ ನಿರ್ದಿಷ್ಟ ಪಡಿಸಿರುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿಗೆ ಪಾವತಿ ಮಾಡಿದ ಬಗ್ಗೆ ಖಜಾನೆಯ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸತಕ್ಕದ್ದು, ಎಂದರೆ

| ಸಹಕಾರಿಯ ವ್ಯಾಪ್ತಿ ಸಹಕಾರಿಯ ಕಾರ್ಯಾಚರಣೆಯ ಕ್ಷೇತ್ರವು | | ಪಾವತಿಸಬೇಕಾದ ಮೊತ್ತ |
|---|---|---|
| 1) ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ | : | ರೂ.400-00 |
| 2) ತಾಲ್ಲೂಕು ಮತ್ತು ತಾಲ್ಲೂಕಿಗಿಂತ ಹೆಚ್ಚಾಗಿ ಆದರೆ ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ | : | ರೂ.1000-00 |
| 3) ಜಿಲ್ಲೆ ಮತ್ತು ಜಿಲ್ಲೆಗಿಂತ ಹೆಚ್ಚಾದ ವ್ಯಾಪ್ತಿ | : | ರೂ.2000-00 |

ಒಂದು ಸಹಕಾರಿ ತನ್ನ ನೋಂದಾಯಿತ ಉಪವಿಧಿಗಳಲ್ಲಿ ಸದಸ್ಯರಿಗೆ ಕೊಡಮಾಡುವ ಸೌಲಭ್ಯಗಳನ್ನು ಕೊಡಲು ಉಪವಿಧಿಯಲ್ಲಿ ತೊಡಕಿದ್ದಾಗ ಅಥವಾ ಸ್ಪಷ್ಟತೆ ಇಲ್ಲದಾಗ, ಆ ಉಪವಿಧಿಗಳನ್ನು ತಿದ್ದುಪಡಿ ಮಾಡುವ ಅಧಿಕಾರ ಸಂಬಂಧಪಟ್ಟ ಸಹಕಾರಿಗೆ ಇರತಕ್ಕದ್ದು.ಆಡಳಿತ ಮಂಡಳಿಯು ಉಪವಿಧಿಗಳನ್ನು ಸದಸ್ಯರ ಅನುಕೂಲಕ್ಕೆ ಜಾರಿ ಮಾಡುವ ಸಂದರ್ಭದಲ್ಲಿ ಅನುಭವಿಸುವ ತೊಡಕುಗಳನ್ನು ಪಟ್ಟಿ ಮಾಡಿ, ಹಾಲಿ ಇರುವ ಉಪವಿಧಿಗಳಲ್ಲಿ ಮಾಡಬೇಕಾದ ತಿದ್ದುಪಡಿಗಳನ್ನು ಮತ್ತು ಹೊಸದಾಗಿ ಸೇರಿಸಬೇಕಾದ ಪದಗಳನ್ನು ಅಥವಾ ವಾಕ್ಯಗಳನ್ನು ಆಡಳಿತ ಮಂಡಳಿಯಲ್ಲಿ ಚರ್ಚಿಸತಕ್ಕದ್ದು.ಈ ಚರ್ಚೆಯಲ್ಲಿ ತೆಗೆದುಕೊಂಡ ತೀರ್ಮಾನದನ್ವಯ ಉಪವಿಧಿಗಳಿಗೆ ಆಗಬೇಕಾದ ತಿದ್ದುಪಡಿಗಳನ್ನು ವಾರ್ಷಿಕ ಮಹಾಸಭೆ ಅಥವಾ ವಿಶೇಷ ಮಹಾಸಭೆಯಲ್ಲಿ ಸದಸ್ಯರ ಒಪ್ಪಿಗೆ ಪಡೆಯಲು ತೀರ್ಮಾನಿಸತಕ್ಕದ್ದು.

ಸರ್ವಸದಸ್ಯರ ಸಭೆ ಅಥವಾ ವಿಶೇಷ ಮಹಾಸಭೆಯನ್ನು ಕರೆಯಲು ನೋಟೀಸ್ ರವಾನಿಸುವಾಗ ಸಹಕಾರಿಯ ಉಪವಿಧಿಗಳ ತಿದ್ದುಪಡಿಗಾಗಿ ವಿಷಯವನ್ನು ಮಂಡಿಸತಕ್ಕದ್ದು.ಉಪವಿಧಿಗಳನ್ನು ಸಮಗ್ರವಾಗಿ ತಿದ್ದುಪಡಿ ಮಾಡಬೇಕಿದ್ದರೆ ಹೊಸದಾಗಿ ತಯಾರಿಸಿದ ಉಪವಿಧಿಗಳ ಪೂರ್ಣ ಪಾಠವನ್ನು ಪ್ರತಿಯೊಬ್ಬ ಸದಸ್ಯನಿಗೂ ಲಿಖಿತವಾಗಿ ಮುಟ್ಟಿಸತಕ್ಕದ್ದು. ಕೆಲವೊಂದು ಉಪವಿಧಿಗಳನ್ನು ತಿದ್ದುಪಡಿ ಮಾಡಬೇಕಾದರೆ, ಅಂತಹ ಉಪವಿಧಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಪ್ರಸ್ತಾವನೆಯನ್ನು ಪ್ರತಿಯೊಬ್ಬ ಸದಸ್ಯನಿಗೂ ಮಹಾಸಭೆ ಅಥವಾ ವಿಶೇಷ ಮಹಾಸಭೆಯ ನೋಟೀಸ್ ಜೊತೆ ರವಾನಿಸತಕ್ಕದ್ದು.

| ಬೈಲಾ ಕ್ರಮ ಸಂಖ್ಯೆ | ಹಾಲಿ ಇರುವ ಉಪವಿಧಿ | ತಿದ್ದುಪಡಿ ಆದ ನಂತರ ಇರುವ ಉಪವಿಧಿ | ತಿದ್ದುಪಡಿಗೆ ಕಾರಣಗಳು |
|---|---|---|---|

ಈ ಮೇಲ್ಕಂಡ ಕಾಲಂಗಳನ್ವಯ ತಿದ್ದುಪಡಿ ಪ್ರಸ್ತಾವನೆಯನ್ನು ಸದಸ್ಯರಿಗೆ ಹಂಚತಕ್ಕದ್ದು. ಕಾರಣಗಳನ್ನು ಸೂಚಿಸುವಾಗ, ಅಂದರೆ ನಿಬಂಧಕರ

ನಿರ್ದೇಶನದಿಂದಲೇ ಅಥವಾ ಸದಸ್ಯರ ವಿನಂತಿಯ ಆಧಾರದ ಮೇಲೆಯೇ ಅಥವಾ ಆಡಳಿತ ಮಂಡಳಿಯವರು ಸದಸ್ಯರಿಗೆ ಸವಲತ್ತು ಕೊಡುವ ಸಂದರ್ಭದಲ್ಲಿ ಉಂಟಾಗುವ ತೊಡಕುಗಳ ಆಧಾರದ ಮೇಲೆಯೇ ಅಥವಾ ಹಣಕಾಸು ಪೂರೈಸುವ ಸಂಸ್ಥೆಯಿಂದ ಬಂದ ನಿರ್ದೇಶನದನ್ವಯವೇ ಎಂಬುದನ್ನು ನಮೂದಿಸತಕ್ಕದ್ದು. ಈ ಬಗ್ಗೆ ಇಲಾಖಾಧಿಕಾರಿಗಳು ಮಾರ್ಗದರ್ಶಿ ಸೂತ್ರಗಳನ್ನು ನೀಡತಕ್ಕದ್ದು.

ಉಪವಿಧಿಗಳ ತಿದ್ದುಪಡಿ ಬಗ್ಗೆ ಪ್ರಸ್ತಾವನೆಯನ್ನು ಸ್ವೀಕರಿಸುವಾಗ 6 ಅಡಕಗಳನ್ನು ನಿಗಧಿಪಡಿಸಿದ್ದು, ಇವುಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

ಅಡಕ 1

1. ಸಹಕಾರಿ ಮಹಾಸಭೆಯ ದಿನಾಂಕ ಮತ್ತು ಉಪವಿಧಿ ತಿದ್ದುಪಡಿಯನ್ನು ಸದಸ್ಯರಿಗೆ ಕಳುಹಿಸಿದ ದಿನಾಂಕ, ಇವೆರಡರ ಮಧ್ಯಂತರ ಅವಧಿಯ ಉಪನಿಯಮಗಳಲ್ಲಿ ವಿಧಿಸಿರುವ ಅವಧಿಗಿಂತ (20 ದಿವಸಗಳು) ಕಡಿಮೆ ಇರುವುದಿಲ್ಲ.

2. ಮಹಾಸಭೆಯ ತಿಳುವಳಿಕೆ ಪತ್ರವನ್ನು ಸದಸ್ಯರಿಗೆ ಸಹಕಾರಿಯಿಂದ ಅಧಿಕಾರ ಹೊಂದಿದವರು ಉಪವಿಧಿಗಳಲ್ಲಿ ವಿಧಿಸಿದ ನಿಯಮಗಳಿಗೆ ಅನುಸಾರ ನೀಡಿರುತ್ತಾರೆ.

3. ಮಹಾಸಭೆಯು ನಡೆಯುವ ದಿನಾಂಕ, ವೇಳೆ, ಸ್ಥಳವನ್ನು ಮತ್ತು ಉದ್ದೇಶಿತ ಉಪವಿಧಿ ತಿದ್ದುಪಡಿಗಳನ್ನು ಸದಸ್ಯರಿಗೆ ಕಳುಹಿಸಿದ ತಿಳುವಳಿಕೆ ಪತ್ರದಲ್ಲಿ ನಮೂದಿಸಲಾಗಿದೆ.

4. ಮಹಾಸಭೆಯ ತಿಳುವಳಿಕೆ ಪತ್ರ ಮತ್ತು ಕಾರ್ಯಕ್ರಮಗಳ ಮೂಲ ಪ್ರತಿಯನ್ನು ಸಹಕಾರಿ ದಾಖಲೆಗಳಲ್ಲಿ ಕಾಯ್ದಿಡಲಾಗಿದೆ.

ಮುಖ್ಯಕಾರ್ಯನಿರ್ವಾಹಕ ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

ಅಡಕ 2

1. ಉಪವಿಧಿ ತಿದ್ದುಪಡಿಗಳನ್ನು ಮಹಾಸಭೆಯ/ವಿಶೇಷ ಸಭೆಯಲ್ಲಿ ಹಾಜರಿದ್ದು, ಮತ ನೀಡಲು ಅರ್ಹರಿರುವ ಸದಸ್ಯರಲ್ಲಿ ಸರ್ವಾನುಮತದಿಂದ ಅಂಗೀಕರಿಸ್ಪಟ್ಟಿದೆ ಎಂದು ದೃಢೀಕರಿಸುತ್ತೇವೆ. ಅಥವಾ ಕಾಯಿದೆ ಮತ್ತು ಉಪವಿಧಿಗಳಲ್ಲಿ ನಿಗದಿ ಪಡಿಸಿದ ಮತದಾನದ ಹಕ್ಕುಳ್ಳ 2/3 ಅಂಶದ ಸದಸ್ಯರಿಗೆ ಕಡಿಮೆ ಇಲ್ಲದ ಬಹುಮತದಾನ ಪಡೆಯಲಾಗಿದೆ.

2. ಉಪವಿಧಿ ತಿದ್ದುಪಡಿಯಲ್ಲಿ ತಿಳುವಳಿಕೆ ಪತ್ರವನ್ನು ಉಪವಿಧಿಯಲ್ಲಿ ವಿಧಿಸಿದಂತೆ ತಕ್ಕ ಸಮಯದಲ್ಲಿ ಸಹಕಾರಿಯ ಎಲ್ಲಾ ಸದಸ್ಯರಿಗೆ ಕಳುಹಿಸಿರುತ್ತೆಂದು ದೃಢೀಕರಿಸುತ್ತೇವೆ.

ಮುಖ್ಯಕಾರ್ಯನಿರ್ವಾಹಕ ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

ಅಡಕ – 3

1. ಮಹಾಸಭೆಯ ದಿನಾಂಕದಂದು ಸಹಕಾರಿ ಸದಸ್ಯರುಗಳ ಪುಸ್ತಕದ ಪ್ರಕಾರ ಒಟ್ಟು ಸದಸ್ಯರ ಸಂಖ್ಯೆ ____

2. ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ______

3. ಸಭೆ ನಡೆಸಲು ಅವಶ್ಯಕ ಹಾಜರಾಗಬೇಕಾದ ಸದಸ್ಯರ ಸಂಖ್ಯೆ _____

4. ಮತದಾನದ ಹಕ್ಕುಳ್ಳ ಸದಸ್ಯರ ಸಂಖ್ಯೆ ______

5. ತಿದ್ದುಪಡಿಯ ಪರವಾಗಿ ಮತ ಚಲಾಯಿಸಿದವರ ಸಂಖ್ಯೆ ______

6. ತಿದ್ದುಪಡಿಗೆ ವಿರುದ್ಧವಾಗಿ ಮತ ಚಲಾಯಿಸಿದವರ ಸಂಖ್ಯೆ ______

7. ಮತ ಚಲಾಯಿಸಿದ ಸದಸ್ಯರು ಹಾಜರಿದ್ದ ಮತದಾನದ ಹಕ್ಕುಳ್ಳ ಸದಸ್ಯರ 2/3 ಅಂಶದ ಸದಸ್ಯರು ಮತ ಚಲಾಯಿಸಿದ್ದಾರೆಯೇ? (ಹೌದು/ಇಲ್ಲ)

ದಿನಾಂಕ ರಂದು ನಡೆದ ಮಹಾಸಭೆಯಲ್ಲಿ/ವಿಶೇಷ ಸಭೆಯಲ್ಲಿ ಉಪವಿಧಿ ತಿದ್ದುಪಡಿಗಳನ್ನು ಅಂಗೀಕರಿಸಿ ಬರೆದ ತೀರ್ಮಾನದ ನಕಲು

| ತಿದ್ದುಪಡಿ ಮಾಡಿರುವ ಹಾಲಿ ಉಪವಿಧಿ ಕ್ರಮ ಸಂಖ್ಯೆ | ತಿದ್ದುಪಡಿಗಳನ್ನು ಅಂಗೀಕರಿಸಿ ಬರೆದ ತೀರ್ಮಾನದಲ್ಲಿರುವ ಪದಗಳು | ಸೂಚಕರ ಹೆಸರು | ಅನುಮೋದಕರ ಹೆಸರು | ಸಭೆಯಲ್ಲಿ ಹಾಜರಿದ್ದ ಸದಸ್ಯರಲ್ಲಿ 2/3 ಭಾಗ ಬಹುಮತದಿಂದ ಅಂಗೀಕೃತವಾಗಿದೆಯೇ |
|---|---|---|---|---|
| | | | | |
| | | | | |

ಮುಖ್ಯಕಾರ್ಯನಿರ್ವಾಹಕ ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

ಅಡಕ – 4

| ಬೈಲಾ ಸಂಖ್ಯೆ | ಹಾಲಿ ಇರುವ ಉಪವಿಧಿ | ಉದ್ದೇಶಿತ ತಿದ್ದುಪಡಿ, ಸೇರ್ಪಡೆ ಹಾಗೂ ಮಾರ್ಪಾಡು | ತಿದ್ದುಪಡಿ ಮಾಡಲು ಕಾರಣ |
|---|---|---|---|
| | | | |
| | | | |

ಮುಖ್ಯಕಾರ್ಯನಿರ್ವಾಹಕ ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

ಅಡಕ – 5

ದಿನಾಂಕ ರಂದು ನಡೆದ ಮಹಾಸಭೆಯಲ್ಲಿ ಉಪವಿಧಿ ತಿದ್ದುಪಡಿಗಳನ್ನು ಅಂಗೀಕರಿಸಿ ಬರೆದ ತೀರ್ಮಾನದ ನಕಲು.

| ಉಪನಿಯಮದ ಕ್ರಮ ಸಂಖ್ಯೆ | ತಿದ್ದುಪಡಿ ನಂತರ ಉಪವಿಧಿಲ್ಲಿರುವ ಪದಗಳು |
|---|---|

ಮುಖ್ಯಕಾರ್ಯನಿರ್ವಾಹಕ ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

ಫಾರಂ–6

ಸಾಮಾನ್ಯ ಸಭೆಯ ದಿನಾಂಕ ಸಹಕಾರಿಗೆ ಸಂಬಂಧಿಸಿದಂತೆ ಇದ್ದ ಹೆಚ್ಚಿನ ವಿಷಯಗಳು.

1. ಸಹಕಾರಿ ಹೆಸರು ಮತ್ತು ವಿಳಾಸ

2. ನೋಂದಾಯಿಸಿದ ತಾರೀಖು ಮತ್ತು ಸಂಖ್ಯೆ

3. ಈ ಹಿಂದೆ ಲೆಕ್ಕ ಪರಿಶೋಧನೆಯಾದ ತಾರೀಕು

3ಎ. ಹಿಂದಿನ ಲೆಕ್ಕಪರಿಶೋಧನೆಯ ವರ್ಗೀಕರಣ

4.ಪತ್ತಿನ ಸಹಕಾರಿಗೆ ಸಂಬಂಧಪಟ್ಟಂತೆ

ಹೊರಗಿನಿಂದ ತಂದ ಸಾಲದ ಮೇಲೆ ಬಡ್ಡಿ

ಕೊಟ್ಟ ಸಾಲದ ಮೇಲೆ ಬಡ್ಡಿ

ಪಾವತಿಯಾದ ಷೇರುಗಳ ಮೇಲೆ ಶೇಕಡ – ಡಿವಿಡೆಂಡ್

- ಠೇವಣಿಗಳು
- ಹಣಕಾಸು ಸಂಸ್ಥೆಯಿಂದ

- ಡಿ.ಸಿ.ಸಿ ಬ್ಯಾಂಕಿನಿಂದ ತಂದ ಸಾಲ
- ಷೇರು/ಚಂದಾ
- ಇತರೆ ಸಾಲಗಳು

| ಕ್ರ ಸಂ | ಬಂಡವಾಳ ಮತ್ತು ಜವಾಬ್ದಾರಿಗಳು | ‘ | ಕ್ರ ಸಂ | ಆಸ್ತಿಗಳು | |
|---|---|---|---|---|---|
| 1 | ಸದಸ್ಯರ ಠೇವಣಿಗಳು | | 1 | ಷೇರುಗಳ ರೂಪದಲ್ಲಿ ತೊಡಗಿಸಿರುವುದು | |
| | | | | (ಅ) ಡಿ.ಸಿ.ಸಿ ಬ್ಯಾಂಕಿನಲ್ಲಿ | |
| | | | | (ಆ) ಇತರೆ ಬ್ಯಾಂಕಿನಲ್ಲಿ | |
| | | | | (ಇ) ಇತರೆ ಸಹಕಾರಿಯ ಬ್ಯಾಂಕಿನಲ್ಲಿ | |
| 2 | ಸದಸ್ಯೇತರ ಠೇವಣಿಗಳು | | 2 | ಹೂಡಿಕೆಗಳು | |
| | | | | (ಅ) ಕಟ್ಟಡಗಳು | |
| | | | | (ಆ) ಜಮೀನು | |
| 3 | ಅ) ಇತರೆ ಸಹಕಾರಿ ಅಥವಾ ಬ್ಯಾಂಕಿನಿಂದ ಸಾಲ (ಆ) ಈ ಪೈಕಿ ಸುಸ್ತಿಯಾದ ಸಾಲಗಳು | | 3 | (ಅ) ಸದಸ್ಯರಿಂದ ಬರಬೇಕಾದ ಸಾಲಗಳು | |
| | | | | (ಆ) ಆ ಪೈಕಿ ಸುಸ್ತಿಯಾದ ಸಾಲಗಳು | |
| | | | | (ಇ) ಆ ಪೈಕಿ ದಾವಾ ಹಾಕಲ್ಪಟ್ಟಿರುವ ಸಾಲಗಳು | |
| 4 | ಪಾವತಿಯಾದ ಷೇರು ಬಂಡವಾಳ | | 4 | | |
| 5 | ಆಪದ್ಧನ | | 5 | | |
| 6 | ಇತರ ನಿಧಿಗಳು | | 6 | | |

5. (ಅ) ಉಪವಿಧಿಗಳ ಪ್ರಕಾರ ಹೊರಗಡೆಯಿಂದ ತರಬಹುದಾದ ಸಾಲದ ಪರಿಮಿತಿ

(ಆ) ಹೊರಗಡೆಯಿಂದ ತಂದ ಸಾಲದ ಒಟ್ಟು ಮೊಬಲಗು

(ಇ) ಸದಸ್ಯರ ಆಸ್ತಿಯ ಒಟ್ಟು ನಿವ್ವಳ ಬೆಲೆ. (ಸಾಲಗಳ ಬಗ್ಗೆ ಈ ವಿವರ ತಿಳಿಸಬೇಕು)

6. ಉಪವಿಧಿಗಳ ಪ್ರಕಾರ ವೈಯುಕ್ತಿಕ ಸಾಲಗಳ ಪರಿಮಿತಿ

7. ಹಿಂದಿನ 3 ವರ್ಷಗಳ ಲಾಭ ಅಥವಾ ನಷ್ಟ

ಉಪವಿಧಿಗಳನ್ನು ತಿದ್ದುಪಡಿ ಮಾಡುವಾಗ ಅನುಸರಿಸಬೇಕಾದ ನೀತಿ ನಿಯಮಗಳು:

1. ಆಡಳಿತ ಮಂಡಳಿಯು ಉಪವಿಧಿಗಳ ತಿದ್ದುಪಡಿಯ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು.

ಟಿಪ್ಪಣಿ: ಈ ತಿದ್ದುಪಡಿಗಳನ್ನು ಸೂಚಿಸಿ ಚರ್ಚಿಸುವಾಗ, ಆಡಳಿತ ಮಂಡಳಿಯು ಗಮನಿಸಬೇಕಾದ ಅಂಶಗಳೇನೆಂದರೆ ಈ ತಿದ್ದುಪಡಿ ಪ್ರಸ್ತಾವನೆ ಸಹಕಾರಿ ಕಾಯಿದೆ ಮತ್ತು ನಿಯಮಗಳಿಗೆ ವಿರುದ್ಧವಾಗಿಲ್ಲವೆಂಬುದನ್ನು ದೃಢೀಕರಿಸುವುದು, ಸಹಕಾರಿ ತತ್ವಗಳಿಗೆ ವಿರುದ್ಧವಲ್ಲವೆಂದು ಹಾಗೂ ಸುಭದ್ರ ಆರ್ಥಿಕ ವ್ಯವಸ್ಥೆಗೆ ಅಗತ್ಯತೆ ಇದೆ ಎಂದು ಮತ್ತು ಸಹಕಾರಿ ಸದಸ್ಯರ ಆರ್ಥಿಕ ಹಿತಾಸಕ್ತಿಗೆ ಪೂರಕವಾಗಿದೆಯೆಂದು ಹಾಗೂ ಸಾಮಾಜಿಕ ನ್ಯಾಯ ತತ್ವಗಳಿಗೆ ಅಸಂಗತವಾಗಿಲ್ಲವೆಂದು ದೃಡೀಕರಿಸಿಕೊಳ್ಳತಕ್ಕದ್ದು.

2. ಯಾವ ಉಪವಿಧಿಗಳಿಗೆ ಆಡಳಿತ ಮಂಡಳಿ ಒಪ್ಪಿಗೆ ಕೊಡುತ್ತದೆಯೋ ಅಂತಹ ಉಪನಿಯಮಗಳ ತಿದ್ದುಪಡಿಗೆ ವಾರ್ಷಿಕ ಮಹಾಸಭೆಯಲ್ಲಿ ಅಥವಾ ವಿಶೇಷ ಮಹಾಸಭೆಯಲ್ಲಿ ಒಪ್ಪಿಗೆ ಪಡೆಯಲು ಪ್ರಸ್ತಾವನೆಯನ್ನು ತಯಾರಿಸುವುದು.

3.ಮಹಾಸಭೆ ಅಥವಾ ವಿಶೇಷ ಮಹಾಸಭೆ ನೋಟೀಸ್ ಜಾರಿ ಮಾಡುವಾಗ ಕನಿಷ್ಟ 20 ದಿವಸಗಳ ನೋಟೀಸನ್ನು ಕೊಡಬೇಕು.

4. ಮಹಾಸಭೆಯ ಒಪ್ಪಿಗೆ ಪಡೆಯುವ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳೇನೆಂದರೆ ಒಂದು ಸಹಕಾರಿಯ ಒಟ್ಟು ಸದಸ್ಯರು, ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ, ಮತದಾನ ಹಕ್ಕುಳ್ಳ ಸದಸ್ಯರ ಸಂಖ್ಯೆ, ತಿದ್ದುಪಡಿಗೆ ಒಪ್ಪಿಗೆ ಸೂಚಿಸಿದ ಸದಸ್ಯರ ಸಂಖ್ಯೆ, ಮತದಾನಕ್ಕೆ ಅವಶ್ಯಕವಾದ 2/3 ಅಂಶದ ಸದಸ್ಯರ ಸಂಖ್ಯೆ, ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸಿದ ಸದಸ್ಯರ ಸಂಖ್ಯೆ, ಮತ ಚಲಾಯಿಸಲು ಗೈರು ಹಾಜರಾದ ಸದಸ್ಯರ ಸಂಖ್ಯೆಯನ್ನು ದೃಢೀಕರಿಸಿಕೊಳ್ಳತಕ್ಕದ್ದು. ಹಾಜರಿದ್ದ ಸದಸ್ಯರಲ್ಲಿ ಮತದಾನ ಮಾಡಿದ ಸದಸ್ಯರ 2/3 ಅಂಶದ ಸದಸ್ಯರು ತಿದ್ದುಪಡಿಗೆ ಪರವಾಗಿ ಮತ ಚಲಾಯಿಸದಿದ್ದರೆ ಅಂತಹ ತಿದ್ದುಪಡಿಗೆ ಒಪ್ಪಿಗೆ ಸಿಕ್ಕಿಲ್ಲವೆಂದು ಅರ್ಥೈಸಿಕೊಳ್ಳತಕ್ಕದ್ದು. ಅಂತಹ ಸಂದರ್ಭದಲ್ಲಿ ತಿದ್ದುಪಡಿ ಅವಶ್ಯಕತೆ ಇದೆಯೆಂದು ಸಹಕಾರಿ ತೀರ್ಮಾನಿಸಿದರೆ, ಮತ್ತೊಮ್ಮೆ ಸಾಮಾನ್ಯ ಅಥವಾ ವಿಶೇಷ ಮಹಾಸಭೆಯನ್ನು ಕರೆದು ತಿದ್ದುಪಡಿಯನ್ನು ಅಂಗೀಕರಿಸಲು ವ್ಯವಸ್ಥೆ ಮಾಡತಕ್ಕದ್ದು. 2/3 ಅಂಶದ ಸದಸ್ಯರು ಮತ ಚಲಾಯಿಸಿ ತಿದ್ದುಪಡಿಗೆ ಒಪ್ಪಿಗೆ ಕೊಟ್ಟಾಗ, ಆ ತಿದ್ದುಪಡಿ ಪ್ರಸ್ತಾವನೆಯನ್ನು ಸಭಾಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಸಂಬಂಧಪಟ್ಟ ನಿಬಂಧಕರಿಗೆ ಮಹಾಸಭೆ ಅಥವಾ ವಿಶೇಷ ಮಹಾ ಸಭೆ ನಡೆದ 60 ದಿವಸದೊಳಗಾಗಿ ಪ್ರಸ್ತಾವನೆ ಸಲ್ಲಿಸಲು ವ್ಯವಸ್ಥೆ ಮಾಡತಕ್ಕದ್ದು. ಯಾವುದಾದರೂ ಅನಾನುಕೂಲತೆಯಿಂದ ಪ್ರಸ್ತಾವನೆಯನ್ನು 60 ದಿವಸದೊಳಗಾಗಿ ಸಲ್ಲಿಸಲು ಸಾಧ್ಯವಾಗದೆ ಇದ್ದ ಸಂದರ್ಭದಲ್ಲಿ, ಸಕಾರಣಗಳೊಂದಿಗೆ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿ ವಿಳಂಬಕ್ಕೆ ಕಾರಣವನ್ನು ಸ್ಪಷ್ಟವಾಗಿ ತಿಳಿಸಿ, ವಿಳಂಬ ವಿನಾಯ್ತಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

ನಿಬಂಧಕರು ಪ್ರಸ್ತಾವನೆಯನ್ನು ಸ್ವೀಕರಿಸಿದಾಗ ವಿಳಂಬ ವಿನಾಯಿತಿ ಅರ್ಜಿಯನ್ನು ವಿಲೇವಾರಿ ಮಾಡದೇ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಶೀಲಿಸತಕ್ಕದ್ದಲ್ಲ. ವಿಳಂಬ ವಿನಾಯಿತಿಗೆ ಒಪ್ಪಿಗೆ ಕೊಟ್ಟ ನಂತರವೇ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಶೀಲಿಸತಕ್ಕದ್ದು.

ವಿಳಂಬ ವಿನಾಯ್ತಿ ಮಂಜೂರಾತಿ ಮಾಡಿದ ನಂತರ ತಿದ್ದುಪಡಿ ಪ್ರಸ್ತಾವನೆಯನ್ನು ಪರಿಶೀಲಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸತಕ್ಕದ್ದು.

1. ಉಪನಿಯಮಗಳ ತಿದ್ದುಪಡಿಯ ಒಪ್ಪಿಗೆಯಾದ ನಿರ್ಣಯದ ನಕಲು
2. 5 ಪ್ರತಿಗಳಲ್ಲಿ ತಿದ್ದಪಡಿಗಳ ಪ್ರಸ್ತಾವನೆ (ನಮೂನೆ 1ರಿಂದ 6ರ 5 ಪ್ರತಿಗಳು)
3. ಪ್ರತಿಯೊಂದು ತಿದ್ದುಪಡಿ ಪ್ರಸ್ತಾವನೆಗೂ ಪಾವತಿ ಮಾಡಬೇಕಾದ ಶುಲ್ಕ ಈ ಕೆಳಕಂಡಂತೆ ಇರತಕ್ಕದ್ದು.

| ಕ್ರಮ ಸಂಖ್ಯೆ | ಸಂಘದ ಕಾರ್ಯವ್ಯಾಪ್ತಿ | ಶುಲ್ಕ |
|---|---|---|
| ರೂ. | ತಾಲ್ಲೂಕಿಗಿಂತ ಕಡಿಮೆ | 400–00 |
| 2 | ತಾಲ್ಲೂಕು ಮತ್ತು ಅದಕ್ಕೂ ಹೆಚ್ಚು ಆದರೆ ಜಿಲ್ಲೆಗಿಂತ ಕಡಿಮೆ | 1000–00. |
| 3 | ಜಿಲ್ಲೆ ಮಟ್ಟ ಮತ್ತು ಅದಕ್ಕೂ ಹೆಚ್ಚಿದ್ದರೆ | 2000–00 |

ಉಪವಿಧಿ ತಿದ್ದುಪಡಿಗೆ ನಿರ್ದಿಷ್ಟಪಡಿಸಿದ ವಿಧಾನಗಳನ್ನು ಅನುಸರಿಸಲಾಗಿದೆ ಎಂಬ ಬಗ್ಗೆ ಸರ್ವಸದಸ್ಯರ/ವಿಶೇಷ ಸಭೆಯ ಅಧ್ಯಕ್ಷತೆ ವಹಿಸಿದವರ ಸಹಿ ಮಾಡಿದ ಪ್ರಮಾಣ ಪತ್ರ, ನಿಬಂಧಕರು ಇನ್ನಾವುದೇ ವಿವರಗಳನ್ನು ಕೇಳಿದರೆ ಅದನ್ನು ಒದಗಿಸತಕ್ಕದ್ದು.

ಸೂಚನೆ:– ಉಪವಿಧಿಗಳ ತಿದ್ದುಪಡಿ ಸಾಮಾನ್ಯ ಸಭೆ ಅಥವಾ ವಿಶೇಷ ಸಾಮಾನ್ಯ ಸಭೆಯಲ್ಲಿ ಚರ್ಚೆ ಮಾಡುವಾಗ ಸಹಕಾರಿ ಸಲ್ಲಿಸಿದ ಪ್ರಸ್ತಾವನೆಗೆ ಮಾರ್ಪಾಡು ಮಾಡಲು/ಪದಗಳನ್ನು ಮರು ವಿಂಗಡಣೆ ಮಾಡಲು ತೀರ್ಮಾನಿಸಿದರೆ, ಆ ತೀರ್ಮಾನವೂ ಮತಚಲಾಯಿಸುವ ಹಕ್ಕುಳ್ಳ 2/3 ಸದಸ್ಯರ ಒಪ್ಪಿಗೆಯಿಂದ ಮಾಡಲಾಗಿದೆ ಎಂದು ಸಭಾಧ್ಯಕ್ಷರು ಪ್ರಮಾಣೀಕರಿಸತಕ್ಕದ್ದು. ಅಂದರೆ ಆಡಳಿತ ಮಂಡಳಿ ಸೂಚಿಸಿದ ತಿದ್ದುಪಡಿ ಪ್ರಸ್ತಾವನೆಯನ್ನು ಸರ್ವಸದಸ್ಯರ ಸಭೆಯಲ್ಲಿ ಒಪ್ಪಲೇಬೇಕೆಂಬ ಶರತ್ತು ವಿಧಿಸಲಾಗದು. ಆದರೆ ಮಾರ್ಪಾಡು ಸೂಚಿಸಿದ ಸದಸ್ಯರು 2/3 ಮತದಾನದ ಹಕ್ಕುಳ್ಳ ಸದಸ್ಯರು ಎಂದು ದೃಡೀಕರಿಸುವುದು ಸಭಾಧ್ಯಕ್ಷರ ಕರ್ತವ್ಯ.

ಈ ಮೇಲ್ಕಂಡ ಅಂಶಗಳನ್ನು ದೃಢೀಕರಿಸಿಕೊಂಡ ನಂತರ ಕಛೇರಿಯಲ್ಲಿ ಪರಿಶೀಲಿಸುವಾಗ ಅನುಸರಿಸಲೇಬೇಕಾದ ಅಂಶಗಳು (ಚೆಕ್‌ಲಿಸ್ಟ್)

1. ತಿದ್ದುಪಡಿ ಪ್ರಸ್ತಾವನೆಯನ್ನು ಕಾನೂನು ಮತ್ತು ನಿಯಮಕ್ಕನುಸಾರವಾಗಿ ಮಂಡಿಸಲಾಗಿದೆಯೇ (ಹೌದು/ಇಲ್ಲ)
2. ಈ ತಿದ್ದುಪಡಿ ಪ್ರಸ್ತಾವನೆಯು ಕಾನೂನು ಮತ್ತು ನಿಯಮಗಳಿಗೆ ವಿರುದ್ಧವಾಗಿವೆಯೇ? (ಹೌದು/ಇಲ್ಲ)
3. ಈ ತಿದ್ದುಪಡಿಯು ಸಹಕಾರಿ ತತ್ವಗಳಿಗೆ ವಿರುದ್ಧವಾಗಿಲ್ಲ ಎಂಬುದನ್ನು ದೃಡೀಕರಿಸುವುದೇ (ಹೌದು/ಇಲ್ಲ)
4. ಈ ತಿದ್ದುಪಡಿ ಪ್ರಸ್ತಾವನೆಯಿಂದ ಸಹಕಾರಿಯ ವ್ಯಾಪಾರಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದೆ (ಹೌದು/ಇಲ್ಲ)
5. ಸದಸ್ಯರ ಆರ್ಥಿಕ ಬೆಳವಣಿಗೆಗೆ ಪೂರಕವಾಗಿದೆ (ಹೌದು/ಇಲ್ಲ)
6. ಈ ತಿದ್ದುಪಡಿಯು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿಲ್ಲವೇ (ಹೌದು/ಇಲ್ಲ)
7. ಈ ತಿದ್ದುಪಡಿ ಪ್ರಸ್ತಾವನೆಯು ಹಾಜರಿದ್ದ ಮತ ಚಲಾಯಿಸಿದ ಸದಸ್ಯರ 2/3 ಅಂಶದ ಬಹುಮತದಿಂದ ಒಪ್ಪಿಗೆಯಾಗಿದೆಯೇ (ಹೌದು/ಇಲ್ಲ)
8. ಈ ತಿದ್ದುಪಡಿಯನ್ನು ಮಹಾಸಭೆ/ವಿಶೇಷ ಮಹಾಸಭೆ ಒಪ್ಪಿಗೆ ಕೇಳಿ ಕಳುಹಿಸಿದ ನೋಟೀಸಿನಲ್ಲಿ ಅಚ್ಚು ಹಾಕಿಸಿ ಎಲ್ಲ ಸದಸ್ಯರಿಗೂ ರವಾನಿಸಲಾಗಿದೆಯೇ (ಹೌದು/ಇಲ್ಲ)
9. ಮಹಾಸಭೆ/ವಿಶೇಷ ಮಹಾಸಭೆ ನೋಟೀಸ್ ಕಳುಹಿಸುವಾಗ 20 ದಿವಸ ಪೂರ್ವದ ನೋಟೀಸ್ ಕೊಡಲಾಗಿದೆಯೇ ಮತ್ತು ಈ ನೋಟೀಸ್‌ನಲ್ಲಿ ಸಭೆಯ ದಿನಾಂಕ, ವೇಳೆ ಮತ್ತು ಸ್ಥಳವನ್ನು ಸ್ಪಷ್ಟವಾಗಿ ನಮೂದಿಸಲಾಗಿದೆಯೇ (ಹೌದು/ಇಲ್ಲ)
10. ನೋಟೀಸ್ ರವಾನಿಸುವಾಗ ನೋಟೀಸ್ ನೀಡುವ ಅಧಿಕಾರಿ ನೋಟೀಸ್ ಕೊಡಲು ಅಧಿಕಾರ ಹೊಂದಿದ್ದಾರೆಯೇ ಮತ್ತು ಆ ಅಧಿಕಾರಿ ಸಹಿ ಮಾಡಿದ್ದಾರೆಯೇ (ಹೌದು/ಇಲ್ಲ)
11. ಈ ತಿದ್ದುಪಡಿ ಪ್ರಸ್ತಾವನೆಯ ಜೊತೆ 5 ಪ್ರತಿಗಳಲ್ಲಿ ನಮೂನೆ 1 ರಿಂದ 6 ಲಗತ್ತಿಸಲಾಗಿದೆಯೇ (ಹೌದು/ಇಲ್ಲ)
12. ಈ ಎಲ್ಲ ಪ್ರತಿಗಳಲ್ಲಿಯೂ ಭರ್ತಿ ಮಾಡಬೇಕಾದ ಎಲ್ಲ ಅಂಶಗಳನ್ನು ದಾಖಲಾಸಿಲಾಗಿದೆಯೇ (ಹೌದು/ಇಲ್ಲ)
13. ಈ ತಿದ್ದುಪಡಿ ಪ್ರಸ್ತಾವನೆಯನ್ನು ಮಹಾಸಭೆಯಲ್ಲಿ ಮಂಡಿಸಿದಾಗ ಸೂಚಕರು ಮತ್ತು ಅನುಮೋದಕರ ಹೆಸರು ದಾಖಲ್ಮಾಡಲಾಗಿದೆಯೇ (ಹೌದು/ಇಲ್ಲ)
14. ತಿದ್ದುಪಡಿ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿದ ಸದಸ್ಯರ ಅಭಿಪ್ರಾಯ ದಾಖಲಿಸಲಾಗಿದೆಯೇ (ಹೌದು/ಇಲ್ಲ)
15. ಸಭಾಧ್ಯಕ್ಷತೆ ವಹಿಸಿದ್ದವರು ಮೂಲ ಪ್ರಸ್ತಾವನೆ ಪ್ರತಿಗಳಿಗೆ ಸಹಿ ಮಾಡಿದ್ದಾರೆಯೇ ಮತ್ತು ನಿಯಮಗಳಂತೆ ತಿದ್ದುಪಡಿ ಪ್ರಸ್ತಾವನೆಯನ್ನು ಒಪ್ಪಲಾಗಿದೆಯೆಂದು ಪ್ರಮಾಣ ಪತ್ರ ಸಲ್ಲಿಸಿದ್ದಾರೆಯೇ (ಹೌದು/ಇಲ್ಲ)
16. ಪ್ರಸ್ತಾವನೆ ಅಮೂಲಾಗ್ರ ಉಪವಿಧಿಗಳ ತಿದ್ದುಪಡಿಯೇ ಅಥವಾ ಕೆಲವೇ ಉಪವಿಧಿಗಳ ತಿದ್ದುಪಡಿಗೆ ಸಲ್ಲಿಸಲಾಗಿದೆಯೇ (ಸಮಗ್ರ/ಕೆಲವು)
17. ಯಾವ ಉಪವಿಧಿಗಳನ್ನು ತಿದ್ದುಪಡಿ ಮಾಡಲಾಗಿದೆಯೋ, ಆ ಉಪವಿಧಿಗಳು ತಿದ್ದುಪಡಿ ಆದ ನಂತರ ಯಾವ ರೀತಿ ಇರುತ್ತದೆಂಬುದನ್ನು ಲಗತ್ತಿಸಿದ್ದಾರೆಯೇ (ಹೌದು/ಇಲ್ಲ)
18. ಉಪವಿಧಿಗಳನ್ನು ರಚಿಸಿದ ಭಾಷೆಯಲ್ಲಿಯೇ ತಿದ್ದುಪಡಿಗೆ ಒಪ್ಪಿಗೆಗೆ ಸಲ್ಲಿಸಲಾಗಿದೆಯೇ (ಹೌದು/ಇಲ್ಲ)

19. ಸಹಕಾರಿಯ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮತ್ತು ಈ ತಿದ್ದುಪಡಿಯಿಂದ ಸಹಕಾರಿಗೆ ಆಗುವ ಭಾಧ್ಯತೆಗಳನ್ನು ನಮೂದಿಸಿ ಪ್ರಸ್ತಾವನೆ ಸಲ್ಲಿಸಿದ್ದಾರೆಯೇ ಮತ್ತು ಈ ತಿದ್ದುಪಡಿಯ ಅವಶ್ಯಕತೆ ಇದೆಯೇ (ಹೌದು/ಇಲ್ಲ)

20. ಈ ತಿದ್ದುಪಡಿಗಳನ್ನು ಅಚ್ಚು ಹಾಕಿಸಲಾಗಿದೆಯೇ? ಬೆರಳಚ್ಚು ಮಾಡಿಸಲಾಗಿದೆಯೇ (ಹೌದು/ಇಲ್ಲ)

21. ಈ ಪ್ರಸ್ತಾವನೆಗೆ ಸಭಾಧ್ಯಕ್ಷರು ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹಿಯ ಜೊತೆ ಸಿಕ್ಕಾ (ಸೀಲ್) ಹಾಕಿದ್ದಾರೆಯೇ (ಹೌದು/ಇಲ್ಲ)

22. ಪ್ರಸ್ತಾವನೆಯನ್ನು ಸಲ್ಲಿಸುವಾಗ ನಿಬಂಧಕರ ಒಪ್ಪಿಗೆಗಾಗಿ ಎಲ್ಲ ಮಾಹಿತಿಯನ್ನು ಲಗತ್ತಿಸಿದ್ದಾರೆಯೇ (ಹೌದು/ಇಲ್ಲ)

23. ಪ್ರಸ್ತಾವನೆಯನ್ನು ಸಭೆ ನಡೆದ 60 ದಿವಸಗಳ ಒಳಗಾಗಿ ಸಲ್ಲಿಸಲಾಗಿದೆಯೇ (ಹೌದು/ಇಲ್ಲ)

24. ಈ ಪ್ರಸ್ತಾವನೆಗೆ ಸಾಲಗಾರರಿಂದ ಒಪ್ಪಿಗೆ ಪಡೆಯಲಾಗಿದೆಯೇ ಅಥವಾ ಸದಸ್ಯರಿಗೆ ಕೊಡಬೇಕಾದ ಹಣದ ಬಾಕಿಗಳನ್ನು ಚುಕ್ತ ಮಾಡಲಾಗಿದೆಯೇ ಎಂಬುದನ್ನು ದೃಢೀಕರಿಸಲಾಗಿದೆಯೇ (ಹೌದು/ಇಲ್ಲ)

ಉಪವಿಧಿಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾವನೆ ಸಲ್ಲಿಸಿದಾಗ ಸಂಬಂಧಪಟ್ಟ ನಿಬಂಧಕರು ಕಾಯಿದೆಯಲ್ಲಿ ನಮೂದಿಸಿರುವ ಷರತ್ತಿಗೊಳಪಟ್ಟು ಒಪ್ಪಿಗೆ ಸೂಚಿಸಬಹುದು ಅಥವಾ ಆ ತಿದ್ದುಪಡಿಯನ್ನು ತಿರಸ್ಕರಿಸಬಹುದು.ಯಾವ ಪ್ರಸಂಗದಲ್ಲಿ ತಿದ್ದುಪಡಿಯನ್ನು ತಿರಸ್ಕರಿಸಲಾಗುತ್ತದೋ ಅಂತಹ ತಿದ್ದುಪಡಿಗಳಿಗೆ ತಿರಸ್ಕರಿಸಲಾದ ಉಪವಿಧಿಗಳಿಗೆ ಸಕಾರಣಗಳನ್ನು ಕೊಟ್ಟು ತಿರಸ್ಕರಿಸಬೇಕು.ಸಂಯುಕ್ತ ಸಹಕಾರಿ ಮಾದರಿ ಉಪವಿಧಿಗಳನ್ನು ರಚಿಸಿಕೊಟ್ಟಿದ್ದರೂ ಅದೇ ಪದಗಳನ್ನು ಉಪಯೋಗಿಸಬೇಕೆಂಬ ನಿಯಮವಿಲ್ಲ. ಮಾದರಿ ಉಪವಿಧಿಗಳನ್ನು ಮಾರ್ಗದರ್ಶಿ ಸೂತ್ರಗಳೆಂದು ಪರಿಗಣಿಸಬೇಕು ಮತ್ತು ಸಂಬಂಧಪಟ್ಟ ಸಹಕಾರಿಗೆ ಅನುಕೂಲವಾಗುವ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಸಂಬಂಧಪಟ್ಟ ಸಹಕಾರಿಗೆ ಅಧಿಕಾರ ಇರತಕ್ಕದ್ದು.ಆದರೆ ಈ ಅಧಿಕಾರವು ಕಾನೂನು ಮತ್ತು ನಿಯಮಗಳಿಗೆ ವಿರುದ್ಧವಾಗಿಲ್ಲದಿದ್ದರೆ, ಆ ಉಪವಿಧಿಗಳನ್ನು ನೋಂದಾಯಿಸಲು ನಿಬಂಧಕರು ಜವಾಬ್ದಾರರಾಗಿರತಕ್ಕದ್ದು.ಮಾದರಿ ಉಪವಿಧಿಗಳಿಗೆ ವಿರುದ್ದವಾಗಿದೆ ಎಂಬ ಕಾರಣಕ್ಕಾಗಿಯೇ ತಿದ್ದುಪಡಿಗಳನ್ನು ತಿರಸ್ಕರಿಸತಕ್ಕದ್ದಲ್ಲ. ನಿಬಂಧಕರು ತಿದ್ದುಪಡಿಗೆ ಒಪ್ಪಿಗೆ ಕೊಡುವಾಗ, ಮಾಡಿದ ಮಾರ್ಪಾಡು, ಆರ್ಥಿಕವಾಗಿ ಒಪ್ಪಿಗೆ ನೀಡಬಹುದೇ ಎಂಬುದನ್ನು ಪರಿಶೀಲಿಸಬೇಕು. ಉದಾಹರಣೆಗೆ ಒಂದು ಸಹಕಾರಿ ತನ್ನ ಉಪವಿಧಿಗಳಲ್ಲಿ ಸಹಕಾರಿ ಮಂಡಳಿ ಸದಸ್ಯರಿಗೆ, ಆ ಸಹಕಾರಿಯು ದುಡಿಯುವ ಬಂಡವಾಳ/ವಹಿವಾಟಿನ ಶೇ.3–5 ಹಣವನ್ನು ಮಂಡಳಿ ಸದಸ್ಯರಿಗೆ ಸಂಭಾವನೆ ನೀಡಬಹುದು ಎಂದು ಸೇರಿಸಿದ್ದರೆ, ಆ ಸಹಕಾರಿಯ ದುಡಿಯುವ ಬಂಡವಾಳ ವಹಿವಾಟು ಪರಿಶೀಲಿಸಿ ಒಪ್ಪಿಗೆ ನೀಡಬೇಕು. ಒಂದು ಸಹಕಾರಿಯು ದುಡಿಯುವ ಬಂಡವಾಳ ರೂ.500/– ಕೋಟಿ ಇದ್ದರೆ, ಅಂತಹ ಸಂದರ್ಭದಲ್ಲಿ ಶೇಕಡಾ 3–5ರ ಬದಲಾಗಿ, ಗರಿಷ್ಠ ಮಿತಿಯನ್ನು ನಿಗದಿ ಪಡಿಸಬೇಕು. ಸಭಾ ಭತ್ಯ, ಪ್ರವಾಸ ಭತ್ಯ, ವಸತಿ ಭತ್ಯಗಳಿಗೆ ಗರಿಷ್ಠ ಮಿತಿ ನಿಗದಿ ಪಡಿಸಬೇಕು. (ಅಂದರೆ ಸಭಾ ಭತ್ಯೆ ರೂ.2000/–ಕ್ಕೆ ಮೀರತಕ್ಕದ್ದಲ್ಲ. ವಸತಿ ಭತ್ಯೆ ರೂ.1000/–ಕ್ಕೆ ಮೀರತಕ್ಕದ್ದಲ್ಲ ಅಥವಾ ಪ್ರವಾಸ ಭತ್ಯೆ ಮೊದಲನೇ ದರ್ಜೆ ರೈಲು ಪ್ರಮಾಣ ದರಕ್ಕಿಂತ ಹೆಚ್ಚಿರತಕ್ಕದ್ದಲ್ಲ ಇತ್ಯಾದಿ)

**ಉಪವಿಧಿಗಳ ತಿದ್ದುಪಡಿಗಳ ಜಾರಿ:**

ಉಪವಿಧಿಗಳನ್ನು ನಿಬಂಧಕರು ತಿದ್ದುಪಡಿ ಮಾಡಿ ಒಪ್ಪಿಗೆ ಕೊಟ್ಟು ನೋಂದಾಯಿಸಿದಾಗ ಆ ತಿದ್ದುಪಡಿಯನ್ನು ಯಾವ ದಿನಾಂಕದಂದು ನೋಂದಾವಣೆ ಮಾಡಲಾಗಿದೆಯೋ, ಆ ದಿನದಿಂದ ಜಾರಿಯಾಗತಕ್ಕದ್ದು ಅಥವಾ ನಿಬಂಧಕರು ಮುಂದೆ ಯಾವುದಾದರೂ ದಿನಾಂಕವನ್ನು ನಿಗಧಿಪಡಿಸಿ ಆ ಉಪವಿಧಿ ಜಾರಿಗೆ ಬರುತ್ತದೆಂದು ಸೂಚಿಸುತ್ತಾರೋ ಆ ದಿನಾಂಕದಂದು ಜಾರಿಗೆ ಬರತಕ್ಕದ್ದು.ಅಂದರೆ ನಿಬಂಧಕರು ಉಪವಿಧಿಗಳ ತಿದ್ದುಪಡಿಗೆ ಒಪ್ಪಿಗೆ ಕೊಟ್ಟಾಗ, ಆ ಒಪ್ಪಿಗೆಯನ್ನು ಪೂರ್ವಾನ್ವಯವಾಗುವಂತೆ ನೋಂದಾಯಿಸತಕ್ಕದ್ದಲ್ಲ. ಹಾಗೂ ಮಹಾಸಭೆಯಲ್ಲಿ ತಿದ್ದುಪಡಿಗೆ ಒಪ್ಪಿಗೆ ಪಡೆದ ದಿನಾಂಕದಂದು ಜಾರಿಗೆ ಬರುತ್ತದೆಂದೂ ಸಹ ನಿಬಂಧಕರು ಆದೇಶ ಹೊರಡಿಸತಕ್ಕದ್ದಲ್ಲ.

**ತಿದ್ದುಪಡಿಗೆ ಸಂಬಂಧಪಟ್ಟಂತೆ ತೀರ್ಪುಗಳು:**

1. ತಿದ್ದುಪಡಿ ಪ್ರಸ್ತಾವನೆಯನ್ನು ನಿಬಂಧಕರಿಗೆ ಸಲ್ಲಿಸಿದಾಗ ಆ ಪ್ರಸ್ತಾವನೆಯನ್ನು ತೀರ್ಮಾನಿಸುವುದು ನಿಬಂಧಕರ ಕಾನೂನುಬದ್ದ ಕರ್ತವ್ಯ. ನಿಬಂಧಕರು ಆಲಸ್ಯತೆಯನ್ನು ಗಂಭೀರವಾಗಿ ಅವಲೋಕಿಸಬೇಕಾಗುತ್ತದೆ. ಕರ್ತವ್ಯಲೋಪ, ಕರ್ತವ್ಯದ ಉಲ್ಲಂಘನೆಯಾದಂತೆ. 1988 (3) ಕೆಎಲ್ಆರ್ 2179

2. ಒಂದು ಸಹಕಾರ ಸಂಘದ ಉಪನಿಯಮಗಳ ತಿದ್ದುಪಡಿ ಮುಖಾಂತರ ಮತ್ತೊಂದು ಸಂಘದ ಕಾರ್ಯವ್ಯಾಪ್ತಿಗೆ ವಿಸ್ತರಿಸಲಾಗಿದ್ದರೆ,

ಅಂತಹ ತಿದ್ದುಪಡಿಗೆ ಒಪ್ಪಿಗೆ ಕೊಡುವ ಪೂರ್ವದಲ್ಲಿ ಸಂಬಂಧಪಟ್ಟ ಸಹಕಾರ ಸಂಘಕ್ಕೆ ನೋಟೀಸ್ ಜಾರಿ ಮಾಡತಕ್ಕದ್ದು. 1981(1) ಕೆಎಲ್‌ಜೆ ಎಸ್‌ಎನ್ 71 (ಡಿಬಿ)

3. ಒಂದು ಉಪನಿಯಮಗಳ ತಿದ್ದುಪಡಿ ಸರ್ವಸದಸ್ಯರ ನಿರ್ಣಯಗಳ ರೂಪದಲ್ಲಿ ತರಬೇಕು ಮತ್ತು ಈ ನಿರ್ಣಯ ಬಹುಮತದಿಂದ ಒಪ್ಪಿಗೆಯಾಗಿರಬೇಕು. ಬಹುಮತ ಎಂದರೆ ಸಭೆಯಲ್ಲಿ ಹಾಜರಿದ್ದು ಮತ ನೀಡಿದವರಲ್ಲಿ 2/3ರಷ್ಟು ಸಂಖ್ಯೆ ಮತದಾರರು ಠರಾವಿನ ಪರವಾಗಿ ಮತ ನೀಡಿರಬೇಕು. ಹಾಜರಿದ್ದು ಮತ ನೀಡಿದ ಸದಸ್ಯರು ಎಂದರೆ ಅವರು ಮತ ನೀಡಲಿ, ಬಿಡಲಿ ಸಭೆಯಲ್ಲಿ ಹಾಜರಿದ್ದ ಸದಸ್ಯರು ಎಂದರ್ಥ. ಮತ ನೀಡಿದವರು ಮಾತ್ರ ಎಂದರ್ಥವಾಗುವುದಿಲ್ಲ. 1996(1) ಎಂವೈಎಸ್ ಎಲ್‌ಜೆ 215.

4. ಉಪನಿಯಮವನ್ನು ತಿದ್ದುಪಡಿ ಮಾಡಿದಾಗ ಮತ್ತು ಅದಕ್ಕೆ ಒಪ್ಪಿಗೆ ಕೊಟ್ಟಾಗ ಅದನ್ನು ಕಾಲ್ಪನಿಕ ಎಂದು ತಿಳಿಯತಕ್ಕದ್ದಲ್ಲ. ನಿರ್ದಿಷ್ಟಪಡಿಸಿದ ದಿನದಂದು ಎಂಬ ಶಬ್ದದ ಅರ್ಥವನ್ನು ಮುಂದೆ ಬರುವ ದಿನವೆಂದು ಅರ್ಥೈಸಬೇಕೇ ವಿನಹ ನೋಂದಣಿ ಮಾಡಿದ ಮುಂಚಿನ ದಿನವೆಂದು ಅರ್ಥ ಮಾಡಲಾಗದು. 1980(1) ಕೆಎಲ್‌ಜೆ 475.

5. ಕೆಲವು ವ್ಯಕ್ತಿಗಳನ್ನು ಸದಸ್ಯತನದಿಂದ ಕಿತ್ತುಹಾಕಲು ಮತ್ತು ಅವರ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ತೆಗೆದುಹಾಕಲು ಮಾಡಿದ ತಿದ್ದುಪಡಿ ಉಪನಿಯಮಗಳು ಅಸಿಂಧುವಾಗತಕ್ಕದ್ದು. 1985(1) ಕೆಎಲ್‌ಜೆ ಎಸ್‌ಎನ್ 211.

6. ಒಂದು ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡಲು ನಿಬಂಧಕರು ಸೂಚಿಸಿದರೂ ಆ ಸಂಘದ ಮಹಾಸಭೆ ನಿಬಂಧಕರು ಪ್ರಸ್ತಾಪಿಸಿದ ಉಪನಿಯಮದ ತಿದ್ದುಪಡಿ ತಿರಸ್ಕರಿಸಿತು. ನಿಬಂಧಕರು ಆ ತಿರಸ್ಕರಿಸಿದ ಉಪನಿಯಮಗಳನ್ನು ಸಂಘಕ್ಕೆ ನೋಟೀಸ್ ಕೊಡಲಾರದೆ ನೋಂದಾಯಿಸಿದರು. ನಿಬಂಧಕರು ಸಂಘಕ್ಕೆ ಅವಕಾಶ ಕಲ್ಪಿಸದೆ ಮತ್ತು ಮಹಾಸಭೆಯಲ್ಲಿ ಸೂಚಿತ ತಿದ್ದುಪಡಿಯನ್ನು ತಿರಸ್ಕರಿಸಲು ಕಾರಣ ಕೇಳದೆ ನೋಂದಾಯಿಸಿರುವುದು ತಪ್ಪು. ಎಐಆರ್ 1958 ಬಾಂಬೆ 330.

7. ಒಂದು ಸಹಕಾರ ಸಂಘ ಸ್ವಯಂಸ್ಫೂರ್ತಿಯಿಂದ ತನ್ನ ಉಪನಿಯಮಗಳನ್ನು ತಿದ್ದುಪಡಿ ಮಾಡಬಹುದು. ಅಥವಾ ನಿಬಂಧಕರ ಸೂಚನೆ ಅಥವಾ ನಿರ್ದೇಶನದಂತೆ ತಿದ್ದುಪಡಿ ಮಾಡಬಹುದು. ಆ ವಿಷಯವನ್ನು ಮಹಾಸಭೆ ಒಪ್ಪದೆ ಇದ್ದಾಗ ಅದಕ್ಕೆ ಕಾರಣಗಳನ್ನು ತಿಳಿಯತಕ್ಕದ್ದು. ಈ ತಿದ್ದುಪಡಿಯ ಅವಶ್ಯಕತೆಯನ್ನು ಸಾಮಾನ್ಯ ಸದಸ್ಯರಿಗೆ ತಿದ್ದುಪಡಿ ಮಾಡಲು ಕಾರಣಗಳನ್ನು ತಿಳಿಸಬೇಕು.

8. ತಿದ್ದುಪಡಿಯಾದ ಉಪನಿಯಮಗಳನ್ನು ನೋಂದಾಯಿಸಲೇಬೇಕು. ಒಂದು ತಿದ್ದುಪಡಿ ಉಪನಿಯಮವನ್ನು ನೋಂದಾವಣೆಗೆ ಸಲ್ಲಿಸಿದಾಗ ನಿಬಂಧಕರು ಆ ತಿದ್ದುಪಡಿಯನ್ನು ನೋಂದಾವಣೆ ಮಾಡಲಿಕ್ಕೆ ಸಾಮಾನ್ಯ ಅವಧಿಯನ್ನು ತೆಗೆದುಕೊಳ್ಳಬಹುದು. ಆದರೆ ನಿಧಾನಗತಿಯನ್ನು ಅನುಸರಿಸತಕ್ಕದಲ್ಲ. ಐಎಲ್‌ಆರ್ 1988(3) ಕರ್ನಾಟಕ 213.

9. ಒಂದು ಸಹಕಾರ ಸಂಘದ ವ್ಯಾಪ್ತಿಯನ್ನು ವಿಸ್ತರಿಸುವಾಗ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯೊಳಗೆ ವಿಸ್ತರಿಸಿದರೆ ಅಂತಹ ಮತ್ತೊಂದು ಸಹಕಾರ ಸಂಘಕ್ಕೆ ಅವರ ಹೇಳಿಕೆಯನ್ನು ಕೇಳಲಾಗದೆ ವಿಸ್ತರಿಸತಕ್ಕದಲ್ಲ. ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗುತ್ತದೆ. 1981(1) ಕೆಎಲ್‌ಜೆ ಎಸ್‌ಎನ್ 71(ಡಿಬಿ)

10. ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿ ಮಾಡಿ ಆ ತಿದ್ದುಪಡಿಯಲ್ಲಿ ಸದಸ್ಯರನ್ನು ತೆಗೆದುಹಾಕುವ ಮತ್ತು ಅವರು ಮತ ಚಲಾಯಿಸಿ ಪ್ರತಿನಿಧಿಗಳನ್ನು ಕಳುಹಿಸುವ ಅವಕಾಶ ತಪ್ಪಿಸಿದರೆ ಅದು ಕಾನೂನುಬದ್ಧವಾಗಿರತಕ್ಕದಲ್ಲ. 1975(1) ಕೆಎಲ್‌ಜೆ ಎಸ್‌ಎನ್ 211.

11. ಒಂದು ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿಗೆ ನೋಂದಾಯಿಸುವುದು ಒಂದು ಕಾನೂನುಬದ್ಧ ಅಧಿಕಾರ. ಆ ಅಧಿಕಾರವನ್ನು ಚಲಾಯಿಸುವಾಗ ನಿಬಂಧಕರು ಹೊಣೆಗಾರಿಕೆಯಿಂದ ಆ ಅಧಿಕಾರವನ್ನು ಚಲಾಯಿಸತಕ್ಕದ್ದು. ಮನಸೋ ಇಚ್ಛೆ ನಿರ್ಧರಿಸತಕ್ಕದಲ್ಲ. 1969 ಅಲಹಾಬಾದ್ ಎಲ್‌ಜೆ 304.

12. ನಿಬಂಧಕರು ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿ ನೋಂದಾಯಿಸುವಾಗ ಸದಸ್ಯತೆಯ ಅರ್ಹತೆಯ ಬಗ್ಗೆಯೂ ನೋಂದಾಯಿಸಲು ಅರ್ಹತೆ ಇದೆ. 1982 ಪಿಎಲ್‌ಜೆ 221.

13. ನಿಬಂಧಕರು ಬೈಲಾ ತಿದ್ದುಪಡಿಯನ್ನು ನೋಂದಾಯಿಸುವಾಗ ವೈಯಕ್ತಿಕ ಹೇಳಿಕೆ ಪಡೆಯಲು ಅವಶ್ಯಕತೆ ಇಲ್ಲ. ಇದು ಸ್ವಾಭಾವಿಕ ನ್ಯಾಯದ ತತ್ವಕ್ಕೆ ವಿರುದ್ಧವಲ್ಲ. 1969 ಅಲಹಾಬಾದ್ ಎಲ್‌ಜೆ 304.

14. ಒಂದು ಸಹಕಾರ ಸಂಘದ ಉಪನಿಯಮಗಳ ತಿದ್ದುಪಡಿ ಆ ತಿದ್ದುಪಡಿ ನೋಂದಾವಣೆಯಾದ ದಿನಾಂಕಕ್ಕೆ ಅಥವಾ ಮುಂದೆ ಸೂಚಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು. 1969(2) ಮೈಸೂರು ಎಲ್‌ಜೆ 320.

15. ಒಂದು ಸಹಕಾರ ಸಂಘ ತನ್ನ ಬೈಲಾವನ್ನು ನಿಬಂಧಕರಿಗೆ ರವಾನಿಸಿದರೆ ಅದು ತಿದ್ದುಪಡಿಯಾದಂತೆ ಆಗುವುದಿಲ್ಲ. ನಿಬಂಧಕರು ಆ ತಿದ್ದುಪಡಿಯನ್ನು ಸ್ವೀಕರಿಸಿ ನೋಂದಾಯಿಸುವ ತನಕ ತಿದ್ದುಪಡಿಯಾದ ಬೈಲಾ ಜಾರಿಗೆ ಬರತಕ್ಕದಲ್ಲ. ಒಂದು ತಿದ್ದುಪಡಿಯನ್ನು ನೋಂದಾಯಿಸಬೇಕೇ, ಬೇಡವೇ ಎಂಬುದು ನಿಬಂಧಕರ ಅಧಿಕಾರ ವ್ಯಾಪ್ತಿ. ತಿದ್ದುಪಡಿ ನೋಂದಾವಣೆಯಾದ ನಂತರ ನಿಬಂಧಕರ ಆ ತಿದ್ದುಪಡಿಯನ್ನು ಸಹಕಾರ ಸಂಘಕ್ಕೆ ರವಾನಿಸಬೇಕು. 1971 ಪಿಎಲ್‌ಜೆ 666.

16. ಒಂದು ಸಹಕಾರ ಸಂಘದ ತಿದ್ದುಪಡಿ ಉಪನಿಯಮಗಳು ನೋಂದಾವಣೆಯಾಗಿದೆ. ಆ ನೋಂದಾವಣೆಯಾಗಿದ್ದರೆ ಆ ತಿದ್ದುಪಡಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ. 1973 ಪಿಎಲ್‌ಆರ್ 915/1971 ಸಿಎಲ್‌ಜೆ 1005.

17. ಯಾವುದೇ ಒಂದು ಸಹಕಾರ ಸಂಘದ ಉಪನಿಯಮಗಳು ಕಾನೂನಿನಲ್ಲಿ ಕಲ್ಪಿಸಿರುವ ಮಿತಿಗೆ ವಿರುದ್ಧವಾದರೆ ಅಂತಹ ಉಪನಿಯಮ ನೋಂದಾವಣೆಯಾಗಿದ್ದರೂ ಕಾನೂನುಬದ್ಧವಲ್ಲ. 1975(1) ಗುಜರಾತ್ ಎಲ್‌ಆರ್ 382.

18. ನಿಬಂಧಕರು ಒಂದು ಉಪನಿಯಮವನ್ನು ತಿದ್ದುಪಡಿಯಾದ ದಿನಾಂಕದಂದು ಅದು ಅಂತಿಮವಾಗಿ ಸೇರ್ಪಡೆಯಾಗಿದೆ ಎಂದು ಅರ್ಥ. ಆದರೆ ಇದು ಉಚ್ಚ ನ್ಯಾಯಾಲಯದ ಪರಿಶೀಲನೆಗೆ ಒಳಪಟ್ಟು ಎಂದು ತಿಳಿಯತಕ್ಕದ್ದು. ಐಎಲ್‌ಆರ್ 1970 ಗುಜರಾತ್ 1105.

19. ನಿಬಂಧಕರು ಒಂದು ಸಹಕಾರ ಸಂಘಕ್ಕೆ ಅದರ ಉಪನಿಯಮಗಳ ತಿದ್ದುಪಡಿ ಮಾಡಲು ಸೂಚಿಸಿದಾಗ ಆ ಸಂಘದ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿ ಪತ್ರ ಬರೆದರೆ ಅಂದರೆ ಮಹಾಸಭೆಯ ಒಪ್ಪಿಗೆ ಪಡೆದು ಠರಾವಿನ ಮುಖಾಂತರ ನಿಬಂಧಕರಿಗೆ ರವಾನಿಸಿದರೆ ಅಂತಹ ತಿದ್ದುಪಡಿ ಕಾನೂನಿಗೆ ವಿರುದ್ಧ. 1974 ಪಿಎಲ್‌ಜೆ 13.

20. ಮೀನುಗಾರಿಕೆ ನಿರ್ದೇಶಕರು ಸಹಾಯಕ ನಿಬಂಧಕರ ಅಧಿಕಾರವನ್ನು ಚಲಾಯಿಸುವಾಗ ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡಿ ನೋಂದಾಯಿಸುತ್ತಾನೆ. ಮೇಲ್ಮನವಿ ನಿಬಂಧಕರಿಗೆ ಇರತಕ್ಕದ್ದು ಎಂದಿದ್ದರೂ ಆ ಅಧಿಕಾರವನ್ನು ಮೀನುಗಾರಿಕೆ ಇಲಾಖೆಯ ನಿರ್ದೇಶಕರಿಗೆ ಸರ್ಕಾರದ ಆದೇಶದಿಂದ ವರ್ಗಾಯಿಸಿದಾಗ ಪುನರ್ ವಿಮರ್ಶಾ ಅರ್ಜಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಎಐಆರ್ 1982 ಎಪಿ 53.

21. ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿಯಲ್ಲಿ ನೋಂದಾಯಿಸಿದಾಗ ಆ ಬಗ್ಗೆ ತಕರಾರು ಬಂದಾಗ ಅದು ದಾವಾ ಪ್ರಕರಣ ಆಗತಕ್ಕದಲ್ಲ. ಅಂದರೆ ಸದಸ್ಯ ಮತ್ತು ಸಂಘಗಳ ಬಗ್ಗೆ ಮತ್ತು ನಿಬಂಧಕರ ಮಧ್ಯೆ ಇದು ದಾವಾ ಆಗುವುದಿಲ್ಲ. ಎಎಲ್‌ಆರ್ 1965 ಮೈಸೂರು 1198/1960 66(1) ಮೈಸೂರು ಎಲ್‌ಜೆ 215.

22. ಒಂದು ಸಹಕಾರ ಸಂಘದ ಉಪನಿಯಮಗಳನ್ನು ತಿದ್ದುಪಡಿ ಮಾಡುವ ಪ್ರಸ್ತಾವನೆ ಯಾವ ಉಪನಿಯಮವನ್ನು ತಿದ್ದುಪಡಿ ಮಾಡಲಾಗುತ್ತದೆಯೋ ಅದರ ಸ್ಪಷ್ಟ ವಿವರಣೆಯನ್ನು ಮಹಾಸಭೆಯ 15 ದಿವಸ ಮುಂಚಿತವಾಗಿ ಪ್ರತಿಯೊಬ್ಬ ಸದಸ್ಯನಿಗೂ ರವಾನಿಸತಕ್ಕದ್ದು. ಈ ತಿದ್ದುಪಡಿಯಲ್ಲಿ ಒಂದು ಗುಂಪಿನ ಸದಸ್ಯರ ಮತ ಚಲಾಯಿಸುವ ಹಕ್ಕನ್ನು ಕಿತ್ತುಕೊಳ್ಳುವುದಾಗಿದ್ದು, ಅಂತಹ ತಿದ್ದುಪಡಿಯನ್ನು ಕಾನೂನಿನ ಒಂದು ತಪ್ಪು ಎಂದು ಪರಿಗಣಿಸಿ ಅಂತಹ ತಿದ್ದುಪಡಿ ನೋಂದಾಯಿಸಿರುವುದನ್ನು ವಜಾ ಮಾಡಲಾಗಿದೆ. ರಿಟ್ ಅರ್ಜಿ ಸಂಖ್ಯೆ 10149 ಮತ್ತು 10150/1985 ದಿನಾಂಕ: 7–8–1987 (ಕ್ಯಾಂಪ್ಕೊ)

23. ಒಂದು ಸಹಕಾರ ಸಂಘ ತನ್ನ ಸಂಘದ ಸದಸ್ಯರಲ್ಲಿ ಒಂದು ಗುಂಪಿನ ಅಂದರೆ ವೃತ್ತಿಗೆ ಸಮಾನವಾದ ಗುಂಪಿಗೆ ಸೀಮಿತಗೊಳಿಸಿ ತಿದ್ದುಪಡಿ ಮಾಡಿದಾಗ ಅದು ಕಾನೂನಿಗೆ ವಿರುದ್ಧ ಅಥವಾ ರಿಜಿಸ್ಟ್ರಾರ್‌ರವರು ಈ ತಿದ್ದುಪಡಿಯನ್ನು ನೋಂದಾಯಿಸಲು ಬರುವುದಿಲ್ಲ ಎಂದು ಅರ್ಥೈಸತಕ್ಕದಲ್ಲ. ಎಐಆರ್ 1955 ಎನ್‌ಯೂಸಿ (ಬಾಂಬೆ 4495)

24.ಸಹಕಾರ ಸಂಘಗಳ ನಿಬಂಧಕರು ಉಪನಿಯಮವನ್ನು ಕಡ್ಡಾಯವಾಗಿ ತಿದ್ದುಪಡಿ ಮಾಡಲು ಸೂಚಿಸುವ ಪೂರ್ವದಲ್ಲಿ ಅಂತಹ ತಿದ್ದುಪಡಿ ಆ ಸಹಕಾರ ಸಂಘದ ಹಿತಕ್ಕೆ ಅವಶ್ಯಕ ಎಂಬ ತೀರ್ಮಾನಕ್ಕೆ ಬರುವುದು ಅತ್ಯವಶ್ಯಕ. 1983 ಎಂಪಿಡಬ್ಲ್ಯೂಎಂ 83.

25.ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿಯಾದಾಗ ಅದು ಒಂದು ನಾಮ ಮಾತ್ರ ನೋಂದಾವಣೆಯಲ್ಲ. ಅದು ಒಂದು ಕಾನೂನುಬದ್ಧ ಕ್ರಮ. ಆ ತಿದ್ದುಪಡಿ ಇಂತಹ ಜಾರಿಗೆ ಬರತಕ್ಕದ್ದು ಎಂದು ಕಲಂ 13ರಲ್ಲಿ ತಿಳಿಸಿರುವುದರ ಅರ್ಥ ನೋಂದಾವಣೆಯಾದ ದಿನಾಂಕವನ್ನು ಅಥವಾ ನೋಂದಾವಣೆಯಾದ ನಂತರದ ಮತ್ತಾವುದೇ ದಿನಾಂಕದಿಂದ ಜಾರಿಗೆ ಬರಬಹುದು. ಆದರೆ ಆ ದಿನಾಂಕ ಯಾವುದೇ ಕಾರಣಕ್ಕೂ ನೋಂದಣಿ ಪೂರ್ವ ದಿನಾಂಕ ಆಗತಕ್ಕದಲ್ಲ. 1975(1) ಕೆಎಲ್‌ಜೆ ಎಸ್‌ಎನ್ 211.

26.ಒಂದು ಸಹಕಾರ ಸಂಘದ ಉಪನಿಯಮವನ್ನು ನಿಬಂಧಕರು ತಿದ್ದುಪಡಿ ಮಾಡಿ ನೋಂದಾಯಿಸಿದಾಗ ಆ ಆದೇಶದಲ್ಲಿ ದಿನಾಂಕವನ್ನು ನಮೂದಿಸದಿದ್ದರೆ ಆ ತಿದ್ದುಪಡಿಯಾದ ಬೈಲಾ ನೋಂದಾವಣೆಯಿಂದ ದಿನಾಂಕದಿಂದ ಜಾರಿಗೆ ಬರತಕ್ಕದ್ದು. ಹಾಗೂ ಅದು ನೋಂದಾವಣೆಯಾದ ದಿನಾಂಕಕ್ಕಿಂತ ಹಿಂದಿನ ದಿನ ನೋಂದಾವಣೆಯಾಗಿದೆ ಎಂದು ತಿಳಿಯತಕ್ಕದಲ್ಲ. ಐಎಲ್‌ಆರ್ 1980(2) ಕರ್ನಾಟಕ 1234/1980(1) ಕೆಎಲ್‌ಜೆ 475.

27.ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿ ಮಾಡುವಾಗ ಆ ತಿದ್ದುಪಡಿ ಮಾಡಬೇಕಾದ ವಿಷಯಗಳು ಸ್ಪಷ್ಟವಾಗಿ ಪ್ರತಿಯೊಬ್ಬ ಸದಸ್ಯನಿಗೂ ಮುಂಚೆಯೇ ರವಾನಿಸತಕ್ಕದ್ದು. 1988(1) ಕೆಎಲ್‌ಜೆ 152/ಎಐಆರ್ 1988 ಕರ್ನಾಟಕ 243.

28.ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿ ದಾವಾ ಪ್ರಕರಣ ಆಗುವುದಿಲ್ಲ. ನಿಬಂಧಕರು ಇಂತಹ ಅರ್ಜಿಯನ್ನು ದಾವಾ ಎಂದು ಪರಿಗಣಿಸಿ ತೀರ್ಮಾನ ಮಾಡತಕ್ಕದಲ್ಲ. ಮಹಾಸಭೆಯಲ್ಲಿ 2/3 ಅಂಶದ ಸದಸ್ಯರು ಒಪ್ಪಿಗೆ ಕೊಟ್ಟಿದ್ದರೆ ಅದನ್ನು ನಿಯಮಬದ್ಧ ತಿದ್ದುಪಡಿ ಎಂದು ಪರಿಗಣಿಸತಕ್ಕದ್ದು. ಐಎಲ್‌ಆರ್ 1965 ಮೈಸೂರು 1198/ಎಐಆರ್ 1966 ಮೈಸೂರು 274/1966(1) ಮೈಸೂರು ಎಲ್‌ಜೆ 215.

29.ಒಂದು ಸಹಕಾರಿ ಕೇಂದ್ರ ಬ್ಯಾಂಕಿನ ಶಾಖೆಯನ್ನು ಮತ್ತೊಂದು ಕೇಂದ್ರ ಬ್ಯಾಂಕಿನ ವ್ಯಾಪ್ತಿಯಲ್ಲಿ ಸ್ಥಾಪಿಸಲು ತಿದ್ದುಪಡಿಯನ್ನು ನೋಂದಾಯಿಸಲಾಯಿತು. ಈ ಆದೇಶದ ಮೇಲೆ ಪುನರ್ ವಿಮರ್ಶ ಅರ್ಜಿಯನ್ನು ಸಲ್ಲಿಸಿದಾಗ ಆ ಅರ್ಜಿಯನ್ನು ವಿಚಾರಣೆ ಮಾಡುವ ಅವಶ್ಯಕತೆಗೆ ಅನುಗುಣವಾಗಿ ಪುನರ್ ವಿಮರ್ಶೆ ಮಾಡಿದ ಪ್ರಾಧಿಕಾರ ಆ ಅರ್ಜಿಯನ್ನು ಸಲ್ಲಿಸಿದವರಿಗೆ ಅವಕಾಶ ಕಲ್ಪಿಸಬೇಕೆಂದು ಆದೇಶಿಸಿದ್ದು, ಈ ಆದೇಶ ಸರಿಯಾದ ಕ್ರಮ. 1994(4) ಕೆಎಲ್‌ಜೆ 203 (ಡಿಬಿ)/ಐಎಲ್‌ಆರ್ 1994 ಕರ್ನಾಟಕ 2525.

30.ಉಪನಿಯಮದಡಿ ತಿದ್ದುಪಡಿ ನೋಂದಾವಣೆಯಾದ ದಿನಾಂಕದಿಂದ ಅನ್ವಯವಾಗುತ್ತದೆ. ಉಪನಿಯಮದ ಅಂತರ್ಗತ ಈ ಬಗ್ಗೆ ಪರ್ಯಾಯ ದಿನಾಂಕ ಸೂಚಿಸಿದಾಗ ಅದು ನೋಂದಾವಣೆಯಾದ ದಿನಾಂಕದಿಂದ ಮುಂದೆ ಯಾವುದಾದರೂ ದಿನಾಂಕದಿಂದ ಅನ್ವಯವಾಗುತ್ತದೆ. ಪಾಲು ಬಂಡವಾಳದ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯ ನೋಂದಾವಣೆ ಆದ ದಿನಾಂಕದಿಂದ ನಂತರ ಸೇರಿಸಲ್ಪಟ್ಟ ಸದಸ್ಯರಿಗೆ ಮಾತ್ರ ಈ ಬದಲಾವಣೆ ಅನ್ವಯ ಎಂದು ತೀರ್ಪು ಕೊಟ್ಟಿದೆ. ಆಯಾ ಸಮಯದಲ್ಲಿ ನಿಗಧಿಪಡಿಸಿದ ಷರತ್ತುಗಳನ್ವಯ ವಿಧಿಬದ್ಧವಾಗಿ ಸೇರಿಸಲ್ಪಟ್ಟ ಸದಸ್ಯತ್ವದ ಹಕ್ಕನ್ನು ಪೂರ್ವಾನ್ವಯವಾಗಿ ಬದಲಾಯಿಸಲು ಬರುವುದಿಲ್ಲ. ರಿಟ್ ಅರ್ಜಿ ಸಂಖ್ಯೆ 47673 ಮತ್ತು 47574 ರಿಂದ 78ರವರೆಗೆ ದಿನಾಂಕ:25–7–2004

31. ಒಂದು ತಾಲ್ಲೂಕು ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕಿನ ಪ್ರಕರಣದಲ್ಲಿ ಅಧಿಕಾರಿ ನಿಗದಿ ಪಡಿಸಿದ ದಿನಾಂಕವನ್ನು 19.01.2015 ಎಂದಿದ್ದರೂ ಅದನ್ನು 14.01.2015 ಎಂದು ಸಂಬಂಧಪಟ್ಟ ಪಕ್ಷಗಾರರಿಗೆ ನೋಟೀಸ್ ನೀಡದೆ ದಾಖಲಿಸಿದ್ದು, ಹಿಂದಿನ ದಿನಾಂಕದಂದು ಪ್ರಕರಣದಲ್ಲಿ ಆದೇಶ ಮಾಡಿರುವುದು, ಕಾನೂನು ಬಾಹಿರ ಮತ್ತು ಮನಸೋ ಇಚ್ಚೆ ಮಾಡಿದ ಆದೇಶವೆಂದು ಮತ್ತು ಅರ್ಜಿದಾರ ಸಂಘದ ಉಪನಿಯಮ ತಿದ್ದುಪಡಿ ಬಗ್ಗೆ ಆದೇಶಿಸಿರುವುದನ್ನು, ಸಾಕಷ್ಟು ಅವಕಾಶ ನೀಡಿ ಆದೇಶಿಸಲು ಉಚ್ಚನ್ಯಾಯಾಲಯ ನಿರ್ದೇಶಿಸಿತು.

**(2015 Indlaw Kar 4101)**

# ಅಧ್ಯಾಯ – 6.3

## ವಿಚಾರಣೆ

ಕರ್ನಾಟಕ ಸೌಹಾರ್ದ ಕಾಯಿದೆ 1997ರ ಕಲಂ.35 ರಲ್ಲಿ ಒಂದು ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಹಣಕಾಸಿನ ಪರಿಸ್ಥಿತಿ ಬಗ್ಗೆ ವಿಚಾರಣೆ ಮಾಡುವ ಅಧಿಕಾರ ನಿಬಂಧಕರಿಗೆ ನೀಡಲಾಗಿದೆ.

**ಕಲಂ.35 :**

1) “ರಿಜಿಸ್ಟ್ರಾರನು, ಒಂದು ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಹಣಕಾಸಿನ ಪರಿಸ್ಥಿತಿಗಳಿಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ವಿಷಯವನ್ನು ಕುರಿತು ತ್ವರಿತವಾಗಿ ವಿಚಾರಣೆ ನಡೆಸಬಹುದು ಅಥವಾ ವಿಚಾರಣೆ ನಡೆಸುವಂತೆ ಮಾಡಬಹುದು.

2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವರೂಪದ ವಿಚಾರಣೆಯನ್ನು (ಈ ಕೆಳಕಂಡ ಸನ್ನಿವೇಶಗಳಲ್ಲೂ ತ್ವರಿತವಾಗಿ ವಿಚಾರಣೆ ನಡೆಸಬಹುದು ಅಥವಾ ನಡೆಸುವಂತೆ ಮಾಡಬಹುದು.)

(ಎ) ಸಹಕಾರಿಯು ಸಂಯೋಜಿತವಾಗಿರುವ ಸಂಯುಕ್ತ ಸಹಕಾರಿಯು; ಅಥವಾ

(ಬಿ) ಸಹಕಾರಿಯ ಮಂಡಳಿಯ ಸದಸ್ಯರ ಪೈಕಿ ಮೂರನೇ ಒಂದರಷ್ಟಕ್ಕೆ ಕಡಿಮೆಯಲ್ಲದ ಸದಸ್ಯರು; ಅಥವಾ

(ಸಿ) ಸಹಕಾರಿಯ ಸದಸ್ಯರ ಒಟ್ಟು ಸಂಖ್ಯೆಯ ಪೈಕಿ ಹತ್ತನೇ ಒಂದರಷ್ಟಕ್ಕೆ ಕಡಿಮೆಯಲ್ಲದ ಸದಸ್ಯರು.

– ಸಲ್ಲಿಸಿದ ಅರ್ಜಿಯ ಮೇಲೆ ನಡೆಸತಕ್ಕದ್ದು.

3) (2)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ನಿಯಮಿಸಬಹುದಾದಂಥ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು.

4) ರಿಜಿಸ್ಟ್ರಾರನು, ತಾನೇ ಸ್ವತಃ ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣೆಯನ್ನು ನಡೆಸಲು ಒಬ್ಬ ವಿಚಾರಣಾಧಿಕಾರಿಯನ್ನು ನೇಮಿಸಬಹುದು. ವಿಚಾರಣೆಯ ವೆಚ್ಚವನ್ನು, ರಿಜಿಸ್ಟ್ರಾರನು ತೀರ್ಮಾನಿಸಬಹುದಾದಂತೆ, ಸಂದರ್ಭಾನುಸಾರ ಸಾಲಿಗ ಅಥವಾ ಸಂಯುಕ್ತ ಸಹಕಾರಿ ಅಥವಾ ಸಹಕಾರಿಯು ಭರಿಸತಕ್ಕದ್ದು.

5) (2)ನೇ ಉಪಪ್ರಕರಣದ ಅಡಿಯಲ್ಲಿನ ಒಂದು ವಿಚಾರಣೆಯು, ಹನ್ನೆರಡು ತಿಂಗಳುಗಳ ಅವಧಿಯೊಳಗೆ ಪೂರ್ಣಗೊಳ್ಳತಕ್ಕದ್ದು, ಆದಾಗ್ಯೂ, ರಿಜಿಸ್ಟ್ರಾರನು, ಕಾರಣಗಳನ್ನು ಲಿಖಿತದಲ್ಲಿ ದಾಖಲ್ಮಾಡಿ ಅದನ್ನು ಆರು ತಿಂಗಳುಗಳ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು.

6) ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸಿದಾಗ, ರಿಜಿಸ್ಟ್ರಾರನು, ವಿಚಾರಣಾ ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ, ವಿಚಾರಣಾ ವರದಿಯ ಒಂದು ಪ್ರತಿಯನ್ನು,–

(ಎ) ಅರ್ಜಿದಾರರಿಗೆ;

(ಬಿ) ಸಂಬಂಧಪಟ್ಟ ಸಹಕಾರಿಗೆ;

(ಸಿ) ಸಂಬಂಧಪಟ್ಟ ಎಲ್ಲಾ ಸಾಲಿಗರಿಗೆ;

(ಡಿ) ಸಂಯುಕ್ತ ಸಹಕಾರಿಗೆ, ಮತ್ತು

(ಇ) ಈ ಪ್ರಕರಣದ ಅಡಿಯಲ್ಲಿನ ವಿಚಾರಣೆಯು ಒಂದು ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಿದ್ದರೆ ರಿಜರ್ವ್ ಬ್ಯಾಂಕಿಗೆ, ಕಳುಹಿಸತಕ್ಕದ್ದು.”

ಈ ವಿಷಯ ವಿಸ್ತರಿಸುವ ಮೊದಲು ಮೂರು ಪದಗಳ ಬಗ್ಗೆ ಅರ್ಥೈಸಿಕೊಳ್ಳಬೇಕು. ಅವುಗಳೆಂದರೆ, “ವಿಚಾರಣೆ” (Enquiry), “ಅನ್ವೇಷಣೆ” (Investigation) ಮತ್ತು “ಪರಿವೀಕ್ಷಣೆ” (Inspection)

“ವಿಚಾರಣೆ” ಪದವನ್ನು ಅರ್ಥೈಸುವಾಗ, ಅದರಲ್ಲಿರುವ ಮೂಲ ಅರ್ಥ/ನ್ಯೂನತೆ ಬಗ್ಗೆ ಸತ್ಯಾತತೆಯನ್ನು ಗುರುತಿಸುವುದು/ಕಂಡುಹಿಡಿಯುವುದು.

“ಅನ್ವೇಷಣೆ” ಪದವನ್ನು ಅರ್ಥೈಸುವಾಗ ತಿಳಿಯಬೇಕಾದ್ದು ಏನೆಂದರೆ ದಾಖಲೆ ಮತ್ತು ಸಾಕ್ಷಿಗಳನ್ನು ಸಂಗ್ರಹಿಸುವುದು. ಮತ್ತು

“ಪರಿವೀಕ್ಷಣೆ” ಎಂದರೆ ಸಂಸ್ಥೆಯಲ್ಲಿ ನಿರ್ವಹಿಸುತ್ತಿರುವ ದಾಖಲೆಗಳು, ಪುಸ್ತಕಗಳನ್ನು ಪರಿಶೀಲಿಸಿ ವರದಿ ನೀಡುವುದು.

ವಿಚಾರಣೆಯ ಉದ್ದೇಶ

ಒಂದು ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಹಾಗೂ ಹಣಕಾಸು ವಿಷಯದಲ್ಲಿ ಸಮರ್ಪಕ ಕೆಲಸ ನಿರ್ವಹಿಸುತ್ತಿಲ್ಲವೆಂದು

ನಿಬಂಧಕರಿಗೆ ಮನವರಿಕೆಯಾದರೆ ಅಂದರೆ, ಪೂರ್ವಭಾವಿಯಾಗಿ ಆರೋಪಗಳು ಅಥವಾ ಮಂಡಳಿ ಸದಸ್ಯರು, ಸಹಕಾರಿ ಸದಸ್ಯರು, ದೂರು ಬಂದಾಗ, ಅವುಗಳ ಆಧಾರದ ಮೇಲೆ ನಿಬಂಧಕರು ಆರೋಪಗಳ ಸತ್ಯಾತತೆಯನ್ನು ಕಂಡುಕೊಳ್ಳಲು ಕಲಂ.35 ರಡಿ ವಿಚಾರಣೆಗೆ ಆದೇಶಿಸಬಹುದು. ಇದರಲ್ಲಿ ಆರೋಪಗಳಲ್ಲಿ ಹುರುಳು ಇದೆಯೇ ಎಂಬುದನ್ನು ಪರಿಶೀಲಿಸಲು ಮಾಡುವ ಆದೇಶವೇ ವಿಚಾರಣಾದೇಶ. ಇವುಗಳನ್ನು ಕಾಯಿದೆ ಕಲಂ.35 ರಲ್ಲಿ ಪ್ರಸ್ತಾಪ ಮಾಡಿರುವ ಪದಗಳ ಬಗ್ಗೆ ಅರ್ಥೈಸಿಕೊಳ್ಳಬೇಕು.

"ರಚನೆ" : ಒಂದು ಸಹಕಾರಿಯ ಮಂಡಳಿ, ಸಮಿತಿಗಳ ರಚನೆ ಬಗ್ಗೆ ಮತ್ತು ಅವುಗಳು ವಿಧಬದ್ದವಾಗಿ ರಚನೆಯಾಗಿದೆಯೇ ಇಲ್ಲವೇ ಎಂಬುದರ ಬಗ್ಗೆ ತಿಳಿಯಲು, ಅಂದರೆ ಸಹಕಾರಿ ರಚನೆ ಅಳವಡಿಸಿಕೊಂಡ ಉಪವಿಧಿಗಳು, ಕಾಯಿದೆ ಮತ್ತು ನಿಯಮಗಳಲ್ಲಿ ನಿಗದಿ ಪಡಿಸಿದಂತೆ ರಚಿಸಿದೆಯೇ, ಉಪವಿಧಿಗಳಲ್ಲಿ ರೂಪಿಸಿದ ಅವಕಾಶಗಳು ಕಾನೂನು ಮತ್ತು ನಿಯಮಗಳ ವಿರುದ್ದವಾಗಿದೆಯೇ? ಉಪವಿಧಿಗಳ ಅವಕಾಶಗಳು ಪ್ರಜಾಪ್ರಭುತ್ವ ನೀತಿಗೆ ಪೂರಕವಾಗಿದೆಯೇ. ಉದಾಹರಣೆಗೆ, ಒಂದು ಸಹಕಾರಿ ತನ್ನ ಉಪವಿಧಿಗಳಲ್ಲಿ ಮಂಡಳಿ ಸದಸ್ಯರು, ಸಭೆಗಳಿಗೆ ಹಾಜರಾಗಲು ನಿಗದಿ ಪಡಿಸಿದ ಭತ್ಯೆ ದುಡಿಯುವ ಬಂಡವಾಳದ ಶೇ.3 ರಷ್ಟು ಸಭಾ ಭತ್ಯೆ ಪಡೆಯಲು ಅವಕಾಶಕಲ್ಪಿಸಿದ್ದು, ಆ ಸಹಕಾರಿಯ ದುಡಿಯುವ ಬಂಡವಾಳ ರೂ.500/– ಕೋಟಿ ಇದ್ದರೆ, ಇದು ಸ್ವಯಂ ನಿಯಂತ್ರಣ ನೀತಿಗೆ ಪೂರಕವೇ ಎಂಬುದನ್ನು ಗುರುತಿಸಿ ವಿಮರ್ಷೆ ಮಾಡುವುದು.

"ಆಡಳಿತ/ವ್ಯವಸ್ಥಾಪನೆ" ಅಂದರೆ ಕಾಯಿದೆ, ನಿಯಮ ಮತ್ತು ಉಪವಿಧಿಗಳಡಿ ಸಹಕಾರಿಯ ಮಂಡಳಿ ರಚನೆ ಸಮರ್ಪಕವಾಗಿದೆಯೇ, ಮಂಡಳಿ ತಾನೇ ನಿಗದಿ ಪಡಿಸಿದ ಅಧಿಕಾರ, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದೆಯೇ. ಉದಾಹರಣೆಗೆ, ಕಾಯಿದೆಯ ಮಂಡಳಿ ರಚನೆ ಬಗ್ಗೆ 2013ರಲ್ಲಿ ಮಂಡಳಿ ಸಂಖ್ಯೆ ಕನಿಷ್ಠ 11 ಎಂದಿದ್ದು ಇದನ್ನು 2017ರಲ್ಲಿ ಕನಿಷ್ಠ 13 ಎಂದು ನಿಗದಿ ಪಡಿಸಿದ್ದಕ್ಕೆ, ಇದನ್ನು ಸೇರ್ಪಡೆಗೊಳಿಸಲಾಗಿದೆಯೇ, ಹಾಗೆಯೇ, ಮಂಡಳಿಯಲ್ಲಿ ಮೀಸಲಾತಿ ಕಲ್ಪಿಸಲು ಅವಕಾಶವಿದ್ದರೂ, ಮಂಡಳಿ ರಚನೆಯಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲಾಗಿದೆಯೇ, ಅಥವಾ ಮಂಡಳಿಯಲ್ಲಿ ಅನರ್ಹತೆ ಹೊಂದಿದ ಸದಸ್ಯರು ಮುಂದುವರಿದಿದ್ದಾರೆಯೇ? ಅಥವಾ ಸುಸ್ತಿದಾರರು ಮಂಡಳಿ ಸದಸ್ಯರಾಗಿದ್ದಾರೆಯೇ?ಇಂತಹ ವಿಷಯಗಳ ಬಗ್ಗೆ ವಿಚಾರಣಾದೇಶದಲ್ಲಿ ಪರಿಶೀಲಿಸಲು ಅವಕಾಶ ಇದೆ.

"ಕಾರ್ಯಾಚರಣೆ" ಸಹಕಾರಿಯ ತನ್ನ ದಿನನಿತ್ಯದ ವ್ಯವಹಾರವನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆಯೇ? ಸಹಕಾರಿ ವ್ಯವಹಾರ ಪಾರದರ್ಶಕ, ಕಾರ್ಯನೀತಿ ಪೂರಕವಾಗಿ ನಡೆಯುತ್ತಿದೆಯೇ, ಮಾಡುತ್ತಿರುವ ವ್ಯವಹಾರ ಶಾಸನಬದ್ದವಾಗಿದೆಯೇ, ವ್ಯಾಪಾರ ನೀತಿ ಅನುಸರಿಸಲಾಗುತ್ತಿದೆಯೇ, ಉದಾಹರಣೆಗೆ, ಒಂದು ಸಹಕಾರಿ ತನ್ನ ಸದಸ್ಯರಿಂದ ಸಂಗ್ರಹಿಸಿದ ಪಾಲು ಬಂಡವಾಳ ಮತ್ತು ಠೇವಣಿಯನ್ನು ಸದಸ್ಯರ ಅಗತ್ಯ ಪೂರೈಸಿದೆ, ಲಾಭದಾಯಕ ವ್ಯವಹಾರದಲ್ಲಿ ಹೂಡಿಕೆ ಮಾಡಿದೆಯೇ, ಅಂದರೆ ಒಂದು ಪತ್ತಿನ ಸಹಕಾರಿ, ಅದು ಸಂಗ್ರಹಿಸಿದ ಠೇವಣಿಯನ್ನು ಮತ್ತೊಂದು ಸಂಸ್ಥೆಯಲ್ಲಿ ಅಂದರೆ ಸಕ್ಕರೆ ಕಾರ್ಖಾನೆ, ಗೃಹ ನಿರ್ಮಾಣ ಇತರೆ ಸಂಸ್ಥೆಯಲ್ಲಿ ಹೂಡಿಕೆ ಮಾಡಿದ್ದರೆ, ಅದು ಸದಸ್ಯರ ಹಿತಾಸಕ್ತಿಗೆ ಪೂರಕವಾಗಿದೆಯೇ? ಸದಸ್ಯರಿಂದ ಸಂಗ್ರಹಿಸುವ ಠೇವಣಿ ಮೇಲಿನ ಬಡ್ಡಿದರ ಮಾರುಕಟ್ಟೆ ದರಕ್ಕೆ ಸಮಾನಂತರವಾಗಿದೆಯೇ, ಅದೇ ಸಹಕಾರಿ ನೀಡುವ ಸಾಲ/ ಮುಂಗಡಗಳ ಮೇಲೆ ವಿಧಿಸುವ ಬಡ್ಡಿ ಮಾರುಕಟ್ಟೆ ದರಕ್ಕೆ ಸಮಾನಾಂತರವಾಗಿದೆಯೇ ಎಂಬುದನ್ನು ಗಮನಿಸಬೇಕು ಹಾಗೂ ಸಹಕಾರಿ ನೀಡುವ ಸಾಲಗಳು/ಮುಂಗಡಗಳು ಗರಿಷ್ಠ ಮಿತಿ ನಿಗದಿ ಪಡಿಸಿದೆಯೇ ಅಂದರೆ ಒಟ್ಟು ಸಂಪನ್ಮೂಲದ ಶೇ.5ಕ್ಕೆ ಮೀರದಂತೆ ಒಬ್ಬ ಸದಸ್ಯನಿಗೆ/ಸಂಸ್ಥೆಗೆ ನೀಡಲು ಮಿತಿ ನಿಗದಿ ಪಡಿಸಿದೆಯೇ ಎಂಬುದನ್ನು ಪರಿಶೀಲಿಸಬೇಕು.

"ಹಣಕಾಸು" ಸಹಕಾರಿ ತನ್ನ ಸದಸ್ಯರಿಂದ ಸಂಗ್ರಹಿಸಿದ ಪಾಲು ಬಂಡವಾಳ/ಠೇವಣಿ ಬಗ್ಗೆ ಸಮರ್ಪಕ ಲೆಕ್ಕ ಪತ್ರಗಳನ್ನು ದಾಖಲಿಸಿದೆಯೇ, ನಗದು ಪುಸ್ತಕ ದಿನವಹಿ ಬರೆಯಲಾಗುತ್ತಿದೆಯೇ, ಸದಸ್ಯರಿಗೆ ಪ್ರತ್ಯೇಕ ಖಾತೆ ನಿರ್ವಹಿಸಲಾಗಿದೆಯೇ, ಸಾಲ ನೀಡಲು ನೀತಿ ರೂಪಿಸಿದೆಯೇ, ಮಿತಿ ನಿಗದಿ ಪಡಿಸಿದೆಯೇ, ಸಾಲ ಮಂಜೂರಾತಿಯನ್ನು ಮಂಡಳಿ ತೀರ್ಮಾನಿಸಿದೆಯೇ, ಸದಸ್ಯತ್ವ ನೀಡುವ ಮೊದಲೇ ಸಾಲ ವಿತರಿಸಲಾಗಿದೆಯೇ, ಸದಸ್ಯರಿಂದ ಮಾತ್ರ ಠೇವಣಿ ಸ್ವೀಕರಿಸಲಾಗಿದೆಯೇ, ನಿಗದಿ ಪಡಿಸಿದ ಬಡ್ಡಿದರ, ಮಂಡಳಿ ಒಪ್ಪಿಗೆ ನೀಡಿದೆಯೇ, ಆದರ ಮಾರುಕಟ್ಟೆ ದರಕ್ಕೆ ಪೂರಕವಾಗಿದೆಯೇ, ಆರ್ಥಿಕ ವ್ಯವಹಾರ ಲಾಭದಾಯಕ ವಾಗುವಂತೆ ಮಂಡಳಿ ಕಾರ್ಯರೂಪಿಸಿದೆಯೇ, ಲಾಭಾಂಶ ಹಂಚಿಕೆ, ಶಾಸನ ಬದ್ದವಾಗಿದೆಯೇ, ಡಿವಿಡೆಂಡ್ ಪಾವತಿ ಮಾಡುವ ಮೊದಲು ಶಿಕ್ಷಣ ನಿಧಿ ನೀಡಲಾಗಿದೆಯೇ, ಇತ್ಯಾದಿ.

ವಿಚಾರಣೆ ಯಾವಾಗ ಮಾಡಬೇಕು

ಒಂದು ಸಹಕಾರಿಯು ವಿಚಾರಣೆಗೆ ಆದೇಶ ಮಾಡಬೇಕಾದಾಗ ಈ ಕೆಳಕಂಡ ಸಂದರ್ಭದಲ್ಲಿ ಸೂಚಿಸಿದ್ದರೆ ಮಾತ್ರ

1) ನಿಬಂಧಕರು ಸ್ವಯಂ ಸ್ಪೂರ್ತಿಯಿಂದ.

2) ಸಂಯುಕ್ತ ಸಹಕಾರಿಯ ಲಿಖಿತ ಮನವಿಯಂತೆ.

3) ಮಂಡಳಿ ಸದಸ್ಯರ 1/3 ಬಹುಮತದ ತೀರ್ಮಾನ ಅಥವಾ ಮನವಿಯಂತೆ ಅಥವಾ

4) ಸಹಕಾರಿ ಸದಸ್ಯರ 1/10 ಸದಸ್ಯರ ಲಿಖಿತ ಮನವಿಯಂತೆ.

ಭಾರತೀಯ ರಿಜರ್ವ್ ಬ್ಯಾಂಕ್ ಸೌಹಾರ್ದ ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಂತೆ ಮನವಿ ಸಲ್ಲಿಸಿದಾಗ ನಿಬಂಧಕರು ವಿಚಾರಣೆ ಮಾಡಲು

ಆದೇಶಿಸಬಹುದು ಅಥವಾ ಸಹಕಾರಿಗೆ ಸಾಲ ನೀಡಿದ ಸಂಸ್ಥೆಯ ಲಿಖಿತ ಮನವಿಯ ಮೇಲೆ ವಿಚಾರಣೆ ಮಾಡಬಹುದು.

ನಿಬಂಧಕರ ಸ್ವಯಂ ಸ್ಫೂರ್ತಿಯಿಂದ ಎಂದರೆ ಅರ್ಥವೇನು? ಒಂದು ಸಹಕಾರಿಯು ಕಾರ್ಯನಿರ್ವಹಣೆಯಲ್ಲಿ ನಡೆದಿರಬಹುದಾದ ಅವ್ಯವಹಾರ/ನ್ಯೂನತೆ ಬಗ್ಗೆ ಯಾವುದೇ ಮೂಲದಿಂದ, ಮಾಹಿತಿ ತಿಳಿಯಬಹುದು. ಅದು ಕೆಲವು ಸದಸ್ಯರ ಲಿಖಿತ ಮನವಿ ಇರಬಹುದು ಅಥವಾ ಮಾದ್ಯಮಗಳ ಮುಖಾಂತರ ಅಥವಾ ನೌಕರ ರಿಂದ ಮಾಹಿತಿ ಬಂದಾಗ, ಈ ಮೇಲ್ಕಂಡ (2) ರಿಂದ (4) ಪ್ರಕರಣಗಳನ್ನು ಹೊರತು ಪಡಿಸಿ, ನಿಬಂಧಕರು ಸತ್ಯಾತೆತೆಯನ್ನು ಕಂಡುಕೊಳ್ಳಲು ಸ್ವಯಂ ತೀರ್ಮಾನ ತೆಗೆದುಕೊಂಡು ವಿಚಾರಣೆಗೆ ಆದೇಶ ನೀಡಬಹುದು. ಆದರೆ ಸಾರ್ವಜನಿಕರು ಅಥವಾ ಸದಸ್ಯರಿಂದ ಬಂದ ಅರ್ಜಿಗಳ ಆದಾರದ ಮೇಲೆ ವಿಚಾರಣೆ ಮಾಡಲೇಬೇಕೆಂದು ಇಲ್ಲವಾದರೂ, ಆರೋಪಗಳಲ್ಲಿ ತಿರುಳಿದೆ ಎಂದು ನಿಬಂಧಕರಿಗೆ ಮನದಟ್ಟಾದಾಗ, ಸ್ವಯಂ ಸ್ಫೂರ್ತಿಯಿಂದ ವಿಚಾರಣೆಗೆ ಆದೇಶಿಸಿಬಹುದು.

ಸಂಯುಕ್ತ ಸಹಕಾರಿ ತನ್ನ ಆಡಳಿತ ಮಂಡಳಿ ಗಮನಕ್ಕೆ ಒಂದು ಸದಸ್ಯ ಸಹಕಾರಿ ಬಗ್ಗೆ ಅವ್ಯವಹಾರಗಳ ಮಾಹಿತಿ ಬಂದಾಗ, ನಿಬಂಧಕರಿಗೆ ಮನವಿ ಸಲ್ಲಿಸಬಹುದು. ಸಂಯುಕ್ತ ಸಹಕಾರಿಗೆ ಕಾಯಿದೆಯಲ್ಲಿ, ಸದಸ್ಯ ಸಹಕಾರಿಗಳ ಮಂಡಳಿ/ಸಾಮಾನ್ಯ ಸಭೆಗೆ ಹಾಜರಾಗಲು ಅವಕಾಶ ಇರುವುದರಿಂದ, ಆ ಸಭೆಗಳಲ್ಲಿ ಹಾಜರಾದ ಅಧಿಕಾರಿ ಮತ್ತು ನಿರ್ದೇಶಕರ ಮುಖಾಂತರ ಮಾಹಿತಿ ಬಂದಾಗ, ಅದನ್ನು ಪರಿಶೀಲಿಸಿ, ವಿಚಾರಣೆ ಮಾಡಿಸಬೇಕೆಂದು, ಸಂಯುಕ್ತ ಸಹಕಾರಿ ಮಂಡಳಿ ತೀರ್ಮಾನಿಸಿದಾಗ, ನಿಬಂಧಕರು ವಿಚಾರಣೆಗೆ ಆದೇಶಿಸಿತಕ್ಕದ್ದು.

ಸಹಕಾರಿಯ ಮಂಡಳಿ ಸದಸ್ಯರ 1/3 ಅಂಶದ ಸದಸ್ಯರು ಲಿಖಿತ ಮನವಿ ಸಲ್ಲಿಸಿ ವಿಚಾರಣೆಗೆ ಮನವಿ ಸಲ್ಲಿಸಿದಾಗ, ಅಂತಹ ಮಂಡಳಿ ಸದಸ್ಯರ ಮನವಿ ಪರಿಶೀಲಿಸಿ, ವಿಚಾರಣೆ ಆದೇಶಿಸಬಹುದು. ಇದಕ್ಕೆ ಪೂರಕವಾಗಿ ನಿಬಂಧಕರು ಪರಿಶೀಲಿಸಬೇಕಾದ ಅಂಶವೆಂದರೆ ಸಹಿ ಮಾಡಿದ 1/3 ಸದಸ್ಯರು, ಮಂಡಳಿಯ ಸದಸ್ಯರೇ, ಅಥವಾ ಅವರೇ ಸಹಿ ಮಾಡಿದ್ದಾರೆಯೇ ಎಂಬುದನ್ನು ಪರಿಶೀಲಿಸಿ ವಿಚಾರಣೆಗೆ ಆದೇಶಿಸಬೇಕು.

ಕೊನೆಯದಾಗಿ 1/10 ಅಂಶದ ಸಹಕಾರಿ ಸದಸ್ಯರು ಲಿಖಿತ ಮನವಿ ಸಲ್ಲಿಸಿದಾಗ ವಿಚಾರಣೆಗೆ ನಿಬಂಧಕರು ಆದೇಶ ನೀಡಬೇಕು ಮತ್ತು ಆ ಸದಸ್ಯರ ಸಹಿ ಮತ್ತು ಸದಸ್ಯತ್ವದ ಬಗ್ಗೆ ದೃಡೀಕರಿಸಿಕೊಳ್ಳತಕ್ಕದ್ದು.

**ವಿಚಾರಣೆಗೆ ಯಾರನ್ನು ನೇಮಿಸಬೇಕು**

ನಿಬಂಧಕರು ಸ್ವಯಂ ವಿಚಾರಣೆ ಮಾಡುವ ಅಧಿಕಾರ ಹೊಂದಿರುತ್ತಾರೆ.ಆದರೆ ಸಾಮಾನ್ಯವಾಗಿ ನಿಬಂಧಕರು ಸಹಕಾರ ಇಲಾಖಾಧಿಕಾರಿಗಳನ್ನು ವಿಚಾರಣೆ ಮಾಡಲು ನೇಮಿಸಬಹುದು. ಅಥವಾ ಸಂಯುಕ್ತ ಸಹಕಾರಿಗೆ ತನ್ನ ಅಧಿಕಾರಿ/ನೌಕರರ ಹೆಸರು ಸೂಚಿಸಲು ಕೇಳಬಹುದು, ಮತ್ತು ಅಂತಹ ಅಧಿಕಾರಿ/ನೌಕರರಲ್ಲಿ ಒಬ್ಬರಿಗೆ ವಿಚಾರಣೆ ಮಾಡಲು ಆದೇಶಿಸಬಹುದು ಅಥವಾ ವಿಚಾರಣೆ ಮಾಡಲು ಸೂಕ್ತ ವ್ಯಕ್ತಿಗಳ ವಾರ್ಷಿಕ ಪಟ್ಟಿಯನ್ನು ಸೂಚಿಸಲು ಸಂಯುಕ್ತ ಸಹಕಾರಿಗೆ ಸೂಚಿಸಿ, ಆ ಪಟ್ಟಿಯನ್ನು ಒಬ್ಬರನ್ನು ನೇಮಿಸಬಹುದು.

**ವಿಚಾರಣೆ ಮಾಡಲು ನಿಗದಿ ಪಡಿಸಿದ ಅವಧಿ**

ನಿಬಂಧಕರು ವಿಚಾರಣಾಧಿಕಾರಿ ನೇಮಿಸಿದ ಆದೇಶದಲ್ಲಿ ಅವಧಿ ನಿಗದಿ ಪಡಿಸಬೇಕು. ಈ ಅವಧಿ ಪ್ರಾರಂಭದಲ್ಲಿ (12) ತಿಂಗಳು ಮೀರತಕ್ಕದ್ದಲ್ಲ. ವಿಶೇಷ ಕಾರಣಗಳಿಂದ, ಅವಧಿ ವಿಸ್ತರಿಸಬೇಕಾದರೆ, ಅದನ್ನು (6) ತಿಂಗಳು ವಿಸ್ತರಿಸಬಹುದು. ನಿಬಂಧಕರು ಅವಧಿ ನಿಗದಿ ಪಡಿಸುವಾಗ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ವಿಚಾರಣಾ ವಿಷಯದ ಕ್ಲಿಷ್ಟತೆಯ ಆಧಾರದ ಮೇಲೆ. ಉದಾಹರಣೆಗೆ, ಸಹಕಾರಿಯು ಮುಖ್ಯಕಾರ್ಯನಿರ್ವಾಹಕ, ಕಾಯಿದೆ ಮತ್ತು ಉಪವಿಧಿಗಳನ್ವಯ, ಮಂಡಳಿ ಅಥವಾ ಸಾಮಾನ್ಯ ಸಭೆ ಕರೆಯುವ ಕ್ರಮ ಜರುಗಿಸದಿದ್ದರೆ ಅಥವಾ ಮಂಡಳಿ ಸಾಮಾನ್ಯ ಸಬೆ ಕರೆಯಲು ದಿನಾಂಕ ನಿಗದಿ ಪಡಿಸಲು ಸೂಕ್ತ ಸಮಯದಲ್ಲಿ ತೀರ್ಮಾನ ಕೇಳಿದರೂ, ತೀರ್ಮಾನಿಸದೇ ಇದ್ದಾಗ ಅಂತಹ ವಿಷಯ ಬಗ್ಗೆ ವಿಚಾರಣೆ ಮಾಡಲು ಒಂದು ತಿಂಗಳ ಅವಧಿ ನಿಗದಿ ಪಡಿಸಿ ಆದೇಶಿಸಬಹುದು. ವಿಷಯ ಕ್ಲಿಷ್ಟಕರವಾಗಿದ್ದರೆ, ಅಂದರೆ ಸಹಕಾರಿಯ ಸಿಬ್ಬಂದಿ ಹಣ ದುರುಪಯೋಗ ಕೆಲವು ವರ್ಷಗಳಿಂದ ಮಾಡಿದ್ದರೆ, ಅಂತಹ ಪ್ರಸಂಗದಲ್ಲಿ (12) ತಿಂಗಳ ಅವಧಿ ನೀಡಿ ವಿಚಾರಣಾಧಿಕಾರಿಗೆ ಅವಕಾಶ ನೀಡಬಹುದು.

**ವಿಚಾರಣಾಧಿಕಾರಿ ಅಧಿಕಾರ**

ವಿಚಾರಣೆಗೆ ಆದೇಶ ಬಂದ ನಂತರ ವಿಚಾರಣಾಧಿಕಾರಿ ಸಂಬಂಧಪಟ್ಟ ಸಹಕಾರಿಗೆ ಕನಿಷ್ಠ 15 ದಿವಸಗಳ ಅವಧಿಗೆ ಕಡಿಮೆ ಇಲ್ಲದಂತೆ, ವಿಚಾರಣಾಧಿಕಾರಿ ಬರಹದಲ್ಲಿ ನೋಟೀಸ್ ನೀಡತಕ್ಕದ್ದು.ವಿಚಾರಣೆಗೆ ಅವಶ್ಯಕವಾದ ದಾಖಲೆ, ಪುಸ್ತಕ, ಲೆಕ್ಕ ಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಅಥವಾ ಇನ್ನಿತರ ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ದಾಖಲೆ ಹಾಜರು ಪಡಿಸಲು ಸಹಕಾರಿಗೆ ಸೂಚಿಸಬೇಕು.ವಿಚಾರಣೆಗೆ ಆದೇಶಿಸಿದ ವಿಷಯದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಮಾಹಿತಿ ಇರುವ ಎಲ್ಲಾ ವ್ಯಕ್ತಿಗಳ ಹಾಜರಾತಿಗೆ, ಅವರ ಹೇಳಿಕೆ ನೀಡಲು/ಪಡೆಯಲು ಅಧಿಕಾರ ಇರತಕ್ಕದ್ದು.ಸಂಬಂಧಪಟ್ಟ ವಿಚಾರಣೆಗೊಳಪಟ್ಟ ಅಥವಾ ಪಟ್ಟರಬಹುದಾದಂತಹ ವ್ಯಕ್ತಿಗಳ ಲಿಖಿತ, ಮೌಖಿಕ ಹೇಳಿಕೆ ಪಡೆಯಲು ಅಧಿಕಾರ ಇರತಕ್ಕದ್ದು.ವ್ಯಕ್ತಿಗಳಿಗೆ ನೀಡುವ ನೋಟೀಸ್/ಸಮನ್‌ನಲ್ಲಿ ಯಾವ ವಿಷಯದ ಬಗ್ಗೆ ಹೇಳಿಕೆ ನೀಡಬೇಕೆಂದು ಸ್ಪಷ್ಟವಾಗಿ ಸೂಚಿಸಿ, ಅದರಂತೆ ಹೇಳಿಕೆ ಪಡೆಯಬೇಕು. ಯಾವುದೇ ವಿಷಯದ ಬಗ್ಗೆ ಮಂಡಳಿ/ಸಾಮಾನ್ಯ ಸಭೆ ಕರೆಯುವ ಅವಶ್ಯಕತೆ ಇದೆ ಎಂದು ವಿಚಾರಣಾಧಿಕಾರಿ

ತೀರ್ಮಾನಿಸಿ, ಸಭೆ ಕರೆಯುವಂತೆ ಸೂಚಿಸಿದರೆ, ಅಂತಹ ಸಭೆಯನ್ನು ಕರೆಯುವುದು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿ. ಇಂತಹ ಸಭೆಗಳಿಗೆ ಕೋರಂ ಅವಶ್ಯಕತೆ ಇರುವುದಿಲ್ಲ.

**ವಿಚಾರಣಾಧಿಕಾರಿ ಅನುಸರಿಸಬೇಕಾದ ನೀತಿ ನಿಯಮಗಳು**

ವಿಚಾರಣೆಗೆ ಆದೇಶಿಸಿದ ವಿಷಯದ ಮೇಲೆ ನೀತಿ ರೂಪಿಸಬೇಕು. ಇದಕ್ಕೆ ಕೆಲವು ನಿರ್ದೇಶನ ನೀಡಬಹುದು.

**1) ಮಂಡಳಿ ಸಭೆಗಳನ್ನು ಕರೆದಿರದ ಬಗ್ಗೆ ವಿಚಾರಣೆಗೆ ಆದೇಶಿಸಿದ್ದರೆ – ಪರಿಶೀಲಿಸಬೇಕಾದ ಅಂಶಗಳೆಂದರೆ.**

(ಎ) ಮಂಡಳಿ ಸಭೆಯನ್ನು ವರ್ಷದಲ್ಲಿ ಕನಿಷ್ಠ (6) ಸಭೆಗಳನ್ನು ಕರೆಯತಕ್ಕದ್ದೆಂದು ಕಾಯಿದೆ ನಿಗದಿ ಪಡಿಸಿದೆ. ಸಹಕಾರಿಯ ಉಪವಿಧಿಗಳಲ್ಲಿ ಮಾಸಿಕ ಎಂದು ನಿಗದಿ ಪಡಿಸಿದ್ದರೆ, ಅದನ್ನು ಪರಿಶೀಲಿಸಬೇಕು. ಸಭೆಗೆ ನೀಡುವ ನೋಟೀಸ್ ಅವಧಿಯು ಉಪವಿಧಿಗಳಲ್ಲಿ ನೋಡಬೇಕು. ಸಭಾ ನೋಟೀಸ್ ಜೊತೆಗೆ ಲಗತ್ತಿಸಬೇಕಾದ ಟಿಪ್ಪಣಿಯನ್ನು ಸಹಕಾರಿ ಮುಖ್ಯಕಾರ್ಯನಿರ್ವಾಹಕ ನೀಡಿದ್ದಾನೆಯೇ ಸಭೆಗೆ ಹಾಜರಾಗಲು ನೋಟೀಸ್ ಅವಧಿ ಉಪವಿಧಯಲ್ಲಿ ನಿಗದಿ ಪಡಿಸಿದಂತೆ ನೀಡಲಾಗಿದೆಯೇ? ಹಾಜರಿ ಪುಸ್ತಕ ಇಡಲಾಗಿದೆಯೇ?ಗೈರು ಹಾಜರಿ ದಾಖಲಿಸಲಾಗಿದೆಯೇ? ಸಹಿ ಪಡೆಯಲಾಗಿದೆಯೇ?ಸಭಾ ನಡವಳಿಕೆಯನ್ನು ನೈಜವಾಗಿ, ಯಥಾವತ್ತಾಗಿ ದಾಖಲು ಮಾಡುವ ವ್ಯವಸ್ಥೆ ಇದೆಯೇ? ಸಭಾ ನಡವಳಿಕೆಗಳನ್ನು ಮುಖ್ಯಕಾರ್ಯನಿರ್ವಾಹಕ ದಾಖಲಿಸಿದ್ದಾನೆಯೇ, ಸಭಾ ನಡವಳಿಕೆಗಳ ಪ್ರತಿಯನ್ನು ಸಭೆ ನಂತರ ನಿರ್ದೇಶಕರಿಗೆ ರವಾನಿಸಿದೆಯೇ, ಆ ಬಗ್ಗೆ ಬಂದ ಹಿಂಬರಹಗಳ ದಾಖಲೆ ಇದೆಯೇ, ಸಭಾ ನಡವಳಿಕೆಗಳಿಗೆ ಮುಖ್ಯಕಾರ್ಯನಿರ್ವಾಹಕನ ಜೊತೆ ಸಹಕಾರಿ ಅಧ್ಯಕ್ಷರ ಸಹಿ ಪಡೆಯಲಾಗಿದೆಯೇ, ಇದನ್ನು ಪರಿಶೀಲಿಸಿದ ನಂತರ ಸಭೆ ನಿಗದಿ ಪಡಿಸುವ ಜವಾಬ್ದಾರಿ ಉಪವಿಧಿಗಳಲ್ಲಿ ಯಾರಿಗೆ ನಿಗದಿಯಾಗಿದೆ. ಅವರು ತೆಗೆದುಕೊಂಡ ಕ್ರಮವೇನು. ಸಭೆ ಕರೆಯಲು ಏಕೆ ಸಾಧ್ಯವಾಗಿಲ್ಲ. ಮಂಡಳಿ ಸಭೆ ಕರೆದಿಲ್ಲವೆಂದು ವಿಚಾರಣೆ ಆದೇಶಿಸಿದ್ದರೆ, ಈ ಮೇಲ್ಕಂಡ ಎಲ್ಲಾ ವಿಷಯಗಳು ಪರಿಶೀಲಿಸಿ, ಮಂಡಳಿ ನಿರ್ದೇಶಕರ ಮತ್ತು ಮುಖ್ಯಕಾರ್ಯನಿರ್ವಾಹಕನಿಗೆ ನೋಟೀಸ್ ನೀಡಿ, ವಿವರಣೆ ಪಡೆದು ದಾಖಲೆಗಳನ್ನು ಮರು ಪರಿಶೀಲಿಸಿ, ಸಭೆ ಕರೆಯದ ಬಗ್ಗೆ ವರದಿ ನೀಡುವಾಗ, ಯಾರು ಜವಾಬ್ದಾರರು ಹಾಗೂ ಯಾರು ಕರ್ತವ್ಯದಲ್ಲಿ ಚ್ಯುತಿ ಮಾಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ದಾಖಲಿಸಿ ವರದಿ ನೀಡಬೇಕು.

**2 ಮಂಡಳಿ ಚುನಾವಣೆ ನಡೆಸಲು ಕ್ರಮಗಳ ಬಗ್ಗೆ ವಿಚಾರಣೆ ಆದೇಶಿಸಿದ್ದರೆ**

ಮುಖ್ಯಕಾರ್ಯನಿರ್ವಾಹಕ, ಮಂಡಳಿ ಮುಂದೆ (6) ತಿಂಗಳ ಪೂರ್ವದಲ್ಲಿ ಮಂಡಳಿಯ ರಚನೆ ವಿಷಯ ಮಂಡಿಸಿ, ಚುನಾವಣಾ ಪ್ರಾಧಿಕಾರಕ್ಕೆ ಪತ್ರ ಬರೆದ ಬಗ್ಗೆ ಕ್ರಮ ಪರಿಶೀಲಿಸಬೇಕು, ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸಿದ ಪ್ರಸ್ತಾವನೆ ಜೊತೆ, ಕರಡು ಮತದಾರರ ಪಟ್ಟಿ ಠರಾವಿನ ಪ್ರತಿ, ಲಗತ್ತಿಸಿ ಕಳುಹಿಸಲಾಗಿದೆಯೇ? ಚುನಾವಣಾ ಪ್ರಾಧಿಕಾರದಿಂದ ಜರುಗಿದ ಕ್ರಮಗಳ ಬಗ್ಗೆ, ಚುನಾವಣಾಧಿಕಾರಿ ನೇಮಿಸಿದ ಬಗ್ಗೆ, ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ಬಗ್ಗೆ, ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಬಗ್ಗೆ, ಚುನಾವಣಾ ಏರ್ಪಾಡು ಮಾಡಿದ ಬಗ್ಗೆ ಮತ್ತು ಮತಗಟ್ಟೆ ಹಾಗೂ ಮತ ಚಲಾವಣೆ ಬಗ್ಗೆ ಚುನಾವಣೆ ಮಾಡಲು ನೇಮಿಸಿದ ಅಧಿಕಾರಿ ಸೂಚನೆಯಂತೆ ಮಾಡಲಾಗಿದೆಯೇ, ಈ ಕ್ರಮಗಳು ಜರುಗಿಸದೇ ಇದ್ದರೆ, ಆ ಕೃತ್ಯಕ್ಕೆ ಸಂಬಂಧಪಟ್ಟ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರ ಬೇರೆ ಸ್ಪಷ್ಟವಾಗಿ ಕ್ರಮಕ್ಕೆ ಸೂಚಿಸಬೇಕು.

**3) ಹಣದುರುಪಯೋಗಕ್ಕೆ ಸಂಬಂಧಪಟ್ಟಂತೆ**

ಉಪವಿಧಿಗಳನ್ವಯ, ಚರ/ಸ್ಥಿರ ಆಸ್ತಿಯ ನಿರ್ವಹಣೆ ಬಗ್ಗೆ ಉಪವಿಧಿಗಳಲ್ಲಿ ನಿಗದಿ ಪಡಿಸಿದ ಕೆಲಸ ಹಂಚಿಕೆ/ಜವಾಬ್ದಾರಿ ನಿಗದಿ ಪಡಿಸಿದ ದಾಖಲೆಗಳ ಪರಿಶೀಲಿಸಿದೆ, ನಗದು ನಿರ್ವಹಣೆ ಏಕ ವ್ಯಕ್ತಿ ಅಥವಾ ಜಂಟಿ ಜವಾಬ್ದಾರಿಯೇ? ದಿನ ನಿತ್ಯ ನಗದು ನಿರ್ವಹಿಸುವ ಮತ್ತು ಭದ್ರತೆ ವ್ಯವಸ್ಥೆಗೆ ಜವಾಬ್ದಾರಿ, ಸುರಕ್ಷತೆ ಬಗ್ಗೆ ತೆಗೆದುಕೊಂಡ ಕ್ರಮ, ದಾಸ್ತಾನು ಮಳಿಗೆ ನಿಯಂತ್ರಣ ಯಾರಿಗಿದೆ. ಅದನ್ನು ಪರಿಶೀಲಿಸುವ ಅಧಿಕಾರ ಆತನ ಕೆಲಸ ನಿರ್ವಹಿಸಿದ್ದಾನೆಯೇ, ಅವನ ಮೇಲ್ವಿಚಾರಕರು, ಅವರ ಕೆಲಸ ನಿರ್ವಹಿಸಿದ್ದಾರೆಯೇ, ಹಣ ದುರುಪಯೋಗ ಎಷ್ಟು ಅವಧಿಯಿಂದ ನಡೆಯುತ್ತಿದೆ, ಮೇಲ್ವಿಚಾರಕರು ತನ್ನ ಕೆಲಸ ಸಮರ್ಪಕವಾಗಿ ಮಾಡಿದ್ದಾರೆಯೇ? ಅಥವಾ ವಿಫಲವಾಗಿದ್ದರೆಯೇ, ಮತ್ತು ಹಣದುರುಪಯೋಗ ಬೆಳಕಿಗೆ ಬಂದಿದ್ದು ಹೇಗೆ, ಯಾರು ಪತ್ತೆ ಹಚ್ಚಿದರು, ಯಾರ ಮೇಲೆ ಜವಾಬ್ದಾರಿ ನಿಗದಿ ಮಾಡಲಾಗಿತ್ತು, ಅವರ ಮೇಲ್ವಿಚಾರಕರು ಯಾರು ತಮ್ಮ ಕರ್ತವ್ಯ ನಿರ್ವಹಿಸಿಲ್ಲ.

ಈ ಮೇಲ್ಕಂಡಂತೆ ವಿಚಾರಣಾಧಿಕಾರಿ ಪ್ರತಿಯೊಂದು ಪ್ರಕರಣದಲ್ಲಿ ವಿವಿಧ ಆಯಾಮಗಳಿಂದ ಪರಿಶೀಲಿಸಿ, ದಾಖಲೆಗಳ ಆಧಾರದ ಮೇಲೆ, ವ್ಯಯಕ್ತಿಕ ಮತ್ತು ಸಾಮೂಹಿಕ ಜವಾಬ್ದಾರಿ ನಿಗದಿ ಪಡಿಸಬೇಕು.

**ವಿಚಾರಣಾ ವರದಿ ಬಂದ ನಂತರದ ಕ್ರಮ**

ವಿಚಾರಣಾಧಿಕಾರಿ ವರದಿಯನ್ನು ನಿಬಂಧಕರಿಗೆ ಸಲ್ಲಿಸಿದಾಗ, ಆ ವರದಿ ಪ್ರತಿಯನ್ನು (1) ಸಂಯುಕ್ತ ಸಹಕಾರಿಗೆ (2) ವಿಚಾರಣೆ ಮಾಡಿದ ಸಹಕಾರಿಗೆ (3) ಸದಸ್ಯರ ಮನವಿ ಮೇಲೆ ವಿಚಾರಣೆ ಮಾಡಿದ್ದರೆ, ಅಂತಹ ಸದಸ್ಯರಿಗೆ/ಅರ್ಜಿದಾರರಿಗೆ ಅಥವಾ ಸಾಲ ನೀಡಿದ ಸಂಸ್ಥೆಗೆ ಅಥವಾ ಮನವಿದಾರರಿಗೆ ಹಾಗೂ ಸಹಕಾರಿ ಬ್ಯಾಂಕ್‌ಗೆ ಸಂಬಂಧಪಟ್ಟಿದ್ದರೆ, ಭಾರತೀಯ ರಿಜರ್ವ್ ಬ್ಯಾಂಕ್‌ಗೆ ಪ್ರತಿ ರವಾನಿಸತಕ್ಕದ್ದು.

**ವಿಚಾರಣಾ ವೆಚ್ಚ ನಿರ್ಧರಿಸುವುದು**

ವಿಚಾರಣೆ ಮಾಡಲು ನಿಬಂಧಕರ ವಿಚಾರಣಾಧಿಕಾರಿ ನೇಮಿಸಿದಾಗ, ಆ ವಿಚಾರಣೆಗೆ ತಗಲುವ ವೆಚ್ಚವನ್ನು ನಿಗದಿ ಪಡಿಸತಕ್ಕದ್ದು, ಇದನ್ನು ನಿರ್ಧರಿಸಿದಾಗ, ವಿಚಾರಣೆಗೆ ವಯಿಸಿದ ಮಾನವ ದಿನಗಳ ಆಧಾರದ ಮೇಲೆ ನಿಬಂಧಕರು ನಿರ್ಧರಿಸುತ್ತಾರೆ. ಈ ವೆಚ್ಚವನ್ನು ಸಹಕಾರಿಯು ಮನವಿಯಂತೆ ನಡೆಸಿದ್ದರೆ ಸಹಕಾರಿಯೇ ವಿಚಾರಣಾ ವೆಚ್ಚವನ್ನು ಭರಿಸಬೇಕು. ಅರ್ಜಿದಾರರು ಸಹಕಾರಿಯ ಸದಸ್ಯರಿದ್ದರೆ, ಆ ಸದಸ್ಯರೇ ವೆಚ್ಚ ಭರಿಸಬೇಕೆಂದು ನಿಬಂಧಕರು ಆದೇಶಿಸಬಹುದು. ಇದನ್ನು ನಿರ್ಧರಿಸುವುದು ನಿಬಂಧಕರ ವ್ಯಾಪ್ತಿಗೆ ಸೇರುತ್ತಿದೆ.

**ಕಲಂ.36 : ವ್ಯಕ್ತಿಗಳನ್ನು ಮತ್ತು ದಸ್ತಾವೇಜುಗಳನ್ನು ಸಮನುಮಾಡಲು ಮತ್ತು ಪರಿಶೀಲಿಸಲು ಅಧಿಕಾರ :**

(1) "[ರಿಜಿಸ್ಟ್ರಾರನು ಅಥವಾ ಸಂದರ್ಭಾನುಸಾರ ವಿಚಾರಣಾಕಾರಿಯು] ವಿಚಾರಣೆ ಪ್ರಾರಂಭವಾಗುವ ದಿನಾಂಕದ ಬಗ್ಗೆ ಹದಿನೈದು ದಿನಗಳಿಗೆ ಕಡಿಮೆ ಇಲ್ಲದಂತೆ ಬರಹದಲ್ಲಿರುವ ನೋಟೀಸನ್ನು ಸಂಬಂಧಪಟ್ಟ ಸಹಕಾರಿಗೆ ನೀಡತಕ್ಕದ್ದು. ಪರಂತು ಕಾರಣಗಳನ್ನು ಬರಹದಲ್ಲಿ ದಾಖಲು ಮಾಡಿ ಅಲ್ಪಾವಧಿಯ ನೋಟೀಸನ್ನು ನೀಡಬಹುದು.

(2) ವಿಚಾರಣೆಯನ್ನು ನಡೆಸುವ [ರಿಜಿಸ್ಟ್ರಾರನು ಅಥವಾ ವಿಚಾರಣಾಕಾರಿಯು] (3)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ಏಳು ದಿನಗಳಿಗೆ ಕಡಿಮೆ ಇಲ್ಲದ ಸೂಕ್ತ ಅವಧಿಯನ್ನು ನೀಡಬಹುದು.

(3) ಈ ಅಧಿನಿಯಮದಡಿ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಅಂಥ ವಿಚಾರಣೆಯನ್ನು ನಡೆಸುವ ರಿಜಿಸ್ಟ್ರಾರನು ಅಥವಾ ವಿಚಾರಣಾಧಿಕಾರಿಯು, –

(ಎ) ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಅವಶ್ಯಕವೆಂದು ತಾನು ಭಾವಿಸಬಹುದಾದಂಥ ರಸೀದಿಗಳು, ವೋಚರುಗಳು, ತಃಖ್ತೆಗಳು, ವಿವರಣಾ ಪತ್ರಗಳು, ಪತ್ರ ವ್ಯವಹಾರ, ನೋಟೀಸು ಅಥವಾ ಇತರ ಯಾವುದೇ ದಸ್ತಾವೇಜುಗಳನ್ನು ಹಾಜರು ಪಡಿಸುವಂತೆ ಅಧ್ಯಕ್ಷ ಅಥವಾ ಸಭಾಪತಿಯನ್ನು ಅಥವಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯನ್ನು ಅಥವಾ ಸಂಬಂಧಪಟ್ಟ ಇತರ ಪ್ರಾಧಿಕಾರವನ್ನು ಲಿಖಿತದಲ್ಲಿ ಅಗತ್ಯ ಪಡಿಸಬಹುದು;

(ಬಿ) ಸಹಕಾರಿಗೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಮತ್ತು ಇತರ ಸ್ವತ್ತುಗಳನ್ನು ಪರಿಶೀಲಿಸಲು ಮುಕ್ತ ಅವಕಾಶ ಹೊಂದಿರತಕ್ಕದ್ದು ಮತ್ತು ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಛೇರಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಯಾವುದೇ ಅಂಥ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಅಥವಾ ಇತರ ಸ್ವತ್ತುಗಳನ್ನು ಹಾಜರುಪಡಿಸುವುದಕ್ಕಾಗಿ, ಇವುಗಳ ಸ್ವಾಧೀನತೆ ಹೊಂದಿರುವ ಅಥವಾ ಅಭಿರಕ್ಷೆಗೆ ಜವಾಬ್ದಾರನಾಗಿರುವ ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡಬಹುದು;

(ಸಿ) ವಿಚಾರಣೆಯ ಉದ್ದೇಶಕ್ಕಾಗಿ ಸಂದರ್ಭಾನುಸಾರವಾಗಿ ಒಂದು ಹಣಕಾಸು ಬ್ಯಾಂಕಿನ ಅಥವಾ ಕ್ರೆಡಿಟ್ ಏಜೆನ್ಸಿಯ ಯಾರೇ ಅಧಿಕಾರಿಯನ್ನು ಅಥವಾ ಸಹಕಾರಿಯೊಡನೆ ಯಾವುದೇ ರೀತಿಯ ವ್ಯವಹಾರ ಸಂಬಂಧವುಳ್ಳ ಯಾವೊಬ್ಬ ವ್ಯಕ್ತಿಯನ್ನು ಅಥವಾ ಸಹಕಾರಿಯ ಕಾರ್ಯನಿರ್ವಹಣೆಗೆ ಸಂಬಂಧ ಪಟ್ಟಿರುವ ಯಾವೊಬ್ಬ ವ್ಯಕ್ತಿಯನ್ನು, ಅಥವಾ ಸಹಕಾರಿಯ ವ್ಯವಹಾರಗಳ ಬಗ್ಗೆ ತಿಳುವಳಿಕೆ ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಸಹಕಾರಿಯ ವ್ಯವಹಾರಗಳಿಗೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ದಾಖಲೆಗಳು ಅಥವಾ ದಸ್ತಾವೇಜುಗಳು ಯಾವುದಾದರೂ ಇದ್ದರೆ ಅವುಗಳನ್ನು ಹಾಜರುಪಡಿಸಲು ಮತ್ತು ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಅಥವಾ ಶಾಖಾ ಕಛೇರಿಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ವಿಚಾರಣೆಯ ಸಲುವಾಗಿ ವಿಚಾರಣಾಧಿಕಾರಿಯು ಅಗತ್ಯ ಪಡಿಸುವಂಥ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಒದಗಿಸಲು ಸಮನು ಮಾಡಬಹುದು. ಮತ್ತು

(ಡಿ) ಸಹಕಾರಿಯ ಸಾಮಾನ್ಯ ಸಭೆಗಾಗಿ ನೋಟೀಸಿನ ಅವಧಿಯನ್ನು ನಿರ್ದಿಷ್ಟ ಪಡಿಸುವ ಯಾವುದೇ ನಿಯಮ ಅಥವಾ ಉಪವಿಧಿಯಲ್ಲಿ ಏನೇ ಇದ್ದರೂ, ಸಹಕಾರಿಯ ಕೇಂದ್ರ ಕಛೇರಿಯ ಅಥವಾ ಅದರ ಯಾವುದೇ ಶಾಖೆಯ ಅಂಥ ಸ್ಥಳ ಅಥವಾ ಅಂಥ ಸಮಯದಲ್ಲಿ ಮತ್ತು ತಾನು ನಿರ್ದೇಶಿಸಬಹುದಾದಂಥ ವಿಷಯಗಳ ಬಗ್ಗೆ ನಿರ್ಣಯಿಸಲು ಸಾಮಾನ್ಯ ಸಭೆಯನ್ನು ಕರೆಯುವುದಕ್ಕೆ ಸಹಕಾರಿಯ ಪದಾಧಿಕಾರಿಗಳನ್ನು ಅಗತ್ಯ ಪಡಿಸಬಹುದು ಮತ್ತು ಅಂಥ ಸಭೆಯನ್ನು ಕರೆಯಲು ಸಹಕಾರಿಯ ಪದಾಧಿಕಾರಿಗಳು ನಿರಾಕರಿಸಿದಲ್ಲಿ ಅಥವಾ ವಿಫಲರಾದಲ್ಲಿ, ಅವನು ತಾನೇ ಸಭೆಯನ್ನು ಕರೆಯುವ ಅಧಿಕಾರ ಹೊಂದಿರತಕ್ಕದ್ದು.

**ವಿವರಣೆ :** (ಡಿ) ಖಂಡದ ಅಡಿಯಲ್ಲಿ ಕರೆದ ಯಾವುದೇ ಸಭೆಯು, ಸಹಕಾರಿಯ ಉಪವಿಧಿಯ ಅಡಿಯಲ್ಲಿ ಕರೆದ ಸಾಮಾನ್ಯ ಸಭೆಯ ಅಧಿಕಾರಗಳನ್ನೇ ಹೊಂದಿರತಕ್ಕದ್ದು ಮತ್ತು ಅಂಥ ಸಭೆಗಳಿಗೆ ಕೋರಂನ ಅವಶ್ಯಕತೆ ಇರುವುದಿಲ್ಲ ಎಂಬುದನ್ನು ಬಿಟ್ಟರೆ ಸಭಾ ಕಲಾಪಗಳು ಅಂಥ ಉಪವಿಧಿಗಳಿಂದ ನಿಯಂತ್ರಿತವಾಗತಕ್ಕದ್ದು."

**ಕಲಂ.37 : ವಿಚಾರಣಾ ವರದಿಯ ಬಗ್ಗೆ ಕ್ರಮ :**

"ರಿಜಿಸ್ಟ್ರಾರನಿಗೆ ಅಂಥ ವಿಚಾರಣೆಯ ನಂತರ ಯಾವೊಬ್ಬ ಅಥವಾ ಎಲ್ಲಾ ಪದಾಧಿಕಾರಿಗಳು ಅಥವಾ ನಿರ್ದೇಶಕರು ಅಥವಾ ಮುಖ್ಯಕಾರ್ಯನಿರ್ವಾಹಕರು ವೈಯಕ್ತಿಕವಾಗಿ ಅಥವಾ ಜಂಟಿಯಾಗಿ, ಅಧಿನಿಯಮಕ್ಕೆ, ನಿಯಮಗಳಿಗೆ ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಸಂದಾಯಗಳನ್ನು ಮಾಡಿದ್ದಾರೆಂದು ಮತ್ತು ವಿಶ್ವಾಸದ್ರೋಹ ಅಥವಾ ನಿರ್ಲಕ್ಷ್ಯದಿಂದ ಸಹಕಾರಿಯ ಸ್ವತ್ತುಗಳಿಗೆ ನಷ್ಟ ಅಥವಾ ಕೊರತೆಯನ್ನುಂಟು ಮಾಡಿದ್ದಾರೆಂದು ಅಥವಾ ಅಂಥ ಸಹಕಾರಿಗೆ ಸೇರಿದ ಯಾವುದೇ ಹಣ ಅಥವಾ ಆಸ್ತಿಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಅಥವಾ ಮೋಸದಿಂದ ಉಳಿಸಿಕೊಂಡಿದ್ದಾರೆಂದು ಮನದಟ್ಟಾದರೆ, ಅವರು ಬದ್ದರಾಗಬಹುದಾದ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳಿಗೆ ಪ್ರತಿಕೂಲವಾಗದಂತೆ, ವಿಚಾರಣಾ ವರದಿಯ ನಿರ್ಣಯಗಳನ್ನು ಚರ್ಚಿಸುವುದಕ್ಕಾಗಿ ಮತ್ತು ಸಂಬಂಧಪಟ್ಟವರ ವಿರುದ್ಧ ಅವಶ್ಯ ಕ್ರಮಕೈಗೊಳ್ಳಲು (ರಿಜಿಸ್ಟ್ರಾರನು) ನಿರ್ದಿಷ್ಟ ಪಡಿಸುವ ಅಂಥ ಸೂಕ್ತ ಸಮಯದೊಳಗೆ ಸಾಮಾನ್ಯ ಸಭೆಯನ್ನು ಕರೆಯುವಂತೆ ಮಂಡಳಿಗೆ ನಿರ್ದೇಶಿಸತಕ್ಕದ್ದು.

[ಸಾಮಾನ್ಯ ನಿಕಾಯ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ವಿಫಲವಾದಲ್ಲಿ ರಿಜಿಸ್ಟ್ರಾರನು ತಪ್ಪಿತಸ್ಥರ ವಿರುದ್ಧ ಜರುಗಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶನ ನೀಡತಕ್ಕದ್ದು ಹಾಗೂ ಲೋಪದೋಷಗಳು ಸರಿಪಡಿಸುವವರೆಗೂ ಅನುಪಾಲನಾ ಕ್ರಮ ಜಾರಿಗೊಳಿಸತಕ್ಕದ್ದು.]"

ವಿಚಾರಣೆಯನ್ನು ನಿಬಂಧಕರು ಸ್ವಇಚ್ಛೆಯಿಂದಲೂ ಸಂಯುಕ್ತ ಸಹಕಾರಿಯ ಲಿಖಿತ ಮನವಿ ಅಥವಾ ಸಮಿತಿಯ ಸದಸ್ಯರ ಬಹುಸಂಖ್ಯೆಯ ಸದಸ್ಯರು ವಿನಂತಿಸಿದಾಗ ಅಥವಾ 1/3 ಭಾಗದಷ್ಟು ಸಂಘದ ಸದಸ್ಯರು ವಿನಂತಿಸಿದಾಗ, ನಿಬಂಧಕರು ವಿಚಾರಣೆಗೆ ಆದೇಶಿಸಬಹುದು. ಆದೇಶ ಹೊರಡಿಸುವಾಗ ಯಾವುದಾದರೂ ಒಂದು ಸ್ಪಷ್ಟ ವಿಷಯವಲ್ಲದೇ ಸಾಮಾನ್ಯ ವಿಷಯಕ್ಕೆ ಆದೇಶಕ್ಕೆ ಹೊರಡಿಸಿದಾಗ, ಆ ವಿಚಾರಣೆಯು, ಆ ಸಹಕಾರಿಯ ವ್ಯವಸ್ಥೆ, ಆಡಳಿತ ಮತ್ತು ಸಾಂಪತ್ತಿಕ ಸ್ಥಿತಿಗೆ ಸಂಬಂಧಪಟ್ಟಂತೆ ನಡೆಸಲು ಆದೇಶಿಸಬಹುದು. (ಸಾಮಾನ್ಯವಾಗಿ ವಿಚಾರಣೆ ಮಾಡುವುದು ಸಹಕಾರಿ ಸದಸ್ಯರ ಹಿತದೃಷ್ಟಿಯಿಂದ. ಲೆಕ್ಕತಪಾಸಣೆ ಮಾಡುವ ಮೂಲ ಉದ್ದೇಶ ಒಂದು ಸಹಕಾರಿ ಸಂರಕ್ಷಿಸುವುದು. ಮತ್ತು ಅದೇ ರೀತಿ ಪರಿವೀಕ್ಷಣೆ ಮಾಡುವುದು ಸಾಲ ಕೊಟ್ಟವರ ಸಂರಕ್ಷಣೆಗಾಗಿ. ಎಐಆರ್ 1956 ಎಎಲ್‌ಎಲ್ 43.)

ವಿಚಾರಣೆಗೆ ಆದೇಶಿಸಿದಾಗ ಅದರ ಉದ್ದೇಶ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಣೆಯನ್ನು ಪರಿಶೀಲಿಸಲು ಸಾಧ್ಯವಾಗದೇ ಇದ್ದಾಗ ಲೆಕ್ಕಪರಿಶೋಧನಾಧಿಕಾರಿಯು ವಿಚಾರಣೆಯ ಅವಶ್ಯಕತೆ ಇದೆಯೆಂದು ನಮೂದಿಸುವುದು ಸಾಮಾನ್ಯ. ಲೆಕ್ಕತಪಾಸಣಾಧಿಕಾರಿಗೆ ಪೂರ್ಣ ಪ್ರಮಾಣದ ಅಧಿಕಾರಗಳಿದ್ದರೂ ವಿಚಾರಣೆಗೆ ಅವಶ್ಯಕತೆ ಇದೆಯೆಂದು ಶಿಫಾರಸ್ಸು ಮಾಡುವುದು ಸಾಧುವಲ್ಲದಿದ್ದರೂ, ಅಂತಹ ಶಿಫಾರಸ್ಸಿನನ್ವಯ ನಿಬಂಧಕರು ಸ್ವಇಚ್ಛೆಯಿಂದ ವಿಚಾರಣೆಗೆ ಆದೇಶಿಸುವ ಅಧಿಕಾರ ಹೊಂದಿರುತ್ತಾರೆ. ಹಾಗೂ ಆ ರೀತಿಯ ಶಿಫಾರಸ್ಸು ಇಲ್ಲದಿದ್ದರೂ ನಿಬಂಧಕರು ವಿಚಾರಣೆಗೆ ಆದೇಶ ಹೊರಡಿಸುವ ಅಧಿಕಾರ ಇದೆ.

ವಿಚಾರಣೆಗೆ ಆದೇಶಿಸುವುದು ಮೇಲ್ಕಂಡ 3 ಷರತ್ತಿಗಳಿಗನ್ವಯ ನಿಬಂಧಕರ ಜವಾಬ್ದಾರಿ. ವಿಚಾರಣೆ ಆದೇಶವನ್ನು ಹೊರಡಿಸಿದಾಗ ಕಾಯಿದೆಯಲ್ಲಿ ಅವಧಿಯನ್ನು ನಿರ್ಧರಿಸಿದೆ. ಅಂದರೆ ಆದೇಶಿಸಿದ ದಿನಾಂಕದಿಂದ 12 ತಿಂಗಳೊಳಗಾಗಿ ವಿಚಾರಣಾ ವರದಿಯನ್ನು ವಿಚಾರಣಾಧಿಕಾರಿಯು ಸಲ್ಲಿಸಬೇಕು. ವಿಶೇಷ ಸಂದರ್ಭದಲ್ಲಿ ಈ ಅವಧಿಯನ್ನು 6 ತಿಂಗಳು ವಿಸ್ತರಿಸಲು ನಿಬಂಧಕರಿಗೆ ಅವಕಾಶವಿದೆ. ಅಂದರೆ 18 ತಿಂಗಳ ಅವಧಿಯಲ್ಲಿ ಯಾವುದೇ ವಿಚಾರಣೆಯನ್ನು ಮುಕ್ತಾಯಗೊಳಿಸುವುದು ವಿಚಾರಣಾಧಿಕಾರಿಯ ಕರ್ತವ್ಯ ಮತ್ತು ಜವಾಬ್ದಾರಿ.

**ವಿಚಾರಣೆಗೆ ಆದೇಶ ಮಾಡುವ ಸಂದರ್ಭದಲ್ಲಿ ನಿಬಂಧಕರು ಗಮನಿಸಬೇಕಾದ ಅಂಶಗಳೇನೆಂದರೆ,**

1. ಸಹಕಾರಿ ಉಪವಿಧಿಗಳನ್ನು ಪಾಲಿಸದೇ ಇರುವ ಸಂದರ್ಭ

2. ಸಹಕಾರಿ ಆರ್ಥಿಕ ಸ್ಥಿತಿ ಕೆಟ್ಟಿದ್ದರೆ ಅಥವಾ ಕೆಡುತ್ತಿದ್ದರೆ

3. ಆಡಳಿತ ಮಂಡಳಿಯು ನಿಷ್ಕ್ರಿಯತೆಯಿಂದ ಅಥವಾ ಯಾವುದೇ ಕ್ರಮವನ್ನು ಜರುಗಿಸದಿದ್ದರೆ ಅಂತಹ ಸಂದರ್ಭದಲ್ಲಿ ವಿಚಾರಣೆಗೆ ಆದೇಶಿಸಬಹುದಾಗಿದೆ.

ಅಂದರೆ ವಿಚಾರಣೆ ಆದೇಶದಲ್ಲಿ ಸಾಮಾನ್ಯವಾಗಿ ಸಹಕಾರಿ ರಚನೆ, ನಿರ್ವಹಣೆ ಮತ್ತು ಆರ್ಥಿಕ ವ್ಯವಹಾರದ ಬಗ್ಗೆ ಆದೇಶಿಸುವಾಗ ಈ ಮೇಲ್ಕಂಡ 3 ಅಂಶಗಳನ್ನು ಗಮನಿಸಿಕೊಂಡು ವಿಚಾರಣೆಗೆ ಆದೇಶ ಮಾಡತಕ್ಕದ್ದು.

ವಿಚಾರಣೆಗೆ ಆದೇಶಿಸಿದ ನಂತರ ವಿಚಾರಣಾಧಿಕಾರಿಯ ಅಧಿಕಾರಗಳು

1. ಸಹಕಾರಿ ಪುಸ್ತಕಗಳನ್ನು ದಾಖಲೆಗಳನ್ನು ಮತ್ತು ಆಸ್ತಿಗಳನ್ನು, ಲೆಕ್ಕಪತ್ರಗಳನ್ನು ಯಾವುದೇ ಸಮಯದಲ್ಲಿ ಬೇಕಾದರೂ ಪರಿಶೀಲಿಸುವ ಅಧಿಕಾರ ಹೊಂದಿರತಕ್ಕದ್ದು.

2. ಸಹಕಾರಿ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿಯನ್ನು ಸಮನ್ಸ್ ಮೂಲಕ ಹಾಜರಾಗುವಂತೆ ಆದೇಶಿಸಿ, ಅಂತಹ ವ್ಯಕ್ತಿ ಸಹಕಾರಿಯ ಆಸ್ತಿ ದಾಖಲೆಗಳನ್ನು ಹಾಜರುಪಡಿಸಲು ಆದೇಶಿಸುವಂತೆ ನಿರ್ದೇಶನ ನೀಡಬಹುದು.

3. ಸಹಕಾರಿ ವ್ಯವಹಾರದ ಬಗ್ಗೆ ಯಾರಾದರೂ ವ್ಯಕ್ತಿಗೆ ಮಾಹಿತಿ ಇದ್ದರೆ, ಅಂತಹ ವ್ಯಕ್ತಿಯನ್ನು ಪ್ರಮಾಣವನ್ನು ಭೋಧಿಸಿ, ಹೇಳಿಕೆಯನ್ನು ಪಡೆಯುವ ಅಧಿಕಾರ ಹೊಂದಿರತಕ್ಕದ್ದು.

4. ಸಹಕಾರಿ ವ್ಯವಹಾರದ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳಲು ಮಹಾಸಭೆ ಕರೆಯುವುದು ಅವಶ್ಯಕವೆಂದು ತೀರ್ಮಾನಿಸಿದರೆ ಅಂತಹ ಸಭೆ ಕರೆಯಲು ವಿಚಾರಣಾಧಿಕಾರಿಯು ಸಹಕಾರಿಗೆ ಸೂಚನೆಯನ್ನು ನೀಡತಕ್ಕದ್ದು.

5. ಅಂತಹ ಸಭೆಯನ್ನು ಸಹಕಾರಿ ಕರೆಯದೇ ಇದ್ದಾಗ, ವಿಚಾರಣಾಧಿಕಾರಿಯೇ ಮಹಾಸಭೆಯನ್ನು ಕರೆಯಲು ಅಧಿಕಾರ ಹೊಂದಿರತಕ್ಕದ್ದು.

6. ವಿಚಾರಣಾಧಿಕಾರಿಯು ಕರೆದ ಮಹಾಸಭೆ, ಸಹಕಾರಿ ಉಪವಿಧಿಗಳಲ್ಲಿರುವಂತೆ ನಡೆಸಬಹುದಾಗಿದ್ದು, ಈ ಸಭೆಗೆ ಕೋರಂ ಅವಶ್ಯಕತೆ ಇರತಕ್ಕದ್ದಲ್ಲ.

7. ವಿಚಾರಣಾ ವಿಷಯದ ಬಗ್ಗೆ ಆಡಳಿತ ಮಂಡಳಿಯ ಸಭೆಯನ್ನು ಕರೆಯಲು ಸೂಚಿಸಬಹುದು. ಮತ್ತು ಆ ಸಭೆಯಲ್ಲಿ ಸಹಕಾರಿ ವ್ಯವಹಾರದಲ್ಲಿ ನಡೆಯುತ್ತಿರುವ ನ್ಯೂನತೆಗಳನ್ನು ಚರ್ಚಿಸಬಹುದು.

ವಿಚಾರಣಾ ವರದಿಯಲ್ಲಿ ಸ್ಪಷ್ಟ ವಿಷಯಗಳ ವಿಚಾರಣೆಗೆ ಆದೇಶಿಸದಿದ್ದರೆ, ಈ ಕೆಳಕಂಡ ವಿಷಯಗಳಲ್ಲಿ ವರದಿ ಇರತಕ್ಕದ್ದು.

**I. ಸಹಕಾರಿಯ ಸಾಮಾನ್ಯ ವಿಷಯಗಳು**

1. ಸಹಕಾರಿಯ ಹೆಸರು, ವಿಳಾಸ ಮತ್ತು ನೋಂದಣಿ ಸಂಖ್ಯೆ, ದಿನಾಂಕ

2. ಸಹಕಾರಿಯ ಕಾರ್ಯವ್ಯಾಪ್ತಿ

3. ಉಪನಿಯಮಗಳ ತಿದ್ದುಪಡಿಯಾಗಿದ್ದರೆ ಆ ತಿದ್ದುಪಡಿಗಳ ವಿವರಗಳು

4. ಸಹಕಾರಿಯ ಇತ್ತೀಚಿನ ಆಡಿಟ್ ನಡೆದ ದಿನಾಂಕ, ಆಡಿಟ್ ಆದ ಅವಧಿ, ಆಡಿಟ್ ಶ್ರೇಣಿ ಮತ್ತು ಕಳೆದ 5 ವರ್ಷಗಳಲ್ಲಿ ಈ ಸಹಕಾರಿಗೆ ಕೊಟ್ಟ ಶ್ರೇಣಿ ಮತ್ತು ಲೆಕ್ಕತಪಾಸಣೆ ಮಾಡಿದ ಅಧಿಕಾರಿ ಹೆಸರು ಮತ್ತು ಆಡಿಟ್ ವರದಿ ಬಂದ ದಿನಾಂಕ ಮತ್ತು ಅನುಪಾಲನಾ ವರದಿಯನ್ನು ಸಲ್ಲಿಸಲಾಗಿದೆಯೇ, ಇಲ್ಲವೇ ಎಂಬುದನ್ನು ತಿಳಿಸುವುದು.

5. ಸದಸ್ಯರ ಸಂಖ್ಯೆ, ಹೊಸದಾಗಿ ಸೇರ್ಪಡೆಯಾದ ಸದಸ್ಯರು, ಸದಸ್ಯರ ವರ್ಗಗಳು, ಮತ್ತಿತರೆ

**II ಆಡಳಿತ:**

1. ಮಹಾಸಭೆಯನ್ನು ಕಾಯಿದೆಯಲ್ಲಿ ನಿಗಧಿಪಡಿಸಿದಂತೆ ನಡೆಸಲಾಗಿದೆಯೇ, ಹಿಂದಿನ ಮಹಾಸಭೆಯ ದಿನಾಂಕ, ವೇಳೆ, ಸ್ಥಳ ಮತ್ತು ನಡವಳಿಗಳ ವಿವರ.

2. ಆಡಳಿತ ಮಂಡಳಿಯ ಸಭೆಗಳನ್ನು ನಡೆಸುವ ಅವಧಿ, ನಡವಳಿಕೆಗಳನ್ನು ದಾಖಲಿಸಿದ ಠರಾವನ್ನು ಪರಿಶೀಲಿಸಿ ಷರಾ ಬರೆಯುವುದು ಮತ್ತು ಉಪಸಮಿತಿಗಳು ರಚನೆಯಾಗಿದ್ದರೆ ಆ ಸಮಿತಿಗಳ ನಡಾವಳಿಗಳನ್ನು ಪರಿಶೀಲಿಸುವುದು.

3. ವಿಶೇಷ ಮಹಾಸಭೆ ಏನಾದರೂ ಜರುಗಿದ್ದರೆ ಅದರ ವಿವರಗಳು

4. ಮಹಾಸಭೆ, ವಿಶೇಷ ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಮತ್ತು ಚರ್ಚಿಸಿದ ವಿಷಯಗಳ ಬಗ್ಗೆ ವಿವರಿಸುವುದು.

5. ಆಡಳಿತ ಮಂಡಳಿಯ ಸಭೆಗಳ ನಡಾವಳಿಗಳನ್ನು ಪರಿಶೀಲಿಸುವುದರ ಜೊತೆಗೆ ಹಾಜರಿದ್ದ ಸದಸ್ಯರ ಸಂಖ್ಯೆ ಬಗ್ಗೆಯೂ ಟಿಪ್ಪಣಿ ಬರೆಯುವುದು.

6. ಹಣಕಾಸು ಪೂರೈಸುವ ಸಂಸ್ಥೆಗಳಿಂದ ನಾಮ ನಿರ್ದೇಶನಗೊಂಡ ವ್ಯಕ್ತಿಗಳು ಹಾಜರಿದ್ದರೆ ಎಂಬುದನ್ನು ದಾಖಲಿಸುವುದು.

7. ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ನಡವಳಿಕೆಗಳನ್ನು ದಾಖಲಿಸುವಾಗ ಕಾಯಿದೆ ಮತ್ತು ನಿಯಮಕ್ಕೆ ವಿರುದ್ಧವಾಗಿ ತೀರ್ಮಾನ ತೆಗೆದುಕೊಂಡಿದ್ದರೆ, ಅವುಗಳನ್ನು ದಾಖಲಿಸುವುದು.

8. ಸಹಕಾರಿ ನೌಕರರಿಗೆ ಕೆಲಸವನ್ನು ಹಂಚಲಾಗಿದೆಯೇ ಮತ್ತು ಆ ನೌಕರರಿಂದ ಸಾಕಷ್ಟು ಭದ್ರತೆಯನ್ನು ಪಡೆಯಲಾಗಿದೆಯೇ?

9. ಸಹಕಾರಿ ಮಂಜೂರು ಮಾಡಿದ ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಪಟ್ಟಂತೆ ಸುಸ್ತಿಯಾಗಿದ್ದರೆ ವಸೂಲಿ ಕ್ರಮ ಜರುಗಿಸಲಾಗಿದೆಯೇ, ವಸೂಲಾತಿ ಆದೇಶವನ್ನು ಪಡೆದಿದ್ದರೆ ಅವುಗಳನ್ನು ಜಾರಿ ಮಾಡಲಾಗುತ್ತಿದೆಯೇ ಎಂಬುದನ್ನು ದಾಖಲಿಸುವುದು.

**III ಆರ್ಥಿಕ ವಿಷಯಗಳು:**

1. ಸಹಕಾರಿ ವರ್ಷ ಮುಗಿದ 30 ದಿವಸದೊಳಗಾಗಿ ಆರ್ಥಿಕ ತಃಖ್ತೆಗಳನ್ನು ತಯಾರಿಸಿ ನಿಬಂಧಕರು ಸಂಯುಕ್ತ ಸಹಕಾರಿ ಮತ್ತು ಆಡಿಟ್ ಇಲಾಖೆಗೆ ರವಾನಿಸಲಾಗಿದೆಯೇ?

2. ವಿಚಾರಣೆ ಮಾಡುವ ಅವಧಿಗೆ ಆರ್ಥಿಕ ತಃಖ್ತೆಗಳನ್ನು ಪ್ರತ್ಯೇಕವಾಗಿ ತಯಾರಿಸಲಾಗಿದೆಯೇ

3. ಸಹಕಾರಿ ತನ್ನ ಹೆಚ್ಚುವರಿ ಸಂಪನ್ಮೂಲವನ್ನು ಅಥವಾ ನಿಧಿಗಳನ್ನು ಎಲ್ಲಿ ಹೂಡಿಕೆ ಮಾಡಿದ್ದಾರೆ, ಆ ಎಲ್ಲ ಹೂಡಿಕೆಗಳಿಗೂ ಅವಧಿ ಮುಗಿದ ಕೂಡಲೇ ಬಡ್ಡಿ ಅಥವಾ ಡಿವಿಡೆಂಡ್ ಪಾವತಿಯಾಗುತ್ತಿದೆಯೇ

4. ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಬಾಕಿಗಳನ್ನು ದೃಢೀಕರಿಸುವುದು.

5. ನಗದು ಮತ್ತು ಭದ್ರತೆಗಳನ್ನು ಪರಿಶೀಲಿಸುವುದು. ಮತ್ತು ದೃಢೀಕರಿಸುವುದು. ವ್ಯತ್ಯಾಸಗಳಿದ್ದರೆ ಅದನ್ನು ದಾಖಲಿಸುವುದು.

**IV ವ್ಯವಹಾರಿಕ ಪರಿಶೀಲನೆ**

1. ಸಹಕಾರಿ ಮಾಡುವ ಸಾಲ ಮತ್ತು ಸಾಲೇತರ ವ್ಯವಹಾರವನ್ನು ಪರಿಶೀಲಿಸುವುದು.

2. ಸಹಕಾರಿ ನಗದು ಪುಸ್ತಕ ಮತ್ತು ಇತರ ವಹಿಗಳನ್ನು ಲೆಕ್ಕಪತ್ರಗಳನ್ನು ಪರಿಶೀಲಿಸಿದ ಬಗ್ಗೆ ಸಹಕಾರಿ ನಿರ್ವಹಿಸುವ ವ್ಯವಹಾರದ ಬಗ್ಗೆ ವಹಿಗಳನ್ನು, ಕೊರತೆಗಳನ್ನು ಗೋದಾಮುಗಳನ್ನು, ಮಾರಾಟ ದರ ನಿಗಧಿಪಡಿಸುವುದನ್ನು, ಹಳೇ ನಿಷ್ಕ್ರಿಯ ವಸ್ತುಗಳ ವಿಲೇವಾರಿ ಇವುಗಳ ಬಗ್ಗೆ ಗೋದಾಮು, ಸಂಸ್ಕರಣೆ, ವ್ಯವಹಾರದ ಸಾಲ, ಮತ್ತಿತರೆ ಹಣದ ಉಪಯೋಗದ ಬಗ್ಗೆ.

V. ಸಹಕಾರಿ ಕಾಯಿದೆ ಮತ್ತು ನಿಯಮ ಮತ್ತು ಉಪವಿಧಿಗಳ ವಿರುದ್ಧ ತೆಗೆದುಕೊಂಡ ತೀರ್ಮಾನಗಳು ಮತ್ತು ಅದರಿಂದಾದ ಆರ್ಥಿಕ ನಷ್ಟಗಳನ್ನು ದಾಖಲಿಸುವುದು.

VI. ಈ ಹಿಂದೆ ವಿಚಾರಣೆ ಮಾಡಿದ ವರದಿಗೆ ಅನುಪಾಲನಾ ವರದಿ ಕೊಡಲಾಗಿದೆಯೇ, ಲೆಕ್ಕತಪಾಸಣಾ ವರದಿ ಮಾಡಲಾಗಿದೆಯೇ ಹಾಗೂ ಅನುಪಾಲನಾ ವರದಿ ಕೊಟ್ಟಿದ್ದಾರೆಯೇ? ಮತ್ತು ಪರಿವೀಕ್ಷಣಾ ವರದಿ ಮಾಡಲಾಗಿದೆಯೇ ಮತ್ತು ಅದಕ್ಕೆ ಅನುಪಾಲನಾ ವರದಿ ಕೊಡಲಾಗಿದೆಯೋ ಎಂಬುದನ್ನು ಪರಿಶೀಲಿಸುವುದು.

ವಿಚಾರಣೆಗೆ ಆದೇಶ ಮಾಡುವ ಅಧಿಕಾರಿಯು, ಯಾವ ಅಂಶಗಳ ಮೇಲೆ ವಿಚಾರಣೆ ಮಾಡಬೇಕೆಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಸಾಮಾನ್ಯವಾಗಿ ಅಧಿಕಾರಿಗಳು ವಿಚಾರಣಾ ಆದೇಶ ಮಾಡುವಾಗ ಉಪಯೋಗಿಸುವ ಪದಗಳು, ಸಹಕಾರಿ ರಚನೆ, ಆಡಳಿತ ಮತ್ತು ಆರ್ಥಿಕ ವಿಷಯಗಳ ಬಗ್ಗೆ ವಿಚಾರಣೆ ಎಂದು ಆದೇಶಿಸುವುದು ರೂಢಿಯಲ್ಲಿದೆ. ಆದರೆ ಇಂತಹ ಸಾಮಾನ್ಯ ಆದೇಶ ಹೊರಡಿಸುವ ಬದಲು, ಯಾವ ವಿಷಯಗಳ ಬಗ್ಗೆ ವಿಚಾರಣೆ ನಡೆಸಬೇಕೆಂದು ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು. ಅದರ ಜೊತೆಗೆ ಆದೇಶ ಮಾಡುವಾಗ, ವಿಚಾರಣಾ ಅವಧಿಯು ಅತಿ ಕಡಿಮೆ ನಿಗಧಿಪಡಿಸಬೇಕು. ಕಾನೂನಿನಲ್ಲಿ 12 ತಿಂಗಳು ಮತ್ತು 6 ತಿಂಗಳು ಎಂದಿರುವುದನ್ನು ಸಾಮಾನ್ಯವಾಗಿ ಆದೇಶಿಸಬಾರದು. ಏಕೆಂದರೆ ವಿಚಾರಣೆ ಆದೇಶ ಹೊರಡಿಸುವ ಪೂರ್ವದಲ್ಲಿ ಇದ್ದಂತಹ ಪರಿಸ್ಥಿತಿ, ವಿಚಾರಣೆ ವರದಿ ಬಂದ ನಂತರ ಅಷ್ಟು ಪ್ರಾಮುಖ್ಯತೆ ಪಡೆಯುವುದಿಲ್ಲ. ಅಂದರೆ ವಿಚಾರಣೆಯನ್ನು 18 ತಿಂಗಳುಗಳ ನಂತರ ಸಲ್ಲಿಸಿದಾಗ. ಆದ್ದರಿಂದ ಇಲಾಖಾಧಿಕಾರಿಗಳು ವಿಚಾರಣೆಗೆ ಆದೇಶ ಮಾಡುವ ಸಂದರ್ಭದಲ್ಲಿ ಉದ್ದೇಶಗಳನ್ನು ಮತ್ತು ವಿಚಾರಣಾ ಅಂಶವನ್ನು ಸ್ಪಷ್ಟವಾಗಿ, ನೇರವಾಗಿ, ಸೀಮಿತವಾಗಿ ನಿಗಧಿಪಡಿಸಿ ಆದೇಶಿಸುವುದು ಅವಶ್ಯಕ.

ವಿಚಾರಣಾಧಿಕಾರಿಯನ್ನು ನೇಮಕ ಮಾಡುವಾಗ ನಿಬಂಧಕರು ಯಾವ ವ್ಯಕ್ತಿಯನ್ನು ನೇಮಕ ಮಾಡಬೇಕೆಂದು ತೀರ್ಮಾನಿಸುತ್ತಾರೋ ಅಂತಹ ವ್ಯಕ್ತಿಯು ಸಹಕಾರಿಗೆ ಸಂಬಂಧಪಟ್ಟಂತೆ, ಅದರಲ್ಲಿಯೂ ಯಾವ ಸಹಕಾರಿ ವಿಚಾರಣೆಗೆ ಆದೇಶಿಸುತ್ತಾರೋ, ಆ ಸಹಕಾರಿ ಮಾಡುತ್ತಿರುವ ವ್ಯವಹಾರಗಳ ಬಗ್ಗೆ ಪರಿಜ್ಞಾನ ಇರುವ ವಿಚಾರಣಾಧಿಕಾರಿಯನ್ನು ನೇಮಿಸುವುದು ಅವಶ್ಯಕ. ವಿಚಾರಣಾಧಿಕಾರಿಯನ್ನು ನೇಮಿಸುವಾಗ ಮತ್ತೊಂದು ಅಂಶವನ್ನು ಗಮನಿಸಬೇಕಾಗಿರುವುದು, ಆ ವ್ಯಕ್ತಿಯು ಯಾವುದೇ ಪ್ರಭಾವಕ್ಕೆ ಒಳಗಾಗದೇ ಸ್ವಂತ ಮತ್ತು ಸ್ವತಂತ್ರ ನಿಲುವು ತಳೆಯುವ ವ್ಯಕ್ತಿಯಾಗಿದ್ದಾನೆಂದು ಮನದಟ್ಟಾದರೆ ಮಾತ್ರ, ಅಂತಹ ವ್ಯಕ್ತಿಯನ್ನು ನೇಮಿಸಬಹುದು. ಸಾಮಾನ್ಯವಾಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಒಬ್ಬ ಅಧಿಕಾರಿಗೆ ವಿಚಾರಣಾಧಿಕಾರಿಯಾಗಿ ನೇಮಕ ಮಾಡುವುದು ರೂಢಿ. ಇದರಿಂದ ವಿಚಾರಣೆಗೆ ವಿಳಂಬವಾಗುವುದೆಂದು ತಿಳಿದಿದ್ದರೂ ಆದೇಶಿಸಲಾಗುತ್ತಿದೆ. ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು, ತಮ್ಮ ಕಛೇರಿಯ ಇತರ ವ್ಯವಹಾರಗಳಲ್ಲಿ ನಿರತರಾಗಿದ್ದು, ಸಾಮಾನ್ಯವಾಗಿ ವಿಚಾರಣೆಗೆ ಆಸಕ್ತಿ ವಹಿಸುವುದಿಲ್ಲ. ಆದ್ದರಿಂದ ಇಲಾಖಾಧಿಕಾರಿಗಳನ್ನೇ ನೇಮಕ ಮಾಡಿದಾಗ ಅಂತಹ ಅಧಿಕಾರಿಯು ಅವಧಿಗೆ ಪೂರ್ವದಲ್ಲಿಯೇ ವಿಚಾರಣೆಯನ್ನು ಮುಗಿಸಿ ವರದಿಯನ್ನು ಸಲ್ಲಿಸುವಂತೆ ಕ್ರಮ ಕೈಗೊಳ್ಳುವುದು ವಿಚಾರಣೆಗೆ ಆದೇಶಿಸಿದ ಅಧಿಕಾರಿಯ ಜವಾಬ್ದಾರಿ. ಸಾಮಾನ್ಯವಾಗಿ ಲೆಕ್ಕತಪಾಸಣೆ ಮಾಡುವ ಲೆಕ್ಕಾಧಿಕಾರಿಗಳನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡುವುದಿಲ್ಲ. ಆ ರೀತಿ ಮಾಡುವಂತಹ ಸಂದರ್ಭ ಬಂದರೆ ಅಂತಹ ಲೆಕ್ಕಪರಿಶೋಧನಾಧಿಕಾರಿಯನ್ನು ನೇಮಿಸಿ ಆದೇಶಿಸಬಹುದು.

**ವಿಚಾರಣೆಗೆ ಆದೇಶ ಮಾಡಿ ವರದಿ ಬಂದ ನಂತರ ಇಲಾಖಾಧಿಕಾರಿಗಳು ಗಮನಿಸಬೇಕಾದ ಅಂಶಗಳು: (ಚೆಕ್‌ಲಿಸ್ಟ್)**

1. ಲೆಕ್ಕತಪಾಸಣೆ ಅಥವಾ ಪರಿವೀಕ್ಷಣೆ ಮಾಡಿದ್ದರೆ, ಆ ವರದಿಗಳಲ್ಲಿ ನ್ಯೂನತೆಗಳನ್ನು, ಹಣದುರುಪಯೋಗವನ್ನು, ದುರಾಡಳಿತವನ್ನು ಗುರುತಿಸಿದ್ದಾರೆಯೇ (ಹೌದು/ಇಲ್ಲ)
2. ವಿಚಾರಣೆಗೆ ಆದೇಶಿಸುವ ಪೂರ್ವದಲ್ಲಿ, ಆದೇಶಿಸುವ ಅಧಿಕಾರಿಯು ಆದೇಶ ಮಾಡಿದ್ದರೆ ಸಾರ್ವಜನಿಕವಾಗಿ ಆ ಸಂಸ್ಥೆಯ ಹೆಸರಿಗೆ ಕಳಂಕ ಬರುವ ರೀತಿ ಇದ್ದರೆ, ಅದನ್ನು ಗಮನದಲ್ಲಿರಿಸಿಕೊಳ್ಳಬೇಕು. ಉದಾ: ಭಾರತೀಯ ರಿಸರ್ವ್ ಬ್ಯಾಂಕಿನಿಂದ ಲೈಸನ್ಸ್ ಪಡೆದ ಒಂದು ಸಹಕಾರ ಬ್ಯಾಂಕಿಗೆ ವಿಚಾರಣೆಗೆ ಆದೇಶ ಮಾಡುವಾಗ, ಅಂತಹ ಆದೇಶದಿಂದ ಠೇವಣಿದಾರರು, ಆ ಸಹಕಾರಿಯನ್ನು ಅಪನಂಬಿಕೆಯಿಂದ ನೋಡಿ ಠೇವಣಿಯನ್ನು ವಾಪಸ್ ಪಡೆಯುವರೆಂಬ ಭಾವನೆ ಮತ್ತು ಠೇವಣಿ ವಾಪಸ್ ಪಡೆದ್ದರಿಂದ ಆಗುವ ತೊಡಕನ್ನು ಗಮನದಲ್ಲಿರಿಸಿಕೊಳ್ಳಬೇಕು.
3. ವಿಚಾರಣೆಗೆ ಆದೇಶ ಹೊರಡಿಸಿದ ನಂತರ ಅದರ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿ ಮತ್ತು ಹಣಕಾಸು ಪೂರೈಸುವ ಸಂಸ್ಥೆಗೆ ಕಳುಹಿಸಲಾಗಿದೆಯೇ?
4. ವಿಚಾರಣೆಗೆ ಆದೇಶಿಸಿದ ನಂತರ ಸಹಕಾರಿ ಆಡಳಿತ ಮಂಡಳಿಯ ಸದಸ್ಯರು, ಮುಖ ಕಾರ್ಯನಿರ್ವಹಣಾಧಿಕಾರಿ ಮತ್ತು ಇತರ ಪದಾಧಿಕಾರಿಗಳಿಗೆ ಜಾರಿಯಾಗಿದೆಯೇ
5. ವಿಚಾರಣಾಂಶಗಳನ್ನು ಸ್ಪಷ್ಟವಾಗಿ ನೋಟೀಸಿನಲ್ಲಿ ತಿಳಿಸಲಾಗಿದೆಯೇ?
6. ಯಾವ ಅಂಶಗಳ ಮೇಲೆ ವಿಚಾರಣೆಯನ್ನು ನಡೆಸಲಾಗುವುದು ಎಂಬುದನ್ನು ನೋಟೀಸಿನಲ್ಲಿ ತಿಳಿಸಲಾಗಿದೆಯೇ?
7. ವಿಚಾರಣೆ ಅವಧಿಯನ್ನು ನಿಗಧಿಪಡಿಸಲಾಗಿತ್ತೇ?
8. ವಿಚಾರಣೆ ಮಾಡುವ ಸಂದರ್ಭದಲ್ಲಿ ಸಹಕಾರಿಯ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಪುಸ್ತಕಗಳನ್ನು ಸಮಗ್ರವಾಗಿ ಅಭ್ಯಾಸ ಮಾಡಲಾಗಿದೆಯೇ?
9. ವಿಚಾರಣೆಗೆ ಆದೇಶಿಸಿದ ಅಂಶಗಳಿಗೆ ಸಂಬಂಧಪಟ್ಟ ವ್ಯಕ್ತಿಗಳನ್ನು, ಸಮನ್ಸ್ ಜಾರಿ ಮಾಡಿ, ಪ್ರಮಾಣ ಭೋದಿಸಿ, ಹೇಳಿಕೆಯನ್ನು ದಾಖಲಿಸಲಾಗಿದೆಯೇ?
10. ವಿಚಾರಣೆ ಮಾಡುವ ಸಂದರ್ಭದಲ್ಲಿ ಅವಶ್ಯಕತೆ ಇದೆಯೆಂದು ಕಂಡುಬಂದಾಗ ಮಹಾಸಭೆಯನ್ನು ಕರೆದು ವಿಚಾರಣಾ ಅಂಶಗಳನ್ನು ತಿಳಿಸಿ ವಿವರಿಸಲಾಗಿದೆಯೇ?
11. ವಿಚಾರಣೆ ವರದಿ ಬಂದ ನಂತರ ವಿಚಾರಣೆಯಲ್ಲಿ ಸಾಬೀತಾದ ಆರೋಪಗಳನ್ನು ಸಂಬಂಧಪಟ್ಟ ಸಹಕಾರಿಗೆ ಮತ್ತು ಸಂಯುಕ್ತ ಸಹಕಾರಿಗೆ ತಿಳಿಸಲಾಗಿದೆಯೇ?
12. ವಿಚಾರಣಾಧಿಕಾರಿಯು ತನ್ನ ವರದಿಯನ್ನು ಮಂಡಿಸಿದಾಗ, ಆರೋಪಗಳು ರುಜುವಾತಾದ ಬಗ್ಗೆ ಅದಕ್ಕೆ ಸಂಬಂಧಪಟ್ಟ ಸಾಕ್ಷಿಗಳು, ದಾಖಲೆಗಳು ಮತ್ತು ಪುಸ್ತಕಗಳನ್ನು ಆಧಾರವಾಗಿಟ್ಟು, ಅದರ ಪ್ರತಿಯನ್ನು ಲಗತ್ತಿಸಿದ್ದಾರೆಯೇ?
13. ವಿಚಾರಣೆಗೆ ಆದೇಶಿಸಿದಾಗ ಸೂಚಿಸಿದ ಎಲ್ಲಾ ವಿಷಯಗಳ ಬಗ್ಗೆ ವಿಚಾರಣಾ ವರದಿಯಲ್ಲಿ ಸಮರ್ಥವಾಗಿ ಉತ್ತರಿಸಲಾಗಿದೆಯೇ?
14. ವಿಚಾರಣೆಗೆ ಆದೇಶಿಸಿದ ಸಹಕಾರಿಯಲ್ಲಿ ನಡೆದಿರಬಹುದಾದ ನಂಬಿಕೆದ್ರೋಹ, ಹಣದುರುಪಯೋಗ, ಸ್ಥಾನ ದುರುಪಯೋಗಕ್ಕೆ ಸಂಬಂಧಪಟ್ಟ ಅಧಿಕಾರಿ ಮತ್ತು ಸದಸ್ಯರುಗಳಿಗೆ ನಿರ್ದಿಷ್ಟ ಜವಾಬ್ದಾರಿಯನ್ನು ನಿಗಧಿಪಡಿಸಲಾಗಿದೆಯೇ?
15. ಈ ವಿಚಾರಣಾ ವರದಿಯನ್ನು ಆಧರಿಸಿ ಸಹಕಾರಿ ಕಾರ್ಯನಿರ್ವಹಣೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಶಿಫಾರಸ್ಸುಗಳನ್ನು ಮಾಡಲಾಗಿದೆಯೇ?

ವಿಚಾರಣೆ ಮಾಡುವ ಸಂದರ್ಭದಲ್ಲಿ ವಿಚಾರಣಾಧಿಕಾರಿಗಳು ಯಾರ ಮೇಲೆ ಆರೋಪ ಮತ್ತು ಜವಾಬ್ದಾರಿಯನ್ನು ನಿಗಧಿಪಡಿಸಲಾಗುತ್ತದೆಯೋ ಅಂತಹ ವ್ಯಕ್ತಿಗಳಿಗೆ ಆರೋಪಗಳನ್ನು ಹೊರಿಸಿ ಅವುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಜಾರಿ ಮಾಡಿ, ಅವರ ಲಿಖಿತ ಮತ್ತು ಮೌಖಿಕ ಹೇಳಿಕೆಗಳನ್ನು ಪಡೆದು, ಆ ಹೇಳಿಕೆಗಳ ಆಧಾರದ ಮೇಲೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಜವಾಬ್ದಾರಿಯನ್ನು ನಿಗಧಿಪಡಿಸತಕ್ಕದ್ದು. ಆ ರೀತಿ ಮಾಡಿದಾಗ ಕಲಂ 37ಎ ರಡಿಯಲ್ಲಿ ಅಧಿಭಾರ ಅರ್ಜಿಯನ್ನು ದಾಖಲಿಸಿದಾಗ ಎರಡನೇ ವಿಚಾರಣೆ ಅವಶ್ಯಕತೆ ಇರುವುದಿಲ್ಲ. ವಿಚಾರಣೆ ಮಾಡುವ ಸಮಯದಲ್ಲಿ ಸ್ವಾಭಾವಿಕ ನ್ಯಾಯದನ್ವಯ ಸಮರ್ಪಕ ಅವಕಾಶವನ್ನು ಕಲ್ಪಿಸದೇ ಇದ್ದರೆ, ಜವಾಬ್ದಾರಿ ನಿಗಧಿಪಡಿಸಿದಂತಹ

ವ್ಯಕ್ತಿಯು ಅಧಿಭಾರ ಅರ್ಜಿಯ ವಿಚಾರಣೆ ಸಮಯದಲ್ಲಿ ಸಮರ್ಪಕ ಅವಕಾಶವನ್ನು ಸ್ವಾಭಾವಿಕ ನ್ಯಾಯದನ್ವಯ ಕಲ್ಪಿಸಿಲ್ಲವೆಂದು ಪ್ರತಿಪಾದಿಸಿ ಮತ್ತೆ ವಿಚಾರಣೆ ಮಾಡಲು ಅವಕಾಶ ಕೇಳಬಹುದು. ಆದ್ದರಿಂದ ವಿಚಾರಣೆ ಸಮಯದಲ್ಲಿಯೇ ಸಮರ್ಪಕ ಅವಕಾಶಗಳನ್ನು ಕಲ್ಪಿಸಲು ವಿಚಾರಣಾಧಿಕಾರಿಗಳಿಗೆ ವಿಚಾರಣೆಗೆ ಆದೇಶ ಮಾಡುವ ಅಧಿಕಾರಿಯು ಸೂಕ್ತ ಮಾರ್ಗದರ್ಶನ ನೀಡಬೇಕು.

**ವಿಚಾರಣಾಧಿಕಾರಿ ನಿರ್ವಹಿಸಬೇಕಾದ ಕರ್ತವ್ಯಗಳು :**

ನಿಬಂಧಕರು ಕಲಂ.35ರಡಿ ವಿಚಾರಣಾ ಆದೇಶ ಹೊರಡಿಸುವಾಗ, ಅವರಿಗೆ ಲಭ್ಯವಾಗಿರುವ ಮಾಹಿತಿ ಆಧಾರದ ಮೇಲೆ ಆರೋಪಗಳ ಪಟ್ಟಿ ನೀಡಿ ವಿಚಾರಣೆ ಮಾಡಲು ಆದೇಶಿಸುತ್ತಾರೆ. ಆದೇಶ ಸ್ವೀಕರಿಸಿದ ವಿಚಾರಣಾಧಿಕಾರಿ, ಆರೋಪಗಳ ಪರಿಶೀಲನೆ ಮಾಡುವ ಪೂರ್ವದಲ್ಲಿ, ಆರೋಪಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಂಬಂಧಪಟ್ಟ ಸಹಕಾರಿಯಿಂದ ನಕಲುಗಳನ್ನು ಪಡೆದು, ಪರಿಶೀಲಿಸಿ, ದೃಡೀಕರಿಸಿಕೊಂಡ ನಂತರ, ಆ ನ್ಯೂನತೆಗಳಿಗೆ ಯಾರು ಜವಾಬ್ದಾರರು ಎಂದು ಗುರುತಿಸಿ, ಅಂತಹ ವ್ಯಕ್ತಿಗಳಿಗೆ, ಕಾರಣ ಕೇಳುವ ನೋಟೀಸ್ ಜಾರಿ ಮಾಡಬೇಕು. ಈ ನೋಟೀಸ್‌ನಲ್ಲಿ ಸ್ಪಷ್ಟವಾಗಿ ಯಾರ ಮೇಲೆ ಆರೋಪ ಹೊರಿಸಲಾಗುತ್ತಿದೆಯೇ ಅವರಿಗೆ ಅರ್ಥವಾಗುವ ಭಾಷೆಯಲ್ಲಿ, ಸ್ಪಷ್ಟೀಕರಣ, ವಿವರಣೆ ಕೇಳಬೇಕು. ಆ ನೋಟೀಸ್‌ನಲ್ಲಿ, ಆ ವ್ಯಕ್ತಿಯನ್ನು ಯಾಕೆ ಜವಾಬ್ದಾರರನ್ನಾಗಿ, ಜಂಟಿಯಾಗಿ/ವೃತಿಪರವಾಗಿ, ಮಾಡಬಾರದೇಕೆಂದು ಪ್ರಶ್ನಿಸಬೇಕು ಮತ್ತು ಅವರ ವಿವರಣೆ ಜೊತೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಲು ಸೂಚಿಸಬೇಕು. ಅಂತಹ ಆರೋಪ ದಾಖಲೆಗಳು ಸಲ್ಲಿಸಿದಾಗ, ಅವುಗಳನ್ನು ಸಹಕಾರಿ ಪುಸ್ತಕ/ ದಾಖಲೆಗಳ ಜೊತೆ, ಪರಿಶೀಲಿಸಿ ಸತ್ಯಾತೆ ಕಂಡುಕೊಳ್ಳಲು ಪ್ರಯತ್ನಿಸಬೇಕು. ದಾಖಲೆಗಳು ಸಮರ್ಪಕವಿಲ್ಲದಿದ್ದರೆ, ಅಂತಹ ವಿಷಯವನ್ನು ಸಂಬಂಧಪಟ್ಟ ಆರೋಪನೆ ತಿಳಿಸಬೇಕು. ಆರೋಪಕ್ಕೆ ಸಂಬಂಧಪಟ್ಟ ದೃಡೀಕೃತ ದಾಖಲೆಗಳನ್ನು ಸಹಕಾರಿಯಿಂದ ಪಡೆದು, ಸಹಕಾರಿಯಿಂದ ಹೆಚ್ಚುವರಿ ಮಾಹಿತಿ ಬೇಕಿದ್ದರೆ ಪಡೆಯಬೇಕು. ಆದರೆ ಯಾವ ದಾಖಲೆಗಳ ಆಧಾರದಲ್ಲಿ, ಆರೋಪಿತನನ್ನು ಜವಾಬ್ದಾರನ್ನಾಗಿ ಮಾಡಲಾಗುತ್ತಿದೆಯೋ, ಅಂತಹ ವ್ಯಕ್ತಿಗೆ ಅದು ತಿಳಿದಿರಬೇಕು ಮತ್ತು ಅದಕ್ಕೆ ಸ್ಪಷ್ಟೀಕರಣ ಪಡೆದಿರಬೇಕು.

ಒಂದೇ ಆರೋಪದಲ್ಲಿ ಹಲವಾರು ಚುನಾಯಿತ ಪ್ರತಿನಿಧಿಗಳು ಹಾಗೂ ನೌಕರರು ಶಾಮೀಲಾಗಿದ್ದರೆ, ಅಂತಹ ಸಂದರ್ಭದಲ್ಲಿ, ಅವರು ನಿರ್ವಹಿಸಿದ ನಿರ್ಲ್ಯಕ್ಷ್ಯ ತನಕ್ಕೆ ಪೂರಕವಾಗಿ ಜವಾಬ್ದಾರಿ ನಿಗದಿ ಪಡಿಸಲು ಪ್ರಯತ್ನಿಸಬೇಕು. ಉದಾಹರಣೆಗೆ ನಗದು ಗುಮಾಸ್ತನ, ತನ್ನಲ್ಲಿ ದಿನದಂತ್ಯಕ್ಕೆ ನಿಗದಿ ಪಡಿಸಿದ ನಗದು ಮಿತಿಗಿಂತ ಹೆಚ್ಚು ಹಣ ಇದ್ದರೆ, ಅವನನ್ನು ಜವಾಬ್ದಾರನ್ನಾಗಿ ಮಾಡಬೇಕು. ಆದರೆ ಸಹಕಾರಿ ಮುಖ್ಯಕಾರ್ಯನಿರ್ವಾಹಕ, ಅದರ ಮೇಲ್ವಿಚಾರಣೆಯಲ್ಲಿ ನಿರ್ಲ್ಯಕ್ಷ್ಯ ತೋರಿಸಿದ್ದರೆ, ಅವನು ಶಿಸ್ತು ಕ್ರಮದ ಜೊತೆ, ನಗದು ಜವಾಬ್ದಾರಿಯನ್ನು ಜಂಟಿಯಾಗಿ ನಿಗದಿ ಪಡಿಸಬಹುದೇ ಎಂದು ಪರಿಶೀಲಿಸಿ ವರದಿ ನೀಡಬೇಕು. ಅಂದರೆ ಜಂಟಿ ಬೀಗದಲ್ಲಿ ನಗದಿರಬೇಕೆಂದಿದ್ದರೆ ಜಂಟಿಯಾಗಿ ಜವಾಬ್ದಾರಿ ನಿಗದಿ ಪಡಿಸಬೇಕು. ಇಲ್ಲವಾದರೆ, ಕೆಳ ಅಧಿಕಾರಿಗಳ ಮೇಲೆ ನಿಯಂತ್ರಣ ಮಾಡುವುದು ಸಹಕಾರಿ ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿ ಆಗಿರುವುದರಿಂದ, ನಿರ್ಲ್ಯಕ್ಷ್ಯ ತನಕ್ಕೆ ಶಿಸ್ತು ಕ್ರಮಕ್ಕೆ ಒಳಗಾಗುತ್ತಾನೆ.

ಚುನಾಯಿತ ಪ್ರತಿನಿಧಿಗಳ ಮೇಲೆ ಆರೋಪಗಳಿದ್ದರೆ, ಯಾವ ಕಾರಣಕ್ಕಾಗಿ ಎಂಬುದನ್ನು ಸ್ಪಷ್ಟವಾಗಿ ಕಾರಣ ಕೇಳುವ ನೋಟೀಸ್‌ನಲ್ಲಿ ನಮೂದಿಸಬೇಕು. ಹಣ ಅಥವಾ ಸರಕು ದುರುಪಯೋಗವಾಗಿದ್ದರೆ, ಯಾವ ದಿನಾಂಕದಂದು, ಎಷ್ಟು ಪ್ರಮಾಣದಲ್ಲಿ ದುರುಪಯೋಗವಾಗಿದೆ ಎಂದು ಸ್ಪಷ್ಟೀಕರಿಸಬೇಕು. ಸಾಮಾನ್ಯವಾಗಿ ಚುನಾಯಿತ ಪ್ರತಿನಿಧಿಗಳು ಮೌಖಿಕವಾಗಿ ನಿರ್ದೇಶನ ನೀಡಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಲಿಖಿತವಾಗಿ ಎಲ್ಲಿಯೂ ದಾಖಲೆ ಸೃಷ್ಟಿಸುವುದಿಲ್ಲ. ಆದ್ದರಿಂದ ಚುನಾಯಿತ ಪ್ರತಿನಿಧಿಗಳ ಬಗ್ಗೆ ವಿಚಾರಣೆ ಮಾಡುವಾಗ ಲಭ್ಯವಿದ್ದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಬೇಕು. ಸಾಂದರ್ಭಿಕ ದಾಖಲೆಗಳಿದ್ದರೂ ಅವುಗಳನ್ನು ಆಧಾರವಾಗಿ ಗುರುತಿಸಿ ನೋಟೀಸ್ ನೀಡುವಾಗ ಎಚ್ಚರದಿಂದ ಕೆಲಸ ನಿರ್ವಹಿಸಬೇಕು. ವಿಚಾರಣಾಧಿಕಾರಿ ಸ್ಪಷ್ಟ ನಿರ್ಧಾರಕ್ಕೆ ಬಂದ ನಂತರವೇ ಕಾರಣ ಕೇಳುವ ನೋಟೀಸ್ ನೀಡಿ, ಸ್ಪಷ್ಟೀಕರಣ ಕೇಳಬೇಕು. ಮತ್ತು ಆರೋಪಕ್ಕೆ ಸಂಬಂಧಪಟ್ಟ ದಾಖಲೆ ನೀಡಲು ಸೂಚಿಸಬೇಕು. ಅವುಗಳನ್ನು ಪಡೆದ ನಂತರ ಸಹಕಾರಿ ದಾಖಲೆ/ಪುಸ್ತಕಗಳ ಜೊತೆ ತಾಳೇ ಮಾಡಿ ತೀರ್ಮಾನಕ್ಕೆ ಬರಬೇಕು. ಅನುಮಾನದ ಆಧಾರದಲ್ಲಿ ರುಜುವಾತಾಗಿದೆ ಅಥವಾ ಇಲ್ಲ ಎಂದು ವರದಿ ನೀಡಬಾರದು.

ಉದಾಹರಣೆಗೆ : ಚುನಾಯಿತ ನಿರ್ದೇಶಕರು ಮಂಡಳಿ ಸಭೆಗೆ ಸ್ವಂತ ವಾಹನದಲ್ಲಿ ಬಂದಿದ್ದ ಎಂಬುದಕ್ಕೆ ಅವರ ಹೆಸರಿನಲ್ಲಿ ವಾಹನ ನೋಂದಾಯಿಸಿದ ಬಗ್ಗೆ, ಸಭೆಗೆ ಹಾಜರಾದಾಗ ಆ ವಾಹನ ಸಹಕಾರಿ ಕಛೇರಿಗೆ ಬಂದಿತ್ತು ಎಂಬುದರ ಬಗ್ಗೆ ಪರಿಶೀಲಿಸುವಾಗ ಸ್ಪಷ್ಟತೆ ಇರಬೇಕು. ಸುಳ್ಳು ಪ್ರಮಾಣ ಪತ್ರ ನೀಡಿ ಪ್ರಯಾಣ ಭತ್ಯೆ ಪಡೆದಿದ್ದರೆ ಅದಕ್ಕೆ ಸಂಬಂಧಪಟ್ಟ ಮಾಹಿತಿ ಸಂಗ್ರಹಿಸಬೇಕು. ಸಭೆಗೆ ಹಾಜರಾಗದೆ ಸಭಾ ಭತ್ಯೆ ಪಡೆದಿದ್ದರೆ. ಸಹಕಾರಿಯಲ್ಲಿ ಬೇರೆ ಸದಸ್ಯರ ಹೆಸರಿನಲ್ಲಿ ಸೌಲಭ್ಯ ಪಡೆದು ಬೇನಾಮಿ ವ್ಯವಹಾರ ಮಾಡಿದ್ದರೆ, ಅಥವಾ ಸೇವೆ ನೀಡುವಾಗ, ಸಂಭಾವನೆ ಪಡೆದಿದ್ದರು ಎಂದಿದ್ದರೆ, ಅಥವಾ ಸುಳ್ಳು ದಾಖಲೆ ನೀಡಿ ಸೌಲಭ್ಯ ಪಡೆದ್ದರೆ, ಅಂತಹ ಸಂದರ್ಭದಲ್ಲಿ ಸ್ಪಷ್ಟ ದಾಖಲೆಗಳಿಲ್ಲದೇ ಆರೋಪ ಮಾಡಬಾರದು ಮತ್ತು ಸ್ಪಷ್ಟತೆ ಇಲ್ಲದೇ ಇದ್ದರೆ ಜವಾಬ್ದಾರರನ್ನಾಗಿ ಮಾಡಬಾರದು.

ವಿಚಾರಣಾ ವರದಿ ನೀಡಲು 12 ತಿಂಗಳ ಅವಧಿ ನೀಡಲಾಗುತ್ತಿದೆ – ಅದನ್ನು ವಿಶೇಷ ಪ್ರಸಂಗದಲ್ಲಿ 6 ತಿಂಗಳು ವಿಸ್ತರಿಸಬಹುದು. ಅದಕ್ಕಾಗಿ ವಿಚಾರಣೆಯನ್ನು ನಿಗದಿ ಪಡಿಸಿದ ಅವಧಿಯೊಳಗೆ ಪೂರ್ಣ ಮಾಡಿ ನಿಬಂಧಕರಿಗೆ ವರದಿ ನೀಡಬೇಕು. ವರದಿಯಲ್ಲಿ ಜವಾಬ್ದಾರಿ ನಿಗದಿ ಪಡಿಸುವಾಗ, ಸ್ಪಷ್ಟವಾಗಿ ಯಾರಿಂದ ನಷ್ಟ/ದುರುಪವಾಗಿದೆ ಮತ್ತು ಎಷ್ಟು ಪ್ರಮಾಣದಲ್ಲಿ ಜವಾಬ್ದಾರರು ಎಂದು ಸೂಚಿಸಿ ವರದಿ ನೀಡಬೇಕು.

**ತೀರ್ಪುಗಳು:**

1. ವಿಚಾರಣಾ ಅವಧಿಯನ್ನು ನಿಗಧಿಪಡಿಸಿ ಆ ಅವಧಿಯೊಳಗೆ ವರದಿಯನ್ನು ಸಲ್ಲಿಸದೇ ಇದ್ದಾಗ ಅಂತಹ ವರದಿಯು ಅಸಿಂಧುವಾಗತಕ್ಕದ್ದಲ್ಲ. ಆದರೆ ಅಂತಹ ಅಸಿಂಧುವಾಗುವ ಸಂದರ್ಭ ಸೃಷ್ಟಿಯಾಗುವುದು ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಯಾವುದೇ ವ್ಯಕ್ತಿಯನ್ನು ಶಿಕ್ಷಿಸುವ ಉದ್ದೇಶದಿಂದಲೇ ವಿಚಾರಣೆ ಮಾಡುತ್ತಿದ್ದರೆ ಮಧ್ಯಪ್ರವೇಶ ಮಾಡಬಹುದು. ಅಂತಹ ಆರೋಪವನ್ನು ಸಾಬೀತುಪಡಿಸದಿದ್ದರೆ ಸಂವಿಧಾನ ಪರಿಚ್ಛೇದ 227ರಲ್ಲಿ ವಿಚಾರಣೆ ಆದೇಶವನ್ನು ಕಿತ್ತುಹಾಕತಕ್ಕದ್ದಲ್ಲ. 2010(1) ಕೆಸಿಸಿಆರ್ 58/ಐಎಲ್ಆರ್ 2009(3) ಕೆಎಆರ್ 3361/2009(4) ಕೆಎಲ್‌ಜೆ 343/ಎಐಆರ್ 2009 ಎನ್ಓಸಿ 2323(ಕೆಎಆರ್)

2. ಕಲಂ 64ರ ವಿಚಾರಣೆಯು ವಸ್ತುಸ್ಥಿತಿಯನ್ನು ಕಂಡುಹಿಡಿಯಲು ಆದೇಶಿಸಲಾಗಿದ್ದು, ಆ ವಿಚಾರಣೆ ಮಾಡುವ ಸಂದರ್ಭದಲ್ಲಿ ವಕೀಲರ ಸಹಾಯ ಪಡೆಯುವ ಅಧಿಕಾರವಿಲ್ಲ. 2006(1) ಕೆಸಿಸಿಅರ್ 665/ಐಎಲ್ಆರ್ 2006(2) ಕೆಎಆರ್ 1502/2006(2) ಕೆಎಲ್‌ಜೆ 303.

3. ಲೋಕಾಯುಕ್ತರು ಸಲ್ಲಿಸಿದ ಮಾಹಿತಿಯ ಆಧಾರದ ಮೇಲೆ ಉಪನಿಬಂಧಕರು ಸ್ವಇಚ್ಛೆಯಿಂದ ವಿಚಾರಣೆ ಅವಶ್ಯಕತೆ ಇದೆಯೆಂದು ತೀರ್ಮಾನಕ್ಕೆ ಬಂದು ವಿಚಾರಣೆಗೆ ಆದೇಶಿಸಿದ್ದರೆ ಇದು ಕಲಂ 64(1)ರನ್ವಯ ಇರುತ್ತದೆ. 2006(1) ಕೆಸಿಸಿಆರ್ 77(ಡಿಬಿ)

4. ಯಾವುದೇ ವಿಚಾರಣೆಗೆ ನಿಬಂಧಕರು ಆದೇಶಿಸಿದಾಗ, ಆ ಆದೇಶ ಮಾಡುವ ಪೂರ್ವದಲ್ಲಿ ಒಬ್ಬ ಸದಸ್ಯರಿಂದ ಬಂದ ಆರೋಪದ ಮೇಲೆ ಆದೇಶಿಸಿದ್ದರೆ ಅದು ಕಲಂ 64(1)ರನ್ವಯ ಅಧಿಕಾರ ಚಲಾಯಿಸಿದಂತೆ. ಆ ಆದೇಶವು ಕಲಂ 64(2)ನ್ನು ಮುರಿದಂತಾಗುವುದಿಲ್ಲ. ಈ ಹಿಂದೆ 1980(1) ಕೆಎಲ್‌ಜೆ 327 ನಲ್ಲಿ ಕೊಟ್ಟ ತೀರ್ಮಾನಕ್ಕೆ ಸಹಮತವಿಲ್ಲವೆಂದು ತನ್ನ ಅಭಿಪ್ರಾಯ ದಾಖಲಿಸಿದೆ. ಈ ತೀರ್ಪು ಕೊಡುವಾಗ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಆ ವ್ಯತ್ಯಾಸದಲ್ಲಿ ಲಿಖಿತ ಮಾಹಿತಿಯ ಮೇಲೆ ಸ್ವಇಚ್ಛೆಯಿಂದ ಆದೇಶ ಮಾಡುವುದು ಅಥವಾ ಸದಸ್ಯರಿಂದ ಲಿಖಿತ ಆರೋಪ ಆಧರಿಸಿ ಆದೇಶಿಸುವುದು. ಅಥವಾ ಆಡಳಿತ ಮಂಡಳಿಯ ಮನವಿಯ ಮೇಲೆ ಆದೇಶಿಸುವುದು ಅಥವಾ ಸದಸ್ಯರ ಮನವಿಯಂತೆ 64(2)ರಂತೆ ಆದೇಶಿಸುವುದು ಎಂಬುದರ ಬಗ್ಗೆ ವ್ಯಾಖ್ಯಾನಿಸಿ ಕಲಂ 64(2)ರಲ್ಲಿ ನಿಬಂಧಕರು ಆದೇಶಿಸಲೇಬೇಕು. ಆದರೆ ಕಲಂ 64(1) ರಲ್ಲಿ ಸ್ವಇಚ್ಛೆಯಿಂದ ಆದೇಶಿಸಲು ಅಧಿಕಾರ ಹೊಂದಿರುತ್ತಾರೆ. ಐಎಲ್ಆರ್ 1990(4) ಕೆಎಆರ್ 3705/1990(2) ಕೆಎಲ್‌ಜೆ 311/ಎಐಆರ್ 1991 ಕೆಎಎನ್‌ಟಿ 243(ಡಿಬಿ)

5. ಕಲಂ 64ರ ವಿಚಾರಣೆ ಮಾಡುವ ಸಂದರ್ಭದಲ್ಲಿ ಸ್ವಾಭಾವಿಕ ನ್ಯಾಯದನ್ವಯ ದುರುಪಯೋಗದ ಆರೋಪವನ್ನು ಹೊರಿಸಲಾಗದೇ, ವರದಿ ನೀಡಿದ್ದ ಸಂದರ್ಭದಲ್ಲಿ ಉಪನಿಬಂಧಕರಿಗೆ ಮೇಲ್ಮನವಿ ಸಲ್ಲಿಸುವುದು ಸಾಧು. ಐಎಲ್ಆರ್ 1999(4) ಕೆಎಆರ್ 4683

6. ಕಲಂ 69ರಡಿ ಅಧಿಭಾರ ಅರ್ಜಿ ಮತ್ತು ಕಲಂ 64ರಲ್ಲಿ ವಿಚಾರಣೆ, ಎರಡೂ ಪ್ರತ್ಯೇಕ ಕಲಂಗಳು. 64ರ ವರದಿಯನ್ನಾಧರಿಸಿ ಜವಾಬ್ದಾರಿ ಹೊರಿಸಿದಾಗ, 69ರಲ್ಲಿ ನಿಗಧಿಪಡಿಸಿದ ನಿಯಮಗಳನ್ನು ಪಾಲಿಸುವುದು ಅವಶ್ಯಕತೆಯಿಲ್ಲವೆಂದು ಮತ್ತು ಅಧಿಬಾರ ಅರ್ಜಿಯನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಸ್ವತಂತ್ರ ತೀರ್ಮಾನಕ್ಕೆ ಬರುವುದು ಅವಶ್ಯಕವಿಲ್ಲವೆಂದು ತೀರ್ಮಾನಕ್ಕೆ ಬರುವುದು ಸರಿಯಲ್ಲ. 1991(2) ಕೆಎಲ್‌ಜೆ 2416

7. ಕಲಂ 64(1)ರ ವಿಚಾರಣಾ ಆದೇಶ ಅಧಿಕಾರಿಗಳಿಗೆ ಕೊಟ್ಟ ನಿಯಂತ್ರಣವಿಲ್ಲದ ಅಧಿಕಾರವಲ್ಲ. ಇದು ಸಂವಿಧಾನದ ಪರಿಚ್ಛೇದ 14ಕ್ಕೆ ವಿರುದ್ಧವಲ್ಲ. ಹಾಗೂ ವಿಚಾರಣೆ ಆದೇಶ ಮಾಡುವಾಗ ಸಮರ್ಪಕ ನಿಯಂತ್ರಣವನ್ನೂ ಸೇರಿಸಲಾಗಿದೆ. 1984(1) ಕೆಎಲ್‌ಜೆ 360

8. ಆಡಳಿತ ಮಂಡಳಿಯ ಬಹುಮತದ ಸದಸ್ಯರು ಪದಾಧಿಕಾರಿಗಳ ಮೇಲೆ ಆರೋಪಗಳನ್ನು ಹೊರಿಸಿ ಮನವಿ ಸಲ್ಲಿಸಿದಾಗ ವಿಚಾರಣೆ ಆದೇಶಿಸುವುದು ನಿಬಂಧಕರ ಜವಾಬ್ದಾರಿ, ವಿಚಾರಣೆ ಮಾಡುವ ಸಂದರ್ಭದಲ್ಲಿ ಅರ್ಜಿದಾರರಿಗೆ ಸಾಕ್ಷಿಗಳನ್ನು ಪರಿಶೀಲನೆ ಮಾಡಲು ಅವಕಾಶಗಳನ್ನು ಕೊಟ್ಟು ಅವರ ಆರೋಪಗಳನ್ನು ರುಜುವಾತುಪಡಿಸಲು ಕಲ್ಪಿಸಬೇಕು. 1979(1) ಕೆಎಲ್‌ಜೆ ಎಸ್ಎನ್ 40.

9. ಸ್ವಇಚ್ಛೆಯಿಂದ ಎಂಬ ಪದವನ್ನು ಅರ್ಥೈಸುವಾಗ ನಿಬಂಧಕರು ನ್ಯೂನತೆಗಳಿವೆ ಎಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕು. ಮತ್ತು ಆನಂತರ ವಿಚಾರಣೆ ಆದೇಶ ಮಾಡಬೇಕು ಎಂಬ ಅಭಿಪ್ರಾಯಕ್ಕೆ ಬರಬೇಕು. ಈ ಅಭಿಪ್ರಾಯಕ್ಕೆ ಬಂದ ನಂತರ ಸ್ಪಷ್ಟ ಕಾರಣಗಳನ್ನು ನಮೂದಿಸಿ ವಿಚಾರಣೆಗೆ ಆದೇಶ ಮಾಡಬೇಕು. ಆ ವಿಚಾರಣಾ ವರದಿಯನ್ನು ಆಧರಿಸಿ ಕಲಂ 68ರನ್ವಯ ಸೂಕ್ತ ಅನುಪಾಲನೆಗೆ ಸಂಘದ ಅಧಿಕಾರಿಗಳು ಮತ್ತು ನಿರ್ದೇಶಕರಿಗೆ ಅವಶ್ಯಕತೆ ಇದ್ದರೆ ಸೂಚಿಸಬೇಕು. ಈ ನಿರ್ದೇಶನ ಕೊಡುವ ಅಧಿಕಾರ ಇಲ್ಲವೆಂಬ ಅಥವಾ ಅಧಿಕಾರಿ

ತನ್ನ ಅಧಿಕಾರ ಮೀರಿ ನಿರ್ದೇಶನ ಕೊಟ್ಟಿದ್ದಾರೆ ಎಂಬ ತೀರ್ಮಾನಕ್ಕೆ ಬರತಕ್ಕದ್ದಲ್ಲ. 1983(2) ಕೆಎಲ್‌ಜೆ 263.

10. ಸ್ವಇಚ್ಛೆಯಿಂದ ಎಂಬ ಪದಕ್ಕೆ ಅರ್ಥೈಸುವಾಗ ಉಪನಿಬಂಧಕರ ವರದಿಯನ್ನಾಧರಿಸಿ ವಿಚಾರಣೆಗೆ ಆದೇಶ ಮಾಡಿರುವುದು ಸರಿ. 1984(1) ಕೆಎಲ್‌ಜೆ ಎಸ್‌ಎನ್ 14

11. ಕಲಂ 30ರಲ್ಲಿ ಆಡಳಿತ ಮಂಡಳಿಯನ್ನು ರದ್ದುಪಡಿಸಲು ಹೊರಡಿಸಿದ ನೋಟೀಸನ್ನು ವಾಪಸ್ಸು ಪಡೆದರೆ ಆ ಆದೇಶದಿಂದ ಕಲಂ 64(1) ರ ವಿಚಾರಣೆ ಮಾಡತಕ್ಕದ್ದಲ್ಲ ಎಂದು ತಿಳಿಯತಕ್ಕದ್ದಲ್ಲ. ಇದು ಒಂದು ಆಡಳಿತಾತ್ಮಕ ವಿಷಯವಾದ್ದರಿಂದ ಇದು ಖಇಖ ಎಗಆಖಅಂಖಿಂ ತತ್ವಕ್ಕೆ ವಿರುದ್ಧವಾಗುವುದಿಲ್ಲ. 1989(1) ಕೆಎಲ್‌ಜೆ 143

12. ಯಾವ ವಿಚಾರಣೆಯಲ್ಲಿ ಯಾರು ಅವ್ಯವಹಾರಗಳನ್ನು ಮಾಡಿದ್ದಾರೆಂದು ಗುರುತಿಸಬೇಕಾದರೆ 18 ತಿಂಗಳ ಅವಧಿಯೊಳಗೆ ಮುಕ್ತಾಯಗೊಳಿಸಬೇಕೆಂಬ ಷರತ್ತಿನೊಳಗೆ ವರದಿ ಕೊಡಲಾಗದಿದ್ದರೆ, ಅಂತಹ ವಿಚಾರಣೆ ತಪ್ಪು ಎಂಬುದು ಸರಿಯಲ್ಲ. ಅವಧಿಯೊಳಗೆ ಮುಕ್ತಾಯ ಮಾಡಿಲ್ಲವೆಂಬ ನ್ಯೂನತೆಯ ಉಪಯೋಗವನ್ನು ಆರೋಪಿಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳತಕ್ಕದ್ದಲ್ಲ. ಯಾರು ಜವಾಬ್ದಾರರು ಎಂದು ತಿಳಿಯುವುದೇ ವಿಚಾರಣೆಯ ಉದ್ದೇಶ. 2010(1) ಕೆಸಿಸಿಆರ್ 58/ಐಎಲ್‌ಆರ್ 2009(3) ಕೆಎಆರ್ 3361/2009(4) ಕೆಎಲ್‌ಜೆ 343/ಎಐಆರ್ 2009 ಎನ್‌ಓಸಿ 2323(ಕೆಎಆರ್)

13. ವಿಚಾರಣೆಯ ಸಮಯದಲ್ಲಿ ಸಮನ್ಸ್ ಜಾರಿ ಮಾಡದೇ, ಪ್ರಮಾಣದ ಮುಖಾಂತರ ಹೇಳಿಕೆ ಪಡೆಯಲಾಗದೇ, ಅಧಿಭಾರ ಅರ್ಜಿಯನ್ನು ದಾಖಲಿಸಿ, ಆನಂತರ ವಿಚಾರಣೆ ಮಾಡುವುದು ಕಾನೂನಿಗೆ ವಿರುದ್ಧ 1991(2) ಕೆಎಲ್‌ಜೆ 23.

14. ವಿಚಾರಣಾ ವರದಿ ನ್ಯಾಯಾಲಯದ ರಿಟ್ ಅರ್ಜಿ ಹೂಡಲು ಬರುವುದಿಲ್ಲ. ಎಐಆರ್ 1959 ಎಸ್‌ಸಿ 107. ವರದಿ ಮುಖ್ಯಾಂಶವನ್ನು ಸಂಘಕ್ಕೆ ಲಿಖಿತವಾಗಿ ತಿಳಿಸುವುದು ನಿಬಂಧಕರ ಕಾನೂನುಬದ್ಧ ಕರ್ತವ್ಯ ಮತ್ತು ನ್ಯೂನತೆಗಳ ಮೇಲೆ ಕ್ರಮ ಜರುಗಿಸಲು ಸೂಚಿಸಿ ಕಲಂ 68ರನ್ವಯ ಆದೇಶಿಸಬೇಕು. ವರದಿ ಮುಖ್ಯಾಂಶವನ್ನು ಸಂಘಕ್ಕೆ ತಿಳಿಸುವುದು ನಿಬಂಧಕರ ಕಾನೂನುಬದ್ಧ ಕರ್ತವ್ಯ ಮತ್ತು ನ್ಯೂನತೆಗಳ ಮೇಲೆ ಕ್ರಮ ಜರುಗಿಸಬೇಕೆಂದರೆ, ಸಾರಾಂಶವನ್ನು ತಿಳಿಸಲೇಬೇಕು. 1959 ಎಸ್‌ಸಿ 107.

15. ಕಲಂ 63, 64, 65 ಮತ್ತು 72ರನ್ವಯ ವಿಚಾರಣೆ ಮಾಡುವಾಗ, ಯಾವ ವ್ಯಕ್ತಿಯ ಮೇಲೆ ಸಂಘದ ಆಸ್ತಿಯಲ್ಲಿ ಕೊರತೆ ಉಂಟು ಮಾಡುತ್ತಾರೋ, ಅಂತಹ ವ್ಯಕ್ತಿಗೆ ವಿಚಾರಣಾ ಸಮಯದಲ್ಲಿಯೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಲಿಖಿತ ಉತ್ತರ ಪಡೆದು, ದಾಖಲೆ ಪರಿಶೀಲಿಸಿ, ಆನಂತರ ಆರೋಪ ರುಜುವಾತಾಗಿದೆ ಎಂದು ವಸೂಲಾತಿಗೆ ಇಟ್ಟಾಗ, ಅಂತಹ ಪ್ರಕರಣಗಳಲ್ಲಿ ಕಲಂ 69ರನ್ವಯ ಅಧಿಭಾರ ಅರ್ಜಿ ದಾಖಲಿಸಿದಾಗ, ಆರೋಪ ಪಟ್ಟಿ ಹೊರಿಸಿ ಲಿಖಿತ ಹೇಳಿಕೆಯನ್ನು ಪಡೆದರೂ ಸಾಕು. ಏಕೆಂದರೆ ಸ್ವಾಭಾವಿಕ ನ್ಯಾಯದ ತತ್ವದಡಿ ಜವಾಬ್ದಾರಿ ನಿಗಧಿಪಡಿಸುವ ಪೂರ್ವದಲ್ಲಿ ಒಮ್ಮೆ ಕಾರಣ ಕೇಳುವ ನೋಟೀಸ್ ಕೊಟ್ಟು, ಅವರು ಕೊಟ್ಟ ಉತ್ತರದ ಆಧಾರದ ಮೇಲೆ, ವಸೂಲಾತಿ ಮೇಲೆ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ತಿಳಿಯತಕ್ಕದ್ದು. ಅಂತಹ ಸಮಯದಲ್ಲಿ, ಕಲಂ 69ರನ್ವಯ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದಾಗ, ಹಿಂದೆ ಅವಕಾಶ ಕೊಡಲಾಗಿದೆ ಎಂದು ಪ್ರಾಧಿಕಾರಕ್ಕೆ ಮನದಟ್ಟು ಆದಾಗ ಲಿಖಿತ ಹೇಳಿಕೆ ಆಧಾರದ ಮೇಲೆ ಪ್ರಕರಣ ತೀರ್ಮಾನ ಮಾಡಲು ಪ್ರಾಧಿಕಾರಕ್ಕೆ ಅಧಿಕಾರ ಇದೆ. ಕೆಎಲ್‌ಜೆ 1983(2) 313/ಎಂಎಲ್‌ಜೆ 1972(2) ಎಸ್‌ಎನ್ 29/1972(2) ಎಂಎಲ್‌ಜೆ 112/ 1978 ಕೆಎಲ್‌ಜೆ 421/1979(2) ಕೆಎಲ್‌ಜೆ 127.

16. ಸ್ವಇಚ್ಛೆಯಿಂದ ವಿಚಾರಣೆ ಮಾಡಲೇಬೇಕೆಂದು ಕಾನೂನು ಬಾದ್ಯತೆ ಇಲ್ಲ. ಆದರೆ ಕಲಂ 64(2)ರನ್ವಯ ಲಿಖಿತ ಆರೋಪ ಒಬ್ಬ ಸದಸ್ಯನಿಂದ ಬಂದರೆ ನಿಬಂಧಕರು ಅಥವಾ ಅವನಿಂದ ಅಧಿಕಾರ ಹೊಂದಿದ ವ್ಯಕ್ತಿ ವಿಚಾರಣೆ ನಡೆಸಬಹುದು. (ಐಎಲ್‌ಆರ್ 1990(4) ಕೆಎಆರ್ 3705; 1990(2) ಕೆಎಲ್‌ಟಿ 311;ಎಐಆರ್ 1991 ಕೆಎಎನ್‌ಟಿ 243)

17. ಸ್ವಇಚ್ಛೆಯಿಂದ ನಿಬಂಧಕರು ವಿಚಾರಣೆ ಮಾಡಬಹುದು ಎಂದರೆ ಅವರೇ ಎಂದು ಅರ್ಥವಲ್ಲ. ಉಪನಿಬಂಧಕರ ವರದಿಯನ್ನಾಧರಿಸಿ ನಿಬಂಧಕರು ವಿಚಾರಣೆ ಆದೇಶಿಸಬಹುದು. (1984(1)ಕೆಎಲ್‌ಜೆ 360)

18. ಕಲಂ 64ರ ವಿಚಾರಣೆ ಸಂವಿಧಾನಾತ್ಮಕವಾಗಿ ಸಿಂಧು, ತಪಾಸಣೆಯಿಂದ ನಿಬಂಧಕರು ನಿರ್ಬಂಧರಹಿತ ಅಥವಾ ಸ್ವೇಚ್ಛಾಚಾರದಿಂದ ಅಧಿಕಾರ ಎಂದು ಅರ್ಥೈಸಬಾರದು. ಕಲಂ 63ರಿಂದ ಕಲಂ 75ರವರೆಗೆ ಸಹಕಾರ ಆಂದೋಲನ ತನ್ನ ಕಾಲ ಮೇಲೆ ನಿಂತು, ಸ್ವಾರ್ಥ

ಸಾಧಕರ ಮತ್ತು ಅಧಿಕಾರ ದುರುಪಯೋಗ ಮಾಡುವವರ ಕೈಯಿಂದ ಸಂಘಕ್ಕೆ ನಷ್ಟ ಉಂಟು ಮಾಡಲಿಲ್ಲ ಎಂದು ತಿಳಿಯತಕ್ಕದ್ದು. (1984(1)ಕೆಎಲ್‌ಜೆ 360)

19. ತಾಲ್ಲೂಕಿಗಿಂತ ಹೆಚ್ಚಿರುವ ಕಾರ್ಯವ್ಯಾಪ್ತಿ ಇರುವ ಸಹಕಾರ ಸಂಘದ ವಿಚಾರಣೆ ನಡೆಸಬಹುದು. ಉಪನಿಬಂಧಕರು ಅಥವಾ ಅವನಿಂದ ಅಧಿಕಾರ ಪಡೆದ ವ್ಯಕ್ತಿ ವಿಚಾರಣೆ ಮಾಡಲು ಅಧಿಕಾರ ಹೊಂದಿದ್ದಾನೆ. (ಎಐಆರ್ 1991 ಕೆಎನ್‌ಟಿ 243)

20. ಆಡಳಿತ ಮಂಡಳಿಯ ಮೇಲೆ ಆರೋಪ ಮಾಡಿದ ಸದಸ್ಯರ ಮನವಿ ಸ್ವೀಕರಿಸಿ, ನಿಬಂಧಕರು ವಿಚಾರಣೆ ಆದೇಶ ಹೊರಡಿಸಬಹುದು: ಆದರೆ ಹೊರಡಿಸಿದವರಿಗೆ ತಮ್ಮ ಆರೋಪ ಹೊರಿಸಿದವರು ಅವರು ಆರೋಪ ರುಜುವಾತು ಮಾಡಲು ಅವಕಾಶ ಕೊಟ್ಟು, ಸಾಕ್ಷಿಗಳ ಮುಖಾಂತರ ರುಜುವಾತು ಮಾಡಲು ಅವಕಾಶ ಕಲ್ಪಿಸುವುದು. (1979(1)ಕೆಎಲ್‌ಜೆ ಎಸ್‌ಎನ್ 40)

21. ನಿಬಂಧಕರು ತಾವೇ ಸಂಘದಲ್ಲಿ ನಡೆದಿರುವ ಅವ್ಯವಹಾರ ಕಂಡು ಹಿಡಿಯಬೇಕಾಗಿಲ್ಲ. ನಿಬಂಧಕರು ಒಬ್ಬ ವ್ಯಕ್ತಿಗೆ ವಿಚಾರಣೆ ಮಾಡಲು ಆದೇಶಿಸಿ, ಸಂಘದ ಆಡಳಿತ, ರಚನೆ ಮತ್ತೆ ಹಣಕಾಸು ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಆದೇಶಿಸಬಹುದು. (ಐಎಲ್‌ಆರ್ 1983 ಕೆಎನ್ ಎಸ್‌ಎನ್ 20;1983(2)ಕೆಎಲ್‌ಜೆ 263)

22. ಸಹಕಾರ ಸಂಘಗಳ ಉಪನಿಬಂಧಕರು ಕಲಂ 64(3)(ಸಿ)(1)ರಲ್ಲಿ ಮಹಾಸಭೆ ಕರೆಯಲು ಆದೇಶಿಸಬಹುದು. (1973(1)ಎಂವೈಎಸ್ ಎಲ್‌ಜೆ ಎಸ್‌ಎನ್ 78)

23. ವಿಚಾರಣೆ ಸಮಯದಲ್ಲಿ ಹೊರಿಸುವ ಆರೋಪಗಳು ಸ್ಪಷ್ಟವಾಗಿರಬೇಕು ಮತ್ತೆ ಸರಳವಾಗಿರಬೇಕು. ನೋಟೀಸ್ ಹೊರಡಿಸಿ ಹಾಜರಾಗಲು ತಿಳಿಸುವ ವ್ಯಕ್ತಿ ತಿಳಿಯುವಂತಿರಬೇಕು. ಇಲ್ಲದಿದ್ದರೆ ವಿಚಾರಣೆ ಸಿಂಧುವಾಗುವುದಿಲ್ಲ. (1991(2) ಕೆಎಲ್‌ಟಿ 23)

24. ಒಂದು ಸಹಕಾರ ಸಂಘ ಸಹಕಾರ ಕಾಯಿದೆ ಅಡಿಯಲ್ಲಿ ರಚನೆಯಾದ ಒಂದು ಸಂಸ್ಥೆ, ನಿಬಂಧಕರಿಗೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಅದರಲ್ಲಿ ಸಂಘದ ವ್ಯವಹಾರದ ಬಗ್ಗೆ ಆದೇಶಿಸುವುದು ಒಂದು. ಆದರೆ ವಿಚಾರಣೆ ಆದೇಶ ಮಾಡುವ ಮೊದಲು ಆ ಸಂಘದಲ್ಲಿ ಕಾರ್ಯ ನಿರ್ವಹಣೆ ಸಮಯದಲ್ಲಿ ತಪ್ಪುಗಳು, ನ್ಯೂನತೆಗಳೇನಾದರೂ ಇದ್ದರೆ ಮತ್ತು ಪಾಲುಬಂಡವಾಳ ಹೂಡಿದವರ ಹಿತ ಕಾಪಾಡುವುದು ಮತ್ತು ಸಂಘದ ಜೊತೆ ವ್ಯವಹರಿಸುವ ವ್ಯಕ್ತಿಗಳ ಹಿತ ಕಾಪಾಡುವುದು ಸೇರಿ ನಡೆಸಬೇಕು. ವಿಚಾರಣೆ ಆದೇಶಿಸುವುದು ನಿಬಂಧಕರ ವಿವೇಚನೆಗೆ ಬಿಟ್ಟಿದ್ದು. ನಿಬಂಧಕರಿಗೆ ಲಭ್ಯವಾದ ಮಾಹಿತಿಯನ್ನು ಆಧರಿಸಿ ವಿಚಾರಣೆ ಆದೇಶಿಸಬಹುದು. ನಿಬಂಧಕರ ವಿವೇಚನೆ ಆಧರಿಸಿ ಆದೇಶಿಸಬಹುದು. ಇದು ನ್ಯಾಯಾಲಯಯಾಂಗ ನಿಯಂತ್ರಣಕ್ಕೆ ಒಳಪಡುವುದಿಲ್ಲ. (ಎಐಆರ್ 1959 ಎಸ್‌ಸಿ 107)

25. ಸಹಕಾರ ಸಂಘದ ವ್ಯವಹಾರದ ಬಗ್ಗೆ ವಿಚಾರಣಾ ಆದೇಶ ಮಾಡಿ, ವರದಿ ಪಡೆದು, ವರದಿಯ ಸಾರಾಂಶವನ್ನು ತಿಳಿಸದೆ, ವರದಿಯಾಧರಿಸಿ ಕ್ರಮ ಜರುಗಿಸಿದರೆ ಅದು ನ್ಯಾಯಬದ್ಧವಲ್ಲ. ಸಾರಾಂಶವನ್ನು ಸಂಘಕ್ಕೆ ತಿಳಿಸುವುದು ಕಾನೂನುಬದ್ಧ ಕರ್ತವ್ಯ. (ಎಐಆರ್ 1959 ಎಸ್‌ಸಿ 107)

26. ವಿಚಾರಣೆ ಎಂಬ ವಿವರಣೆ ಕೊಡುವಾಗ, ಸಂಬಂಧಪಟ್ಟ ವ್ಯಕ್ತಿಗಳಿಗೆ ತಮ್ಮ ಹೇಳಿಕೆ ಕೊಡಲು ಅವಕಾಶ ಕೊಡುವುದು ಎಂದರೆ ಅದು ನಂಬಿಕಾರ್ಹ, ನ್ಯಾಯಸಮ್ಮತ, ಸತ್ಯ ಮತ್ತು ಕಾನೂನು ಬದ್ಧವಾಗಿರಬೇಕು. ಅವಕಾಶ ಒಂದು ಕಾಟಾಚಾರಕ್ಕೆ ಇರಬಾರದು. ಆರೋಪ ಮಾಡಿದ ವ್ಯಕ್ತಿಗಳಿಗೆ ಆರೋಪ ರುಜುವಾತು ಮಾಡಲು ಅವಕಾಶ ಕಲ್ಪಿಸಿ, ಅದೇ ಅವಕಾಶವನ್ನು ಆರೋಪ ಪಡೆದ ವ್ಯಕ್ತಿಗಳು ತಮ್ಮ ಹೇಳಿಕೆ ಸಲ್ಲಿಸಿ ಆರೋಪ ಮುಕ್ತರಾಗಲು ಅದೇ ಅವಕಾಶ ಆರೋಪಗಳಿಗೂ ಕೊಡತಕ್ಕದ್ದು. ಇಲ್ಲದಿದ್ದರೆ ಅದು ಸಾಮಾನ್ಯ ನ್ಯಾಯ ತತ್ವಗಳ ವಿರುದ್ಧವಾಗುತ್ತದೆ. (1971 ಸಿಎಲ್‌ಜೆ ಪಿ.5.ಎಪಿ)

27. ವಿಚಾರಣಾ ವಿಧಿವಿಧಾನಗಳನ್ನು ನಿಯಮಗಳಲ್ಲಿ ರೂಪಿಸಿಲ್ಲವಾದ್ದರಿಂದ, ಆರೋಪ ಮಾಡಿದವರು ಮತ್ತು ಆರೋಪಕ್ಕೊಳಗಾದವರು, ಪಾಟಿ ಸವಾಲು ಮಾಡಲು ಅವಕಾಶ ಕಲ್ಪಿಸುವ ಅವಕಾಶ ಕೊಡಲೇಬೇಕೆಂದಿಲ್ಲ. ಆದರೆ ವಿಚಾರಣಾಧಿಕಾರಿ ವರದಿ ಅಂತಿಮಗೊಳಿಸಿ ವರದಿ ಕೊಡುವ ಮೊದಲು ವಾಸ್ತವ ದಾಖಲೆ ಹೇಳಿಕೆ ಆಧರಿಸಿ ವರದಿಸಬೇಕು. (ಮಹಾರಾಷ್ಟ್ರ ಕಾಯಿದೆ) (1969 ಎಂಸಿಟಿಡಿ ಪಿ 33)

# ಅಧ್ಯಾಯ – 6.4

# ಅಧಿಭಾರ ಅರ್ಜಿ

**ಕಲಂ.37ಎ : ಅಧಿಭಾರ (ಸರ್ಚಾರ್ಜ್) :**

(1) "33ನೇ ಪ್ರಕರಣ ಅಡಿಯಲ್ಲಿ ಲೆಕ್ಕಪರಿಶೋಧನೆ, 35ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ, 53ನೇ ಪ್ರಕರಣದ ಅಡಿಯಲ್ಲಿ ಪರಿವೀಕ್ಷಣೆಯ ಅಥವಾ 48ನೇ ಪ್ರಕರಣದ ಅಡಿಯಲ್ಲಿ ಸಮಾಪನಾ ಅವಧಿಯಲ್ಲಿ ಅಂಥ ಸಹಕಾರಿಯ ವ್ಯವಸ್ಥಾಪನೆ ನಡೆಸುವ ಮಂಡಳಿ ಅಥವಾ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸಭಾಪತಿ, ಉಪಸಭಾಪತಿ ಅಥವಾ ಯಾವೊಬ್ಬ ಇತರ ಸದಸ್ಯನು ಅಥವಾ ಅಂಥ ಸಹಕಾರಿ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾವೊಬ್ಬ ವ್ಯಕ್ತಿಯು ಯಾವುದೇ ಕಾಲಕ್ಕೆ ಸಹಕಾರಿಯ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಆಗಿದ್ದ ಯೊವೊಬ್ಬ ವ್ಯಕ್ತಿಯು, ಈ ಅಧಿನಿಯಮ, ನಿಯಮಗಳಿಗೆ ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯವನ್ನು ಮಾಡಿದ್ದರೆ ಅಥವಾ ವಿಶ್ವಾಸಭಂಗ ಅಥವಾ ನಿರ್ಲಕ್ಷ್ಯದಿಂದ ಸಹಕಾರಿಯ ಆಸ್ತಿಗಳಲ್ಲಿ ಯಾವುದೇ ಕೊರತೆ ಉಂಟು ಮಾಡಿದ್ದರೆ ಅಥವಾ ಅಂತಹ ಸಹಕಾರಿಗೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ದುರುಪಯೋಗ ಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ತನ್ನಲ್ಲಿ ಇಟ್ಟು ಕೊಂಡಿದ್ದರೆ, ರಿಜಿಸ್ಟ್ರಾರನು ಸಹಕಾರಿಯ ಮಂಡಳಿಯ, ಸಮಾಪಕನ ಅಥವಾ ಯಾರೇ ಲೇಣಿದಾರನ ಅಥವಾ ಸಂಯುಕ್ತ ಸಹಕಾರಿಯ ಅರ್ಜಿಯ ಮೇಲೆ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ ಸಂಪದದ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ, ಆ ಹಣ ಅಥವಾ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದಂತಹ ದರದ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನಃ ಸ್ಥಾಪಿಸುವಂತೆ ಅಥವಾ ತಾನು ನ್ಯಾಯ ಸಮ್ಮತವಾದುದೆಂದು ಮತ್ತು ನ್ಯಾಯಯುತವಾದುದೆಂದು ಪರಿಗಣಿಸುವಂತಹ ಮೊತ್ತವನ್ನು ಅಷ್ಟು ಮಟ್ಟಿಗೆ ಪರಿಹಾರ ರೂಪದಲ್ಲಿ ಕೊರತೆಯಾದ ಸಹಕಾರಿಯ ಆಸ್ತಿಗಳಿಗೆ ಸಂದಾಯ ಮಾಡುವಂತೆ ಅಗತ್ಯಪಡಿಸುವ ಆದೇಶವನ್ನು ಹೊರಡಿಸಬಹುದು.

(2) ಆ ಕೃತ್ಯವು, ಸಂಬಂಧಪಟ್ಟ ವ್ಯಕ್ತಿಯು ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕ ಕೃತ್ಯವಾಗಿದ್ದಾಗ್ಯೂ, ಈ ಪ್ರಕರಣವು ಅನ್ವಯವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು ಮಾಡಿದ ಆದೇಶವು, ಯಾರ ವಿರುದ್ಧ ಆದೇಶ ಮಾಡಲಾಯಿತೋ ಆ ವ್ಯಕ್ತಿಯಿಂದ ವ್ಯವಹರಣೆಯ ವೆಚ್ಚವನ್ನು ನಿಯಮಿಸಬಹುದಾದಂತಹ ದರದಲ್ಲಿ ಮತ್ತು ಅಂತಹ ರೀತಿಯಲ್ಲಿ ವಸೂಲಿ ಮಾಡುವುದಕ್ಕೆ ಉಪಬಂಧಿಸಬಹುದು.

(4) (1)ನೇ ಉಪ ಪ್ರಕರಣದ ಅಡಿಯಲ್ಲಿಯ ಅರ್ಜಿಯನ್ನು, ನ್ಯಾಯಾಲಯವು ಯಾವುದೇ ತಡೆಯನ್ನು ನೀಡಿದ್ದರೆ, ಅದನ್ನು ಹೊರತುಪಡಿಸಿ, ಹನ್ನೆರಡು ತಿಂಗಳುಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ಆದಾಗ್ಯೂ, ರಿಜಿಸ್ಟ್ರಾರನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಸದರಿ ಅವಧಿಯನ್ನು ಹದಿನೆಂಟು ತಿಂಗಳುಗಳವರೆಗೆ ವಿಸ್ತರಿಸಬಹುದು.

ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ವರದಿಯನ್ನು ಆಧರಿಸಿ, ವಿಚಾರಣೆ ನಡೆಸುವ ಅವಧಿಯನ್ನು ಹದಿನೆಂಟು ತಿಂಗಳನ್ನು ಮೀರಿ ವಿಸ್ತರಿಸಲು ನೈಜವಾದ ಸಕಾರಣಗಳಿವೆ ಎಂದು ಕಂಡು ಬಂದಲ್ಲಿ, ವಿಚಾರಣಾ ಅವಧಿಯನ್ನು ವಿಸ್ತರಿಸಬಹುದು."

ಅಧಿಭಾರ ಅರ್ಜಿ ಪ್ರಕರಣಗಳಲ್ಲಿ ಯಾವುದೇ ಅಧಿಕಾರಿ, ಪದಾಧಿಕಾರಿ, ಮಾಜಿ ಪದಾಧಿಕಾರಿ, ಮಾಜಿ ನೌಕರ, ಸಹಕಾರಿಯ ಆಸ್ತಿಯಲ್ಲಿ ಕೊರತೆಯುಂಟು ಮಾಡಿದ್ದರೆ, ಅಂತಹ ಹಣವನ್ನು ವಸೂಲಿ ಮಾಡಲು ಮತ್ತು ಹೆಚ್ಚುವರಿ ಹೊರೆಯನ್ನು ಅಂತಹ ವ್ಯಕ್ತಿಗಳ ಮೇಲೆ ಹೊರಿಸಲು, ಈ ಅಧಿಭಾರ ಪ್ರಕರಣದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

**ಅಧಿಭಾರ ಅರ್ಜಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ದಾಖಲಿಸಬಹುದು.**

1. ಸಹಕಾರಿ ಕಾಯಿದೆ, ನಿಯಮ ಮತ್ತು ಉಪವಿಧಿಗಳಿಗೆ ವಿರುದ್ಧವಾಗಿ ಹಣ ಪಾವತಿ ಮಾಡಿದ್ದರೆ
2. ಆಸ್ತಿಯಲ್ಲಿ ಕೊರತೆಯನ್ನು, ನಂಬಿಕೆ ದ್ರೋಹದಿಂದ ಅಥವಾ ನಿರ್ಲಕ್ಷ್ಯತನದಿಂದ ಉಂಟು ಮಾಡಿದ್ದರೆ
3. ಆಸ್ತಿಯನ್ನು ದುರುಪಯೋಗ ಮಾಡಿಕೊಂಡಿದ್ದರೆ
4. ಆಸ್ತಿಯನ್ನು ದುರುದ್ದೇಶದಿಂದ ಸ್ವಂತಕ್ಕೆ ಬಳಸಿಕೊಂಡಿದ್ದರೆ ಅದಿಭಾರ ಅರ್ಜಿಯನ್ನು ದಾಖಲಿಸಬಹುದು.

ಅರ್ಜಿಯನ್ನು ದಾಖಲಿಸುವಾಗ ಗಮನಿಸಲೇಬೇಕಾದ ಅಂಶವೇನೆಂದರೆ, ಕಲಂ 33ರ ಆಡಿಟ್ ವರದಿ, ಕಲಂ 35ರ ವಿಚಾರಣಾ ವರದಿ, ಕಲಂ.53(7)(ಯು) ಅನ್ನು ಪರಿವೀಕ್ಷಣಾ ವರದಿ ಅಥವಾ ಕಲಂ 48ರಡಿಯಲ್ಲಿ ಸಮಾಪನೆಗೊಂಡ ಸಹಕಾರಿ ಸಮಾಪನಾಧಿಕಾರಿಗಳು, ಹೊರಡಿಸಿದ

ವಿಚಾರಣಾ ವರದಿಯನ್ವಯ ಅಧಿಭಾರ ಅರ್ಜಿಯನ್ನು ದಾಖಲಿಸಬಹುದಾಗಿದೆ. ಈ ಮೇಲ್ಕಂಡ ವರದಿಗಳನ್ನಾಧರಿಸದಿದ್ದರೆ ಆಸ್ತಿಯಲ್ಲಿ ಕೊರತೆಯುಂಟಾಗಿದ್ದರೂ ಆ ಹಣವನ್ನು ಕಲಂ 39ರನ್ವಯ ದಾವ ಪ್ರಕರಣ ದಾಖಲಿಸಿ ವಸೂಲಾತಿ ಮಾಡಲು ಕ್ರಮ ಜರುಗಿಸಬಹುದಾಗಿದೆ.

ಅಧಿಭಾರ ಅರ್ಜಿಯನ್ನು ಯಾರ ಮೇಲೆ ದಾಖಲಿಸಬಹುದಾಗಿದೆ ಎಂಬುದಕ್ಕೆ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು.

1. ಸಹಕಾರಿ ಆಡಳಿತ ಮಂಡಳಿಯ ಸದಸ್ಯರನ್ನು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ

2. ಅಧ್ಯಕ್ಷರು, ಉಪಾಧ್ಯಕ್ಷರು ಅಥವಾ ವೈಯಕ್ತಿಕವಾಗಿ ಆಡಳಿತ ಮಂಡಳಿಯ ಸದಸ್ಯರಲ್ಲಿ ಒಬ್ಬರನ್ನು ಅಥವಾ ಯಾವ ನಿರ್ದೇಶಕ ಅಥವಾ ವ್ಯಕ್ತಿಗೆ ಆಡಳಿತ ನಡೆಸಿಕೊಂಡು ಹೋಗಲು ಅಧಿಕಾರವನ್ನು ಸ್ಪಷ್ಟವಾಗಿ ಕೊಡಲಾಗಿದೆಯೋ ಅಥವಾ ಯಾವ ಅಧಿಕಾರಿ ಅಥವಾ ನೌಕರ (ಇದರಲ್ಲಿ ಹಾಲಿ ಮತ್ತು ಮಾಜಿ, ಕೂಡಿರತಕ್ಕದ್ದು.)

3. ಆಸ್ತಿಯಲ್ಲಿ ಕೊರತೆ ಉಂಟು ಮಾಡಿದ್ದರೆ

4. ಮೃತ ಹೊಂದಿದ ಆಡಳಿತ ಮಂಡಳಿಯ ನಿರ್ದೇಶಕರು, ಪದಾಧಿಕಾರಿಗಳು, ಹಾಲಿ ಮತ್ತು ಮಾಜಿ ನೌಕರರು ಇವರ ಕಾನೂನು ವಾರಸುದಾರರು (ಯಾರು ಆ ಮೃತ ಹೊಂದಿದ ವ್ಯಕ್ತಿಯ ಆಸ್ತಿಯಲ್ಲಿ ಹಕ್ಕು ಪಡೆದಿರುತ್ತಾರೋ ಅವರು)

ಆಸ್ತಿಯಲ್ಲಿ ಕೊರತೆಯುಂಟು ಮಾಡಿದ ಹಾಲಿ ಮತ್ತು ಮಾಜಿ ನೌಕರರು ಅಥವಾ ಅಧಿಕಾರಿಗಳ ಮೇಲೆ ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಅಂತಹ ವ್ಯಕ್ತಿಗಳಿಗೆ ಲಿಖಿತ ಆದೇಶಗಳನ್ವಯ ಸ್ಪಷ್ಟ ಜವಾಬ್ದಾರಿಗಳನ್ನು ನಿಗಧಿಪಡಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು. ನಂಬಿಕೆ ದ್ರೋಹ ಮಾಡಿರುವುದರ ಬಗ್ಗೆ ಸ್ಪಷ್ಟತೆ ಇರತಕ್ಕದ್ದು. ಎಷ್ಟು ಪ್ರಮಾಣದಲ್ಲಿ ಆಸ್ತಿಯಲ್ಲಿ ಕೊರತೆಯುಂಟು ಮಾಡಲಾಗಿದೆ ಎಂಬುದರ ಬಗ್ಗೆ ದಾಖಲೆ ಇರತಕ್ಕದ್ದು.

ಅಧಿಭಾರ ಅರ್ಜಿ ಪ್ರಕರಣವನ್ನು ಸ್ವೀಕರಿಸಿದ ನಂತರ ನಿಬಂಧಕರು, ಈ ಮೇಲ್ಕಂಡ ಅಂಶಗಳನ್ನು ಗಮನಿಸಿ, ಸ್ವೀಕರಿಸತಕ್ಕದ್ದು. ಮತ್ತು ಅದಕ್ಕೆ ಪೂರಕವಾಗಿ ಯಾವ ವ್ಯಕ್ತಿಯ ಮೇಲೆ ವಸೂಲಾತಿ ಆರೋಪವನ್ನು ಮಾಡಲಾಗಿದೆಯೋ, ಅಂತಹ ವ್ಯಕ್ತಿಗೆ ಪ್ರತಿಯೊಂದು ವಸೂಲಾತಿ ಹಣದ ಬಗ್ಗೆಯೂ ಪ್ರತ್ಯೇಕ ಆರೋಪ ಪಟ್ಟಿಗಳನ್ನು ತಯಾರಿಸಿ, ಕಾರಣ ಕೇಳುವ ನೋಟೀಸ್ ಜಾರಿ ಮಾಡತಕ್ಕದ್ದು. ಆರೋಪಗಳು ಸ್ಪಷ್ಟವಾಗಿರಬೇಕು. ಮತ್ತು ವ್ಯಕ್ತಿಗತ ಇರಬೇಕು. ನಿರ್ದೇಶಕರ ಮಂಡಳಿಯ ಮೇಲೆ ಆರೋಪ ಪಟ್ಟಿ ಹೊರಿಸುವಾಗ ಪ್ರತಿಯೊಬ್ಬ ನಿರ್ದೇಶಕನಿಗೂ ವ್ಯಕ್ತಿಗತ ಆರೋಪ ಮತ್ತು ಸಾಮೂಹಿಕ ಆರೋಪ ಪಟ್ಟಿಯನ್ನು ಪ್ರತ್ಯೇಕವಾಗಿ ಮಾಡತಕ್ಕದ್ದು. ಈ ಆರೋಪ ಪಟ್ಟಿಯನ್ನು ಪ್ರತಿಯೊಬ್ಬರಿಗೂ ಜಾರಿ ಮಾಡಿದ ನಂತರ, ಪ್ರತಿಯೊಬ್ಬ ವ್ಯಕ್ತಿಯಿಂದ ಲಿಖಿತವಾಗಿ ಹೇಳಿಕೆಯನ್ನೇನಾದರೂ ಸಲ್ಲಿಸುವುದಿದ್ದರೆ, ಸಲ್ಲಿಸಲು ಅವಕಾಶ ಕೊಡತಕ್ಕದ್ದು. ಕಲಂ.33, 35, 53(7)(ಯು), 48ರ ವರದಿಗಳಲ್ಲಿ ಪ್ರತಿಯೊಂದು ಕೊರತೆಗೆ ಸಂಬಂಧಪಟ್ಟಂತೆ ಜವಾಬ್ದಾರಿ ನಿಗಧಿಪಡಿಸುವ ಪೂರ್ವದಲ್ಲಿ ನೋಟೀಸ್ ಜಾರಿ ಮಾಡಲಾಗಿದೆಯೇ ಎಂಬುದನ್ನು ದೃಢೀಕರಿಸಿಕೊಳ್ಳತಕ್ಕದ್ದು. ಪ್ರತಿಯೊಬ್ಬ ಆರೋಪಿಯು ಸ್ವಾಭಾವಿಕ ನ್ಯಾಯದನ್ವಯ, ಲಿಖಿತ ಹೇಳಿಕೆ ಸಲ್ಲಿಸುವುದಕ್ಕೆ, ಸಾಕ್ಷಿ ಅವಕಾಶವನ್ನು ಕೊಡಲಾಗಿದೆ ಎನ್ನುವುದನ್ನು ದೃಢೀಕರಿಸುವುದು. ಅಂತಹ ಆರೋಪಿತ ವ್ಯಕ್ತಿಗಳು, ಅವರಿಗೆ ಅವಶ್ಯಕವಾದ ಕಾಗದ ಪತ್ರಗಳು ಮತ್ತು ದಾಖಲೆಗಳನ್ನು ತಮ್ಮ ಲಿಖಿತ ಹೇಳಿಕೆ ಜೊತೆ ಸಲ್ಲಿಸಲಾಗಿತ್ತೇ ಎಂಬುದನ್ನೂ ಸಹ ಅಧಿಭಾರ ಅರ್ಜಿಯನ್ನು ವಿಚಾರಣೆ ಮಾಡುವ ಪೀಠಾಧಿಕಾರಿಗಳು ಈ ಮೇಲ್ಕಂಡ ಅಂಶಗಳನ್ನು ಗಮನಿಸಿ, ಸಾಕಷ್ಟು ಅವಕಾಶಗಳನ್ನು ಕೊಟ್ಟಿದ್ದರೂ ತಮ್ಮ ಲಿಖಿತ ಹೇಳಿಕೆ ಮತ್ತು ದಾಖಲೆಗಳ ಸಹಿತ ತಮ್ಮ ಮೇಲೆ ಹೊರಿಸಿದ ಆರೋಪಗಳನ್ನು ಅಲ್ಲಗಳೆಯದಿದ್ದರೆ ಅಥವಾ ಸಲ್ಲಿಸಿದ ದಾಖಲೆಗಳು ಮತ್ತು ಕಾಗದಪತ್ರಗಳು ಸಮರ್ಪಕವಾಗಿಲ್ಲವೆಂದು ವಿಚಾರಣಾಧಿಕಾರಿಗಳು ತೀರ್ಮಾನಕ್ಕೆ ಬಂದಿದ್ದರೆ, ಅಂತಹ ಪ್ರಸಂಗದಲ್ಲಿ 2ನೇ ವಿಚಾರಣೆ ಮಾಡುವ ಅವಶ್ಯಕತೆ ಇಲ್ಲವೆಂಬ ತೀರ್ಮಾನಕ್ಕೆ, ಅಧಿಭಾರ ವಿಚಾರಣೆ ಮಾಡುವ ಪೀಠಾಧಿಕಾರಿಗಳು ತೀರ್ಮಾನಿಸಬಹುದು. ಈ ಮೇಲ್ಕಂಡ ಸೂಚನೆಗಳನ್ನು ವಿಚಾರಣಾ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸದಿದ್ದರೆ ಅಧಿಭಾರ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡಾಗ ಸ್ವಾಭಾವಿಕ ನ್ಯಾಯದನ್ವಯ ಆರೋಪಿಗಳಿಗೆ ಅವಕಾಶವನ್ನು ಕೊಡಬೇಕು. ಅಂದರೆ ಲಿಖಿತ ಹೇಳಿಕೆಯನ್ನು ಕೊಡಲು, ಆ ದಾಖಲೆ ಮತ್ತು ಕಾಗದಪತ್ರಗಳನ್ನು ಸಲ್ಲಿಸಲು ಅಥವಾ ಸಂಬಂಧಪಟ್ಟ ಸಹಕಾರಿಯಿಂದ ದಾಖಲೆ ಪತ್ರಗಳನ್ನು ತರಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿ ವಿಚಾರಣೆ ನಡೆಸತಕ್ಕದ್ದು.

ಪೀಠಾಧಿಕಾರಿಗಳು ವಿಚಾರಣೆ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿದಾಗ, ಸಹಕಾರಿ ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ, ಆರೋಪಿಯು ಸಲ್ಲಿಸಿದ ಲಿಖಿತ ಹೇಳಿಕೆ ಮತ್ತು ದಾಖಲೆಗಳ ಆಧಾರದ ಮೇಲೆ ತೀರ್ಮಾನ ಕೊಡಬಹುದಾಗಿದೆ. ಹೆಚ್ಚುವರಿ ಅವಕಾಶವನ್ನು ಕೊಡಬಹುದೆಂದು ಪೀಠಾಧಿಕಾರಿಗಳು ತೀರ್ಮಾನಿಸಿದರೆ ಅಂತಹ ಪ್ರಸಂಗದಲ್ಲಿ ಪ್ರತಿಯೊಂದು ಆರೋಪಕ್ಕೂ ಸಂಬಂಧಪಟ್ಟಂತೆ, ಆರೋಪಿಗಳಿಗೆ ತಮ್ಮ ಹೇಳಿಕೆ ಮತ್ತು ದಾಖಲೆಗಳನ್ನು ಸಲ್ಲಿಸಲು, ಹೇಳಿಕೆ ಕೊಡಲು, ಸಾಕ್ಷಿಗಳನ್ನು ಪರಿಶೀಲಿಸಲು ಅವಕಾಶವನ್ನು ಕೊಟ್ಟು, ಆನಂತರ ಆರೋಪಗಳು ರುಜುವಾತಾದರೆ ವಸೂಲಾತಿ ಆದೇಶವನ್ನು ಹೊರಡಿಸಬೇಕು. ಪ್ರತಿಯೊಂದು ಆರೋಪಕ್ಕೆ ಸಂಬಂಧಪಟ್ಟಂತೆ ಆರೋಪದ ಹಣ, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ದೃಢೀಕರಿಸಿಕೊಳ್ಳುವುದು ಪೀಠಾಧಿಕಾರಿಗಳ ಜವಾಬ್ದಾರಿ.

ಅಧಿಭಾರ ಅರ್ಜಿಯನ್ನು ಸ್ವೀಕರಿಸಿದ ನಂತರ, ನಿಬಂಧಕರು ಪ್ರತಿಯೊಂದು ಪ್ರಕರಣವನ್ನು ಸ್ವೀಕರಿಸಿದ ದಿನಾಂಕದಿಂದ 12 ತಿಂಗಳೊಳಗಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಆದೇಶ ಹೊರಡಿಸತಕ್ಕದ್ದು. ಕಾರಣಾಂತರಗಳಿಂದ ವಿಚಾರಣೆಯನ್ನು 12 ತಿಂಗಳಲ್ಲಿ ಮುಗಿಸದಿದ್ದ ಸಂದರ್ಭದಲ್ಲಿ ಸಕಾರಣದೊಂದಿಗೆ ಅವಧಿಯನ್ನು 6 ತಿಂಗಳು ವಿಸ್ತರಿಸಬಹುದು. ಅಂದರೆ ಯಾವುದೇ ಅಧಿಭಾರ ಅರ್ಜಿಯನ್ನು, ಆ ಪ್ರಕರಣ ದಾಖಲಿಸಿದ ದಿನಾಂಕದಿಂದ 18 ತಿಂಗಳಿಗಿಂತ ಹೆಚ್ಚು ಅವಧಿಗೆ ನಿಬಂಧಕರು ಬಾಕಿ ಉಳಿಸತಕ್ಕದ್ದಲ್ಲ. ಹಾಗೂ ತೀರ್ಮಾನವನ್ನು ಕೊಡಬೇಕು.

**ಅಧಿಭಾರ ಅರ್ಜಿಯನ್ನು ದಾಖಲಿಸಿದಾಗ ನಿಬಂಧಕರ ಕಛೇರಿಯಲ್ಲಿ ಪರಿಶೀಲಿಸಬೇಕಾದ ಅಂಶಗಳು: (ಚೆಕ್‌ಲಿಸ್ಟ್)**

1. ಅಧಿಭಾರ ಅರ್ಜಿಯನ್ನು ದಾಖಲಿಸಿದಾಗ ಆ ಅರ್ಜಿ ಕಲಂ.33, 37, 53(7)(ಯು), 48ರನ್ವಯ ವರದಿಯನ್ನಾಧರಿಸಿದೆಯೇ (ಹೌದು/ಇಲ್ಲ)
2. ಈ ಅಧಿಭಾರ ಅರ್ಜಿಯಲ್ಲಿ ಆಸ್ತಿಗೆ ಕೊರತೆ ಉಂಟು ಮಾಡಿದ 1. ಮಂಡಳಿ ನಿರ್ದೇಶಕರು 2. ಪದಾಧಿಕಾರಿಗಳು, 3. ನಿರ್ದೇಶಕ 4. ಮತ್ತಾವುದೇ ವ್ಯಕ್ತಿಗೆ ಜವಾಬ್ದಾರಿಯನ್ನು ನಿಗಧಿಪಡಿಸಲಾಗಿದ್ದರೆ ಅದರ ಆದೇಶದ ಪ್ರತಿ ಅಥವಾ ಹಾಲಿ ಅಥವಾ ಮಾಜಿ ನೌಕರ ಅಥವಾ ಅವರ ಆಸ್ತಿಯನ್ನು ಪಡೆದ ಕಾನೂನು ವಾರಸುದಾರ ಎಂದು ದೃಢೀಕರಿಸಲಾಗಿದೆಯೇ (ಹೌದು/ಇಲ್ಲ)
3. ಆರೋಪಿ ವ್ಯಕ್ತಿಗಳ ಮೇಲೆ ಆಸ್ತಿಯನ್ನು ಕಾನೂನು, ನಿಯಮ ಮತ್ತು ಉಪವಿಧಿಗಳಿಗೆ ವಿರುದ್ಧವಾಗಿ ಪಾವತಿ ಮಾಡಲಾಗಿದೆಯೇ? (ಹೌದು/ಇಲ್ಲ)
4. ಆಸ್ತಿಯಲ್ಲಿ ನಂಬಿಕೆದ್ರೋಹದಿಂದ ಅಥವಾ ನಿರ್ಲಕ್ಷ್ಯತನದಿಂದ ಕೊರತೆಯನ್ನುಂಟು ಮಾಡಲಾಗಿದೆಯೇ (ಹೌದು/ಇಲ್ಲ)
5. ಆಸ್ತಿಯನ್ನು ಸ್ವಂತಕ್ಕಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆಯೇ ಎಂಬುದನ್ನು ದೃಢೀಕರಿಸಲಾಗಿದೆಯೇ? (ಹೌದು/ಇಲ್ಲ)
6. ಈ ಅಧಿಭಾರ ಅರ್ಜಿಯನ್ನು ನಿಬಂಧಕರು ಸ್ವಇಚ್ಛೆಯಿಂದ ದಾಖಲಿಸಿದ್ದಾರೆಯೇ? ಅಥವಾ ವರದಿಗಳನ್ನಾಧರಿಸಿ ಅಧಿಭಾರ ಅರ್ಜಿಯನ್ನು ದಾಖಲಿಸಿದ್ದಾರೆಯೇ?
7. ಸಮಾಪನಾಧಿಕಾರಿ ಅಥವಾ ಸಾಲಗಾರ ಈ ಅಧಿಭಾರ ಅರ್ಜಿಯನ್ನು ದಾಖಲಿಸಿದ್ದಾರೆಯೇ (ಹೌದು/ಇಲ್ಲ)
8. ಅದಿಭಾರ ಅರ್ಜಿಯನ್ನು ದಾಖಲಿಸುವಾಗ ಪ್ರತಿಯೊಬ್ಬ ಹಾಲಿ ಅಥವಾ ಮಾಜಿ ಪದಾಧಿಕಾರಿಗಳು, ಅಥವಾ ಹಾಲಿ ಅಥವಾ ಮಾಜಿ ನೌಕರರು ಅಥವಾ ಅವರ ಕಾನೂನು ವಾರಸುದಾರರ ಮೇಲೆ ಆರೋಪ ಪಟ್ಟಿಯನ್ನು ತಯಾರಿಸಿ ಲಗತ್ತಿಸಲಾಗಿದೆಯೇ? ಅಂದರೆ ಆರೋಪಗಳನ್ನು ಸ್ಪಷ್ಟವಾಗಿ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ದಾಖಲೆಗಳನ್ನಾಧರಿಸಿ ತಯಾರಿಸಲಾಗಿದೆಯೇ? (ಹೌದು/ಇಲ್ಲ)
9. ಈ ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಪ್ರತಿಯೊಬ್ಬ ವ್ಯಕ್ತಿಗೂ ಕಾನೂನು, ನಿಯಮ ಮತ್ತು ಉಪವಿಧಿಗಳನ್ವಯ ಅಧಿಕಾರವನ್ನು ಕೊಡಲಾಗಿದೆಯೇ ಹಾಗೂ ಆ ಅಧಿಕಾರವನ್ನು ಅಂತಹ ವ್ಯಕ್ತಿಗಳು ನಿರ್ವಹಿಸುತ್ತಿದ್ದರೆ ಹಾಗೂ ನಿರ್ವಹಿಸುವ ಸಮಯದಲ್ಲಿ ಆಸ್ತಿಗೆ ಕೊರತೆಯನ್ನುಂಟು ಮಾಡಿದ್ದಾರೆಯೇ? ನಂಬಿಕೆ ದ್ರೋಹವೆಸಗಿದ್ದಾನೆಂದು ಆರೋಪಿಸಲಾಗಿದೆಯೇ? ಆಸ್ತಿಯನ್ನು ನಂಬಿಕೆದ್ರೋಹ ಮತ್ತು ನಿರ್ಲಕ್ಷ್ಯತನದಿಂದ ಉಂಟುಮಾಡಿದ್ದಾರೆಯೇ? (ಹೌದು/ಇಲ್ಲ)
10. ಪ್ರತಿಯೊಬ್ಬ ಆರೋಪಿತನಿಗೂ ಸ್ವಾಭಾವಿಕ ನ್ಯಾಯದನ್ವಯ ಲಿಖಿತ ಹೇಳಿಕೆ ಮತ್ತು ದಾಖಲೆಗಳನ್ನು ಸಲ್ಲಿಸಲು ಅವಕಾಶ ಕೊಡಲಾಗಿತ್ತೇ? (ಹೌದು/ಇಲ್ಲ)
11. ಕಾನೂನು ವಾರಸುದಾರರಾಗಿದ್ದರೆ, ಅಂತಹ ಕಾನೂನು ವಾರಸುದಾರನು ಮೃತ ವ್ಯಕ್ತಿಯ ಆಸ್ತಿಯನ್ನು ಪಡೆದಿದ್ದರೆ, ಅಂತಹ ವ್ಯಕ್ತಿಗಳಿಗೂ ಸ್ವಾಭಾವಿಕ ನ್ಯಾಯದನ್ವಯ ಅವಕಾಶವನ್ನು ಕೊಡಲಾಗಿದೆಯೇ? (ಹೌದು/ಇಲ್ಲ)
12. ಆರೋಪ ಹೊರಿಸಿದ ವ್ಯಕ್ತಿಗೆ ಉಂಟಾದ ಆಸ್ತಿ ಕೊರತೆಯನ್ನು ತುಂಬಿಕೊಡಲು ಸೂಚಿಸಲಾಗಿದೆಯೇ? ಅಂದರೆ ಕರ್ತವ್ಯ ನಿರ್ವಹಿಸುವಾಗ ಅವನು ಮಾಡಿದ ತಪ್ಪುಗಳಿಂದ ಆಸ್ತಿಗೆ ಆದ ಕೊರತೆಯನ್ನು ಸರಿದೂಗಿಸಲು ಕೇಳಲಾಗಿದೆಯೇ? (ಹೌದು/ಇಲ್ಲ)
13. ಕಾರಣ ಕೇಳುವ ನೋಟೀಸಿನ ಜೊತೆ ಆರೋಪ ಪಟ್ಟಿಯನ್ನು ಹೊರಿಸಿದಾಗ ಅಂತಹ ಆಸ್ತಿ ಕೊರತೆಯ ಪ್ರಮಾಣವನ್ನು ನಮೂದಿಸಿ, ಆ ಕೊರತೆಯನ್ನು ತುಂಬಿಕೊಡುವಂತೆ ಮತ್ತು ಅದಕ್ಕೆ ತಗಲುವ ಬಡ್ಡಿ ಸಹಿತ ವಸೂಲಿ ಮಾಡಬಾರದೇಕೆಂಬ ಸ್ಪಷ್ಟ ಸೂಚನೆ ನೀಡಲಾಗಿದೆಯೇ? (ಹೌದು/ಇಲ್ಲ)
14. ಆರೋಪಿಗಳ ಲಿಖಿತ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಿದ ನಂತರ ವಸೂಲಾತಿ ವರದಿಯನ್ನು ಕೊಡುವ ಪೂರ್ವದಲ್ಲಿ ಪ್ರತಿಯೊಂದು ಆರೋಪದ ಮೇಲೂ ಸ್ಪಷ್ಟವಾಗಿ ಉಂಟಾದ ಕೊರತೆಯನ್ನು ಮತ್ತು ಜವಾಬ್ದಾರಿಯನ್ನು ನಿಗಧಿಪಡಿಸಲಾಗಿದೆಯೇ? (ಹೌದು/ಇಲ್ಲ)

ಈ ಮೇಲ್ಕಂಡ ಪರಿಶೀಲನಾಂಶಗಳ ಆಧಾರದ ಮೇಲೆ ಅಧಿಭಾರ ಅರ್ಜಿಯನ್ನು ಸ್ವೀಕರಿಸುವಾಗ ಕಛೇರಿ ಸ್ಪಷ್ಟವಾಗಿ ದಾಖಲಿಸಬೇಕು ಮತ್ತು ಪೀಠಾಧಿಕಾರಿಗಳಿಗೆ, ಈ ವಿವರಗಳನ್ನು ಸಲ್ಲಿಸಿ ಆರೋಪಿತ ವ್ಯಕ್ತಿಗಳಿಗೆ ಆರೋಪ ಪಟ್ಟಿಯನ್ನು ಹೊರಿಸಿ, ವಿಚಾರಣೆ ಮಾಡಿ ವಸೂಲಾತಿ ಆದೇಶ ಹೊರಡಿಸಬಹುದೆಂದು ಕಡತ ಮಂಡಿಸಬೇಕು.

ಅಧಿಭಾರ ಅರ್ಜಿ ವಿಚಾರಣೆ ಮಾಡಿದ ನಂತರ ಆದೇಶ ಮಾಡುವಾಗ/ತೀರ್ಪು ನೀಡುವಾಗ, ಆ ತೀರ್ಪಿನಲ್ಲಿ ಇರಬೇಕಾದ ಪ್ರಮುಖ ಅಂಶಗಳೆಂದರೆ –

(1) ಅಧಿಭಾರ ಅರ್ಜಿ ಸಲ್ಲಿಸುವಾಗ ಕಾಯಿದೆ ಕಲಂ.33, 35, 53(7) ಯು ಮತ್ತು 48 ರನ್ವಯ ನೀಡಿದ ವರದಿ ಪ್ರತಿ ಲಗತ್ತಿಸಿದೆಯೇ?

(2) ವರದಿಯಲ್ಲೂ ಸ್ವಾಭಾವಿಕ ನ್ಯಾಯ ನೀತಿ ಅನ್ವಯ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ?

(3) ಆರೋಪಿಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆಯೇ?

(4) ಆ ದಾಖಲೆಗಳನ್ನು ಸಹಕಾರಿ ದಾಖಲೆಗಳ ಜೊತೆ ವಿಮರ್ಷೆ ಮಾಡಲಾಗಿದೆಯೇ?

(5) ಆರೋಪಿತರು ಜವಾಬ್ದಾರರನ್ನಾಗಿ ಮಾಡಲು ದಾಖಲೆಗಳು/ಹೇಳಿಕೆಗಳು ಸಮರ್ಪಕವಾಗಿದೆಯೇ?

(6) ಜವಾಬ್ದಾರಿಯನ್ನು ವೈಯಕ್ತಿರಾಗಿ, ಸಾಮೂಹಿಕವಾಗಿ ನಿಗದಿ ಪಡಿಸಲಾಗಿದೆಯೇ?

(7) ಬಾಕಿ ಹಣಕ್ಕೆ ಬಡ್ಡಿ ಆಕರಣೆ ಮಾಡಲು ತೀರ್ಮಾನಿಸಲಾಗಿದೆಯೇ?

ಸೂಚನೆ : ಹಣದುರುಪಯೋಗವಾಗಿದ್ದರೆ, ಬಡ್ಡಿ ಪಾವತಿ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಹಣದುರುಪಯೋಗದ ವರದಿ ಬಂದ ನಂತರ, ಸಂಬಂಧಪಟ್ಟ ವ್ಯಕ್ತಿಗಳಿಗೆ ಹಣವನ್ನು ಬಡ್ಡಿ ಸಹಿತ ಪಾವತಿಸಲು ನೋಟೀಸ್ ಜಾರಿ ಮಾಡಿದ್ದರೆ, ಆ ದಿನಾಂಕದಿಂದ ಬಡ್ಡಿ ಆಕರಣೆ ಆದೇಶ ನೀಡಬಹುದು. ಅಥವಾ ಸಹಕಾರಿಗೆ ನಷ್ಟವಾಗಿದೆ ಎಂದು ಅಧಿಭಾರ ಅರ್ಜಿಯನ್ನು ಸಮರ್ಥಿಸಿ, ಬಡ್ಡಿ ಸಮೇತ ವಸೂಲಾತಿಗೆ ಆದೇಶಿಸಲು ಕೇಳಿದ್ದರೆ ಮತ್ತು ಅದಕ್ಕೆ ಆರೋಪಿತರು ತಕರಾರು ಸಲ್ಲಿಸದಿದ್ದರೆ – ದುರುಪಯೋಗದ ದಿನಾಂಕದಿಂದ ಬಡ್ಡಿಗೆ ಆದೇಶಿಸಲು ಅಧಿಭಾರ ಅರ್ಜಿ ದಾಖಲಿಸಲು ಕೇಳಿದ್ದರೆ, ಪಿಠಾಧಿಕಾರಿಗಳು ತೀರ್ಮಾನಕ್ಕೆ ಬಂದರೆ ಬಡ್ಡಿಗೆ ಆದೇಶ ನೀಡಬಹುದು.

**ತೀರ್ಪುಗಳು:**

1. ಒಂದು ಸಹಕಾರ ಸಂಘದ ಕಾರ್ಯದರ್ಶಿಯು ಸಂಬಳ ಹೆಚ್ಚಿಸಿಕೊಳ್ಳಲು ಆಡಳಿತ ಮಂಡಳಿಯ ಒಪ್ಪಿಗೆಯನ್ನು ನಡವಳಿಕೆಗಳ ಮೂಲಕ ಪಡೆದಿದ್ದರೂ, ಅಂತಹ ತೀರ್ಮಾನವನ್ನು ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸಿಲ್ಲ ಅಥವಾ ಅವರ ಒಪ್ಪಿಗೆಯನ್ನು ಪಡೆದಿಲ್ಲವೆಂದರೆ, ಅದು ಅಧಿಭಾರ ಅರ್ಜಿಯಲ್ಲಿ ವಸೂಲು ಮಾಡಿಕೊಳ್ಳುವ ಅಧಿಕಾರ ಇರತಕ್ಕದ್ದು. ಈ ಅಧಿಭಾರ ಅರ್ಜಿಯನ್ನು ಹೆಚ್ಚುವರಿಯಾಗಿ ಪಡೆದ ಹಣ ವಸೂಲಾತಿಗೆ ಸಲ್ಲಿಸಿರುವ ಅರ್ಜಿ ಸೂಕ್ತ. 2007(4) ಕೆಸಿಸಿಆರ್ ಎಸ್‌ಎನ್ 356/ಐಎಲ್‌ಆರ್ 2007(4) ಕೆಎಆರ್ 5003/

2. ಅಧಿಭಾರ ಅರ್ಜಿಯನ್ನು ದಾಖಲಿಸುವ ಸಂದರ್ಭದಲ್ಲಿ ಕಲಂ 64ರ ವರದಿಯನ್ನಾಧರಿಸಿ ಸಲ್ಲಿಸಲಾಗಿದೆಯೇ ಎನ್ನುವುದನ್ನು ಗಮನಿಸಬೇಕು. ಅಧಿಭಾರ ಅರ್ಜಿಯನ್ನು ದಾಖಲಿಸಿದ ನಂತರ ಆರೋಪಿಗಳಿಗೆ ಅವಕಾಶಗಳನ್ನು ಕೊಡುವುದರ ಬಗ್ಗೆ ಮತ್ತು ಆರೋಪ ಪಟ್ಟಿಯನ್ನು ಕೊಡುವುದರ ಬಗ್ಗೆ ವಿಚಾರಣೆ ಮಾಡಬೇಕು. 2006(1) ಕೆಸಿಸಿಆರ್ 665/ಐಎಲ್‌ಆರ್ 2006(2) ಕೆಎಆರ್ 1502/2006(2) ಕೆಎಲ್‌ಜೆ 303

3. ಒಂದು ಅಧಿಭಾರ ಅರ್ಜಿಯನ್ನು ಸಹಾಯಕ ನಿಬಂಧಕರು ಮೌಖಿಕ ಮತ್ತು ದಾಖಲೆಗಳ ಆಧಾರದ ಮೇಲೆ ಮತ್ತು ಸಂಘದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ಆದೇಶ ಮಾಡಿದ್ದರ ಮೇಲೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ಅದನ್ನು ದೃಢೀಕರಿಸಿದೆ. ಈ ದೃಢೀಕರಣದ ನಂತರ ಯಾವ ದಾಖಲೆ ಮತ್ತು ಸಾಕ್ಷಿಗಳನ್ನು ಆಧಾರವಾಗಿಟ್ಟು ತೀರ್ಪು ಕೊಡಲಾಗಿದೆ ಎಂಬುದರ ಬಗ್ಗೆ ರಿಟ್ ಅರ್ಜಿ ಮುಖಾಂತರ ಪ್ರಶ್ನಿಸತಕ್ಕದ್ದಲ್ಲ. 2003(4) ಕೆಸಿಸಿಆರ್ ಎಸ್‌ಎನ್ 302/ಐಎಲ್‌ಆರ್ 2004(2) ಕೆಎಆರ್ 2181

4. ಒಂದು ಸಹಕಾರ ಸಂಘದ ನೌಕರ ಅಥವಾ ಪದಾಧಿಕಾರಿ ಹಣದುರುಪಯೋಗ ಮಾಡಿಕೊಂಡಿದ್ದ ಸಂದರ್ಭದಲ್ಲಿ ಕಲಂ 69 ಅಥವಾ ಕಲಂ 70ರನ್ವಯ ಕ್ರಮ ಜರುಗಿಸಬೇಕು. ಹಾಗೂ ಆ ಬಗ್ಗೆ ಇಲಾಖಾ ವಿಚಾರಣೆಯನ್ನು ಮಾಡಿ ಅಂತಹ ವ್ಯಕ್ತಿಯನ್ನು ವಜಾ ಮಾಡಿದ್ದರೆ ಅದು ಸಿಂಧುವಾಗತಕ್ಕದ್ದಲ್ಲ. 2004(1) ಕೆಸಿಸಿಆರ್ 423/ಐಎಲ್‌ಆರ್ 2003(4) ಕೆಎಆರ್ 4030/2004(1) ಕೆಎಲ್‌ಜೆ 395.

5. ಕಲಂ 69ರಲ್ಲಿ ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಆಡಿಟ್ ವರದಿ, ವಿಚಾರಣಾ ವರದಿ ಮತ್ತು ಪರಿವೀಕ್ಷಣಾ ವರದಿ ಅಥವಾ ಸಮಾಪನಾಧಿಕಾರಿಗಳ ವರದಿ ಆಧಾರದ ಮೇಲೆಯೇ ದಾಖಲಿಸತಕ್ಕದ್ದು. 1979(1) ಕೆಎಲ್‌ಜೆ 185/ಎಐಆರ್ 1979(1) ಕೆಎಆರ್

739(ಡಿಬಿ)

6. ನೌಕರರ ನಿರ್ಲಕ್ಷ್ಯತನದಿಂದ ಸಂಘಕ್ಕೆ ಕೊರತೆಯುಂಟಾಗಿದ್ದರೆ ಅದನ್ನು ವಿಶೇಷವಾಗಿ ಸೃಷ್ಟಿ ಮಾಡಿರುವ ಕಲಂ 69ರಲ್ಲಿ ದಾಖಲಿಸಬೇಕು. 1976(1) ಕೆಎಲ್‌ಜೆ ಎಸ್ ಎನ್ 55

7. ಕಲಂ 69ರಡಿ ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಆ ಸಂಬಂಧಪಟ್ಟ ಸಂಘಕ್ಕೆ ಅದರ ಆಸ್ತಿಯಲ್ಲಿ ಕೊರತೆಯುಂಟಾದದ್ದನ್ನು ಆಡಿಟ್, ವಿಚಾರಣೆ, ಪರಿವೀಕ್ಷಣೆ ಮತ್ತು ಸಮಾಪನಾಧಿಕಾರಿ ಆದೇಶದ ಆಧಾರದ ಮೇಲೆಯೇ ದಾಖಲಿಸಬೇಕು 1975(2) ಕೆಎಲ್‌ಜೆ 118/ ಐಎಲ್‌ಆರ್ 1977 ಕೆಎಆರ್ 1202

8. ಸಂಘದ ಆಸ್ತಿಯಲ್ಲಿ ಕೊರತೆಯನ್ನು ದಿನನಿತ್ಯದ ವ್ಯವಹಾರವನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕಂಡುಹಿಡಿದಿದ್ದರೆ ಅಂತಹ ಪ್ರಕರಣದಲ್ಲಿ ವಸೂಲಾತಿ ಕ್ರಮ ಕಲಂ 69ರಡಿ ಇರತಕ್ಕದ್ದಲ್ಲ. 1976(2) ಕೆಎಲ್‌ಜೆ 62/ಎಐಆರ್ 1977 ಕೆಎಎನ್‌ಟಿ 87/ಐಎಲ್‌ಆರ್ 1976 ಕೆಎಆರ್ 1384.

9. ಆಂತರಿಕ ಲೆಕ್ಕತಪಾಸಣಾ ವರದಿಯನ್ನಾಧರಿಸಿ ಕೊರತೆಯಾದ ಹಣಕ್ಕೆ ಕಲಂ 69ರಡಿ ಕ್ರಮ ಜರುಗಿಸತಕ್ಕದ್ದಲ್ಲ. ಐಎಲ್‌ಆರ್ 1986(4) ಕೆಎಆರ್ 3731

10. ಪ್ರಕರಣವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ನಡವಳಿಕೆಗಳ ಆದೇಶ ಪ್ರತಿಯನ್ನು ಕೇಳಿದಾಗ ಅದನ್ನು ಕೊಡದೇ ಇರುವುದು ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ಪುನರ್ ವಿಮರ್ಶಾ ಅರ್ಜಿ ದಾಖಲಿಸಬಹುದಾಗಿದೆ. ಐಎಲ್‌ಆರ್ 1987 ಕೆಎಆರ್ 825/1987(1) ಕೆಎಲ್‌ಜೆ 24

11. ಅಧಿಭಾರ ಅರ್ಜಿಯನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಕಾನೂನು ವಾರಸುದಾರರು ಮೃತಪಟ್ಟ ವ್ಯಕ್ತಿಯ ಆಸ್ತಿಯನ್ನು ಪಡೆದಿದ್ದಾನೆಂದು ದೃಢೀಕರಿಸಿಕೊಳ್ಳದೇ ಕೊರತೆಗೆ ಜವಾಬ್ದಾರಿಯೆಂದು ನಿಗಧಿಪಡಿಸತಕ್ಕದ್ದಲ್ಲ. ಸ್ಪಷ್ಟವಾಗಿ ಮೃತಪಟ್ಟ ವ್ಯಕ್ತಿಯ ಆಸ್ತಿಯನ್ನು ಅನುಭವಿಸುತ್ತಿದ್ದಾರೆಂದು ತೀರ್ಮಾನಕ್ಕೆ ಬಂದ ನಂತರವೇ ಅಧಿಭಾರ ಅರ್ಜಿಯಲ್ಲಿ ಆದೇಶಿಸತಕ್ಕದ್ದು. 1988(2) ಕೆಎಲ್‌ಜೆ 384.

12. ಪ್ರಕರಣ ಒಂದು ಸಂಘದ ಕಾರ್ಯದರ್ಶಿಯ ಮೇಲೆ ಅವನ ಕೆಲಸ ನಿರ್ವಹಣೆಯಲ್ಲಿ ನಿರ್ಲಕ್ಷ್ಯತನದಿಂದ ಮೊದಲನೇ ಸಾರಿ ನಷ್ಟವುಂಟು ಮಾಡಿದ್ದರೆ ಅದನ್ನು ಅವ್ಯವಹಾರಿಕ ಎಂದು ತಿಳಿಯತಕ್ಕದ್ದಲ್ಲ. 1983(1) ಕೆಎಲ್‌ಜೆ 400

13. ಕಲಂ 69, 70ಕ್ಕೆ ತಿದ್ದುಪಡಿ ಆದ ನಂತರ ಯಾವುದೇ ಪ್ರಕರಣವನ್ನು ಕಲಂ 69ರಲ್ಲಿ ದಾಖಲಿಸಬೇಕಾಗಿತ್ತೋ ಆ ಪ್ರಕರಣವನ್ನು ಕಲಂ 70ರಲ್ಲಿಯೂ ದಾಖಲಿಸಿ ವಸೂಲಾತಿ ಕ್ರಮ ಜರುಗಿಸಬಹುದು. 1986(2) ಐಎಲ್‌ಆರ್ ಕೆಎಆರ್ 1045/1987(1) ಕೆಎಲ್‌ಜೆ ಎಸ್‌ಎನ್ 108/ 1986(1) ಬಿಎಲ್‌ಜೆ 249 (ಡಿಬಿ) ಈ ತೀರ್ಪಿಗೆ ಸಂಬಂಧಪಟ್ಟಂತೆ ವಿಭಾಗೀಯ ಪೀಠವು ಈ ತೀರ್ಪನ್ನು ಈ ಹಿಂದೆ ಕೊಟ್ಟ 1980(2) ಕೆಎಲ್‌ಜೆ 106 ತೀರ್ಪನ್ನು ಎತ್ತಿ ಹಿಡಿದಿದೆ.

14. ಸಾಲ ಮಂಜೂರಿ ಮಾಡುವಾಗ ಉಪನಿಯಮ ಮತ್ತು ಸಾಲ ನೀತಿಗೆ ವಿರುದ್ಧವಾಗಿ ಮಂಜೂರಿ ಮಾಡಿದ್ದರೆ ಅಂತಹ ಪ್ರಕರಣವನ್ನು ಕಲಂ 70ರನ್ವಯ ದಾಖಲಿಸತಕ್ಕದ್ದು. 1979(1) ಕೆಎಲ್‌ಜೆ 185/ಐಎಲ್‌ಆರ್ 1979(1) ಕೆಎಆರ್ 739 (ಡಿಬಿ)

15. ಅಧಿಭಾರ ಅರ್ಜಿಯಲ್ಲಿ ಪ್ರತಿಯೊಬ್ಬ ಆರೋಪಿಗೂ ಸ್ಪಷ್ಟ ಆರೋಪ ಪಟ್ಟಿಯನ್ನು ವ್ಯಕ್ತಿಗತವಾಗಿ ತಯಾರಿಸಿ ಹೊರಡಿಸದೇ ಇದ್ದರೆ ಅಂತಹ ವಿಚಾರಣೆಯು ಕಲಂ 69ರನ್ವಯ ಇರುವುದಿಲ್ಲ. ಹಾಗೂ 64ರ ವಿಚಾರಣೆ ಮಾಡುವ ಸಂಬಂಧದಲ್ಲಿ ಯಾವ ವ್ಯಕ್ತಿಯ ಮೇಲೆ ವಸೂಲಾತಿ ಇಡಲಾಗಿದೆಯೇ, ಅಂತಹ ವ್ಯಕ್ತಿಗೆ 64ರ ವಿಚಾರಣೆಯ ವಿಷಯವೇ ತಿಳಿಯದೇ ಇದ್ದಾಗ, ಅದು ಸ್ವಾಭಾವಿಕ ನ್ಯಾಯದನ್ವಯ ಅವಕಾಶ ಕಲ್ಪಿಸಿದಂತಾಗುವುದಿಲ್ಲ. ವಿಚಾರಣೆಯೇ ತಪ್ಪಾಗುತ್ತದೆ. 1991(2) ಕೆಎಲ್‌ಜೆ 23.

16. ಕಲಂ 69ರಡಿಯಲ್ಲಿ ನಿಗಧಿಪಡಿಸಿರುವ ನೀತಿನಿಯಮಗಳನ್ನು ಅನುಸರಿಸದೇ ಆದೇಶ ಮಾಡಿದರೆ ಅದು ನಿಯಮಬಾಹಿರ. ಅಂತಹ ಪ್ರಸಂಗದಲ್ಲಿ ರಿಟ್ ಮೂಲಕ ಪರಿಹಾರ ಕೇಳಬಹುದು. ವ್ಯಕ್ತಿಗತವಾಗಿ ಆರೋಪ ಪಟ್ಟಿಯನ್ನು ಹೊರಡಿಸದೇ, ಲೆಕ್ಕತಪಾಸಣಾಧಿಕಾರಿಗಳು ರೂಪಿಸಿದ ಆರೋಪಗಳ ಆಧಾರವನ್ನೇ ಆರೋಪ ಪಟ್ಟಿಯೆಂದು ತಿಳಿದು ನೋಟೀಸ್ ಜಾರಿ ಮಾಡಿದ್ದರೆ ಅದು ನಿಯಮಾಬಾಹಿರ. 1989(2) ಕೆಎಲ್‌ಜೆ 291

17. ಯಾವನೇ ಒಬ್ಬ ವ್ಯಕ್ತಿ 69ರ ವಿಚಾರಣೆ ಸಂದರ್ಭದಲ್ಲಿ ಗೈರುಹಾಜರಾಗಿ ಅವನನ್ನು ಎಕ್ಸ್‌ಪಾರ್ಟಿ ಎಂದು ತೀರ್ಮಾನಿಸಿದ್ದರೆ, ಅಂತಹ ವ್ಯಕ್ತಿಯು ಲೆಕ್ಕತಪಾಸಣೆ ಮಾಡುವ ಸಮಯದಲ್ಲಿ ಪಾಟಿ ಸವಾಲು ಮಾಡಲಿಲ್ಲವೆಂಬ ಅಥವಾ ಲೆಕ್ಕತಪಾಸಣಾಧಿಕಾರಿಯನ್ನು ವಿಚಾರಣೆ ಮಾಡಿಲ್ಲವೆಂಬ ಕಾರಣಕ್ಕೆ ಪರಿಹಾರ ಕೇಳತಕ್ಕದ್ದಲ್ಲ. 1989(2) ಕೆಎಲ್‌ಜೆ 285

18. ಆಡಳಿತ ಮಂಡಳಿಯ ಸದಸ್ಯರಿಂದ ವಸೂಲಾತಿ ಮಾಡಬೇಕಾದ ಪ್ರಸಂಗದಲ್ಲಿ ದಾವಾ ಪ್ರಕರಣವನ್ನೂ ದಾಖಲಿಸಬಹುದು ಅಥವಾ ಅಧಿಭಾರ ಅರ್ಜಿಯನ್ನೂ ದಾಖಲಿಸಬಹುದು. 1989(2) ಕೆಎಲ್‌ಜೆ 361.

19. ನಿರ್ದೇಶಕರುಗಳಿಗೆ ಕೊಟ್ಟ ಸಾಲ ಕಲಂ 70ರಲ್ಲಿ ವಸೂಲಿ ಮಾಡಬೇಕೆ ಹೊರತು ಕಲಂ 69 ಅಂತಹ ನಿರ್ದೇಶಕರಿಗೆ ಅನ್ವಯವಾಗತಕ್ಕದ್ದಲ್ಲ. ಕಲಂ 69ರಲ್ಲಿ ಸಾಲಕ್ಕೆ ಸಂಬಂಧಪಟ್ಟ ಅವಕಾಶವಲ್ಲ. ಅದು ಜವಾಬ್ದಾರಿಯನ್ನು ನಿರ್ವಹಿಸಲು ತಪ್ಪಿದಾಗ ಜರುಗಿಸಬಹುದಾದ ಕ್ರಮ. ILR 1974 KAR 258/1974(1) KLJ 449.

20. ಅಧಿಭಾರ ಅರ್ಜಿಯನ್ನು ದಾಖಲಿಸುವಾಗ ಆ ಸಂಘದ ವ್ಯವಹಾರವನ್ನು ನಡೆಸುತ್ತಿದ್ದು ಆ ಸಂಘದ ಆಸ್ತಿಯಲ್ಲಿ ಕಡಿತಗೊಂಡಾಗ ಮತ್ತು ಆ ಕಡಿತಗೊಂಡಿದೆ ಎಂಬ ಆಡಿಟ್ ವರದಿಯಲ್ಲಿ/ ವಿಚಾರಣಾ ವರದಿಯಲ್ಲಿ/ತಪಾಸಣೆಯಲ್ಲಿ ಮತ್ತು ಸಮಾಪನೆಗೊಂಡ ವರದಿಯನ್ನು ಆಧರಿಸಿ ವಸೂಲಾತಿ ಕ್ರಮ ಜರುಗಿಸಬೇಕು. ILR 1975(2) KAR 1202.

21. ಕಲಂ 69ರಡಿ ಆಡಿಟ್ ವರದಿಯ ಆಧಾರವಲ್ಲದೆ ಬೇರೆ ವಸೂಲಾತಿಗೆ ಸಂಬಂಧಪಡತಕ್ಕದ್ದಲ್ಲ. ಆಡಿಟ್ ವರದಿಯಲ್ಲಿ ನಮೂದಾಗಿರುವ ಹಣಕಾಸಿನ ವಸೂಲಾತಿಗಳಿಗೆ ಸಂಬಂಧಪಟ್ಟಿರಬೇಕು. ಇಲ್ಲವಾದರೆ ಮಧ್ಯಪ್ರವೇಶಿಸಲಾಗದು. ILR 1976(2) KAR 1384/AIR 1970(77) KAR 87/1976(2) KLJ 682.

22. ಕಲಂ 69 ಒಂದು ವಿಶೇಷ ಅವಕಾಶವನ್ನು ಕಲ್ಪಿಸಿದ್ದು ಅದು ಕಲಂ 70ಕ್ಕಿಂತ ಮೇಲ್ಪಟ್ಟ ಕಲಂ ಆಗಿರುತ್ತದೆ. (ILR 1974 KAR 258/1977(2) KLG 449)

23. ಕಲಂ 69 ಹಣ ದುರುಪಯೋಗ ಮಾಡಿಕೊಂಡಾಗ, ಸದುಪಯೋಗವಾಗದೆ ಇದ್ದಾಗ ಕ್ರಮ ಜರುಗಿಸತಕ್ಕದ್ದು. ಈ ಕ್ರಮ ಜರುಗಿಸುವ ಪೂರ್ವದಲ್ಲಿ ಆಡಳಿತಮಂಡಳಿ ನಿರ್ದೇಶಕರಿಂದ, ಅವರ ಮೇಲೆ ಕ್ರಮ ಜರುಗಿಸಿ ನಂತರ ಅಧಿಭಾರ ಅರ್ಜಿ ದಾಖಲಿಸಬೇಕು ಎಂದಾಗುವುದಿಲ್ಲ. (ILR 1979(1) KAR 739/1979(1) KLJ 185 DB)

24. ಕಲಂ 69ರಲ್ಲಿ ವಸೂಲಾತಿಗೆ ಜರುಗಿಸುವ ಕ್ರಮ ಕಲಂ 70ರನ್ವಯವೂ ಜರುಗಿಸಬಹುದು.(ILR 1989(2) KAR SN 2/1989(2) KAR 106)

25. ಆಂತರಿಕ ಲೆಕ್ಕಪರಿಶೋಧಕರು ಕೊಟ್ಟ ವರದಿಯನ್ನು ಆಧರಿಸಿ ಕಲಂ 69ರನ್ವಯ ಕ್ರಮ ಜರುಗಿಸಲಾಗದು. ಸರಕು ಕೊರತೆ ಆಂತರಿಕ ಲೆಕ್ಕಪರಿಶೋಧಕರಿಂದ ಗುರುತಿಸಲಾಗಿದ್ದು ಆ ವರದಿಯನ್ನು ಆಧರಿಸಿ ನೋಟೀಸ್ ಜಾರಿಯಾಗಿದ್ದರೆ ಆ ನೋಟೀಸಿನ ಆಧಾರದ ಮೇಲೆ ಕಲಂ 70ರಂತೆ ಕ್ರಮ ಜರುಗಿಸಬೇಕು.(ILR 1986(4)KAR 3731)

26. ಕಲಂ 69ರನ್ವಯ ಲಿಖಿತ ಹೇಳಿಕೆಯನ್ನು ಪಡೆದು ಜವಾಬ್ದಾರಿಯನ್ನು ನಿಗಧಿಗೊಳಿಸಬಹುದು. ಆ ಜವಾಬ್ದಾರಿಯನ್ನು ನಿಗಧಿಗೊಳಿಸುವಾಗ ಸಂಘದ ದಾಖಲೆಗಳನ್ನು ಪರಿಶೀಲಿಸಿ ಹಾಗೂ ನಿಬಂಧಕರಿಗೆ ಮಾಹಿತಿ ಸಲ್ಲಿಸಿ ವಸೂಲಾತಿ ಆದೇಶ ಪಡೆಯಬಹುದು.(1987(1) KLJ 141)

27. ಕಾನೂನು ವಾರಸುದಾರರ ಮೇಲೆ ವಸೂಲಾತಿ ಆದೇಶ ಹೊರಡಿಸುವ ಪೂರ್ವದಲ್ಲಿ ಸತ್ತ ವ್ಯಕ್ತಿ ಚರ ಮತ್ತು ಸ್ಥಿರ ಆಸ್ತಿಯನ್ನು ಕಾನೂನು ವಾರಸುದಾರರಿಗೆ ಬಿಟ್ಟುಹೋಗಿದ್ದಾನೆ ಎಂದು ದಾಖಲೆಗಳನ್ನು ನೋಡಿ ಆದೇಶಿಸಬೇಕು. ತಂದೆ ಮಗ ಎಂಬ ಒಂದೇ ಸಂಬಂಧದ ಆಧಾರದ ಮೇಲೆ ಕಾನೂನು ವಾರಸುದಾರನು ಎಂದು ಜವಾಬ್ದಾರಿ ನಿಗಧಿಪಡಿಸತಕ್ಕದ್ದಲ್ಲ. (1988(2) KLJ 384)

28. ಅಧಿಭಾರ ಅರ್ಜಿಯನ್ನು ಹೂಡಿದಾಗ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಜವಾಬ್ದಾರರಾಗಿದ್ದರೆ ಅಂತಹ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ವೈಯಕ್ತಿಕ ಆರೋಪ ಹೊರಿಸಬೇಕು. ಲೆಕ್ಕತಪಾಸಣೆ ಮಾಡಿದ ಅಧಿಕಾರಿ ತಯಾರಿಸಿದ ಆರೋಪಗಳನ್ನು ಆಧಾರವಾಗಿಟ್ಟು ಕ್ರಮ ಜರುಗಿಸಿದ್ದರೆ ಅಂತಹ ಆರೋಪಗಳು ಜಂಟಿ ನಿಬಂಧಕರು ಹೊರಿಸಿದ ಆರೋಪಗಳಲ್ಲ. ಮತ್ತು ಆಡಿಟರ್ ತಯಾರಿಸಿದ ಆರೋಪ ಆದ್ದರಿಂದ ಅಂತಹ ಕ್ರಮವನ್ನು ಎತ್ತಿ ಹಿಡಿಯತಕ್ಕದಲ್ಲ. 1989(2) KLJ 281.

29. ಯಾವ ವ್ಯಕ್ತಿ ವಿಚಾರಣೆ ಸಮಯದಲ್ಲಿ ಗೈರು ಹಾಜರಾಗಿ ಎಕ್ಸ್‌ಪಾರ್ಟಿ ಎಂದು ತೀರ್ಮಾನವಾಗಿದ್ದರೆ, ಅಂತಹ ವ್ಯಕ್ತಿ ವಿಚಾರಣೆ ಸಮಯದಲ್ಲಿ ತನಗೆ ಪಾಟಿ ಸವಾಲು ಮಾಡಲು ಅವಕಾಶವಿಲ್ಲವೆಂದು ಮತ್ತು ಲೆಕ್ಕ ತಪಾಸಣಾ ಅಧಿಕಾರಿಯನ್ನು ಪಾಟಿ ಸವಾಲು ಮಾಡಲಿಲ್ಲವೆಂದು ಆ ಕಕ್ಷಿದಾರ ವಾದಿಸತಕ್ಕದಲ್ಲ. 1989(2) KLJ 285.

30. ಆಡಳಿತ ಮಂಡಳಿ ನಿರ್ದೇಶಕರಿಂದ ಬರಬೇಕಾದ ಹಣವನ್ನು ಕಲಂ 70 ಅಥವಾ 69ರನ್ವಯ ಜರುಗಿಸಬಹುದು. ಕಲಂ 70ರನ್ವಯ ದಾವೆ

ಹೂಡಿದರೆ ಅದು ಸಿಂಧು. 1989(2) KLJ 361.

31. ಪ್ರಕರಣವನ್ನು ವಿಚಾರಣೆ ಮಾಡುತ್ತಿರುವ ಪ್ರಾಧಿಕಾರ ಪ್ರಕರಣ ನಡೆಸುತ್ತಿರುವ ದಿನನಿತ್ಯ ನಡವಳಿಗಳ ಪ್ರತಿಯನ್ನು ಕೇಳಿದಾಗ ಕೊಡಬೇಕು. ಕೊಡದೆ ಇದ್ದ ಸಂದರ್ಭದಲ್ಲಿ ಆ ಆದೇಶದ ತೀರ್ಮಾನದ ಮೇಲೆ ಪುನರ್ ವಿಮರ್ಶಾ ಅರ್ಜಿಯನ್ನು ದಾಖಲಿಸಲು ಅವಕಾಶ ಇದೆ. (ಆರ್ಡರ್ ಶೀಟ್) 1989(7) KLJ 241.

32. ಅರ್ಜಿದಾರನು ಒಪ್ಪಾರೆ ಹಣದ ಬೇಡಿಕೆಗೆ ಪ್ರಕರಣ ವಿಚಾರಣೆಯಲ್ಲಿದ್ದಾಗ ಒಪ್ಪಿಗೆ ಕೊಟ್ಟು, ಆ ನಂತರ ರಿಟ್ ಅರ್ಜಿಯಲ್ಲಿ ವಸೂಲಾತಿಯನ್ನು ಬೇರ್ಪಡಿಸಬೇಕು. ಅದನ್ನು ಅಧಿಭಾರ ಅರ್ಜಿ ಅಥವಾ ಮತ್ತಾವುದೇ ರೀತಿ ವಸೂಲಾತಿ ಮಾಡಬೇಕೆಂದು ಕೇಳತಕ್ಕದ್ದಲ್ಲ. 1979(8) KLJ 87

33. ಸಿವಿಲ್ ದಾವೆ ಹೂಡಬೇಕಾದ ಎಲ್ಲ ಅಧಿಕಾರಗಳನ್ನು ನಿಬಂಧಕರು ಅಥವಾ ಅವರಿಂದ ಅಧಿಕಾರ ಪಡೆದ ವ್ಯಕ್ತಿಗೆ, ಈ ಕಲಂ ಅನ್ವಯ ಅಧಿಕಾರ ಪ್ರಾಪ್ತವಾಗುತ್ತದೆ. ಸಂಘದ ವ್ಯವಹಾರದಲ್ಲಿ ಆಡಳಿತದಲ್ಲಿ ಹಾಲಿ ಸದಸ್ಯರು, ಮಾಜಿ ಸದಸ್ಯರು ಅಥವಾ ಪದಾಧಿಕಾರಿಗಳು, ಸಂಘದ ಆಸ್ತಿಯಲ್ಲಿ ಮೊಟಕುಗೊಳಿಸಿದಾಗ ವಸೂಲಾತಿ ಕ್ರಮ ಜರುಗಿಸಬಹುದು. ಈ ಕಲಂ ಅನ್ವಯ ಕ್ರಮ ಜರುಗಿಸಬೇಕಾದರೆ ಕರ್ತವ್ಯಚ್ಯುತಿ, ಹಣದುರುಪಯೋಗ, ಅಶಿಸ್ತು, ದುರುಪಯೋಗ ಮತ್ತಿತರೆ ಪ್ರಸಂಗದಲ್ಲಿ ವಸೂಲಾತಿ ಕ್ರಮ ಜರುಗಿಸಬಹುದು. AIR 1991 SC 2137.

34. ಹಣಕಾಸು ಪೂರೈಸುವ ಸಂಸ್ಥೆ ಬರಬೇಕಾದ ಹಣಕ್ಕೆ ಬಡ್ಡಿಸಹಿತ ವಸೂಲಿ ಮಾಡಿಕೊಳ್ಳಲು ದಾವಾ ದಾಖಲಿಸಬಹುದು. ಈ ದಾವಾ ಪ್ರಕರಣದಲ್ಲಿ ಸಾಲ ಪಡೆದ ಸಹಕಾರ ಸಂಘ ಅದರ ಪದಾಧಿಕಾರಿ ಹಾಗೂ ಕಾರ್ಯದರ್ಶಿಗಳ ಮೇಲೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ದಾವಾ ದಾಖಲಿಸಲು ಇದು ಸರಿಯಾದ ಕ್ರಮವೆಂದು ಹಾಗೂ ಉಚ್ಛ ನ್ಯಾಯಾಲಯ ಆ ಕ್ರಮವನ್ನು ಕಿತ್ತುಹಾಕಿದ್ದನ್ನು ಭಾರತೀಯ ಶ್ರೇಷ್ಟ ನ್ಯಾಯಾಲಯ ನಯಗಾರ್ ಕೋ–ಆಪರೇಟಿವ್ ಬ್ಯಾಂಕಿನ ಪ್ರಕರಣದಲ್ಲಿ ತೀರ್ಪು ಇತ್ತಿದೆ. AIR 1975 SC 1895/(1975)(2) SCC 445.

35. ಒಬ್ಬ ಅಧ್ಯಕ್ಷ ಮತ್ತು ಸಹಕಾರ ಸಂಘದ ಮಧ್ಯೆ ಒಪ್ಪಂದಕ್ಕೆ ಬಂದು, ಆ ವ್ಯವಹಾರದಲ್ಲಿ ಹಣ ಪಡೆದ ಅಧ್ಯಕ್ಷ ಲೆಕ್ಕಪತ್ರಗಳನ್ನು ಆ ಸಂಘಕ್ಕೆ ಕೊಡುವುದು ಅವನ ಕರ್ತವ್ಯ. ಅಧ್ಯಕ್ಷರು ಸಹಕಾರ ಸಂಘದ ಜೊತೆ ಮಾಡಿಕೊಂಡ ಒಪ್ಪಂದ ಕಾನೂನುಬಾಹಿರ ಎಂದಾದರೂ, ಸಹಕಾರ ಸಂಘ ಆ ಹಣವನ್ನು ವಸೂಲಿ ಮಾಡಿಕೊಳ್ಳಲು ಮತ್ತು ಆ ಸಂಘಕ್ಕೆ ಬರಬೇಕಾದ ಹಣವನ್ನು ವಸೂಲಿ ಮಾಡಿಕೊಳ್ಳುವ ಅಧಿಕಾರ ಇದೆ. AIR 1965 SC 621.

36. ದುರುದ್ದೇಶದಿಂದ ಸಂಘದ ಹಣವನ್ನು ಎತ್ತಿ ಹಾಕಿದಾಗ ಹಾಗೂ ಆ ವರದಿ ಲೆಕ್ಕ ತಪಾಸಣೆಗೆ ವಿಚಾರಣೆ, ತಪಾಸಣೆ ಹಾಗೂ ಸಮಾಪನೆ ವರದಿಯಾಗಿದ್ದರೆ ಸಾಕು. ಸಂಘವು ಪ್ರತ್ಯೇಕವಾಗಿ ವಿಚಾರಣೆ ನಡೆಸಿದೆ ಎಂಬ ಆಧಾರದ ಮೇಲೆ ಅದಕ್ಕೆ ಅಧಿಕಾರವಿಲ್ಲ ಎಂದು ತೀರ್ಮಾನಿಸತಕ್ಕದಲ್ಲ. AIR 1995 SC 621.

37. ಒಂದು ಸಹಕಾರಿ ಬ್ಯಾಂಕಿನ ಹಣದುರುಪಯೋಗಕ್ಕೆ ಸಂಬಂಧಪಟ್ಟಂತೆ ಒಂದು ಸಂಘದ ಪಾಲು ಬಂಡವಾಳ ಹೊಂದಿದ ಸದಸ್ಯ, ಆಡಳಿತ ಮಂಡಳಿ ಮೇಲೆ ವಸೂಲಾತಿ ಕ್ರಮಕ್ಕೆ ನಿಬಂಧಕರು, ಮಧ್ಯಸ್ಥರಾಗಿ ದಾವ ಪ್ರಕರಣ ಸ್ವೀಕರಿಸಿದಾಗ, ಅಂತಹ ಪ್ರಕರಣದಲ್ಲಿ ಅರ್ಜಿದಾರರು, ರಿಜಿಸ್ಟ್ರಾರ್ ರವರು ಈ ಪ್ರಕರಣವನ್ನು ಅಧೀಕೃತವಾಗಿ ಸಂಘದ ಪರವಾಗಿದ್ದರೆ ಎಂದು(ಅಫಿಷಿಯಲ್ ಬಯಾಸ್) ಮತ್ತು ಅವರ ಕಾರಣ ಕೇಳುವ ನೋಟೀಸು ಆಡಳಿತ ಮಂಡಳಿ ನಿರ್ದೇಶಕರನ್ನು ತೆಗೆದುಹಾಕುವ ಬಗ್ಗೆ ಇದ್ದು ಅಂತಹ ನಿಬಂಧಕರು ವಸೂಲಾತಿ ಕ್ರಮಗಳಲ್ಲಿ ವೈಯಕ್ತಿಕವಾಗಿ ನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡುವುದು ಸರಿಯಲ್ಲ. ಹಾಗೂ ನಿಬಂಧಕರು ಈ ಪ್ರಕರಣವನ್ನು ನ್ಯಾಯಾಲಯದ ಅಧಿಕಾರಿಯಾಗಿ ತೀರ್ಮಾನಿಸತಕ್ಕದಲ್ಲ ಎಂಬ ವಾದವನ್ನು ಸರಿಯಲ್ಲವೆಂದು ತೀರ್ಮಾನಿಸಿದೆ. AIR 1961 SC 1743.

38. ನಿಬಂಧಕರು ಕಲಂ 69ರಲ್ಲಿ ಜವಾಬ್ದಾರಿಯನ್ನು ನಿಗಧಿಪಡಿಸುವಾಗ ಆರೋಪ ಪಟ್ಟಿಯನ್ನು ಕಾರಣ ಕೇಳುವ ನೋಟೀಸ್ ಮುಖಾಂತರ ತಮ್ಮ ಹೇಳಿಕೆ ಸಲ್ಲಿಸಲು ಅವಕಾಶ ಕಲ್ಪಿಸಬೇಕು. ಆ ಹೇಳಿಕೆ ಆಧಾರದ ಮೇಲೆ ಸಂಘವು ಹೊರಿಸಿದ ಆರೋಪಗಳನ್ನು ಯಾವ ದಾಖಲೆಗಳ ಆಧಾರದ ಮೇಲೆ ಪ್ರಾಧಿಕಾರ ವಿವರಣೆ ಪಡೆದು ತೀರ್ಪು ಕೊಡಬಹುದು. 1989(7) KLJ 141.

39. ಕಲಂ 69ರಲ್ಲಿ ನಡೆಯುವ ನಡವಳಿಕೆಗಳು ಪ್ರತ್ಯೇಕ ಮತ್ತು ಸ್ವತಂತ್ರ, ಅವುಗಳನ್ನು ಕಲಂ 64ರಲ್ಲಿ ನಡೆದ ವಿಚಾರಣೆ ನಡವಳಿಕೆಗಳಿಗಿಂತ ಪ್ರತ್ಯೇಕ. 1991(2) KLJ 416

40. ಒಂದು ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು ಸಾಲ ಮಂಜೂರಿ ಮಾಡಿ ಬೈಲಾಗೆ ವಿರುದ್ಧವಾಗಿ ಆ ಹಣವನ್ನು ವಸೂಲಿ ಮಾಡಲು ಕಾನೂನಿನಲ್ಲಿ ಇರುವ ಬೇರೆ ಕಲಂಗಳಲ್ಲಿ ವಸೂಲಾತಿ ಕ್ರಮ ಜರುಗಿಸಬಹುದು. ಅಂದರೆ ಸಾಲಗಾರ ಮತ್ತು ಜಾಮೀನುದಾರರ

ಮೇಲೆ, ಆನಂತರ ಆಡಳಿತ ಮಂಡಳಿ ನಿರ್ದೇಶಕರ ಮೇಲೆ ಹಣ ದುರುಪಯೋಗ ಕ್ರಮ ನಡೆಸಬೇಕೆಂಬುದು ಸರಿಯಲ್ಲ. ILR 1979 KAR 739/KLJ 1973 KAR 185.

41. ಕಲಂ 69ರನ್ವಯ ಪ್ರಥಮ ಬಾರಿಗೆ ಡಿಕ್ರಿ ಪಡೆದಾಗ ಅದನ್ನು ಅವ್ಯವಹಾರಿಕ ಎಂದು ತೀರ್ಮನಿಸತಕ್ಕದಲ್ಲ. ಒಬ್ಬ ಮೃತ ಸದಸ್ಯನ ಮಗ ಸಿವಿಲ್ ದಾವೆಯನ್ನು ಹೂಡಿ ಕಲಂ 69ರಲ್ಲಿ ಪಡೆದ ವಸೂಲಾತಿ ಆದೇಶ ಅವ್ಯವಹಾರಿಕ ಎಂದು ತೀರ್ಮಾನಿಸಬೇಕೆಂಬ ಅರ್ಜಿ ಸಲ್ಲಿಸಲು ಅರ್ಹವಲ್ಲ. ಅದನ್ನು ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ, ಅವ್ಯವಹಾರಿಕ ವ್ಯವಹಾರ ಎಂದು ತೀರ್ಮಾನಿಸಲು ಆಗ್ರಹಿಸಬೇಕು. ಒಂದು ಸಹಕಾರಿ ಸಂಘದ ನೌಕರ ತನ್ನ ಅಶಿಸ್ತಿನಿಂದ ಕರ್ತವ್ಯ ಚ್ಯುತಿ ಮಾಡಿದ ಹಣ ದುರುಪಯೋಗಕ್ಕೆ ಕಲಂ 70ರನ್ವಯ ತೀರ್ಮಾನಿಸುವ ಅಂಶವಾಗಲಾರದು. ILR 1975(2) KAR 102/1975(2) KLJ SN 55.

42. ಒಂದು ಸಹಕಾರ ಸಂಘದ ಆಸ್ತಿಯಲ್ಲಿ ಕೊರತೆಯುಂಟಾದಾಗ ಅ ಕೊರತೆಯು ಆಡಿಟ್ ವರದಿ ವಿಚಾರಣಾ ವರದಿ, ತಪಾಸಣಾ ವರದಿ ಮತ್ತು ಸಮಾಪನಾ ವರದಿ ಆಧರಿಸಿದರೆ ಮಾತ್ರ ಸಿಂಧು. ಈ ವರದಿಗಳಲ್ಲಿ ಕೊರತೆ ಕಂಡು ಹಿಡಿಯದಿದ್ದರೆ ಆಡಳಿತ ಮಂಡಳಿ. ಗೊಬ್ಬರದ ಕೊರತೆ ಇದೆ ಎಂದು, ಅದಕ್ಕೆ ಲೆಕ್ಕ ಸಮರ್ಪಕವಾಗಿ ಇಟ್ಟಿಲ್ಲವೆಂದು ವಸೂಲಾತಿಗೆ ಕಲಂ 70ರನ್ವಯ ದಾವಾ ದಾಖಲಿಸುವ ಅಧಿಕಾರವನ್ನು ತೆಗೆದುಹಾಕಿದಂತಲ್ಲ. ILR 1975 KAR 1020/1975(2) KLJ 118/1975(2) KLJ SN 103/1976(1) KLJ SN 55.

43. ಕಲಂ 69ರನ್ವಯ ವಸೂಲಾತಿ ಕ್ರಮ ಇಡುವ ಪೂರ್ವದಲ್ಲಿ ಆಡಿಟ್, ವಿಚಾರಣೆ, ತಪಾಸಣೆ ಮತ್ತು ಸಮಾಪನೆ ಸಮಯದಲ್ಲಿ ಸಂಘದ ಆಡಳಿತ ವ್ಯವಹಾರದಲ್ಲಿ ಹಣವನ್ನು ದುರುಪಯೋಗ ಮಾಡಿದಾಗ, ದುರ್ವ್ಯವಹಾರ ಮಾಡಿದಾಗ ವಸೂಲಾತಿ ಕ್ರಮ ಜರುಗಿಸಬಹುದು. 1979(1) KLJ 185/ ILR 1979(1) KAR 739 DB.

44. ನೌಕರರು ಹಣದುರುಪಯೋಗ ಮಾಡಿಕೊಂಡಾಗ ಆ ಹಣದ ವಸೂಲಾತಿಗೆ ಕಲಂ 69ರಲ್ಲಿ ಕ್ರಮವಿಡಬೇಕು. ಮತ್ತು ಕಲಂ 70ರಲ್ಲಿ ಅಲ್ಲ. 1979(2) ಏಐಐ 103.

45. ಕಲಂ 69ರನ್ವಯ ಕ್ರಮ ಜರುಗಿಸುವಾಗ ಕೊರತೆಯು ಅಧಿಕೃತ ವ್ಯಾಪಾರಿ ಕೊರತೆ ಎಂದು ಕಂಡುಬಂದಾಗ ಅನ್ವಯವಾಗಲಾರದು. 1976(2)KLJ 62/AIR 1972 1976 KAR 1384.

46. ಕರ್ನಾಟಕ ಕಾಯಿದೆ 19/1976ರಲ್ಲಿ ಕಲಂ 69 ಮತ್ತು ಕಲಂ 70ಕ್ಕೆ ಆದ ತಿದ್ದುಪಡಿಗಳನ್ನು ಗಮನಿಸಿ ಯಾವ ವಿಷಯ ಕಲಂ 69ರಲ್ಲಿ ಕ್ರಮ ಜರುಗಿಸಬೇಕಾಗಿತ್ತು ಅಂತಹ ಕ್ರಮವನ್ನು ಅಂತಹ ಕ್ರಮವನ್ನು ಕಲಂ 70ರನ್ವಯ ನಡೆಸಬಹುದು. 1986(2) ILR KAR 1875/KLJ SN 108 1986(1)/ DLJ 241 DB.

47. ಕಲಂ 69ರಲ್ಲಿ ರೂಪಿಸಿರುವ ನೀತಿ ನಿಯಮಗಳನ್ನು ಜರುಗಿಸಬೇಕಾದ ಕ್ರಮವನ್ನು ಉಲ್ಲಂಘಿಸಿದಾಗ, ಅಂತಹ ಆದೇಶ ವ್ಯಾಪ್ತಿಗೆ ಮೀರಿದ್ದು ಮತ್ತು ಕಾನೂನು ಬದ್ದವಲ್ಲ. ಅಂತಹ ಸಂದರ್ಭದಲ್ಲಿ ಸಂವಿದಾನದ ಪರಿಚ್ಛೇದ 226 ಮತ್ತು 227ರನ್ವಯ ಮಧ್ಯಪ್ರವೇಶಿಸಬಹುದು.

48. ವ್ಯಕ್ತಿಗತ ಆರೋಪವನ್ನು ಮಾಡಬೇಕಿದ್ದ ಸಂದರ್ಭದಲ್ಲಿ ಮತ್ತು ಲೆಕ್ಕಾಧಿಕಾರಿಗಳು, ವಿಚಾರಣಾಧಿಕಾರಿಯು ಮಾಡಿದ ಆರೋಪಗಳನ್ನೇ ಆಧಾರವಾಗಿಟ್ಟುಕೊಂಡರೆ ಅದು ಸಿಂಧುವಲ್ಲ. 1989(2) ಕೆಎಲ್‌ಜೆ 281.

49. ಕಲಂ 63, 64, 65 ಮತ್ತು 72ರನ್ವಯ ವಿಚಾರಣೆ ಮಾಡುವಾಗ, ಯಾವ ವ್ಯಕ್ತಿಯ ಮೇಲೆ ಸಂಘದ ಆಸ್ತಿಯಲ್ಲಿ ಕೊರತೆ ಉಂಟು ಮಾಡುತ್ತಾರೋ, ಅಂತಹ ವ್ಯಕ್ತಿಗೆ ವಿಚಾರಣಾ ಸಮಯದಲ್ಲಿಯೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಲಿಖಿತ ಉತ್ತರ ಪಡೆದು, ದಾಖಲೆ ಪರಿಶೀಲಿಸಿ, ಆನಂತರ ಆರೋಪ ರುಜುವಾಗಿದೆ ಎಂದು ವಸೂಲಾತಿಗೆ ಇಟ್ಟಾಗ, ಅಂತಹ ಪ್ರಕರಣಗಳಲ್ಲಿ ಕಲಂ 69ರನ್ವಯ ಅಧಿಭಾರ ಅರ್ಜಿ ದಾಖಲಿಸಿದಾಗ, ಆರೋಪ ಪಟ್ಟಿ ಹೊರಿಸಿ ಲಿಖಿತ ಹೇಳಿಕೆಯನ್ನು ಪಡೆದರೂ ಸಾಕು. ಏಕೆಂದರೆ ಸ್ವಾಭಾವಿಕ ನ್ಯಾಯದ ತತ್ವದಡಿ ಜವಾಬ್ದಾರಿ ನಿಗಧಿಪಡಿಸುವ ಪೂರ್ವದಲ್ಲಿ ಒಮ್ಮೆ ಕಾರಣ ಕೇಳುವ ನೋಟೀಸ್ ಕೊಟ್ಟು, ಅವರು ಕೊಟ್ಟ ಉತ್ತರದ ಆಧಾರದ ಮೇಲೆ, ವಸೂಲಾತಿ ಮೇಲೆ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ ಎಂದು ತಿಳಿಯತಕ್ಕದ್ದು. ಅಂತಹ ಸಮಯದಲ್ಲಿ, ಕಲಂ 69ರನ್ವಯ ಆರೋಪ ಪಟ್ಟಿ ಜಾರಿ ಮಾಡಿದಾಗ, ಹಿಂದೆ ಅವಕಾಶ ಕೊಡಲಾಗಿದೆ ಎಂದು ಪ್ರಾಧಿಕಾರಕ್ಕೆ ಮನದಟ್ಟು ಆದಾಗ ಲಿಖಿತ ಹೇಳಿಕೆ ಆಧಾರದ ಮೇಲೆ ಪ್ರಕರಣ ತೀರ್ಮಾನ ಮಾಡಲು ಪ್ರಾಧಿಕಾರಕ್ಕೆ ಅಧಿಕಾರ ಇದೆ. ಕೆಎಲ್‌ಜೆ 1983(2) 313–ಎಂಎಲ್‌ಜೆ 1972(2) ಎಸ್‌ಎನ್ 29–1972(2) ಎಂಎಲ್‌ಜೆ 112–1978 ಕೆಎಲ್‌ಜೆ 421–1979(2) ಕೆಎಲ್‌ಜೆ 127.

(ಸೂಚನೆ : ಅಧಿಭಾರ ಅರ್ಜಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಲೇಖನವನ್ನು ಅಂತ್ಯದಲ್ಲಿ ಕೊಡಲಾಗಿದೆ.)

# ಅಧ್ಯಾಯ – 6.5

## ದಾವಾ ಪ್ರಕರಣಗಳು

**ಕಲಂ.39 : ತೀರ್ಮಾನಕ್ಕಾಗಿ ಕಳುಹಿಸಬಹುದಾದ ವಿವಾದಗಳು :**

(1) "ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ, –

(ಎ) ಸದಸ್ಯರ, ಹಿಂದಿನ ಸದಸ್ಯರ ಮತ್ತು ಸದಸ್ಯರ, ಹಿಂದಿನ ಸದಸ್ಯರ ಮತ್ತು ಮೃತ ಸದಸ್ಯರ ಮೂಲಕ ಕ್ಲೇಮು ಮಾಡುವ ವ್ಯಕಿಗಳ ನಡುವೆ; ಅಥವಾ

(ಬಿ) ಸದಸ್ಯನ, ಹಿಂದಿನ ಸದಸ್ಯನ ಅಥವಾ ಸದಸ್ಯನ, ಹಿಂದಿನ ಸದಸ್ಯನ ಅಥವಾ ಮೃತ ಸದಸ್ಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿ ಮತ್ತು ಸಹಕಾರಿ ಅಥವಾ ಸಂಯುಕ್ತ ಸಹಕಾರಿ, ಅದರ ಮಂಡಳಿ ಅಥವಾ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಯಾವೊಬ್ಬ ಪದಾಕಾರಿ, ಏಜೆಂಟ್ ಅಥವಾ ನೌಕರನ ನಡುವೆ; ಅಥವಾ

(ಸಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಅಥವಾ ಅದರ ಮಂಡಳಿ ಮತ್ತು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಯಾವುದೇ ಹಿಂದಿನ ಮಂಡಳಿ, ಯಾವೊಬ್ಬ ಪದಾಧಿಕಾರಿ, ಏಜೆಂಟ್ ಅಥವಾ ನೌಕರ ಅಥವಾ ಯಾವೊಬ್ಬ ಹಿಂದಿನ ಪದಾಧಿಕಾರಿ, ಹಿಂದಿನ ಏಜೆಂಟ್ ಅಥವಾ ಹಿಂದಿನ ನೌಕರ ಅಥವಾ ಯಾವೊಬ್ಬ ಮೃತ ಪದಾಧಿಕಾರಿಯ, ಮೃತ ಏಜೆಂಟಿನ ಅಥವಾ ಮೃತ ನೌಕರನ ನಾಮನಿರ್ದೇಶಿತ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಯ ನಡುವೆ; ಅಥವಾ

(ಡಿ) ಒಂದು ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮತ್ತು ಯಾವುದೇ ಇತರ ಸಹಕಾರಿ ಅಥವಾ ಸಾಲ ನೀಡಿಕೆ ಏಜೆನ್ಸಿಯ ನಡುವೆ,

– ಸಹಕಾರಿಯ ಆಡಳಿತ ಮಂಡಳಿಯ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ಯಾವುದೇ ವಿವಾದ ಉಂಟಾದರೆ,] ಅಂಥ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(2) (1)ನೇ ಉಪಪ್ರಕರಣಗಳಿಗಾಗಿ, ಈ ಮುಂದಿನ ವಿವಾದಗಳನ್ನು ಎಂದರೆ, –

(ಎ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು, ಒಬ್ಬ ಸದಸ್ಯ ಅಥವಾ ಮೃತ ಸದಸ್ಯನ ನಾಮ ನಿರ್ದೇಶಿತರಿಂದ, ವಾರಸುದಾರರಿಂದ ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳಿಂದ ತನಗೆ ಬಾಕಿ ಇರುವ ಯಾವುದೇ ಸಾಲ ಅಥವಾ ಬೇಡಿಕೆಗಾಗಿ, ಅಂಥ ಸಾಲ ಅಥವಾ ಬೇಡಿಕೆ ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅದು ಮಾಡುವ ಕ್ಲೇಮು;

(ಬಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಪ್ರಧಾನ ಸಾಲಗಾರನಿಂದ ತನಗೆ ಬಾಕಿಯಿರುವ ಯಾವುದೇ ಸಾಲ ಅಥವಾ ಬೇಡಿಕೆಯ ಸಂಬಂಧದಲ್ಲಿ, ಅಂಥ ಸಾಲ ಅಥವಾ ಸಂದಾಯ ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅಂಥ ಸಾಲವನ್ನು ಪ್ರಧಾನ ಸಾಲಗಾರನು ತೀರಿಸಲು ತಪ್ಪಿದ ಕಾರಣದಿಂದಾಗಿ ಅದನ್ನು ಜಾಮೀನು ದಾರನಿಂದ ವಸೂಲು ಮಾಡಿರುವ ಸಂದರ್ಭದಲ್ಲಿ, ಪ್ರಧಾನ ಸಾಲಗಾರನ ವಿರುದ್ಧ ಜಾಮೀನು ದಾರನಿಗಿರುವ ಕ್ಲೇಮು;

(ಸಿ) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ನಿರ್ದೇಶಕನ ಚುನಾವಣೆಗೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿವಾದ;

(ಡಿ) ಔದ್ಯಮಿಕ ವಿವಾದಗಳ ಅಧಿನಿಯಮ, 1947ರಲ್ಲಿ (1947ರ ಕೇಂದ್ರ ಅಧಿನಿಯಮ 14) ಏನೇ ಒಳಗೊಂಡಿದ್ದರೂ, ಉದ್ಯೋಗದ ನಿಬಂಧನೆಗಳು, ಕಾರ್ಯನಿರ್ವಹಣಾ ಪರಿಸ್ಥಿತಿ ಮತ್ತು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಕೈಗೊಂಡ ಶಿಸ್ತು ಕ್ರಮಗಳಿಗೆ ಸಂಬಂಧಪಟ್ಟ ವಿವಾದವೂ ಸೇರಿದಂತೆ ಒಂದು ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮತ್ತು ಅದರ ನೌಕರರು ಅಥವಾ ಹಿಂದಿನ ನೌಕರರು ಅಥವಾ ಮೃತ ನೌಕರನ ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳ ನಡುವೆ ಉಂಟಾಗುವ ಯಾವುದೇ ವಿವಾದ;

(ಇ) ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಸದಸ್ಯ, ಹಿಂದಿನ ಸದಸ್ಯ, ಮೃತ ಸದಸ್ಯ ಅಥವಾ ಮೃತ ಪದಾಧಿಕಾರಿಯಿಂದ, ಹಿಂದಿನ ಏಜೆಂಟ್ ಅಥವಾ ಮೃತ ಏಜೆಂಟ್ ಅಥವಾ ಯಾವೊಬ್ಬ ನೌಕರ, ಹಿಂದಿನ ನೌಕರ, ಅಥವಾ ಮೃತ ನೌಕರನಿಂದ ಅಥವಾ ಅದರ ಈಗಿನ ಅಥವಾ ಹಿಂದಿನ ಮಂಡಳಿಯಿಂದ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಸ್ವತ್ತುಗಳಿಗೆ ಉಂಟಾದ ನಷ್ಟಕ್ಕಾಗಿ, ಅಂಥ ನಷ್ಟವು ಸ್ವೀಕೃತವಾಗಿರಲಿ ಅಥವಾ ಇಲ್ಲದಿರಲಿ, ಅಂಥ ಸಹಕಾರಿ ಅಥವಾ ಸಂಯುಕ್ತ ಸಹಕಾರಿಯು ಮಾಡುವ ಕ್ಲೇಮು,

– ಇವುಗಳನ್ನು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದ ವಿವಾದಗಳೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸಿದ ವಿವಾದವು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದುದೇ ಅಥವಾ ಅಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉಂಟಾದರೆ, ಅದರ ಮೇಲಿನ ರಿಜಿಸ್ಟ್ರಾರನ ನಿರ್ಧಾರ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ."

ಒಂದು ನೋಂದಾಯಿತ ಸಂಸ್ಥೆಯನ್ನು ನಡೆಸಿಕೊಂಡು ಹೋಗುವಾಗ, ಆ ಸಂಸ್ಥೆಯಲ್ಲಿ ಕಾರ್ಯನಿರ್ವಹಣೆ ಮಾಡುವವರು ಸೇವೆಗಳನ್ನು ಪಡೆಯುವಾಗ ಅಥವಾ ಸೇವೆಗಳನ್ನು ಕೊಡುವಾಗ ವಿವಾದ ಉಂಟಾಗುವುದು ಸಹಜ. ಅಂತಹ ವಿವಾದಗಳನ್ನು ಪರಿಹರಿಸಿಕೊಳ್ಳುವುದು ಕಾಯಿದೆ ಕಲಂ 39ರನ್ವಯ ದಾವಾ ಪ್ರಕರಣ ದಾಖಲು ಮಾಡಬಹುದು.

ದಾವ ಪ್ರಕರಣವನ್ನು ಯಾರು ಯಾರ ಮೇಲೆ ಹೂಡಬಹುದು ಎಂಬುದರ ಬಗ್ಗೆ ಉಪಕಲಂ 39(1)(ಎ)(ಬಿ)(ಸಿ)(ಡಿ) ರಲ್ಲಿ ತಿಳಿಸಲಾಗಿದೆ. ಹಾಗೂ ಯಾವ ವಿಷಯಗಳ ಬಗ್ಗೆ ದಾವ ಪ್ರಕರಣವನ್ನು ದಾಖಲಿಸಬಹುದು ಎಂಬುದನ್ನು ಉಪಕಲಂ 39(2)(ಎ) ಯಿಂದ (ಇ) ರಲ್ಲಿ ರೂಪಿಸಲಾಗಿದೆ.

ಯಾವುದೇ ಪಕ್ಷಗಾರ ದಾವಾ ಪ್ರಕರಣ ದಾಖಲು ಮಾಡಿದಾಗ ಕಛೇರಿಯಲ್ಲಿ ಪರಿಶೀಲಿಸಬೇಕಾದ ಅಂಶಗಳು ಈ ಕೆಳಕಂಡಂತಿರತಕ್ಕದ್ದು. (ಚೆಕ್‌ಲಿಸ್ಟ್)

1. ಅರ್ಜಿದಾರರ ಹೆಸರು ಮತ್ತು ಎದುರು ಅರ್ಜಿದಾರರ ಹೆಸರು, ವಿಳಾಸ ಸಮರ್ಪಕವಾಗಿದೆಯೇ? (ಹೌದು/ಇಲ್ಲ)
2. ಅರ್ಜಿದಾರರು ಎಷ್ಟು ಎದುರು ಅರ್ಜಿದಾರರು ಇದ್ದಾರೋ ಅವರಿಗೆ ಸಾಕಾಗುವಷ್ಟು ನಕಲುಗಳನ್ನು ಲಗತ್ತಿಸಿದ್ದಾರೆಯೇ? (ಹೌದು/ಇಲ್ಲ)
3. ಅರ್ಜಿಗೆ ಸಂಬಂಧಪಟ್ಟ ಸ್ಟಾಂಪ್ ಲಗತ್ತಿಸಲಾಗಿದೆಯೇ? (ಹೌದು/ಇಲ್ಲ)
4. ಆಂತರಿಕ ಅರ್ಜಿಗಳನ್ನು ಸಲ್ಲಿಸಲಾಗಿದೆಯೇ? (ಹೌದು/ಇಲ್ಲ)
5. ಪ್ರತಿಯೊಂದು ಪ್ರಕರಣದಲ್ಲಿಯೂ ನ್ಯಾಯಾಲಯದ ಸ್ಟಾಂಪ್ ಹಚ್ಚಲಾಗಿದೆಯೇ? (ಹೌದು/ಇಲ್ಲ)
6. ಯಾವ ಕಾರಣಕ್ಕಾಗಿ ದಾವೆಯನ್ನು ದಾಖಲಿಸಲಾಗಿದೆ ಎಂಬುದನ್ನು ತಿಳಿಸಲಾಗಿದೆಯೇ? (ಹೌದು/ಇಲ್ಲ)
7. ವಿವಾದವು ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆಯೇ? (ಹೌದು/ಇಲ್ಲ)
8. ಈ ಪ್ರಕರಣವನ್ನು ಈ ನ್ಯಾಯಾಲಯದಲ್ಲಿ ಸ್ವೀಕಾರಾರ್ಹವೇ? (ಹೌದು/ಇಲ್ಲ)
9. ವಿವಾದಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ದಾಖಲೆಗಳ ಪ್ರಮಾಣೀಕೃತ ಪ್ರತಿಗಳನ್ನು ಲಗತ್ತಿಸಲಾಗಿದೆಯೇ? (ಹೌದು/ಇಲ್ಲ)
10. ವಿವಾದವು ಚುನಾವಣೆಗೆ ಸಂಬಂಧಪಟ್ಟಂತೆ, ಹಣ ದುರುಪಯೋಗಕ್ಕೆ ಸಂಬಂಧಪಟ್ಟದ್ದೇ, ಸದಸ್ಯರ ಹಕ್ಕಿನ ಬಗ್ಗೆ, ನಿರ್ದೇಶಕ ಮಂಡಳಿಯ ನಿರ್ದೇಶಕರ ಬಗ್ಗೆ, ವಸೂಲಾತಿ ಬಗ್ಗೆ, ಸೇವೆಗಳ ಬಗ್ಗೆ ಎಂದು ಸ್ಪಷ್ಟಪಡಿಸಲಾಗಿದೆಯೇ? (ಹೌದು/ಇಲ್ಲ)
11. ಯಾರ ಮೇಲೆ ದಾವಾ ಹೂಡಲಾಗಿದೆಯೋ ಅವರು ಸಹಕಾರಿಯ ಸದಸ್ಯರೇ ಅಲ್ಲವೇ (ಹೌದು/ಇಲ್ಲ)
12. ವಿವಾದವನ್ನು ನಿಗಧಿಪಡಿಸಿದ ಅವಧಿಯೊಳಗೆ ಸಲ್ಲಿಸಲಾಗಿದೆಯೇ ಇಲ್ಲವಾದರೆ ವಿಳಂಬ ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆಯೇ? (ಹೌದು/ಇಲ್ಲ)
13. ಸದಸ್ಯರಲ್ಲದವರನ್ನು ಕಕ್ಷಿದಾರರನ್ನಾಗಿ ಮಾಡಲಾಗಿದೆಯೇ? (ಹೌದು/ಇಲ್ಲ)
14. ಪ್ರಕರಣವನ್ನು ನಡೆಸಿಕೊಂಡು ಹೋಗಲು ವಕೀಲರ ಹಾಜರಾತಿಗೆ ಅರ್ಜಿ ಸಲ್ಲಿಸಲಾಗಿದೆಯೇ? (ಹೌದು/ಇಲ್ಲ)
15. ಅರ್ಜಿದಾರ ಸಹಕಾರಿ ಕಾರ್ಯವ್ಯಾಪ್ತಿ ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆಯೇ? (ಹೌದು/ಇಲ್ಲ)
16. ಈ ವಿವಾದಕ್ಕೆ ಸಂಬಂಧಪಟ್ಟಂತೆ ದಾವ ಫೀ ಮತ್ತು ನೋಟೀಸ್ ಫೀ ತುಂಬಲಾಗಿದೆಯೇ? (ಹೌದು/ಇಲ್ಲ)

ಟಿಪ್ಪಣಿ: ನಿಬಂಧಕರು ಆಗಿಂದಾಗ್ಗೆ ಅಧಿಭಾರ ಅರ್ಜಿ ಮತ್ತು ದಾವಾ ಪ್ರಕರಣಗಳಿಗೆ ನಿಗಧಿಪಡಿಸುವ ದಾವಾ ಮತ್ತು ಅಧಿಭಾರ ಶುಲ್ಕದ ಬಗ್ಗೆ ಸುತ್ತೋಲೆ ಹೊರಡಿಸುತ್ತಾರೆ. ಅದರಂತೆ ದಾವ ಶುಲ್ಕ ಪಾವತಿಸಿದ್ದನ್ನು ದೃಡೀಕರಿಸತಕ್ಕದ್ದು.

ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ನಂತರ ನಿಬಂಧಕರು ಆಂತರಿಕ ಅರ್ಜಿ ವಿಲೇವಾರಿ ಮಾಡಿ ಪ್ರಕರಣವನ್ನು ದಾಖಲೆಗೆ ತೆಗೆದುಕೊಳ್ಳಬಹುದು.

ಸಹಕಾರಿ ನ್ಯಾಯಾಲಯಗಳು ವಿವಾದಗಳನ್ನು ಇತ್ಯರ್ಥಪಡಿಸುವಾಗ ಅನುಸರಿಸಬೇಕಾದ ನೀತಿಯನ್ನು ಸಹಕಾರಿ ನಿಯಮ 2004ರ, ನಿಯಮ 11(3)(ಎ) ಅನ್ವಯ ಸಂಕ್ಷಿಪ್ತ ವಿಚಾರಣೆಯ ಮೂಲಕ ತೀರ್ಪು ಕೊಡುವುದರಿಂದ ಸಹಕಾರಿ ಮತ್ತು ಅದರ ಸದಸ್ಯರಿಗೆ ತುರ್ತು ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸಲಾಗುತ್ತಿದೆ.

ಕಲಂ 39ರನ್ವಯ ದಾಖಲಿಸಿದ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿದ ಕಕ್ಷಿದಾರರಿಗೆ ನಿಯಮ 11(3)(ಎ) ರನ್ವಯ ನೋಟೀಸ್ ಜಾರಿ ಮಾಡತಕ್ಕದ್ದು. ಈ ನೋಟೀಸ್ ಜಾರಿ ಮಾಡುವ ವಿಧಾನ ಈ ಕೆಳಕಂಡಂತಿದೆ.

1. ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಕೊಡುವ ಮೂಲಕ ಅಥವಾ ಅವನಿಗೆ ಮುಟ್ಟುವಂತೆ ಕೊಡುವ ಮೂಲಕ,
2. ಅವನು ಸಿಗದಿದ್ದ ಪಕ್ಷದಲ್ಲಿ ಅವನು ವಾಸಿಸುತ್ತಿದ್ದ ಕೊನೆಯ ಸ್ಥಳದಲ್ಲಿ ಅಥವಾ ವ್ಯವಹಾರ ಮಾಡುತ್ತಿದ್ದ ಸ್ಥಳದಲ್ಲಿ ಅವನ ಕುಟುಂಬದ ಯಾರಾದರೂ ವಯಸ್ಕ ಸದಸ್ಯರಿಗೆ ಕೊಡುವ ಮೂಲಕ ಅಥವಾ
3. ಅವನು ಕೊಟ್ಟಿರುವ ವಿಳಾಸಕ್ಕೆ ಅಂಚೆ ಮೂಲಕ ಮರುಸ್ವೀಕಾರದೊಂದಿಗೆ ನೋಂದಾಯಿತ ಅಂಚೆ ಮೂಲಕ ರವಾನಿಸುವುದು.
4. ಮೇಲೆ ಹೇಳಿದ ಯಾವ ಕ್ರಮವನ್ನು ಕೈಗೊಳ್ಳಲು ಸಾಧ್ಯವಿಲ್ಲದಿದ್ದರೆ ಅವನು ವಾಸಿಸುವ ಅಥವಾ ವ್ಯವಹರಿಸುತ್ತಿದ್ದ ಸ್ಥಳದಲ್ಲಿ ಯಾವುದಾದರೂ ಎದ್ದುಕಾಣುವ ಸ್ಥಳದಲ್ಲಿ ಅದನ್ನು ಅಂಟಿಸುವ ಮೂಲಕ ಅಂಟಿಸುವ ಸಮಯದಲ್ಲಿ ಇಬ್ಬರು ಪ್ರತ್ಯೇಕ ಸಾಕ್ಷಿಗಳು, ಅವರ ವಿಳಾಸ, ಅಂಟಿಸಿದ ದಿನಾಂಕ, ವೇಳೆ ನಮೂದಿಸುವುದು.

ಪ್ರಕರಣವನ್ನು ದಾಖಲಿಸಿಕೊಂಡ ನಂತರ ನಿಯಮ 11(3)(ಎ) ಯನ್ವಯ ಅನುಸರಿಸಬೇಕಾದ ವಿಚಾರಣಾ ನೀತಿ ಈ ಕೆಳಕಂಡಂತೆ ಇರತಕ್ಕದ್ದು.

1. ನಿಬಂಧಕರು ಪಂಚಾಯತ್ ದಾವಾಯನ್ನು ಅಥವಾ ವಿವಾದವನ್ನು ಇತ್ಯರ್ಥಪಡಿಸುವ ವ್ಯಕ್ತಿ ಸಂಬಂಧಪಟ್ಟ ಕಕ್ಷಿದಾರನಿಗೆ ಈ ನಿಯಮದಲ್ಲಿ ಗೊತ್ತುಪಡಿಸಿದ ರೀತಿ ಸಮನ್ಸ್‌ನ್ನು ಜಾರಿ ಮಾಡಿದ ನಂತರ ಪಕ್ಷಗಾರರ ಹಾಗೂ ಹಾಜರಾದ ಸಾಕ್ಷಿದಾರರ ಸಾಕ್ಷ್ಯಗಳ ಸಂಕ್ಷಿಪ್ತ ಟಿಪ್ಪಣಿಯನ್ನು ದಾಖಲಿಸಿಕೊಳ್ಳತಕ್ಕದ್ದು. ಮತ್ತು ಹೀಗೆ ಸಾಕ್ಷ್ಯಗಳನ್ನು ದಾಖಲು ಮಾಡಿಕೊಂಡ ನಂತರ ಹಾಗೂ ಪಕ್ಷಗಾರರು ಹಾಜರುಪಡಿಸಿದ ಆಧಾರ, ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯ, ಸಮತೆ ಹಾಗೂ ವಿವೇಚನೆಗನುಸಾರವಾಗಿ ನಿರ್ಣಯ ಅಥವಾ ಅವಾರ್ಡನ್ನು ಕೊಡತಕ್ಕದ್ದು.

ಈ ಮೇಲ್ಕಂಡ ನೀತಿಯು ಸಂಕ್ಷಿಪ್ತವಾಗಿದ್ದು, ಸಿವಿಲ್ ನ್ಯಾಯಾಲಯದ ನೀತಿ ನಿಯಮಗಳನ್ನು ಪಾಲಿಸುವ ಅವಶ್ಯಕತೆ ಇಲ್ಲ.

ದಾವ ಪ್ರಕರಣ ದಾಖಲು ಮಾಡಿದಾಗ ನಿಬಂಧಕರು ಪರಿಶೀಲಿಸಬೇಕಾದ ಮುಖ್ಯ ಅಂಶಗಳು ಈ ಕೆಳಕಂಡಂತಿರತಕ್ಕದ್ದು.

1. ಈ ದಾವ ಪ್ರಕರಣ ಈ ನ್ಯಾಯಾಲಯದಲ್ಲಿ ಹೂಡಲು ಅರ್ಹವೇ?
2. ಈ ಪ್ರಕರಣವು ಸ್ವೀಕಾರಾರ್ಹವೇ?
3. ದಾವ ಪ್ರಕರಣದಲ್ಲಿ ದಾಖಲ್ಮಾಡಿದ ಕಕ್ಷಿದಾರರು ಸಹಕಾರಿಯ ಸದಸ್ಯರಿದ್ದಾರೆಯೇ?
4. ಈ ದಾವ ಅರ್ಜಿಯ ಜೊತೆಗೆ ಆಂತರಿಕ ಅರ್ಜಿಗಳನ್ನೇನಾದರೂ ಸಲ್ಲಿಸಲಾಗಿದೆಯೇ? ಅಂದರೆ 1. ತಡೆಯಾಜ್ಞೆ ಕೋರಿದ ಅರ್ಜಿ 2. ವಿಳಂಬ ವಿನಾಯಿತಿ ಅರ್ಜಿ 3. ಕಲಂ 44ರಂತೆ ಆಸ್ತಿ ಜಪ್ತಿಯ ಅರ್ಜಿ 4. ಇತರೆ ಯಾವುದೇ ಅರ್ಜಿ

ಈ ಮೇಲ್ಕಂಡ ಅರ್ಜಿಗಳನ್ನು ಪ್ರಕರಣವನ್ನು ವಿಚಾರಣೆಗೆ ಒಪ್ಪಿಕೊಳ್ಳುವ ಪೂರ್ವದಲ್ಲಿಯೇ ತೀರ್ಮಾನಿಸತಕ್ಕದ್ದು. ತೀರ್ಮಾನಿಸಿದ ನಂತರವೇ ಪ್ರಕರಣವನ್ನು ಸ್ವಯಂ ನಿಬಂಧಕರೇ ಕೇಳಬೇಕೆ ಅಥವಾ ಮತ್ತೊಬ್ಬ ಇಲಾಖಾಧಿಕಾರಿಗಳಿಗೆ ವಹಿಸಬೇಕೆ ಅಥವಾ ಮಧ್ಯಸ್ಥಗಾರರಿಗೆ ವಹಿಸಬೇಕೇ ಎಂಬುದನ್ನು ತೀರ್ಮಾನಿಸಬೇಕು.

ಯಾವುದೇ ಕಾರಣಕ್ಕೂ ಆಂತರಿಕ ಅರ್ಜಿಗಳನ್ನು ವಿಲೇವಾರಿ ಮಾಡಲಾರದೇ ಪ್ರಕರಣವನ್ನು ವರ್ಗಾಯಿಸತಕ್ಕದ್ದಲ್ಲ. ಕೈತಪ್ಪಿನಿಂದ ಅಂತಹ ವರ್ಗಾವಣೆ ನಡೆದಿದ್ದರೆ, ಮಧ್ಯಸ್ಥದಾರರು ಅಥವಾ ಇಲಾಖಾಧಿಕಾರಿಗಳು, ಆ ಆಂತರಿಕ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿಲ್ಲ. ಅಂತಹ ತೀರ್ಮಾಣ ತೆಗೆದುಕೊಳ್ಳುವ ಪ್ರಸಂಗ ಬಂದಾಗ ಪ್ರಕರಣವನ್ನು ಮತ್ತೆ ನಿಬಂಧಕರಿಗೆ ವರ್ಗಾಯಿಸಿ, ಈ ಆಂತರಿಕ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ವಿನಂತಿಸಬೇಕು.

ಯಾವುದೇ ಆಂತರಿಕ ಅರ್ಜಿ ಇಲ್ಲದೇ ಇದ್ದ ಪ್ರಸಂಗದಲ್ಲಿ, ನಿಬಂಧಕರು ಪ್ರಕರಣವನ್ನು ದಾಖಲಿಸಿಕೊಂಡು ಇಲಾಖಾಧಿಕಾರಿಗೆ ಅಥವಾ ಮಧ್ಯಸದಾರರಿಗೆ ವರ್ಗಾಯಿಸಿದ ನಂತರ, ವಿಚಾರಣಾ ಸಮಯದಲ್ಲಿ ಕಕ್ಷಿದಾರರು ಆಂತರಿಕ ಅರ್ಜಿಗಳನ್ನು ಹಾಕಿ, ಈ ದಾವಾ ಪ್ರಕರಣ ಈ ನ್ಯಾಯಾಲಯದಲ್ಲಿ ಹೂಡಲರ್ಹವಲ್ಲವೆಂದು ಅಥವಾ ತಡೆಯಾಜ್ಞೆನೀಡಬೇಕೆಂದು ಅಥವಾ ಸದಸ್ಯನಲ್ಲದವರ ಮೇಲೆ ದಾವಾ ಹಾಕಲಾಗಿದೆಯೆಂದು ಅರ್ಜಿಗಳನ್ನು ಹಾಕಿಕೊಂಡಾಗ, ಅಂತಹ ಆಂತರಿಕ ಅರ್ಜಿಗಳನ್ನು ಮತ್ತೆ ನಿಬಂಧಕರಿಗೆ ರವಾನಿಸತಕ್ಕದ್ದು.

**ತೀರ್ಪುಗಳು:**

1. ಸಹಕಾರಿ ಕಾಯಿದೆಯನ್ವಯ ವಿವಾದಗಳನ್ನು ಇತ್ಯರ್ಥಪಡಿಸಲು ಸಮರ್ಥ ಅವಕಾಶ ಇರುವುದರಿಂದ ರಿಟ್ ಅರ್ಜಿಯನ್ನು ದಾಖಲಿಸುವ ಬಗ್ಗೆ ವಿಮರ್ಶಿಸುತ್ತಾ ಕಾಯಿದೆಯಲ್ಲಿಯೇ ವಿವಾದಗಳನ್ನು ಸಮರ್ಥವಾಗಿ ನಿರ್ವಹಿಸಲು ಅವಕಾಶ ಇರುವುದರಿಂದ ರಿಟ್ ಪ್ರಕರಣ ದಾಖಲಿಸುವುದು ಸೂಕ್ತವಲ್ಲ. ಸಾಮಾನ್ಯವಾಗಿ ಉಚ್ಚ ನ್ಯಾಯಾಲಯ ಸಂವಿಧಾನದ ಪರಿಚ್ಛೇದ 226ರಲ್ಲಿ ರಿಟ್ ಅರ್ಜಿಯನ್ನು ಇಂತಹ ಪ್ರಕರಣಗಳಲ್ಲಿ ದಾಖಲಿಸಿಕೊಳ್ಳುವುದಿಲ್ಲ. ಇದಕ್ಕೆ ಪೂರಕವಾಗಿ ಸಾಕ್ಷಿಗಳನ್ನು ವಿಚಾರಣೆ ಮಾಡುವಾಗ ಉದ್ಭವಿಸುವ ಪ್ರಶ್ನೆಗಳನ್ನು ನಿರ್ಧರಿಸುವುದು ಉಚ್ಚ ನ್ಯಾಯಾಲಯವಲ್ಲ. ಉಚ್ಚ ನ್ಯಾಯಾಲಯವು ಮೇಲ್ಮನವಿ ಪ್ರಾಧಿಕಾರವೆಂದು ಮತ್ತು ನ್ಯಾಯಾಧೀಕರಣದ ತಪ್ಪುಗಳನ್ನು ತಿದ್ದುವುದು ಉದ್ದೇಶವಲ್ಲ. ಎಲ್ಲಿ ವಿವಾದಗಳನ್ನು ಇತ್ಯರ್ಥಪಡಿಸಲು ಅಧಿಕಾರ ಕೊಡಲಾಗಿದೆಯೋ ಅಂತಹ ಪ್ರಸಂಗಗಳಲ್ಲಿ ಉಚ್ಚನ್ಯಾಯಾಲಯ ರಿಟ್ ಅರ್ಜಿಯನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ದಾಖಲಿಸಿಕೊಳ್ಳುವುದಿಲ್ಲ. 2010(2) ಕೆಸಿಸಿಆರ್ 995(ಡಿಬಿ)
2. ರಿಟ್ ಅರ್ಜಿ ದಾಖಲಿಸಿ, ಅದರೊಟ್ಟಿಗೆ ಆಂತರಿಕ ಅರ್ಜಿಯ ಆಧಾರದ ಮೇಲೆ ನಾಮಪತ್ರ ಸಲ್ಲಿಸಲು ಒಪ್ಪಿಗೆ ಪಡೆದು ಆನಂತರ ಚುನಾವಣೆ ಆಗಿದ್ದು ಹಾಗೂ ಆ ಚುನಾವಣೆಯಲ್ಲಿ ಅರ್ಜಿದಾರರು ಸೋತ ನಂತರ ಆ ರಿಟ್ ಅರ್ಜಿಯನ್ನು ಮುಂದುವರೆಸುತ್ತಾ 4 ಮತ್ತು 5ನೇ ಎದುರು ಅರ್ಜಿದಾರರು ಅರ್ಹ ಅಭ್ಯರ್ಥಿಗಳು ಎಂದು ಪರಿಗಣಿಸಲಾಗತಕ್ಕದ್ದಲ್ಲ ಎಂದು ಪ್ರಶ್ನಿಸಿದಾಗ, ಈ ವಿಚಾರವನ್ನು ದಾವಾ ಪ್ರಕರಣ ದಾಖಲಿಸಬೇಕೇ ಹೊರತು ರಿಟ್ ಅರ್ಜಿಯಲ್ಲಿ ಪರಿಹಾರ ಕೇಳತಕ್ಕದ್ದಲ್ಲ. 2010(1) ಕೆಸಿಸಿಆರ್ 78/2009(5) ಕೆಎಲ್‌ಜೆ 595.
3. ರಿಟ್ ಅರ್ಜಿಯನ್ನು ಸಹಕಾರಿ ಕಾಯಿದೆಯಲ್ಲಿಯೇ ದಾವಾ ತೀರ್ಮಾನ ಮಾಡುವ ಸಮರ್ಥ ಅವಕಾಶ ಇರುವುದರಿಂದ ವಜಾ ಮಾಡಲಾಗಿತ್ತು. ಆ ಪ್ರಕರಣದಲ್ಲಿ ಸಂಬಂಧಪಟ್ಟ ಸಂಸ್ಥೆ ನೌಕರನ ಮೇಲೆ ಹೊರಿಸಿದ್ದ ಆರೋಪಗಳು ರುಜುವಾತಾಗಿಲ್ಲವೆಂದು ಮತ್ತು ಅವನಿಗೆ ಎಲ್ಲ ನಿವೃತ್ತಿ ಸೌಲಭ್ಯವನ್ನು ಕೊಡಲಾಗುವುದಿಲ್ಲವೆಂದು ತಿಳಿಸಿದ ನಂತರವೂ ಮತ್ತೊಮ್ಮೆ ವಿಭಾಗೀಯ ಪೀಠ ಪುನರ್ ವಿಮರ್ಶಿಸುವ ಅವಶ್ಯಕತೆ ಇಲ್ಲ ಎಂದು ಪ್ರಕರಣವನ್ನು ವಜಾ ಮಾಡಲಾಯಿತು. 2009(5) ಕೆಎಲ್‌ಜೆ 441 (ಡಿಬಿ)
4. ಸಾಲಗಾರನ ಆಸ್ತಿಯನ್ನು ಹರಾಜು ಹಾಕಿದಾಗ ನಿಯಮ 38(5)(ಎ) ಅಡಿ ಒಂದು ಅರ್ಜಿಯನ್ನು ಸಾಲಗಾರನು ಸಲ್ಲಿಸಿದಾಗ, ಆ ಅರ್ಜಿಯನ್ನು ವಿಚಾರಣೆ ಮಾಡಿ ಆದೇಶ ಹೊರಡಿಸಬೇಕು. ವಿಚಾರಣೆ ಮಾಡುವ ಸಂದರ್ಭದಲ್ಲಿ ಆ ಆಸ್ತಿಯನ್ನು ಖರೀದಿ ಮಾಡಿದವನ ಹಿತಾಸಕ್ತಿಗೆ ಪೂರಕವಾಗಿ ಮತ್ತು ಸಾಲಗಾರನ ಹಿತಕ್ಕೆ ವಿರುದ್ಧವಾಗಿ ಉಪಯೋಗಿಸಿಕೊಳ್ಳತಕ್ಕದ್ದಲ್ಲ. ಅರ್ಜಿಯಲ್ಲಿ ಮಾರಾಟವನ್ನು ಕಿತ್ತುಹಾಕಬೇಕೆಂದು ಮನವಿ ಸಲ್ಲಿಸಿದಾಗ ಸಾಲಗಾರನ ಹೇಳಿಕೆಯನ್ನು ಪಡೆದು ತೀರ್ಮಾನಿಸಬೇಕಾಗಿತ್ತು. ದಾಖಲೆಗಳ ನ್ಯೂನತೆಗಳ ಆಧಾರದ ಮೇಲೆ ಮಾರಾಟವನ್ನು ರದ್ದುಗೊಳಿಸಿ ಆದೇಶಿಸಲಾಗಿದೆ. 2009(2) ಕೆಸಿಸಿಆರ್ ಎಸ್‌ಎನ್ 61/2009(4) ಕೆಎಲ್‌ಜೆ 419/ ಎಐಆರ್ 2009 (ಎನ್‌ಒಸಿ) 1221(ಕೆಎಆರ್)
5. ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯಡಿಯಲ್ಲಿ "ಬ್ಯಾಂಕ್" ಎಂಬ ಪದಕ್ಕೆ ಅರ್ಥ ವಿವರಣೆ ಕೊಡುವಾಗ ಸಹಕಾರಿ ಬ್ಯಾಂಕನ್ನು ಅದರಲ್ಲಿ ಸೇರಿಸಿಲ್ಲ. ಆದ್ದರಿಂದ ಸೆಕ್ಯೂರಟೈಸೇಷನ್ ಕಾಯಿದೆ ಸಹಕಾರ ಸಂಘಗಳು ಸಾಲ ವಸೂಲು ಮಾಡಲು ಉಪಯೋಗಿಸತಕ್ಕದ್ದಲ್ಲ. ಮತ್ತು ಇಂತಹ ಪ್ರಕರಣದಲ್ಲಿ ಕಲಂ 70ರಲ್ಲಿ ದಾವಾ ದಾಖಲಿಸಬೇಕು 2008(1) ಕೆಸಿಸಿಆರ್ 67/ಐಎಲ್‌ಆರ್ 2007(4) ಕೆಎಆರ್ 4740/2008(3) ಕೆಎಲ್‌ಜೆ 343.
6. ಒಂದು ದಾವಾ ಪ್ರಕರಣವನ್ನು ಒಬ್ಬ ಸಂಘದ ಏಜೆಂಟ್ ಮತ್ತು ಸಹಕಾರ ಸಂಘದ ಆಡಳಿತ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಸಲ್ಲಿಸಿದರೆ ಅಂತಹ ಇತ್ಯರ್ಥ ಮಾಡುವ ಅಧಿಕಾರ ಸಿವಿಲ್ ನ್ಯಾಯಾಲಯಕ್ಕೆ ಇಲ್ಲ. ಇದು ನಿಬಂಧಕರು ನಿರ್ಧರಿಸುವ ದಾವಾ ಪ್ರಕರಣ 2008(2) ಕೆಸಿಸಿಆರ್ 1185/ಐಎಲ್‌ಆರ್ 2008(3) ಕೆಎಆರ್ 3243/2008(6)ಕೆಎಲ್‌ಜೆ 530.
7. ಮಧ್ಯಸ್ಥದಾರರು ಒಂದು ಪ್ರಕರಣವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಅವಕಾಶವನ್ನು ಕೊಡಲಾರದೇ ಇದ್ದಾಗ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ 2007(4) ಕೆಸಿಸಿಆರ್ ಎಸ್‌ಎನ್ 343.
8. ಸಿವಿಲ್ ನ್ಯಾಯಾಲಯದಲ್ಲಿ ನಷ್ಟಕ್ಕಾಗಿ ಹೂಡಿದ ಒಂದು ಪ್ರಕರಣ, ಎದುರು ಅರ್ಜಿದಾರರ ವೈಯಕ್ತಿಕ ಮಟ್ಟದಲ್ಲಿ ಕೇಳಿದ ಪರಿಹಾರವಾಗಿದ್ದು,

ಅದನ್ನು ಸಹಕಾರ ಸಂಘದ ವ್ಯವಹಾರದ ಜೊತೆಗೆ ಕೂಡಿಸತಕ್ಕದ್ದಲ್ಲ. ಕಲಂ 70ರನ್ವಯ ಪ್ರಕರಣ ದಾಖಲಿಸಲಾಗದಂತೆ ಅವಕಾಶ ಇರುವುದಿಲ್ಲ. ಅಂದರೆ ಇಂತಹ ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿಯೇ ತೀರ್ಮಾನವಾಗಬೇಕು. 2007(4) ಕೆಸಿಸಿಆರ್ 2756/ ಐಎಲ್ಆರ್ 2007(4) ಕೆಎಆರ್ 4720

9. ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಒಬ್ಬ ಅಭ್ಯರ್ಥಿಯನ್ನು ಸ್ಪರ್ಧಿಸಲು ಅನರ್ಹ ಎಂದು ತೀರ್ಮಾನಿಸಿದ ನಂತರ ಉಪನಿಬಂಧಕರು ಆ ವ್ಯಕ್ತಿ ಅಭ್ಯರ್ಥಿ ಆಗಿದ್ದಾನೆಂದು ಕೊಟ್ಟ ತೀರ್ಪು ತೆಗೆದುಹಾಕಿದಂತಾಗುತ್ತದೆ. ಕರ್ನಾಟಕ ಮೇಲ್ಮನವಿ ಪ್ರಾಧಿಕರಣದ ಆದೇಶವು ಸಮರ್ಪಕವಾಗಿದ್ದು, ಹೊಸದಾಗಿ ಚುನಾವಣೆ ನಡೆಯಬೇಕೆಂದು ಆದೇಶಿಸಲಾಗಿದೆ. 2006(4) ಕೆಸಿಸಿಆರ್ 2377(ಡಿಬಿ)

10. ಕಾರ್ಮಿಕ ನ್ಯಾಯಾಲಯವು ಒಂದು ಕಾರ್ಖಾನೆಯಲ್ಲಿ ಲೇ ಆಫ್ ಮಾಡಿದಾಗ, ಪ್ರಕರಣ ವಿಚಾರಣೆ ಮಾಡುವ ಅಧಿಕಾರ ಹೊಂದಿದ್ದು, ಕಲಂ 70ರನ್ವಯ ವಿಚಾರಣೆ ಮಾಡಬಾರದೆಂದು ಯಾವುದೇ ನಿರ್ಬಂಧವಿಲ್ಲ. 2006(1) ಕೆಸಿಸಿಆರ್ 156.

11. ಮಧ್ಯಸ್ಥಗಾರರು ಒಂದು ಪ್ರಕರಣವನ್ನು ತೀರ್ಮಾನ ಮಾಡುವ ಸಂದರ್ಭದಲ್ಲಿ ಮೌಖಿಕ ಹೇಳಿಕೆಯಲ್ಲಿ ಸಾಲ ಪಡೆದಿದ್ದು ನಿಜ ಮತ್ತು ಆ ಸಾಲವನ್ನು ಮರುಪಾವತಿಸಲು ಬದ್ದರೆಂದು ಒಪ್ಪಿಗೆ ಕೊಟ್ಟ ನಂತರ ದಾಖಲೆಗಳನ್ನು ಪರಿಶೀಲಿಸಿ, ಆದೇಶವನ್ನು ಹೊರಡಿಸಿದ ನಂತರ, ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ಆ ದಾಖಲೆಗಳನ್ನು ಪರಿಶೀಲಿಸಿ ಮಧ್ಯಸ್ಥಗಾರರು ಹೊರಡಿಸಿದ ಆ ಆದೇಶ ಸಮರ್ಪಕವಾಗಿದೆ ಎಂದು ತೀರ್ಮಾನಿಸಿರುವುದು ಸರಿಯಾದ ಕ್ರಮ. 2006(3) ಕೆಸಿಸಿಆರ್ ಎಸ್ಎನ್ 146/2006(2) ಕೆಎಲ್ಜೆ 227

12. ಒಂದು ದಾವಾ ಪ್ರಕರಣದಲ್ಲಿ ಸಲ್ಲಿಸಲಾದ ದಾಖಲೆಗಳನ್ನು ಸಮರ್ಪಕವಾಗಿ ರುಜುವಾತು ಪಡಿಸದೇ ಮತ್ತು ಅರ್ಜಿದಾರರಿಗೆ ಅವಕಾಶವನ್ನು ಕೊಡಲಾರದೇ ತನ್ನ ದಾಖಲೆಗಳನ್ನು ಸಮರ್ಥಿಸಲು ಅವಕಾಶ ಕೊಡದೇ ತೀರ್ಮಾನಿಸಿರುವುದು ನ್ಯಾಯಸಮ್ಮತವಲ್ಲದ ಆದೇಶ (ಪರ್ವರ್ಸ್ ಅಂಡ್ ಆರ್ಬಿಟ್ರರಿ) 2006(2)ಕೆಸಿಸಿಆರ್ 1017/ಐಎಲ್ಆರ್ 2006(2) ಕೆಎಆರ್ 2174/2006(3) ಕೆಎಲ್ಜೆ 209

13. ಒಂದು ದಾವಾ ಪ್ರಕರಣದಲ್ಲಿ ಎದುರು ಅರ್ಜಿದಾರರು ಸಂಘದ ಸದಸ್ಯರಲ್ಲದಿದ್ದರೆ ಆ ಪ್ರಕರಣವನ್ನು ಸದಸ್ಯರ ಮಧ್ಯದ ವಿವಾದ ಎಂದು ತೀರ್ಮಾನಿಸಲಾಗದು, ಆದ್ದರಿಂದ ದಾವಾ ಪ್ರಕರಣ ದಾಖಲು ಮಾಡಿರುವುದು ತಪ್ಪು. ಅದನ್ನು ತಿರಸ್ಕರಿಸಬೇಕು. 2006(1) ಕೆಸಿಸಿಆರ್ ಎಸ್ಎನ್ 63/ಐಎಲ್ಆರ್ 2006(2) ಕೆಎಆರ್ 2108/2006(2) ಕೆಎಲ್ಜೆ 267

14. ದಾವಾ ಪ್ರಕರಣ ದಾಖಲು ಮಾಡಲು ಕೊನೆಯ ದಿನಾಂಕ ಭಾನುವಾರವಾಗಿದ್ದು, ಅಂತಹ ಪ್ರಸಂಗಗಳಲ್ಲಿ ಕರ್ನಾಟಕ ಜನರಲ್ ಕ್ಲಾಸಸ್ ಕಾಯಿದೆ ಅನ್ವಯ ಮುಂದಿನ ದಿನದಂದು ದಾಖಲಿಸಬಹುದು. ಏಕೆಂದರೆ ಅದನ್ನು ಅನುಸರಿಸಬಾರದೆಂದು ಸಹಕಾರಿ ಕಾಯಿದೆಯಲ್ಲಿ ಪ್ರತಿರೋಧ ಇರುವುದಿಲ್ಲ. 2008(5) ಕೆಸಿಸಿಆರ್ 3228/2009(1) ಕೆಎಲ್ಜೆ 458/ಎಐಆರ್ 2009(ಎನ್ಒಸಿ) 113 (ಕೆಎಆರ್)

15. ಒಬ್ಬ ಸಾಲಗಾರ ಸಹ ಸಂಘದಿಂದ ಪಡೆದು ಮರುಪಾವತಿ ಮಾಡದೇ ಇದ್ದ ಪ್ರಸಂಗದಲ್ಲಿ ಸಂಘದ ಸದಸ್ಯರ ಹಿತದೃಷ್ಟಿಯಿಂದ ದಾವಾ ದಾಖಲಿಸಿ ವಸೂಲಾತಿ ಆದೇಶ ಪಡೆದ ನಂತರ ಮತ್ತು ಆ ಆದೇಶವನ್ನು ಮೇಲ್ಪಟ್ಟದ ಪ್ರಾಧಿಕಾರ ದೃಢೀಕರಿಸಿದಾಗ ಉಚ್ಚ ನ್ಯಾಯಾಲಯವು ನ್ಯಾಯದ ಸಹಾಯ ಹಸ್ತ ನೀಡಬೇಕೆಂಬ ಭಾವನೆಯಿಂದ ಸಂಘಕ್ಕೆ ಬರಬೇಕಾದ ಹಣಕ್ಕೆ ಕೊರತೆಯುಂಟುಮಾಡಬಾರದು. ಸಾಲದ ಬಾಕಿಯನ್ನು ಲೆಕ್ಕ ಹಾಕುವಾಗ ವ್ಯತ್ಯಾಸಗಳಿದ್ದರೆ ಅದನ್ನು ವಸೂಲಾತಿ ಪ್ರಾಧಿಕಾರ ಪರಿಶೀಲಿಸಿ ಪರಿಹಾರ ಕೊಡಬಹುದು 2006(1) ಕೆಸಿಸಿಆರ್ ಎಸ್ಎನ್ 23/ಐಎಲ್ಆರ್ 2006(1) ಕೆಎಆರ್ 120(ಡಿಬಿ)

16. ಒಂದು ಸಹಕಾರ ಸಂಘವು ವ್ಯವಸಾಯ ಭೂಮಿಯನ್ನು ಖರೀದಿ ಮಾಡುವ ಸಂಬಂಧದಲ್ಲಿ ಅರ್ಜಿದಾರರಿಗೆ ಅಧಿಕಾರ ಕೊಟ್ಟು, ಆ ಭೂಮಿಯನ್ನು ವ್ಯವಸಾಯೇತರ ಭೂಮಿಯಾಗಿ ವರ್ಗಾಯಿಸಿದ ನಂತರ ಸಂಘದ ಹೆಸರಿಗೆ ವರ್ಗಾಯಿಸಲು ಉದ್ದೇಶ ಹೊಂದಿದ್ದು, ಆ ವರ್ಗಾವಣೆ ಮಾಡುವುದು ಕಲಂ 70ರನ್ವಯ ಊರ್ಜಿತವಾಗತಕ್ಕದ್ದು. ಇದನ್ನು ಬೇನಾಮಿ ವ್ಯವಹಾರ ನಿರ್ಬಂಧ ಕಾಯಿದೆ ವಿರುದ್ಧವಾಗಿದೆ ಎಂಬ ತೀರ್ಮಾನಕ್ಕೆ ಬರಲಾಗದು ಮತ್ತು ಈ ವಿಷಯವನ್ನು ಇತ್ಯರ್ಥಪಡಿಸಲು ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ಇಲ್ಲ. 2006(1) ಕೆಸಿಸಿಆರ್ ಎಸ್ಎನ್ 55/ 2006(4) ಕೆಎಲ್ಜೆ 655

17. ಒಂದು ಗೃಹ ನಿರ್ಮಾಣ ಸಹಕಾರ ಸಂಘ ಒಬ್ಬ ಸದಸ್ಯನಿಂದ ಒಂದು ನಿವೇಶನಕ್ಕೆ ಬೇಕಾದ ಪೂರ್ಣ ಹಣವನ್ನು ಸ್ವೀಕರಿಸಿ, ನಿವೇಶನವನ್ನು ಕೊಡದೇ ಇದ್ದಾಗ ಹಣ ಮರುಪಾವತಿ ಮಾಡಲು ಕೆಳ ನ್ಯಾಯಾಲಯದಲ್ಲಿ ಶೇ.21ರ ಬಡ್ಡಿದರದಂತೆ ಆದೇಶಿಸಲಾಗಿತ್ತು. ಕರ್ನಾಟಕ ಮೇಲ್ಮನವಿ ಪ್ರಾಧಿಕರಣವು ಆ ಬಡ್ಡಿದರವನ್ನು ಮಾರ್ಪಡಿಸಿ ಶೇ 12ರ ಬಡ್ಡಿದರವನ್ನು ನಿಗದಿಪಡಿಸಿತ್ತು. ಇದನ್ನು ನ್ಯಾಯಸಮ್ಮತವೆಂದು ಆದೇಶಿಸಲಾಗಿದ್ದು, ಈ ಆದೇಶದಲ್ಲಿ ಯಾವುದೇ ಕಾನೂನಿನ ನ್ಯೂನತೆ ಇಲ್ಲವೆಂದು ಮೇಲ್ಮನವಿ ಪ್ರಕರಣದ ಆದೇಶವನ್ನು ಎತ್ತಿಹಿಡಿಲಾಯಿತು.

2004(4) ಕೆಸಿಸಿಆರ್ ಎಸ್‌ಎನ್ 513/2005(1) ಕೆಎಲ್‌ಜೆ 245.

18. ಮಧ್ಯಸ್ಥಗಾರರು ಎದುರು ಅರ್ಜಿದಾರರಿಗೆ ಅವಕಾಶವನ್ನು ಕೊಟ್ಟು ಒಂದು ಪ್ರಕರಣವನ್ನು ತೀರ್ಮಾನಿಸಿದಾಗ ಆ ತೀರ್ಮಾನವನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣವು, ಸಾಕ್ಷಿಗಳನ್ನು, ದಾಖಲೆಗಳನ್ನು ಪುನರ್ ಪರಿಶೀಲಿಸಿ ದೃಢೀಕರಿಸಿದ ನಂತರ ಉಚ್ಚ ನ್ಯಾಯಾಲಯವು ಮಧ್ಯಪ್ರವೇಶ ಮಾಡುವುದಿಲ್ಲ. ಉಚ್ಚ ನ್ಯಾಯಾಲಯವನ್ನು ಮೇಲ್ಮನವಿ ನ್ಯಾಯಾಲಯ ಎಂದು ಪರಿಗಣಿಸಲಾಗುವುದಿಲ್ಲ. ಆದೇಶಗಳು ಮೇಲ್ನೋಟಕ್ಕೆ ತಪ್ಪು ಎಂದು ಕಂಡುಬಂದಾಗ ಮಾತ್ರ ಮಧ್ಯಪ್ರವೇಶ ಮಾಡಬಹುದು. ಈ ಹಿಂದೆ ಎಐಆರ್ 2001 ಎಸ್‌ಸಿ 3295 ತೀರ್ಪನ್ನು ಈ ತೀರ್ಪಿಗೆ ಅನ್ವಯಿಸಲಾಗಿದೆ. 2005(3) ಕೆಸಿಸಿಆರ್ 2171/ಐಎಲ್‌ಆರ್ 2005(3) ಕೆಎಆರ್ 3505/2005 (5) ಕೆಎಲ್‌ಜೆ 42

19. ಕಲಂ 118ರಲ್ಲಿ "ಯಾವುದೇ ನ್ಯಾಯಾಲಯ" ಎಂಬ ಪದಕ್ಕೆ "ಯಾವುದೇ ನ್ಯಾಯಾಲಯ ಎಂಬಲ್ಲಿ ಕಾರ್ಮಿಕ ಅಥವಾ ಕಂದಾಯ ಅಥವಾ ಕೈಗಾರಿಕಾ ನ್ಯಾಯಾಲಯ" ಎಂದು ಸೇರಿಸಿರುವುದರಿಂದ ಈ ನ್ಯಾಯಾಲಯಗಳ ಕಾರ್ಯವ್ಯಾಪ್ತಿ ಸಹಕಾರ ಸಂಘಗಳ ಆಡಳಿತ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಇರುವುದಿಲ್ಲ. 2005(2) ಕೆಸಿಸಿಆರ್ 804/ಐಎಲ್‌ಆರ್ 2005(1) ಕೆಎಆರ್ 1349/2005(3) ಕೆಎಲ್‌ಜೆ 300

20. ಕಲಂ 70(2)(ಡಿ) ಅನ್ವಯ ಕಾರ್ಮಿಕ ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥಪಡಿಸಲು ಅಧಿಕಾರ ಹೊಂದಿಲ್ಲ 2005(3) ಕೆಸಿಸಿಆರ್ 2212/ಐಎಲ್‌ಆರ್ 2005(3) ಕೆಎಆರ್ 3882

21. ಕಲಂ 70(3) ಅನ್ವಯ ನಿಬಂಧಕರ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವುದು ನಿಬಂಧಕರೇ, ಅದನ್ನು ಪ್ರಶ್ನಿಸುವುದು ಕಲಂ 70ರನ್ವಯವೇ ಮತ್ತು ರಿಟ್ ಮುಖಾಂತರವಲ್ಲ 2005(3) ಕೆಸಿಸಿಆರ್ 1863

22. ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ವಾರ್ಷಿಕ ಶೇ 17ರ ಬಡ್ಡಿದರವನ್ನು ಮಧ್ಯಸ್ಥಗಾರರು ಆದೇಶಿಸಿದ್ದನ್ನು ದೃಢೀಕರಿಸಿದಾಗ, ಆ ದರವನ್ನು ಪ್ರಶ್ನೆ ಮಾಡಲು ಅರ್ಜಿಯನ್ನು ಸಲ್ಲಿಸಿ, ಆ ಅರ್ಜಿಯನ್ನಾಧರಿಸಿ ಭಾರತೀಯ ರಿಜರ್ವ್ ಬ್ಯಾಂಕ್‌ನ ನೀತಿಗೆ ಅನ್ವಯವಾಗಿದೆಯೇ ಅಲ್ಲವೇ ಎಂಬುದನ್ನು ಕೇಳಬೇಕು. 2004(3) ಕೆಸಿಸಿಆರ್ 1513/ಐಎಲ್‌ಆರ್ 2004(3) ಕೆಎಆರ್ 3400/2004(4) ಕೆಎಲ್‌ಜೆ 589

23. ಮಧ್ಯಸ್ಥದಾರರು ಮತ್ತು ಕರ್ನಾಟಕ ಮೇಲ್ಮನವಿ ಪ್ರಾಧಿಕರಣವು ಅರ್ಜಿದಾರರು ಬಡ್ಡಿ ಸಹಿತ ಸಾಲ ಮರುಪಾವತಿ ಮಾಡಲು ಬದ್ದರು ಎಂದು ತೀರ್ಮಾನ ಕೊಟ್ಟ ನಂತರ, ಅದನ್ನು ರಿಟ್ ಮೂಲಕ ಪ್ರಶ್ನಿಸಲು ಅಧಿಕಾರ ಇರತಕ್ಕದ್ದಲ್ಲ. ಉಚ್ಚ ನ್ಯಾಯಾಲಯವು ಮೇಲ್ನೋಟಕ್ಕೆ ಕಾನೂನುಬದ್ಧ ತಪ್ಪುಗಳಿದ್ದರೆ ಮಾತ್ರ ಮಧ್ಯಪ್ರವೇಶಿಸುವುದು. 2004(1) ಕೆಸಿಸಿಆರ್ ಎಸ್‌ಎನ್ 65.

24. ಸಹಕಾರಿ ಕಾಯಿದೆಯಲ್ಲಿ ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಯನ್ನು ತಡೆದಿದ್ದರೂ ಮುಖ್ಯ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಪ್ರಕರಣವನ್ನು ವಿಚಾರಣೆಗೆ ಸ್ವೀಕರಿಸಿ, ಈ ಪ್ರಕರಣವನ್ನು ವಿಚಾರಣೆ ಮಾಡುವ ಅಧಿಕಾರವಿಲ್ಲವೆಂದು ಸಮರ್ಥವಾಗಿ ಗಮನಕ್ಕೆ ತಂದರೂ, ಅಂತಹ ಪ್ರಕರಣವನ್ನು ಮುಂದುವರಿಸಿ ಮಧ್ಯಂತರ ಆದೇಶ ಕೊಡಲು ಅಧಿಕಾರ ಇಲ್ಲದೇ ಇದ್ದರೂ, ಚುನಾವಣೆ ನಡೆಯುವುದನ್ನು ನಿಲ್ಲಿಸಲಾಗಿದ್ದು, ಇದು ಸಹಕಾರಿ ಕಾಯಿದೆಯ ಕಲಂ 39ಎ(ಅಧ್ಯಾಯ 5ಎ) ವಿರುದ್ಧವಾಗಿದೆ. ಈ ಆದೇಶದಿಂದ ಸಹಕಾರಿ ಸಂಘದ ಹಿತಾಸಕ್ತಿಗೆ ತೊಡಕುಂಟಾಗಿದೆ. ಈ ತೀರ್ಪು ಕೊಡುವಾಗ ಯಾವ ಕಾರಣಕ್ಕಾಗಿ ಮಧ್ಯಪ್ರವೇಶ ಮಾಡಲಾಗಿದೆಯೋ ಆ ನ್ಯಾಯಾಧೀಶರಿಗೆ ಮಾತ್ರ ಗೊತ್ತು. 2004(3)ಕೆಸಿಸಿಆರ್ ಎಸ್‌ಎನ್ 226/ಐಎಲ್‌ಆರ್ 2004(3) ಕೆಎಆರ್ 2853/2004(4) ಕೆಎಲ್‌ಜೆ 311.

25. ಕೈಗಾರಿಕಾ ವಿವಾದ ಕಾಯಿದೆ, ಸಹಕಾರ ಸಂಘ ಕಾಯಿದೆ ಕಲಂ 70ರಲ್ಲಿರುವ ವಿಷಯಗಳ ಬಗ್ಗೆ ವ್ಯಾಪ್ತಿಯನ್ನು ತೆಗೆದುಹಾಕಲಾಗಿದೆ. ಈ ವ್ಯಾಪ್ತಿಯಿಂದ ಹೊರಗೆ ಇದ್ದ ವಿಷಯಗಳಲ್ಲಿ ಮಾತ್ರ ಕೈಗಾರಿಕಾ ನ್ಯಾಯಾಲಯ ವ್ಯಾಪ್ತಿ ಹೊಂದತಕ್ಕದ್ದು. 2003(4) ಕೆಸಿಸಿಆರ್ 3117/ಐಎಲ್‌ಆರ್ 2003(3) ಕೆಎಆರ್ 2531/2003(4) ಕೆಎಲ್‌ಜೆ 453(ಎಫ್‌ಬಿ)

26. ಒಬ್ಬ ನಿರ್ದೇಶಕ ಹಣದುರುಪಯೋಗ ಮಾಡಿಕೊಂಡಾಗ ಲೆಕ್ಕಪತ್ರಗಳ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಆಡಿಟ್ ಮಾಡುವ ಸಮಯದಲ್ಲಿ ಗುರುತಿಸಿದ ನಂತರ, ಸಹಾಯಕ ನಿಬಂಧಕರು ಕಾರ್ಯದರ್ಶಿ ಮತ್ತು ನಿರ್ದೇಶಕರಿಂದ ವಸೂಲಿ ಮಾಡಬೇಕು ಎಂದು ಸಲ್ಲಿಸಿದ ಅರ್ಜಿಯನ್ನು ಸಿವಿಲ್ ನ್ಯಾಯಾಲಯ ಪುರಸ್ಕರಿಸತಕ್ಕದ್ದಲ್ಲ. ಇದು ಸೆಕ್ಷನ್ 70ರನ್ವಯ ದಾಖಲಿಸಬೇಕಾದ ಪ್ರಕರಣ.2003(4) ಕೆಸಿಸಿಆರ್ 2990

27. ಒಬ್ಬ ಸಾಲಗಾರನ ಮೇಲೆ ವಸೂಲಾತಿ ಆದೇಶವನ್ನು ಬ್ಯಾಂಕು ಪಡೆದಾಗ, ಭಾಗಶಃ ಹಣ ಪಾವತಿ ಮಾಡಿ, ಮತ್ತು ಅಂತಹ ಸಂದರ್ಭದಲ್ಲಿ

ರಿಟ್ ಅರ್ಜಿ ಮುಖಾಂತರ ಏಕಕಾಲಿಕ ತೀರುವಳಿ ಅನ್ವಯಿಸಬಹುದೆಂದು ಮನವಿಯನ್ನು ತಿರಸ್ಕರಿಸಿ, ಮರುಪಾವತಿಯನ್ನು ಕಂತುಗಳಲ್ಲಿ ಮಾಡಲು ಅವಕಾಶ ಕಲ್ಪಿಸಿತು. 2003(4) ಕೆಸಿಸಿಆರ್ ಎಸ್‌ಎನ್ 234/ ಐಎಲ್‌ಆರ್ 2003(3) ಕೆಎಆರ್ 3729

28. ಸಾಲ ಕೊಟ್ಟ ಸಹಕಾರಿ ಬ್ಯಾಂಕು, ಕೈಗಾರಿಕೆಗಾಗಿ ಕೊಟ್ಟ ಸಾಲದ ವಸೂಲಾತಿಗಾಗಿ ಅದರ ಆಸ್ತಿಯನ್ನು ಮಾರಾಟ ಮಾಡಿದಾಗ, ಅಡಮಾನ ಮಾಡಿದ ಯಂತ್ರೋಪಕರಣಗಳಿಂದ ವಸೂಲಿ ಮಾಡಿಕೊಂಡು, ನೌಕರರ ಸಂಬಳ ಕೊಡಬಹುದಾಗಿದ್ದು, ಆ ಕೈಗಾರಿಕೆಯಲ್ಲಿ ತಯಾರಿಸಿದ ವಸ್ತುಗಳ ಮೇಲೆ ಬ್ಯಾಂಕಿನ ಅಧಿಕಾರ ಇರತಕ್ಕದ್ದಲ್ಲ. 2003(2) ಕೆಸಿಸಿಆರ್ 1340/ಐಎಲ್‌ಆರ್ 2003(2) ಕೆಎಆರ್ 1846/2003(6) ಕೆಎಲ್‌ಜೆ 15(ಡಿಬಿ)

29. ಕಲಂ 103ರಲ್ಲಿ ಆದೇಶಕ್ಕೆ ಮೊದಲು ಜಪ್ತಿ ಮಾಡುವ ಪ್ರಕರಣದಲ್ಲಿ ಅರ್ಜಿದಾರನ ಅನುಮಾನದ ಆಧಾರದ ಮೇಲೆ ಜಪ್ತಿ ಆದೇಶ ಹೊರಡಿಸತಕ್ಕದ್ದಲ್ಲ. ಈ ರೀತಿ ಹೊರಡಿಸಿದ ಆದೇಶಕ್ಕೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಸಂಯುಕ್ತ ನಿಬಂಧಕರ ಆದೇಶವನ್ನು ಕಿತ್ತುಹಾಕಿತ್ತು. ಈ ಆದೇಶವನ್ನು ರಿಟ್ ಅರ್ಜಿಯಲ್ಲಿ ದೃಢೀಕರಿಸಿ ಪ್ರಕರಣವನ್ನು ಮತ್ತೆ ಸಂಯುಕ್ತ ನಿಬಂಧಕರಿಗೆ ವರ್ಗಾಯಿಸಿ, ಸಂಬಂಧಪಟ್ಟ ವ್ಯಕ್ತಿಗೆ ಆಸ್ತಿಯನ್ನು ದಾವಾ ಪ್ರಕರಣ ತೀರ್ಮಾನ ಮಾಡುವತನಕ ಆಸ್ತಿಯನ್ನು ಪರಭಾರೆ ಮಾಡಬಾರದೆಂದು ನಿರ್ದೇಶನ ನೀಡಲಾಯಿತು 2003(3) ಕೆಸಿಸಿಆರ್ ಎಸ್‌ಎನ್ 196

30. ಒಬ್ಬ ಸದಸ್ಯ ತಾನು ಹೂಡಿದ ಠೇವಣಿಯನ್ನು ಮರುಪಾವತಿ ಮಾಡಲು ಕೇಳಿದಾಗ ಅದು ಕಲಂ 70ರನ್ವಯ ಪ್ರಕರಣವಾಗುತ್ತದೆ 1963(2) ಎಂಎಲ್‌ಜೆ 294 (ಡಿಬಿ)/ಐಎಲ್‌ಆರ್ 1967 ಎಂಎಲ್‌ಜೆ 427 (ಡಿಬಿ)

31. ಒಬ್ಬ ಆಡಳಿತ ಮಂಡಳಿಯ ಸದಸ್ಯನನ್ನು ಸಭೆಗೆ ಹಾಜರಾಗಿಲ್ಲವೆಂದು ತೆಗೆದುಹಾಕಿದಾಗ ಅದು ಕಲಂ 70ರನ್ವಯ ದಾವಾ ಪ್ರಕರಣವಾಗುತ್ತದೆ. ಐಎಲ್‌ಆರ್ 1987(1) ಕೆಎಆರ್ 702/1985(1) ಕೆಎಲ್‌ಜೆ 326

32. ಒಂದು ಸಂಘದ ಉಪನಿಯಮಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ ಕಲಂ 70ರಲ್ಲಿ ದಾವಾ ದಾಖಲಿಸಲಾಗದು. ಸಹಕಾರ ಸಂಘ ಮತ್ತು ನಿಬಂಧಕರ ಮಧ್ಯೆ ದಾವಾ ಪ್ರಕರಣ ದಾಖಲಿಸಲಾಗದು. 1966(1) ಎಂಎಲ್‌ಜೆ 215 (ಡಿಬಿ)

33. ಬಾಡಿಗೆ ಪಾವತಿ ಮಾಡಿಲ್ಲವೆಂದು ಕಲಂ 70ರನ್ವಯ ದಾವಾ ದಾಖಲು ಮಾಡತಕ್ಕದ್ದಲ್ಲ ಐಎಲ್‌ಆರ್ 1958 ಎಂವೈಎಸ್ 582.

34. ಒಬ್ಬ ಸದಸ್ಯನ ನಾಮಪತ್ರವನ್ನು ತಿರಸ್ಕರಿಸಿದಾಗ ಅದನ್ನು ಪ್ರಶ್ನಿಸಲು ಕಲಮ 70ರನ್ವಯ ದಾವಾ ದಾಖಲಿಸಬೇಕು ರಿಟ್ ಅರ್ಜಿಯನ್ನಲ್ಲ. 1981(2) ಕೆಎಲ್‌ಜೆ 214/ಎಐಆರ್ 1982 ಕೆಎಎನ್‌ಟಿ 220. 1979(2) ಕೆಎಲ್‌ಜೆ ಎಸ್‌ಎನ್ 32/1984(2) ಕೆಎಲ್‌ಜೆ 216/ಎಐಆರ್ 1985 ಎನ್‌ಓಸಿ 66.

35. ಪದಾಧಿಕಾರಿಗಳ ಆಯ್ಕೆಗೆ ಸಂಬಂಧಿಸಿದಂತೆ ದಾವಾ ಪ್ರಕರಣ ದಾಖಲಿಸಬೇಕು, ಅದು ಒಂದು ಸಮರ್ಪಕ ಅವಕಾಶ, ರಿಟ್ ಅರ್ಜಿ ಮುಖಾಂತರವಲ್ಲ 1963(1) ಎಂಎಲ್‌ಜೆ 204 (ಡಿಬಿ)

36. ಒಂದು ಸಂಘದ ಕಾರ್ಯದರ್ಶಿಯು ಪದಾಧಿಕಾರಿಗಳ ಆಯ್ದೆಗಾಗಿ ಸಭೆ ಕರೆಯುವುದು ಮತ್ತು ಆ ಸಂಘದ ಸಭೆಯನ್ನು ಕಲಂ 29(2) ರನ್ವಯ ಚುನಾವಣೆ ನಡೆಯಬೇಕಾಗಿದ್ದಾಗ ಕಲಂ 70ರ ಪ್ರಕರಣವನ್ನು ಉಲ್ಲೇಖಿಸಿ ರಿಟ್ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ. 1981(1) ಕೆಎಲ್‌ಜೆ ಎಸ್‌ಎನ್ 72 (ಡಿಬಿ)

37. ಒಬ್ಬ ಸದಸ್ಯನನ್ನು ಸದಸ್ಯತ್ವದಿಂದ ತೆಗೆದುಹಾಕುವಾಗ, ಎಲ್ಲ ಸದಸ್ಯರಿಗೂ ನೋಟೀಸ್ ಜಾರಿ ಮಾಡದೇ ಇದ್ದಾಗ ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ, ಅಂತಹ ಪ್ರಕರಣಗಳಲ್ಲಿ ರಿಟ್ ಅರ್ಜಿಯನ್ನು ಪುರಸ್ಕರಿಬಹುದು. 1969(2) ಎಂಎಲ್‌ಜೆ 336 (ಡಿಬಿ)

38. ನಿಬಂಧಕರು ಕಲಂ 70(3)ರನ್ವಯ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಇದು ಒಂದು ಪೂರ್ವಭಾವಿ ಪ್ರಶ್ನೆ. ಎಐಆರ್ 1979 ಎಸ್‌ಸಿ 1203/

39. ನಿಬಂಧಕರ ಕಲಂ 70(3)ರ ತೀರ್ಮಾನವನ್ನು ಪುನರ್ ವಿಮರ್ಶಾ ಅರ್ಜಿಯೆಂದು ಕಲಂ 107ರಲ್ಲಿ ಪ್ರಶ್ನಿಸತಕ್ಕದ್ದಲ್ಲ. 1975(2) ಕೆಎಲ್‌ಜೆ 390(ಡಿಬಿ) ಈ ತೀರ್ಪನ್ನು ಉಚ್ಚ ನ್ಯಾಯಾಲಯವು 1975(2) ಕೆಎಲ್‌ಜೆ ಎಸ್‌ಎನ್ 104 ನಲ್ಲಿ ವಿಭಾಗೀಯ ಪೀಠ ದೃಢೀಕರಿಸಿದೆ.

40. ಒಂದು ಪ್ರಕರಣವನ್ನು ತೀರ್ಮಾನ ಮಾಡುವಾಗ ಶೇಕಡ 7.5 ದರದಲ್ಲಿ ವಾರ್ಷಿಕ ಒಪ್ಪಂದ ದರವೆಂದು ಆದೇಶಿಸಿದಾಗ ಶೇಕಡ ವಾರ್ಷಿಕ 10.5 ದರದಲ್ಲಿ ದಂಡಬಡ್ಡಿ ಸೇರಿಸಿ ಆದೇಶಿಸಿದರೆ ಅದು ಸಮರ್ಥನೀಯ. 1989(1) ಕೆಎಲ್‌ಜೆ 134

# ಅಧ್ಯಾಯ – 6.6

# ವಿಳಂಬ ವಿನಾಯಿತಿ

**ಕಲಂ.40 : ಕಾಲ ಪರಿಮಿತಿಯ ಅವಧಿ :**

(1) "ವ್ಯಾಜ್ಯ ಕಾರಣ ಉಂಟಾದ ದಿನಾಂಕದಿಂದ ಆರು ವರ್ಷದೊಳಗೆ ವಿವಾದವನ್ನು ರಿಜಿಸ್ಟ್ರಾರನಿಗೆ ಕಳುಹಿಸಿದ ಹೊರತು 39ನೇ ಪ್ರಕರಣದ ಅಡಿಯಲ್ಲಿ ಯಾವುದೇ ವಿವಾದವನ್ನು ಸ್ವೀಕರಿಸತಕ್ಕದ್ದಲ್ಲ;

ಪರಂತು, ಮಂಡಳಿಯ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ಇತರ ಪದಾಧಿಕಾರಿಯ ಅಥವಾ ನಿರ್ದೇಶಕನ ಚುನಾವಣೆಗೆ ಸಂಬಂಧಿಸಿದ ವಿವಾದವನ್ನು, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

[ಮತ್ತು ಪರಂತು, ನೌಕರನ ವಿರುದ್ಧದ ಶಿಸ್ತು ಕ್ರಮಕ್ಕೆ ಅಥವಾ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಯಾವುದೇ ವಿವಾದವನ್ನು ಅಂಥ ವಿವಾದದಲ್ಲಿ ಪ್ರಶ್ನಿತವಾಗುವ ಆದೇಶದ ದಿನಾಂಕದಿಂದ ಹನ್ನೆರಡು ತಿಂಗಳ ಅವಧಿಯೊಳಗೆ ದಾಖಲು ಮಾಡತಕ್ಕದ್ದು.]

(2) (1)ನೇ ಉಪ–ಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಅವಧಿಯ ನಂತರ ಕಳುಹಿಸಿದ ವಿವಾದವನ್ನು, ಆ ಅವಧಿಯೊಳಗಾಗಿ ಹಾಗೆ ಕಳುಹಿಸದಿರಲು ಆ ವ್ಯಕ್ತಿಗೆ ಸಾಕಷ್ಟು ಕಾರಣವಿತ್ತೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ ಅದನ್ನು ಸ್ವೀಕರಿಸಬಹುದು."

ಯಾವುದೇ ಪ್ರಕರಣವನ್ನು ದಾಖಲು ಮಾಡಲು (ಚುನಾವಣೆ ಶಿಸ್ತು ಕ್ರಮ ಅರ್ಜಿಯನ್ನು ಹೊರತುಪಡಿಸಿ) ವ್ಯವಹಾರ ನಡೆದ 6 ವರ್ಷಗಳ ಒಳಗೆ ದಾಖಲಿಸಬೇಕು. ಚುನಾವಣೆಗೆ ಸಂಬಂಧಪಟ್ಟಂತೆ ಪ್ರಕರಣ ದಾಖಲಿಸಲು ಚುನಾವಣೆ ಪಲಿತಾಂಶ ಪ್ರಕಟಿಸಿದ 30 ದಿವಸಗಳ ಒಳಗಾಗಿ ದಾಖಲಿಸಬೇಕು. ಸೇವಾ ನಿಯಮಗಳಿಗೆ ಸಂಬಂಧಪಟ್ಟಂತೆ 12 ತಿಂಗಳೊಳಗೆ ಸಲ್ಲಿಸಬೇಕು. ಈ ಮೇಲ್ಕಂಡ ಅವಧಿಯೊಳಗೆ ದಾಖಲಿಸಲಾಗದಿದ್ದ ಸಂದರ್ಭದಲ್ಲಿ ಅರ್ಜಿದಾರರು ವಿಳಂಬ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಬೇಕು. ಈ ವಿಳಂಬ ವಿನಾಯಿತಿ ಅರ್ಜಿಯ ಜೊತೆ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿ, ಆ ಪ್ರಮಾಣ ಪತ್ರದಲ್ಲಿ ವಿಳಂಬಕ್ಕೆ ಸಕಾರಣಗಳನ್ನು ಕೊಡಬೇಕು. ನಿಬಂಧಕರು ಈ ಕಾರಣಗಳು ಸಕಾರಣಗಳು ಎಂಬ ತೀರ್ಮಾನಕ್ಕೆ ಬಂದ ನಂತರ ವಿಳಂಬ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಿ ಆದೇಶ ಹೊರಡಿಸಬಹುದು. ಈ ವಿಳಂಬ ವಿನಾಯಿತಿ ಅರ್ಜಿಯ ಮೇಲೆ ಆದ ಆಧೇಶದ ಆಧಾರದ ಮೇಲೆಯೆ ದಾವಾ ಪ್ರಕರಣವನ್ನು ಇತ್ಯರ್ಥಕ್ಕೆ ತೆಗೆದುಕೊಳ್ಳಬೇಕು.

ಮೇಲ್ಕಂಡಂತೆ ವಿಳಂಬ ವಿನಾಯಿತಿಯನ್ನು ಪರಿಶೀಲಿಸುವಾಗ, ಕಾಲಮಿತಿ ಕಾಯಿದೆ ಅನುಸರಿಸಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಸಹಕಾರಿ ಅನುಸರಿಸಲು ಸಾಧ್ಯವಾಗದೆ ಇದ್ದುದರಿಂದ, ಈ ಸೇರ್ಪಡೆ ಮಾಡಲಾಗಿದೆ. ನಿಬಂಧಕರು ಕಲಂ 39ರಡಿ ಒಂದು ದಾವಾ ಪ್ರಕರಣವನ್ನು ಸ್ವೀಕರಿಸಿದಾಗ ಆ ಪ್ರಕರಣವು ಯಾವ ವಿಷಯದ ಬಗ್ಗೆ, ಯಾವ ದಿನಾಂಕದಿಂದ ಲೆಕ್ಕ ಮಾಡಬೇಕೆಂಬುದನ್ನು (ಛಿಚಿಣಾಜ ಡಜಿ ಚಿಛಿಣುಡಿಟ) ನಿರ್ಧರಿಸಿ, ಆನಂತರ 6 ವರ್ಷಗಳೊಳಗಾಗಿ ಪ್ರಕರಣವನ್ನು ದಾಖಲಿಸಬೇಕು. ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಚುನಾವಣೆ ಫಲಿತಾಂಶವನ್ನು ಘೋಷಿಸಿದ 30 ದಿವಸದೊಳಗಾಗಿ ಪ್ರಕರಣವನ್ನು ದಾಖಲಿಸಬೇಕು. ಸೇವಾನಿಯಮಗಳಿಗೆ ಸಂಬಂಧಪಟ್ಟಂತೆ 12 ತಿಂಗಳೊಳಗೆ ಸಲ್ಲಿಸಬೇಕು. ಈ ಮೇಲ್ಕಂಡ ಎರಡು ಅವಧಿಯೊಳಗೆ ಪ್ರಕರಣವನ್ನು ದಾಖಲಿಸದೆ ಇದ್ದ ಸಂದರ್ಭದಲ್ಲಿ, ಸಂಬಂಧಪಟ್ಟವರು ವಿಳಂಬ ವಿನಾಯಿತಿಯ ಅರ್ಜಿ ಸಲ್ಲಿಸಬೇಕು. ಪ್ರಕರಣವನ್ನು ದಾಖಲಿಸಲು ಆದ ವಿಳಂಬಕ್ಕೆ ಸಕಾರಣಗಳನ್ನು ನಮೂದಿಸಬೇಕು. ಅಂತಹ ಸಕಾರಣಗಳಲ್ಲಿ ಕಡತ ಸಿಗಲಿಲ್ಲವೆಂದಾಗಲಿ, ಬೇರೆ ಸ್ಥಳದಲ್ಲಿ ಇಡಲಾಗಿತ್ತೆಂದಾಗಲಿ, ಮತ್ತಿತರೆ ಕಾರಣಗಳು ಸಕಾರಣಗಳಾಗುವುದಿಲ್ಲ. ಇದಕ್ಕೆ ಸಕಾರಣಗಳನ್ನು ಗುರುತಿಸುವಾಗ, ಸಾಮಾನ್ಯವಾಗಿ ಪ್ರಕರಣವನ್ನು ದಾಖಲೆ ಮಾಡುವ ವ್ಯಕ್ತಿ ದೀರ್ಘಾವಧಿ ಕಾಲ ಜೈಲುವಾಸ ಅನುಭವಿಸುತ್ತಿದ್ದರೆ ಅಥವಾ ಅನಾರೋಗ್ಯದಿಂದ ದೀರ್ಘಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದರೆ ಅಥವಾ ಮನೋರೋಗದಿಂದ ನರಳುತ್ತಿದ್ದರೆ ಅಥವಾ ಪ್ರಮಾಣೀಕೃತ ದಾಖಲೆ ಪತ್ರಗಳು ಎಷ್ಟೇ ಪ್ರಯತ್ನಪಟ್ಟರೂ ಸಿಗದೆ ಇದ್ದರೆ ಅಥವಾ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆದೇಶಗಳ ಪ್ರತಿ ಸಿಗದೆ ಇದ್ದ ಸಂದರ್ಭದಲ್ಲಿ ಅಥವಾ ಆದೇಶಗಳ ಪ್ರಮಾಣೀಕೃತ ನಕಲು ಪ್ರತಿಗಳನ್ನು ಕೊಡದೆ ಇದ್ದಾಗ ಅಥವಾ ಯಾವುದೇ ದುರುದ್ದೇಶವಿಲ್ಲದೆ ವಿಳಂಬವಾಗಿದ್ದರೆ ಅಂತಹ

ಪ್ರಕರಣಗಳನ್ನು ಪರಿಶೀಲಿಸಿ, ವಿಳಂಬ ವಿನಾಯಿತಿಯನ್ನು ಕೊಡಲು ನಿಬಂಧಕರಿಗೆ ಅಧಿಕಾರ ಇದೆ. ಅಧಿಕಾರ ಇದೆ ಎಂಬ ಕಾರಣಕ್ಕಾಗಿ ಸಕಾರಣಗಳಿಲ್ಲದೆ ವಿಳಂಬ ವಿನಾಯಿತಿಯನ್ನು ಕೊಡತಕ್ಕದ್ದಲ್ಲ. ಇದಕ್ಕೆ ಪೂರಕವಾಗಿ ಸಂಬಂಧಪಟ್ಟ ವ್ಯಕ್ತಿಯು ಒಂದು ಪ್ರತಿಜ್ಞಾ ಪತ್ರವನ್ನು ಸಲ್ಲಿಸಿ, ಆ ಪತ್ರದಲ್ಲಿ ವಿಳಂಬವಾದ ಬಗ್ಗೆ ಪ್ರಮಾಣಿಕವಾಗಿ ಹೇಳಿಕೆಯನ್ನು ಸಲ್ಲಿಸಿದರೆ ಪರಿಗಣಿಸಬಹುದಾಗಿದೆ. ಉದಾಹರಣೆಗೆ, ಒಂದು ಪತ್ತಿನ ಸಹಕಾರ ಸಂಘವು ತನ್ನ ಸದಸ್ಯರಿಗೆ, ಅಂದರೆ ಸುಮಾರು 150 ಸದಸ್ಯರಿಗೆ ಸಾಲ ಹಂಚಿಕೆ ಮಾಡಿದಾಗ ಕಾರಣಾಂತರಗಳಿಂದ ಪ್ರಕರಣ ದಾಖಲಿಸಲು ವಿಳಂಬವಾಗಿದ್ದು, ವಿಳಂಬ ಸುಮಾರು 15–20 ವರ್ಷಗಳಾಗಿದ್ದಲ್ಲಿ, ಸಂಬಂಧಪಟ್ಟ ಕಾರ್ಯದರ್ಶಿಯು ಒಂದೆ ವಿಳಂಬ ವಿನಾಯಿತಿ ಅರ್ಜಿಯನ್ನು ಸಲ್ಲಿಸಿ, ವಿನಾಯಿತಿ ಕೇಳಿದ್ದರ ಆಧಾರದ ಮೇಲೆ, ಒಬ್ಬ ಸಹಾಯಕ ನಿಬಂಧಕರು 150 ಸಾಲ ಪಡೆದ ಸದಸ್ಯರಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸದೇ ಇದ್ದರೂ, ವಿಳಂಬ ವಿನಾಯಿತಿ ಅರ್ಜಿಯಲ್ಲಿ ಪ್ರಕರಣದ ಹೆಸರನ್ನೂ ದಾಖಲಿಸದೆ ವಿಳಂಬ ವಿನಾಯಿತಿ ಅರ್ಜಿಯನ್ನು ಕೇಳಿದ್ದು, ಅದನ್ನು ಒಂದೆ ವಾಕ್ಯದಲ್ಲಿ ಎಲ್ಲ ಪ್ರಕರಣದಲ್ಲಿಯೂ ವಿಳಂಬ ವಿನಾಯಿತಿ ನೀಡಲಾಗಿದೆ ಎಂದು ಆದೇಶಿಸಲಾಗಿತ್ತು. ಇದನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ವಿಳಂಬ ವಿನಾಯಿತಿ ಕೊಟ್ಟಿದ್ದನ್ನು ತಿರಸ್ಕರಿಸಿ, ಪ್ರತಿಯೊಬ್ಬ ಸಾಲಗಾರನಿಗೂ ಪ್ರತ್ಯೇಕ ಅರ್ಜಿ ಸ್ವೀಕರಿಸಿ, ಸ್ವೀಕಾರಾರ್ಹವೆಂದು ಅಭಿಪ್ರಾಯಕ್ಕೆ ಬಂದ ನಂತರವೆ ವಿಳಂಬ ವಿನಾಯಿತಿಗೆ ಆದೇಶಿಸಲಾಗಿತ್ತು. ಈ ಮೇಲ್ಕಂಡ ಉದಾಹರಣೆಯಲ್ಲಿ ಅರ್ಥೈಸಬೇಕಾದ ವಿಷಯವೇನೆಂದರೆ, 15–20 ವರ್ಷ ವಿಳಂಬವಾಗಿರುವುದಕ್ಕೆ ಸಕಾರಣಗಳಿರಲಿಲ್ಲ. ಎರಡನೆಯದಾಗಿ, ಪ್ರತಿಯೊಬ್ಬ ಸಾಲಗಾರನ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಪ್ರಮಾಣ ಪತ್ರವನ್ನು ದಾಖಲಿಸಿಲ್ಲ. ಮೂರನೆಯದಾಗಿ, ವಿಳಂಬ ವಿನಾಯಿತಿ ಅರ್ಜಿಯಲ್ಲಿ ಸಾಲಗಾರರ ಹೆಸರನ್ನೂ ನಮೂದಿಸದೆ ವಿಳಂಬ ವಿನಾಯಿತಿ ಕೇಳುವುದು ತಪ್ಪು. ನಾಲ್ಕನೆಯದಾಗಿ, ಒಂದೇ ವಾಕ್ಯದ ಆದೇಶದನ್ವಯ ಸಮರ್ಪಕವಾಗಿ ಪ್ರಕರಣವನ್ನು ವಿಚಾರಣೆ ಮಾಡದೆ ವಿಳಂಬ ವಿನಾಯಿತಿ ಕೊಟ್ಟಿರುವುದು ತಪ್ಪು.

ಪ್ರತಿಯೊಂದು ಪ್ರಕರಣದಲ್ಲಿಯೂ ವಿಳಂಬ ವಿನಾಯಿತಿಯ ಅರ್ಜಿಯ ಜೊತೆ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಆ ಪ್ರಮಾಣ ಪತ್ರದಲ್ಲಿ ಯಾವ ಕಾರಣಕ್ಕಾಗಿ ವಿಳಂಬವಾಯಿತು, ಎಂಬುದನ್ನು ಪ್ರಾಮಾಣಿಕವಾಗಿ ವಿವರಿಸಬೇಕು. ಮೇಲೆ ಸೂಚಿಸಿದ ಯಾವುದಾದರೂ ಒಂದು ಪ್ರಮುಖ ಕಾರಣವಾದರೂ ಇರಬೇಕು. ಕಾರಣಾಂತರಗಳಿಂದ ವಿಳಂಬ ವಿನಾಯಿತಿ ಇದ್ದರೂ, ವಿಳಂಬ ವಿನಾಯಿತಿ ಅರ್ಜಿ ಇರಲಾರದೇ ಅಥವಾ ವಿಳಂಬ ವಿನಾಯಿತಿ ಕೊಡಲಾರದೆ ಪ್ರಕರಣವನ್ನು ಸ್ವೀಕರಿಸಿ, ವಿಚಾರಣೆ ಮಾಡಿ, ತೀರ್ಪಿದ್ದರೆ ಅಂತಹ ತೀರ್ಪು ಸಿಂಧುವಾಗತಕ್ಕದ್ದಲ್ಲ. ವಿಳಂಬ ವಿನಾಯಿತಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಯಾವ ಪ್ರಕರಣದಲ್ಲಿ ವಿಳಂಬ ವಿನಾಯಿತಿ ಕೇಳಲಾಗಿದೆಯೊ, ಆ ಪ್ರಕರಣಕ್ಕೆ ಸಂಬಂಧಪಟ್ಟ ವ್ಯಕ್ತಿಗಳಿಗೆ, ಆ ಅರ್ಜಿಯ ಬಗ್ಗೆ ತಕರಾರಿದ್ದರೆ, ಸಲ್ಲಿಸಲು ಎದುರು ಅರ್ಜಿದಾರರಿಗೆ ನೋಟೀಸು ಕೊಡತಕ್ಕದ್ದು. ಅಂದರೆ ಪ್ರತಿಯೊಂದು ಪ್ರಕರಣದಲ್ಲಿಯೂ ಎರಡೂ ಪಕ್ಷಗಳನ್ನು ಕೇಳಿ ವಿಳಂಬ ವಿನಾಯಿತಿ ಅರ್ಜಿಯ ಆದೇಶ ಮಾಡಬೇಕು. ಪ್ರಕರಣ ವಿಚಾರಣೆ ಮಾಡುವ ಸಂದರ್ಭದಲ್ಲಿ ವಿಳಂಬ ವಿನಾಯಿತಿ ಬಗ್ಗೆ ಪ್ರಶ್ನೆ ಉದ್ಭವಿಸಿದಾಗ, ಆ ಪ್ರಶ್ನೆಗೆ ತೀರ್ಮಾನ ಮಾಡುವ ಅಧಿಕಾರ ನಿಬಂಧಕರಿಗೆ ಮಾತ್ರ ಇರತಕ್ಕದ್ದು. ಮಧ್ಯಸ್ಥದಾರರಿಗೆ ಆ ಅಧಿಕಾರ ಇರತಕ್ಕದ್ದಲ್ಲ.

**ತೀರ್ಪುಗಳು:**

1. ಎಲ್ಲ ದಾವಾ ಪ್ರಕರಣಗಳನ್ನು ವ್ಯವಹಾರ ದಿನದಿಂದ 6 ವರ್ಷದೊಳಗಾಗಿ ದಾಖಲಿಸಬೇಕು. ಇದು ಪೂರ್ವಾನ್ವಯವಾಗಿ ಜಾರಿಯಾಗತಕ್ಕದ್ದು. 1976(2) ಕೆಎಲ್‌ಜೆ 62.

2. ಯಾವ ಪ್ರಕರಣದಲ್ಲಿ ಒಂದು ಫರ್ಮನ್ನು ಗ್ಯಾರಂಟಾರ್ ಎಂದು ಇದ್ದ ಸಂದರ್ಭದಲ್ಲಿ, ಆ ಫರ್ಮಿನ ಎಲ್ಲ ಪಾಲುದಾರರನ್ನು 6 ವರ್ಷದೊಳಗಾಗಿ ಕಕ್ಷಿದಾರರೆಂದು ಸೇರಿಸಬೇಕು. 1987(1) ಕೆಎಲ್‌ಜೆ 291.

3. ಕಂತುಗಳ ಮರುಪಾವತಿಗೆ ಸುಸ್ತಿದಾರರಾದರೆ ತುರ್ತಾಗಿ ದಾವಾ ದಾಖಲಿಸಬಹುದು ಅಥವಾ ಸಾಲದ ಅವಧಿಯವರೆವಿಗೆ ಕಾಯಬಹುದು. 1990(3) ಕೆಎಲ್‌ಜೆ 152

4. ವಿಳಂಬ ವಿನಾಯಿತಿ ಅರ್ಜಿಯನ್ನು ಸಕಾರಣಗಳಿದ್ದರೆ ವಿನಾಯಿತಿ ನೀಡಬಹುದು. ಇಂತಹ ವಿನಾಯಿತಿ ಚುನಾವಣೆಗೆ ಸಂಬಂಧಪಟ್ಟ ದಾವಾ ಪ್ರಕರಣವೂ ಸೇರತಕ್ಕದ್ದು. ಐಎಲ್‌ಆರ್ 1994(2) ಕೆಎಆರ್ 1029 (ಡಿಬಿ)

# ಅಧ್ಯಾಯ – 6.7
# ದಾವಾ ಪ್ರಕರಣ ಇತ್ಯರ್ಥ

ಕಲಂ.41 : ವಿವಾದಗಳ ವಿಲೆ :

(1) "ಎಜಿಸ್ಟ್ರಾರನು, 39ನೇ ಪ್ರಕರಣದ ಅಡಿಯಲ್ಲಿ ಕಳುಹಿಸಲಾದ ಒಂದು ವಿವಾದವನ್ನು ಸ್ವೀಕರಿಸಿದ ನಂತರ,

(ಎ) ತಾನೇ ವಿವಾದವನ್ನು ತೀರ್ಮಾನಿಸಬಹುದು; ಅಥವಾ

(ಬಿ) ಸರ್ಕಾರವು ಈ ಸಂಬಂಧದಲ್ಲಿ ಅಧಿಕಾರಗಳನ್ನು ನಿಹಿತಗೊಳಿಸಲಾಗಿರುವ ಯಾವೊಬ್ಬ ವ್ಯಕ್ತಿಗೆ ವಿಲೆಗಾಗಿ ವರ್ಗಾಯಿಸಬಹುದು; ಅಥವಾ

(ಸಿ) ರಿಜಿಸ್ಟ್ರಾರನು ನೇಮಕ ಮಾಡಿದ ಮಧ್ಯಸ್ಥಗಾರನಿಗೆ ವಿಲೆಗಾಗಿ ಕಳುಹಿಸಬಹುದು.

(2) ರಿಜಿಸ್ಟ್ರಾರನು, (1)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ವರ್ಗಾಯಿಸಿದ ಯಾವುದೇ ವಿವಾದವನ್ನು ಅಥವಾ ಆ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಕಳುಹಿಸಲಾದ ಯಾವುದೇ ವಿವಾದವನ್ನು ಹಿಂತೆಗೆದು ಕೊಳ್ಳಬಹುದು ಮತ್ತು ತಾನೇ ತೀರ್ಮಾನಿಸಬಹುದು.

(3) ಎಜಿಸ್ಟ್ರಾರನು ಅಥವಾ ಈ ಪ್ರಕರಣದ ಅಡಿಯಲ್ಲಿ ಒಂದು ವಿವಾದವನ್ನು ಯಾವೊಬ್ಬ ಇತರ ವ್ಯಕ್ತಿಗೆ ತೀರ್ಮಾನಕ್ಕಾಗಿ ಕಳುಹಿಸಲಾಗಿದೆಯೊ ಅಂಥ ಇತರ ವ್ಯಕ್ತಿಯು, ವಿವಾದದ ಬಗ್ಗೆ ತೀರ್ಮಾನಕ್ಕೈಗೊಳ್ಳುವವರೆಗೆ, ನ್ಯಾಯದ ಹಿತದೃಷ್ಟಿಯಿಂದ ತಾನು ಅಗತ್ಯವೆಂದು ಭಾವಿಸಬಹುದಾದಂಥ ಮಧ್ಯಕಾಲೀನ ಆದೇಶಗಳನ್ನು ಹೊರಡಿಸಬಹುದು.

(4) (1)ನೇ ಉಪಪ್ರಕರಣದ (ಸಿ) ಖಂಡದ ಅಡಿಯಲ್ಲಿ ಒಂದು ವಿವಾದವನ್ನು ಒಬ್ಬ ಮಧ್ಯಸ್ಥಗಾರನಿಗೆ ಕಳುಹಿಸಿದ್ದರೆ, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಮಧ್ಯಸ್ಥಗಾರನಿಗೆ ಸಂದಾಯ ಮಾಡಬೇಕಾದ ಶುಲ್ಕ ಮತ್ತು ರಿಜಿಸ್ಟ್ರಾರನಿಗೆ ಸಂದಾಯ ಮಾಡಬೇಕಾದ ಶುಲ್ಕ ಮತ್ತು ಖರ್ಚುಗಳನ್ನು ಅವಾರ್ಡ್ ಒಳಗೊಳ್ಳತಕ್ಕದ್ದು. ಅಂಥ ಅವಾರ್ಡ್ ರಿಜಿಸ್ಟ್ರಾರನು ವಿವಾದವನ್ನು ತೀರ್ಮಾನ ಮಾಡಲು ನಿಗದಿ ಪಡಿಸಿದ ಅವಧಿಯ ಮುಕ್ತಾಯದ ನಂತರ ಮಾಡಲಾಗಿದೆಯೆಂಬ ಕಾರಣ ಮಾತ್ರಕ್ಕೆ ಅನೂರ್ಜಿತವಾಗತಕ್ಕದ್ದಲ್ಲ ಮತ್ತು ಅಪೀಲಿಗೆ ಒಳಪಟ್ಟು ವಿವಾದದ ಪಕ್ಷಕಾರರು ಅದಕ್ಕೆ ಬದ್ಧರಾಗಿರತಕ್ಕದ್ದು.

(5) 39ನೇ ಪ್ರಕರಣದಲ್ಲಿ ಏನೇ ಇದ್ದರೂ, ಸದರಿ ಪ್ರಕರಣದ (1)ನೇ ಉಪಪ್ರಕರಣದ (ಎ) ಅಥವಾ (ಬಿ) ಖಂಡದ ಅಡಿಯಲ್ಲಿ ಯಾವುದೇ ವಿವಾದವನ್ನು ತೀರ್ಮಾನಕ್ಕಾಗಿ ರಿಜಿಸ್ಟ್ರಾರನಿಗೆ ಕಳುಹಿಸಲಾರದೆ ಮತ್ತು ಸಂಬಂಧಪಟ್ಟ ಸಹಕಾರಿಯು ಅಥವಾ ಸಂಯುಕ್ತ ಸಹಕಾರಿಯು ಸಲ್ಲಿಸಿದ ಅರ್ಜಿಯ ಮೇರೆಗೆ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಹಿತಾಸಕ್ತಿಯಲ್ಲಿ, ತನ್ನ ಮುಂದಿರುವ ವ್ಯವಹರಣೆಗಳಲ್ಲಿ ಪಕ್ಷಕಾರನನ್ನಾಗಿ ಸೇರಿಸುವುದು ಸಾಧ್ಯವಿಲ್ಲದ ವ್ಯಕ್ತಿಗಳನ್ನು ವಿವಾದದ ಪಕ್ಷಕಾರರನ್ನಾಗಿ ಸೇರಿಸುವುದು ವಿವಾದದ ಪರಿಣಾಮಕಾರಿ ತೀರ್ಮಾನಕ್ಕೆ ಅಗತ್ಯವೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅವನು, ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ಸಹಕಾರಿಗೆ ಅಥವಾ ಸಂಯುಕ್ತ ಸಹಕಾರಿಗೆ ಅನುಮತಿ ನೀಡಬಹುದು ಮತ್ತು ಸಿವಿಲ್ ನ್ಯಾಯಾಲಯವು ಅಂಥ ದಾವೆಯನ್ನು ಸ್ವೀಕರಿಸಲು ಸಕ್ಷಮವಾಗಿರತಕ್ಕದ್ದು."

ಸೌಹಾರ್ದ ಕಾಯಿದೆ ಕಲಂ 39ರನ್ವಯ ಹೂಡಿದ ದಾವಾ ಪ್ರಕರಣಗಳನ್ನು ವಿಳಂಬ ವಿನಾಯಿತಿ ಇದ್ದರೆ, ಅದರ ಆದೇಶದ ನಂತರ ನಿಬಂಧಕರು ಸ್ವೀಕಾರಾರ್ಹವಾದ ದಾವಾ ಪ್ರಕರಣಗಳನ್ನು ಕಲಂ.41(1)(ಎ&ಬಿ)(ಸಿ) ಅನ್ವಯ ಈ ಕೆಳಕಂಡಂತೆ ನಿರ್ಧರಿಸಬಹುದು.

1. ನಿಬಂಧಕರು ಪ್ರಕರಣ ದಾಖಲಿಸಿಕೊಂಡ ನಂತರ ಆ ಪ್ರಕರಣವನ್ನು ಅವರೇ ಇತ್ಯರ್ಥಪಡಿಸಬಹುದು.

2. ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ವಯ ಇತರ ಇಲಾಖಾಧಿಕಾರಿಗಳಿಗೆ ಆ ಪ್ರಕರಣವನ್ನು ವರ್ಗಾಯಿಸಬಹುದು.

3. ನಿಬಂಧಕರೇ ನೇಮಕ ಮಾಡಿದ ಮಧ್ಯಸ್ಥಗಾರರಿಗೆ ಇತ್ಯರ್ಥಪಡಿಸಲು ವರ್ಗಾಯಿಸಬಹುದು.

ಈ ರೀತಿ ವರ್ಗಾವಣೆ ಮಾಡಿದ ನಂತರ ಯಾವುದೇ ಪ್ರಕರಣವನ್ನು ನಿಬಂಧಕರು ವಾಪಸ್ ಪಡೆಯಬೇಕೆಂದು ತೀರ್ಮಾನಿಸಿದರೆ, ಆ ಪ್ರಕರಣ ವಾಪಸ್ ಪಡೆಯಬಹುದು ಅಥವಾ ಮತ್ತೊಬ್ಬರಿಗೆ ವರ್ಗಾಯಿಸಬಹುದು ಅಥವಾ ತಾನೇ ತೀರ್ಮಾನಿಸಬಹುದು. ಪ್ರಕರಣವನ್ನು ಇತ್ಯರ್ಥಪಡಿಸುವ ಸಂದರ್ಭದಲ್ಲಿ ಯಾವುದೇ ಅರ್ಜಿಗಳ ಮೇಲೆ ಮಧ್ಯಂತರ ಆದೇಶ ಹೊರಡಿಸುವ ಅಧಿಕಾರ ನಿಬಂಧಕರಿಗೆ ಇರತಕ್ಕದ್ದು. ನಿಬಂಧಕರು ಬೇರೆ ವ್ಯಕ್ತಿಗೆ ಪ್ರಕರಣವನ್ನು ವರ್ಗಾಯಿಸಿದಾಗ, ಅಂತಹ ಪ್ರಕರಣ ನಿಗಧಿಪಡಿಸಿದ ಕಾಲಾವಧಿಯೊಳಗೆ ಆದೇಶ ಮಾಡಲಾಗಿಲ್ಲವೆಂದು, ಅದೇ

ಕಾರಣಕ್ಕಾಗಿ ಆದೇಶವು ಅಸಿಂಧುವಾಗತಕ್ಕದ್ದಲ್ಲ. ಆದೇಶ ಹೊರಡಿಸಿದ ನಂತರ ಪ್ರತಿಯೊಬ್ಬ ಕಕ್ಷಿದಾರನು ಮೇಲ್ಮನವಿ ಮತ್ತು ಪುನರ್ ಪರಿಶೀಲನಾ ಅರ್ಜಿಗಳೊಪಟ್ಟು ಬದ್ಧನಾಗಿರತಕ್ಕದ್ದು. ಯಾವುದೇ ಸಂದರ್ಭದಲ್ಲಿ ಸಹಕಾರಿ ಹಿತದೃಷ್ಟಿಯಿಂದ ಪರಿಣಾಮಕಾರಿಯಾದ ತೀರ್ಮಾನವನ್ನು ಕೈಗೊಳ್ಳಲು ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ವರ್ಗಾಯಿಸಬಹುದೆಂದು ತೀರ್ಮಾನಿಸಿದಾಗ ಆ ವಿಷಯವನ್ನು ಸಿವಿಲ್ ನ್ಯಾಯಾಲಯಕ್ಕೆ ಕಲಂ.41(5) ರನ್ವಯ ವರ್ಗಾಯಿಸಲು ಆದೇಶಿಸಬಹುದು ಅಥವಾ ಅನುಮತಿ ನೀಡಬಹುದು.

ದಾವಾ ಪ್ರಕರಣವನ್ನು ಇತ್ಯರ್ಥಪಡಿಸುವಾಗ 31–3–2010 ವರೆಗೂ ಅವಧಿಯನ್ನು ನಿಗಧಿಪಡಿಸಿರಲಿಲ್ಲ. ಆ ದಿನಾಂಕದಿಂದ ಯಾವುದೇ ವಿವಾದವನ್ನು ನ್ಯಾಯಾಲಯಗಳ ತಡೆಯಾಜ್ಞೆ ಇಲ್ಲದಿದ್ದರೆ 12 ತಿಂಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ನಿಬಂಧಕರು ಸಕಾರಣಗಳನ್ನು ಕೊಟ್ಟು ಆ ಅವಧಿಯನ್ನು ಮತ್ತೆ 6 ತಿಂಗಳು ವಿಸ್ತರಿಸಬಹುದು. ಯಾವುದೇ ಕಾರಣಕ್ಕೂ ಒಂದು ವಿವಾದವನ್ನು ಸ್ವೀಕರಿಸಿದ ದಿನಾಂಕದಿಂದ 18 ತಿಂಗಳ ಅವಧಿಯೊಳಗೆ ತೀರ್ಮಾನಿಸಬೇಕು.

ದಾವ ಪ್ರಕರಣ ದಾಖಲು ಮಾಡುವಾಗ ಯಾವ ದಾಖಲೆಗಳ ಆಧಾರದ ಮೇಲೆ ಸಲ್ಲಿಸಬೇಕೆಂಬುದನ್ನು ಹಾಗೂ ಯಾವ ರೀತಿ ಸಲ್ಲಿಸಬೇಕೆಂಬುದನ್ನು ಈ ಕೆಳಕಂಡಂತೆ ಸೂಚಿಸಲಾಗಿದೆ.

1. ಪ್ರಕರಣವನ್ನು ಯಾರ ಮುಂದೆ ದಾಖಲಿಸಲಾಗುತ್ತಿದೆ ಎಂಬುದನ್ನು ತಲೆಬರಹದಲ್ಲಿ ನಮೂದಿಸತಕ್ಕದ್ದು.
2. ಪ್ರಕರಣವನ್ನು ದಾಖಲಿಸಲು ಇರುವ ಅಧಿಕಾರವನ್ನು ನಮೂದಿಸುವುದು.
3. ಪ್ರಕರಣವನ್ನು ಯಾರ ಮೇಲೆ ದಾಖಲಿಸಲಾಗಿದೆ? ಮತ್ತು ಅವರ ಅಂಚೆ ವಿಳಾಸ ದಾಖಲಿಸತಕ್ಕದ್ದು.
4. ಪ್ರತಿ ಪ್ರಕರಣದಲ್ಲಿ ಯಾವ ಕಾರಣದಿಂದ ಈ ಪ್ರಕರಣವನ್ನು ದಾಖಲಿಸಲಾಗುತ್ತಿದೆ ಎಂಬುದನ್ನು ಪೀಠಿಕೆ ರೂಪದಲ್ಲಿ ನಮೂದಿಸತಕ್ಕದ್ದು.
5. ಎದುರು ಅರ್ಜಿದಾರರು ಸಹಕಾರಿ ಸದಸ್ಯರಾಗಿದ್ದರೆ, ಅವರ ಸದಸ್ಯ ಸಂಖ್ಯೆಯನ್ನು ನಮೂದಿಸುವುದು ಮತ್ತು ಯಾವ ದಿನಾಂಕದಂದು ಸದಸ್ಯರಾಗಿದ್ದಾರೆಂದು ತಿಳಿಸುವುದು.
6. ಅರ್ಜಿದಾರರು ಮತ್ತು ಎದುರು ಅರ್ಜಿದಾರರ ಸಂಬಂಧಗಳನ್ನು ವಿವರಿಸುವುದು.
7. ಎದುರು ಅರ್ಜಿದಾರರ ಜೊತೆ ನಡೆದ ವ್ಯವಹಾರದ ವಿವರಗಳನ್ನು ನಮೂದಿಸುವುದು.
8. ಸುಸ್ತಿಯಾದ ಅಥವಾ ತಪ್ಪು ಮಾಡಿದ ವಿಷಯಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುವುದು.
9. ಸಹಕಾರಿ ಎದುರು ಅರ್ಜಿದಾರರಿಗೆ ಕೊಟ್ಟ ಕಾರಣ ಕೇಳುವ ನೋಟೀಸು ಅಥವಾ ಇನ್ನಾವುದೇ ರೂಪದ ಲಿಖಿತ ಸೂಚನೆಗಳನ್ನು ಲಗತ್ತಿಸುವುದು.
10. ಯಾವ ಆಧಾರದ ಮೇಲೆ ಪರಿಹಾರವನ್ನು ಕೇಳಲಾಗಿದೆ ಎಂಬುದನ್ನು ನಮೂದಿಸುವುದು.
11. ಪರಿಹಾರವನ್ನು ಈ ನ್ಯಾಯಾಲಯವು ಕೊಡುವ ಅಧಿಕಾರವನ್ನು ಪ್ರಸ್ತಾಪಿಸುವುದು.
12. ಪರಿಹಾರದ ವಿವರಗಳನ್ನು ನಿರೂಪಿಸುವುದು ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಲಗತ್ತಿಸುವುದು.

ಈ ಮೇಲ್ಕಂಡ ಅರ್ಜಿಯ ಆಧಾರದ ಮೇಲೆ ಪ್ರಕರಣಕ್ಕೆ ಸಂಬಂಧಪಟ್ಟ ಈ ಕೆಳಕಂಡ ದಾಖಲೆಗಳನ್ನು ಪ್ರಮಾಣೀಕರಿಸಿ ಲಗತ್ತಿಸತಕ್ಕದ್ದು.

1. ಪ್ರಕರಣ ದಾಖಲಿಸಲು ಅಧಿಕಾರ (ಕಲಂ 31(2) ರನ್ವಯ ಸಹಕಾರಿ ಪ್ರಕರಣ ದಾಖಲಿಸಬೇಕಾದರೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಧಿಕಾರ ಕೊಡಲಾಗಿದೆ)

2. ಪ್ರಕರಣಕ್ಕೆ ಸಂಬಂಧಪಟ್ಟಂತೆ ಎದುರು ಅರ್ಜಿದಾರರಿಗೆ ನೋಟೀಸು ಕೊಟ್ಟಿದ್ದರೆ ಅದರ ಒಂದು ಪ್ರತಿ.

3. ಸದಸ್ಯನು ಸಾಲ ಪಡೆದಿದ್ದರೆ,

ಎ) ಆ ಸಾಲ ಪಡೆಯುವುದಕ್ಕೆ ಕೊಟ್ಟ ಅರ್ಜಿ.

ಬಿ) ಆಡಳಿತ ಮಂಡಳಿ ಮಂಜೂರಿ ಮಾಡಿದ ದಿನಾಂಕ ಮತ್ತು ಮೊತ್ತ.

ಸಿ) ಬಿಡುಗಡೆ ಮಾಡಿದ ದಿನಾಂಕ ಮತ್ತು ಮೊತ್ತ.

ಡಿ) ಬಿಡುಗಡೆ ಚೆಕ್ ಮುಖಾಂತರವೋ? ನಗದೋ? ಚೆಕ್ ಮುಖಾಂತರವಾಗಿದ್ದರೆ ಚೆಕ್ ಸಂಖ್ಯೆ, ನಗದಾಗಿದ್ದರೆ ಹಣ ಸಂದಾಯ ರಶೀದಿ ಅಥವಾ ಅವನ ಎಸ್‌ಬಿ ಖಾತೆಗೆ ಜಮಾ ಆದ ದಿನಾಂಕ.

ಇ) ಮರುಪಾವತಿ ಮಾಡಲು ನಿಗಧಿಪಡಿಸಿದ ದಿನಾಂಕ.

ಈ) ಸುಸ್ತಿಗೆ ನೋಟೀಸು ಕೊಟ್ಟ ದಿನಾಂಕ.

ಉ) ಮರುಪಾವತಿ ಮಾಡಿದ್ದರೆ ಅದರ ವಿವರಗಳು.

ಊ) ಬಾಕಿಇರುವ ಬಗ್ಗೆ ಖಾತೆಯ ಉದ್ಧೃತ ಭಾಗ.

ಎ) ಈ ಪ್ರಕರಣಕ್ಕೆ ಸಂಬಂಧಪಟ್ಟ ಹೆಚ್ಚುವರಿ ದಾಖಲೆಗಳು ಮತ್ತು ಸಾಕ್ಷಿಗಳು.

4. ಸಾಲೇತರ ವ್ಯವಹಾರವಾಗಿದ್ದರೆ ಅಂದರೆ ಚುನಾವಣೆ ಸಂಬಂಧ ಅಥವಾ ಹಣದುರುಪಯೋಗ ಸಂಬಂಧವಿದ್ದರೆ, ಅವುಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ಮೇಲ್ಕಂಡ ರೂಪದಲ್ಲಿಯೆ ನಿಬಂಧಕರ ಮುಂದೆ ದಾಖಲೆ, ಸಾಕ್ಷಿ ಮತ್ತು ಪ್ರಮಾಣ ಪತ್ರದ ಜೊತೆ ಸಲ್ಲಿಸುವುದು.

ಪ್ರಕರಣವನ್ನು ಸ್ವೀಕರಿಸಿದ ನಂತರ ನೋಟೀಸ್ ಜಾರಿ ಮಾಡುವ ಬಗ್ಗೆ ನಿಯಮ 12(3)ರಲ್ಲಿ ನಿಗಧಿಪಡಿಸಿದ ರೀತಿಯಲ್ಲಿ ಜಾರಿ ಮಾಡುವ ಬಗ್ಗೆ ಈಗಾಗಲೇ ವಿವರಿಸಲಾಗಿದೆ. ಮತ್ತು ಅದಕ್ಕೆ ಸಂಬಂಧಪಟ್ಟಂತೆ ಕಕ್ಷಿದಾರ ಮತ್ತು ಸಾಕ್ಷಿಗಳ ವಿಚಾರಣೆ ಮಾಡುವಾಗ ನಿಯಮ 11(3)(ಎ) ರಂತೆ  ರೂಪಿಸಿರುವ ನೀತಿ, ನಿಯಮಗಳನ್ನು ಈಗಾಗಲೇ ವಿವರಿಸಲಾಗಿದೆ.

ಹಣದುರುಪಯೋಗದ ಪ್ರಕರಣ, ಸೇವಾ ನಿಯಮ ಮತ್ತು ಚುನಾವಣೆ ಪ್ರಕರಣಗಳಲ್ಲಿ ವಾದಗಳನ್ನು ಸಮರ್ಥ ರೀತಿಯಲ್ಲಿ ಮಂಡಿಸಲು ಕಕ್ಷಿದಾರರು ಅಶಕ್ತರಾದಾಗ, ಅವರಿಗೆ ವಕೀಲರ ಸಹಾಯ ಕೊಡಬಹುದೆಂದು ಮತ್ತು ಅಂತಹ ಪ್ರಸಂಗಗಳಲ್ಲಿ ವಿವಾದಾಂಶಗಳ ಬಗ್ಗೆ ಪ್ರಶ್ನೆಗಳನ್ನು ರೂಪಿಸಿ, ಅದಕ್ಕೆ ಪೂರಕವಾಗಿ ದಾಖಲೆ ಮತ್ತು ಪುಸ್ತಕಗಳನ್ನು ಪರಿಶೀಲಿಸಿ, ಪರಿಹಾರ ನೀಡಬೇಕು. ಹಣದುರುಪಯೋಗದ ಪ್ರಸಂಗಗಳಲ್ಲಿ ಯಾವ ದಿನಾಂಕದಂದು, ಎಷ್ಟು ಹಣದುರುಪಯೋಗವಾಗಿದೆ ಮತ್ತು ಯಾರು ಮಾಡಿದ್ದಾರೆ ಮತ್ತು ಆ ದುರುಪಯೋಗಕ್ಕೆ ಕಾರಣರಾರು ಎಂಬ ಬಗ್ಗೆ ಸ್ಪಷ್ಟವಾಗಿ ದಾಖಲೆಗಳನ್ನು ಪರಿಶೀಲಿಸತಕ್ಕದ್ದು. ಚುನಾವಣೆಗೆ ಸಂಬಂಧಪಟ್ಟಂತೆ, ಚುನಾವಣೆ ನಡೆದ ದಿನಾಂಕದಂದು ಮತ ಚಲಾಯಿಸಿದ ಸದಸ್ಯರು, ಮತ ಎಣಿಕೆ, ಮತಗಳ ವ್ಯತ್ಯಾಸ, ಅಂತಹ ಮತಗಳ ವ್ಯತ್ಯಾಸದಿಂದ ಚುನಾವಣೆಯಲ್ಲಿ ಆಯ್ಕೆಯಾದ ವ್ಯಕ್ತಿ ಮತ್ತು ಸೋತ ವ್ಯಕ್ತಿಯ ಮಧ್ಯೆ, ಅತಿ ಕಡಿಮೆ ವ್ಯತ್ಯಾಸವಿದೆಯೇ ಮತ್ತು ಅಂತಹ ಪ್ರಸಂಗದಲ್ಲಿ ಫಲಿತಾಂಶದ ಮೇಲೆ ಯಾವ ಪರಿಣಾಮ ಬೀರಿದೆ ಎಂಬುದನ್ನು ಪರಿಶೀಲಿಸತಕ್ಕದ್ದು. ಉದಾಹರಣೆಗೆ: ಒಂದು ಅಥವಾ ಎರಡು ಮತಗಳಿಂದ ಸೋತ ವ್ಯಕ್ತಿ, ದಾವಾ ಪ್ರಕರಣ ದಾಖಲು ಮಾಡಿದ್ದರೆ, ಹಾಗೂ ತಿರಸ್ಕೃತ ಮತಗಳು 8 ಅಥವಾ 10 ಇದ್ದರೆ ಅಥವಾ ಮತ ಎಣಿಕೆಯ ಸಂದರ್ಭದಲ್ಲಿ ಬೇಕೆಂದು ವ್ಯತ್ಯಾಸ ಮಾಡಿದ್ದರೆ, ತೀರ್ಮಾನಕ್ಕೆ ಬರುವ ಸಂದರ್ಭದಲ್ಲಿ ವಾದ, ಪ್ರತಿವಾದ ಮಂಡನೆಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಬೇಕು. ನ್ಯಾಯಾಲಯಕ್ಕೆ ನಂಬಿಕೆ ಬರುವ ರೀತಿಯಲ್ಲಿ ವಾದ ಮಂಡಿಸಿದಾಗ ವಿವಾದಾಂಶದ ಬಗ್ಗೆ ತೀರ್ಪು ಕೊಡಲು ಸಹಕಾರಿಯಾಗುತ್ತದೆ.

ನಿಬಂಧಕರು ಅಥವಾ ಮಧ್ಯಸ್ಥಗಾರರು ಅಥವಾ ಇಲಾಖಾಧಿಕಾರಿ ಪ್ರಕರಣವನ್ನು ಇತ್ಯರ್ಥಕ್ಕಾಗಿ ಸ್ವೀಕರಿಸಿದಾಗ, ಅನುಸರಿಸಬೇಕಾದ ಕೆಲವು ಪೂರ್ವ ನಿರ್ಧರಿತ ವಿಷಯಗಳು:

k. ಪ್ರಕರಣಕ್ಕೆ ಸಂಬಂಧಪಟ್ಟ ವ್ಯಕ್ತಿಗಳನ್ನು ಸಮನ್ಸ್ ಮೂಲಕ ಹಾಜರಾಗಲು ಆದೇಶಿಸುವುದು.

2. ವಿಷಯಕ್ಕೆ ಸಂಬಂಧಪಟ್ಟ ಸಾಕ್ಷಿಗಳಿಗೆ ಸಮನ್ಸ್ ಹೊರಡಿಸಿ, ಹಾಜರಾಗಿ ಹೇಳಿಕೆ ಕೊಡಲು ಸೂಚಿಸುವುದು.

3. ಕಕ್ಷಿದಾರರು ಅಥವಾ ಸಾಕ್ಷಿದಾರರು ತಮ್ಮ ಹೇಳಿಕೆಗಳನ್ನು ಪ್ರಮಾಣ ವಚನ ಸ್ವೀಕರಿಸಿ, ಹೇಳಿಕೆ ದಾಖಲಾದ ನಂತರ, ಆ ಹೇಳಿಕೆಗೆ ಸಹಿ ಮಾಡತಕ್ಕದ್ದು.

4. ಪ್ರತಿಯೊಬ್ಬ ಕಕ್ಷಿದಾರ ಅಥವಾ ಸಾಕ್ಷಿದಾರ ಪ್ರತಿಜ್ಞಾ ಪತ್ರದ ಆಧಾರದ ಮೇಲೆ ಲಿಖಿತ ಹೇಳಿಕೆಯ ಮೂಲಕ ಸಾಕ್ಷ್ಯವನ್ನು ಕೊಡಲು

ಒತ್ತಾಯಪಡಿಸುವುದು.

5. ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳ ಪ್ರಮಾಣೀಕೃತ ಪ್ರತಿಯನ್ನು ಸಲ್ಲಿಸಲು ಆದೇಶಿಸಬಹುದು.

ಪ್ರತಿಯೊಂದು ಪ್ರಕರಣದಲ್ಲಿಯೂ ದಾವಾ ಪ್ರಕರಣಕ್ಕೆ ಒಳಗಾದ ವ್ಯಕ್ತಿ ಸದಸ್ಯನೇ ಅಲ್ಲವೇ ಅಥವಾ ಪ್ರಕರಣ ಸ್ವೀಕಾರಾರ್ಹವೇ ಅಲ್ಲವೇ ಅಥವಾ ವಿಳಂಬವಾಗಿದ್ದರೆ ವಿಳಂಬ ವಿನಾಯಿತಿ ನೀಡಲಾಗಿದೆಯೆ? ಅಥವಾ ಆಂತರಿಕ ಅರ್ಜಿಯನ್ನು ಸಲ್ಲಿಸಿ, ಆ ಅರ್ಜಿಗೆ ಆದೇಶ ಮಾಡಲಾಗಿದೆಯೆ? ಅಥವಾ ಈ ಪ್ರಕರಣವು ಈ ಪ್ರಾಧಿಕಾರದ ಮುಂದೆ ದಾಖಲಾರ್ಹವೇ, ಅಲ್ಲವೇ ಎಂಬುದನ್ನು ನಿಬಂಧಕರು ಮಾತ್ರ ತೀರ್ಮಾನಿಸತಕ್ಕದ್ದು. ಉಳಿದಂತೆ ವಿಚಾರಣೆ ಮಾಡುವ ಸಂದರ್ಭದಲ್ಲಿ ಸಲ್ಲಿಸಲಾಗುವ ಅರ್ಜಿಗಳು, ಹೆಚ್ಚುವರಿ ಸಾಕ್ಷಿಗಳನ್ನು ಕರೆಸುವ ಬಗ್ಗೆ ಅಥವಾ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸುವ ಬಗ್ಗೆ ಅಥವಾ ದಾಖಲೆಗಳನ್ನು ಹಾಜರುಪಡಿಸುವ ಬಗ್ಗೆ ಇದ್ದರೆ, ಅಂತಹ ಅರ್ಜಿಗಳನ್ನು ಮಧ್ಯಸ್ಥಗಾರರೇ ವಿಚಾರಣೆ ಮಾಡಿ, ತೀರ್ಮಾನಿಸಿ, ಆದೇಶಿಸಬಹುದು. ಇದಕ್ಕೆ ಪೂರಕವಾಗಿ ಯಾವುದೇ ಪ್ರಕರಣದಲ್ಲಿ ಸಹಕಾರಿಯ ಕಕ್ಷಿದಾರರನ್ನಾಗಿ ಮಾಡದೇ ಇದ್ದ ಪಕ್ಷದಲ್ಲಿ ಆಂತರಿಕ ಅರ್ಜಿಯನ್ನು ಸಲ್ಲಿಸಿ, ಕಕ್ಷಿದಾರರನ್ನಾಗಿ ಮಾಡಬೇಕೆಂದು ಮನವಿ ಸಲ್ಲಿಸಿದಾಗ, ಅಂತಹ ಅರ್ಜಿಯನ್ನು ಪುರಸ್ಕರಿಸಲು ಮಧ್ಯಸ್ಥದಾರರಿಗೆ ಅಧಿಕಾರ ಇರತಕ್ಕದ್ದು. ಏಕೆಂದರೆ ಯಾವುದೇ ಸಹಕಾರಿ ಮೇಲೆ ಅಥವಾ ವಿರುದ್ಧವಾಗಿ ದಾವಾ ಪ್ರಕರಣ ದಾಖಲಾಗಿದ್ದರೆ ಅಥವಾ ಯಾವುದೇ ಪ್ರಕರಣದಲ್ಲಿ ಸದಸ್ಯರು –ಸದಸ್ಯರ ಮಧ್ಯೆ, ನಿರ್ದೇಶಕರು–ಸದಸ್ಯರ ಮಧ್ಯೆ, ನೌಕರರು–ಸದಸ್ಯರ ಮೇಲೆ, ಮತ್ತಿತರೆ ಪ್ರಕರಣ ದಾಖಲಿಸಿದಾಗ ಆ ಪ್ರಕರಣಗಳಲ್ಲಿ ಹೊರಡಿಸಿದ ಆದೇಶಗಳನ್ನು ಜಾರಿ ಮಾಡುವ ಜವಾಬ್ದಾರಿ ಸಹಕಾರಿ ಮಂಡಳಿಯಾದ್ದರಿಂದ, ಆ ಸಹಕಾರಿಯನ್ನು ಕಕ್ಷಿದಾರರನ್ನಾಗಿ ಮಾಡುವುದು ಅತಿ ಅವಶ್ಯಕ.

ಒಂದು ಪ್ರಕರಣವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ, ಆ ದಾವಾ ಪ್ರಕರಣದಲ್ಲಿ ಇರುವ ಆಸ್ತಿ ಅಥವಾ ಹಕ್ಕುಗಳ ಮೇಲೆ ಮತ್ತಾವುದೇ ವ್ಯಕ್ತಿಯ ಹಿತಾಸಕ್ತಿ ಅಡಗಿದ್ದರೆ, ಅಂತಹ ಪ್ರಕರಣಗಳಲ್ಲಿ ಆ ವ್ಯಕ್ತಿಯನ್ನೂ ಸಹ ಕಕ್ಷಿದಾರರನ್ನಾಗಿ ಮಾಡಬೇಕೆಂದು ಮನವಿ ಸಲ್ಲಿಸಿದಾಗ, ಅಂತಹ ವ್ಯಕ್ತಿಯು ಪ್ರಕರಣಕ್ಕೆ ಸಂಬಂಧಪಟ್ಟ ಆಸ್ತಿ ಮೇಲೆ ಹಕ್ಕಿರುವುದರಿಂದ, ಅವರನ್ನು ಕಕ್ಷಿದಾರರನ್ನಾಗಿ ಮಾಡುವುದು ಅವಶ್ಯಕ. ಅಂತಹ ಆದೇಶವನ್ನು ಮಧ್ಯಸ್ಥಗಾರರೇ ಹೊರಡಿಸಬಹುದು. ಅದೇ ರೀತಿ ಯಾವುದಾದರೂ ಕಕ್ಷಿದಾರರನ್ನು ಅವಶ್ಯಕವಿಲ್ಲದೇ ಇದ್ದರೂ ಕಕ್ಷಿದಾರರನ್ನಾಗಿ ಮಾಡಿದ್ದರೆ, ಅಂತಹ ವ್ಯಕ್ತಿಗಳನ್ನು ವಿಚಾರಣೆ ಮಾಡಿ ಕೈಬಿಡಬೇಕೆಂದು ತೀರ್ಮಾನಕ್ಕೆ ಬಂದಾಗ, ಅಂತಹ ವ್ಯಕ್ತಿಗಳನ್ನು ಪ್ರಕರಣದಿಂದ ಕೈಬಿಡಲೂ ಸಹ ಮಧ್ಯಸ್ಥಗಾರರಿಗೆ ಅಧಿಕಾರ ಇರತಕ್ಕದ್ದು.

ಅಂದರೆ ಯಾವುದಾದರೂ ವ್ಯಕ್ತಿಯನ್ನು ಅವಶ್ಯಕತೆ ಇಲ್ಲದೇ ಇದ್ದರೂ, ಕಕ್ಷಿದಾರರನ್ನಾಗಿ ಮಾಡಿದ್ದರೆ, ಅಂತಹ ವ್ಯಕ್ತಿಗಳನ್ನು ಕೈಬಿಡುವುದು ಅಥವಾ ಯಾವುದೆ ಪ್ರಕರಣದಲ್ಲಿ ಅವಶ್ಯಕವಿರುವ ವ್ಯಕ್ತಿಯನ್ನು ಕಕ್ಷಿದಾರರನ್ನಾಗಿ ಮಾಡದೇ ಇದ್ದ ಸಂದರ್ಭದಲ್ಲಿ, ಅಂತಹ ವ್ಯಕ್ತಿಯನ್ನು ಸೇರಿಸಿಕೊಳ್ಳುವುದು ಅತಿ ಅವಶ್ಯಕ. ಏಕೆಂದರೆ ಯಾವುದೇ ಪ್ರಕರಣವನ್ನು ಪರಿಣಾಮಕಾರಿಯಾಗಿ ಮತ್ತು ಪೂರ್ತಿಯಾಗಿ ತೀರ್ಮಾನಿಸಲು ಅಥವಾ ಇತ್ಯರ್ಥಪಡಿಸಲು, ಅಂತಹ ವ್ಯಕ್ತಿ ಅವಶ್ಯಕತೆ ಇದ್ದರೆ ಅಥವಾ ಇಲ್ಲದೆ ಇದ್ದರೆ ಅಂತಹ ವ್ಯಕ್ತಿಯನ್ನು ಸೇರಿಸುವುದು ಅಥವಾ ಸೇರಿಸದೇ ಇರುವುದು, ಅವಶ್ಯಕ ಅಥವಾ ಅನಾವಶ್ಯಕ ಎಂಬ ತೀರ್ಮಾನ ಕೈಗೊಂಡು, ಅಂತಹ ವ್ಯಕ್ತಿಯನ್ನು ಸೇರಿಸಿಕೊಳ್ಳುವುದು ಅಥವಾ ಕೈಬಿಡುವುದು ಮಧ್ಯಸ್ಥದಾರನ ಅಧಿಕಾರ.

ಒಂದು ಪ್ರಕರಣವನ್ನು ವಿಚಾರಣೆಗೆ ಸ್ವೀಕರಿಸಿದ ನಂತರ, ಆ ಪ್ರಕರಣದಲ್ಲಿ ಕೇಳಿದ ಪರಿಹಾರಕ್ಕೆ ಹೊಸದಾಗಿ ಹೆಚ್ಚುವರಿ ಪರಿಣಾಮಗಳನ್ನು ಕೇಳಿ ಅರ್ಜಿ ಸಲ್ಲಿಸಿದಾಗ, ಅಂತಹ ಪರಿಹಾರಗಳು ಮೂಲ ದಾವಾ ಪ್ರಕರಣಕ್ಕೆ ಪೂರಕವಲ್ಲದ ಪರಿಹಾರಗಳಾಗಿರತಕ್ಕದ್ದಲ್ಲ. ಅಂದರೆ ಪ್ರಕರಣದ ಮೂಲ ಸ್ವರೂಪವನ್ನೇ ಬದಲಾಯಿಸುವ ಪರಿಹಾರಗಳನ್ನು ಆಂತರಿಕ ಅರ್ಜಿಗಳ ಮುಖಾಂತರ ಸಲ್ಲಿಸಿ ಮಾರ್ಪಡಿಸಲಾಗದು. ಉದಾಹರಣೆಗೆ: ಮೂಲ ಅರ್ಜಿಯಲ್ಲಿ ಅಮಾನತ್ತು ಭತ್ಯೆ ಕೊಡುತ್ತಿಲ್ಲವೆಂದು ಮತ್ತು ಕೊಡಿಸಬೇಕೆಂದು ಪರಿಹಾರ ಕೇಳಿದಾಗ, ವಿಚಾರಣೆ ನಡೆಯುವ ಸಮಯದಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ, ಅಮಾನತ್ತು ಮಾಡಿರುವುದೇ ತಪ್ಪು ಹಾಗೂ ನನ್ನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ಅರ್ಜಿ ಸಲ್ಲಿಸತಕ್ಕದ್ದಲ್ಲ. ಏಕೆಂದರೆ ಅದು ಮೂಲ ಪರಿಹಾರದ ರೂಪವನ್ನೇ ಬದಲಾಯಿಸುತ್ತದೆ. ಅಂತಹ ಪ್ರಶ್ನೆ ಉದ್ಭವಿಸಿದಾಗ, ಅದಕ್ಕೆ ಪರಿಹಾರವೆಂದರೆ, ಪ್ರತ್ಯೇಕ ದಾವಾ ಪ್ರಕರಣವನ್ನು ದಾಖಲಿಸಬೇಕು. ಮೂಲ ಸ್ವರೂಪದ ಪರಿಹಾರವನ್ನೇ ಬದಲಾವಣೆ ಆಗುವ ಸಂದರ್ಭದ ಅರ್ಜಿಗಳನ್ನು ಮಧ್ಯಸ್ಥದಾರರು ವಿಚಾರಣೆ ಮಾಡತಕ್ಕದ್ದಲ್ಲ. ಮತ್ತು ಅಂತಹ ಅರ್ಜಿಗಳನ್ನು ತೀರ್ಮಾನಿಸಲು ನಿಬಂಧಕರಿಗೆ ವರ್ಗಾಯಿಸತಕ್ಕದ್ದು.

ವಿವಾದಗಳನ್ನು ಇತ್ಯರ್ಥಪಡಿಸುವ ಸಂದರ್ಭದಲ್ಲಿ ಕೆಲವು ಪ್ರಸಂಗಗಳಲ್ಲಿ ವಕೀಲರ ಅವಶ್ಯಕತೆ ಇದೆಯೆಂದು ಕಂಡುಬಂದರೆ, ಅಂತಹ ಅರ್ಜಿಯನ್ನು ತೀರ್ಮಾನಿಸುವುದು ನಿಬಂಧಕರ ಜವಾಬ್ದಾರಿ. ಪ್ರಕರಣವನ್ನು ದಾಖಲಿಸುವ ಸಮಯದಲ್ಲಿಯೆ ವಕೀಲರ ಮುಖಾಂತರ

ದಾಖಲಿಸತಕ್ಕದ್ದಲ್ಲ. ಪ್ರಕರಣವನ್ನು ನಿಬಂಧಕರ ಮುಂದೆ ಸಲ್ಲಿಸಿದಾಗ, ಅದು ಸ್ವೀಕಾರಾರ್ಹ ಮತ್ತು ಅದು ಆ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆಯೆ, ಇಲ್ಲವೇ ಎಂಬುದನ್ನು ತೀರ್ಮಾನಿಸಿದ ನಂತರವೆ ಪ್ರಕರಣವನ್ನು ದಾಖಲಿಸಲಾಗುತ್ತದೆ. ಶೇಕಡ 90 ರಿಂದ 95 ಭಾಗದ ಪ್ರಕರಣಗಳು ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾತ್ರ ಇರುತ್ತವೆ. ಉಳಿದ 5 ರಿಂದ 10 ಭಾಗ ಹಣದುರುಪಯೋಗ, ಚುನಾವಣೆ, ಸೇವಾ ನಿಯಮ, ಮತ್ತಿತರ ವಿಷಯಕ್ಕೆ ಸಂಬಂಧಿಸಿದ್ದು, ಅಂತಹ ಪ್ರಕರಣಗಳಲ್ಲಿ ಕ್ಲಿಷ್ಟಕರ ಪ್ರಶ್ನೆಗಳು ಉದ್ಭವವಾದಾಗ ವಕೀಲರ ಅವಶ್ಯಕತೆ ಉದ್ಭವಿಸಬಹುದು. ಆದ್ದರಿಂದ ಸಾಮಾನ್ಯವಾಗಿ ದಾವಾ ಪ್ರಕರಣ ಇತ್ಯರ್ಥಪಡಿಸುವಾಗ ವಕೀಲರ ಅವಶ್ಯಕತೆ ಇರುವುದಿಲ್ಲ. ಪ್ರಕರಣ ದಾಖಲಿಸಿಕೊಂಡ ನಂತರ ಅರ್ಜಿದಾರನು, ತಾನು ಪ್ರಕರಣವನ್ನು ದಾಖಲಿಸಿದ್ದು, ವಿವಾದಾಂಶಗಳು ಕ್ಲಿಷ್ಟಕರವಾಗಿವೆಯೆಂದು, ತಾನೇ ಸ್ವತಃ ವಾದಿಸಲು ಸಾಧ್ಯವಿಲ್ಲವೆಂದು ಮತ್ತು ತನಗೆ ಭೌತಿಕ ಮತ್ತು ಮಾನಸಿಕ ಶಕ್ತಿಯಿಲ್ಲವೆಂದು ಪ್ರತಿಪಾದಿಸತಕ್ಕದ್ದು. ಈ ಬಗ್ಗೆ ಉಚ್ಚ ನ್ಯಾಯಾಲಯವು ತೀರ್ಪುಗಳಲ್ಲಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಶಕ್ತನಲ್ಲದ ವ್ಯಕ್ತಿ, ವಕೀಲರ ಸಹಾಯ ಕೇಳಬೇಕೇ ಹೊರತು ಬೇರೆ ಕಾರಣಗಳಿಂದ ಕೇಳಿದರೆ ಕೊಡುವ ಅವಶ್ಯಕತೆ ಇಲ್ಲವೆಂದು ತಾತ್ವಿಕವಾಗಿ ತೀರ್ಮಾನಿಸಬೇಕು. ಪ್ರತಿಯೊಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೀಠಾಧಿಕಾರಿಗಳು ಅಂತಹ ಅರ್ಜಿಯನ್ನು ವಿಚಾರಣೆ ಮಾಡುವಾಗ ಅಥವಾ ಪರಿಶೀಲನೆ ಮಾಡುವಾಗ ಕ್ಲಿಷ್ಟಕರವಾದ ಸಮಸ್ಯೆಗಳು ಇದೆಯೆಂದು ಕಕ್ಷಿದಾರನೇ ಸಮರ್ಥ ವಾದವನ್ನು ಮಂಡಿಸಲು ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದರೆ, ಅಂತಹ ಪ್ರಸಂಗಗಳಲ್ಲಿ ಮಾತ್ರ ವಕೀಲರ ಹಾಜರಾತಿಗೆ ಸಮ್ಮತಿಸಬಹುದು. ವಕೀಲರ ಹಾಜರಾತಿಯಿಂದ ಪ್ರಕರಣ ತೀರ್ಮಾನಕ್ಕೆ ವಿಳಂಬವಾಗುತ್ತದೆಂಬ ಸ್ಪಷ್ಟ ಸೂಚನೆಗಳಿದ್ದರೆ, ಅವಕಾಶ ಕೊಡುವ ಅವಶ್ಯಕತೆ ಇಲ್ಲ. ಏಕೆಂದರೆ ಇತ್ತೀಚಿನ ತಿದ್ದುಪಡಿಯಿಂದ ದಾವಾ ಪ್ರಕರಣಗಳನ್ನು ದಾಖಲಿಸಿದ 12 ತಿಂಗಳಲ್ಲಿ ತೀರ್ಮಾನಿಸಬೇಕೆಂದು, ವಿಶೇಷ ಪ್ರಸಂಗದಲ್ಲಿ ಮಾತ್ರ 6 ತಿಂಗಳು ವಿಸ್ತರಿಸಬಹುದೆಂದು ಇದ್ದು, ಆ ಅವಧಿಯೊಳಗೆ ತೀರ್ಮಾನಿಸಲು ಅಸಾಧ್ಯವಾಗುವ ಸಂಭವವಿದ್ದರೆ, ಅರ್ಜಿಯನ್ನು ತಿರಸ್ಕರಿಸಬಹುದು.

ಪ್ರಕರಣವನ್ನು ವಿಚಾರಣೆ ಮಾಡಿ ತೀರ್ಮಾನ ಕೊಡುವಾಗ ಆ ತೀರ್ಮಾನವು ನ್ಯಾಯ, ಸಮತೆ ಹಾಗೂ ವಿವೇಚನೆಗನುಸಾರುವಾಗಿ ನಿರ್ಣಯಿಸತಕ್ಕದ್ದು ಎಂದಿರುವುದರಿಂದ, ಪ್ರತಿಯೊಂದು ವಿವಾದಾಂಶವನ್ನು ಸ್ಪಷ್ಟ ದಾಖಲೆಗಳು ಮತ್ತು ಕಾರಣಗಳ ಆಧಾರದ ಮೇಲೆ ತೀರ್ಪು ಕೊಡಬೇಕು. ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಬೇಕು. ಅದನ್ನು ದಾಖಲಿಸಬೇಕು. ಆ ನಂತರ ಗೈರು ಹಾಜರಾದ ಕಕ್ಷಿದಾರರಿಗೆ ಪ್ರಕರಣ ತೀರ್ಮಾನವಾದ ಬಗ್ಗೆ ಮತ್ತು ದಾಖಲೆಗಳನ್ನು ಸಂಬಂಧಪಟ್ಟ ನಿಬಂಧಕರಿಗೆ ಸಲ್ಲಿಸಲಾಗಿದೆಯೆಂದು ಸೂಚನೆ ನೀಡಬೇಕು. ಆದರೆ ಪ್ರಕರಣದಲ್ಲಿ ಆದ ತೀರ್ಮಾನದ ಸಾರಾಂಶವನ್ನು ತಿಳಿಸತಕ್ಕದ್ದಲ್ಲ. ಸಂಬಂಧಪಟ್ಟ ವ್ಯಕ್ತಿಗಳು ಪ್ರಮಾಣೀಕೃತ ಪ್ರತಿಯನ್ನು ಪಡೆಯಲು ಅರ್ಜಿ ಸಲ್ಲಿಸಿ, ಪಡೆಯತಕ್ಕದ್ದು.

### ವಿವಾದಗಳನ್ನು ತೀರ್ಮಾನಿಸುವ ವಿಧಿವಿಧಾನಗಳು:

ಕಲಂ 39ರ ಬಗ್ಗೆ ವಿವರಣೆ ಕೊಡುವಾಗ ಈಗಾಗಲೇ ದಾವ ಪ್ರಕರಣ ಇತ್ಯರ್ಥಪಡಿಸಲು ಅನುಸರಿಸಬೇಕಾದ ಬಗ್ಗೆ ತಿಳಿಸಲಾಗಿದೆ. ಅಂದರೆ ವಿಚಾರಣೆ ಮಾಡುವ ಸಮಯದಲ್ಲಿ ಸೌಹಾರ್ದ ಸಹಕಾರಿ ನಿಯಮ 11(3)(ಎ) ಅನ್ವಯ ಅನುಸರಿಸಬೇಕಾದ ನೀತಿ ಮತ್ತು ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಕ್ಷಿದಾರರಿಗೆ ನೋಟೀಸ್ ಹೊರಡಿಸುವ ಬಗ್ಗೆ ನಿಯಮ 12(3)ರನ್ವಯ ಈಗಾಗಲೇ ಉಲ್ಲೇಖಿಸಲಾಗಿದೆ. ಈ ನಿಯಮಗಳನ್ನು ಪಾಲಿಸಲೇಬೇಕು.

ಪ್ರಕರಣಗಳನ್ನು ಇತ್ಯರ್ಥಪಡಿಸುವಾಗ ಕೆಲವು ನೀತಿ ನಿಯಮಗಳನ್ನು ಪಾಲಿಸಬೇಕು. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತೆ ಗಮನಿಸಬಹುದು.

1. ಸಂಬಂಧಪಟ್ಟ ನಿಬಂಧಕರು ತಮ್ಮ ಕೆಲಸ ನಿರ್ವಹಣೆ ಮಾಡುವಾಗ ನಿಬಂಧಕರ ಕೆಲಸವನ್ನು ಮಧ್ಯಸ್ಥಗಾರರ ಕೆಲಸವನ್ನು ಒಂದೇ ಎಂದು ತಿಳಿಯತಕ್ಕದ್ದಲ್ಲ. ನಿಬಂಧಕರ ಜವಾಬ್ದಾರಿ ಹೆಚ್ಚಿದ್ದು, ಅವರ ಕಾರ್ಯವ್ಯಾಪ್ತಿ ವಿಸ್ತಾರವಾಗಿದೆ. ಒಂದು ಪ್ರಕರಣವನ್ನು ಇತ್ಯರ್ಥಪಡಿಸುವ ಸಂಬಂಧದಲ್ಲಿ, ಆ ಪ್ರಕರಣ ಅಥವಾ ವಿವಾದ ಸ್ವೀಕಾರಾರ್ಹವೆ? ಈ ನ್ಯಾಯಾಲಯ ಮುಂದೆ ವಿಚಾರಣೆಗೆ ಅರ್ಹವೇ? ವಿಳಂಬ ವಿನಾಯಿತಿ ಕೊಡಲಾಗಿದೆಯೆ/ ತಡೆಯಾಜ್ಞೆ ಕೊಡಲಾಗಿದೆಯೆ / ಅಥವಾ ಮತ್ತೆ ಯಾವುದೇ ಕಾರಣಕ್ಕೆ ಮಧ್ಯಂತರ ಆದೇಶವನ್ನು ಕೊಡುವ ಪೂರ್ಣ ಅಧಿಕಾರ ನಿಬಂಧಕರಿಗೆ ಇರತಕ್ಕದ್ದು. ಈ ಎಲ್ಲ ಅಧಿಕಾರಗಳನ್ನು ಮಧ್ಯಸ್ಥಗಾರರಾಗಿ ಆದೇಶಿಸುವ ಅಧಿಕಾರ ಹೊಂದಿಲ್ಲ. ಅಂದರೆ ಮಧ್ಯಸ್ಥಗಾರರ ಅಧಿಕಾರಗಳು ನಿಯಮ 11(3)(ಎ) ಮತ್ತು ನಿಯಮ 12(3)ರಲ್ಲಿರುವ ವಿಧಿವಿಧಾನಗಳನ್ನು ಅನುಸರಿಸಬೇಕು. ಇದರ ಜೊತೆಗೆ ಆಂತರಿಕ ಅರ್ಜಿಗಳನ್ನು ಸಲ್ಲಿಸಿದಾಗ ವಿವಾದ ಪ್ರಕರಣವನ್ನೇ ಪ್ರಶ್ನಿಸುವಂತೆ ಇರುವುದನ್ನು ಹೊರತುಪಡಿಸಿ, ಮತ್ತಾವುದೇ ವಿಷಯದ ಬಗ್ಗೆ ಆಂತರಿಕ ಅರ್ಜಿಗಳನ್ನು ಸಲ್ಲಿಸಿದಾಗ ಅಂತಹ ಅರ್ಜಿಗಳನ್ನು ಸ್ವೀಕರಿಸಿ ಮಧ್ಯಂತರ ಆದೇಶ ಮಾಡಬಹುದು. ಉದಾಹರಣೆಗೆ ಕೆಲವು

ದಾಖಲೆಗಳನ್ನು ಸಲ್ಲಿಸಲು ಅರ್ಜಿ ಸಲ್ಲಿಸಿದಾಗ, ಆ ದಾಖಲೆಗಳು ವಿವಾದಕ್ಕೆ ಸಂಬಂಧಪಟ್ಟ ದಾಖಲೆಗಳೇ ಅಲ್ಲವೇ ಎಂಬುದರ ಬಗ್ಗೆ ಆದೇಶಿಸುವುದು, ಸಾಕ್ಷಿದಾರರ ಹೇಳಿಕೆ ಪಡೆಯುವಾಗ, ಆ ಸಾಕ್ಷಿಯ ಅರ್ಹತೆ ಬಗ್ಗೆ ವಿವಾದ ಇದ್ದಾಗ ಆದೇಶಗಳನ್ನು ಮಾಡುವುದು ಇವುಗಳಲ್ಲಿ ಸೇರುತ್ತದೆ. ಅಂದರೆ ವಿವಾದ ಇತ್ಯರ್ಥಪಡಿಸುವ ಸಂದರ್ಭದಲ್ಲಿ ನೀತಿ ನಿಯಮಗಳನ್ನು ಪಾಲಿಸುವಾಗ ಮಧ್ಯಸ್ಥಗಾರರು ಆದೇಶಗಳನ್ನು ಮಾಡಬಹುದು.

2. ವಿವಾದಗಳನ್ನು ಇತ್ಯರ್ಥಪಡಿಸುವಾಗ ನಿಯಮ 11(3)(ಎ), ನಿಯಮ 12(3), ಕಾಯಿದೆ ಕಲಂ 42ರನ್ವಯ ಇತ್ಯರ್ಥಪಡಿಸಬೇಕು. ಅಧಿಕಾರ ಇಲ್ಲದ ಅಧಿಕಾರವನ್ನು ಚಲಾಯಿಸಿದರೆ ಅಂತಹ ಆದೇಶಗಳು ಅಸಿಂಧುವಾಗುತ್ತವೆ.

3. ಮಧ್ಯಸ್ಥಗಾರನಾಗಿ ನೇಮಕ ಮಾಡಿದ ವ್ಯಕ್ತಿ ಅರ್ಹತೆ ಇಲ್ಲದಿದ್ದರೆ ಅಥವಾ ನೇಮಕಾತಿ ನ್ಯಾಯಬಾಹಿರವಾಗಿದ್ದರೆ ಅಂತಹ ಮಧ್ಯಸ್ಥಗಾರರು ಹೊರಡಿಸಿದ ಆದೇಶವು ಕಾನೂನಿನಲ್ಲಿ ಅಸಿಂಧುವಾಗತಕ್ಕದ್ದು.

4. ಮಧ್ಯಸ್ಥಗಾರರನ್ನು ನೇಮಕ ಮಾಡುವಾಗ ನಿಬಂಧಕರು ವಕೀಲರ ವೃತ್ತಿಯಲ್ಲಿರುವ ಅಧಿಕಾರಿಗಳ ಪಟ್ಟಿಯನ್ನು ವರ್ಷಕ್ಕೊಮ್ಮೆ ಅಥವಾ 3 ವರ್ಷಕ್ಕೊಮ್ಮೆ ಇಲಾಖಾಧಿಕಾರಿಗಳಿಗೆ ರವಾನಿಸುತ್ತಾರೆ. ಈ ಪಟ್ಟಿ ತಯಾರಿಸುವಾಗ ಯಾವುದೆ ಕಾರಣಕ್ಕೂ ಅರ್ಹರಲ್ಲದ, ಗುರುತರ ಆರೋಪಗಳಿರುವ, ಮೊಕದ್ದಮೆಗಳಲ್ಲಿ ಸಿಲುಕಿರುವ ವಕೀಲರನ್ನು ಸಾಮಾನ್ಯವಾಗಿ ಪಟ್ಟಿಯಲ್ಲಿ ಸೇರಿಸತಕ್ಕದ್ದಲ್ಲ.

5. ಮಧ್ಯಸ್ಥಗಾರರಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಸಾಕ್ಷಿಗಳಿಂದ ಹೇಳಿಕೆ ಪಡೆಯುವಾಗ ಪ್ರಮಾಣವನ್ನು ಭೋಧಿಸಿ, ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿಕೆಗಳನ್ನು ಪಡೆದು ದಾಖಲಿಸುವ ಮಟ್ಟಿಗೆ ಅವರು ನ್ಯಾಯಾಧೀಶರ ಕೆಲಸವನ್ನು ನಿರ್ವಹಿಸುತ್ತಾರೆ.

6. ಪ್ರಕರಣವನ್ನು ಇತ್ಯರ್ಥಪಡಿಸುವಾಗ ಮತ್ತು ತೀರ್ಪು ಕೊಡುವಾಗ ಸಾಮಾನ್ಯವಾಗಿ ಪಾಲಿಸಲೇಬೇಕಾದ ನೀತಿ ಏನೆಂದರೆ, ಅದೇಶಗಳು ನ್ಯಾಯಯುತವಾಗಿರಬೇಕು. ಸಮತೆಯಿಂದ ಕೂಡಿರಬೇಕು ಹಾಗೂ ವಿವೇಚನೆಗನುಸಾರವಾಗಿರಬೇಕು.

7. ಮಧ್ಯಸ್ಥಗಾರರು ಪ್ರಕರಣವನ್ನು ಇತ್ಯರ್ಥಪಡಿಸಿದ ನಂತರ, ಆ ಪ್ರಕರಣವನ್ನು ಪುನರ್ ವಿಮರ್ಶೆ ಮಾಡುವ ಅಧಿಕಾರ ಹೊಂದಿಲ್ಲ. ಆದರೆ ಕೆಲವು ತಪ್ಪುಗಳು ಇದ್ದರೆ ಅಂತಹ ಕಾನೂನುಬದ್ದ ತಪ್ಪುಗಳನ್ನು ಸರಿಪಡಿಸಲು ನಿಬಂಧಕರಿಗೆ ಅಧಿಕಾರ ಇರತಕ್ಕದ್ದು.

8. ಒಂದೇ ಪ್ರಕರಣ ಅಥವಾ ವಿವಾದಕ್ಕೆ ಸಂಬಂಧಪಟ್ಟಂತೆ 2 ಆದೇಶಗಳನ್ನು ಹೊರಡಿಸತಕ್ಕದ್ದಲ್ಲ. ಹಾಗೂ ವಿಳಂಬ ವಿನಾಯಿತಿ ಪಡೆಯದೆ ಅವಧಿ ಮುಗಿದ ನಂತರ ವಿವಾದವನ್ನು ಇತ್ಯರ್ಥಪಡಿಸಿದರೆ ಅದು ಸಿಂಧುವಾಗತಕ್ಕದ್ದಲ್ಲ.

9. ಸಹಕಾರಿ ನ್ಯಾಯಾಲಯದಲ್ಲಿ ಹೊರಡಿಸಿದ ಆದೇಶಗಳನ್ನು ಸಂಬಂಧಪಟ್ಟ ಕಕ್ಷಿದಾರರು ಪಾಲಿಸದೆ ಇದ್ದರೆ ಅದು ನ್ಯಾಯಾಂಗ ನಿಂದನೆ ಆಗುವುದಿಲ್ಲ. ಈ ದೃಷ್ಟಿಯಿಂದ ಮಧ್ಯಸ್ಥಗಾರರ ಅಧಿಕಾರವನ್ನು ನ್ಯಾಯಾಧೀಶರ ಅಧಿಕಾರವೆಂದು ಪರಿಗಣಿಸತಕ್ಕದ್ದಲ್ಲ.

10. ಒಂದು ಸಹಕಾರಿಯ ವ್ಯವಹಾರದಲ್ಲಿ ನಷ್ಟವುಂಟಾದಾಗ, ಆ ನಷ್ಟವನ್ನು ಯಾವುದೆ ಒಬ್ಬ ಅಧಿಕಾರಿ ಅಥವಾ ನೌಕರ ಉಂಟುಮಾಡಿದ್ದರೆ, ಅದಕ್ಕೆ ಬೇಡಿಕೆ ಸಲ್ಲಿಸಿದಾಗ ಅದು ಬಾಕಿಯಾಗುತ್ತದೆ.

11. ನಿಬಂಧಕರು, ಬೇನಾಮಿ ವ್ಯವಹಾರಗಳ ವಿಚಾರಣೆ ಮಾಡಿ ಆದೇಶ ಮಾಡುವ ಅಧಿಕಾರ ಹೊಂದಿರತಕ್ಕದ್ದು.

12. ಸಿವಿಲ್ ನ್ಯಾಯಾಲಯಗಳು, ಸಹಕಾರಿ ನ್ಯಾಯಾಲಯದಲ್ಲಿ ಹೊರಡಿಸಿದ ಆದೇಶಗಳು ಯಾವುದೇ ತಪ್ಪನ್ನೆಸಗಿದ್ದರೂ, ಮಧ್ಯಪ್ರವೇಶ ಮಾಡುವ ಅಧಿಕಾರ ಇಲ್ಲ.

13. ವಿವಾದವನ್ನು ಸ್ವೀಕರಿಸುವಾಗ ಸಹಕಾರಿ ವ್ಯವಹಾರ ಎಂದು ಪದ ಉಪಯೋಗಿಸಿದರೆ ಆ ಪದದ ಅರ್ಥದಲ್ಲಿ ಸಹಕಾರಿಯು ಕೈಗೊಳ್ಳುವ ಯಾವುದೆ ಉಪ ಕಾರ್ಯಗಳಿಗೂ ಅದು ಅನ್ವಯವಾಗತಕ್ಕದ್ದು.

14. ಮಧ್ಯಸ್ಥಗಾರರು ವಿವಾದಗಳನ್ನು ಇತ್ಯರ್ಥಪಡಿಸುವಾಗ ನಿಯಮಕ್ಕೆ ಪೂರಕವಾಗಿ ಪ್ರಕರಣವನ್ನು ಇತ್ಯರ್ಥಪಡಿಸಬೇಕು. ಅದರಲ್ಲೂ ಪ್ರಮುಖವಾಗಿ ನೋಟೀಸ್ ಜಾರಿ ಮಾಡುವಾಗ, ಸಮನ್ಸ್ ಜಾರಿ ಮಾಡುವಾಗ, ಸಾಕ್ಷಿಗಳನ್ನು ವಿಚಾರಣೆ ಮಾಡುವಾಗ, ದಾಖಲೆಗಳನ್ನು ಪರಿಶೀಲಿಸುವಾಗ, ಅಥವಾ ಹೇಳಿಕೆಗಳನ್ನು ದಾಖಲಿಸುತ್ತಿರುವಾಗ ಮತ್ತು ತೀರ್ಪು ಕೊಡುವಾಗ, ಕಾರಣಗಳನ್ನು ನಮೂದಿಸಬೇಕು.

15. ವಿವಾದಗಳ ವಿಚಾರಣೆ ಮಾಡಿದ ನಂತರ ತೀರ್ಪು ಕೊಡುವ ಸಂದರ್ಭದಲ್ಲಿ ಪ್ರತಿಯೊಂದು ವಿವಾದಿತ ಅಂಶಕ್ಕೂ ಸಕಾರಣಗಳೊಂದಿಗೆ

ವಿವರಣೆ ಸಹಿತ ಆದೇಶ ಮಾಡಬೇಕು.

**ಮಧ್ಯಸ್ಥಗಾರರು ಅನುಸರಿಸಬೇಕಾದ ಕೆಲವು ನಿಯಮಗಳು**

1. ಮಧ್ಯಸ್ಥಗಾರರು ಪ್ರತಿಯೊಂದು ವಿವಾದಾಂಶದ ಬಗ್ಗೆ ತೀರ್ಪನ್ನು ಸಮರ್ಥಿಸುವ ಕಾರಣಗಳನ್ನು ಕೊಡಬೇಕು.

2. ಒಪ್ಪಂದಗಳು ಸಮರ್ಪಕವಿಲ್ಲದೇ ಇದ್ದಾಗ ವಸೂಲಾತಿ ಆದೇಶಗಳನ್ನು ಮಾಡತಕ್ಕದ್ದಲ್ಲ.

3. ಒಪ್ಪಂದಗಳು ಜಾರಿಯಲ್ಲಿದ್ದಾಗ ಠರಾವಿನ ಮುಖಾಂತರ ಅವುಗಳನ್ನು ಮಾರ್ಪಡಿಸಿದ್ದರೆ ಅದನ್ನು ಪರಿಗಣಿಸತಕ್ಕದ್ದಲ್ಲ.

4.ಮಧ್ಯಸ್ಥಗಾರರು ಯಾವುದೇ ಒಂದು ಪ್ರಕರಣದಲ್ಲಿ ದಾವಾ ಪ್ರಕರಣದ ಅರ್ಜಿಗೆ ಮಾರ್ಪಾಡುಗಳನ್ನು ಮಾಡಲು ಮನವಿ ಸಲ್ಲಿಸಿದಾಗ ಆ ವಿಷಯವನ್ನು ಇತ್ಯರ್ಥಪಡಿಸತಕ್ಕದ್ದಲ್ಲ–ಇದನ್ನು ನಿಬಂಧಕರಿಗೆ ಮರುವರ್ಗಾಯಿಸಬೇಕು.

5. ಯಾವುದೇ ಒಂದು ಚುನಾವಣೆ ತಕರಾರಿನ ಅರ್ಜಿ ಬಗ್ಗೆ ವಿಚಾರಣೆ ಮಾಡುವಾಗ ಸಂಬಂಧಪಟ್ಟ ಸಹಕಾರಿ ಕಕ್ಷಿದಾರನಾಗಿ ಮಾಡದಿದ್ದರೆ, ಅಂತಹ ಪ್ರಸಂಗದಲ್ಲಿ ಅವಶ್ಯಕ ಕಕ್ಷಿದಾರನೆಂದು ಸೇರಿಸಬೇಕು.

**ವಿವಾದ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕಾದರೆ ಅನುಸರಿಸಬೇಕಾಸ ಸಂಕ್ಷಿಪ್ತ ಕ್ರಮಗಳು**

1. ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸುವಾಗ ವಿವಾದದ ಕಡತಗಳು ಇತ್ಯರ್ಥಕ್ಕಾಗಿ ಯಾವ ಅಧಿಕಾರಿಯಿಂದ ನೀಡಲ್ಪಟ್ಟಿದೆ ಎಂಬುದನ್ನು ಹಾಳೆಯಲ್ಲಿ (ಆರ್ಡರ್ ಶೀಟ್) ದಾಖಲೆ ಮಾಡಬೇಕು.

2. ವಿಚಾರಣಾ ದಿನಾಂಕವನ್ನು ನಿಗದಿಪಡಿಸಿ, ನೋಟೀಸ್‌ನ್ನು ನೀಡಿರುವುದಕ್ಕೆ ದಾಖಲೆ ಮಾಡಬೇಕು.

3. ವಿಚಾರಣೆ ನೋಟೀಸ್ / ಸಮನ್ಸ್‌ಗಳನ್ನು ನಿಯಮ 12(3) ರಂತೆ ನಾಲ್ಕು ವಿಧಾನಗಳಲ್ಲಿ ಯಾವುದಾದರೂ ಒಂದರನ್ವಯ ಅದೇ ಆದ್ಯತಾ ಪಟ್ಟಿಯಂತೆ ಜಾರಿ ಮಾಡಿರಬೇಕು.

**ಸಮನ್ಸ್‌ಗಳನ್ನು ಜಾರಿ ಮಾಡುವ ಕ್ರಮ**

1. ಕಾನೂನು ಮತ್ತು ನಿಯಮದ ಮೇರೆಗೆ ಪ್ರತಿ ಸಮನ್ಸು ಲಿಖಿತವಾಗಿರತಕ್ಕದ್ದು, ಮತ್ತು ಜಾರಿ ಮಾಡುವವರ ಸಹಿ ಮತ್ತು ಮೊಹರಿನಿಂದ ಕೂಡಿರತಕ್ಕದ್ದು ಮತ್ತು ಅಂಥ ಅಧಿಕಾರಿಯಿಂದ ಅಥವಾ ಆತನಿಂದ ಈ ಬಗ್ಗೆ ಬರಹ ಮೂಲಕವಾಗಿ ಪ್ರಾಧಿಕಾರ ಕೊಡಲಾದ ಯಾವುದೇ ವ್ಯಕ್ತಿಯಿಂದ ಸಹಿ ಹಾಕಲ್ಪಡುತಕ್ಕದ್ದು. ಸಮನ್ಸ್ ಮಾಡಲಾದ ವ್ಯಕ್ತಿ ಸದರಿ ಅಧಿಕಾರಿ ಮುಂದೆ ಹೇಳಲ್ಪಟ್ಟಿರುವ ಸಮಯದಲ್ಲಿ ಮತ್ತು ಸ್ಥಳದಲ್ಲಿ ಹಾಜರಾಗುವಂತೆ ನಿರ್ಬಂಧಿಸತಕ್ಕದ್ದು, ಆತನ ಹಾಜರಿಯು ಒಂದು ಹಕ್ಕಿನ ಬಗ್ಗೆ ಉತ್ತರ ಹೇಳುವ ಬಗ್ಗೆ ಒಂದು ಪಕ್ಷಗಾರನಂತೆ ಅಥವಾ ರುಜುವಾತನ್ನು ಕೊಡುವ ಬಗ್ಗೆ ಒಬ್ಬ ಸಾಕ್ಷಿದಾರನಂತೆ ಅಥವಾ ಒಂದು ದಸ್ತಾವೇಜನ್ನು ಹಾಜರುಪಡಿಸುವ ಬಗ್ಗೆ ಅಥವಾ ಎರಡು ಉದ್ದೇಶಗಳ ಬಗ್ಗೆ ಬೇಕಾಗಿರುವುದೋ ಏನೆಂಬುದನ್ನು ನಮೂದಿಸತಕ್ಕದ್ದು ಮತ್ತು ಯಾವ ನಿರ್ಧಿಷ್ಟ ದಸ್ತಾವೇಜನ್ನು ಹಾಜರ್ಪಡಿಸಲ್ಪಡಬೇಕಾಗಿರುವುದೋ ಅದನ್ನು ಸಾಕಷ್ಟು ಸರಿಯಾಗಿ ಸಮನ್ಸ್‌ನಲ್ಲಿ ವಿವರಿಸತಕ್ಕದ್ದು.
2. ರುಜುವಾತನ್ನು ಕೊಡಲು ಸಮನ್ಸ್ ಮಾಡದೆ ಒಂದು ದಸ್ತಾವೇಜನ್ನು ಹಾಜರುಪಡಿಸುವ ಬಗ್ಗೆ ಯಾವನೇ ವ್ಯಕ್ತಿಯು ಸಮನ್ಸ್ ಮಾಡಲ್ಪಡಬಹುದು. ದಸ್ತಾವೇಜನ್ನು ಹಾಜರು ಮಾಡಲು ಮಾತ್ರ ಸಮನ್ಸ್ ಮಾಡಲ್ಪಟ್ಟ ಯಾವನೇ ವ್ಯಕ್ತಿಯು ಸದರಿ ದಸ್ತಾವೇಜನ್ನು ಹಾಜರ್ಪಡಿಸುವಂತೆ ಮಾಡಿದಲ್ಲಿ ಸಮನ್ಸ್‌ನ್ನು ಪಾಲಿಸಿದಂತೆ ಬಾವಿಸತಕ್ಕದ್ದು.
3. ಸದರಿ ಕಾನೂನಿನ ಮೇರೆಗೆ ಯಾವನೇ ವ್ಯಕ್ತಿಯ ಮೇಲೆ ಈ ಕೆಳಗೆ ಹೇಳಲ್ಪಟ್ಟ ರೀತಿಗಳ ಪೈಕಿ ಯಾವುದೇ ರೀತಿಯಲ್ಲಿ ಅಂದರೆ:–

– ಅಂಥ ವ್ಯಕ್ತಿಗೆ ಅದನ್ನು ಕೊಡುವ ಮೂಲಕ ಒಪ್ಪಿಸಿ ಕೊಡುವ ಮೂಲಕ

ಅಥವಾ

– ಅಂಥ ವ್ಯಕ್ತಿಯು ಕಾಣ ಬರದಿದ್ದ ಪಕ್ಷದಲ್ಲಿ ಆತನ ಕೊನೆಯ ವಾಸ ಸ್ಥಳವೆಂದು ಅಥವಾ ವ್ಯವಹಾರದ ಸ್ಥಳವೆಂದು ತಿಳಿದು ಬಂದ ಸ್ಥಳದಲ್ಲಿ ಅದನ್ನಿಡುವ ಮೂಲಕ ಅಥವಾ ಆತನ ಕುಟುಂಬದ ಯಾರಾದರೂ ವಯಸ್ಕ ಸದಸ್ಯನಿಗೆ ಅದನ್ನು ಕೊಡುವ ಮೂಲಕ.

ಅಥವಾ

– ಅಂಥ ವ್ಯಕ್ತಿಯ ವಿಳಾಸವು ರಿಜಿಸ್ಟ್ರಾರ್ ರವರಿಗೆ ಅಥವಾ ಅಧಿಕಾರಿ ಕೊಡಲಾದ ಇತರ ವ್ಯಕ್ತಿಗೆ ತಿಳಿದಿರುವಲ್ಲಿ ತಲುಪಿದ ಬಗ್ಗೆ ಒಪ್ಪಿಗೆ ಸೂಚಿಸುವ ಮೊದಲೇ ಹಣ ಕೊಡ ಮಾಡಲ್ಪಟ್ಟ ರಿಜಿಸ್ಟರ್ ಅಂಚೆ ಮೂಲಕ ಆತನಿಗೆ ಅದನ್ನು ಕಳುಹಿಸಿ ಕೊಡುವ ಮೂಲಕ.

ಅಥವಾ

– ಮೇಲೆ ಹೇಳಲ್ಪಟ್ಟ ಯಾವುದೇ ಕ್ರಮಕ್ಕೆ ಅವಕಾಶವಿಲ್ಲದಿರುವಲ್ಲಿ ಇತನ ಕೊನೆಯ ವಾಸ ಸ್ಥಳವೆಂದು ಅಥವಾ ವ್ಯವಹಾರದ ಸ್ಥಳವೆಂದು ತಿಳಿದು ಬಂದ ಸ್ಥಳದ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅದನ್ನು ಅಂಟಿಸುವ ಮೂಲಕ ಸಮನ್ಸ್‌ನ್ನು ಜಾರಿ ಮಾಡಬಹುದು.

4. ವಿಚಾರಣೆ ದಿನಾಂಕದಂದು ನೋಟೀಸ್‌ಗಳು ಜಾರಿಯಾಗಿರುವುದನ್ನು ವಾದಿ ಮತ್ತು ಪ್ರತಿ ವಾದಿಗಳ ಹಾಜರಿ: ಗೈರು ಹಾಜರಿಯನ್ನು ದಾಖಲೆ ಮಾಡಬೇಕು.

– ಗೈರು ಹಾಜರಾದ ಪ್ರಕರಣಗಳಲ್ಲಿ ಅವರಿಗೆ ನೋಟೀಸ್ ಜಾರಿಯಾಗಿದೆಯೇ ಜಾರಿಯಾಗಿರುವುದಕ್ಕೆ ಸ್ವೀಕೃತಿ ಬಂದಿದೆಯೇ ನೋಟೀಸ್‌ನ್ನು ತಿರಸ್ಕರಿಸಿದ್ದಾರೆಯೇ ಎಂಬುದನ್ನು ದಾಖಲೆ ಮಾಡಬೇಕು.

– ಗೈರು ಹಾಜರಾದ ಪ್ರಕರಣದಲ್ಲಿ ಗೈರು ಹಾಜರಿಗೆ ಯಾವುದಾರೂ ಸಕಾರಣಗಳಿದೆಯೆ ಎಂಬುದನ್ನು ದಾಖಲಿಸಬೇಕು.

– ವಾದಿ, ಪ್ರತಿವಾದಿ ಮತ್ತು ಸಾಕ್ಷಿಗಳಿಂದ ಹೇಳಿಕೆಯನ್ನು ಪಡೆದು ಸಹಿ ಪಡೆದು ದೃಢೀಕರಿಸಬೇಕು. ಪ್ರತಿಯೊಂದು ಹೇಳಿಕೆಯನ್ನು ಸತ್ಯಾ ನಿಷ್ಠೆಯಿಂದ ಪಡೆಯಲಾಗಿದೆಯೆಂದು ದಾಖಲಿಸುವ ಸಹಕಾರ ಸಂಘಗಳಾಗಬೇಕು.

– ಸಂಬಂಧಪಟ್ಟ ಪಕ್ಷಗಾರರ ಮತ್ತು ಸಾಕ್ಷಿಗಳು ಹಾಜರುಪಡಿಸಿದ ಸಾಕ್ಷಿಗಳನ್ನು (ಎವಿಡೆನ್ಸ್) ದಾಖಲೆ ಮಾಡಬೇಕು "ಎಕ್ಸಿಬಿಟ್" ಎಂದು ಗುರುತಿಸಬೇಕು. ಸಾಕ್ಷಿಗಳು ಏನು ಹೇಳಿದ್ದಾರೆಂಬುದನ್ನು ಆದೇಶದಲ್ಲಿ ನಮೂದಿಸಿ : ಮಧ್ಯಸ್ಥದಾರರು ತೀರ್ಮಾನಕ್ಕೆ ಬರಲು ಕಾರಣಗಳನ್ನು ನಮೂದಿಸಬೇಕು.

– ಅವಾರ್ಡ್ : ತೀರ್ಪುಗಳನ್ನು ನೀಡುವಾಗ ಮುದ್ರಣ ಅಥವಾ ಬೆರಳಚ್ಚು ಮಾಡಿದ ಫಾರಂಗಳಲ್ಲಿ ಭರ್ತಿ ಮಾಡದೆ ಅವಾರ್ಡ್ : ತೀರ್ಪುಗಳನ್ನು ಬೆರಚ್ಚು ಮಾಡಿಸಿ ಅಥವಾ ಬರವಣಿಗೆಯಲ್ಲಿ ನೀಡಿ ಕಳುಹಿಸತಕ್ಕದ್ದು.

– ವಿವಾದದ ಪೂರ್ಣ ವಿಚಾರಣೆಯ ನಂತರ ಒಂದು ವೇಳೆ ವಿವಾದವನ್ನು ವಜಾ ಮಾಡುವ ಸಂಧರ್ಭ ಬಂದರೆ "ಕೇವಲ ಆರ್ಡರ್‌ಶೀಟ್ ನಲ್ಲಿ ವಜಾ ಮಾಡಲಾಗಿದೆ" ಎಂಬುದಾಗಿ ಬರೆಯುವುದರ ಜೊತೆಗೆ ಸಕಾರಣಗಳ ಜೊತೆ ಪ್ರತ್ಯೇಕವಾದ ಅವಾರ್ಡ್ : ತೀರ್ಪುನ್ನು ನೀಡಬೇಕು.

– ಆದೇಶಗಳನ್ನು : ತೀರ್ಪುಗಳನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆಯೆ ಎಂಬುದನ್ನು ದಾಖಲೆ ಮಾಡಬೇಕು.

– ಒಂದು ವೇಳೆ ಯಾವುದಾದರೂ ಪ್ರಕರಣಗಳಲ್ಲಿ (ಎಬಿಜೆ) "ಆದೇಶಕ್ಕಿಂತ ಮುಂಚಿತವಾಗಿ ಜಪ್ತಿ ಆದೇಶವಾಗಿದ್ದರೆ" ಅದನ್ನು ಅಂತಿಮ ಆದೇಶದಲ್ಲಿ ಅಳವಡಿಸಿ, ಅವಾರ್ಡ್ ತೀರ್ಪುನ್ನು ನೀಡಬೇಕು.

– ವಿವಾದ ಕಡತಗಳನ್ನು ಅಂತಿಮವಾಗಿ ನಿಬಂಧಕರ ಕಚೇರಿಯಲ್ಲಿ ಫೈಲ್ ಮಾಡುವುದರ ಬಗ್ಗೆ ನಿಯಮ ಪಕ್ಷಗಾರರಿಗೆ ತಿಳುವಳಿಕೆ ನೀಡಬೇಕು ಯಾರಾದರೂ ಗೈರು ಹಾಜರಾಗಿದ್ದರೆ, ಅವರಿಗೆ "ನೊಂದಾಯಿತ ಅಂಚೆ ಮುಖಾಂತರ" ತಿಳಿಸಬೇಕು.

**ಇತ್ಯರ್ಥವಾದ ವಿವಾದದ ಪ್ರಕರಣಗಳ ಕಡತಗಳನ್ನು ವಾಪಸ್ಸ್ ಕಳುಹಿಸುವಾಗ ಅನುಸರಿಬೇಕಾದ ಕ್ರಮಗಳು**

1. ವಾದಿ ಮತ್ತು ಪ್ರತಿವಾದಿಗೆ ನೋಟೀಸ್‌ನ್ನು ನೀಡಿ ಜಾರಿಯಾಗಿರುವುದಕ್ಕೆ ಸಾಕ್ಷ್ಯಾಧಾರ (ಸ್ವೀಕೃತಿ)
2. ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ ನೋಟೀಸ್ ಜಾರಿಯಾಗಿದ್ದರೂ, ಗೈರು ಹಾಜರಾಗಿದ್ದರೆ ನೋಟೀಸ್ ಜಾರಿಯಾಗುವುದಕ್ಕೆ ಸ್ವೀಕೃತಿಯನ್ನು ಕಳುಹಿಸಬೇಕು.
3. ಅಂತಿಮವಾಗಿ ವಿವಾದ ಕಡತಗಳನ್ನು ನಿಬಂಧಕರ ಕಚೇರಿಯಲ್ಲಿ ಫೈಲ್ ಮಾಡಿರುವುದಕ್ಕೆ ಪಕ್ಷಗಾರರಿಗೆ ತಿಳುವಳಿಕೆ ಪತ್ರ ನೀಡಿರುವುದಕ್ಕೆ ಸಾಕ್ಷಿ.

ಮೇಲ್ಕಂಡ ಎಲ್ಲಾ ಮಾರ್ಗ ಸೂಚಿಗಳನ್ನು ಅನುಸರಿಸಿ, ವಿವಾದದ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಅಧಿಕಾರಿಗಳು ಪ್ರಕರಣಗಳನ್ನು ಅವರ ವಿವೇಚನೆಗೆ ಒಳಪಟ್ಟು ಸ್ವಾಭಾವಿಕ ಸಿದ್ಧ ನ್ಯಾಯಕ್ಕನುಸಾರವಾಗಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸತಕ್ಕದ್ದು.

**"ನಿಬಂಧಕರ ಸುತ್ತೋಲೆ:–**

ಸಹಕಾರ ಸಂಘಗಳ ಕಾಯಿದೆ ಕಲಂ 70 ರಡಿಯಲ್ಲಿ ದಾವಾ ಪ್ರಕರಣಗಳನ್ನು ಇತ್ಯರ್ಥಗೊಳ್ಳುವುದರ ಬಗ್ಗೆ ಇಲಾಖಾಧಿಕಾರಿಗಳು ಈ ಕೆಳಕಂಡ ಮಾರ್ಗದರ್ಶಗಳನ್ನು ಅನುಸರಿಸಲು ತಿಳಿಸಲಾಗಿದೆ.

1. ದಾವಾ ವಿಭಾಗದ ವಿಷಯ ನಿರ್ವಾಹಕರು ದಾವಾ ಪ್ರಕರಣಗಳನ್ನು ಸ್ವೀಕರಿಸಿದ ದಿನಾಂಕದಂದು ದಾವಾ ರಿಜಿಸ್ಟರ್ ನಲ್ಲೆ ದಾಖಲಿಸಿ ದಾವೆಯ ಕ್ರಮಾಂಕವನ್ನು ನಮೂದಿಸಿ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲು ನಿರ್ದಿಷ್ಟ ದಿನಾಂಕವನ್ನು ಪ್ರಸ್ತಾಪಿಸಿ ಪೀಠಾಧಿಕಾರಿಗಳು ಮಂಡಿಸಬೇಕು. ಸಹಕಾರ ಸಂಘವು ದಾವೆಯನ್ನು ಹೂಡಿದ್ದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕರ ಸಹಿಯಡಿ ದಾಖಲಿಸಬೇಕು.
2. ವಾರದಲ್ಲಿ ಕನಿಷ್ಠ 2 ದಿನಗಳು ಅಂದರೆ ಪ್ರತಿ ಸೋಮವಾರ ಮತ್ತು ಶನಿವಾರ ದಾವೆ ಪ್ರಕರಣಗಳನ್ನು ನಡೆಸಲು ನಿಗದಿಪಡಿಸತಕ್ಕದು ಪ್ರತಿ ಮಾಹೆಯ 2ನೇ ಶನಿವಾರ ರಜೆ ಇರುವುದರಿಂದ ಎರಡನೇ ಶುಕ್ರವಾರದಂದು ಪ್ರಕರಣಗಳನ್ನು ವಿಚಾರಣೆಗೆ ನಿಗದಿಪಡಿಸುವುದು.
3. ವಿಚಾರಣೆಗೆ ನಿಗದಿಪಡಿಸಿದ ಪ್ರಕರಣಗಳ ಕ್ರಮಾಂಕಗಳ ಪಟ್ಟಿಯನ್ನು ಹಿಂದಿನ ದಿನದಂದೆ ನೋಟೀಸ್ ಬೋರ್ಡಿನ ಮೇಲೆ ತಪ್ಪದೆ ಪ್ರಕಟಿಸಬೇಕು. ಪ್ರಕರಣಗಳ ಪಟ್ಟಿಯನ್ನು ಈ ಕೆಳಕಂಡಂತೆ ಕ್ರಮದಲ್ಲಿ ತಯಾರಿಸಬೇಕು.

– ವ್ಯಾಜ್ಯದ ಅಂತಿಮ ತೀರ್ಪುಗಳಿಗಾಗಿ ಹಾಗೂ ಮಧ್ಯಂತರ ಅರ್ಜಿಯ ಮೇಲಿನ ಆದೇಶಗಳಿಗಾಗಿ ಇರುವ ಪ್ರಕರಣಗಳು.

– ತೀರ್ಪು ಮಧ್ಯಂತರ ಆದೇಶಗಳನ್ನು ಮುಕ್ತ ನ್ಯಾಯಾಲಯದಲ್ಲಿ ಸಹಿ ಮಾಡಿ ಉಚ್ಛರಿಸಬೇಕು.

– ಪ್ರವೇಶಕ್ಕಾಗಿ ಇರುವ ಪ್ರಕರಣಗಳು

– ಮಧ್ಯಂತರ ಅರ್ಜಿಗಳ ಬಗ್ಗೆ ಆಕ್ಷೇಪಣೆಗಳನ್ನು ದಾಖಲೆ ಮಾಡುವ ಪ್ರಕರಣಗಳು.

– ಮೂಲ ದಾವೆಯ ಬಗ್ಗೆ ಆಕ್ಷೇಪಣೆಗಳನ್ನು ದಾಖಲಿಸುವ ಪ್ರಕರಣಗಳು

– ಮಧ್ಯಂತರ ಅರ್ಜಿಗಳ ಬಗ್ಗೆ ವಾದಗಳನ್ನು ಕೇಳುವ ಪ್ರಕರಣಗಳು

– ಸಾಕ್ಷ್ಯಕ್ಕಾಗಿ ಇರುವ ಪ್ರಕರಣಗಳು

– ಮೂಲ ದಾವೆಯ ವಾದಿಗಳನ್ನು ಕೇಳಬೇಕಾದ ಪ್ರಕರಣಗಳು.

**ಮೇಲ್ಕಂಡಂತೆ ಕ್ರಮ ವಹಿಸಿದಲ್ಲಿ ವಕೀಲರಿಗೆ ಕಕ್ಷಿದಾರಿಗೆ ಹಾಗೂ ಸಾಕ್ಷ್ಯಾದಾರರಿಗೆ ಅನುಕೂಲ ಉಂಟಾಗಿರುತ್ತದೆ.**

4. ಪೀಠಾಧಿಕಾರಿಗಳು ಪ್ರಕರಣಗಳನ್ನು ಕೇಳುವಾಗ ಕಪ್ಪು ಕೋಟನ್ನು ಧರಿಸಬೇಕು.
5. ಪೀಠಾಧಿಕಾರಿಗಳು ತಮ್ಮ ನಿಯಂತ್ರಣಕ್ಕೆ ಮೀರಿದ ಸಂದರ್ಭಗಳಲ್ಲಿ ಹೊರತು ಪಡಿಸಿ ಪ್ರಕರಣಗಳನ್ನು ಮುಂದೂಡಬಾರದು.
6. ಆಡಳಿತಾತ್ಮಕ ಅನಿವಾರ್ಯತೆಯಿಂದಾಗಿ ಯಾವುದೇ ಸಂದರ್ಭದಲ್ಲಿ ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಪ್ರಕರಣವನ್ನು ನಡೆಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಪೀಠಾಧಿಕಾರಿಗಳು ತಮ್ಮ ಅಧೀನದಲ್ಲಿರುವ ಅಧಿಕಾರಿ ಸಿಬ್ಬಂದಿಯವರಿಗೆ ಪ್ರಕರಣವನ್ನು ಮುಂದೂಡಲು ಹಾಗೂ ಮುಂದೂಡಲ್ಪಟ್ಟ ದಿನಾಂಕ ಮತ್ತು ವೇಳೆಯನ್ನು ಆದೇಶದ ಹಾಳೆಯಲ್ಲಿ ನಮೂದಿಸಿ ಸಹಿ ಮಾಡಲು ಪೀಠಾಧಿಕಾರಿಗಳು ಸೂಕ್ತ ಅಧಿಕಾರವನ್ನು ನೀಡುವ ಆದೇಶವನ್ನು ಹೊರಡಿಸಬೇಕು.
7. ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ಪೀಠಾಧಿಕಾರಿಗಳು ಆಡಳಿತಾತ್ಮಕ ಅನಿವಾರ್ಯತೆಗಳನ್ನಾಧರಿಸಿ ಪ್ರಕರಣಗಳ ಇತ್ಯರ್ಥಕ್ಕೆ ಸೂಕ್ತ ದಿನಾಂಕಗಳನ್ನು ನಿಗದಿಪಡಿಸಬಹುದಾಗಿದೆ.
8. ಇಲಾಖಾಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳ ಸಭೆಗಳನ್ನು ಕರೆಯುವಾಗ ಅನಿವಾರ್ಯ ಸಂದರ್ಭಗಳಲ್ಲಿ ಹೊರತುಪಡಿಸಿ ಸೋಮವಾರ ಮತ್ತು ಶನಿವಾರಗಳಂದು ಹಾಗೂ ತಿಂಗಳ 2ನೇ ಶುಕ್ರವಾರಗಳಂದು ಸಭೆಗಳನ್ನು ಕರೆಯುವುದನ್ನು ತಪ್ಪಿಸಬೇಕು.

9. ದಾವಾ ಪ್ರಕರಣಗಳ ಸಂಬಂಧಿಸಿದಂತೆ ನೀಡಲಾಗಿರುವ ಅಂತಿಮ ತೀರ್ಪು ಅಥವಾ ಮಧ್ಯಂತರ ಆದೇಶದ ದೃಢೀಕರಣ ಪ್ರತಿಗಳಿಗಾಗಿ ಸಲ್ಲಿಸಲಾಗುವ ಅರ್ಜಿಗಳ ಬಗ್ಗೆ ಪ್ರತ್ಯೇಕ ರಿಜಿಸ್ಟರ್‌ನ್ನು ನಿರ್ವಹಿಸಿ ಧೃಢೀಕೃತ ಪ್ರತಿಗಳನ್ನು 3 ದಿವಸಗಳೊಳಗಾಗಿ ನೀಡಬೇಕು.)

(ಸಹಕಾರ ಇಲಾಖಾ ಆಡಳಿತ ಕೈಪಿಡಿಯಿಂದ ಆಯ್ದ ಭಾಗ)"

ಪ್ರಕರಣವನ್ನು ಇತ್ಯರ್ಥಪಡಿಸಿದ ನಂತರ ಮಧ್ಯಸ್ಥಗಾರರು ವಸೂಲಾತಿ ಅಥವಾ ಇನ್ನಿತರೆ ಆದೇಶವನ್ನು ಹೊರಡಿಸಿ ನಿಬಂಧಕರಿಗೆ ಕಡತವನ್ನು ರವಾನಿಸಿದಾಗ, ನಿಬಂಧಕರ ಕಛೇರಿಯಲ್ಲಿ ಪರಿಶೀಲನೆ ಮಾಡಬೇಕಾದ ಅಂಶಗಳು ಈ ಕೆಳಕಂಡಂತಿರತಕ್ಕದ್ದು. (ಚೆಕ್‌ಲಿಸ್ಟ್)

1. ಮಧ್ಯಸ್ಥಗಾರರನ್ನು ನೇಮಕ ಮಾಡುವಾಗ ಅವರ ಹೆಸರು ನಿಬಂಧಕರು ಹೊರಡಿಸಿದ ಪಟ್ಟಿಯಲ್ಲಿ ಇದೆಯೇ? ಹೌದು/ಇಲ್ಲ
2. ಪ್ರಕರಣವನ್ನು ಮಧ್ಯಸ್ಥಗಾರರಿಗೆ ಕಳುಹಿಸಿದಾಗ ಅವಧಿಯನ್ನು ನಿಗಧಿಪಡಿಸಿತ್ತೆ? ಹೌದು/ಇಲ್ಲ
3. ಪ್ರಕರಣವನ್ನು ಆ ಅವಧಿಯೊಳಗೆ ತೀರ್ಮಾನಿಸಲಾಗಿದೆಯೆ? ಹೌದು/ಇಲ್ಲ
4. ಪ್ರಕರಣ ಸ್ವೀಕರಿಸಿದ ನಂತರ ಸಂಬಂಧಪಟ್ಟ ಪಕ್ಷಗಾರರಿಗೆ ನಿಯಮ 12(3)ರನ್ವಯ ಸಮನ್ಸ್ ಜಾರಿ ಮಾಡಲಾಗಿದೆಯೆ? ಹೌದು/ಇಲ್ಲ
5. ಸಮನ್ಸ್ ಹೊರಡಿಸಿದ ನಂತರ ಕಕ್ಷಿದಾರರು ಪ್ರಕರಣದಲ್ಲಿ ಹಾಜರಾಗಿದ್ದಾರೆಯೆ? ಹೌದು/ಇಲ್ಲ
6. ಸಮನ್ಸ್ ಜಾರಿಯಾದ ಬಗ್ಗೆ ದಾಖಲೆ ಇದೆಯೆ? ಹೌದು/ಇಲ್ಲ
7. ಸಮನ್ಸ್ ಜಾರಿ ಆದರೂ, ಜಾರಿಯಾಗಿ ಹಾಜರಾಗದ ವ್ಯಕ್ತಿಯನ್ನು ಎಕ್ಸ್‌ಪಾರ್ಟಿಯೆಂದು ಮಾಡಲಾಗಿದೆಯೇ? ಅಂತಹ ಎಕ್ಸ್‌ಪಾರ್ಟಿ ಮಾಡಿದ ವ್ಯಕ್ತಿಗಳು ಪುನಃ ದಾಖಲೆಯಲ್ಲಿ ಬರಬೇಕಾದರೆ ಅಥವಾ ಬಂದಿದ್ದರೆ ಅದಕ್ಕೆ ಸಂಬಂಧಪಟ್ಟ ಅರ್ಜಿಯನ್ನು ಸಲ್ಲಿಸಲಾಗಿದೆಯೇ ಮತ್ತು ಆ ಅರ್ಜಿಯ ಮೇಲೆ ಆದೇಶವನ್ನು ಹೊರಡಿಸಲಾಗಿದೆಯೆ? ಹೌದು/ಇಲ್ಲ
8. ಪ್ರಕರಣವನ್ನು ವಿಚಾರಣೆ ಮಾಡುವ ದಿನಾಂಕದಂದು ಹಾಜರಿದ್ದ ಕಕ್ಷಿದಾರರ ಹೇಳಿಕೆಯನ್ನು ದಾಖಲಿಸಲಾಗಿದೆಯೆ? ಹೌದು/ಇಲ್ಲ
9. ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಮತ್ತು ಪುಸ್ತಕಗಳನ್ನು ಪರಿಶೀಲಿಸಲಾಗಿದೆಯೇ? ಆ ದಾಖಲೆಗಳ ಪ್ರಮಾಣೀಕೃತ ಪ್ರತಿಯನ್ನು ಪಡೆಯಲಾಗಿದೆಯೆ? ಹೌದು/ಇಲ್ಲ
10. ನೋಟೀಸ್/ಸಮನ್ಸ್ ಕಳುಹಿಸುವಾಗ ವಿಚಾರಣೆ ದಿನಾಂಕ, ಸ್ಥಳ ಮತ್ತು ವೇಳೆಯನ್ನು ಸ್ಪಷ್ಟವಾಗಿ ನಮೂದಿಸಲಾಗಿದೆಯೆ? ಹೌದು/ಇಲ್ಲ
11. ಸಮನ್ಸ್ ಕಳುಹಿಸುವ ಸಮಯದಲ್ಲಿ ದಾವಾ ಪ್ರಕರಣದ ಒಂದು ಪ್ರತಿಯನ್ನು ರವಾನಿಸಲಾಗಿದೆಯೆ? ಹೌದು/ಇಲ್ಲ
12. ಸಮನ್ಸ್ ರವಾನಿಸುವಾಗ ಸಂಬಂಧಪಟ್ಟ ಸಹಕಾರಿ ಮುಖ್ಯಕಾರ್ಯನಿರ್ವಾಹಕನ ಮುಖಾಂತರ ಜಾರಿ ಮಾಡಲಾಗಿದೆಯೆ? ಆ ರೀತಿ ಜಾರಿಯಾಗಿದ್ದರೆ ಆ ನೋಟೀಸನ್ನು ಪುರಸ್ಕರಿಸಲಾಗಿದೆಯೆ? ಹಾಗೂ ಆ ಕಕ್ಷಿದಾರ ಹಾಜರಾಗಿದ್ದಾನೆಯೆ? ಹೌದು/ಇಲ್ಲ

ಟಿಪ್ಪಣಿ: ಮುಖ್ಯಕಾರ್ಯನಿರ್ವಾಹಕನ ಮುಖಾಂತರ ನೋಟೀಸ್/ಸಮನ್ಸ್ ಜಾರಿ ಮಾಡತಕ್ಕದ್ದಲ್ಲ. ಏಕೆಂದರೆ ಅವನು ಅರ್ಜಿದಾರನಾಗಿದ್ದು, ಅವನ ಸ್ವಹಿತಾಸಕ್ತಿಗೆ ಪೂರಕವಾಗಿರಬಹುದು.

13. ಸಾಕ್ಷಿಗಳನ್ನು ಕರೆಸುವಾಗ ಸಮನ್ಸ್ ಜಾರಿ ಮಾಡಲಾಗಿದೆಯೇ ಮತ್ತು ದಾಖಲೆಗಳನ್ನು ಮಂಡಿಸಲು ಸ್ಪಷ್ಟವಾಗಿ ಸೂಚಿಸಲಾಗಿದೆಯೆ? ಹೌದು/ಇಲ್ಲ
14. ನೋಟೀಸ್/ಸಮನ್ಸ್‌ನ್ನು ಎದುರು ಅರ್ಜಿದಾರರು ಕೆಲಸ ನಿರ್ವಹಿಸುವ ಕಛೇರಿಯ ಮುಖಾಂತರ ಜಾರಿ ಮಾಡಲಾಗಿದೆಯೆ? ಹೌದು/ಇಲ್ಲ
15. ಹಾಜರಿದ್ದ ಸಾಕ್ಷಿಗಳ ಮತ್ತು ಪಕ್ಷಗಾರರ ಹೇಳಿಕೆಯನ್ನು ಯಾವ ಭಾಷೆಯಲ್ಲಿ ದಾಖಲಿಸಲಾಗಿದೆ? ಅದನ್ನು ಓದಿ ಸಾಕ್ಷಿಗಳು ಸಹಿ ಮಾಡಿದ್ದಾರೆಯೆ? ಹೌದು/ಇಲ್ಲ
16. ಎಲ್ಲ ಪಕ್ಷಗಾರರ ಹೇಳಿಕೆಯನ್ನು ಪಡೆದು ದಾಖಲೆಗಳನ್ನು ಪರಿಶೀಲಿಸಲಾಗಿದೆಯೆ? ಹೌದು/ಇಲ್ಲ
17. ಸಾಕ್ಷಿ ಮತ್ತು ದಾಖಲೆಗಳನ್ನು ತೀರ್ಪು ಕೊಡುವಾಗ ಪರಿಶೀಲಿಸಿ ಪ್ರತಿಯೊಂದ ದಾಖಲೆಯನ್ನು ಆಧಾರವಾಗಿಟ್ಟು ಆದೇಶಿಸಲಾಗಿದೆಯೆ? ಹೌದು/ಇಲ್ಲ

18. ತೀರ್ಪು ಕೊಡುವಾಗ ಪ್ರತಿಯೊಂದು ವಿವಾದಾಂಶದ ಬಗ್ಗೆ ಸಕಾರಣಗಳೊಂದಿಗೆ ತೀರ್ಮಾನಕ್ಕೆ ಬರಲಾಗಿದೆಯೆ? ಹೌದು/ಇಲ್ಲ

19. ತೀರ್ಪು ಕೊಟ್ಟ ನಂತರ ಆದೇಶದ ಟಿಪ್ಪಣಿಯಲ್ಲಿ, ತೀರ್ಪು ಕೊಟ್ಟ ಬಗ್ಗೆ ಉದ್ಘೋಷಿಸಲಾಗಿದೆಯೆ? ಹೌದು/ಇಲ್ಲ

20. ತೀರ್ಪಿನಲ್ಲಿ ಯಾವ ಆಸ್ತಿಯ ಮೇಲೆ, ಯಾವ ಜಮೀನಿನ ಮೇಲೆ ಸಾಲಕೊಡಲಾಗಿದೆಯೋ ಆ ಆಸ್ತಿಗಳ ವಿವರಗಳನ್ನು ಪರಿಶೀಲಿಸಿ ಆದೇಶಿಸಲಾಗಿದೆಯೆ? ಹೌದು/ಇಲ್ಲ

21. ಕಾನೂನು ವಾರಸುದಾರರ ಮೇಲೆ ಪ್ರಕರಣವನ್ನು ಇತ್ಯರ್ಥಪಡಿಸಿದ್ದರೆ ಅಂತಹ ಪ್ರಸಂಗದಲ್ಲಿ ಅವನು ಯಾವ ಆಸ್ತಿಯನ್ನು ಪಡೆದಿದ್ದಾನೊ ಆ ಆಸ್ತಿ ಬಗ್ಗೆ ವಿವರಣೆ ಕೊಡಲಾಗಿದೆಯೆ? ಹೌದು/ಇಲ್ಲ

22. ತೀರ್ಪು ಕೊಟ್ಟ ನಂತರ ಸೂಚನೆ ಕೊಡಲಾಗಿದೆಯೆ? ಹೌದು/ಇಲ್ಲ

23. ತೀರ್ಪು ಕೊಡುವ ದಿನ ಗೈರುಹಾಜರಿದ್ದ ಪಕ್ಷಗಾರನಿಗೆ ಅಂಚೆ ಮೂಲಕ ತಿಳಿಸಲಾಗಿದೆಯೇ? ಹೌದು/ಇಲ್ಲ

24. ತೀರ್ಪು ಕೊಟ್ಟ ನಂತರ ವಿವಾದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಹೇಳಿಕೆಗಳನ್ನು ಮೂಲ ಪ್ರತಿಯಲ್ಲಿ ನಿಬಂಧಕರಿಗೆ ರವಾನಿಸಿದ್ದಾರೆಯೆ? ಹೌದು/ಇಲ್ಲ

ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ನಂತರ ಮಧ್ಯಸ್ಥಗಾರರಿಗೆ ಗೌರವಧನವನ್ನು ಪಾವತಿಸತಕ್ಕದ್ದು.

**ತೀರ್ಪುಗಳು:**

1. ಒಂದು ಸಹಕಾರ ಸಂಘವು ತನ್ನ ಕಾರ್ಯವ್ಯಾಪ್ತಿಯ ಹೊರಗೆ ಅಥವಾ ಬೇರೆ ರಾಜ್ಯದಲ್ಲಿ ಶಾಖೆಯನ್ನು ಸ್ಥಾಪಿಸಿದ್ದು, ಆ ಬೇರೆ ರಾಜ್ಯದ ಶಾಖೆಯ ವ್ಯವಹಾರದ ಬಗ್ಗೆ ದಾವಾ ಪ್ರಕರಣ ದಾಖಲಿಸಲು ನೊಂದಾಯಿತ ರಾಜ್ಯದ ನಿಬಂಧಕರಿಗೆ ಸ್ವೀಕರಿಸಲು ಅಧಿಕಾರವಿರತಕ್ಕದ್ದಲ್ಲ. ಎಐಆರ್ 1972 ಎಸ್‌ಸಿ 1248.

2. ಯಾವುದೇ ಒಂದು ಪ್ರಕರಣವನ್ನು ಇತ್ಯರ್ಥಪಡಿಸುವಾಗ ಪೀಠಾಧಿಕಾರಿಗಳ ಮೇಲೆ ಆರೋಪ ಹೊರಿಸಿ ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಪತ್ರಗಳನ್ನು ಸಲ್ಲಿಸದಿದ್ದರೆ, ಅಂತಹ ಪ್ರಕರಣದಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಇಲ್ಲ. 1988(2) ಕೆಎಲ್‌ಜೆ 194.

3. ಪ್ರಥಮ ಬಾರಿಗೆ ಒಬ್ಬ ನೌಕರನ ಮೇಲೆ ನಿರ್ಲಕ್ಷ್ಯತನಕ್ಕೆ ಆದೇಶ ಹೊರಡಿಸಿದ್ದರೆ, ಅದೇ ಹಣವನ್ನು ವಸೂಲಾತಿಗೆ ಅವನ ಮಗನು ಅವ್ಯವಹಾರಿಕ ಎಂಬ ಕಾರಣಕ್ಕೆ ಪುರಸ್ಕರಿಸತಕ್ಕದ್ದಲ್ಲ. 1983(1) ಕೆಎಲ್‌ಜೆ 400.

4. ನಿಬಂಧಕರು ಚುನಾವಣೆ ತಕರಾರು ಅರ್ಜಿಯನ್ನು ನಿರ್ಧರಿಸುವಾಗ ನ್ಯಾಯ, ಸಮತೆ ಮತ್ತು ವಿವೇಚನೆಗನುಸಾರವಾಗಿ ತೀರ್ಮಾನ ಮಾಡತಕ್ಕದ್ದು. ಸಹಕಾರಿ ಕಾಯಿದೆಯಲ್ಲಿ ಈ ಬಗ್ಗೆ ಸ್ಪಷ್ಟ ನಿಯಮಗಳಿಲ್ಲದೇ ಇದ್ದರೂ ಸಾರ್ವತ್ರಿಕ ಚುನಾವಣೆಗೆ ಸಂಬಂಧಪಟ್ಟ ಕಾಯಿದೆ ಕಲಂ 100 ಮತ್ತು 101ರನ್ವಯ ನೀತಿ ನಿಯಮಗಳನ್ನು ಪಾಲಿಸಿ ಚುನಾವಣೆಯನ್ನು ರದ್ದುಗೊಳಿಸಬಹುದು. (ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ 1951) 1975(2) ಕೆಎಲ್‌ಜೆ 235/ಐಎಲ್‌ಆರ್ 1975 ಕೆಎಆರ್ 1682.

ಟಿಪ್ಪಣಿ: ಚುನಾವಣೆ ಅಕ್ರಮಗಳ ಬಗ್ಗೆ ಈ ತೀರ್ಪಿನ ನಂತರ ಅಧ್ಯಾಯ 5ಎ ನ, 39ಎ ಯಿಂದ 39ಕೆ ವರೆವಿಗೆ ಸೇರ್ಪಡೆಯಾಗಿದ್ದು, ಈಗ ಚುನಾವಣೆ ಅಕ್ರಮಗಳ ಬಗ್ಗೆ ಸ್ಪಷ್ಟ ಅವಕಾಶವನ್ನು ಸಹಕಾರಿ ಕಾಯಿದೆಯಲ್ಲಿ ಕಲ್ಪಿಸಲಾಗಿದೆ.

5. ಸಹಾಯಕ ನಿಬಂಧಕರು ಒಂದು ಸಹಕಾರ ಸಂಘದ ಆಡಳಿತ ಮಂಡಳಿಯ ಸಭೆಗೆ ಅವಧಿ ಮುಗಿದ ನಿರ್ದೇಶಕರನ್ನು ಕರೆಯಬೇಕೆ ಬೇಡವೇ ಎಂಬುದರ ಬಗ್ಗೆ ವಿಚಾರಣೆ ಮಾಡಲು ಅಧಿಕಾರ ಹೊಂದಿರುವುದಿಲ್ಲ. ಇಂತಹ ಆದೇಶವು ಅಧಿಕಾರ ಮೀರಿ ಚಲಾಯಿಸಿದ ಅಧಿಕಾರ. 1974(2) ಕೆಎಲ್‌ಜೆ 191.

ಟಿಪ್ಪಣಿ: ಅವಧಿ ಮುಗಿದ ಆಡಳಿತ ಮಂಡಳಿಯ ಸದಸ್ಯರು ಹೊಸ ಚುನಾಯಿತ ನಿರ್ದೇಶಕರು ಬರುವತನಕ ಮುಂದುವರಿಯುತ್ತಾರೆಂದು ಇದ್ದ ಅವಕಾಶವನ್ನು ಕೈಬಿಡಲಾಗಿದೆ. ಈ ತೀರ್ಪು ಕೈಬಿಡುವ ಪೂರ್ವದಲ್ಲಿ ಕೊಟ್ಟ ತೀರ್ಪಾಗಿರುತ್ತದೆ – ದಿನಾಂಕ: 27–3–1999 ರಿಂದ ಕೈಬಿಡಲಾಗಿದೆ. (ಸಿಎಂಡಬ್ಲ್ಯೂ 159 ಸಿಎಲ್‌ಎಂ 98)

6. ಸಹಾಯಕ ನಿಬಂಧಕರು ದಾವಾ ಪ್ರಕರಣ ಇತ್ಯರ್ಥಪಡಿಸುವಾಗ ಅರ್ಹತೆಯ ಆಧಾರದ ಮೇಲೆ ಅಥವಾ ಗೈರುಹಾಜರಿಯಲ್ಲಿ, ಅಂದರೆ

ಎಕ್ಸ್‌ಪಾರ್ಟೆ, ತೀರ್ಮಾನಿಸಬಹುದು. ಎಕ್ಸ್‌ಪಾರ್ಟೆ ಆದೇಶವನ್ನು ಅರ್ಜಿ ಮುಖಾಂತರ ಪುರಸ್ಕರಿಸಬಹುದು. ಸಹಾಯಕ ನಿಬಂಧಕರು ಈ ಅರ್ಜಿಯನ್ನು ಇತ್ಯರ್ಥಪಡಿಸಬೇಕಾದುದು ಕಲಂ 71(1)(ಬಿ) ಅನ್ವಯ ಇರುತ್ತದೆ. 1970(2)ಎಂಎಲ್‌ಜೆ 283(ಡಿಬಿ)

7. ಮಧ್ಯಸ್ಥಗಾರರು ಯಾವುದೇ ವಸೂಲಾತಿ ಆದೇಶ ಮಾಡುವಾಗ ಅವನ ಮುಂದೆ ಇಲ್ಲದೆ ಅಥವಾ ಪಕ್ಷಗಾರನಲ್ಲದ ವ್ಯಕ್ತಿಯ ಮೇಲೆ ವಸೂಲಾತಿ ಆದೇಶ ಹೊರಡಿಸತಕ್ಕದ್ದಲ್ಲ. 1983(2) ಎಐಎಲ್‌ಎಲ್‌ಆರ್ 90.

8. ಯಾವುದೇ ಒಂದು ಪ್ರಕರಣವನ್ನು ತೀರ್ಮಾನ ಮಾಡುವಾಗ ಬಡ್ಡಿದರವನ್ನು ನಿಗಧಿಪಡಿಸುವಾಗ, ಸಿಪಿಸಿ ಕಲಂ 34ನ್ನು ತಾತ್ವಿಕವಾಗಿ ಪರಿಗಣಿಸಬಹುದು. ಬಡ್ಡಿದರವನ್ನು ಒಪ್ಪಂದದ ದರದಲ್ಲಿ ನಿಗಧಿಪಡಿಸಬಹುದು. ಆ ರೀತಿ ನಿಗಧಿಯಾಗದೇ ಇದ್ದರೆ ಸಾಮಾನ್ಯ ತತ್ವಗಳನ್ವಯ ಅನ್ವಯಿಸುವ ಬಡ್ಡಿದರವನ್ನು ನಿಗಧಿಪಡಿಸಬಹುದು. ಐಎಲ್‌ಆರ್ 1987(1) ಕೆಎಆರ್ 220/1987(2) ಕೆಎಲ್‌ಜೆ ಎಸ್‌ಎನ್ 306.

9. ಪ್ರಾಧಿಕಾರವನ್ನು ಪಕ್ಷಪಾತಿ ಎಂದು ಆರೋಪಿಸಿದರೆ ಅದಕ್ಕೆ ಪೂರಕವಾಗಿ ದಾಖಲಾತಿಗಳನ್ನು ತೋರಿಸಬೇಕು 1982(2) ಕೆಎಲ್‌ಜೆ 184.

10. ಮಧ್ಯಸ್ಥದಾರನು ಒಂದು ಸಹಕಾರ ಸಂಘವನ್ನು ಪರಿಶೀಲನೆಗಾಗಿ ಸಂಘದ ಆಡಳಿತ ಮಂಡಳಿಯ ಠರಾವು ಪುಸ್ತಕ, ಲೆಕ್ಕಪತ್ರಗಳ ಪುಸ್ತಕ ಇವುಗಳನ್ನು ದಾಖಲಿಸಲು ಅಥವಾ ತೋರಿಸಲು ನಿರ್ದೇಶನ ಕೊಡುವ ಅಧಿಕಾರ ಇದೆ. 1988(2) ಕೆಎಲ್‌ಜೆ 217.

11. ಒಂದು ಪ್ರಾಧಿಕಾರದ ಅಧಿಕಾರವನ್ನು ಸರ್ಕಾರವು ನಿಬಂಧಕರ ಅಧಿಕಾರವನ್ನು ವರ್ಗಾಯಿಸಿದಾಗ ಆ ಅಧಿಕಾರ ವ್ಯಾಪ್ತಿ ಮತ್ತೊಂದು ನಿರ್ದೇಶನದಿಂದ ಬೇರೊಂದು ಪ್ರಾಧಿಕಾರಕ್ಕೆ ವರ್ಗ ಹೊಂದಿದ್ದರೆ ಅಂತಹ ಸಂದರ್ಭದಲ್ಲಿ ಯಾವ ಅಧಿಕಾರಿಯ ಅಧಿಕಾರ ಮೊಟಕುಗೊಳಿಸಲಾಗಿದೆಯೋ ಅಂತಹ ವ್ಯಕ್ತಿ, ದಾವಾ ಪ್ರಕರಣವನ್ನು ಮಧ್ಯಸ್ಥದಾರರಿಗೆ ವರ್ಗಾಯಿಸಲಾಗದು. 1988 (2) ಕೆಎಲ್‌ಜೆ 184.

12. ಕರ್ನಾಟಕ ಮೇಲ್ಮನವಿ ಪ್ರಾಧಿಕರಣ ಒಂದು ಸಹಕಾರ ಸಂಘದ ಚುನಾವಣೆಯನ್ನು ಕಿತ್ತುಹಾಕಿದಾಗ ಅಂತಹ ಸಹಕಾರ ಸಂಘ ಹೊಸ ಚುನಾವಣೆಯನ್ನು ಆಗಿಂದಾಗ್ಗೆ ಚುನಾವಣೆ ನಡೆಸಬೇಕೆಂದು ಮತ್ತು ಅಂತಹ ಕಿತ್ತುಹಾಕಿದ ಚುನಾವಣೆ ಸಂದರ್ಭದಲ್ಲಿ ಆಡಳಿತಾಧಿಕಾರಿಯನ್ನು ಅಥವಾ ವಿಶೇಷಾಧಿಕಾರಿಯನ್ನು ನೇಮಿಸುವ ಅಧಿಕಾರ ಹೊಂದಿಲ್ಲ. 1988(2) ಬಿಎಲ್‌ಜೆ 85.

13. ಗೌರವ ಮಧ್ಯಸ್ಥದಾರರು ತನ್ನ ತೀರ್ಮಾನವನ್ನು ಕೊಡುವಾಗ ಬಡ್ಡಿದರವನ್ನು ಇಳಿಸುವ ಅಧಿಕಾರ ಹೊಂದಿಲ್ಲ. ಅಂದರೆ ಯಾವ ಬಡ್ಡಿದರದಲ್ಲಿ ಸಾಲ ಪಡೆಯುವಾಗ ಒಪ್ಪಂದವಾಗಿದೆಯೊ ಅದಕ್ಕಿಂತ ಕಡಿಮೆ ಮಾಡತಕ್ಕದ್ದಲ್ಲ. 1988(2) ಕೆಎಲ್‌ಜೆ 400.

14. ಎಲ್ಲಿ ಸಾಲಗಾರ ತನ್ನ ಸ್ವಯಂ ಸ್ಫೂರ್ತಿಯಿಂದ ಮತ್ತು ತಾನು ಕೊಟ್ಟ ಲಿಖಿತ ಒಪ್ಪಂದದನ್ವಯ, ಅಂದರೆ ಒಪ್ಪಂದದ ಬಡ್ಡಿ ಮಂಜೂರಿ ಮಾಡಬಹುದು. 1989(1) ಕೆಎಲ್‌ಜೆ 134.

15. ಸಹಕಾರ ಸಂಘಗಳ ಕಾಯಿದೆಯಡಿ ಚುನಾವಣೆಗೆ ಸಂಬಂಧಪಟ್ಟ ಯಾವುದೇ ನ್ಯೂನತೆಯನ್ನು ಪರಿಹರಿಸಲು ಅವಕಾಶ ಕಲ್ಪಿಸಿದ್ದರೂ ವಿಶೇಷ ಸಂದರ್ಭದಲ್ಲಿ ಸಂವಿಧಾನದ ಪರಿಚ್ಛೇದ 226 ರನ್ವಯ ಮಧ್ಯಪ್ರವೇಶಿಸಲು ಅಧಿಕಾರ ಇದೆ. 1989(1) ಕೆಎಲ್‌ಜೆ 130.

16. ವಜಾಗೊಂಡ ಒಬ್ಬ ಕಾರ್ಯದರ್ಶಿ ಮತ್ತು ಸಹಕಾರ ಸಂಘ ದಾವಾ ಪ್ರಕರಣ ದಾಖಲೆ ಮಾಡಿದಾಗ ಹೊಸದಾಗಿ ನೇಮಕಗೊಂಡ ಕಾರ್ಯದರ್ಶಿ ಅವಶ್ಯ ಪಾರ್ಟಿ ಅಲ್ಲ. 1989(3) ಕೆಎಲ್‌ಜೆ 250–ಎಐಆರ್ ಎನ್‌ಒಸಿ 135.

17. ಆಡಳಿತ ಮಂಡಳಿಯ ನಿರ್ದೇಶಕರ ಮೇಲೆ ಹಣ ವಸೂಲಾತಿಗಾಗಿ ದಾವಾ ಪ್ರಕರಣ ದಾಖಲಿಸಬಹುದು. 1989 (2) ಕೆಎಲ್‌ಜೆ 361.

18. ಒಂದು ಸಹಕಾರ ಸಂಘದ ಬೈಲಾದಲ್ಲಿ ತಿದ್ದುಪಡಿ ಮಾಡಿ ತನ್ನ ಕಾರ್ಯವ್ಯಾಪ್ತಿಯನ್ನು ತಾಲ್ಲೂಕಿಗಿಂತ ಹೆಚ್ಚಿನ ಕಾರ್ಯವ್ಯಾಪ್ತಿಗೆ ವಿಸ್ತರಿಸಿದಾಗ ತಿದ್ದುಪಡಿಗೆ ಪೂರ್ವದಲ್ಲಿ ಇದ್ದ ಅಧಿಕಾರಿಗೆ, ಅಂದರೆ ಸಹಾಯಕ ನಿಬಂಧಕರಿಗೆ, ತಿದ್ದುಪಡಿಗೆ ಪೂರ್ವದಲ್ಲಿ ದಾಖಲಿಸಿದ್ದ ದಾವಾ ಪ್ರಕರಣವನ್ನು ವಿಚಾರಣೆ ಮಾಡಿ ತೀರ್ಮಾನಿಸಲು ಅಧಿಕಾರ ಇರತಕ್ಕದ್ದು. 1989(2) ಕೆಎಲ್‌ಜೆ 507–ಎಐಆರ್ ಎನ್‌ಒಸಿ(2).

19. ಯಾವ ಒಂದು ಸಹಕಾರ ಬ್ಯಾಂಕ್ ಒಂದು ಮೋಟಾರು ವಾಹನವನ್ನು ಖರೀದಿಗಾಗಿ ಸಾಲ ಕೊಟ್ಟಿದ್ದರೆ ಮತ್ತು ಆ ಸಾಲ ಮಂಜೂರು ಮಾಡಿದಾಗ ಸುಸ್ತಿಯಾದ ಸಂದರ್ಭದಲ್ಲಿ ಬ್ಯಾಂಕಿನವರು ವಾಹನವನ್ನು ಮುಟ್ಟುಗೋಲು ಹಾಕಿಕೊಂಡು ವಸೂಲಿ ಕ್ರಮ ಜರುಗಿಸಬಹುದೆಂದು ಒಪ್ಪಂದವಿದ್ದರೆ, ಅಂತಹ ಸಂದರ್ಭದಲ್ಲಿ ಕಾನೂನಿನನ್ವಯ ದಾವಾ ದಾಖಲಿಸದೆ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಬ್ಯಾಂಕಿಗೆ ಇದೆ. ಎಐಆರ್ 1984 ಕರ್ನಾಟಕ 4226–1991(4) ಕೆಎಲ್‌ಜೆ 274(ಡಿಬಿ)

20.ಚುನಾವಣೆ ತಕರಾರು ಅರ್ಜಿಯಲ್ಲಿ ಸಹಕಾರ ಸಂಘಗಳ ಕಾಯಿದೆಯನ್ವಯವೇ ಪರಿಹಾರ ಕಂಡುಕೊಳ್ಳಬೇಕು. ಆದರೆ ವಿಶೇಷ ಸಂದರ್ಭದಲ್ಲಿ ಪರಿಹಾರ ಸಿಗುವುದು ಸಾಮಾನ್ಯವಾಗಿ ಸಾಧ್ಯವಿಲ್ಲವೆಂದು ಪರಿಗಣಿಸಿದಾಗ ರಿಟ್ ದಾಖಲಿಸಿ ಪರಿಹಾರ ಪಡೆಯಬಹುದು. ಐಎಲ್‌ಆರ್ 1992(2) ಕರ್ನಾಟಕ 262 ಕರ್ನಾಟಕ ಎಫ್‌ಬಿ.

21. ಒಂದು ಸಹಕಾರ ಸಂಘ ತನ್ನ ನೌಕರರ ಮೇಲೆ ಕ್ರಮ ಜರುಗಿಸಲು ಕಾಯಿದೆ ಕಲಂ 70ರನ್ವಯ ಅಧಿಕಾರ ಹೊಂದಿದೆ. ಏಕೆಂದರೆ ಸಹಕಾರ ಸಂಘ "ರಾಜ್ಯ" ಎಂದು ಸಂವಿಧಾನದ ಪರಿಚ್ಛೇದ 12ರನ್ವಯ ಹಾಗೂ ಪರಿಚ್ಛೇದ 266ರನ್ವಯ ನೇರವಾಗಿ ಪರಿಹಾರ ಕೇಳಲು ಬರುವುದಿಲ್ಲ. 1985(1) ಕೆಎಲ್‌ಜೆ ಎಸ್‌ಎನ್ 11.

22.ಒಂದು ಹಣಕಾಸು ಪೂರೈಸುವ ಸಂಸ್ಥೆ ಒಂದು ಸಹಕಾರ ಸಂಘದ ಮೇಲೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕೇಳತಕ್ಕದ್ದಲ್ಲ. 1990(2) ಕೆಎಲ್‌ಜೆ 475 ಡಿಬಿ.

23.ಒಂದು ಸಹಕಾರ ಸಂಘದ ಚುನಾವಣೆ ಬಗ್ಗೆ ಪದಾಧಿಕಾರಿಗಳು ಮತ್ತು ಸಮಿತಿಯ ಸದಸ್ಯರ ಮಧ್ಯೆ ಕಲಂ 70ರನ್ವಯ ಪರಿಹಾರ ಪಡೆಯಬೇಕು. ಎಐಆರ್ 1985 ಎನ್‌ಒಸಿ 66.

24.ಮಾಲು ಕೊರತೆಯನ್ನು ಒಂದು ಸಹಕಾರ ಸಂಘದಲ್ಲಿ ಆಂತರಿಕ ಲೆಕ್ಕಪರಿಶೋಧಕರ ವರದಿಯನ್ನು ಆಧರಿಸಿ ಕಲಂ 70ರನ್ವಯ ಪರಿಹಾರ ಪಡೆಯಬೇಕು. 1986(4) ಕರ್ನಾಟಕ 3631.

25.ಸಹಕಾರ ಸಂಘಗಳ ಕಾಯಿದೆ ಕಲಂ 70ರನ್ವಯ ಚುನಾವಣೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಹಾರ ಕೇಳಿ ಅವಕಾಶವಿದ್ದರೂ ಮತದಾರ ಪಟ್ಟಿಯಲ್ಲಿ ನಿಯಮ 14ರನ್ವಯ ತಯಾರಿಸದೆ ಇದ್ದ ಸಂದರ್ಭದಲ್ಲಿ ಸಂವಿಧಾನದ ಪರಿಚ್ಛೇದ 226ರನ್ವಯ ಉಚ್ಚ ನ್ಯಾಯಾಲಯ ಮಧ್ಯಪ್ರವೇಶ ಮಾಡಬಹುದು. 1989(2) ಬಿಎಲ್‌ಜೆ ಎಸ್‌ಎನ್ 48.

26.ಒಂದು ವಾಹನ ಖರೀದಿಗೆ ವಾಹನವನ್ನು ಸಹಕಾರ ಸಂಘಕ್ಕೆ ಪರಬಾರೆ ಮಾಡಿದ್ದರೆ ಅಂತಹ ಸಾಲವನ್ನು ವಸೂಲಿ ಮಾಡಲು ದಾವಾ ದಾಖಲಿಸದೆ ಒಪ್ಪಂದದ ಆಧಾರದ ಮೇಲೆ ವಸೂಲಿ ಮಾಡಲಾಗದು. ಅಂತಹ ಸಂದರ್ಭದಲ್ಲಿ ಕಲಂ 70ರನ್ವಯ ದಾವಾ ದಾಖಲಿಸಿ ವಾಹನವನ್ನು ಜಪ್ತಿ ಮಾಡಲು ಅವಕಾಶ ಕಲ್ಪಿಸಬೇಕು. 1980(1) ಕೆಎಲ್‌ಜೆ 48.

27.ಒಂದು ಸಹಕಾರ ಸಂಘದ ಚುನಾವಣೆ ಮತ್ತು ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ಸಂಬಂಧಪಟ್ಟಂತೆ ಮತ್ತು ಪದಾಧಿಕಾರಿಗಳಿಗೆ ಸಂಬಂಧಪಟ್ಟಂತೆ ದಾವಾ ದಾಖಲಿಸಬೇಕು. ಆದರೆ ಮಾರಾಟ ಸಹಕಾರ ಸಂಘಗಳನ್ನು ಮತದಾರರ ಪಟ್ಟಿಯಿಂದ ಬಿಟ್ಟಿದ್ದರೆ ಅಂತಹ ವಿಷಯವನ್ನು ದಾವಾ ಪ್ರಕರಣ ದಾಖಲಿಸಿ ತೀರ್ಮಾನಿಸಬೇಕು. ಹಾಗೂ ಸಂವಿಧಾನದ ಪರಿಚ್ಛೇದ 226ರನ್ವಯ ರಿಟ್ ದಾಖಲಿಸಲಾಗದು.

28.ನಿಬಂಧಕರು ಅಥವಾ ಮಧ್ಯಸ್ಥದಾರರು ಒಬ್ಬ ನಿವೃತ್ತ ನೌಕರರನ್ನು ದಾವಾ ತೀರ್ಮಾನಿಸುವಾಗ ನಿವೃತ್ತಿ ಹೊಂದಿದ ನೌಕರನ ಹುಟ್ಟಿದ ದಿನಾಂಕವನ್ನು ದೃಢೀಕರಿಸುವುದು ಅವರ ಅಧಿಕಾರ ವ್ಯಾಪ್ತಿಯಲ್ಲಿದೆ. ಮತ್ತು ಇದು ದಾವಾ ಪ್ರಕರಣ ದಾಖಲಿಸುವಾಗ ವಯಸ್ಸಿನ ದಿನಾಂಕ ಗಮನಿಸುವುದು ಅವಶ್ಯಕ. 1989(2) ಕೆಎಲ್‌ಜೆ 25.

29.ಕಲಂ 70ನ್ನು ಸಹಕಾರಿ ಕಾಯಿದೆಯಲ್ಲಿ ಸೇರಿಸುವ ಅಧಿಕಾರ ಸಂವಿಧಾನದ 2ನೇ ಪಟ್ಟಿ ಹಾಗೂ ಉಲ್ಲೇಖ 32ರನ್ವಯ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿದೆ. ಆದರೆ ಇದು ಕಾರ್ಮಿಕ ಕಾಯಿದೆ 1947ರ ಕೈಗಾರಿಕಾ ಪ್ರಾಧಿಕಾರಕ್ಕೆ ಇರುವ ಅಧಿಕಾರಕ್ಕೆ ಚ್ಯುತಿ ಬರುವುದಿಲ್ಲ. ಐಎಲ್‌ಆರ್ 1985 ಕರ್ನಾಟಕ 15 ಡಿಬಿ.

ಸೂಚನೆ: 1998ರ ತಿದ್ದುಪಡಿಯಲ್ಲಿ ಕಾರ್ಮಿಕ, ಕೈಗಾರಿಕಾ, ಕಂದಾಯ ಮತ್ತಿತರೆ ಪ್ರಾಧಿಕರಣಕ್ಕೆ ಇದ್ದ ಅಧಿಕಾರವನ್ನು ಮೊಟಕುಗೊಳಿಸಿ ಸಹಕಾರ ಕಾಯಿದೆಗೆ ತಿದ್ದುಪಡಿ ತಂದಿರುವುದರಿಂದ ಈ ತೀರ್ಮಾನ ಅನ್ವಯವಾಗುವುದಿಲ್ಲ. ಹಾಗೂ ಇದಕ್ಕೆ ಪೂರಕವಾಗಿ ಉಚ್ಚ ನ್ಯಾಯಾಲಯ ತೀರ್ಮಾನ ಕೊಟ್ಟಿದೆ.

30.ಒಬ್ಬ ನೌಕರ ಪರಿಹಾರ ಕೇಳುವ ಸಹಕಾರಿ ಕಾಯಿದೆಯನ್ನು ಅಥವಾ ಕಾರ್ಮಿಕ ಕಾಯಿದೆಯನ್ನು ಆಯ್ಕೆ ಮಾಡುವ ಅಧಿಕಾರ ನೌಕರನಿಗೆ ಸೇರಿದೆ. ಐಎಲ್‌ಆರ್ 1985(4) ಕರ್ನಾಟಕ 3696 187(1) ಕೆಎಲ್‌ಜೆ ಎಸ್‌ಎನ್ 139.

ಸೂಚನೆ: ಮೇಲೆ ತಿಳಿಸಿರುವ ಸೂಚನೆಯನ್ವಯ ಈಗ ಕಾರ್ಮಿಕ ನ್ಯಾಯಾಲಯಗಳಿಗೆ ಅಧಿಕಾರ ಇಲ್ಲ.

31. ಒಂದು ದಾವಾ ಪ್ರಕರಣ ದಾಖಲಿಸುವಾಗ ಕಲಂ 70(3)ರನ್ವಯ ನಿಬಂಧಕರು ತೆಗೆದುಕೊಂಡ ತೀರ್ಮಾನವೆ ಅಂತಿಮ. ಅದಕ್ಕೆ ಪುನರ್ ವಿಮರ್ಶೆ ಅಥವಾ ಮೇಲ್ಮನವಿ ಇಲ್ಲ. ಐಎಲ್ಆರ್ 1985(2) ಕೆಎಲ್ಆರ್–1975 ಕೆಎಲ್ಜೆ 390(ಡಿಬಿ)

32. ಕಲಂ 70(3)ರಲ್ಲಿ ನಿಬಂಧಕರ ತೀರ್ಮಾನ ಅಂತಿಮ ಎಂದಿರುವುದು ಸಿವಿಲ್ ನ್ಯಾಯಾಲಯಗಳು ಅಥವಾ ಮತ್ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನಿಬಂಧಕರ ತೀರ್ಮಾನ ಅಂತಿಮ ಎಂದು ತಿಳಿಯಬೇಕು. ಈ ಅಂತಿಮ ತೀರ್ಮಾನದಂತೆ ಬೇರೆ ನ್ಯಾಯಾಲಯಗಳು ಆ ವಿಷಯದ ಬಗ್ಗೆ ಕೇಳಲು ಮತ್ತು ಪರಿಹಾರ ಕೊಡಲು ಬರುವುದಿಲ್ಲ. ಆದರೆ ಜಮೀನಿಗೆ ಸಂಬಂಧಪಟ್ಟಂತೆ ಅದರ ಹಕ್ಕು ಬಾಧ್ಯತೆಯನ್ನು ಸಿವಿಲ್ ನ್ಯಾಯಾಲಯದಲ್ಲಿಯೇ ತೀರ್ಮಾನಿಸಬೇಕು. ಮತ್ತು ಅಂತಹ ತೀರ್ಮಾನ ನಿಬಂಧಕರ ವ್ಯಾಪ್ತಿಗೆ ಬರುವುದಿಲ್ಲ. ಐಎಲ್ಆರ್ 1995 ಕರ್ನಾಟಕ 518.

33. ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರಣಕ್ಕೂ ದಾವಾ ಪ್ರಕರಣ ಸ್ವೀಕರಿಸಿದ ನಂತರ ಆಂತರಿಕ ಆಜ್ಞೆಯ ಮುಖಾಂತರ, ಚುನಾವಣೆಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. ತಡೆಯಾಜ್ಞೆ ನೀಡುವುದು ಸೂಕ್ತವಲ್ಲ. ಇದಕ್ಕೆ ಪೂರಕವಾಗಿ ಎಐಆರ್ 1954 ಎಸ್‌ಸಿ 210 ಮತ್ತು ಎಐಆರ್ 1967 ಎಸ್‌ಸಿ 249 ತೀರ್ಪುಗಳಲ್ಲಿ ಸೂಚಿಸಿದ ನೀತಿ ನಿಯಮಗಳನ್ನು ಪಾಲಿಸದೇ ಮಧ್ಯಂತರ ಆದೇಶಗಳ ಮುಖಾಂತರ ಚುನಾಯಿತ ಪ್ರತಿನಿಧಿಗಳ ಪದಗ್ರಹಣಕ್ಕೆ ಮಧ್ಯಪ್ರವೇಶ ಮಾಡತಕ್ಕದ್ದಲ್ಲ. 1972 ಎಂಸಿಎಟಿಡಿ ಅಪೀಲ್ 103/1971.

34. ಚುನಾಯಿತ ನಿರ್ದೇಶಕರು ಆಯ್ಕೆಯಾದ ಸಹಕಾರ ಸಂಘದ ನಿರ್ದೇಶಕರಾಗಿ ಪದಗ್ರಹಣ ಮಾಡಲು ಯಾವುದೇ ರೀತಿಯ ಮಧ್ಯಪ್ರವೇಶ ಮಾಡತಕ್ಕದ್ದಲ್ಲ ಎಂಬ ತೀರ್ಪು ಎಐಆರ್ 1954 ಎಸ್‌ಸಿ 710ರಲ್ಲಿ ನಿರ್ದೇಶನವಿದ್ದರೂ, ಅಂತಹ ತಡೆಯಾಜ್ಞೆಯನ್ನು ಉಪ ನಿಬಂಧಕರು ಭಾರತೀಯ ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಆದೇಶಿಸಿದ್ದರೆ, ಅಂತಹ ನಿರ್ದೇಶನಕ್ಕೆ ಪುನರ್ ವಿಮರ್ಶೆ ಅರ್ಜಿಯನ್ನು ದಾಖಲಿಸಿ ಪರಿಹಾರ ಪಡೆಯಬಹುದು. ಮೇಲ್ಕಂಡ ತೀರ್ಪಿನಲ್ಲಿ ಆಯ್ಕೆಯಾದ ನಿರ್ದೇಶಕರು ತಮ್ಮ ಸ್ಥಾನವನ್ನು ಅಲಂಕರಿಸಲು ಅಥವಾ ಪದಗ್ರಹಣ ಮಾಡಲು ಉಪ ನಿಬಂಧಕರಾಗಲೀ, ಸಹಾಯಕ ನಿಬಂಧಕರಾಗಲೀ ಮಧ್ಯಂತರ ಆದೇಶ ನೀಡತಕ್ಕದ್ದಲ್ಲ. 1972 ಎಂಸಿಎಟಿಡಿ ರಿವಿಷನ್ ಪಿಟಿಷನ್ 34/1972.

35. ಒಂದು ಚುನಾವಣೆಯನ್ನು ರಿಟ್ ಅರ್ಜಿ ಮುಖಾಂತರ ಪ್ರಶ್ನಿಸಿದಾಗ ಹಿಂದೆ ಹೊರಡಿಸಲಾಗಿದ್ದ ಚುನಾವಣಾ ವೇಳಾಪಟ್ಟಿ ಅನ್ವಯವೇ ನಡೆಯಬೇಕು. ಸಹಕಾರಿ ಕಾಯಿದೆಯಲ್ಲಿ ಪರಿಹಾರ ಪಡೆಯಬೇಕೆಂದು ನಿರ್ದೇಶನ ಕೊಡುವುದು ಸೂಕ್ತವಲ್ಲ. ಐಎಲ್ಆರ್ 1991(1) ಕರ್ನಾಟಕ/1991(4) ಕೆಎಲ್ಜೆ 356 ಡಿಬಿ.

36. ಮಹಾರಾಷ್ಟ್ರ ಕಾಯಿದೆಯನ್ವಯ ನಿಬಂಧಕರ ಅಧಿಕಾರವನ್ನು ಚಲಾಯಿಸಲು ಕೊಟ್ಟ ಅಧಿಕಾರ ಕಾನೂನಿನಲ್ಲಿ ಕೊಟ್ಟ ಅಧಿಕಾರವಲ್ಲ. ನಿಬಂಧಕರಿಗೆ ಕೊಟ್ಟ ಅಧಿಕಾರದ ವರ್ಗಾವಣೆಯಾಗಿರುತ್ತದೆ. ಈ ಅಧಿಕಾರವನ್ನು ವಾಪಸ್ಸು ಪಡೆಯಬಹುದು ಅಥವಾ ಕಿತ್ತುಹಾಕಬಹುದು. ಅಂತಹ ಸಂದರ್ಭದಲ್ಲಿ ಅಧಿಕಾರ ಪ್ರಾಪ್ತವಾದ ವ್ಯಾಪ್ತಿ ವ್ಯಕ್ತಿ ಒಬ್ಬ ಮಧ್ಯಸ್ಥಗಾರನಾಗಿ ಪ್ರಕರಣ ತೀರ್ಮಾನಿಸಬೇಕು. ನ್ಯಾಯಾಂಗ ಅಧಿಕಾರ ಪಡೆದಿರುವುದಿಲ್ಲ. ಮಹಾರಾಷ್ಟ್ರ ಕಾಯಿದೆ ಕಲಂ 96.

37. ಬಾಡಿಗೆ ಕೊಡದೇ ಇರುವುದಕ್ಕೆ ಪರಿಹಾರ ಸೆಕ್ಷನ್ 70ರನ್ವಯ ಅಲ್ಲ. ಐಎಲ್ಆರ್ 1968 ಮೈಸೂರು 582.

38. ಕರ್ನಾಟಕ ಸಹಕಾರಿ ಕಾಯಿದೆ ಒಂದು ಪ್ರಾಂತೀಯ ಕಾಯಿದೆ. ಇದು ವಿಶೇಷ ಕಾಯಿದೆಯಲ್ಲ. ಕಾರ್ಮಿಕ ಕಾಯಿದೆ ಒಂದು ವಿಶೇಷ ಕಾಯಿದೆ ಮತ್ತು ಕಾರ್ಮಿಕ ನ್ಯಾಯಾಲಯಗಳು ಕೈಗಾರಿಕಾ ಪ್ರಾಧಿಕಾರಿಗಳು, ಸಿವಿಲ್ ನ್ಯಾಯಾಲಯಗಳು ಸಹಕಾರಿ ಕಾಯಿದೆ ಕಲಂ 118ರನ್ವಯ ಅಧಿಕಾರ ಕಿತ್ತುಕೊಳ್ಳುತ್ತವೆ ಎಂದು ಅರ್ಥವಲ್ಲ. ಸಹಕಾರಿ ಸಂಘದ ನೌಕರ " ಕಾರ್ಮಿಕ" ಎಂದು ಕೈಗಾರಿಕಾ ಕಾಯಿದೆ ಕಲಂ (2)(5)ರನ್ವಯ ತನ್ನ ಸೇವೆಗೆ ಸಂಬಂಧಪಟ್ಟ ವಿಷಯಗಳನ್ನು ಪರಿಹಾರ ಕೇಳಲು ಅಧಿಕಾರ ಇದೆ. ಕಲಂ 70ರನ್ವಯ ಮತ್ತು 118ರನ್ವಯ ಕಾರ್ಮಿಕ ನ್ಯಾಯಾಲಯವನ್ನು ತೆಗೆದುಹಾಕಿದಂತೆ ಆಗುವುದಿಲ್ಲ. 1981(1) ಕೆಎಲ್ಜೆ 136.

ಸೂಚನೆ: 1998ರ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಕೈಗಾರಿಕಾ ಕಾರ್ಮಿಕ ಕಂದಾಯ ಮತ್ತಿತರೆ ಯಾವುದೇ ಪ್ರಾಧಿಕರಣಕ್ಕೆ ಸಹಕಾರ ಸಂಘಗಳ ನೌಕರರ ಬಗ್ಗೆ ಪರಿಹಾರ ಕೇಳಲಾಗದು ಎಂದು ಸೇರಿಸಿರುವುದರಿಂದ ಮೇಲ್ಕಂಡ ನಿಯಮ ಅನ್ವಯವಾಗುವುದಿಲ್ಲ. ಇದಕ್ಕೆ ಪೂರಕವಾಗಿ ಕರ್ನಾಟಕ ಉಚ್ಚ ನ್ಯಾಯಾಲಯ ತೀರ್ಮಾನ ಕೊಟ್ಟಿದೆ.

39.ಒಂದು ಸಂಘದ ವ್ಯಾಪಾರ ಎಂದರೆ, ಅದು ನೌಕರರಿಗೂ ಸಂಬಂಧಪಡುತ್ತದೆ. ಒಂದು ಸಹಕಾರ ಸಂಘ ಮತ್ತು ಅದರ ನೌಕರರು ಅದರಲ್ಲಿಯೂ ಬೆಲೆ ನಿಗಧಿಪಡಿಸುವ (ಅಪ್ರೈಸರ್) ನೌಕರನು ಸೇರುತ್ತಾನೆ. ಅಂತಹ ವ್ಯಕ್ತಿಯನ್ನು ಸೇವೆಯಿಂದ ವಜಾಗೊಳಿಸಿದಾಗ, ಅದು ಕಲಂ 70ರನ್ವಯ ದಾವಾ ಪ್ರಕರಣ ದಾಖಲಿಸಿ ಪರಿಹರಿಸಿಕೊಳ್ಳಬೇಕು. 1967(7) ಎಂಎಲ್‌ಜೆ 503.

40.ಒಂದು ಸಂಘದ ಪದಾಧಿಕಾರಿ ಹಳೇ ಬಾಕಿಯನ್ನು ವಸೂಲಿ ಮಾಡಿಕೊಳ್ಳುವ ಸಂದರ್ಭದಲ್ಲಿ, ವ್ಯಾಪಾರ ಮತ್ತು ವ್ಯವಹಾರಕ್ಕೆ ಸಂಬಂಧಪಟ್ಟದ್ದು ಎಂದು ನಿರ್ಧರಿಸಬೇಕು. 1972(2) ಮದ್ರಾಸ್ ಎಲ್‌ಜೆ 134.

41. ಒಂದು ಸಹಕಾರ ಸಂಘದ ಕಾರ್ಯದರ್ಶಿ ಸಂಘದಿಂದ ಸಾಲ ಪಡೆದಾಗ ಅದು ಸಂಘದ ವ್ಯವಹಾರ ಮತ್ತು ಅದನ್ನು ಸಾಲ ಮತ್ತು ಅದೇ ರೀತಿ ಅದನ್ನು ವಸೂಲಿ ಮಾಡಬಹುದು. 1971 ಕೆಎಲ್‌ಜೆ 80 ಡಿಬಿ.

42.ಸದಸ್ಯತ್ವದ ಬಗ್ಗೆ ನಾನು ಸದಸ್ಯನಲ್ಲವೆಂದು ಎಲ್ಲಿ ಹೇಳುವುದಿಲ್ಲವೋ, ಅಂತಹ ಸಂದರ್ಭದಲ್ಲಿ ಆ ಪ್ರಕರಣವನ್ನು ದಾವಾ ಎಂದು ಪುರಸ್ಕರಿಸಬಹುದು ಮತ್ತು ಕಲಂ 70ರನ್ವಯ ಕ್ರಮ ಜರುಗಿಸಬಹುದು. 1986(2) ಕೆಎಲ್‌ಜೆ 104/1986(2) ಡಿಎಲ್‌ಜೆ 135.

43.ಒಂದು ಸಹಕಾರ ಸಂಘದ ಸದಸ್ಯ ಒಂದು ಸಂಘದಲ್ಲಿ ಠೇವಣಿ ಇಟ್ಟಾಗ, ಆ ಠೇವಣಿ ವಸೂಲಾತಿಗಾಗಿ ಕಲಂ 70ರನ್ವಯ ಪರಿಹಾರ ಕೇಳಬಹುದು. 1963(2) ಎಂಎಲ್‌ಜೆ 294 ಡಿಬಿ.

44.ಒಂದು ಸಹಕಾರ ಸಂಘದ ಸದಸ್ಯ, ತಾನು ಹೂಡಿದ ಠೇವಣಿ ವಾಪಸ್ಸು ಕೇಳಲು ಕಲಂ 70ನ್ನು ಆಶ್ರಯಿಸಬೇಕು. ಐಎಲ್‌ಆರ್ 1967 ಮೈಸೂರು 427 ಡಿಬಿ.

45.ಒಂದು ಸಹಕಾರಿ ಬ್ಯಾಂಕು ಒಂದು ಸಹಕಾರ ಸಂಘಕ್ಕೆ ಸಾಲ ಕೊಟ್ಟಾಗ, ಆ ಸಹಕಾರ ಸಂಘ ನಷ್ಟದ ಆರೋಪಕ್ಕೆ ಸಂಬಂಧಪಟ್ಟ ವಿಷಯ ವ್ಯಾಪಾರಕ್ಕೆ ಸಂಬಂಧಪಟ್ಟದ್ದು, ಇದಕ್ಕೆ ಕಲಂ 70ರನ್ವಯ ದಾವಾ ದಾಖಲಿಸಬಹುದು. 1985 ಎಸ್‌ಸಿ.

46.ಒಂದು ಸಹಕಾರ ಸಂಘ ಮನೆ ಕಟ್ಟಿಕೊಳ್ಳಲು ನಿವೇಶನ ಹಂಚಿದಾಗ, ಸದಸ್ಯ ಕಲಂ 70ರನ್ವಯ ಪರಿಹಾರ ಕೇಳಬಹುದು. 1979(1) ಎಂಎಲ್‌ಜೆ 196 ಡಿಬಿ.

47.ಒಂದು ಸಹಕಾರ ಸಂಘ ಮತ್ತು ಅದರ ಸದಸ್ಯ ಒಪ್ಪಂದಕ್ಕೆ ಬಂದು ಕಮಿಷನ್ ವಸೂಲಾತಿಗಾಗಿ, ಆ ಸಂಘದ ಸದಸ್ಯರು ಪೂರ್ಣ ಹಣವನ್ನು ಸಹಕಾರ ಸಂಘಕ್ಕೆ ಜಮಾ ಮಾಡಿಲ್ಲವೆಂದು ಸಂಘದ ವ್ಯಾಪಾರ ಅಲ್ಲ. ಎಐಆರ್ 1965 ಎಸ್‌ಸಿ 621.

48.ಒಂದು ಸಹಕಾರ ಸಂಘ ಸರ್ಕಾರದಿಂದ ಒಂದು ಖಾಲಿ ನಿವೇಶನ ಪಡೆದು, ಆ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ, ಒಪ್ಪಂದದ ಮೇಲೆ ಬಾಡಿಗೆದಾರನೆಂದು ನಿರ್ಧರಿಸಿ, ಅಂತಹ ಬಾಡಿಗೆದಾರ ಬಾಡಿಗೆ ಪಾವತಿ ಮಾಡದೆ ಇದ್ದ ಸಂದರ್ಭದಲ್ಲಿ, ಅದು ಬಾಡಿಗೆ ನಿಯಂತ್ರಣ ಕಾಯಿದೆಯಲ್ಲಿ ಮಾಲೀಕ ಮತ್ತು ಬಾಡಿಗೆದಾರ ಎಂಬ ಅರ್ಥದಲ್ಲಿ ಬರುವುದಿಲ್ಲ. ಇದನ್ನು ಸಹಕಾರ ಕಾಯಿದೆಯಡಿ ಮಧ್ಯಸ್ಥದಾರರು ನಿರ್ಧಾರ ಮಾಡುವುದು ಕ್ರಮ. ಎಐಆರ್ 1987 ಎಸ್‌ಸಿ 369.

49.ಒಂದು ಸಹಕಾರ ಸಂಘ ಸದಸ್ಯರಿಗೆ ವಾಸದ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶದಿಂದ ಪ್ರಾರಂಭಿಸಿದ್ದು, ಆ ಸಂಘದಲ್ಲಿ ವಾಸ ಮಾಡುವ ವ್ಯಕ್ತಿಯನ್ನು ಹೊರಹಾಕುವ ಸಂದರ್ಭದಲ್ಲಿ ಅಂತಹ ವ್ಯಕ್ತಿ ನಾಮ ಮಾತ್ರ ಸದಸ್ಯನಾಗಿದ್ದರೆ, ಆ ಮನೆಯಿಂದ ಹೊರಹಾಕುವ ಅಧಿಕಾರ ಮತ್ತು ಅದರ ವ್ಯಾಪ್ತಿ ಸಹಕಾರ ಕಾಯಿದೆಯಲ್ಲಿ ಬರುತ್ತದೆ. ಎಐಆರ್ 1982 ಎಸ್‌ಸಿ 1097.

50.ಒಂದು ಸಹಕಾರ ಸಂಘದ ಸದಸ್ಯರ ತನ್ನ ಅವ್ಯವಹಾರದಲ್ಲಿ, ಸದಸ್ಯನೆಂದು ನಡೆಸಿದಾಗ ಆ ಸದಸ್ಯನ ಹೆಸರಿನಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿಯು ಅಧಿಕಾರದಲ್ಲಿ ಇದ್ದಾಗ, ಅಂತಹ ವ್ಯಕ್ತಿ ಸಹಕಾರಿ ಕಾಯಿದೆಯಡಿ ಬರುತ್ತಾನೆ. ಎಐಆರ್ 1969 ಎಸ್‌ಸಿ 1330.

51. ಒಂದು ಸಹಕಾರ ಸಂಘದ ಸದಸ್ಯ ನಾನು ಆಡಳಿತ ಮಂಡಳಿಯ ಸಭೆಗಳಿಗೆ ಹಾಜರಾಗಿಲ್ಲವೆಂದು, ತೆಗೆದುಹಾಕಿದಾಗ, ಅದು ಕಲಂ 70ರಡಿ ಬರುತ್ತದೆ. ಎಎಲ್‌ಆರ್ 1982(2) 1985 ಕೆಎಲ್‌ಜೆ 326.

52.ಒಂದೇ ಸಹಕಾರ ಸಂಘದ ಎರಡು ಗುಂಪುಗಳು ಚುನಾವಣೆಗೆ ಸಂಬಂಧಪಟ್ಟಂತೆ ದಾಖಲಿಸುವ ದಾವಾ ಸಂಘದ ಆಡಳಿತಕ್ಕೆ ಸಂಬಂಧಪಟ್ಟ ವಿಷಯ. ಅದನ್ನು 70ರನ್ವಯ ಪರಿಹರಿಸಿಕೊಳ್ಳಬೇಕು. 1986(1) ಡಿಎಲ್‌ಜೆ 91.

53. ಒಬ್ಬ ನಾಮನಿರ್ದೇಶನ ಮಾಡಿದ ವ್ಯಕ್ತಿ, ಸಿವಿಲ್ ನ್ಯಾಯಾಲಯದಲ್ಲಿ, ಆಡಳಿತ ಮಂಡಳಿಯನ್ನು ರದ್ದುಪಡಿಸಿದ್ದು, ಕಾನೂನು ಬಾಹಿರ ಎಂದು ಪ್ರಶ್ನಿಸಿದಾಗ, ಅದನ್ನು ಕಲಂ 70ರನ್ವಯವೇ ಪರಿಹರಿಸಿಕೊಳ್ಳಬೇಕು. ಐಎಲ್ಆರ್ 1981(1) ಕೆಎಲ್‌ಜೆ ಎಸ್ಎನ್ (3).

54. ಒಂದು ಸಹಕಾರ ಸಂಘ ತನ್ನ ಆಸ್ತಿಯನ್ನು ಪರಬಾರೆ ಮಾಡಿದ್ದರೆ, ಅಂತಹ ಆಸ್ತಿಯನ್ನು ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆ ಅನ್ವಯ ಪರಿಹರಿಸಿಕೊಳ್ಳಬೇಕು. ಗೌರವ ಮಧ್ಯಸ್ಥಗಾರ ಒಬ್ಬ ಬಾಡಿಗೆದಾರರನ್ನು ಹೊರಹಾಕುವ ಅಧಿಕಾರ ಹೊಂದಿಲ್ಲ. 1986(2) ಕೆಎಲ್‌ಜೆ 474.

55. ಒಂದು ಸಹಕಾರ ಬ್ಯಾಂಕು ತನ್ನ ಆಸ್ತಿಯನ್ನು ಬಾಡಿಗೆಗೆ ಕೊಟ್ಟಾಗ, ಅದು ಬ್ಯಾಂಕಿಗೆ ಸಂಬಂಧಪಟ್ಟ ವ್ಯವಹಾರ ಎಂದು ಭಾವಿಸತಕ್ಕದ್ದು. ಈ ವ್ಯವಹಾರ ಒಬ್ಬ ಬಾಡಿಗೆದಾರ ಹಾಗೂ ಬ್ಯಾಂಕಿಗೆ ಒಬ್ಬ ಸದಸ್ಯ ಇದ್ದು, ಆನಂತರ ಆ ಆಸ್ತಿಯನ್ನು ಬ್ಯಾಂಕಿನವರು ಖರೀದಿಸಿದಾಗ, ಅಂತಹ ಸಂದರ್ಭ ಬ್ಯಾಂಕಿನ ವ್ಯಾಪಾರಕ್ಕೆ ಸಂಬಂಧಪಟ್ಟದಲ್ಲ.. ಇದು ಮಾಲೀಕ ಮತ್ತು ಬಾಡಿಗೆದಾರ ಎಂದಾಗುತ್ತದೆ. ಮತ್ತು ಇದನ್ನು ಬಾಡಿಗೆ ನಿಯಂತ್ರಣ ಕಾಯಿದೆಯಡಿ ಪರಿಹರಿಸಿಕೊಳ್ಳಬೇಕು. 1986(2) ಕೆಎಲ್‌ಜೆ 472.

56. ಒಂದು ಸಹಕಾರ ಸಂಘದ ಬೈಲಾ ತಿದ್ದುಪಡಿ ಮಾಡುವ ವಿಷಯ ಕಲಂ 70ರಲ್ಲಿ ಬರುವುದಿಲ್ಲ. 1966(1) ಎಂಎಲ್‌ಜೆ 215 ಡಿಬಿ.

57. ಒಂದು ಸಹಕಾರ ಸಂಘದ ನೌಕರನಿಗೆ ಗ್ರ್ಯಾಚುಟಿ ಪಾವತಿ ಮಾಡುವ ವಿಷಯ, ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದಲ್ಲ. ಅದು ಕಾರ್ಮಿಕ ನ್ಯಾಯಾಲಯಕ್ಕೆ ಸಂಬಂಧಪಟ್ಟಿದ್ದು. ಎಲ್ಲಿ ಒಬ್ಬ ನೌಕರ ನಿವೃತ್ತಿ ಹೊಂದುವ ಸಮಯದಲ್ಲಿ ಅವನ ಖಾತೆಯಲ್ಲಿರುವ ಎರಡು ತಿಂಗಳ ಸಂಬಳವನ್ನು ಕೊಡಲು ನಿರಾಕರಿಸಲಾಯಿತು, ಅಂತಹ ಸಂದರ್ಭ ಅವನು 2 ತಿಂಗಳ ಸಂಬಳಕ್ಕೆ ಅರ್ಹ. 1976(1) ಕೆಎಲ್‌ಜೆ 102–ಐಎಲ್ಆರ್ 1976 111.

**ಸೂಚನೆ: ಈ ನಿರ್ಣಯ, 1998ರ ತಿದ್ದುಪಡಿಯ ನಂತರ ಅನ್ವಯವಾಗುವುದಿಲ್ಲ.**

58. ಸರ್ಕಾರ ಸಹಕಾರ ಸಂಘಗಳ ಕಾಯಿದೆ 53ಎ ರಲ್ಲಿ ಕ್ರಮ ಜರುಗಿಸಿದಾಗ, ಆ ಸಂಘದ ಕಾರ್ಯದರ್ಶಿ ಪ್ರಥಮ ಮಹಾಸಭೆಯನ್ನು ಕಲಂ 27ರನ್ವಯ ಕರೆದಿದ್ದು, ಮುಂದೂಡಿದ್ದನ್ನು ಕಲಂ 70ರನ್ವಯ ಪರಿಹರಿಸಿಕೊಳ್ಳತಕ್ಕದ್ದಲ್ಲ. ಅದನ್ನು 70ರನ್ವಯ ಬರುವ ದಾವಾ ಎಂದು ತಿಳಿಯತಕ್ಕದಲ್ಲ. 1979(2) ಕೆಎಲ್‌ಜೆ ಎಸ್ಎನ್ 51 ಡಿಬಿ.

59. ಒಂದು ಸಹಕಾರ ಸಂಘ ಮತ್ತು ಸದಸ್ಯನಲ್ಲದ ವ್ಯಕ್ತಿಯ ಮಧ್ಯೆ ಇರುವ ವ್ಯವಹಾರವನ್ನು ಸಹಕಾರ ಸಂಘದ ಅನ್ವಯ ಪರಿಹರಿಸಿಕೊಳ್ಳತಕ್ಕದಲ್ಲ. ಎಐಆರ್ 1967 ಎಸ್‌ಸಿ 289.

60. ಒಂದು ಸಹಕಾರ ಸಂಘ ಹಣಕಾಸು ಪೂರೈಸುವ ಸಂಸ್ಥೆ ಮತ್ತು ಸದಸ್ಯನಲ್ಲದ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ಪರಿಹಾರವನ್ನು ಸಹಕಾರಿ ಕಾಯಿದೆಯಡಿ ಪರಿಹರಿಸಿಕೊಳ್ಳತಕ್ಕದ್ದಲ್ಲ. ಇದು ಸಿವಿಲ್ ನ್ಯಾಯಾಲಯಕ್ಕೆ ಸಂಬಂಧಪಟ್ಟಿದ್ದು. 1962 ಎಸ್‌ಸಿ 1962.

61. ಸಹಕಾರಿ ಕಾಯಿದೆಯಲ್ಲಿ ಸದಸ್ಯತ್ವವೇ ಪ್ರಾಮುಖ್ಯ. ಯಾವುದೇ ಪ್ರಾಧಿಕಾರ ಸದಸ್ಯನಲ್ಲದ ವ್ಯಕ್ತಿಯ ವ್ಯವಹಾರವನ್ನು ಪರಿಹಾರ ಮಾಡತಕ್ಕದಲ್ಲ. ಎಲ್ಲಿ ಸದಸ್ಯರ ಹಕ್ಕು ಬಾಧ್ಯತೆ ಪಡೆದಂತಹ ವ್ಯಕ್ತಿ ಪರಿಹಾರ ಕೇಳಿದಾಗ ತುರ್ತಾಗಿ, ತೀರ್ಮಾನ ಕೈಗೊಳ್ಳಬೇಕು. ಸದಸ್ಯನಲ್ಲದ ಯಾವುದೇ ವ್ಯಕ್ತಿ ಸಹಕಾರ ಕಾಯಿದೆಯಡಿ ಪರಿಹಾರ ಕೇಳತಕ್ಕದ್ದಲ್ಲ. 1970 ಎಂಎಲ್‌ಜೆ 344 ಡಿಬಿ.

62. ಒಂದು ಸಹಕಾರ ಸಂಘ ಸದಸ್ಯನಲ್ಲದ ಒಬ್ಬ ಜಾಮೀನುದಾರರ ಮೇಲೆ, ಕಲಂ 70ರನ್ವಯ ಕ್ರಮ ಜರುಗಿಸತಕ್ಕದಲ್ಲ. ಐಎಲ್ಆರ್ 1973 ಕರ್ನಾಟಕ 684.

63. ಸಹಕಾರ ಸಂಘಗಳು ಸಂವಿಧಾನದ ಪರಿಚ್ಛೇದ 12ರನ್ವಯ ಬರುವುದಿಲ್ಲ. ಆದ್ದರಿಂದ ಸಹಕಾರ ಸಂಘ ಮತ್ತು ಅದರ ನೌಕರರಿಗೆ ಸಂಬಂಧಪಟ್ಟಂತೆ ಮಧ್ಯಸ್ಥಗಾರರ ಮುಖಾಂತರ ಕಲಂ 70ನ್ನು ಆಶ್ರಯಿಸಬೇಕು. ಸಂವಿಧಾನದ ಪರಿಚ್ಛೇದ 226ರನ್ವಯ ರಿಟ್ ಮುಖಾಂತರ ಅಲ್ಲ. 1985(1) ಕೆಎಲ್‌ಜೆ ಎಸ್ಎನ್ 11.

64. ಒಂದು ಸಹಕಾರ ಸಂಘದ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯ ನಾಮಪತ್ರ ತಿರಸ್ಕರಿಸಿದಾಗ ಅದಕ್ಕೆ ಪರಿಹಾರ ಸಹಕಾರಿ ಕಾಯಿದೆ ಕಲಂ 70 ಸಂವಿಧಾನದ ಪರಿಚ್ಛೇದ 226ರಲ್ಲಿ ಪರಿಹಾರ ಸಿಗುವುದಿಲ್ಲ. ಎಐಆರ್ 1982 ಕರ್ನಾಟಕ 220.

65. ಕಲಂ 70ರನ್ವಯ ಹೂಡುವ ದಾವಾ ಪ್ರಕರಣ ನಾಮಪತ್ರ ತಿರಸ್ಕರಿಸಿದ ಸಂದರ್ಭದಲ್ಲಿ ಸೂಕ್ತ ಪರಿಹಾರ ಪಡೆಯಬೇಕು. ಹಾಗೂ ಚುನಾವಣೆ ನಡೆದ ಬಗ್ಗೆ ಪರಿಹಾರ ಪಡೆಯಬಹುದು. 1979(2) ಕೆಎಲ್‌ಜೆ ಎಸ್‌ಎನ್ 32.

66. ಚುನಾವಣೆಗೆ ಸಂಬಂಧಪಟ್ಟ ಯಾವುದೇ ವ್ಯವಹಾರವನ್ನು ಪದಾಧಿಕಾರಿಗಳಿಗೆ ಸಂಬಂಧಪಟ್ಟಂತೆ ಕಲಂ 70ರನ್ವಯ ಪರಿಹಾರ ಪಡೆಯತಕ್ಕದ್ದು. ಸಹಕಾರಿ ಕಾಯಿದೆಯ ಕಲಂ 70 ಒಂದು ಸಮರ್ಪಕ ಪರಿಹಾರ ಕೊಡುವ ಒಂದು ವ್ಯವಸ್ಥೆ, ಸಂವಿಧಾನದ ಪರಿಚ್ಛೇದ 226ರನ್ವಯ ಅಲ್ಲ. 1963(1) ಎಂಎಲ್‌ಜೆ 204 ಡಿಬಿ.

67. ಸುಸ್ತಿದಾರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಬಗ್ಗೆ ಪರಿಹಾರ ಕಲಂ 70ರಲ್ಲಿ ಪಡೆಯಬೇಕು. ರಿಟ್ ಅರ್ಜಿ ಮುಖಾಂತರ ಅಲ್ಲ. 1984(1) ಎಸ್‌ಎನ್ 43.

68. ಒಂದು ಸಹಕಾರ ಸಂಘದ ಕಾರ್ಯದರ್ಶಿ ಪದಾಧಿಕಾರಿ ಆಯ್ಕೆಗೆ ಕಲಂ 29ಹೆಚ್ ರನ್ವಯ ನೋಟೀಸ್ ಕಳುಹಿಸುವಾಗ ಪೂರ್ವಬಾವಿ ಆದೇಶ (ಪ್ರಿ ಮೆಚ್ಯೂರ್ಡ್) ಅನೂರ್ಜಿತ. ಅಂತಹ ಸಮಯದಲ್ಲಿ ಪರಿಹಾರವನ್ನು ಕಲಂ 70ರನ್ವಯ ಪಡೆಯಬೇಕೆಂದು ತಿಳಿಸುವುದು ಸೂಕ್ತವಲ್ಲ. 1991(1) ಕೆಎಲ್‌ಜೆ 1872 ಡಿಬಿ.

69. ಸಂಘದ ಎಲ್ಲಾ ಸದಸ್ಯರು ನೋಟೀಸ್ ಜಾರಿ ಮಾಡದೆ ಅರ್ಜಿದಾರನು ಸದಸ್ಯತ್ವದಿಂದ ತೆಗೆದುಹಾಕುವ ಒಂದು ಠರಾವಿಗೆ ಅದನ್ನು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ ಎಂದು ಪರಿಗಣಿಸಬೇಕು. ಅಂತಹ ಸಂದರ್ಭದಲ್ಲಿ ಸಂವಿಧಾನ ಪರಿಚ್ಛೇದ 226ರನ್ವಯ ಪರಿಹಾರ ಕೊಡಬಹುದು. 1969(2) ಎಂಎಲ್‌ಜೆ 336 ಡಿಬಿ.

70. ನಾಮಪತ್ರವನ್ನು ಕಾನೂನುಬದ್ಧವಾಗಿ ತಿರಸ್ಕರಿಸಲಾಗದಿದ್ದರೂ, ತಿರಸ್ಕರಿಸಿದಾಗ ಕಲಂ 70ರನ್ವಯ ಪರಿಹಾರ ಕೊಡಲು ಅವಶ್ಯಕತೆ ಇದೆ. ಸಂವಿಧಾನ ಪರಿಚ್ಛೇದ 226ರಲ್ಲಿ ಪರಿಹಾರ ಕೊಡಲಾಗದು ಎಂದು ತಿಳಿಯತಕ್ಕದ್ದಲ್ಲ. 1961 ಎಂಎಲ್‌ಜೆ 942 ಡಿಬಿ.

71. ಕಲಂ 70ರನ್ವಯ ಸಿವಿಲ್ ನ್ಯಾಯಾಲಯದ ವ್ಯಾಪ್ತಿಯನ್ನು ತೆಗೆದುಹಾಕಲಾಗಿದೆ. ಆದರೆ ಒಂದು ದಾವಾ ಪ್ರಕರಣದಲ್ಲಿ ಒಬ್ಬ ಸದಸ್ಯನಲ್ಲದ ವ್ಯಕ್ತಿಯ ಮೇಲೆ ಪ್ರಕರಣ ಮುಂದುವರಿಸಿದರೆ, ಅದು ವ್ಯಾಪ್ತಿಗೆ ಮೀರಿದ್ದು. 1972(1) ಎಂಎಲ್‌ಜೆ 365.

72. ಒಂದು ಸಹಕಾರ ಸಂಘದ ಸದಸ್ಯ, ಆ ಸಂಘದಲ್ಲಿ ಹೂಡಿದ್ದ ಠೇವಣಿ ವಸೂಲಾತಿಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕೇಳಿದರೆ ಅದು ಸಿಂಧುವಲ್ಲ. 1963(2) ಎಂಎಲ್‌ಜೆ 294 ಡಿಬಿ.

73. ಬಾಡಿಗೆ ವಸೂಲಾತಿಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ಒಂದು ದಾವೆ ಸಹಕಾರ ಸಂಘದ ವ್ಯಾಪಾರ ಆಗುವುದಿಲ್ಲ. ಎಎಲ್‌ಆರ್ 1975 ಕರ್ನಾಟಕ 235.

74. ನಿಬಂಧಕರು ಒಂದು ದಾವಾ ಪ್ರಕರಣವನ್ನು ಸ್ವೀಕರಿಸುವಾಗ, ಪ್ರಥಮ ವಿಷಯವಾಗಿ ದಾವಾ ಹೌದೋ, ಅಲ್ಲವೋ ಎಂದು ತೀರ್ಮಾನಿಸಬೇಕು. ಎಐಆರ್ 1979 ಎಸ್‌ಸಿ 1203.

75. ನಿಬಂಧಕರು ಕಲಂ 70(3)ರಲ್ಲಿ ತೀರ್ಮಾನ ತೆಗೆದುಕೊಂಡಿದ್ದು ಅಂತಿಮ ಹಾಗೂ ಇದು ಕಲಂ 107ರಲ್ಲಿ ಪುನರ್ ವಿಮರ್ಶೆಗೆ ಅರ್ಹವಲ್ಲ. 1975(2) ಕೆಎಲ್‌ಜೆ 372 ಡಿಬಿ ಈ ತೀರ್ಮಾನವನ್ನು ವಿಭಾಗೀಯ ಪೀಠ 1975(2) ಕೆಎಲ್‌ಜೆ ಎಸ್‌ಎನ್ 104ರಡಿಯಲ್ಲಿ ಎತ್ತಿಹಿಡಿದಿದೆ.

76. ಕಲಂ 70ರನ್ವಯ ಯಾವುದೇ ಪಕ್ಷ ದಾವಾ ದಾಖಲಿಸಬಹುದು. ಸಹಕಾರ ಸಂಘವೇ ದಾಖಲಿಸಬೇಕೆಂಬ ನಿಯಮವಿಲ್ಲ. 1963(1) ಕೆಎಲ್‌ಜೆ 204 ಡಿಬಿ.

77. ಎಲ್ಲಿ ಒಂದು ದಾವಾ ಮೀನುಗಾರರ ಸಹಕಾರ ಸಂಘ ಮತ್ತು ಅದರ ಸದಸ್ಯರ ನಡುವೆ ಅಥವಾ ಎರಡು ಮೀನುಗಾರರ ಸಹಕಾರ ಸಂಘದ ನಡುವೆ ಅಲ್ಲವೋ, ಅಂತಹ ಪ್ರಕರಣವನ್ನು ಜಂಟಿ ರಿಜಿಸ್ಟ್ರಾರರವರು ಗೌರವ ಮಧ್ಯಸ್ಥದಾರರಿಗೆ ಕಳುಹಿಸತಕ್ಕದ್ದಲ್ಲ. 1988(1) ಕೆಎಲ್‌ಜೆ 194.

78. ಒಂದು ಸಹಕಾರ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಉದ್ಭವಿಸುವ ಯಾವುದೇ ಅಥವಾ ಎಲ್ಲಾ ತರಹದ ಪ್ರಕರಣವನ್ನು ಕಲಂ 70ರನ್ವಯ ದಾಖಲಿಸಬೇಕು. ಆ ರೀತಿ ದಾಖಲಿಸುವಾಗ ಒಬ್ಬ ಕಕ್ಷಿದಾರ ದಾಖಲಿಸಬೇಕು. ಆದರೆ ಒಂದು ಸಹಕಾರ ಸಂಘ ಚುನಾವಣೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಡೆದ, ನಡೆಯಬಹುದಾದ ಚುನಾವಣೆ ಬಗ್ಗೆ ಪ್ರತಿಕ್ರಿಯಿಸತಕ್ಕದಲ್ಲ. 1963 ಎಂಎಲ್‌ಜೆ 204.

79. ಒಂದು ಸಹಕಾರ ಸಂಘದ ವ್ಯವಹಾರದಲ್ಲಿ ಪ್ರತ್ಯೇಕ ಮತ್ತು ಪರೋಕ್ಷವಾಗಿ ಸಂಘದ ವ್ಯಾಪಾರಕ್ಕೆ ಸಂಬಂಧಪಟ್ಟಿದ್ದರೆ ಅಥವಾ ಅದಕ್ಕೆ ಪೂರಕವಾದ ಕೆಲಸಕ್ಕೆ ಸಂಬಂಧಪಟ್ಟಿದ್ದರೆ ಅದನ್ನು ಸಂಘದ ವ್ಯವಹಾರವೆಂದು ತೀರ್ಮಾನಿಸತಕ್ಕದ್ದು. ಇಂತಹ ವ್ಯವಹಾರವನ್ನು ಸಂಘದ ಆಡಳಿತ ವ್ಯವಹಾರದಲ್ಲಿ ಬರುತ್ತದೆ ಎಂದು ತೀರ್ಮಾನಿಸುವುದು ತಪ್ಪಲ್ಲ. 1967(2) ಎಂಎಲ್‌ಜೆ 503.

80. ಒಂದು ಸಹಕಾರ ಸಂಘದ ಆಡಳಿತ ವ್ಯವಹಾರ ಅಂದರೆ, ಅದು ಮಾಡುವ ವ್ಯಾಪಾರ, ಖರೀದಿ, ಮಾರಾಟ, ಬಾಡಿಗೆ ಪಡೆಯುವುದು, ಕೊಡುವುದು, ಬಾಡಿಗೆ ಪಾವತಿ ಮಾಡದೆ ಇದ್ದಾಗ, ಅಂತಹ ವ್ಯವಹಾರವನ್ನು ಮತ್ತು ಯಾವ ಸ್ಥಳವನ್ನು ಬಾಡಿಗೆಗೆ ಪಡೆಯಲಾಗಿದೆಯೇ ಮತ್ತು ಬಾಡಿಗೆಗೆ ಕೊಟ್ಟಾಗ ಇದು ಸಂಘದ ವ್ಯವಹಾರ ಆಗುವುದಿಲ್ಲ. ಐಎಲ್‌ಆರ್ 1974 ಕರ್ನಾಟಕ 1028.

81. ಬಾಡಿಗೆ ವಸೂಲಾತಿಗಾಗಿ ದಾವಾ ಹಾಕಿದಾಗ ಅದು ಒಂದು ಸಂಘದ ವ್ಯಾಪಾರ ಆಗುವುದಿಲ್ಲ. ಐಎಲ್‌ಆರ್ 1973 ಮೈಸೂರು 235.

82. ಒಂದು ಮಾರಾಟ ಅಥವಾ ಖರೀದಿ ಸಹಕಾರ ಸಂಘ ತನ್ನ ಹಿಂದಿನ ಕಾರ್ಯದರ್ಶಿ ಮೇಲೆ ಮಾರಾಟವಾದ ವಸ್ತುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂಬ ಆಧಾರದ ಮೇಲೆ ದಾವಾ ದಾಖಲಿಸಬಹುದು. 1975(2) ಕೆಎಲ್‌ಜೆ 118.

83. ಒಂದು ದಾವಾ, ಒಂದು ಸಹಕಾರ ಸಂಘದ ಮತ್ತು ಹಿಂದಿನ ನೌಕರರನ್ನು ವಜಾ ಮಾಡಿದ ಪ್ರಕರಣಕ್ಕೆ, ಅದು ಆ ಸಂಘದ ಆಡಳಿತ ವ್ಯವಹಾರ ಎಂದು ಪರಿಗಣಿಸಲಾಗದು. ಎಐಆರ್ 1973 ಮೈಸೂರು 1072(2) ಎಂಎಲ್‌ಜೆ 307. ಟಿಪ್ಪಣಿ: ಈ ತೀರ್ಪಿನ ನಂತರ ಕಲಂ 70(1)(ಇ) ಕ್ಕೆ ತಿದ್ದುಪಡಿ ತಂದು, ಇಂತಹ ಪ್ರಕರಣವನ್ನು ದಾಖಲಿಸಬಹುದು. ಅವಕಾಶ ಕಲ್ಪಿಸಲಾಗಿರುವುದರಿಂದ ಈ ತೀರ್ಮಾನ ಅನ್ವಯವಾಗುವುದಿಲ್ಲ.

84. ಒಂದು ಸಹಕಾರ ಸಂಘ ಒಂದು ನಿವೇಶನವನ್ನು ಕೊಟ್ಟಾಗ, ಅಂತಹ ನಿವೇಶನವನ್ನು ಕೊಡಲು ಬರುವುದಿಲ್ಲವೆಂದು, ಸಂಘದ ವ್ಯವಹಾರವೆಂದು ಪರಿಗಣಿಸಿ ದಾವಾ ದಾಖಲಿಸಬಹುದು. 1979(1) ಎಂಎಲ್‌ಜೆ

85. ಚುನಾವಣೆ ಪೂರ್ವದಲ್ಲಿ ಅನರ್ಹತೆಗೊಂಡಿದ್ದರೆ, ಅದು ಕಲಂ 70ರನ್ವಯ ದಾವಾ ಆಗುತ್ತದೆ. 1879 ಕೆಎಲ್‌ಜೆ 174.

86. ಒಂದು ಸಹಕಾರ ಸಂಘದ ಬೈಲಾವನ್ನು ತಿದ್ದುಪಡಿ ಮಾಡುವುದು, ಒಂದು ಸಹಕಾರ ಸಂಘದ ಸದಸ್ಯರು ಮತ್ತು ನಿಬಂಧಕರ ಮಧ್ಯೆ ದಾವಾ ಪ್ರಕರಣವಾಗುವುದಿಲ್ಲ. ಎಐಆರ್ 1966 ಮೈಸೂರು 274– ಐಎಲ್‌ಆರ್ 1965 ಮೈಸೂರು 1168– 1966(1) ಎಂಎಲ್‌ಜೆ 215.

87. ಒಂದು ಸಂಘ ತನ್ನ ಸದಸ್ಯರ ಮೇಲೆ ಅಥವಾ ಒಬ್ಬ ಸದಸ್ಯ ಒಂದು ಸಹಕಾರ ಸಂಘದ ಮೇಲೆ ಕ್ರಮ ಜರುಗಿಸಬೇಕೆಂದು ಪ್ರತಿರೋಧ ಒಡ್ಡಿದರೆ, ಅದು ಸಂಘದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು, ಅದನ್ನು ಕಲಂ 70ರನ್ವಯ ತೀರ್ಮಾನಿಸಬೇಕು. ಹಾಗೂ ಅಂತಹ ಪ್ರಕರಣ ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಗೆ ತಡೆಹಿಡಿಯಲಾಗಿದೆ. ಐಎಲ್‌ಆರ್ 1967 ಮೈಸೂರು 427 ಡಿಬಿ.

88. ಸಹಾಯಕ ನಿಬಂಧಕರು ಮಧ್ಯಂತರ ಆದೇಶವನ್ನು, ಅಂದರೆ ತಡೆಯಾಜ್ಞೆ ನೀಡಿದ ನಂತರ, ದಾವಾ ಪ್ರಕರಣವನ್ನು ಗೌರವ ಮಧ್ಯಸ್ಥದಾರರಿಗೆ ವರ್ಗಾಯಿಸಬಹುದು. 1958 ಕರ್ನಾಟಕ ಎಂಎಲ್‌ಜೆ 184 ಡಿಬಿ.

89. ಒಂದು ದಾವಾ ಪ್ರಕರಣದಲ್ಲಿ ಮತ ಚಲಾವಣೆ ಮಾಡಿದಾಗ ಮತ್ತು ಆಡಳಿತ ಮಂಡಳಿಯನ್ನು ರಚನೆ ಮಾಡಿದ ಸಂದರ್ಭದಲ್ಲಿ, ಅದನ್ನು ರಿಟ್ ಅರ್ಜಿ ಮುಖಾಂತರ ತೀರ್ಮಾನಿಸಲಾಗದು. ಮತ್ತು ಅದನ್ನು ಕಲಂ 70ರನ್ವಯ ತೀರ್ಮಾನಿಸಬೇಕು. (ಕಾಸ್ ಆಫ್ ಆಕ್ಷನ್) ಐಎಲ್‌ಆರ್ 1968 645–1968 ಎಂಎಲ್‌ಜೆ 313 ಡಿಬಿ.

90. ಒಂದು ಸಹಕಾರ ಸಂಘದ ಉದ್ದೇಶ ಮನೆಗಳನ್ನು ಕಟ್ಟಿಸಿ ಸದಸ್ಯರಿಗೆ ಹಂಚುವುದೇ ಉದ್ದೇಶವಾಗಿದ್ದಾಗ, ಮನೆಯನ್ನು ಸದಸ್ಯರಿಗೆ ಹಂಚುವುದು, ಸದಸ್ಯ ಮತ್ತು ಸಂಘದ ಮಧ್ಯೆ ಒಂದು ವ್ಯಾಪಾರಿ ವ್ಯವಹಾರವಾಗಿರುತ್ತದೆ. ಅದನ್ನು ಕಲಂ 70ರನ್ವಯ ತೀರ್ಮಾನಿಸಬೇಕು. ಐಎಲ್‌ಆರ್ 1969(1) ಮೈಸೂರು 1376–1969 ಎಂಎಲ್‌ಜೆ 186 ಡಿಬಿ.

91. ಒಂದು ಸಂಘ ಸದಸ್ಯರು ಸಂಘದಲ್ಲಿ ಇಟ್ಟ ವಸ್ತುಗಳ ಆಧಾರದ ಮೇಲೆ ಸಾಲ ಕೊಡಬಹುದು. ಇದು ಸಂಘದ ವ್ಯವಹಾರ. ಇದನ್ನು ಕಲಂ 70ರನ್ವಯ ಕ್ರಮ ಜರುಗಿಸಬೇಕು. ಬೈಲಾ ವಿರುದ್ಧವಾಗಿ ನಿರ್ದೇಶಕರಿಗೆ ಸಾಲ ಮಂಜೂರು ಮಾಡಿದ್ದರೂ. ಅದರ ವಸೂಲಾತಿಗೆ ಬಾಧಕವಲ್ಲ. ಐಎಲ್‌ಆರ್ 1974 ಕರ್ನಾಟಕ 574–ಐಎಲ್‌ಜೆ 1974 ಕರ್ನಾಟಕ 449.

92.ನಿಬಂಧಕರು ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಪಟ್ಟಂತೆ ತೀರ್ಮಾನಿಸಲು ಅಧಿಕಾರ ಹೊಂದಿರುತ್ತಾರೆ. ನಿಬಂಧಕರು ಗೌರವ ಮಧ್ಯಸ್ಥದಾರರು ಅಥವಾ ಮತ್ಯಾವುದೇ ಅಧಿಕಾರಿ ದಾವಾ ತೀರ್ಮಾನಿಸುವಾಗ ಸಿವಿಲ್ ನ್ಯಾಯಾಲಯಗಳಿಗೆ ಇರುವ ಎಲ್ಲಾ ಅಧಿಕಾರ ಹೊಂದಿರುತ್ತಾರೆ. ಮತ್ತು ಅಂತಹ ಸಂದರ್ಭದಲ್ಲಿ ನ್ಯಾಯಾಲಯದ ತೀರ್ಮಾನವನ್ನು ಆಧಾರವಾಗಿಟ್ಟು ತೀರ್ಮಾನ ಕೊಡಬಹುದು. ಐಎಲ್ಆರ್ 1975(2) ಕರ್ನಾಟಕ 1672–1975(2) ಕೆಎಲ್‌ಜೆ 235.

93.ಚುನಾವಣೆಗೆ ಪೂರ್ವದಲ್ಲಿ ಗಳಿಸಿದ ಅನರ್ಹತೆಯನ್ನು ತೀರ್ಮಾನಿಸಲು ಉಪನಿಬಂಧಕರನ್ನು ಗೌರವ ಮಧ್ಯಸ್ಥದಾರರನ್ನಾಗಿ ಕಲಂ 70ರನ್ವಯ ನೇಮಕ ಮಾಡಬಹುದು. ಅಂತಹ ಪ್ರಕರಣಗಳಲ್ಲಿ ಉಪನಿಬಂಧಕರು ವಿಚಾರಣೆ ನಡೆಸಿ ಚುನಾವಣೆ ತಕರಾರು ಅರ್ಜಿ ತೀರ್ಮಾನಿಸಬಹುದು. ಐಎಲ್ಆರ್ 1979(1) ಕರ್ನಾಟಕ 124 ಡಿಬಿ.

94.ಒಂದು ಸಾಲವನ್ನು ಯಾವುದೇ ಆಸ್ತಿಯನ್ನು ಆಧಾರವಾಗಿಟ್ಟು ಒಬ್ಬ ಸದಸ್ಯನಿಗೆ ಸಾಲ ಕೊಟ್ಟಿದ್ದರೆ ಅಂತಹ ಪ್ರಕರಣದಲ್ಲಿ ಕಲಂ 70ರಲ್ಲಿ ದಾವಾ ಹೂಡುವ ಬದಲಾಗಿ ಕಲಂ 99ರನ್ವಯ ವಸೂಲಿ ಮಾಡಬಹುದು. ಐಎಲ್ಆರ್ 1979 ಕರ್ನಾಟಕ ಎಸ್ಎನ್ 37–1979 ಕರ್ನಾಟಕ ಕೆಎಲ್‌ಜೆ 355.

95.ಸಹಕಾರ ಸಂಘಗಳ ಕಾಯಿದೆ 1976ರ ತಿದ್ದುಪಡಿಗೆ ಪೂರ್ವದಲ್ಲಿ, ನೌಕರರು ಮತ್ತು ಸಂಘದ ಮಧ್ಯೆ ವ್ಯವಹಾರವನ್ನು ಕಾರ್ಮಿಕ ಕಾಯಿದೆಯಡಿಯಲ್ಲಿಯೂ ತೀರ್ಮಾನಿಸಬಹುದಾಗಿತ್ತು. (ಐಡಿ ಆಕ್ಟ್) ಐಎಲ್ಆರ್ 1979(2) ಎಸ್ಎನ್ 139.

96.ನೌಕರರು ಮತ್ತು ಸಹಕಾರ ಸಂಘದ ಮಧ್ಯೆ ಇರುವ ಪ್ರಕರಣವನ್ನು ಕಾರ್ಮಿಕ ನ್ಯಾಯಾಲಯದಲ್ಲಿಯೂ ನಡೆಸಬಹುದು. ಐಎಲ್ಆರ್ 1976(1) ಕರ್ನಾಟಕ 111–1976 ಕೆಎಲ್‌ಜೆ 102–ಐಎಲ್ಆರ್ 1989(2) 1388–1981(1) ಕೆಎಲ್‌ಜೆ 136.

ಸೂಚನೆ: ಈ ತೀರ್ಪಿನ ನಂತರ 1998ರ ಕಾಯಿದೆ ತಿದ್ದುಪಡಿಯಲ್ಲಿ ನೌಕರರು ಮತ್ತು ಸಂಘದ ಮಧ್ಯೆ ಇರುವ ಎಲ್ಲಾ ಪ್ರಕರಣಗಳನ್ನು ಸಹಕಾರಿ ನ್ಯಾಯಾಲಯ ಬಿಟ್ಟು ಬೇರೆ ನ್ಯಾಯಾಲಯಗಳ ವ್ಯಾಪ್ತಿಯಲ್ಲಿ ತೆಗೆದುಹಾಕಿದೆ. ಆದುದರಿಂದ ಈ ಮೇಲ್ಕಂಡ ತೀರ್ಮಾನಗಳು 1998ರ ತಿದ್ದುಪಡಿ ನಂತರ ಅನ್ವಯವಾಗುವುದಿಲ್ಲ.

97.ಕಲಂ 70ರನ್ವಯ ಹೂಡಬಹುದಾದ ಪ್ರಕರಣವನ್ನು ಕಲಂ 69ರಡಿಯೂ ದಾಖಲಿಸಬಹುದು. ಐಎಲ್ಆರ್ 1982 ಎಸ್ಎನ್ 49–1982 ಕೆಎಲ್‌ಜೆ ಎಸ್ಎನ್ 102.

98.ಒಂದು ಸಹಕಾರ ಸಂಘದ ಚುನಾವಣೆಯಲ್ಲಿ ನಾಮಪತ್ರ ತಿರಸ್ಕರಣೆಗೊಂಡಾಗ, ಅಂತಹ ಪ್ರಕರಣಗಳನ್ನು ಸಂವಿಧಾನದ ಪರಿಚ್ಛೇದ 226ರಲ್ಲಿ ಜರುಗಿಸಲಾಗದು. ಎಐಆರ್ 1982 ಕರ್ನಾಟಕ 220–1981 ಕೆಎಲ್‌ಜೆ 414.

99.ಚುನಾವಣೆ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಮತ್ತು ಸುಸ್ತಿದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಬಗ್ಗೆ, ದಾವಾ ಮುಖಾಂತರ ಪರಿಹರಿಸಿಕೊಳ್ಳಬೇಕು. ಹಾಗೂ ಅದನ್ನು ಸಂವಿಧಾನ ಪರಿಚ್ಛೇದ 226ರನ್ವಯ ಅಲ್ಲ. 1984(1) ಎಸ್ಎನ್ 43.

100.ಒಂದು ಸಹಕಾರ ಸಂಘ ತನ್ನ ವಶದಲ್ಲಿದ್ದ ಆಸ್ತಿಯನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ಅಥವಾ ಬಾಡಿಗೆ ಆಧಾರದ ಮೇಲೆ ಕೊಟ್ಟಾಗ ಅದು ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಗೆ ಬರುತ್ತದೆಯೇ ಹೊರತು ದಾವಾ ಮುಖಾಂತರವಲ್ಲ. 1976(2) ಕೆಎಲ್‌ಜೆ 474.

101.ಸಂಘದ ಆಸ್ತಿಯಲ್ಲಿ ಕೊರತೆಯುಂಟುಮಾಡಿದ ಒಬ್ಬ ವ್ಯಕ್ತಿ ಸದಸ್ಯತ್ವದ ಬಗ್ಗೆ ತೀರ್ಮಾನವಾಗದೆ ಇದ್ದರೂ, ಅಂತಹ ಪ್ರಕರಣವನ್ನು ದಾವಾ ಎಂದು ಪರಿಗಣಿಸಿ (ಡೀಮ್ಡ್ ಡಿಸ್ಪ್ಯೂಟ್) ಎಂದು ಕಲಂ 70ರನ್ವಯ ದಾವಾ ಹೂಡಬಹುದು. 1986 ಕೆಎಲ್‌ಜೆ 104.

102.ಒಂದು ಸಹಕಾರ ಸಂಘದಲ್ಲಿ ಎರಡು ಗುಂಪುಗಳಿದ್ದು, ಪ್ರತಿಯೊಂದು ಗುಂಪು ತನ್ನ ಗುಂಪೇ ಆಡಳಿತ ಮಂಡಳಿಗೆ ಆಯ್ಕೆ ಆಗಿದೆ ಎಂದು ಸಹಕಾರಿ ಸಂಘದ ಆಡಳಿತಕ್ಕೆ ಸಂಬಂಧಪಟ್ಟದ್ದು. ಐಎಲ್ಆರ್ 1986(3)–1987(1) ಕೆಎಲ್‌ಜೆ ಎಸ್ಎನ್ 72.

103.ದಾವಾ ಪ್ರಕರಣ ತೀರ್ಮಾನ ಮಾಡುವಾಗ, ಮಧ್ಯಸ್ಥದಾರರು ಒಪ್ಪಂದವಾದ ಬಡ್ಡಿದರವನ್ನು ಆದೇಶಿಸಬಹುದು ಅಥವಾ ಅಂತಹ ಒಪ್ಪಂದದ ಬಡ್ಡಿದರ ಇಲ್ಲದೆ ಇದ್ದಾಗ ಮತ್ಯಾವುದೇ ಕಾಯಿದೆಯಲ್ಲಿ ಇರುವ ಬಡ್ಡಿದರ ನಿರ್ಧರಿಸಬಹುದು. ಐಎಲ್ಆರ್ 1979 229.

104. ಒಂದು ಸಹಕಾರ ಸಂಘದ ವ್ಯವಹಾರದಲ್ಲಿ ಒಂದು ಪಾರ್ಟನರ್‌ಷಿಪ್ ಫರ್ಮ ಗ್ಯಾರೆಂಟಾರ್ ಆದಾಗ, ಅಂತಹ ಫರ್ಮಿನ ಪ್ರತಿಯೊಬ್ಬ ಜೊತೆಗಾರನು ಪ್ರಕರಣದಲ್ಲಿ ಕಕ್ಷಿದಾರನನ್ನಾಗಿ ಮಾಡಬೇಕು. ಮತ್ತು ಅವರನ್ನು 6 ವರ್ಷದೊಳಗಾಗಿ ದಾವಾ ದಾಖಲಿಸಲು ಅವಕಾಶ ಇದೆ. ಗ್ಯಾರಂಟಿ ಕೊಟ್ಟ ವ್ಯಕ್ತಿಗಳು ಸದಸ್ಯರು ಅಥವಾ ಅಲ್ಲವೋ ಎಂಬುದರ ಬಗ್ಗೆ ದಾವಾ ಪ್ರಕರಣದಲ್ಲಿ ದಾಖಲಿಸಬೇಕು. 1987(1) ಕೆಎಲ್‌ಜೆ 291.

105. ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ತಪ್ಪಿತಸ್ಥ ಎಂಬ ಒಂದೇ ಆಧಾರದ ಮೇಲೆ ದಾವಾ ಪ್ರಕರಣದಲ್ಲಿ ಡಿಕ್ರಿ ಪಡೆಯಲಾಗದು. ಡಿಕ್ರಿ ಪಡೆಯಬೇಕಾದರೆ ಪ್ರತ್ಯೇಕ ಸಾಕ್ಷಿ ಆಧಾರಗಳ ಮೇಲೆ ಪಡೆಯಬೇಕು. 1987 ಬಿಎಲ್‌ಜೆ ಎಸ್‌ಎನ್ 25.

106. ಎಲ್ಲಿ ಸ್ಪಷ್ಟ ಮತ್ತು ನೇರವಾದ ಆರೋಪ ಪಟ್ಟಿಗಳನ್ನು ತಯಾರಿಸದೆ, ಯಾರ ಮೇಲೆ ಕ್ರಮ ಜರುಗಿಸಲಾಗುತ್ತದೆಯೋ, ಅಂತಹ ವ್ಯಕ್ತಿ ಕಲಂ 64ರಲ್ಲಿ ಕೊಟ್ಟ ವರದಿ ಮತ್ತು ಅದರ ತೀರ್ಮಾನಗಳನ್ನು ಆರೋಪಿಗೆ ಅಥವಾ ಆರೋಪಿಗಳಿಗೆ ಕೊಡದೆ ಇದ್ದಾಗ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ ಹಾಗೂ ವಿಚಾರಣೆಯನ್ನು ನ್ಯಾಯಯುತವಾಗಿ ಮಾಡಲು ಸಾಧ್ಯವಾಗುವುದಿಲ್ಲ. 1991(2) ಕೆಎಲ್‌ಜೆ 302.

107. ಯಾವನೇ ಒಬ್ಬ ವ್ಯಕ್ತಿ ಚುನಾವಣೆಗೆ ಪೂರ್ವದ 12 ತಿಂಗಳ ಮೊದಲು ಸದಸ್ಯನಾಗಿದ್ದರೆ ಮಾತ್ರ ಮತ ಚಲಾಯಿಸುವ ಹಕ್ಕಿರತಕ್ಕದ್ದು. ಐಎಲ್‌ಆರ್ 2001 ಕೆಎಆರ್ 2524

108. ಎಲ್ಲಿ ಚುನಾವಣೆ ವೇಳಾಪಟ್ಟಿಯನ್ನು ಹೊರಡಿಸಲಾಗಿದೆಯೋ ಹಾಗೂ ಆ ಚುನಾವಣೆ ವೇಳಾಪಟ್ಟಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದವರಿಗೆ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಎಂದು ಸ್ಪಷ್ಟವಾಗಿ ನಮೂದಿಸದೇ ಇದ್ದರೆ ಅದು ಕಾನೂನಿಗೆ ವಿರುದ್ದ, ಎಐಆರ್ 1984 ಎಸ್‌ಸಿ 102

109.ಚುನಾವಣಾಧಿಕಾರಿಯು ನಾಮಪತ್ರ ಸಲ್ಲಿಸುವ ದಿನಾಂಕದಂದೇ ನಾಮಪತ್ರವನ್ನು ವಾಪಸ್ ಪಡೆಯಬಹುದು. ಯಾವ ನಾಮಪತ್ರವನ್ನು ವಾಪಸ್ಸಾತಿ ಪಡೆಯಲಾಗಿದೆಯೋ ಆ ವಾಪಸ್ ಪಡೆಯುವಿಕೆ ವಾಪಸ್ ಪಡೆಯುವ ದಿನಾಂಕದಂದೇ ಪಡೆಯಬೇಕೆಂದಿಲ್ಲ. ಅಂತಹ ಪ್ರಸಂಗದಲ್ಲಿ ಚುನಾವಣಾಧಿಕಾರಿಯು ಅಂತಹ ನಾಮಪತ್ರ ಹಿಂಪಡೆದು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸತಕ್ಕದ್ದಲ್ಲ. 1975 ಕೆಎಲ್‌ಜೆ 66 ಎಸ್‌ಎನ್ 51.

110. ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಲ್ಲಿ ಪದಾಧಿಕಾರಿಗಳ ಆಯ್ಕೆಗೆ ಸ್ಪಷ್ಟವಾಗಿ ನೀತಿಯನ್ನು ರೂಪಿಸಿರುವುದರಿಂದ ಪ್ರತ್ಯೇಕವಾದ ಉಪವಿಧಿಗಳನ್ನು ರಚಿಸುವ ಅವಶ್ಯಕತೆ ಇಲ್ಲ. 1981 (1) ಕೆಎಲ್‌ಜೆ 88

111.ಚುನಾವಣಾಧಿಕಾರಿಯು ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿದ ನಂತರ ಯಾವುದೇ ಕಾರಣಕ್ಕೂ ಚುನಾವಣೆಯನ್ನು ಮುಂದೂಡತಕ್ಕದ್ದಲ್ಲ. ಕೆಎಲ್‌ಜೆ 4114.

112. ನಾಮಪತ್ರ ಸಲ್ಲಿಸುವ ವ್ಯಕ್ತಿಯ ಹೆಸರಿನಲ್ಲಿ ವ್ಯತ್ಯಾಸವಿದ್ದರೆ ಅಂತಹ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ ಐಎಲ್‌ಆರ್ 1995 ಕೆಎಆರ್ 2187.

113.ಚುನಾವಣಾಧಿಕಾರಿಯು ಸಂಘದ ಕಾರ್ಯದರ್ಶಿಗೆ ನಾಮಪತ್ರ ಸ್ವೀಕರಿಸಲು ಅಧಿಕಾರ ಕೊಟ್ಟಿದ್ದರೂ ಚುನಾವಣಾಧಿಕಾರಿಯೇ ನಾಮಪತ್ರವನ್ನು ಸ್ವೀಕರಿಸಲು ಯಾವುದೇ ಅಡೆತಡೆಗಳಿರತಕ್ಕದ್ದಲ್ಲ. ಐಎಲ್‌ಆರ್ 1985(4) ಕೆಎಆರ್ 3685.

114.ಒಬ್ಬ ನಿರ್ದೇಶಕನನ್ನು ಕಲಂ 29ಸಿ ಅನ್ವಯ ಅನರ್ಹನೆಂದು ಘೋಷಿಸಿದಾಗ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹನಲ್ಲ. 1979(1) ಕೆಎಲ್‌ಜೆ 431.

115.ಒಂದು ಚುನಾವಣೆ ತಕರಾರು ಅರ್ಜಿಯನ್ನು ಸಲ್ಲಿಸಿದಾಗ ಆ ಅರ್ಜಿಯು ಅವಧಿಯೊಳಗೆ ಇಲ್ಲದಿದ್ದರೆ ತಡೆಯಾಜ್ಞೆ ಕೊಡತಕ್ಕದ್ದಲ್ಲ. ತಡೆಯಾಜ್ಞೆ ಕೊಡಬೇಕಾದಲ್ಲಿ ವಿಳಂಬ ವಿನಾಯಿತಿ ಅರ್ಜಿಯನ್ನು ತೀರ್ಮಾನಿಸಿ ತಡೆಯಾಜ್ಞೆ ಕೊಡಬೇಕೋ ಇಲ್ಲವೋ ಎಂಬುದನ್ನು ನಿರ್ಧರಿಸತಕ್ಕದ್ದು. 1998 ಕೆಎಲ್‌ಜೆ 3765

116.ಚುನಾವಣಾ ಫಲಿತಾಂಶವನ್ನು ಪ್ರಕಟಿಸುವಾಗ ಯಾವ ಸ್ಥಾನದಿಂದ, ಯಾವ ವಿಭಾಗದಿಂದ ಚುನಾವಣೆಗೆ ಸ್ಪರ್ಧಿಸಿದ್ದಾರೋ, ಆ ಆಧಾರದ ಮೇಲೆಯೇ ಚುನಾವಣೆ ಫಲಿತಾಂಶ ಪ್ರಕಟಿಸತಕ್ಕದ್ದು. ಒಟ್ಟು ಮತ ಚಲಾವಣೆಯಾದ ಮತದಾನದ ಆಧಾರದ ಮೇಲೆ ಹೆಚ್ಚು

ಮತಗಳಿಸಿದವನನ್ನು ಚುನಾಯಿತನಾದನೆಂದು ಪ್ರಕಟಿಸತಕ್ಕದ್ದಲ್ಲ. ಐಎಲ್‌ಆರ್ 2000 ಕೆಎಆರ್ 143.

117.ನಿರ್ದೇಶಕರು 3 ಸತತ ಆಡಳಿತ ಮಂಡಳಿ ಸಭೆಗೆ ಗೈರುಹಾಜರಾದಲ್ಲಿ ಅವರು ನಿರ್ದೇಶಕತನವನ್ನು ಕಳೆದುಕೊಳ್ಳುತ್ತಾರೆ. ಆದರೆ ಅಂತಹ ನಿರ್ದೇಶಕನು ಅನರ್ಹಗೊಳ್ಳುವುದಿಲ್ಲ. ತೊಡಕುಂಟಾದ ವ್ಯಕ್ತಿ ಕಾಯಿದೆ 70ರನ್ವಯ ಉಪ ನಿಬಂಧಕರ ಮುಂದೆ ಅರ್ಜಿ ಸಲ್ಲಿಸಿದಾಗ ಆ ತೀರ್ಮಾನ ಆದ ನಂತರವೇ ಅನರ್ಹಗೊಳ್ಳತಕ್ಕದ್ದು. 1985 ಕೆಎಲ್‌ಜೆ 326.

118. 9 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಆ ಸಂದರ್ಭದಲ್ಲಿ 3 ಜನರನ್ನು ಹೊರತುಪಡಿಸಿ ಉಳಿದೆಲ್ಲಾ ಉಮೇದುವಾರರು ನಾಮಪತ್ರವನ್ನು ವಾಪಸ್ ಪಡೆದರು. ಅಂತಹ ಸಂದರ್ಭದಲ್ಲಿ ಮೂವರು ಮಾತ್ರ ಆಯ್ಕೆಯಾಗಿದ್ದಾರೆಂದು ಉಳಿದ 6 ಜನರ ಆಯ್ಕೆಗಾಗಿ ಹೊಸದಾಗಿ ಚುನಾವಣೆ ಮಾಡಿ ಆಯ್ಕೆ ಮಾಡತಕ್ಕದ್ದು. 1982(1) ಕೆಎಲ್‌ಜೆ ಎಸ್‌ಎನ್13 ಡಿಬಿ

119.ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘದ ಸದಸ್ಯರಾಗಿದ್ದರೆ ಅಂತಹ ಸಂಘಕ್ಕೆ ಪ್ರತಿನಿಧಿಯನ್ನು ಕಳುಹಿಸುವಾಗ ನಿರ್ದೇಶಕರಲ್ಲಿ ಒಬ್ಬರನ್ನು ಕಳುಹಿಸತಕ್ಕದ್ದು. ಆ ಪ್ರತಿನಿಧಿ ಮಾತ್ರ ಮತ್ತೊಂದು ಸಂಘದಲ್ಲಿ ಮತ ಚಲಾಯಿಸತಕ್ಕದ್ದು. ಐಎಲ್‌ಆರ್ 2000 ಕೆಎಆರ್ 1185.

120.ಕಲಂ 20ರನ್ವಯ ಸುಸ್ತಿದಾರನೆಂದು ಪರಿಗಣಿಸಬೇಕಾದರೆ ಸಾಲವನ್ನು ಪಡೆದ ದಿನಾಂಕವನ್ನು ಗಮನಿಸಬೇಕು. ಮತ್ತು ಅವನು ಕೊಟ್ಟ ಅರ್ಜಿಯ ದಿನಾಂಕ ಅಥವಾ ಮಂಜೂರಾದ ದಿನಾಂಕವನ್ನು ಪರಿಗಣಿಸತಕ್ಕದ್ದಲ್ಲ. ಐಎಲ್‌ಆರ್ 1986(3) ಕೆಎಆರ್ 2683.

121.ಪದಾಧಿಕಾರಿಗಳ ಆಯ್ಕೆಗೆ ಕೋರಂ ಅವಶ್ಯಕತೆ ಕಡ್ಡಾಯ. ಐಎಲ್‌ಆರ್ 2003(3) ಕೆಎಆರ್ 486 ಡಿಬಿ

122ಪದಾಧಿಕಾರಿಗಳ ಅವಧಿ ಎರಡೂವರೆ ವರ್ಷ ಎಂದಿದ್ದಾಗ ವರ್ಷದ ಮಧ್ಯದಲ್ಲಿ ಚುನಾವಣೆ ನಡೆದಾಗ ವರ್ಷವನ್ನು ಮಾರ್ಚ್ 31ಕ್ಕೆ ಮುಕ್ತಾಯವಾಗತಕ್ಕದ್ದು. ಮತ್ತು ಮುಂದಿನ ವರ್ಷಕ್ಕೂ ಒಂದು ವರ್ಷವೆಂದು ತಿಳಿಯತಕ್ಕದ್ದು. 2001(3) ಕೆಎಲ್‌ಜೆ 663 ಡಿಬಿ

123.ಪ್ರತಿಯೊಂದು ಸಹಕಾರ ಸಂಘವು ನಿಯಮ 13ಎ ಅನ್ವಯ ಗುರುತಿನ ಪತ್ರ ಕೊಡಬೇಕೆಂದಿದ್ದರೂ ಆ ಗುರುತಿನ ಪತ್ರವನ್ನು ಪಡೆಯುವುದು ಸದಸ್ಯರ ಜವಾಬ್ದಾರಿ. ಐಎಲ್‌ಆರ್ 2001 ಕೆಎಆರ್ 3837.

124. ಕಲಂ 29ರನ್ವಯ ಸರ್ಕಾರವು ನಾಮನಿರ್ದೇಶನ ಮಾಡಿದ ವ್ಯಕ್ತಿಯನ್ನು ತೆಗೆದುಹಾಕುವಾಗ ಕಾರಣ ಕೇಳುವ ನೋಟೀಸ್ ನೀಡಬೇಕಾಗಿಲ್ಲ. 2002(1) ಕೆಸಿಸಿಆರ್ 424

125.ಒಂದು ಸಹಕಾರ ಸಂಘದ ಪರವಾಗಿ ಕಮಿಷನ್ ಏಜೆಂಟ್ ಎಂದು ನೇಮಕ ಮಾಡಿದಾಗ ಅಂತಹ ವ್ಯಕ್ತಿ ಸಂಘದ ಪರವಾಗಿ ಠೇವಣಿ ಸಂಗ್ರಹಿಸುತ್ತಿದ್ದು, ಅಂತಹ ವ್ಯಕ್ತಿಯು ಸಂಘ ಮಾಡುತ್ತಿರುವ ವ್ಯವಹಾರವನ್ನೇ ಮಾಡುತ್ತಿರುವುದರಿಂದ ಅಂತಹ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಿ ನಿರ್ದೇಶಕನಾಗಲು ಅನರ್ಹ 1989(2) ಕೆಎಲ್‌ಜೆ 272

126.ಸಹಕಾರ ಸಂಘದ ಚುನಾವಣೆ ನಡೆಸಲು ನಿಬಂಧಕರು ಚುನಾವಣಾಧಿಕಾರಿಯನ್ನು ನೇಮಿಸುತ್ತಾರೆ. ಚುನಾವಣಾಧಿಕಾರಿಯು ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಹೊಂದಿಲ್ಲ. 1983(2) ಕೆಎಲ್‌ಜೆ 479

127.ಕಲಂ 28ಎ(3)ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮತ್ತು ಮಹಿಳೆಯರಿಗಾಗಿ ಚುನಾವಣೆಯನ್ನು ಪ್ರತ್ಯೇಕವಾಗಿ ನಡೆಸುವುದು ಸಂವಿಧಾನಬಾಹಿರವಲ್ಲ. 1996(5) ಕೆಎಲ್‌ಜೆ 227 ಡಿಬಿ

128.ನ್ಯಾಯಾಲಯವು ಚುನಾವಣೆ ಅಕ್ರಮವೆಂದು ತೀರ್ಮಾನಿಸಿ ತೀರ್ಪು ಕೊಟ್ಟಾಗ ಕರ್ನಾಟಕ ಮೇಲ್ಮನವಿ ಪ್ರಾಧಿಕಾರಣವು ಒಬ್ಬ ಮಧ್ಯಸ್ಥದಾರರನ್ನು ಅಥವಾ ಚುನಾವಣಾಧಿಕಾರಿಯನ್ನು ಅಥವಾ ವಿಶೇಷಾಧಿಕಾರಿಯನ್ನು ಚುನಾವಣೆಯನ್ನು ನಡೆಸಲು ನೇಮಕ ಮಾಡತಕ್ಕದ್ದಲ್ಲ. 1998(2) ಡಿಎಲ್‌ಜೆ 85

**ಕಲಂ 117ಕ್ಕೆ ಸಂಬಂಧಪಟ್ಟ ತೀರ್ಪುಗಳು**

129.ಒಂದು ಪ್ರಕರಣವನ್ನು ಮಧ್ಯಸ್ಥಗಾರರು ವಿಚಾರಣೆ ಮಾಡುವಾಗ ಸಂಬಂಧಪಟ್ಟ ಸಂಘಕ್ಕೆ ನಡವಳಿಕೆ ಪುಸ್ತಕಗಳನ್ನು ಮತ್ತು ಲೆಕ್ಕಪತ್ರಗಳನ್ನು ಹಾಜರುಪಡಿಸುವಂತೆ ನಿರ್ದೇಶಿಸಿರುವುದು ಸರಿಯಾದ ಕ್ರಮ 1988(2) ಕೆಎಲ್‌ಜೆ 217.

130.ಕಲಂ 117 ಮತ್ತು ನಿಯಮ 55ನ್ನು ದಾವಾ ಪ್ರಕರಣ ವಿಚಾರಣೆ ಮಾಡುವ ಸಂದರ್ಭದಲ್ಲಿ ಮತ್ತು ಮೇಲ್ಮನವಿ ರೂಪದಲ್ಲಿ ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸಿದಾಗ ಅನ್ವಯವಾಗುವ ನೀತಿ ನಿಯಮಗಳು. ಆದರೆ ಈ ಅವಕಾಶ ಸಹಕಾರ ಸಂಘವು ಶಿಸ್ತು ಕ್ರಮ ಜರುಗಿಸಿದಾಗ ಅನ್ವಯಿಸತಕ್ಕದ್ದಲ್ಲ. ಐಎಲ್‌ಆರ್ 1985(3) ಕೆಎಆರ್ 224.

131.ಒಂದು ಆಡಳಿತ ಮಂಡಳಿಯು ತನಗೆ ಇರುವ ಅಧಿಕಾರವನ್ನು ಕಾನೂನಿನಡಿಯಲ್ಲಿ ಒಬ್ಬ ನಿರ್ದೇಶಕರಿಗೆ ಕೊಡಬಹುದು. ಸಂಘವು ಒಬ್ಬ ವ್ಯಕ್ತಿಯನ್ನು ಪ್ರಕರಣದಲ್ಲಿ ಹಾಜರಾಗಿ ಸಂಘದ ಪರವಾಗಿ ವಾದಿಸಲು ಅಧಿಕಾರ ಇರತಕ್ಕದ್ದು. ಆದರೆ ವಕೀಲರನ್ನು ಮಧ್ಯಸ್ಥಗಾರರ ಮುಂದೆ ಹಾಜರಾಗುವಂತೆ ತೀರ್ಮಾನಿಸತಕ್ಕದ್ದಲ್ಲ. ಐಎಲ್‌ಆರ್ 1986(3) ಕೆಎಆರ್ 2329/1987(1) ಕೆಎಲ್‌ಜೆ ಎಸ್‌ಎನ್ 52.

132.ಒಬ್ಬ ಸಂಘದ ಕಾರ್ಯದರ್ಶಿಯು ಸಂಘವನ್ನು ಪ್ರತಿನಿಧಿಸಲು ಅಧಿಕಾರವನ್ನು ಹೊಂದಿರುತ್ತಾನೆ. ಆದರೆ ಕಾರ್ಯದರ್ಶಿಯೊಬ್ಬನೇ ಪ್ರತಿನಿಧಿಸಬೇಕೆಂಬ ಷರತ್ತಿಲ್ಲ. ಆಡಳಿತ ಮಂಡಳಿಯು ತನ್ನ ಒಬ್ಬ ನಿರ್ದೇಶಕನನ್ನು ಸಂಘದ ಪರವಾಗಿ ಹಾಜರಾಗಲು ಅಧಿಕಾರ ಕೊಡಬಹುದು. ಅಂತಹ ಪ್ರತಿನಿಧಿಯನ್ನು ಮೂರನೇ ವ್ಯಕ್ತಿಯೆಂದು ಭಾವಿಸತಕ್ಕದ್ದಲ್ಲ. ಅಂತಹ ಪ್ರತಿನಿಧಿಯನ್ನು ಮಾಡಬೇಕಾದ ಸಂದರ್ಭದಲ್ಲಿ ಅದನ್ನು ಪವರ್ ಆಫ್ ಅಟಾರ್ನಿ ಮೂಲಕವೇ ಮಾಡಬೇಕೆಂಬ ವಾದವನ್ನು ಸ್ವೀಕರಿಸತಕ್ಕದ್ದಲ್ಲ.

ಟಿಪ್ಪಣಿ: ಈ ಮೇಲ್ಕಂಡ ಎರಡೂ ತೀರ್ಮಾನಗಳಿಗೆ ಕಲಂ 29ಜಿ ಯನ್ನು 1998ರಲ್ಲಿ ಸೇರ್ಪಡೆ ಮಾಡಿ ಸಂಘದ ಕಾರ್ಯನಿರ್ವಾಹಕನೇ ಸಂಘದ ಪರವಾಗಿ, ಸಂಘದ ವಿರುದ್ಧವಾಗಿ ಎಲ್ಲ ಪ್ರಕರಣಗಳಲ್ಲೂ ಹಾಜರಾಗಲು ಅವಕಾಶ ಕಲ್ಪಿಸಿರುವುದರಿಂದ, ಈ ತೀರ್ಪು ನೇರವಾಗಿ ಅನ್ವಯಿಸುವುದಿಲ್ಲ ಎಂಬುದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

133.ನಿಬಂಧಕರು ಅಥವಾ ಅವನು ನೇಮಕ ಮಾಡಿದ ಮಧ್ಯಸ್ಥದಾರರು ಯಾವುದೇ ಕಕ್ಷಿದಾರರನ್ನು ಅವಶ್ಯಕವಿಲ್ಲವೆಂದು ತೆಗದುಹಾಕಬಹುದು ಅಥವಾ ಅವಶ್ಯಕತೆಯಿದೆ ಎಂದು ಸೇರಿಸಿಕೊಳ್ಳಬಹುದು. 1980(2) ಕೆಎಲ್‌ಜೆ 101/ ಐಎಲ್‌ಆರ್ 1980(2) ಎಸ್‌ಎನ್ 55.

134.ಒಂದು ದಾವಾ ಪ್ರಕರಣದಲ್ಲಿ ಒಂದು ಫರ್ಮಿನ ಖಾತ್ರಿದಾರರೆಲ್ಲರೂ ಕಕ್ಷಿದಾರರಾಗಬೇಕು. ಮಾಡದೇ ಇದ್ದ ಸಂದರ್ಭದಲ್ಲಿ ಪ್ರಕರಣದ ಆರು ವರ್ಷದೊಳಗಾಗಿ ಕಕ್ಷಿದಾರರನ್ನಾಗಿ ಮಾಡಬೇಕು. ಒಂದು ಸಂಘದ ಸದಸ್ಯರಾಗಿದ್ದಾರೆಯೇ, ಮತ್ತು ಅವರು ಎಷ್ಟು ಹಣಕ್ಕೆ ಜವಾಬ್ದಾರರು ಎಂಬುದನ್ನು ನಿಗಧಿಪಡಿಸಬೇಕು. ಒಂದು ಫರ್ಮಿನ ಒಬ್ಬ ನಿರ್ದೇಶಕನ ಮೇಲೆ ಆದೇಶ ಹೊರಡಿಸಿದರೆ ಆ ಆದೇಶ ಎಲ್ಲಾ ಭಾಗಿದಾರರಿಗೂ ಅನ್ವಯವಾಗುವುದರಿಂದ, ಆ ಫರ್ಮಿನ ಎಲ್ಲ ಭಾಗ್ಯಸ್ಥರೂ ಕಕ್ಷಿದಾರರಾಗಬೇಕು. 1987(1) ಕೆಎಲ್‌ಜೆ 291.

135.ಒಂದು ಸಕ್ಕರೆ ಕಾರ್ಖಾನೆಯು ಕೆಲವು ನಿರ್ದೇಶಕರುಗಳಿಗೆ ಸಕ್ಕರೆಯನ್ನು ಮಾರಾಟ ಮಾಡಿ ಹಣವನ್ನು ಸ್ವೀಕರಿಸಿದ ನಂತರ, ಆ ಸಂಘದ ಆಸ್ತಿಯಲ್ಲಿ ಭಾಗ್ಯಸ್ಥರಾಗುವುದಿಲ್ಲ. ಅಂತಹ ನಿರ್ದೇಶಕರು ಯಾವುದೇ ದಾವಾ ಪ್ರಕರಣದಲ್ಲಿ ಕಕ್ಷಿದಾರರಾಗಬೇಕಾಗಿಲ್ಲ. 1989(2) ಕೆಎಲ್‌ಜೆ 287.

136.ಒಂದು ದಾವಾ ಪ್ರಕರಣ ದಾಖಲು ಮಾಡುವಾಗ ಆಡಳಿತ ಮಂಡಳಿಯ ಸದಸ್ಯರಿದ್ದು, ಅಂತಹವರನ್ನು ಕಕ್ಷಿದಾರರನ್ನಾಗಿ ಮಾಡಿದಾಗ, ಆ ನಿರ್ದೇಶಕರು ಪ್ರಕರಣ ನಡೆಯುತ್ತಿರುವ ಸಂದರ್ಭದಲ್ಲಿ ನಿರ್ದೇಶಕತನವನ್ನು ಕಳೆದುಕೊಂಡರೆ, ಅಂತಹ ನಿರ್ದೇಶಕರು ಆ ಪ್ರಕರಣದಲ್ಲಿ ಕಕ್ಷಿದಾರರೆಂದು ಮುಂದುವರಿಯುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರ ಹೆಸರನ್ನು ತೆಗೆದುಹಾಕಬೇಕು ಮತ್ತು ಹೊಸದಾಗಿ ಕಕ್ಷಿದಾರರನ್ನು ಸೇರ್ಪಡೆ ಮಾಡಿಕೊಳ್ಳಬೇಕು. 1980(2) ಕೆಎಲ್‌ಜೆ 101/ಐಎಲ್‌ಆರ್ 1980(2) ಕೆಎಆರ್ ಎಸ್‌ಎನ್ 55.

137.ಒಂದು ದುರುಪಯೋಗ ಪ್ರಕರಣದಲ್ಲಿ ಒಬ್ಬ ನೌಕರ ದೇಶಾಂತರ ಹೋದರೆ, ಅವನ ಹೆಂಡತಿ, ಮಕ್ಕಳನ್ನು ಅವನ ಆಸ್ತಿಯಲ್ಲಿ ಭಾಗವಿದೆ ಎಂಬ ಕಾರಣಕ್ಕೆ ಕಕ್ಷಿದಾರರನ್ನಾಗಿ ಮಾಡಿದಾಗ, ಆ ಆಸ್ತಿ ದೇಶಾಂತರ ಹೋದ ವ್ಯಕ್ತಿಯ ಹೆಸರಿನಲ್ಲೇ ಇದ್ದರೆ, ಆ ಆಸ್ತಿಯ ಒಡೆತನ ಹೆಂಡತಿ, ಮಕ್ಕಳಿಗೆ ಸೇರುವುದಿಲ್ಲ. ಆದ್ದರಿಂದ ಅವರನ್ನು ಕಕ್ಷಿದಾರರನ್ನಾಗಿ ಮಾಡುವುದು ಸಮರ್ಪಕವಲ್ಲ. 1983(2) ಕೆಎಲ್‌ಜೆ 305.

# ಅಧ್ಯಾಯ – 6.8

# ಸಹಕಾರಿಯ ಸಮಾಪನೆ

**ಕಲಂ.47 : ಸಹಕಾರಿಯ ಸಮಾಪನ :**

1) "ಒಂದು ಸಹಕಾರಿಯ ಐದನೇ ಒಂದಕ್ಕಿಂತ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರು ಆ ಸಹಕಾರಿಯ ವ್ಯವಹಾರಗಳನ್ನು ಸಮಾಪನಗೊಳಿಸಬೇಕೆಂದು ಕೊಟ್ಟ ಅರ್ಜಿಯ ಮೇಲೆ ಮಂಡಳಿಯು, ಪ್ರತಿಯೊಬ್ಬ ಸದಸ್ಯನಿಗೂ ನೋಟೀಸು ನೀಡುವ ಮೂಲಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಅಂಥ ನೋಟೀಸಿನ ಜೊತೆಗೆ ಅಂಥ ಸಾಮಾನ್ಯ ಸಭೆಗೆ ಹಾಜರಾಗಬೇಕೆಂಬ ನೋಟೀಸನ್ನು ಸಂಯುಕ್ತ ಸಹಕಾರಿ, ಒಕ್ಕೂಟ ಸಹಕಾರಿ, ಸಾಲಿಗರು, ಲೆಕ್ಕಪರಿಶೋಧಕರು ಮತ್ತು ಸಹಕಾರಿಯ ಯಾವುದೇ ಅಧೀನ ಸಂಸ್ಥೆಗೂ ಸಹ ಕಳಿಸತಕ್ಕದ್ದು ಹಾಗೂ ಅವರಿಗೆ ಸಾಮಾನ್ಯ ಸಭೆಯಲ್ಲಿ ಅಹವಾಲು ಮಾಡಿಕೊಳ್ಳಲು ಹಕ್ಕು ಇರತಕ್ಕದ್ದು.

2) ಸಾಮಾನ್ಯ ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಪೈಕಿ ಮೂರನೇ ಎರಡರಷ್ಟು ಸದಸ್ಯರು ಸಹಕಾರಿಯನ್ನು ಸಮಾಪನ ಮಾಡುವ ಮತ್ತು ಸಮಾಪಕನನ್ನು ನೇಮಕ ಮಾಡುವ ನಿರ್ಣಯವನ್ನು ಅಂಗೀಕರಿಸಿದ ನಂತರ ಸಾಮಾನ್ಯ ನಿಕಾಯವು ಆ ನಿರ್ಣಯವನ್ನು ಅನುಮೋದಿಸತಕ್ಕದ್ದು. ಅಂಥ ನಿರ್ಣಯವು ಸಹಕಾರಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಯಾರೇ ಸಾಲಿಗರ ಕ್ಲೇಮುಗಳು, ಸದಸ್ಯರ ಸಂಖ್ಯೆ ಮತ್ತು ಸಹಕಾರಿಯಲ್ಲಿ ಪ್ರತಿಯೊಬ್ಬ ಸದಸ್ಯನ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಇವುಗಳ ಬಗೆಗಿನ ವಿವರಗಳನ್ನು ಒಳಗೊಂಡಿರತಕ್ಕದ್ದು. ಸಾಮಾನ್ಯ ನಿಕಾಯವು ಅನುಮೋದಿಸಿದ ನಿರ್ಣಯದ ಒಂದು ಪ್ರತಿಯನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಅಂಥ ಅನುಮೋದನೆಯ ದಿನಾಂಕದಿಂದ ಹದಿನೈದು ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಂಯುಕ್ತ ಸಹಕಾರಿಗೆ ಮತ್ತು ಒಕ್ಕೂಟ ಸಹಕಾರಿಗೆ ಕಳುಹಿಸತಕ್ಕದ್ದು.

ವಿವರಣೆ – ಈ ಪ್ರಕರಣದಲ್ಲಿ "ಹಿತಾಸಕ್ತಿ" ಎಂದರೆ ಒಂದು ಸಹಕಾರಿಯಲ್ಲಿ ಸದಸ್ಯನಿಗಿರುವ ಹಿತಾಸಕ್ತಿ ಮತ್ತು ಇದು ಷೇರುಗಳು, ಸದಸ್ಯರ ಸಾಲಗಳು, ಠೇವಣಿಗಳು ಮತ್ತು –

(i) ಸಹಕಾರಿಯ ಉಪವಿಧಿಗಳ ಬಲದಿಂದ ಉಂಟಾಗುವ; ಮತ್ತು –

(ii) ಸಹಕಾರಿಯು ಸದಸ್ಯನಿಗೆ ಕೊಡಬೇಕಾಗಿರುವ ಯಾವುದೇ ರೀತಿಯ ಬಾಧ್ಯತೆಗಳನ್ನು ಒಳಗೊಳ್ಳುತ್ತದೆ.

[ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯ ಪ್ರತಿಯನ್ನು ಸಂದರ್ಭಾನುಸಾರ ರಿಜರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕಿಗೆ ಕಳುಹಿಸಿದ್ದ ಮತ್ತು ಅದರ ಒಪ್ಪಿಗೆಯನ್ನು ಪಡೆದಿದ್ದ ಹೊರತು (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಹೇಳಿರುವಂತೆ ಯಾವುದೇ ಕ್ರಮಕೈಗೊಳ್ಳತಕ್ಕದ್ದಲ್ಲ.]

3) [ರಿಜಿಸ್ಟ್ರಾರನು], ಸಹಕಾರಿಯಿಂದ, ಸಮಾಪಕನಿಂದ ಅಥವಾ ಮಾಹಿತಿಯನ್ನೊದಗಿಸಲು ಅಗತ್ಯ ಪಡಿಸಲಾದ ಯಾವನೇ ಇತರ ವ್ಯಕ್ತಿಯಿಂದ –

(ಎ) ಸಮಾಪನದ ಪ್ರಗತಿ;

(ಬಿ) ಹಂಚಿಕೆ ಮಾಡಿಲ್ಲದ ಹೆಚ್ಚುವರಿ ಅಥವಾ ಮೀಸಲುಗಳ ಹಂಚಿಕೆ; ಮತ್ತು

(ಸಿ) [ಅವನು ಅಗತ್ಯ ಪಡಿಸಬಹುದಾದ] ಇತರ ಯಾವುದೇ ಮಾಹಿತಿ, ಇವುಗಳನ್ನು ತೋರಿಸುವ ವಾರ್ಷಿಕ ಅಥವಾ ಇತರ ವರದಿಗಳನ್ನು ಒದಗಿಸುವಂತೆ ಅಗತ್ಯ ಪಡಿಸಬಹುದು.

4) (3)ನೇ ಉಪ–ಪ್ರಕರಣದ ಅಡಿಯಲ್ಲಿ ಒದಗಿಸಿದ ಮಾಹಿತಿಯನ್ನು ಪರಿಗಣಿಸಿದ ತರುವಾಯ ರಿಜಿಸ್ಟ್ರಾರನು, ಸಹಕಾರಿಯನ್ನು ಸಮಾಪನಗೊಳಿಸುವ ನಿರ್ಣಯವನ್ನು ಅನುಮೋದಿಸಬಹುದು ಮತ್ತು ಅದನ್ನು ಸದರಿ ಸಹಕಾರಿಗೆ ಮತ್ತು ಸಂಯುಕ್ತ ಸಹಕಾರಿಗೆ ತಿಳಿಸಬಹುದು. ಅಂಥ ನಿರ್ಣಯವು ರಿಜಿಸ್ಟ್ರಾರನು ಅನುಮೋದನೆ ಮಾಡಿದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು."

ಒಂದು ನೋಂದಾಯಿತ ಸಹಕಾರಿ ಸದಸ್ಯರ ಲಿಖಿತ ಮನವಿ (1/5) ಮೇಲೆ ಸಹಕಾರಿಯ ಮಂಡಳಿ ವಿಷಯವನ್ನು ಪರಿಶೀಲಿಸಿ, ಸಂಬಂಧಪಟ್ಟ ಎಲ್ಲರಿಗೂ, ಅಂದರೆ, ಸಾಲಗಾರರು, ಠೇವಣಿದಾರರು, ಒಕ್ಕೂಟ ಸಹಕಾರಿ, ಸಂಯುಕ್ತ ಸಹಕಾರಿಗೆ, ಲೆಕ್ಕ ಪರಿಶೋದಕರಿಗೆ ನೋಟೀಸ್ ಜಾರಿ ಮಾಡಿ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಸದಸ್ಯರ ಅರ್ಜಿಯನ್ನು ಪರಿಶೀಲಿಸುವಾಗ, ಸಹಿ ಮಾಡಿದ ಸದಸ್ಯರ ನೈಜತೆ ಬಗ್ಗೆ ಪರಿಶೀಲಿಸಿ

ದೃಢೀಕರಿಸಿಕೊಂಡು ಕ್ರಮ ಜರುಗಿಸತಕ್ಕದ್ದು.

ಈ ವಿಷಯ ಚರ್ಚೆಗೆ ತೆಗೆದುಕೊಳ್ಳುವ ಪೂರ್ವದಲ್ಲಿ ಸಹಕಾರಿ ತನ್ನ ಮಂಡಳಿಯಲ್ಲಿ ಸಹಕಾರಿಗೆ ಬರಬೇಕಾದ ಸಾಲ ಮತ್ತು ಬಡ್ಡಿ ಹಾಗೂ ಆಸ್ತಿಗಳು ಮೌಲ್ಯ ನಿಗದಿ ಪಡಿಸಿ, ಕೊಡಬೇಕಾದ ಸಾಲಗಳು, ಠೇವಣಿಗಳು, ಬಾಕಿಗಳು ಮತ್ತು ಪಾಲು ಬಂಡವಾಳದ ವಿವರಗಳನ್ನು ಅಂತಿಮಗೊಳಿಸಿ, ಸಾಮಾನ್ಯ ಸಭೆ ಅವಗಾಹನೆಗೆ ಸಲ್ಲಿಸತಕ್ಕದ್ದು. ಏಕೆಂದರೆ ಸಾಮಾನ್ಯ ಸಭೆ ಸಹಕಾರಿಯ ಅಸ್ತಿತ್ವವನ್ನು ತೆಗೆದು ಹಾಕುವ ವಿಷಯದಲ್ಲಿ ಈ ಮಾಹಿತಿಗಳು ಇಲ್ಲದಿದ್ದರೆ, ಸಭೆ ನಿರ್ಣಯ ತೆಗೆದುಕೊಳ್ಳಲು ಬರುವುದಿಲ್ಲ.

ಇದು ಸ್ವಯಂ ಸಹಕಾರಿಯನ್ನು ಹುಟ್ಟಿ ಹಾಕಿದ ಸಂಸ್ಥೆಯನ್ನು ಸಮಾಪನೆಗೊಳಿಸಲು ಇರುವ ಅವಕಾಶ, 1959ರ ಕಾಯಿದೆಯಲ್ಲಿ ಸೇರ್ಪಡೆಯಾಗಿಲ್ಲ. ಇದಕ್ಕೆ ಪ್ರಮುಖ ಕಾರಣ, ಸೌಹಾರ್ದ ಕಾಯಿದೆಯಲ್ಲಿ ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯಧನ ಪಡೆಯಲು ಅವಕಾಶ ಇಲ್ಲದೇ ಇರುವುದರಿಂದ, ಸ್ವಯಂ ತೀರ್ಮಾನ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಈ ರೀತಿಯ ತೀರ್ಮಾನ ತೆಗೆದುಕೊಳ್ಳುವಾಗ ಸಾಮಾನ್ಯ ಸಭೆ ಸದಸ್ಯರು ಪರಿಗಣಿಸಬೇಕಾದ ಅಂಶವೆಂದರೆ, ಸಹಕಾರಿ ನೀಡುತ್ತಿರುವ ಸೇವೆಗಳ ಅವಶ್ಯಕತೆ ಸದಸ್ಯರಿಗೆ ಇಲ್ಲವೆಂದು ಅಥವಾ ಸದಸ್ಯರ ಎಲ್ಲಾ ಅವಶ್ಯಕತೆಗಳನ್ನು ಸಹಕಾರಿಯ ಧ್ಯೇಯೋದ್ದೇಶದಂತೆ ಪೂರೈಸಲಾಗಿದೆ ಎಂದು ಅಥವಾ ಸಹಕಾರಿ ಮುಂದುವರಿಸಲು ಸದಸ್ಯರು ಭಾಗವಹಿಸುವಿಕೆ ಇಲ್ಲದೆ ಅಥವಾ ಆಸಕ್ತಿಯಿಂದ ಕೆಲಸ ನಿರ್ವಹಿಸುತ್ತಿಲ್ಲವೆಂದು ತೀರ್ಮಾನಕ್ಕೆ ಬಂದು, ಸ್ವಯಂ ಸಮಾಪನೆಗೆ ತೀರ್ಮಾನಿಸಬಹುದು.

ಸಾಮಾನ್ಯ ಸಭೆಯಲ್ಲಿ ವಿಷಯ ಚರ್ಚೆಗೆ ತೆಗೆದುಕೊಳ್ಳುವ ಮೊದಲು, ಮತದಾನದ ಹಕ್ಕುಳ್ಳ ಸದಸ್ಯರ ಸಂಖ್ಯೆ ಎಷ್ಟಿದೆ ಎಂಬುದನ್ನು ದೃಢೀಕರಿಸಿಕೊಳ್ಳಬೇಕು ಮತ್ತು ಮತದಾನದ ಹಕ್ಕುಳ್ಳದ ಸದಸ್ಯರು, ಸಭೆಯಲ್ಲಿ ಭಾಗವಹಿಸಿದರೂ ಅವರನ್ನು ಪ್ರತ್ಯೇಕಿಸಬೇಕು ಮತ್ತು ಅವರನ್ನು ಗುರುತಿಸಲು ಮುಖ್ಯಕಾರ್ಯನಿರ್ವಾಹಕ ವ್ಯವಸ್ಥೆ ಮಾಡಿರಬೇಕು. ಅಂತಿಮ ತೀರ್ಮಾನ ತೆಗೆದುಕೊಳ್ಳುವಾಗ ಮತದಾನದ ಹಕ್ಕುಳ್ಳ ಸದಸ್ಯರ 2/3 ಅಂಶದ ಸದಸ್ಯರ ಬಹುಮತದಿಂದ ಅಂಗೀಕರಿಸತಕ್ಕದ್ದು.ವಿಷಯ ಚರ್ಚೆ ಮಾಡುವ ಸಂದರ್ಭದಲ್ಲಿ ಎಲ್ಲಾ ಅರ್ಹ ಸದಸ್ಯರಿಗೆ ಮತ್ತು ಸಾಲಗಾರರಿಗೆ, ಸಮರ್ಪಕ ಅವಕಾಶ ನೀಡಬೇಕು.ಸ್ವಯಂ ಸಮಾಪನೆ ಒಂದು ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಿದ್ದರೆ, ಭಾರತೀಯ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದಿರಬೇಕು. ಪ್ರಸ್ತಾವನೆಯನ್ನು ಸಾಮಾನ್ಯ ಸಭೆ ಚರ್ಚಿಸುವಾಗ ಹೆಚ್ಚುವರಿ ಆಸ್ತಿ ಉಳಿದಾಗ, ಅದನ್ನು ಉಪಯೋಗಿಸುವ ವಿಧಾನವನ್ನು ಅಂಗೀಕರಿಸಬೇಕು. ಸದಸ್ಯರ ಪಾಲು ಬಂಡವಾಳ ಪಾವತಿ ಮಾಡುವಾಗ, ಸಹಕಾರಿ ಲಾಭದಲ್ಲಿದ್ದಾಗ ಮಾತ್ರ ಅದರ ಪೂರ್ಣ ಷೇರು ಬೆಲೆ ಪಾವತಿಸತಕ್ಕದ್ದು.ಸಹಕಾರಿ ಸದಸ್ಯರ ಪಾಲು ಬಂಡವಾಳಕ್ಕಿಂತ ನಷ್ಟ ಹೆಚ್ಚಿದ್ದರೆ, ಷೇರು ಮೌಲ್ಯ ಶೂನ್ಯವಾಗುತ್ತದೆ.ಅಂದರೆ ಸದಸ್ಯರಿಗೆ ಯಾವುದೇ ರೀತಿ ಪಾಲು ಬಂಡವಾಳ ಹಿಂತಿರುಗಿಸತಕ್ಕದ್ದಲ್ಲವೆಂದು ಸಾಮಾನ್ಯ ಸಭೆ ತೀರ್ಮಾನಿಸಬೇಕು. ಸಮಾಪನೆ ತೀರ್ಮಾನ ತೆಗೆದುಕೊಂಡ ನಂತರ ಆಸ್ತಿಯಲ್ಲಿ ಯಾರಿಗೆ ಆದ್ಯತೆ ಮೇಲೆ ತೀರುವಳಿ ಮಾಡಬೇಕೆಂದು ಸಾಮಾನ್ಯ ಸಭೆ ತೀರ್ಮಾನಿಸಬೇಕು.ಸಾಮಾನ್ಯ ನೀತಿ ಎಂದರೆ, ಸರ್ಕಾರ ಅಥವಾ ಇತರ ಪ್ರಾಧಿಕಾರಗಳಿಗೆ ನೀಡಬೇಕಾದ ಕರ, ಶುಲ್ಕ, ಇತರೆಗಳ ಪಾವತಿ ಪ್ರಥಮ ಆದ್ಯತೆ.ಸಹಕಾರಿ ನೌಕರರು ಸಂಬಳ ಮತ್ತು ಭತ್ಯೆಗಳಿಗೆ ಎರಡನೇ ಆದ್ಯತೆ.ಹೊರಗಿನ ಸಾಲಗಾರರ ಸಾಲ/ಸದಸ್ಯರ ಠೇವಣಿ ತೀರುವಳಿ ಮೂರನೇ ಆದ್ಯತೆ.ಇತರರಿಗೆ ಪಾವತಿ ಮಾಡಬೇಕಾದ ಹಣ ಸಂದಾಯ, ನಾಲ್ಕನೇ ಆದ್ಯತೆ ಮತ್ತು ಸದಸ್ಯರಿಗೆ ನೀಡಬೇಕಾದ ಪಾಲು ಬಂಡವಾಳ ಐದನೇ ಆದ್ಯತೆ.

ಈ ಮೇಲ್ಕಂಡ ನೀತಿ ಅನುಸರಿಸಿ, ಸಮಾಪನಾ ಪ್ರಸ್ತಾವನೆಯನ್ನು ನಿಬಂಧಕರಿಗೆ ಸಲ್ಲಿಸಿದಾಗ ಅದಕ್ಕೆ ಒಪ್ಪಿಗೆ ನೀಡುವ ಅಧಿಕಾರ ನಿಬಂಧಕರಿಗೆ ವಿಹಿತವಾಗಿದೆ.ಅದನ್ನು ನೀಡುವಾಗ ನಿಬಂಧಕರು ಸ್ಪಷ್ಟೀಕರಣ ಪಡೆಯಲು ಅವಕಾಶ ಇದ್ದು – ಹೆಚ್ಚುವರಿ ಅಥವಾ ಮೂಲ ಸಾಲಗಳನ್ನು ಉಪಯೋಗಿಸುವ ಬಗ್ಗೆ ಮಾಹಿತಿ ಕೇಳಿ ಒಪ್ಪಿಗೆ ನೀಡಬಹುದು.

ಸಂಯುಕ್ತ ಸಹಕಾರಿ, ಸದಸ್ಯ ಸಹಕಾರಿಯ ಸ್ವಯಂ ಸಮಾಪನಾ ಪ್ರಸ್ತಾವನೆಯನ್ನು ನಿಬಂಧಕರಿಗೆ ರವಾನಿಸುವಾಗ ಪರಿಶೀಲಿಸಬೇಕಾದ ಅಂಶಗಳು.

1) 1/5 ಅಂಶದ ಸದಸ್ಯರ ಲಿಖಿತ ಮನವಿ ಸ್ವೀಕರಿಸಿದೆಯೇ. ಹೌದು / ಇಲ್ಲ.

2) ಅಂತಹ ಸದಸ್ಯರ ಸಹಿ ನೈಜತೆ ಬಗ್ಗೆ ಸಹಕಾರಿ ಪರಿಶೀಲಿಸಿದೆಯೇ. ಹೌದು / ಇಲ್ಲ.

3) ಆಡಳಿತ ಮಂಡಳಿಗೆ ಅಂತಹ ಪ್ರಸ್ತಾವನೆಯನ್ನು ಮುಖ್ಯಕಾರ್ಯ ನಿರ್ವಾಹಕನ ಟಿಪ್ಪಣಿ ಜೊತೆ ಸ್ಪಷ್ಟವಾಗಿ ವಿಷಯ ಪ್ರಸ್ತಾಪಿಸಿ ಮಂಡಿಸಲಾಗಿದೆಯೇ. ಹೌದು / ಇಲ್ಲ

4) ಸಾಮಾನ್ಯ ಸಭೆ ಕರೆಯಲು ನಿಗದಿ ಪಡಿಸಿದಂತೆ ಸಾಲಗಾರರಿಗೆ/ ಠೇವಣಿದಾರರಿಗೆ/ಇತರರಿಗೆ ನಿಗದಿ ಪಡಿಸಿದ ಅವಧಿಯ ನೋಟೀಸ್ ನೀಡಲಾಗಿದೆಯೇ. ಹೌದು / ಇಲ್ಲ

5) ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿಯಲ್ಲಿ ತಯಾರಿಸಿ ಪ್ರಕಟಿಸಲಾಗಿದೆಯೇ. ಹೌದು / ಇಲ್ಲ

6) ಮತದಾನದ ಸಮಯದಲ್ಲಿ ಮತದಾನದ ಹಕ್ಕುಳ್ಳ ಸದಸ್ಯರ 2/3 ಸದಸ್ಯರು ಒಪ್ಪಿಗೆ ನೀಡಿದ್ದಾರೆಯೇ. ಹೌದು / ಇಲ್ಲ

7) ಸಭೆಯಲ್ಲಿ ಹಾಜರಿದ್ದ ಸದಸ್ಯರು ಮತ್ತು ಮತದಾನದ ಹಕ್ಕಿಲ್ಲದ ಸದಸ್ಯರ ಪಟ್ಟಿ ತಯಾರಿಸ ಲಾಗಿದೆಯೇ. ಹೌದು / ಇಲ್ಲ

8) ಸಭಾ ನಡವಳಿಕೆಗಳನ್ನು ಯಥಾವತ್ತಾಗಿ/ನೈಜವಾಗಿ ಮುಖ್ಯಕಾರ್ಯ ನಿರ್ವಾಹಕ ತಯಾರಿಸಿ, ಸಹಿ ಮಾಡಿದ ನಂತರ ಸಭಾಧ್ಯಕ್ಷರ ಸಹಿ ಪಡೆಯಲಾಗಿದೆಯೇ? ಹೌದು / ಇಲ್ಲ

ಈ ಎಲ್ಲಾ ಮಾಹಿತಿ ಪರಿಶೀಲಿಸಿದ ನಂತರ ಸಂಯುಕ್ತ ಸಹಕಾರಿ, ನಿಬಂಧಕರಿಗೆ ಪ್ರಸ್ತಾವನೆ ರವಾನಿಸತಕ್ಕದ್ದು.ನಿಬಂಧಕರು ಮತ್ತು ಹೆಚ್ಚುವರಿ ಮಾಹಿತಿ ಕೇಳಿದರೆ ಅದನ್ನು ಸಹಕಾರಿಯಿಂದ ಪಡೆದು ನೀಡಬೇಕು. ಈ ಪ್ರಸ್ತಾವನೆಯನ್ನು ನಿಬಂಧಕರು ಅಂಗೀಕರಿಸಿದ ದಿನಾಂಕದಂದು ಸಹಕಾರಿಯ ಸಮಾಪನೆ ಜಾರಿಯಾಗತಕ್ಕದ್ದು ಮತ್ತು ಸಂಯುಕ್ತ ಸಹಕಾರಿಯು ಹೆಸರಿಸಿದ ಸಮಾಪನಾಧಿಕಾರಿ, ಅಧಿಕಾರ ವಹಿಸಿಕೊಂಡು ಆಸ್ತಿ ಜವಾಬ್ದಾರಿಗಳನ್ನು ವಿಲೇವಾರಿ ಮಾಡಿದ ನಂತರ ಹೆಚ್ಚುವರಿ ಸಂಪನ್ಮೂಲವನ್ನು ಯಾರಿಗೆ ನೀಡಬೇಕೆಂದು ತೀರ್ಮಾನಿಸಿದಂತೆ ಪಾವತಿ ಮಾಡಿ, ನಿಬಂಧಕರಿಗೆ ನೋಂದಣಿಯನ್ನು ರದ್ದು ಪಡಿಸಲು ನಿಬಂಧಕರಿಗೆ ಪ್ರಸ್ತಾವನೆ ಪಡೆದು ಕ್ರಮ ಜರುಗಿಸುವುದು ಸಂಯುಕ್ತ ಸಹಕಾರಿಯ ಜವಾಬ್ದಾರಿ.

**ಕಲಂ.48 : ರಿಜಿಸ್ಟ್ರಾರನಿಂದ ಸಮಾಪನ :**

1) ರಿಜಿಸ್ಟ್ರಾರನು, 33ನೇ ಪ್ರಕರಣದ ಅಡಿಯಲ್ಲಿ ಮಾಡಿದ ಲೆಕ್ಕಪರಿಶೋಧನೆಯ ತರುವಾಯ ಅಥವಾ 35ನೇ ಪ್ರಕರಣದ ಅಡಿಯಲ್ಲಿ ನಡೆಸಿದ ವಿಚಾರಣೆಯ ತರುವಾಯ ಅಥವಾ ಒಂದು ಸಹಕಾರಿಯ ಸದಸ್ಯರುಗಳ ಪೈಕಿ ನಾಲ್ಕನೇ ಮೂರರಷ್ಟಕ್ಕೆ ಕಡಿಮೆಯಿಲ್ಲದ ಸಂಖ್ಯೆಯ ಸದಸ್ಯರು ಆ ಸಹಕಾರಿಯ ವ್ಯವಹಾರಗಳನ್ನು ಸಮಾಪನಗೊಳಿಸಬೇಕೆಂದು ನೀಡಿದ ಅರ್ಜಿಯ ಮೇಲೆ ಅದನ್ನು ಸಮಾಪನಗೊಳಿಸಬೇಕೆಂದು ನಿರ್ದೇಶಿಸುವ ಆದೇಶವನ್ನು ಹೊರಡಿಸಬಹುದು.

2) ಒಂದು ಸಹಕಾರಿಯು, –

ಎ) ನೋಂದಣಿಯ ತರುವಾಯ ಎರಡು ವರ್ಷಗಳೊಳಗೆ ವ್ಯವಹಾರವನ್ನು ಪ್ರಾರಂಭಿಸಿಲ್ಲವೆಂದು; ಅಥವಾ

ಬಿ) ಸತತವಾಗಿ ಎರಡು ವರ್ಷಗಳವರೆಗೆ ವ್ಯವಹಾರವನ್ನು ನಡೆಸಿಲ್ಲವೆಂದು; ಅಥವಾ

ಸಿ) ಸಹಕಾರ ತತ್ವಗಳಿಗೆ ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು ಸಹಕಾರಿಯ ಉಪವಿಧಿಗಳ ಉಪಬಂಧಗಳಿಗನುಸಾರವಾಗಿ ಕಾರ್ಯಾಚರಣೆ ಮಾಡುತ್ತಿಲ್ಲವೆಂದು,

– ಎಜಿಸ್ಟ್ರಾರನಿಗೆ ನಂಬಲು ಸೂಕ್ತ ಕಾರಣವಿದ್ದಲ್ಲಿ, ತಾನಾಗಿಯೇ, [ಅಥವಾ ಸಂಯುಕ್ತ ಸಹಕಾರಿಯ ಶಿಫಾರಸ್ಸಿನ ಮೇರೆಗೆ] ಅಂಥ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನನ್ನು ಆ ಸಹಕಾರಿಯು ವ್ಯವಹಾರವನ್ನು ನಡೆಸುತ್ತಿದೆಯೇ ಅಥವಾ ವಾರ್ಷಿಕ ವರದಿಯನ್ನು ಸಲ್ಲಿಸುತ್ತಿದೆಯೇ ಎಂಬ ಬಗ್ಗೆ ತಿಳಿಸಬೇಕೆಂದು ಅಗತ್ಯ ಪಡಿಸಬಹುದು.

3) ಮುಖ್ಯಕಾರ್ಯನಿರ್ವಾಹಕನಿಂದ ಒಂದು ತಿಂಗಳೊಳಗಾಗಿ ಯಾವುದೇ ಉತ್ತರವು ಬಾರದಿದ್ದಲ್ಲಿ, ರಿಜಿಸ್ಟ್ರಾರನು, ಸದರಿ ಅವಧಿಯು ಮುಕ್ತಾಯವದ ತರುವಾಯ ಹದಿನಾಲ್ಕು ದಿನಗಳೊಳಗೆ ಯಾವುದೇ ಉತ್ತರವು ತನಗೆ ಬಂದಿಲ್ಲವೆಂದು ದಾಖಲ್ಮಾಡತಕ್ಕದ್ದು ಮತ್ತು ಸಹಕಾರಿಯನ್ನು ಸಮಾಪನಗೊಳಿಸುವ ಒಂದು ನೋಟೀಸನ್ನು ಸ್ಥಳೀಯ ಪ್ರದೇಶದಲ್ಲಿ ಹೆಚ್ಚಾಗಿ ಪ್ರಸಾರದಲ್ಲಿರುವ ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು.

4) ಸಹಕಾರಿಯು ವ್ಯವಹಾರವನ್ನು ನಡೆಸುತ್ತಿಲ್ಲವೆಂದು ಅಥವಾ ಕಾರ್ಯಾಚರಣೆ ಮಾಡುತ್ತಿಲ್ಲವೆಂದು ಅಥವಾ ಸಹಕಾರಿಯಾಗಿ ಮುಂದುವರಿಯಲು ಇಚ್ಚಿಸುತ್ತಿಲ್ಲವೆಂದು ಅಥವಾ ವಾರ್ಷಿಕ ವರದಿಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ತಿಳಿಸಿದ ಉತ್ತರವನ್ನು ಅದರಿಂದ ರಿಜಿಸ್ಟ್ರಾರನು ಸ್ವೀಕರಿಸಿದಲ್ಲಿ, ಸಹಕಾರಿಯು ಇದಕ್ಕೆ ವ್ಯತಿರಿಕ್ತವಾದ ಕಾರಣವನ್ನು ತೋರಿಸಿದ ಹೊರತು, ಅವನು ಅಂಥ ಸಹಕಾರಿಯನ್ನು ಸಮಾಪನಗೊಳಿಸುವ ದಿನಾಂಕವನ್ನು ನಿರ್ದಿಷ್ಟ ಪಡಿಸಿ ವೃತ್ತಪತ್ರಿಕೆಯಲ್ಲಿ ಒಂದು ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ಸಹಕಾರಿಗೆ ಅಂಥ ನೋಟೀಸನ್ನು ಕಳುಹಿಸತಕ್ಕದ್ದು.

5) ಎಜಿಸ್ಟ್ರಾರನು, ಸಹಕಾರಿಯು ಯಾವುದೇ ಉತ್ತರ ನೀಡಿದ್ದಲ್ಲಿ, ಅದನ್ನು ಪರಿಗಣಿಸಿದ ತರುವಾಯ, –

ಎ) ಸಹಕಾರಿಗೆ ಯಾವುದೇ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇಲ್ಲವೆಂದು ಮನವರಿಕೆಯಾದರೆ, ಸಹಕಾರಿಯನ್ನು ಸಮಾಪನಗೊಳಿಸಲಾಗಿದೆ

ಎಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಕೂಡಲೇ ಅಂಥ ಸಹಕಾರಿಯ ನೋಂದಣಿಯನ್ನು ರದ್ದುಪಡಿಸತಕ್ಕದ್ದು; ಅಥವಾ

ಬಿ) ಸಹಕಾರಿಗೆ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇವೆಯೆಂದು ಮನವರಿಕೆಯಾದರೆ, ಅಂಥ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಂದ ಸಾಮಾನ್ಯ ಸಭೆಯು ಸಹಕಾರಿಯನ್ನು ಸಮಾಪನಗೊಳಿಸುವ ನಿರ್ಣಯವನ್ನು ಅಂಗೀಕರಿಸಿದ ತರುವಾಯ ಒಬ್ಬ ಸಮಾಪಕನನ್ನು ನೇಮಕ ಮಾಡಿಲ್ಲವೆಂಬ ವರದಿಯನ್ನು ಸ್ವೀಕರಿಸಿದ ಮೇಲೆ ಸಮಾಪಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಸಹಕಾರಿ ಮತ್ತು ಸಂಯುಕ್ತ ಸಹಕಾರಿಗೆ ತಿಳಿಸತಕ್ಕದ್ದು.

6) ಎಜಿಸ್ಟ್ರಾರನು ಸಹಕಾರಿಯು ಅಸ್ತಿತ್ವದಲ್ಲಿ ಮುಂದುವರಿಯುವುದು ಅಗತ್ಯವೆಂದು ಅಭಿಪ್ರಾಯಪಟ್ಟ ಯಾವುದೇ ಪ್ರಕರಣದಲ್ಲಿ, ಯಾವುದೇ ಸಮಯದಲ್ಲಿ, ಸಹಕಾರಿಯ ಸಮಾಪನಕ್ಕಾಗಿ ಇರುವ ಆದೇಶವನ್ನು ಅವನು ರದ್ದು ಪಡಿಸಬಹುದು.

7) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕಿನಿಂದ ಲಿಖಿತದಲ್ಲಿ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಯಾವುದೇ ಸಹಕಾರಿ ಬ್ಯಾಂಕನ್ನು ಸಮಾಪನಗೊಳಿಸತಕ್ಕದ್ದಲ್ಲ ಅಥವಾ ಸಮಾಪನಗೊಳಿಸಿದ ಆದೇಶವನ್ನು ರದ್ದುಪಡಿಸತಕ್ಕದ್ದಲ್ಲ.

**ಕಲಂ.49 : ಸಮಾಪಕನ ಕರ್ತವ್ಯಗಳು :**

1) ಸಮಾಪಕನು, ಸಮಾಪಕನ ಪದದ ಪ್ರಭಾರವನ್ನು ವಹಿಸಿಕೊಂಡ ನಂತರ ತಕ್ಷಣ ಆ ಬಗ್ಗೆ ರಿಜಿಸ್ಟ್ರಾರನಿಗೆ ಮತ್ತು ಸಂಯುಕ್ತ ಸಹಕಾರಿಗೆ, ಸಹಕಾರಿಯ ಪ್ರತಿಯೊಬ್ಬ ಕ್ಲೇಮುದಾರನಿಗೆ, ಷೇರುದಾರನಿಗೆ ಮತ್ತು ಪ್ರತಿಯೊಬ್ಬ ಸಾಲಿಗನಿಗೆ ತಿಳಿಸತಕ್ಕದ್ದು. [ಈ ರೀತಿ ನೇಮಕಗೊಂಡ ಸಮಾಪಕರು ಸಹಕಾರಿಯ ಪ್ರಭಾರ ವಹಿಸಿಕೊಂಡು ಆಸ್ತಿ ಜವಾಬ್ದಾರಿಗಳನ್ನು ಪಟ್ಟಿಮಾಡಿ ರಿಜಿಸ್ಟ್ರಾರನಿಂದ ಆದ್ಯತಾ ಪಟ್ಟಿಗೆ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಅಂಥ ಅನುಮೋದನೆಯ ನಂತರವೇ ಸಮಾಪನಾ ಪ್ರಕ್ರಿಯೆಯನ್ನು ಆರಂಭಿಸತಕ್ಕದ್ದು.] ಅವನ ನೇಮಕದ ನೋಟೀಸನ್ನು ಎರಡು ನಿರಂತರ ವಾರಗಳವರೆಗೆ ವಾರಕ್ಕೆ ಒಂದು ಬಾರಿ ರಾಜ್ಯ ಪತ್ರದಲ್ಲಿ ಮತ್ತು ಸಹಕಾರಿಯ ನೋಂದಾಯಿತ ಕಛೇರಿಯು ಇರುವ ಸ್ಥಳದಲ್ಲಿ ಪ್ರಕಟವಾಗುವ ಅಥವಾ ಹಂಚಿಕೆಯಾಗುವ ವೃತ್ತಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಅವನು ಸಹಕಾರಿಯು ತನ್ನ ವ್ಯವಹಾರಗಳನ್ನು ನಡೆಸುತ್ತಿದ್ದ ಪ್ರದೇಶದಲ್ಲಿ ಅಂಥ ಸಹಕಾರಿಯ ಸಮಾಪನದ ಬಗೆಗಿನ ನೋಟೀಸನ್ನು ನೀಡಲು ಸೂಕ್ತ ಕ್ರಮಗಳನ್ನು ಸಹ ತೆಗೆದುಕೊಳ್ಳತಕ್ಕದ್ದು.

2) (1)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಲಾದ ನೋಟೀಸು

ಎ) ಸಹಕಾರಿಗೆ ಸಾಲಗಾರನಿಂದ ಬಾಕಿಯಿರುವ ಸಾಲದ ಮೊತ್ತ ಮತ್ತು ಆ ಮೊತ್ತವನ್ನು ಸಮಾಪಕನಿಗೆ ಸಂದಾಯ ಮಾಡುವ ಸಮಯ ಮತ್ತು ಸ್ಥಳ;

ಬಿ) ಸಹಕಾರಿಯ ಸ್ವತ್ತನ್ನು ಸಮಾಪಕನಿಗೆ ನೀಡಬೇಕಾದ ಸಮಯ ಮತ್ತು ಸ್ಥಳ; ಮತ್ತು

ಸಿ) ಸಮಾಪನಗೊಂಡಿರಲಿ ಅಥವಾ ಇಲ್ಲದಿರಲಿ ಸಹಕಾರಿಯ ವಿರುದ್ಧದ ಕ್ಲೇಮುಗಳ ಸದ್ಯದ ಅಥವಾ ಭವಿಷ್ಯದ ಸ್ಥಿತಿ,

– ಇವುಗಳನ್ನು ನಿರ್ದಿಷ್ಟ ಪಡಿಸತಕ್ಕದ್ದು ಮತ್ತು ನೋಟೀಸನ್ನು ಮೊದಲು ಪ್ರಕಟಿಸಿದ ದಿನಾಂಕದ ನಂತರ ಎರಡು ತಿಂಗಳೊಳಗೆ ಅಂಥ ನೋಟೀಸನ್ನು ಪಾಲಿಸಲು ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳನ್ನು ಅಗತ್ಯ ಪಡಿಸತಕ್ಕದ್ದು.

3) ಸಮಾಪಕನು, –

ಎ) ಸಹಕಾರಿಯ ಸ್ವತ್ತನ್ನು ತನ್ನ ವಶಕ್ಕೆ ಮತ್ತು ನಿಯಂತ್ರಣಕ್ಕೆ ತೆಗೆದುಕೊಳ್ಳತಕ್ಕದ್ದು;

ಬಿ) ಸಮಾಪನಗೊಳ್ಳುತ್ತಿರುವ ಸಹಕಾರಿಯ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವಿವರಪಟ್ಟಿಕೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ವಿವರಪಟ್ಟಿಕೆಯ ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಮತ್ತು ರಿಜಿಸ್ಟ್ರಾರನಿಗೆ [ಮತ್ತು ಒಂದು ಬ್ಯಾಂಕಿನ ಸಂದರ್ಭದಲ್ಲಿ ರಿಜರ್ವ ಬ್ಯಾಂಕಿಗೆ ಸಹ] ಕಳುಹಿಸತಕ್ಕದ್ದು;

ಸಿ) ಸಹಕಾರಿಯ ಹಣದ ಸಲುವಾಗಿ ಒಂದು ಟ್ರಸ್ಟ್ ಖಾತೆಯನ್ನು ತೆರೆಯತಕ್ಕದ್ದು ಮತ್ತು ಲೆಕ್ಕವನ್ನು ಇಟ್ಟುಕೊಂಡು ಬರತಕ್ಕದ್ದು;

ಡಿ) ಅವನು ಸ್ವೀಕರಿಸಿದ ಮತ್ತು ಅವನು ಸಂದಾಯ ಮಾಡಿದ ಸಹಕಾರಿಯ ಹಣದ ಲೆಕ್ಕವನ್ನು ಇಟ್ಟುಕೊಂಡು ಬರತಕ್ಕದ್ದು;

ಇ) ಸಹಕಾರಿಯ ವಿರುದ್ಧ ಕ್ಲೇಮುಗಳನ್ನು ಹೊಂದಿರುವ ಸದಸ್ಯರ, ಸಾಲಿಗರ ಮತ್ತು ಇತರ ವ್ಯಕ್ತಿಗಳ ಪ್ರತ್ಯೇಕ ಪಟ್ಟಿಗಳನ್ನು ಇಟ್ಟುಕೊಂಡು

ಬರತಕ್ಕದ್ದು;

ಎಫ್) ಯಾವುದೇ ಸಮಯದಲ್ಲಿ ಸಹಕಾರಿಯು ಅಥವಾ ಸಹಕಾರಿ ಬ್ಯಾಂಕು, ತನ್ನ ಹೊಣೆಗಳನ್ನು ವಿಮೋಚನಗೊಳಿಸುವುದಕ್ಕಾಗಿ ಹಣ ಸಂದಾಯ ಮಾಡಲು ಅಥವಾ ಸಾಕಷ್ಟು ಹಣ ಒದಗಿಸಲು ಅಸಮರ್ಥವಾಗಿದೆಯೆಂದು ಆತನು ತೀರ್ಮಾನಿಸಿದರೆ, ನಿರ್ದೇಶನಕ್ಕಾಗಿ, ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿಗೆ ಮತ್ತು ಇತರೆ ಸಂದರ್ಭಗಳಿಗೆ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸತಕ್ಕದ್ದು; ಮತ್ತು

ಜಿ) ಸಮಾಪಕನು ಯುಕ್ತವೆಂದು ಭಾವಿಸುವಂಥ ಅಥವಾ (ರಿಜಿಸ್ಟ್ರಾರನು) ಅಗತ್ಯ ಪಡಿಸಬಹುದಾದಂಥ ನಮೂನೆಯಲ್ಲಿ ಕಡೇ ಪಕ್ಷ ಆರು ತಿಂಗಳಿಗೊಮ್ಮೆ ಅಥವಾ (ರಿಜಿಸ್ಟ್ರಾರನು) ಅಗತ್ಯ ಪಡಿಸಬಹುದಾದಂತೆ ಇನ್ನೂ ಹೆಚ್ಚು ಬಾರಿ ಸಹಕಾರಿಯ ಆರ್ಥಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು [ಮತ್ತು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಅಂಥ ಆರ್ಥಿಕ ವಿವರ ಪಟ್ಟಿಯನ್ನು ರಿಜರ್ವ್ ಬ್ಯಾಂಕಿಗೆ ಸಹ ಸಲ್ಲಿಸತಕ್ಕದ್ದು.]

**ಕಲಂ.50 : ಸಮಾಪಕನ ಅಧಿಕಾರಗಳು :**

1) ಸಮಾಪಕನು

(ಎ) ವಕೀಲರು, ಲೆಕ್ಕಿಗರು, ಇಂಜಿನಿಯರರು, ಮೌಲ್ಯ ನಿರ್ಣಯಕಾರರು ಹಾಗೂ ಇತರ ವೃತ್ತಿ ಸಲಹೆಗಾರರನ್ನು ನೇಮಿಸಿಕೊಳ್ಳಬಹುದು;

(ಬಿ) ಸಹಕಾರಿಯ ಹೆಸರಿನಲ್ಲಿ ಅಥವಾ ಅದರ ಪರವಾಗಿ ಯಾವುದೇ ಸಿವಿಲ್, ಕ್ರಿಮಿನಲ್ ಅಥವಾ ಆಡಳಿತಾತ್ಮಕ ಕ್ರಮ ಅಥವಾ ನಡವಳಿಯಲ್ಲಿ ಪ್ರತಿವಾದಿಸಬಹುದು ಅಥವಾ ಭಾಗವಹಿಸಬಹುದು;

(ಸಿ) ಕ್ರಮಬದ್ಧ ಸಮಾಪನಕ್ಕಾಗಿ ಅಗತ್ಯವಿರುವ ಸಹಕಾರಿಯ ವ್ಯವಹಾರವನ್ನು ನಡೆಸಬಹುದು;

(ಡಿ) ಸಹಕಾರಿಯ ಯಾವುದೇ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟಮಾಡಬಹುದು;

(ಇ) ಸಹಕಾರಿಯ ಹೆಸರಿನಲ್ಲಿ ಅಥವಾ ಅದರ ಪರವಾಗಿ ಎಲ್ಲಾ ಕಾರ್ಯಗಳನ್ನು ಮಾಡಬಹುದು ಹಾಗೂ ಯಾವುದೇ ದಸ್ತಾವೇಜುಗಳನ್ನು ಬರೆದುಕೊಡಬಹುದು;

(ಎಫ್) ಸಹಕಾರಿಯ ಸ್ವತ್ತಿನ ಭದ್ರತೆಯ ಮೇಲೆ ಸಾಲವನ್ನು ಪಡೆಯಬಹುದು;

(ಜಿ) ಸಹಕಾರಿಯ ಪರವಾದ ಅಥವಾ ವಿರುದ್ಧವಾದ ಯಾವುದೇ ಕ್ಲೇಮುಗಳನ್ನು ಇತ್ಯರ್ಥಗೊಳಿಸಬಹುದು ಅಥವಾ ರಾಜಿ ಮಾಡಿಕೊಳ್ಳಬಹುದು;

(ಹೆಚ್) ಸಹಕಾರಿಯ ಸಮಾಪನಕ್ಕೆ ಅಗತ್ಯವಿರುವ ಅಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು.

2) ಯಾವೊಬ್ಬ ವ್ಯಕ್ತಿಯು ಸಹಕಾರಿಯ ಯಾವುದೇ ಸ್ವತ್ತನ್ನು ತನ್ನ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ರಿಸಿಕೊಂಡಿರುವನೆಂದು ಅಥವಾ ಮರೆಮಾಚಿರುವನೆಂದು, ತಡೆ ಹಿಡಿದಿರುವನೆಂದು ಅಥವಾ ದುರ್ವಿನಿಯೋಗ ಮಾಡಿರುವನೆಂದು ನಂಬಲು ಕಾರಣವಿದ್ದರೆ, ಸಮಾಪಕನು ಅಂಥ ವ್ಯಕ್ತಿಯ ವಿರುದ್ಧ ಮುಂದಿನ ಕ್ರಮಕೈಗೊಳ್ಳಲು (ರಿಜಿಸ್ಟ್ರಾರನಿಗೆ) ತಿಳಿಸತಕ್ಕದ್ದು.

3) ಯಾವೊಬ್ಬ ಸಮಾಪಕ ಅಥವಾ ಆತನ ಸಂಬಂಧಿಯು ಸಮಾಪನಗೊಳ್ಳುತ್ತಿರುವ ಸಹಕಾರಿಯ ಮಾರಾಟದ ಸರಕು, ಋಣ ಅಥವಾ ಆಸ್ತಿಗಳ ಯಾವುದೇ ಭಾಗವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಖರೀದಿಸತಕ್ಕದ್ದಲ್ಲ.

**ಕಲಂ.51 : ಅಂತಿಮ ಲೆಕ್ಕಪತ್ರಗಳು :**

1) ಸಮಾಪಕನು ಸಹಕಾರಿಯ ಸ್ವತ್ತಿನ ಪೈಕಿಯಿಂದ ಸಮಾಪನದ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು ಹಾಗೂ ಸಹಕಾರಿಯ ವಿರುದ್ಧದ ಎಲ್ಲಾ ಕ್ಲೇಮುಗಳನ್ನು ಸಂದಾಯ ಮಾಡತಕ್ಕದ್ದು ಅಥವಾ ಅದಕ್ಕಾಗಿ ಸೂಕ್ತ ಏರ್ಪಾಟು ಮಾಡತಕ್ಕದ್ದು.

2) ಸಮಾಪಕನು, ಸಹಕಾರಿಯ ವಿರುದ್ಧದ ಎಲ್ಲ ಕ್ಲೇಮುಗಳನ್ನು ಸಂದಾಯ ಮಾಡಿದ ತರುವಾಯ ಅಥವಾ ಅದಕ್ಕಾಗಿ ಸೂಕ್ತ ಏರ್ಪಾಟು ಮಾಡಿದ ತರುವಾಯ, ತನ್ನ ಅಂತಿಮ ಲೆಕ್ಕಪತ್ರಗಳ ಅನುಮೋದನೆಗಾಗಿ ಹಾಗೂ ಉಪವಿಧಿಗಳಿಗನುಸಾರವಾಗಿ, ಸದಸ್ಯರಿಗೆ ಕೊಡಬೇಕಾಗಿರುವ ಮೊಬಲಗನ್ನು ನಗದಾಗಿ ಅಥವಾ ವಸ್ತು ರೂಪದಲ್ಲಿ ಸಹಕಾರಿಯ ಉಳಿದ ಸ್ವತ್ತಿನಿಂದ ಹಂಚುವುದಕ್ಕೆ ಅನುಮತಿಗಾಗಿ (ರಿಜಿಸ್ಟ್ರಾರನಿಗೆ) ಅರ್ಜಿ ಸಲ್ಲಿಸತಕ್ಕದ್ದು.

3) (ರಿಜಿಸ್ಟ್ರಾರನು) (2)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿ ಸಮಾಪಕನು ಸಲ್ಲಿಸಿದ ಅಂತಿಮ ಲೆಕ್ಕಪತ್ರಗಳನ್ನು ಅನುಮೋದಿಸುವ

ಸಂದರ್ಭದಲ್ಲಿ (ಅವನು)

(ಎ) ಸಹಕಾರಿಯ ದಸ್ತಾವೇಜುಗಳು ಹಾಗೂ ದಾಖಲೆಗಳ ಅಭಿರಕ್ಷೆ ಅಥವಾ ವಿಲೆಗಾಗಿ ನಿರ್ದೇಶನಗಳನ್ನು ಹೊರಡಿಸತಕ್ಕದ್ದು; ಮತ್ತು

(ಬಿ) ಸಮಾಪಕನನ್ನು ಅವನ ಹುದ್ದೆಯಿಂದ ಬಿಡುಗಡೆಗೊಳಿಸತಕ್ಕದ್ದು.

4) (ರಿಜಿಸ್ಟ್ರಾರನು) (3)ನೇ ಉಪ–ಪ್ರಕರಣದ ಅಡಿಯಲ್ಲಿ ಸಮಾಪಕನನ್ನು ಬಿಡುಗಡೆಗೊಳಿಸಿದ ಸಂದರ್ಭದಲ್ಲಿ, ಅವನು, ಸಹಕಾರಿಯ ಸಮಾಪನದ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಅಂಥ ಸಹಕಾರಿಯ ನೋಂದಣಿಯನ್ನು ರದ್ದುಪಡಿಸತಕ್ಕದ್ದು.

5) ಸಹಕಾರಿಯು, ನೋಂದಣಿ ಪ್ರಮಾಣಪತ್ರವು ರದ್ದುಗೊಂಡ ದಿನಾಂಕದಿಂದ ನಿಗಮಿತ ನಿಕಾಯವಾಗಿರುವುದು ನಿಂತುಹೋಗುತ್ತದೆ.

ಒಂದು ಸಹಕಾರಿ ಸಮಾಪನೆಗೊಳಿಸಲು ನೀತಿ ಎಂದರೆ ಲೆಕ್ಕಪರಿಶೋಧನೆ, ವಿಚಾರಣೆ, ಮತ್ತು ಸದಸ್ಯರ ಱ ಅಂಶದ ಸದಸ್ಯರು ಲಿಖಿತವಾಗಿ ಸಮಾಪನೆ ಮಾಡಲು ಮನವಿ ಸಲ್ಲಿಸಿದರೆ, ನಿಬಂಧಕರು ಸ್ವಯಂಪ್ರೇರಣೆಯಿಂದ ಹಾಗೂ

1) ನೋಂದಣಿಯಾದ ಎರಡು ವರ್ಷಗಳು ವ್ಯವಹಾರ ಪ್ರಾರಂಭಿಸದಿದ್ದರೆ.

2) ಸತತವಾಗಿ ಎರಡು ವರ್ಷ ವ್ಯವಹಾರ ನಡೆಸಿಲ್ಲವೆಂದು ಅಥವಾ

3) ಸಹಕಾರ ತತ್ವಗಳಿಗೆ, ಅಧಿನಿಯಮ, ನಿಯಮ ಮತ್ತು ಉಪವಿಧಿಗಳನ್ವಯ ಕೆಲಸ ನಿರ್ವಹಿಸುತ್ತಿಲ್ಲವೆಂದು ನಿಬಂಧಕರಿಗೆ ಮನದಟ್ಟಾದರೆ.

ಅಂತಹ ಸಹಕಾರಿ ಸಮಾಪನೆಗೊಳಿಸತಕ್ಕದೆಂದು ಆದೇಶ ಮಾಡಬಹುದು. ಅದೇ ರೀತಿ ಈ ಮೇಲ್ಕಂಡಂತೆ ಆದೇಶ ಹೊರಡಿಸಿದ ನಂತರ ಸಮಾಪನಾ ಆದೇಶವನ್ನು ರದ್ದುಗೊಳಿಸಿ, ಪುನಃ ಆ ಸಹಕಾರಿಯ ಅಸ್ಥಿತ್ವಕ್ಕೆ ತರಬಹುದು. ಈ ಮೇಲ್ಕಂಡ ಕಾರಣದಿಂದ ಸಮಾಪನೆ ಮಾಡುವ ಪೂರ್ವದಲ್ಲಿ ನಿಬಂಧಕರು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ, ಪರಿಶೀಲಿಸಿ, ಆನಂತರ ಸಮಾಪನೆ ಆದೇಶ ಹೊರಡಿಸಬೇಕು.

ಸಮಾಪನಾಧಿಕಾರಿಯನ್ನು ನೇಮಕ ಮಾಡಿದ ನಂತರ ಅಂತಹ ಸಮಾಪನಾಧಿಕಾರಿಯು ಸಹಕಾರಿ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಶಕ್ಕೆ ತೆಗೆದುಕೊಂಡು, ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳತಕ್ಕದ್ದು. ಮತ್ತು ಆಸ್ತಿಯನ್ನು ವಸೂಲಿ ಮಾಡಿ ಜವಾಬ್ದಾರಿ ತೀರುವಳಿ ಮಾಡುವಂತಹ ಸಂದರ್ಭದಲ್ಲಿ ನಿಬಂಧಕರಿಂದ ವಸೂಲಿ ಮಾಡಿಕೊಂಡ ಆಸ್ತಿಯನ್ನು ಯಾವ ರೀತಿ ತೀರುವಳಿ ಮಾಡಬೇಕೆಂಬ ಬಗ್ಗೆ ಆದ್ಯತಾ ಪಟ್ಟಿ ತಯಾರಿಸಿ, ನಿಬಂಧಕರ ಒಪ್ಪಿಗೆ ಪಡೆದ ನಂತರ ಜವಾಬ್ದಾರಿಗಳನ್ನು ವಿಲೇವಾರಿಮಾಡಲು ಕ್ರಮ ಜರುಗಿಸತಕ್ಕದ್ದು.

**ಸಮಾಪನಾಧಿಕಾರಿಯ ಕರ್ತವ್ಯಗಳು:**

ಸಮಾಪನಾಧಿಕಾರಿಯಾಗಿ ನೇಮಕಗೊಂಡ ನಂತರ ಮೊದಲು ನಿರ್ವಹಿಸಬೇಕಾದ ಜವಾಬ್ದಾರಿ ಏನೆಂದರೆ ಆ ಸಹಕಾರಿ ದಾಖಲೆಗಳು, ಪುಸ್ತಕಗಳು, ನಗದು, ಮತ್ತಿತರ ಆಸ್ತಿಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳತಕ್ಕದ್ದು. ಅದರಲ್ಲೂ ಪ್ರಮುಖವಾಗಿ ನಶಿಸಿಹೋಗುವ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡು ವಿಲೇವಾರಿ ಮಾಡಲು ತುರ್ತು ಕ್ರಮ ಜರುಗಿಸಬೇಕು.

ನಿಬಂಧಕರ ನಿಯಂತ್ರಣಕ್ಕೊಳಪಟ್ಟು ಸಮಾಪನಾಧಿಕಾರಿಯು ಈ ಕೆಳಕಂಡ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

1. ಸಮಾಪನೆಗೊಂಡ ಸಹಕಾರಿ ಪರವಾಗಿ ದಾವೆ ಹೂಡುವುದು ಮತ್ತು ದಾವೆಗೆ ಒಳಗಾಗುವುದು ಅಂದರೆ ಸಹಕಾರಿ ಹೆಸರಿನಲ್ಲಿ ವ್ಯವಹರಿಸುವುದು.
2. ಸಮಾಪನೆ ಕಾರ್ಯ ನಡೆಸುವಾಗ ಸದಸ್ಯರಿಂದ, ಹಿಂದಿನ ಸದಸ್ಯರಿಂದ, ಕಾನೂನು ವಾರಸುದಾರರಿಂದ ಸಹಕಾರಿಗೆ ತುಂಬಬೇಕಾದ ಹಣದ ಪ್ರಮಾಣವನ್ನು ನಿಗಧಿಪಡಿಸುವುದು. ಆ ಸಂದರ್ಭದಲ್ಲಿ ಮೇಲ್ಕಂಡ ವ್ಯಕ್ತಿಗಳು ಬಿಟ್ಟುಹೋದ ಆಸ್ತಿಯಿಂದಲೂ ವಸೂಲಿ ಮಾಡಕೊಳ್ಳುವ ಅಧಿಕಾರ ಇರತಕ್ಕದ್ದು.
3. ಬರಬೇಕಾದ, ಕೊಡಬೇಕಾದ ಎಲ್ಲ ಬಾಕಿಗಳ ಬಗ್ಗೆ ವಿಚಾರಣೆ ಮಾಡಿ ಅವುಗಳ ವಿಲೇವಾರಿಗೆ ಜೇಷ್ಠತೆಯ ಆಧಾರದ ಮೇಲೆ ಪಟ್ಟಿಯನ್ನು ತಯಾರಿಸತಕ್ಕದ್ದು.
4. ಕೊಡಬೇಕಾದ ಬಾಕಿಗಳ ಬಗ್ಗೆಯೂ ವಿಚಾರಣೆ ಮಾಡಿ ನಿಗಧಿಪಡಿಸತಕ್ಕದ್ದು.
5. ಸದಸ್ಯರು ಮತ್ತು ಇನ್ನಿತರೆ ಬಾಕಿದಾರರಿಗೆ ಕೊಡಬೇಕಾದ ಹಣವನ್ನು ನಿರ್ಧರಿಸಿದ ನಂತರ ಅವುಗಳ ಬಗ್ಗೆಯೂ ಜೇಷ್ಠತಾ ಪಟ್ಟಿ ತಯಾರಿಸಿ ಪಾವತಿ ಮಾಡತಕ್ಕದ್ದು.

6. ಈ ರೀತಿ ಕೊಡಬೇಕಾದ ಎಲ್ಲ ಬಾಕಿಗಳನ್ನು ತೀರುವಳಿ ಮಾಡುವ ಪೂರ್ವದಲ್ಲಿ ಬಡ್ಡಿ ಆಕರಣೆಯನ್ನು ಮಾಡಿದಾಗಲೂ ನಿಗಧಿಪಡಿಸಿದ ಬಡ್ಡಿ ದರದಂತೆ ಪಾವತಿ ಮಾಡತಕ್ಕದ್ದು. ಯಾವುದೇ ಕಾರಣಕ್ಕೂ ಒಪ್ಪಂದದ ಬಡ್ಡಿದರಕ್ಕಿಂತ ಮೀರಿ ಬಡ್ಡಿಯನ್ನು ಪಾವತಿಸತಕ್ಕದ್ದಲ್ಲ.
7. ಯಾರಾದರೂ ವ್ಯಕ್ತಿಗಳು ಹಣ ಬರಬೇಕೆಂದು ಮನವಿ ಸಲ್ಲಿಸಿದ್ದರೆ ಅಥವಾ ಸಲ್ಲಿಸಿದಾಗ ಅಂತಹ ವ್ಯಕ್ತಿಗಳು ಸದಸ್ಯರೇ, ಮಾಜಿ ಸದಸ್ಯರೇ ಅಥವಾ ಕಾನೂನು ವಾರಸುದಾರರೇ ಎಂಬುದನ್ನು ಪರಿಶೀಲಿಸಬೇಕು.
8. ಬರಬೇಕಾದ ಹಣ ವಸೂಲಾತಿಗಾಗಿ ಮತ್ತು ಜವಾಬ್ದಾರಿ ವಿಲೇವಾರಿಗಾಗಿ ನಿರ್ಧರಿಸುವ ಅಧಿಕಾರ ಇರತಕ್ಕದ್ದು.
9. ವ್ಯವಹಾರವನ್ನು ಸಮಾಪನಗೊಂಡ ಸಹಕಾರಿ ಅನುಕೂಲವಾಗುತ್ತಿದ್ದರೆ ಮುಂದುವರಿಸಿಕೊಂಡು ಹೋಗತಕ್ಕದ್ದು.
10. ಬರಬೇಕಾದ ಮತ್ತು ಕೊಡಬೇಕಾದ ಜವಾಬ್ದಾರಿಗಳ ಬಗ್ಗೆ ಸಂಬಂಧಪಟ್ಟವರ ಜೊತೆ ಚರ್ಚಿಸಿ ಹೊಂದಾಣಿಕೆ ಮಾಡಿಕೊಂಡು ತೀರುವಳಿ ಮಾಡುವ ಅಧಿಕಾರ ಇರತಕ್ಕದ್ದು.
11. ಬರಬೇಕಾದ ಮತ್ತು ಕೊಡಬೇಕಾದ ಬಾಕಿಗಳ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳುವ ಅಧಿಕಾರದ ಜೊತೆಗೆ, ತೀರುವಳಿ ಮಾಡುವ ಸಂದರ್ಭದಲ್ಲಿ ಸದಸ್ಯರು, ಮಾಜಿ ಸದಸ್ಯರು, ಕಾನೂನು ವಾರಸುದಾರರು ಪಾವತಿಸಬೇಕಾದ ಹಣದ ಪ್ರಮಾಣವನ್ನು ನಿಗಧಿಪಡಿಸುವ ಅಧಿಕಾರ ಇರತಕ್ಕದ್ದು.
12. ಈ ತೀರುವಳಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಭದ್ರತೆಯನ್ನು ಪಡೆಯಲೂ ಸಹ ಸಮಾಪನಾಧಿಕಾರಿಗೆ ಅಧಿಕಾರ ಇರತಕ್ಕದ್ದು.
13. ಸಮಾಪನಾಧಿಕಾರಿಯು ಬರಬೇಕಾದ ಮತ್ತು ಕೊಡಬೇಕಾದ ಬಾಕಿಗಳನ್ನು ತೀರುವಳಿ ಮಾಡಿದ ನಂತರ ನಿಬಂಧಕರಿಗೆ ವರದಿ ಸಲ್ಲಿಸಿ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ನಿಬಂಧಕರಿಗೆ ಸಲ್ಲಿಸುವುದು ಅಥವಾ ಅವರು ಸೂಚಿಸಿದ ವ್ಯಕ್ತಿಗೆ ಸಲ್ಲಿಸತಕ್ಕದ್ದು.

**ಸಮಾಪನೆ ಕಾರ್ಯನಿರ್ವಹಿಸುವ ವಿಧಿವಿಧಾನಗಳು:**

1. ಸಮಾಪನಾಧಿಕಾರಿ ಎಂಬ ನೇಮಕಾತಿ ಆದೇಶ ಬಂದ ನಂತರ ಹಾಗೂ ಅಧಿಕಾರ ವಹಿಸಿಕೊಂಡ ನಂತರ, ಕೊಡಬೇಕಾದ ಎಲ್ಲ ಬಾಕಿಗಳ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗಳು ಮತ್ತು ಸಂಸ್ಥೆಗಳು 2 ತಿಂಗಳೊಳಗಾಗಿ ತಮ್ಮ ಬೇಡಿಕೆಗಳನ್ನು ಸಲ್ಲಿಸುವಂತೆ ಪ್ರಕಟಣೆಯನ್ನು ಹೊರಡಿಸತಕ್ಕದ್ದು. ದಾಖಲೆಗಳಲ್ಲಿ ಕೊಡಬೇಕಾದ ಬಾಕಿಯನ್ನು ಪರಿಶೀಲನೆ ಮಾಡಿ, ಹೊಂದಾಣಿಕೆ ಮಾಡತಕ್ಕದ್ದು.

2. ಪ್ರತಿಯೊಂದು ಬಾಕಿ ತೀರುವಳಿಯ ಬಗ್ಗೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪಾವತಿ ಮಾಡುವ ನೀತಿ ನಿಯಮಗಳನ್ನು ರೂಪಿಸುವುದು.

3. ಬರಬೇಕಾದ ಎಲ್ಲ ಆಸ್ತಿಗಳ ವಸೂಲಾತಿಗೆ ಕ್ರಮ ಜರುಗಿಸುವುದರ ಜೊತೆಗೆ ಆ ಆಸ್ತಿಗಳ ವಸೂಲಾತಿಗಾಗಿ ದಾವಾ ಪ್ರಕರಣಗಳನ್ನು ದಾಖಲಿಸಿ ವಸೂಲಾತಿ ಕ್ರಮ ಜರುಗಿಸುವುದು.

4. ಬರಬೇಕಾದ ಬಾಕಿಗಳ ವಸೂಲಾತಿಗಾಗಿ ಕ್ರಮ ಜರುಗಿಸುವುದರ ಜೊತೆಗೆ ವಸೂಲಾತಿಗಾಗಿಯೇ ಲಿಖಿತವಾಗಿ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಗೆ ಜವಾಬ್ದಾರಿಯನ್ನು ವಹಿಸಿಕೊಡಬಹುದು.

5. ಆಸ್ತಿ ಮತ್ತು ಜವಾಬ್ದಾರಿಗಳನ್ನು ತೀರುವಳಿ ಮಾಡಿದ ನಂತರ ಸದಸ್ಯರು, ಮಾಜಿ ಸದಸ್ಯರು, ಕಾನೂನು ವಾರಸುದಾರರು, ಆಸ್ತಿ ಬಿಟ್ಟು ಹೋದ ಸದಸ್ಯರುಗಳಿಂದ ಪಾವತಿಸಬೇಕಾದ ಭಾಗದ ಪ್ರಮಾಣವನ್ನು ನಿಗಧಿಪಡಿಸುವುದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಹೆಚ್ಚುವರಿ ಆದೇಶಗಳನ್ನು ಮೊದಲನೇ ಆದೇಶಕ್ಕೆ ಪೂರಕವಾಗಿ ಹೊರಡಿಸಿ ವಸೂಲಾತಿ ಕ್ರಮ ಜರುಗಿಸುವುದು.

6. ನಗದು ಮತ್ತು ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಸರ್ಕಾರದ ಟ್ರೆಸರಿ ಅಥವಾ ಪೋಸ್ಟ್ ಆಫೀಸ್ ಅಥವಾ ಸಹಕಾರಿ ಬ್ಯಾಂಕು ಅಥವಾ ನಿಬಂಧಕರು ಒಪ್ಪಿದ ಇತರ ಯಾವುದೇ ಬ್ಯಾಂಕಿನಲ್ಲಿ ಹೂಡತಕ್ಕದ್ದು.

7. ಸಮಾಪನಾಧಿಕಾರಿಗೆ ಕೊಡಬೇಕಾದ ಸಂಬಳವನ್ನು ನಿಬಂಧಕರು ನಿರ್ಧರಿಸತಕ್ಕದ್ದು. ಈ ಹಣವನ್ನು ಸಹಕಾರಿ ಆಸ್ತಿಯಿಂದ ಪಡೆಯಲು ಆದೇಶಿಸತಕ್ಕದ್ದು. ಮತ್ತು ಈ ಪಾವತಿಯು ಮೊದಲನೇ ಪ್ರಾಮುಖ್ಯತೆಯಿಂದ ಪಡೆಯಲು ಅಧಿಕಾರ ಇರತಕ್ಕದ್ದು.

8. ಸಮಾಪನಾಧಿಕಾರಿಯು ಸದಸ್ಯರ ಸಭೆಯನ್ನು ಕರೆದು ಚರ್ಚಿಸಬಹುದು.

9. ಸಮಾಪನಾಧಿಕಾರಿಯು 3 ತಿಂಗಳಿಗೊಮ್ಮೆ ಸಮಾಪನಾ ಕಾರ್ಯದ ಪ್ರಗತಿಯನ್ನು ನಿಗಧಿತ ನಮೂನೆಯಲ್ಲಿ ನಿಬಂಧಕರಿಗೆ ಸಲ್ಲಿಸತಕ್ಕದ್ದು.

10. ನಿಬಂಧಕರು ನಿಗಧಿಪಡಿಸಿದ ನಮೂನೆಯಲ್ಲಿ ಲೆಕ್ಕಪತ್ರಗಳನ್ನು ಇಡತಕ್ಕದ್ದು.

11. ಸಮಾಪನಾ ಕಾರ್ಯ ಮುಕ್ತಾಯವಾದ ನಂತರ ಸದಸ್ಯರ ಸಾಮಾನ್ಯ ಸಭೆಯನ್ನು ಕರೆದು ಸಹಕಾರಿ ಮುಕ್ತಾಯ ಮಾಡಲು ಒಪ್ಪಿಗೆ ಪಡೆಯತಕ್ಕದ್ದು.

12. ಆರ್ಥಿಕ ಪರಿಸ್ಥಿತಿಯ ಬಗ್ಗೆ ಮತ್ತು ಸಮಾಪನೆ ಕಾರ್ಯ ಮುಕ್ತಾಯವಾದ ಬಗ್ಗೆ ಒಂದು ವರದಿಯನ್ನು ತಯಾರಿಸಿ ಮಹಾಸಭೆ ಒಪ್ಪಿಗೆ ಪಡೆಯುವುದರ ಜೊತೆಗೆ; ನಿಬಂಧಕರಿಗೆ ಆ ವರದಿಯನ್ನು ಸಲ್ಲಿಸುವುದು. ಕೊಡಬೇಕಾದ ಬಾಕಿ ತೀರುವಳಿಗಳ ಬಗ್ಗೆ, ಬರಬೇಕಾದ ಆಸ್ತಿ ಇಲ್ಲದೇ ಇದ್ದ ಸಂದರ್ಭದಲ್ಲಿ, ಮೀಸಲು ನಿಧಿಯಿಂದ ತೀರುವಳಿ ಮಾಡಬಹುದು. ಈ ತೀರುವಳಿ ಮಾಡುವಾಗ ಸಮಾಪನಾಧಿಕಾರಿ ಈ ಕೆಳಕಂಡ ಜೇಷ್ಠತೆಯಂತೆ ಕ್ರಮ ಜರುಗಿಸಬಹುದು.

**ಎ) ಸಾಲಗಳು.**

ಬಿ) ಪಾವತಿಯಾದ ಷೇರು ಬಂಡವಾಳದ ಮೇಲೆ ಡಿವಿಡೆಂಡನ್ನು ಕೊಡದೇ ಇದ್ದ, ಯಾವುದೇ ಅವಧಿ ಅಥವಾ ಅವಧಿಗಳಿಗೆ ಶೇ. 6ಕ್ಕಿಂತ ಹೆಚ್ಚಾಗದ ದರದಲ್ಲಿ ಡಿವಿಡೆಂಡ್ ಕೊಡಲು ಅಥವಾ ಯಾವುದೇ ಅವಧಿಗೆ ನಿರ್ದಿಷ್ಟಪಡಿಸಿದ ಗರಿಷ್ಟ ದರಕ್ಕೆ ಸಮನಾಗುವಂತೆ ಉಳಿದಿರುವ ಡಿವಿಡೆಂಡನ್ನು ಪಾವತಿಯಾದ ಷೇರುಗಳಿಗೆ ಕೊಡಲು. ಆದರೆ, ಉಪವಿಧಿಗಳಲ್ಲಿ ಡಿವಿಡೆಂಡನ್ನು ಕೊಡುವ ಬಗ್ಗೆ ಅವಕಾಶವಿರದಿದ್ದರೆ ಷೇರುಗಳ ಮೇಲೆ ಯಾವ ಡಿವೆಡಿಂಡನ್ನೂ ಕೊಡತಕ್ಕದ್ದಲ್ಲ.

13. ಕೊಡಬೇಕಾದ ಬಾಕಿಗಳೆಲ್ಲವನ್ನೂ ಚುಕ್ತ ಮಾಡಿದ ನಂತರ, ಹೆಚ್ಚುವರಿ ಸಂಪನ್ಮೂಲವನ್ನು ಈ ಕೆಳಕಂಡಂತೆ ಉಪಯೋಗಿಸತಕ್ಕದ್ದು.

ಎ) ಹಣಕಾಸು ನೆರವು ಬ್ಯಾಂಕು ಬಿಟ್ಟು, ಇತರ ಒಂದು ಸಹಕಾರಿ ಸಂಬಂಧದಲ್ಲಿ, ವಿಸರ್ಜಿಸಲ್ಪಟ್ಟ ಸಹಕಾರಿ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಲು ಮತ್ತು ನಿಬಂಧಕರಿಂದ ಅನುಮೋದಿತವಾದ ಸಾರ್ವಜನಿಕ ಪ್ರಯೋಜನದ ಉದ್ದೇಶಕ್ಕೆ ಹೆಚ್ಚುವರಿ ಹಣವನ್ನು ಉಪಯೋಗಿಸತಕ್ಕದ್ದು. ಸಹಕಾರಿ ವ್ಯವಹಾರಗಳನ್ನು ಪರಿಸಮಾಪ್ತಿಗೊಳಿಸಲು ನೇಮಕವಾದ ಸಮಾಪನಾಧಿಕಾರಿಯು ನೋಟೀಸು ಕೊಟ್ಟ ನಂತರ 30 ದಿನಗಳಲ್ಲಿ ಸರ್ವಸದಸ್ಯರ ಸಾಮಾನ್ಯ ಸಭೆಯು ನಿಬಂಧಕರಿಂದ ಅನುಮೋದಿತವಾದುವುಗಳಲ್ಲಿ ಒಂದನ್ನು ಆಯ್ಕೆ ಮಾಡಲು ತಪ್ಪಿದರೆ, ಸಮಾಪಕನು ಹೆಚ್ಚಿನ ಹಣವನ್ನು 'ಸಹಕಾರ ಅಭಿವೃದ್ಧಿ ನಿಧಿಗೆ' ವರ್ಗಾಯಿಸತಕ್ಕದ್ದು.

ಬಿ) ಹಣಕಾಸು ನೆರವು ನೀಡಿದ ಬ್ಯಾಂಕಿನ ಸಂಬಂಧದಲ್ಲಿ ಪರಿಸಮಾಪ್ತಿಗೊಳಿಸಲ್ಪಡುವ ಸಹಕಾರಿ ಯಾವ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿತ್ತೋ, ಆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸದಸ್ಯತ್ವವನ್ನು ಪಡೆದ ಮತ್ತಾವುದೇ ಹಣಕಾಸು ಬ್ಯಾಂಕು ಅಥವಾ ಬ್ಯಾಂಕುಗಳ ಮೀಸಲು ನಿಧಿ ಅಥವಾ ನಿಧಿಗಳಿಗೆ ಆ ಹೆಚ್ಚಿನ ಹಣವು ನಿಬಂಧಕರಿಂದ ಒಪ್ಪಿಸಲ್ಪಡತಕ್ಕದ್ದು. ಆದರೆ ಆ ಭಾಗದಲ್ಲಿ ಯಾವ ಹಣಕಾಸಿನ ಬ್ಯಾಂಕೂ ಕಾರ್ಯ ನಿರ್ವಹಿಸುತ್ತಿಲ್ಲದಿದ್ದರೆ, ನಿಬಂಧಕರು ಆ ಹೆಚ್ಚಿನ ಹಣವನ್ನು 'ಸಹಕಾರ ಅಭಿವೃದ್ಧಿ ನಿಧಿಗೆ' ವರ್ಗಾಯಿಸುವಂತೆ ಸಂಬಂಧಪಟ್ಟ ಸಮಾಪನೆಗೊಂಡ ಸಹಕಾರಿ ಸಮಾಪಕನಿಗೆ ನಿರ್ದೇಶನ ನೀಡತಕ್ಕದ್ದು.

ಸಿ) ನಿಬಂಧಕರು ರಾಜ್ಯ ಸರ್ಕಾರದ ಪೂರ್ವಾನುಮತಿಯೊಂದಿಗೆ ಸಹಕಾರ ಅಭಿವೃದ್ಧಿ ನಿಧಿಯನ್ನು ಈ ಮುಂದಿನ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದು:

1) ಸಹಕಾರ ಕ್ಷೇತ್ರದಲ್ಲಿ ಸಂಶೋಧನೆ, ಅಧ್ಯಯನವನ್ನು ನಡೆಸುವ ಉದ್ದೇಶಕ್ಕಾಗಿ ಸಂಶೋಧನಾ ಕೇಂದ್ರಗಳನ್ನು ಸಂಘಟಿಸಲು ಮತ್ತು ಸ್ಥಾಪಿಸಲು ಮತ್ತು ಸಹಕಾರ ಚಳುವಳಿಯ ಪ್ರಸ್ತುತ ವಿದ್ಯಮಾನಗಳ ಮೇಲೆ ರಾಜ್ಯ, ರಾಷ್ಟ್ರ ಮಟ್ಟದ ವಿಚಾರ ಗೋಷ್ಠಿಗಳನ್ನು ಮತ್ತು ಕಾರ್ಯಾಗಾರಗಳನ್ನು ನಡೆಸಲು,

2) ಕಟ್ಟಡಗಳನ್ನು ನಿರ್ಮಿಸುವುದು, ವಾಹನಗಳನ್ನು ಹೊಂದುವುದು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಸೃಜಿಸಲು,

3) ಸರ್ಕಾರದಿಂದ ಅಂಗೀಕೃತವಾದ ಮತ್ತು ಸಹಕಾರ ಕ್ಷೇತ್ರದಲ್ಲಿರುವ ಅಧಿಕೃತವಾದ ಇತರ ಶಾಸನಬದ್ಧ ನಿಕಾಯ, ಏಜೆನ್ಸಿಗಳ ಅಥವಾ ರಾಜ್ಯ ಸರ್ಕಾರದಿಂದ ಆಗಿಂದಾಗ್ಗೆ ವಹಿಸಲಾಗುವ ಅಭಿವೃದ್ಧಿ ಸಂಬಂಧಿತ ಇತರ ನಿರ್ದೇಶಿತ ಕೆಲಸಗಳನ್ನು ನಿರ್ವಹಿಸಲು,

4) ನಿಬಂಧಕರು, ವಾರ್ಷಿಕ ಪ್ರಗತಿ ಮತ್ತು ಇಲಾಖೆಯಿಂದ ಮುಂದಿನ ಸಾಲಿನಲ್ಲಿ ಕೈಗೊಳ್ಳಬೇಕಾದ ಕಾರ್ಯ ಯೋಜನೆಗಳ ಬಗೆಗಿನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಯಾವುದೇ ಸಂದರ್ಭದಲ್ಲಿ ಕೊಡಬೇಕಾದ ಬಾಕಿಗಳನ್ನು ತೀರುವಳಿ ಮಾಡಲು ಸಾಧ್ಯವಾಗದೇ ಇದ್ದ ಪ್ರಸಂಗದಲ್ಲಿ, ಅಂದರೆ ಯಾರಿಗೆ

ಕೊಡಬೇಕಾಗಿದೆಯೋ ಅಂತಹ ವ್ಯಕ್ತಿಗಳ ವಿಳಾಸ ಮತ್ತು ಇರುವಿಕೆಯ ಬಗ್ಗೆ ಮಾಹಿತಿ ಲಭ್ಯವಾಗುವುದಿಲ್ಲವೋ, ಅಂತಹ ವ್ಯಕ್ತಿಗಳಿಗೆ ಸಲ್ಲಿಸಬೇಕಾದ ಹಣದ ಪ್ರಮಾಣವನ್ನು ಸಹಕಾರಿ ಬ್ಯಾಂಕಿನಲ್ಲಿ ಯಾವುದಾದರು ದಿನದಂದು ಪಾವತಿ ಮಾಡಬಹುದೆಂದು ಠೇವಣಿ ಇಡತಕ್ಕದ್ದು.

ಸಮಾಪನಾಧಿಕಾರಿಯನ್ನು ನೇಮಿಸುವ ಅಧಿಕಾರ ನಿಬಂಧಕರಿಗೆ ಇದ್ದಂತೆ, ಆ ಸಮಾಪನಾಧಿಕಾರಿಯನ್ನು ತೆಗೆದುಹಾಕುವ ಅಧಿಕಾರವೂ ನಿಬಂಧಕರಿಗೆ ಇರುತ್ತದೆ. ಸಮಾಪನಾಧಿಕಾರಿಯನ್ನು ಬದಲಾವಣೆ ಮಾಡಿದ ಸಂದರ್ಭದಲ್ಲಿ ಹೊಸ ಸಮಾಪನಾಧಿಕಾರಿಗೆ ಅಧಿಕಾರ ವಹಿಸಿಕೊಡತಕ್ಕದ್ದು. ಸಮಾಪನಾ ಕಾರ್ಯ ಮುಕ್ತಾಯ ಮಾಡಿ ಸಮಾಪನಾಧಿಕಾರಿಯು ಕೊಡಬೇಕಾದ ಬಾಕಿಗಳನ್ನು ಮತ್ತು ಬರಬೇಕಾದ ಬಾಕಿಗಳನ್ನು ಚುಕ್ತ ಮಾಡಿ ನೋಂದಣಿಯನ್ನು ರದ್ದುಪಡಿಸಿ, ಸಮಾಪನಾ ಕಾರ್ಯ ಮುಕ್ತಾಯ ಮಾಡಿದ ನಂತರ ನಿಬಂಧಕರಿಗೆ ಸಲ್ಲಿಸಬೇಕಾಗಿದ್ದು, ಆ ರೀತಿ ಸಲ್ಲಿಕೆಯಾದ ದಾಖಲೆಗಳು ಮತ್ತು ಪುಸ್ತಕಗಳನ್ನು ನೋಂದಣಿ ರದ್ದತಿಯಾದ 3 ವರ್ಷಗಳ ನಂತರ ದಾಖಲೆಗಳನ್ನು ನಾಶಗೊಳಿಸಬಹುದು. ಈ ಅಧಿಕಾರವು ನಿಬಂಧಕರಿಗೆ ಇರತಕ್ಕದ್ದು.

**ಸಮಾಪನೆ ಕಾರ್ಯ ಮತ್ತು ವಿಳಂಬ ವಿನಾಯಿತಿ:**

ಸಮಾಪನೆ ಕಾರ್ಯವನ್ನು ಮುಕ್ತಾಯಗೊಳಿಸಿ ನೋಂದಣಿಯನ್ನು ರದ್ದುಪಡಿಸಿದ ನಂತರ, ಸಮಾಪನಾಧಿಕಾರಿಯು ಪಡೆದ ವಸೂಲಾತಿ ಆದೇಶಗಳು ಮತ್ತು ಸದಸ್ಯರಿಂದ ಬರಬೇಕಾದ ಹಣಕ್ಕೆ ಹೊರಡಿಸಿದ ಆದೇಶಗಳು ವಿಳಂಬ ವಿನಾಯಿತಿ ಕಾಯಿದೆಗೆ ಒಳಪಟ್ಟಿರತಕ್ಕದ್ದು. ಸಮಾಪನಾಧಿಕಾರಿಯು ತಾನು ಪಡೆದ ಅಥವಾ ಹೊರಡಿಸಿದ ಆದೇಶಗಳಿಗೆ ತುರ್ತಾಗಿ ವಸೂಲಾತಿ ಕ್ರಮ ಜರುಗಿಸತಕ್ಕದ್ದು. ಸದಸ್ಯರಿಂದ ಭರಿಸಬೇಕಾದ ಹಣವನ್ನು ಆದೇಶಿಸಿ, ಆ ಆದೇಶವು ವಿಳಂಬ ವಿನಾಯಿತಿಯಿಂದ ರದ್ದುಗೊಂಡಾಗ, ಪುನಃ ಸಮಾಪನಾಧಿಕಾರಿಯು ಹೊಸದಾಗಿ ಸದಸ್ಯರಿಂದ, ಮಾಜಿ ಸದಸ್ಯರಿಂದ ಅಥವಾ ಕಾನೂನು ವಾರಸುದಾರರಿಂದ ಮತ್ತೊಮ್ಮೆ ಭರಿಸಬೇಕಾದ ಹಣಕ್ಕೆ ಆದೇಶ ಹೊರಡಿಸುವ ಅಧಿಕಾರ ಇರತಕ್ಕದ್ದು. ಆದರೆ ಸಹಕಾರಿ ಪರಭಾರೆ ಮಾಡಿದಂತ, ಆಸ್ತಿಯ ಮೇಲೆ ವಿಳಂಬ ಮಿತಿಯಿಂದ ಹೊರಗೆ ಮರು ವಸೂಲಾತಿ ಆದೇಶ ಹೊರಡಿಸುವ ಅಧಿಕಾರ ಸಮಾಪನಾಧಿಕಾರಿಗೆ ಇರತಕ್ಕದ್ದಲ್ಲ. ಈ ಮೇಲ್ಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಮಾಪನಾಧಿಕಾರಿಗಳು ವಸೂಲಾತಿ ಕ್ರಮಕ್ಕೆ ಸಂಬಂಧಪಟ್ಟಂತೆ ತುರ್ತಾಗಿ ವಸೂಲಾತಿ ಕ್ರಮ ಜರುಗಿಸುವುದರ ಜೊತೆ ವಿಳಂಬವಾಗದಂತೆ ನೋಡಿಕೊಳ್ಳುವುದು ಅವನ ಕರ್ತವ್ಯ. ಸಂಬಂಧಪಟ್ಟ ಸಹಾಯಕ ನಿಬಂಧಕರು ಸಮಾಪನಾಧಿಕಾರಿಯಿಂದ ಕನಿಷ್ಟ 3 ತಿಂಗಳಿಗೊಮ್ಮೆಯಾದರೂ ಬರಬೇಕಾದ ಯಾವುದೆ ಹಣ ವಿಳಂಬವಾಗಿಲ್ಲವೆಂದು ಪ್ರಮಾಣ ಪತ್ರ ಪಡೆಯತಕ್ಕದ್ದು.

**ಆಸ್ತಿ ವಸೂಲಾತಿ ಮತ್ತು ಸದಸ್ಯರು ಭರಿಸಬೇಕಾದ ಹಣಕ್ಕೆ ಸಂಬಂಧಪಟ್ಟ ಆದೇಶಗಳು:**

ಸಮಾಪನಾಧಿಕಾರಿಯು ಅಧಿಕಾರ ವಹಿಸಿಕೊಂಡ ನಂತರ ಸಹಕಾರಿಗೆ ಬರಬೇಕಾದ ಬಾಕಿಗಳ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗಳು 2 ತಿಂಗಳೊಳಗಾಗಿ ತಮ್ಮ ಬಾಕಿಗಳ ಬಗ್ಗೆ ಬೇಡಿಕೆಯನ್ನು ಸಲ್ಲಿಸಬೇಕೆಂದು ಪ್ರಕಟಣೆ ಮೂಲಕ ಅಥವಾ ಟಾಂಟಾಂ ಮೂಲಕ ಅಥವಾ ಗೆಜೆಟ್ ಮೂಲಕ ಪ್ರಕಟಣೆ ಹೊರಡಿಸಬೇಕು. ಮತ್ತು ಅದೇ ರೀತಿ ಬರಬೇಕಾದ ಆಸ್ತಿಗಳ ಬಗ್ಗೆಯೂ ವಸೂಲಾತಿ ಕ್ರಮ ಜರುಗಿಸಬೇಕು. ಸದಸ್ಯರಿಂದ ಬರಬೇಕಾದ ಬಾಕಿಗಳ ಬಗ್ಗೆ ಕ್ರಮ ಜರುಗಿಸುವುದರ ಜೊತೆಗೆ ಭರಿಸಬೇಕಾದ ತಮ್ಮ ಕಾಣಿಕೆಗಳ ಪ್ರಮಾಣವನ್ನು ನಿರ್ಧರಿಸತಕ್ಕದ್ದು. ಯಾವುದೆ ಪದಾಧಿಕಾರಿ ಅಥವಾ ಮಾಜಿ ಪದಾಧಿಕಾರಿ ಅಥವಾ ಅಧಿಕಾರಿ ಸಹಕಾರಿ ಆಸ್ತಿಯನ್ನು ಬೇರೆ ಉದ್ದೇಶಕ್ಕಾಗಿ ಬಳಸಿಕೊಂಡಿದ್ದರೆ ಅಥವಾ ಪಾವತಿ ಮಾಡಬೇಕಾಗಿದ್ದರೆ, ಅಂತಹ ಹಣವನ್ನು ಭರ್ತಿ ಮಾಡುವುದು ಅವರ ಕರ್ತವ್ಯ. ಆ ಹಣವನ್ನು ವಸೂಲಿ ಮಾಡಿಕೊಳ್ಳಲು ಸಮಾಪನಾಧಿಕಾರಿಗೆ ಅಧಿಕಾರ ಇರತಕ್ಕದ್ದು. ಈಗ ಪ್ರತಿಯೊಂದು ಸಹಕಾರಿ ನಿಯಮಿತ ಸಹಕಾರಿ ನೋಂದಣಿ ಆಗುವುದರಿಂದ ಭರಿಸಬೇಕಾದ ಹಣದ ಪ್ರಮಾಣವು, ಅವನು ಹೂಡಿದ ಪಾಲು ಬಂಡವಾಳಕ್ಕೆ ಸಮಾನವಾಗಿರತಕ್ಕದ್ದು.

**ಆಸ್ತಿಯನ್ನು ವಸೂಲಿ ಮಾಡುವ ಬಗ್ಗೆ ವಿಚಾರಣೆ**

ಸಮಾಪನಾಧಿಕಾರಿಯು ಅಧಿಕಾರ ವಹಿಸಿಕೊಂಡ ನಂತರ ಪ್ರತಿಯೊಬ್ಬ ಸದಸ್ಯನ ಬಾಕಿಗಳನ್ನು ವಿಚಾರಣೆ ಮಾಡಬೇಕು ಮತ್ತು ಅವುಗಳನ್ನು ಲೆಕ್ಕಪತ್ರಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಹೊಂದಾಣಿಕೆ ಮಾಡಿ ಬಾಕಿಗಳನ್ನು ನಿರ್ಧರಿಸಬೇಕು. ವಸೂಲಾತಿಗಾಗಿ ಸಂಬಂಧಪಟ್ಟ ಸದಸ್ಯರನ್ನು ವೈಯಕ್ತಿಕವಾಗಿ ಸಂಪರ್ಕಿಸಿ ವಸೂಲಿ ಮಾಡತಕ್ಕದ್ದು. ಅಥವಾ ಈ ಉದ್ದೇಶಕ್ಕಾಗಿ ಯಾವುದಾದರೂ ಒಬ್ಬ ವ್ಯಕ್ತಿಯನ್ನು ನೇಮಿಸಿ ವಸೂಲಾತಿ ಕ್ರಮ ಜರುಗಿಸಬಹುದು. ಯಾವುದೇ ಸಂದರ್ಭದಲ್ಲಿ ಸಹಕಾರಿ ಕೊಟ್ಟ ಸಾಲಗಳು ವಸೂಲಾಗುವುದಿಲ್ಲವೆಂದು ಮನಗಂಡಾಗ, ಸದಸ್ಯರಿಂದ ವಸೂಲಿ ಮಾಡಬೇಕೆಂಬ ಆದೇಶದ ಪ್ರಮಾಣವನ್ನು ನಿರ್ಧರಿಸಿ ಆದೇಶಿಸಬಹುದು. ಮತ್ತು ಇದಕ್ಕೆ ಸಂಬಂಧಪಟ್ಟಂತೆ ಅಂತಹ ವ್ಯಕ್ತಿಗಳಿಗೆ ನೋಟೀಸ್ ಜಾರಿ ಮಾಡಿ ಭರಿಸಬೇಕಾದ ಭಾಗದ ಆದೇಶ ಹೊರಡಿಸತಕ್ಕದ್ದು. ಆ ರೀತಿ ಹೊರಡಿಸಿದ ಆದೇಶಗಳಿಗೆ ಸಮರ್ಪಕ ಕಾರಣಗಳನ್ನು ಕೊಟ್ಟು ಆದೇಶದ ದಿನಾಂಕ, ವೇಳೆ ಮತ್ತು ಸ್ಥಳವನ್ನು ನಮೂದಿಸತಕ್ಕದ್ದು. ಮತ್ತು ಅಂತಹ ಸಮಯದಲ್ಲಿ ಸದಸ್ಯರು ಹಾಜರಾಗಿ

ತಮ್ಮ ಹೇಳಿಕೆಗಳನ್ನು ಕೊಡಲು ಅವಕಾಶವನ್ನು ಕಲ್ಪಿಸಬಹುದು. ಸಂಬಂಧಪಟ್ಟ ವ್ಯಕ್ತಿಗಳಿಗೆ ನೋಟೀಸ್ ಕೊಡುವ ಸಂದರ್ಭದಲ್ಲಿ ವೈಯಕ್ತಿಕವಾಗಿ ನೋಟೀಸ್ ತಲುಪಿಸಬಹುದು. ನೋಟೀಸ್ ತಲುಪಿಸಲಾಗದಿದ್ದ ಸಂದರ್ಭದಲ್ಲಿ ರಿಜಿಸ್ಟರ್ಡ್ ಅಂಚೆ ಮೂಲಕ ರವಾನಿಸತಕ್ಕದ್ದು. ಯಾವ ಸಂದರ್ಭದಲ್ಲಿ ಸದಸ್ಯರು ಅಥವಾ ಮಾಜಿ ಸದಸ್ಯನು ಜೀವಂತವಿಲ್ಲವೋ, ಅಂತಹ ಸಂದರ್ಭದಲ್ಲಿ ಕಾನೂನು ವಾರಸುದಾರರಿಗೆ ನೋಟೀಸ್ ಜಾರಿ ಮಾಡಿ ವಸೂಲಾತಿ ಕ್ರಮ ಜರುಗಿಸಬಹುದು. ಆದರೆ ಅಂತಹ ವ್ಯಕ್ತಿಗಳಿಂದ, ಮೃತ ಸದಸ್ಯನ ಆಸ್ತಿಯಿಂದ ಮಾತ್ರ ವಸೂಲಿ ಮಾಡಿಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು.

ವಿಚಾರಣೆಗೆ ನಿಗಧಿಪಡಿಸಿದ ದಿನಾಂಕದಂದು ಹಾಜರಿದ್ದ ವ್ಯಕ್ತಿಗಳ ಹೇಳಿಕೆಗಳನ್ನು ಪಡೆದು ವಸೂಲಾತಿ ಆದೇಶ ಮಾಡಲು ಸಮಾಪನಾಧಿಕಾರಿಗೆ ಅಧಿಕಾರ ಇರತಕ್ಕದ್ದು. ಪ್ರತಿಯೊಂದು ಪ್ರಕರಣದಲ್ಲಿಯೂ ಪ್ರತ್ಯೇಕ ವಿಚಾರಣೆ ಮಾಡಿ ಭರಿಸಬೇಕಾದ ಭಾಗವನ್ನು ನಿರ್ಧರಿಸುವುದು ಸಮಾಪನಾಧಿಕಾರಿಯ ಕರ್ತವ್ಯ. ಈ ರೀತಿ ಹೊರಡಿಸುವ ಆದೇಶಗಳಿಗೆ ಬಡ್ಡಿ ದರವನ್ನೂ ಸಹ ನಿಗಧಿಪಡಿಸಬಹುದು ಮತ್ತು ಮುಂದಿನ ಬಡ್ಡಿಯನ್ನೂ ಸಹ ಆಕರಣೆ ಮಾಡಿ ಅದೇಶಿಸುವ ಅಧಿಕಾರ ಇರತಕ್ಕದ್ದು. ಈ ವಸೂಲಾತಿ ಆದೇಶಗಳನ್ನು ಹೊರಡಿಸಿದ ನಂತರ ಆದೇಶ ಆಗಿರುವುದರ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗಳಿಗೆ ಲಿಖಿತವಾಗಿ ಸೂಚಿಸತಕ್ಕದ್ದು. ಏಕೆಂದರೆ ಅಂತಹ ವ್ಯಕ್ತಿ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಸಬಹುದಾಗಿದ್ದು, ಈ ತೀರ್ಪನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಮುಟ್ಟಿಸುವುದು ಸಮಾಪನಾಧಿಕಾರಿಯ ಕೆಲಸ.

ಸಮಾಪನಾಧಿಕಾರಿಯು ಪ್ರತಿಯೊಬ್ಬ ಸದಸ್ಯನು ಕೊಡಬೇಕಾದ ಬಾಕಿ ಹಣದ ಬಗ್ಗೆ ಲಿಖಿತವಾಗಿ ಇಂತಿಷ್ಟು ಅವಧಿಯೊಳಗೆ ಪಾವತಿ ಮಾಡಬೇಕೆಂದು ಸೂಚಿಸತಕ್ಕದ್ದು. ಅಂತಹ ಅವಧಿಯೊಳಗೆ ಪಾವತಿ ಮಾಡದೇ ಇದ್ದ ಸಂದರ್ಭದಲ್ಲಿ ಸದಸ್ಯನು ಭರಿಸಬೇಕಾದ ಹಣದ ಪ್ರಮಾಣವನ್ನು ಸಹಕಾರಿ ನ್ಯಾಯಾಲಯದ ಮುಖಾಂತರ ವಸೂಲಾತಿ ಆದೇಶ ಪಡೆದು ಜಾರಿಮಾಡತಕ್ಕದ್ದು. ಯಾವ ಸದಸ್ಯ ಮೃತ ಹೊಂದಿದ್ದಾನೋ, ಅಂತಹ ಸಂದರ್ಭದಲ್ಲಿ ಭರಿಸಬೇಕಾದ ಹಣದ ಪ್ರಮಾಣದ ಆದೇಶವನ್ನು ಕಾನೂನು ವಾರಸುದಾರರಿಗೆ ಲಿಖಿತವಾಗಿ ಮುಟ್ಟಿಸತಕ್ಕದ್ದು. ಆದರೆ ವಸೂಲಾತಿ ಕ್ರಮ ಜರುಗಿಸುವ ಸಂದರ್ಭದಲ್ಲಿ ಸದಸ್ಯರು ಬಿಟ್ಟುಹೋದ ಆಸ್ತಿಯಿಂದ ಮಾತ್ರ ವಸೂಲಿ ಮಾಡತಕ್ಕದ್ದು. ಪ್ರತಿ ಸದಸ್ಯನೂ ಭರಿಸಬೇಕಾದ ಹಣದ ಪ್ರಮಾಣವನ್ನು ನಿಗಧಿಪಡಿಸಿದ ನಂತರ, ಸಾಲ ಬಾಕಿಯೆಂದು ಪ್ರತ್ಯೇಕವಾಗಿ ಕ್ರಮ ಜರುಗಿಸತಕ್ಕದ್ದಲ್ಲ. ಆದರೆ ಆಸ್ತಿ ಪರಭಾರೆ ಮಾಡಿ ಸಾಲ ಪಡೆದಿದ್ದರೆ, ಅಂತಹ ವಸೂಲಾತಿಗೆ ಪ್ರತ್ಯೇಕ ಆದೇಶ ಹೊರಡಿಸತಕ್ಕದ್ದು. ಯಾವ ಸಂದರ್ಭದಲ್ಲಿ ಜಪ್ತಿಗೆ ಆದೇಶಿಸಲಾಗಿದೆಯೋ ಅಂತಹ ಸಂದರ್ಭದಲ್ಲಿಯೂ ಭರಿಸಬೇಕಾದ ಹಣದ ಪ್ರಮಾಣದ ಆದೇಶ ಹೊರಡಿಸಿದಾಗ ಅಂತಹ ಆದೇಶವನ್ನೇ ಜಾರಿ ಮಾಡತಕ್ಕದ್ದು. ಆದರೆ ವಸೂಲಾತಿ ಕ್ರಮ ಜಾರಿಯಲ್ಲಿದ್ದ ಪ್ರಸಂಗದಲ್ಲಿ ವಸೂಲಾತಿ ನೀತಿನಿಯಮಗಳನ್ನೇ ಅನುಸರಿಸಿ ವಸೂಲಾತಿ ಕ್ರಮ ಜರುಗಿಸತಕ್ಕದ್ದು.

ಸಮಾಪನೆಗೊಂಡ ಸಹಕಾರಿ ಕಾರ್ಯನಿರ್ವಹಿಸುತ್ತಿದ್ದಾಗ ಅಧಿಕಾರದಲ್ಲಿದ್ದ ಪದಾಧಿಕಾರಿಗಳು ಮತ್ತು ಅಧಿಕಾರಿಗಳು ಹಣದುರುಪಯೋಗ ಮಾಡಿಕೊಂಡಿದ್ದರೆ ಅಥವಾ ಆಸ್ತಿಯನ್ನು ದುರುದ್ದೇಶದಿಂದ ಉಪಯೋಗಿಸಿಕೊಂಡಿದ್ದರೆ ಅಥವಾ ನಂಬಿಕೆದ್ರೋಹದಿಂದ ಆಸ್ತಿಯನ್ನು ಲಪಟಾಯಿಸಿದ್ದರೆ, ಅಂತಹ ವ್ಯಕ್ತಿಗಳ ಮೇಲೆ ವಿಚಾರಣೆ ಮಾಡಲು ನಿಬಂಧಕರನ್ನು ವಿನಂತಿಸಬಹುದು. ಆದರೆ ಹಣ ವಸೂಲಾತಿ ಬಗ್ಗೆ ಆ ವ್ಯಕ್ತಿಗಳು ಭರಿಸಬೇಕಾದ ಹಣದ ಪ್ರಮಾಣವನ್ನು ಪರಿಹಾರ ರೂಪದಲ್ಲಿ ನಿಬಂಧಕರು ಹೊರಡಿಸಿದ ಆದೇಶದನ್ವಯ ವಸೂಲಿ ಮಾಡಿಕೊಳ್ಳತಕ್ಕದ್ದು. ಅಂದರೆ ದುರುಪಯೋಗವಾದ ಹಣವನ್ನು ವಸೂಲಾತಿ ಮಾಡಿಕೊಳ್ಳಲು ಆದೇಶವನ್ನು ಪಡೆದು ವಸೂಲಾತಿ ಕ್ರಮ ಜರುಗಿಸತಕ್ಕದ್ದು.

ವಸೂಲಾತಿ ಕ್ರಮ ಜರುಗಿಸಿದ ನಂತರ ವಸೂಲಾತಿ ಆಗಬೇಕಾದ ಹಣ ಪೂರ್ಣ ವಸೂಲಾಗದಿದ್ದರೆ, ಕಡಿಮೆ ಬಿದ್ದ ಹಣಕ್ಕೆ ಸಂಬಂಧಪಟ್ಟಂತೆ ಭರಿಸಬೇಕಾದ ಹಣದ ಪ್ರಮಾಣವನ್ನು ಈ ಕೆಳಕಂಡಂತೆ ನಿರ್ಧರಿಸತಕ್ಕದ್ದು.

ಎ) ಸಮಾಪನೆ ರದ್ದುಗೊಂಡ ದಿನಾಂಕದಂದು ಸದಸ್ಯರಾಗಿ ಮುಂದುವರಿದಿದ್ದ ವ್ಯಕ್ತಿಗಳಿಂದ

ಬಿ) ನೋಂದಣಿ ರದ್ದಾದ ದಿನಾಂಕಕ್ಕೆ 2 ವರ್ಷ ಪೂರ್ವದಲ್ಲಿ ಸದಸ್ಯತನ ಕಳೆದುಕೊಂಡ ವ್ಯಕ್ತಿಗಳಿಂದ

ಸಿ) ನೋಂದಣಿ ರದ್ದತಿ ಆದ 2 ವರ್ಷದೊಳಗಾಗಿ ಮೃತ ಸದಸ್ಯನು ಬಿಟ್ಟು ಹೋದ ಆಸ್ತಿಯಿಂದ

ಯಾವುದೇ ಮೃತಪಟ್ಟ ವ್ಯಕ್ತಿ ಸತ್ತ ದಿನಾಂಕದ ನಂತರ, ಯಾವುದೇ ಬಾಕಿ ವಸೂಲಾತಿಗೆ ಭರಿಸುವ ಪ್ರಮಾಣವನ್ನು ನಿಗಧಿಪಡಿಸತಕ್ಕದ್ದಲ್ಲ.

ಯಾವುದೇ ಸಂದರ್ಭದಲ್ಲಿ ನಿಯಮಿತವೆಂದು ನೋಂದಾವಣೆಯಾಗಿದ್ದಾಗ, ಆ ಸದಸ್ಯನು ಹೊಂದಿದ ಪಾಲುಬಂಡವಾಳಕ್ಕೆ ಮಾತ್ರ ಅವನು ಭರಿಸಬೇಕಾದ ಪ್ರಮಾಣವನ್ನು ಮಿತಿಗೊಳಿಸತಕ್ಕದ್ದು. ಯಾವುದೇ ಕಾರಣಕ್ಕೂ ಅವನು ಹೂಡಿದ ಪಾಲುಬಂಡವಾಳದ ಮಿತಿಯೊಳಗೆ ಮಾತ್ರ ವಸೂಲಾತಿ ಕ್ರಮ ಜರುಗಿಸಬೇಕೇ ಹೊರತು ಪಾವತಿ ಮಾಡಬೇಕಾಗಿದ್ದ ಪಾಲುಬಂಡವಾಳಕ್ಕಲ್ಲ.

ಸಮಾಪನಾಧಿಕಾರಿಯು ಪ್ರತಿಯೊಬ್ಬ ಸದಸ್ಯನಿಗೂ ಭರಿಸಬೇಕಾದ ಹಣ ಎಷ್ಟೆಂಬುದನ್ನು ನಿರ್ಧರಿಸುವಾಗ ಬರಬೇಕಾದ ಎಲ್ಲ ಹಣಗಳ ಪಟ್ಟಿಯನ್ನು ತಯಾರಿಸಬೇಕು. ಮತ್ತು ಎಷ್ಟು ಪ್ರಮಾಣದ ಹಣ ವಸೂಲಾತಿ ಆಗುವುದಿಲ್ಲವೆಂಬ ಪ್ರಮಾಣವನ್ನೂ ನಿರ್ಧರಿಸಬೇಕು. ಆ ರೀತಿ ನಿಗಧಿಪಡಿಸಿದ ನಂತರ ವ್ಯತ್ಯಾಸವನ್ನು ಗುರುತಿಸಿ  ಅಂದರೆ ಬರಬೇಕಾದ, ಕೊಡಬೇಕಾದ ಹಣದಲ್ಲಿ ವ್ಯತ್ಯಾಸ, ಪ್ರತಿಯೊಬ್ಬ ಸದಸ್ಯನು, ಮಾಜಿ ಸದಸ್ಯನು ಭರಿಸಬೇಕಾದ ಭಾಗವನ್ನು ನಿರ್ಧರಿಸತಕ್ಕದ್ದು. ಆಸ್ತಿ ಮತ್ತು ಜವಾಬ್ದಾರಿಯನ್ನು ನಿರ್ಧರಿಸಿದ ನಂತರ, ಕೊಡಬೇಕಾದ ಬಾಕಿಗಳನ್ನು ಚುಕ್ತ ಮಾಡಿ ಇನ್ನೂ ಬಾಕಿ ಉಳಿದರೆ, ಬ್ಯಾಂಕಿನಲ್ಲಿರುವ ಕಾಯ್ದಿಟ್ಟ ನಿಧಿಯಿಂದ ತೀರುವಳಿಗೆ ಉಪಯೋಗಿಸಬೇಕು. ಆ ನಂತರವೂ ಬರಬೇಕಾದ ಬಾಕಿ ಇದೆಯೆಂದು ಕಂಡುಬಂದರೆ ಪ್ರತಿಯೊಬ್ಬ ಸದಸ್ಯನು ಅಥವಾ ಮಾಜಿ ಸದಸ್ಯನು ಭರಿಸಬೇಕಾದ ಪ್ರಮಾಣವನ್ನು ನಿರ್ಧರಿಸಬೇಕು.

ಸದಸ್ಯರಿಂದ ಅಥವಾ ಮಾಜಿ ಸದಸ್ಯರಿಂದ ಭರಿಸಬೇಕಾದ ಹಣದ ಪ್ರಮಾಣವನ್ನು ನಿರ್ಧರಿಸುವಾಗ ಸ್ವಾಭಾವಿಕ ನ್ಯಾಯದನ್ವಯ ಪ್ರತಿಯೊಬ್ಬ ಸದಸ್ಯನಿಗೂ ಅವಕಾಶವನ್ನು ಕಲ್ಪಿಸಿ ಹೇಳಿಕೆಯನ್ನು ಪಡೆದು ಆನಂತರ ಭರಿಸಬೇಕಾದ ಪ್ರಮಾಣವನ್ನು ನಿಗಧಿಪಡಿಸತಕ್ಕದ್ದು. ಅಂದರೆ ಭರಿಸಬೇಕಾದ ಹಣವನ್ನು ನಿರ್ಧರಿಸುವಾಗ ಅದು ದೊಡ್ಡ ಪ್ರಮಾಣದ ಹೊರೆಯಾಗುತ್ತದೆಯೆಂದು ಕಂಡುಬಂದರೆ ಭರಿಸಬೇಕಾದ ಹಣವನ್ನು ನಿಗಧಿಪಡಿಸುವ ಮುಂದೆ ವಿಚಾರಣೆಯನ್ನು ಸಮರ್ಪಕವಾಗಿ ನಡೆಸಬೇಕು. ಆದರೆ ಸಹಕಾರಿ ಆಸ್ತಿಯನ್ನು ಅಧಿಕಾರಿಗಳು ಮತ್ತು ಪದಾಧಿಕಾರಿಗಳು ಹಣದುರುಪಯೋಗ ಪ್ರಕರಣಗಳಲ್ಲಿ, ಮೋಸದ ಪ್ರಕರಣಗಳಲ್ಲಿ, ಬೇನಾಮಿ ಸಾಲದ ಪ್ರಕರಣಗಳಲ್ಲಿ ಅಥವಾ ಸಂಬಂಧಿಕರಿಗೆ ಸಾಲ ಕೊಟ್ಟು ಅವರ ಅಧಿಕಾರ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ, ಅಂತಹ ವ್ಯಕ್ತಿಗಳು ಮಾಡಿದ ನಷ್ಟದ ಪೂರಾ ಹಣದ ವಸೂಲಾತಿಗೆ ಕ್ರಮ ಜರುಗಿಸಬೇಕು.

ಸಮಾಪನಾಧಿಕಾರಿಯು ಯಾವುದೇ ಪ್ರಸಂಗದಲ್ಲಿ ಸದಸ್ಯರು ಕೊಡಬೇಕಾದ ಅಥವಾ ಭರಿಸಬೇಕಾದ ಹಣದ ಪ್ರಮಾಣವನ್ನು ನಿಗಧಿಪಡಿಸಲು ವಿಚಾರಣೆಯಲ್ಲಿ ವಿಳಂಬವಾಗುತ್ತಿದೆ ಎಂದು ಮನಗಂಡರೆ, ಅಂತಹ ಪ್ರಸಂಗದಲ್ಲಿ ಸಂಬಂಧಪಟ್ಟ ಸಹಾಯಕ ನಿಬಂಧಕನಿಗೆ (ಕಾರ್ಯವ್ಯಾಪ್ತಿಗನುಗುಣವಾಗಿ) ಕಲಂ.44 ರನ್ವಯ ಆದೇಶಕ್ಕೆ ಪೂರ್ವದ ಜಪ್ತಿ ಆದೇಶವನ್ನು ಪಡೆಯಬಹುದಾಗಿದೆ. ಅಂದರೆ ಯಾವನೇ ಸದಸ್ಯ ಭರಿಸಬೇಕಾದ ಹಣದ ಪ್ರಮಾಣವನ್ನು ನಿಗಧಿಪಡಿಸಲು ತೊಡಕುಂಟು ಮಾಡುತ್ತಾನೆಂದು ತಿಳಿದುಬಂದರೆ, ಅಂತಹ ಪ್ರಸಂಗದಲ್ಲಿ ಆದೇಶಕ್ಕೆ ಪೂರ್ವದ ಜಪ್ತಿ ಆದೇಶ ಪಡೆಯಬಹುದಾಗಿದೆ. ಇದರಿಂದ ವಸೂಲಾತಿ ವಿಳಂಬವಾಗುವುದನ್ನು ತಪ್ಪಿಸಬಹುದಾಗಿದೆ. ಆದೇಶದ ಪೂರ್ವದ ಜಪ್ತಿ ಕ್ರಮಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ವ್ಯಕ್ತಿ, ಭದ್ರತೆಯನ್ನು ಕೊಟ್ಟಾಗ ಅಂತಹ ಆಸ್ತಿ ವಿಲೇವಾರಿ ಮಾಡುವುದನ್ನು ಮುಂದೂಡಬಹುದು. ಆದರೆ ಯಾವುದೇ ಕಾರಣಕ್ಕೂ ಆಸ್ತಿ ಜಪ್ತಿ ಆದೇಶವನ್ನು ವಿಳಂಬ ಮಾಡದಂತೆ ಕ್ರಮ ಜರುಗಿಸಿ ವಸೂಲಾತಿ ಆದೇಶ ಹೊರಡಿಸಿ ಹಣ ಪಾವತಿಸುವಂತೆ ಮಾಡಬೇಕು.

ಒಂದು ಸಹಕಾರಿ ಸಮಾಪನೆಗೊಂಡು ಆಸ್ತಿ ಜವಾಬ್ದಾರಿ ತೀರುವಳಿ ಆದ ನಂತರ, ಹೆಚ್ಚುವರಿ ಆಸ್ತಿ ಉಳಿದಾಗ ಅಂತಹ ಸಂಧರ್ಭದಲ್ಲಿ ಸದಸ್ಯರಿಗೆ ಅವರು ಹೂಡಿದ ಪಾಲು ಬಂಡವಾಳದಷ್ಟು ತೀರುವಳಿ ಮಾಡಬಹುದಾಗಿದೆ. ಆದರೆ ಇಂತಹ ತೀರುವಳಿ ಮಾಡಬೇಕಾದ ಸಂದರ್ಭದಲ್ಲಿ ಕೊಡಬೇಕಾದ ಯಾವುದಾದರೂ ಸಾಲ ಬಾಕಿಗೆ ಸಂಬಂಧಪಟ್ಟಂತೆ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಹೂಡಿ, ಅನಂತರವೂ ಉಳಿದ ಹಣ ಇದ್ದರೆ, ಸದಸ್ಯರ ಪಾಲುಬಂಡವಾಳಕ್ಕೆ ಸೀಮಿತವಾಗಿ ಪಾವತಿಸಬಹುದಾಗಿದೆ.

**ಸಮಾಪನಾ ವೆಚ್ಚ ಮತ್ತು ಹಿತಾಸಕ್ತಿಯನ್ನು ವರ್ಗಾಯಿಸುವ ಬಗ್ಗೆ:**

ಸಮಾಪನೆಗೊಂಡ ಸಹಕಾರಿ ಹಣಕಾಸು ಪೂರೈಸುವ ಸಂಸ್ಥೆಯಲ್ಲಿ ಹೂಡಿದ ಹಣಕ್ಕೆ ಸಮಾನವಾಗಿ ಸಾಲ ಬಾಕಿ ಇದ್ದರೆ, ಅಂತಹ ಸಂದರ್ಭದಲ್ಲಿ ಸಮಾಪನಾ ವೆಚ್ಚವನ್ನು ತೆಗೆದುಕೊಳ್ಳತಕ್ಕದ್ದಲ್ಲ. ಬಾಕಿ ಇರುವ ಹಣ ಹೂಡಿದ ಹಣಕ್ಕಿಂತ ಹೆಚ್ಚಿದ್ದರೆ ಸಮಾಪನೆ ವೆಚ್ಚವನ್ನು ಸೇರಿಸಬಹುದು.

1. ಕಾಯ್ದಿಟ್ಟ ನಿಧಿಯಿಂದ ಬಂದ ಬಡ್ಡಿ.
2. ಅಮಾನತ್ತು ಖಾತೆಯಲ್ಲಿರುವ ಹಣ ಮತ್ತು ಆಸ್ತಿ.
3. ನ್ಯಾಯಾಲಯದ ವೆಚ್ಚ ಮತ್ತು ಸಮಾಪನಾಧಿಕಾರಿಯು ವಸೂಲು ಮಾಡಿಕೊಂಡ ವೆಚ್ಚ.
4. ಸಮಾಪನಾಧಿಕಾರಿಯು ಆಸ್ತಿ ಖರೀದಿ ಮಾಡಿದ್ದರೆ ಅಂತಹ ಸಂಧರ್ಭದಲ್ಲಿ ಸಮಾಪನಾ ವೆಚ್ಚವೆಂದು ಖರ್ಚು ಹಾಕಬಹುದು. ಆದರೆ ಅಂತಹ ಸಂದರ್ಭದಲ್ಲಿ ಮಾರಾಟ ದರವು ಖರೀದಿ ದರಕ್ಕಿಂತ ಹೆಚ್ಚಿದ್ದರೆ ಮಾತ್ರ.
5. ಆಸ್ತಿ ಮನ್ನಾ ಮಾಡಿದ ಸಂದರ್ಭದಲ್ಲಿ ಸಮಾಪನಾ ವೆಚ್ಚವನ್ನು ಸೇರಿಸತಕ್ಕದ್ದಲ್ಲ.

ಸಮಾಪನೆಗೊಂಡ ಸಹಕಾರಿ ಕೊಡಬೇಕಾದ ಬಾಕಿ ಸರ್ಕಾರಕ್ಕೆ ಮಾತ್ರ ಇದ್ದರೆ ಅಂತಹ ಪ್ರಕರಣಗಳಲ್ಲಿ ವಸೂಲಾದ ಎಲ್ಲ ಹಣವನ್ನು ಯಾವುದೇ ಹೊಂದಾಣಿಕೆ ಮಾಡಿಕೊಳ್ಳಲಾರದೇ ಸರ್ಕಾರಕ್ಕೆ ಜಮಾ ಮಾಡತಕ್ಕದ್ದು.

ಸಮಾಪನೆ ವೆಚ್ಚಗಳನ್ನು ಈ ಕೆಳಕಂಡಂತೆ ಆಕರಣೆ ಮಾಡಬಹುದು.

ಎ) ಹಿಂದಿನ ಪದಾಧಿಕಾರಿಗಳಿಂದ ವಸೂಲಾದ ಮತ್ತು ಸಮಾಪನಾಧಿಕಾರಿ ವಹಿಸಿಕೊಂಡ ನಗದು ಶಿಲ್ಕು.

ಬಿ) ಸಮಾಪನೆಗೊಂಡ ಸಹಕಾರಿ ಬೇರೆ ಸಂಸ್ಥೆಗಳಲ್ಲಿ ಹೂಡಿದ್ದ ಪಾಲುಬಂಡವಾಳದ ಮೇಲೆ ಬಂದ ಡಿವಿಡೆಂಡ್ ಹಣ.

ಸಿ) ಸುಸ್ತಿದಾರರ ಸಾಲಕ್ಕೆ ಪೂರಕವಾಗಿ ಸಮಾಪನಾಧಿಕಾರಿ ಖರೀದಿ ಮಾಡಿದ ಆಸ್ತಿಗಳ ಮೇಲೆ.

ಡಿ) ಸಮಾಪನಾಧಿಕಾರಿಯು ಸ್ವಯಂಪ್ರೇರಣೆಯಿಂದ ಸ್ವೀಕರಿಸಿದ ಹಣ.

ಸಮಾಪನಾ ವೆಚ್ಚವನ್ನು ಪ್ರತಿ ತಿಂಗಳು ವಸೂಲಿ ಮಾಡತಕ್ಕದ್ದು. ಹಾಗೂ ಯಾವುದೇ ಕಾರಣಕ್ಕೂ ಬಾಕಿ ಉಳಿಸತಕ್ಕದ್ದಲ್ಲ. ಸಮಾಪನಾ ವೆಚ್ಚವನ್ನು ಯಾವುದೇ ಕಾರಣಕ್ಕೂ ವಜಾ ಮಾಡತಕ್ಕದ್ದಲ್ಲ. ಕಾರಣಾಂತರಗಳಿಂದ ಸಮಾಪನಾ ವೆಚ್ಚ ಬಾಕಿ ಉಳಿದಿದ್ದರೆ, ಅಂತಹ ಹಣವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಿಕೊಳ್ಳತಕ್ಕದ್ದು.

**ಜವಾಬ್ದಾರಿಯ ತೀರುವಳಿ:**

ಸಹಕಾರಿ ಕೊಡಬೇಕಾದ ಬಾಕಿಗಳ ತೀರುವಳಿ ಬಗ್ಗೆ ಸಮಾಪನಾಧಿಕಾರಿ ನಿರ್ಧರಿಸತಕ್ಕದ್ದು. ಆಸ್ತಿ ವಸೂಲಿ ಮಾಡಿಕೊಂಡ ನಂತರ ಜವಾಬ್ದಾರಿಯನ್ನು ವಿಲೇವಾರಿ ಮಾಡುವುದು ಸಮಾಪನಾಧಿಕಾರಿಯ ಜವಾಬ್ದಾರಿ. ಆಸ್ತಿಯನ್ನು ವಿಲೇವಾರಿ ಮಾಡುವಾಗ ಸಂಬಂಧಪಟ್ಟ ಎಲ್ಲರಿಗೂ ಅವರ ಹಕ್ಕಿನ ಪ್ರಮಾಣದನ್ವಯ ಹಂಚಿಕೆ ಮಾಡತಕ್ಕದ್ದು. ಬಡ್ಡಿ ದರವನ್ನು ಆಕರಣೆ ಮಾಡುವಾಗ ನೋಂದಣಿಯನ್ನು ರದ್ದುಪಡಿಸಿದ ದಿನಾಂಕದವರೆವಿಗೆ ಮಾತ್ರ ಆಕರಣೆ ಮಾಡತಕ್ಕದ್ದು. ಸಾಮಾನ್ಯವಾಗಿ ಸಹಕಾರಿ ಸದಸ್ಯರೇ ದಂಡಬಡ್ಡಿ ವಸೂಲು ಮಾಡುವ ಬಗ್ಗೆ ವ್ಯವಹರಿಸಿ ತೀರ್ಮಾನಿಸತಕ್ಕದ್ದು. ಬಾಕಿ ಇರುವ ಬಡ್ಡಿಗೆ ಸಮಾನಾಂತರವಾಗಿ ಸಾಲ ಮರುಪಾವತಿ ಮಾಡುವಾಗ ಪೂರ್ಣ ಹಣವನ್ನು ಬಡ್ಡಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದಲ್ಲ. ಏಕೆಂದರೆ ಬಾಕಿ ಬರುವ ಎಲ್ಲ ಹಣವೂ ವಸೂಲಾಗುತ್ತದೆಂಬ ಯಾವುದೇ ಗ್ಯಾರಂಟಿ ಇರುವುದಿಲ್ಲ. ಆದ್ದರಿಂದ ಬಡ್ಡಿ ಮತ್ತು ಅಸಲನ್ನು ಸಾಮಾನ್ಯವಾಗಿ ಅಸಲಿಗೆ ಜಮಾ ಮಾಡಿಕೊಳ್ಳತಕ್ಕದ್ದು. ಸರ್ಕಾರಕ್ಕೆ ಕೊಡಬೇಕಾದ ಸಾಲ ಬಾಕಿ ಒಂದೇ ಇದ್ದಲ್ಲಿ ಲಾಭಾಂಶವನ್ನು ಹಂಚುವ ಪ್ರಸಂಗ ಬರುವುದಿಲ್ಲ. ಆದರೆ ಬ್ಯಾಂಕಿಗೆ ಪಾವತಿ ಮಾಡುವ ಸಂದರ್ಭದಲ್ಲಿ ಜಮಾ ಮಾಡಿದ ಹಣವನ್ನು ಬಡ್ಡಿ ಮತ್ತು ಅಸಲಿಗೆ ಜಮಾ ಮಾಡತಕ್ಕದ್ದು. ಮೇಲೆ ಹೇಳಿದಂತೆ ಪೂರ್ಣ ಹಣವನ್ನು ಬಡ್ಡಿಗೆ ಜಮಾ ಮಾಡಿಕೊಳ್ಳತಕ್ಕದ್ದಲ್ಲ.

**ಸಮಾಪನಾ ಆದೇಶದ ಮೇಲೆ ಮೇಲ್ಮನವಿ**

ಸಮಾಪನಾ ಆದೇಶದ ಮೇಲೆ ತೊಂದರೆ ಉಂಟಾದ ವ್ಯಕ್ತಿ ಮೇಲ್ಮನವಿ ಸಲ್ಲಿಸಲು ಅಧಿಕಾರ ಹೊಂದಿದ್ದಾನೆ. ಈ ಮೇಲ್ಮನವಿಯು ಸಮಾಪನಾ ಆದೇಶವಾದ 60 ದಿನದೊಳಗಾಗಿ ಸಲ್ಲಿಸತಕ್ಕದ್ದು. ಮೇಲ್ಮನವಿ ಸಲ್ಲಿಸಲು ಸಮಾಪನಾ ಆದೇಶವನ್ನು ಹೊರಡಿಸಿದ ಅಧಿಕಾರಿಯ ಮೇಲ್ಪಟ್ಟದ ಅಧಿಕಾರಿ, ಮೇಲ್ಮನವಿ ಸ್ವೀಕರಿಸುವ ಅಧಿಕಾರ ಹೊಂದಿದ್ದಾನೆ. ಯಾವುದೇ ಸಿವಿಲ್ ನ್ಯಾಯಾಲಯ ಅಥವಾ ಕಂದಾಯ ನ್ಯಾಯಾಲಯ ಮೇಲ್ಮನವಿ ಸ್ವೀಕರಿಸಲು ಅಧಿಕಾರ ಹೊಂದಿರುವುದಿಲ್ಲ.

ಸಮಾಪನಾಧಿಕಾರಿಯು ಸಮಾಪನೆ ಆದೇಶ ಪಡೆದ ನಂತರ ಸದಸ್ಯರು, ಮಾಜಿ ಸದಸ್ಯರು, ಕಾನೂನು ವಾರಸುದಾರರು ಮತ್ತು ಅವರು ಬಿಟ್ಟು ಹೋದ ಆಸ್ತಿಯ ಆಧಾರದ ಮೇಲೆ ಬರಬೇಕಾದ ಆಸ್ತಿಯನ್ನು ವಸೂಲು ಮಾಡಿಕೊಳ್ಳುವ ಅಧಿಕಾರ ಹೊಂದಿರುತ್ತಾರೆ. ಆದರೆ ಸದಸ್ಯರಲ್ಲದ ವ್ಯಕ್ತಿಯಿಂದ ಅಥವಾ ಸದಸ್ಯತನದಿಂದ ಮುಕ್ತಿಗೊಂಡ ಸದಸ್ಯ, ಮುಕ್ತಾಯಗೊಂಡ 2 ವರ್ಷಗಳ ನಂತರ, ಅಂತಹ ವ್ಯಕ್ತಿಗಳು ಭರಿಸಬೇಕಾದ ಹಣದ ವಸೂಲಾತಿ ಆದೇಶವನ್ನು ಹೊರಡಿಸತಕ್ಕದ್ದಲ್ಲ. ಈ ರೀತಿ ಪ್ರಶ್ನೆ ಉದ್ಭವಿಸಿದಾಗ ಸಿವಿಲ್ ನ್ಯಾಯಾಲಯ ಮಧ್ಯಪ್ರವೇಶಿಸತಕ್ಕದ್ದಲ್ಲ.

**ಅಂತಿಮ ಲೆಕ್ಕಪತ್ರಗಳ ಮುಕ್ತಾಯ ಮತ್ತು ಹೆಚ್ಚುವರಿ ಹಣದ ವಿಲೇವಾರಿ:**

ಸಮಾಪನೆಗೊಂಡ ಸಹಕಾರಿ ಜವಾಬ್ದಾರಿಗಳನ್ನು ಬಡ್ಡಿ ಸಹಿತ ತೀರುವಳಿ ಮಾಡುವ ಜವಾಬ್ದಾರಿ ಇರತಕ್ಕದ್ದು. ಆದರೆ ಈ ಪಾವತಿಯು ನೋಂದಣಿ ರದ್ಧತಿ ಆಗುವ ತನಕ ಆಸ್ತಿಯಾಗಿ ಉಳಿಯತಕ್ಕದ್ದು. ಹೆಚ್ಚುವರಿ ಸಂಪನ್ಮೂಲವನ್ನು ಬಾಕಿದಾರರಿಗೆ ಬಡ್ಡಿ ಪಾವತಿ ಮಾಡುವುದು ಸೇರುತ್ತದೆ. ಆದರೆ ಸದಸ್ಯರಿಗೆ ಕೊಡಬೇಕಾದ ಪಾಲುಬಂಡವಾಳಕ್ಕೆ ಪೂರ್ವದಲ್ಲಿ ಪಾವತಿ ಮಾಡತಕ್ಕದ್ದು. ಸಾಕಷ್ಟು ಹಣಕಾಸು ಸಂಪನ್ಮೂಲ ಇಲ್ಲದಿದ್ದ ಸಂದರ್ಭದಲ್ಲಿ ಬಾಕಿದಾರರಿಗೆ ಪಾವತಿ ಮಾಡುವಾಗ ಹಣವನ್ನು ಬಿಡುಗಡೆ ಮಾಡುವಾಗ ಅವರಿಗೆ ಕೊಡಬೇಕಾದ ಬಾಕಿಯ

ಪ್ರೋರ್ರ್ಯಾಟಾ ಆಧಾರದ ಮೇಲೆ ಹಂಚತಕ್ಕದ್ದು. ಆ ರೀತಿ ಪಾವತಿಯಾದ ನಂತರವೂ ಹಣ ಉಳಿದರೆ ಸದಸ್ಯರು ಹೂಡಿದ ಪಾಲುಬಂಡವಾಳ ಮತ್ತು ಕೊಡಬೇಕಾದ ಡಿವಿಡೆಂಟ್ ಹಣವನ್ನು ಪಾವತಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೊರ ಸಾಲಗಳನ್ನು ತೀರುವಳಿ ಮಾಡುವ ತನಕ ಮತ್ತು ಬ್ಯಾಂಕಿನ ಸಾಲ ಮರುಪಾವತಿ ಮಾಡುವ ತನಕ, ಸದಸ್ಯರಿಗೆ ಪಾಲುಬಂಡವಾಳ ಹಂಚತಕ್ಕದ್ದಲ್ಲ. ಸಮಾಪನೆ ಆದ ನಂತರ ಸದಸ್ಯರಿಗೆ ಡಿವಿಡೆಂಟ್ ಪಾವತಿ ಮಾಡಬೇಕಾದ ಸಂದರ್ಭ ಬಂದಾಗ, ಸಮಾಪನೆಗೊಳ್ಳುವ ಪೂರ್ವದಲ್ಲಿ ಯಾವುದೆ ದರದಲ್ಲಿ ಡಿವಿಡೆಂಟ್ ನಿರ್ಧರಿಸಿದ್ದರೂ, ಗರಿಷ್ಠ ಶೇ 6ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಡಿವಿಡೆಂಡ್ ಪಾವತಿಸತಕ್ಕದ್ದು. ಉಪವಿಧಿಗಳಲ್ಲಿ ಡಿವಿಡೆಂಡ್ ಪಾವತಿಸಲು ಅವಕಾಶವಿಲ್ಲದಿದ್ದರೆ ಡಿವಿಡೆಂಡ್ ಪಾವತಿ ಮಾಡತಕ್ಕದ್ದಲ್ಲ. ಈ ಮೇಲ್ಕಂಡ ಹಣವನ್ನು ತೀರುವಳಿ ಮಾಡಿದ ನಂತರ, ಇನ್ನೂ ಹಣ ಉಳಿದ ಸಂದರ್ಭದಲ್ಲಿ, ಆ ಹಣವನ್ನು ಉಪಯೋಗಿಸುವ ವಿಧಿವಿಧಾನವನ್ನು ಈಗಾಗಲೇ ಮೇಲೆ ತಿಳಿಸಲಾಗಿದೆ.

ಸಮಾಪನೆಯಾದ ಸಹಕಾರಿ ನೋಂದಣಿಯನ್ನು ರದ್ದುಪಡಿಸುವ ಸಂದರ್ಭ ಬಂದಾಗ ಅಂತಿಮವಾಗಿ ಮಹಾಸಭೆಯನ್ನು ಕರೆದು ಒಪ್ಪಿಗೆ ಪಡೆಯುವುದು ಅವಶ್ಯಕ. ಆ ಮಹಾಸಭೆಯಲ್ಲಿ ನಿಬಂಧಕರು ಸೂಚಿಸಿದ ಮಾಜಿ ಸದಸ್ಯರಿಂದ ಅಥವಾ ಇತರ ವ್ಯಕ್ತಿಗಳಿಂದ ರಚಿಸಿಕೊಳ್ಳಲು ತೀರ್ಮಾನ ತೆಗೆದುಕೊಳ್ಳಬೇಕು. ಈ ತೀರ್ಮಾನ ತೆಗೆದುಕೊಳ್ಳದಿದ್ದರೆ ಸಹಕಾರಿ ಕಾಯಿದೆ ಮತ್ತು ನಿಯಮದಂತೆ ಹೆಚ್ಚುವರಿ ಹಣವನ್ನು ಉಪಯೋಗಿಸಿಕೊಳ್ಳತಕ್ಕದ್ದು. ಈ ಮೇಲ್ಕಂಡ ನೋಟೀಸು ಕೊಟ್ಟ 30 ದಿವಸದೊಳಗಾಗಿ ತೀರ್ಮಾನ ತೆಗೆದುಕೊಳ್ಳದಿದ್ದರೆ ಅಂತಹ ಹೆಚ್ಚುವರಿ ಸಂಪನ್ಮೂಲವನ್ನು ಬ್ಯಾಂಕಿನಲ್ಲಿ ಹೂಡತಕ್ಕದ್ದು. ಮತ್ತು ಅದೇ ರೀತಿಯ ಮತ್ತೊಂದು ಸಹಕಾರಿ ಇದ್ದರೆ, ಆ ಸಹಕಾರಿ ಕಾಯ್ದಿಟ್ಟ ನಿಧಿಗೆ ವರ್ಗಾಯಿಸುವುದು ಅಥವಾ ನಿಬಂಧಕರ ಅಭಿಪ್ರಾಯದಲ್ಲಿ ಮತ್ತೊಂದು ಸಹಕಾರಿ ನೋಂದಾಯಿಸಲು ಸಾಧ್ಯವಿಲ್ಲವೆಂದು ತೀರ್ಮಾನಕ್ಕೆ ಬಂದರೆ, ಆ ಹೆಚ್ಚುವರಿ ಹಣವನ್ನು ಹಣಕಾಸು ಪೂರೈಕೆ ಮಾಡುವ ಸಂಸ್ಥೆಯ ಸಂಶಯಾತ್ಮಕ ನಿಧಿ ಅಥವಾ ಕಾಯ್ದಿಟ್ಟ ನಿಧಿಗೆ ವರ್ಗಾಯಿಸುವುದು. ಹಣಕಾಸು ಪೂರೈಕೆ ಮಾಡುವ ಸಂಸ್ಥೆ ಇಲ್ಲದಿದ್ದ ಪಕ್ಷದಲ್ಲಿ ಸಂಯುಕ್ತ ಸಹಕಾರಿ ಈ ಎಲ್ಲಾ ವ್ಯವಹಾರಗಳ ಬಗ್ಗೆ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಹೆಚ್ಚುವರಿ ಹಣ ಉಳಿದಾಗ ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ನಿಧಿಗೆ, ನಿಬಂಧಕರ ಅನುಮೋದನೆಯೊಂದಿಗೆ ವರ್ಗಾಯಿಸುವುದು.

**ಸಮಾಪನೆಗೊಂಡ ಸಹಕಾರಿ ಲೆಕ್ಕತಪಾಸಣೆ**

ಸಮಾಪನೆಗೊಂಡ ಪ್ರತಿಯೊಂದು ಸಹಕಾರಿ ಲೆಕ್ಕಪತ್ರಗಳನ್ನು ಲೆಕ್ಕತಪಾಸಣೆ ಮಾಡಿಸತಕ್ಕದ್ದು. ನಿಬಂಧಕರು ಆ ವರದಿಯನ್ನಾಧರಿಸಿ ಮುಂದಿನ ಕ್ರಮ ಜರುಗಿಸತಕ್ಕದ್ದು.

**ಸಮಾಪನಾಧಿಕಾರಿಯು ಸಲ್ಲಿಸಬೇಕಾದ ವರದಿಗಳು:**

1. ಪ್ರತಿ ತಿಂಗಳು ಸಮಾಪನಾ ಕಾರ್ಯದಲ್ಲಿ ಆದ ಪ್ರಗತಿಯನ್ನು ತಿಂಗಳು ಮುಗಿದ 15 ದಿವಸದೊಳಗಾಗಿ ನಿಬಂಧಕರಿಗೆ ಸಲ್ಲಿಸತಕ್ಕದ್ದು.
2. 5 ವರ್ಷಕ್ಕಿಂತ ಮೇಲ್ಪಟ್ಟು ಸಮಾಪನಾ ಪ್ರಕ್ರಿಯೆ ಇದ್ದರೆ, ಆ ಪ್ರಗತಿಯನ್ನು ಮಾಸಿಕ ವರದಿಯ ಜೊತೆ ಲಗತ್ತಿಸಿ ಕಳುಹಿಸತಕ್ಕದ್ದು.
3. 3 ತಿಂಗಳಿಗೊಮ್ಮೆ 3ನೇ ತಿಂಗಳು ಕಳೆದ 15 ದಿವಸದೊಳಗಾಗಿ ಸರ್ಕಾರಕ್ಕೆ ಕೊಡಬೇಕಾದ ಬಾಕಿ ತೀರುವಳಿ ಬಗ್ಗೆ ವರದಿ ಸಲ್ಲಿಸತಕ್ಕದ್ದು.
4. ಪ್ರತಿ 3 ತಿಂಗಳಿಗೊಮ್ಮೆ 3ನೇ ತಿಂಗಳು ಕಳೆದ 15 ದಿವಸಗಳೊಳಗೆ ಸಮಾಪನಾ ವೆಚ್ಚವನ್ನು ವಸೂಲಿ ಮಾಡಿ ಜಮಾ ಮಾಡಿದ ಬಗ್ಗೆ ವರದಿ ಸಲ್ಲಿಸತಕ್ಕದ್ದು.
5. 3 ತಿಂಗಳಿಗೊಮ್ಮೆ ಸಹಕಾರಿ ಹೊಂದಿರುವ ಸ್ಥಿರಾಸ್ತಿ ವಿಲೇವಾರಿ ಬಗ್ಗೆ ವರದಿ ಸಲ್ಲಿಸುವುದು.

ಈ ಎಲ್ಲ ಮೇಲ್ಕಂಡ ಮಾಹಿತಿಯನ್ನು ಬ್ಯಾಂಕಿಗೆ ತಿಳಸುವುದರ ಜೊತೆಗೆ ಸಹಾಯಕ ನಿಬಂಧಕರು ಕನಿಷ್ಠ ತಿಂಗಳಿಗೊಮ್ಮೆಯಾದರೂ ಸಮಾಪನಾ ಕಾರ್ಯದ ಬಗ್ಗೆ ವಿಮರ್ಶೆ ಮಾಡತಕ್ಕದ್ದು.

**ಸಮಾಪನೆ ಮಾಡುವ ಪೂರ್ವದಲ್ಲಿ ನಿಬಂಧಕರು ಗಮನಿಸಬೇಕಾದ ಅಂಶಗಳು(ಚೆಕ್‌ಲಿಸ್ಟ್)**

1. ಈ ಕೆಳಕಂಡ ಯಾವುದಾದರೂ ವರದಿ ಪಡೆಯಲಾಗಿದೆಯೆ?

ಎ) ಕಲಂ 35, 53ರ ವಿಚಾರಣಾ, (7)(ಯು) ಪರಿವೀಕ್ಷಣೆ ಹಾಗೂ ಕಲಂ.37 ಲೆಕ್ಕಪರಿಶೋಧನ ವರದಿ

ಬಿ) 3/4 ಅಂಶದ ಸದಸ್ಯರ ಲಿಖಿತ ಮನವಿ

ಸಿ) ನೋಂದಾವಣೆ ಆದ ನಂತರ ಕೆಲಸ ಪ್ರಾರಂಭಿಸಿದೆಯೇ ಹೌದು/ಇಲ್ಲ

ಡಿ) ಸಹಕಾರಿ ಕಾರ್ಯನಿರ್ವಹಣೆ ನಿಷ್ಕ್ರಿಯಗೊಂಡಿದೆಯೇ ಅಥವಾ ಕೆಲಸ ನಿರ್ವಹಿಸುತ್ತಿಲ್ಲವೇ ಅಥವಾ ಕೆಲಸವನ್ನು ನಿಲ್ಲಿಸಲಾಗಿದೆಯೆ ಹೌದು/ಇಲ್ಲ

ಇ) ನೋಂದಾವಣೆ ಸಮಯದಲ್ಲಿ ವಿಧಿಸಿದ ಷರತ್ತುಗಳನ್ನು ಪಾಲಿಸಿಲ್ಲವೆ (ಹೌದು/ಇಲ್ಲ)

ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ನಂತರ ಸಮಾಪನೆ ಮಾಡಲು ನಿಬಂಧಕರು ತೀರ್ಮಾನ ತೆಗೆದುಕೊಳ್ಳಬಹುದು.

ಸಮಾಪನೆ ಆದ ನಂತರ ನೋಂದಣಿ ರದ್ದುಪಡಿಸುವಾಗ ಸಮಾಪನಾಧಿಕಾರಿ ಪರಿಶೀಲಿಸಬೇಕಾದ ಅಂಶಗಳು (ಚೆಕ್‌ಲಿಸ್ಟ್)

1. ಸಮಾಪನಾಧಿಕಾರಿಯು ಅವನು ನೇಮಕವಾದ ನಂತರ ತನ್ನ ನಿಯಂತ್ರಣಕ್ಕೆ ಸಹಕಾರಿ ಆಸ್ತಿ ವಶಕ್ಕೆ ತೆಗೆದುಕೊಂಡಿದ್ದಾರೆಯೆ? (ಹೌದು/ಇಲ್ಲ)
2. ವಶಪಡಿಸಿಕೊಂಡ ಆಸ್ತಿಯಲ್ಲಿ ನಶಿಸಿಹೋಗುವ/ಕೆಟ್ಟುಹೋಗುವ ವಸ್ತುಗಳಿದ್ದರೆ ಅವುಗಳ ವಿಲೇವಾರಿಗೆ ಕ್ರಮ ಜರುಗಿಸಲಾಗಿದೆಯೆ (ಹೌದು/ಇಲ್ಲ)
3. ಸಮಾಪನಾಧಿಕಾರಿ ಅಧಿಕಾರ ವಹಿಸಿಕೊಂಡ ಕೂಡಲೇ ಸಾರ್ವಜನಿಕ ನೋಟೀಸ್ ಜಾರಿ ಮಾಡಿ ಅದನ್ನು ಗೆಜೆಟ್ ಮುಖಾಂತರ ಅಥವಾ ಇನ್ನಾವುದೇ ರೂಪದಲ್ಲಿ ಸಾಲಗಾರರಿಂದ ಅಥವಾ ಇನ್ನಿತರರಿಂದ ಬರಬೇಕಾದ ಬೇಡಿಕೆಯನ್ನು 2 ತಿಂಗಳೊಳಗೆ ಲಿಖಿತವಾಗಿ ಸಲ್ಲಿಸಲು ಸೂಚಿಸುವುದು. (ಹೌದು/ಇಲ್ಲ)
4. ಸಮಾಪನಾಧಿಕಾರಿಯು ಬೇಡಿಕೆ ಆಧಾರದ ಮೇಲೆ ಕೊಡಬೇಕಾದವರ ಪ್ರಾಮುಖ್ಯತೆಯ ಪಟ್ಟಿಯನ್ನು ತಯಾರಿಸಿದ್ದಾರೆಯೆ (ಹೌದು/ಇಲ್ಲ)
5. ಬರಬೇಕಾದ ಎಲ್ಲ ಹಣ ಮತ್ತು ಆಸ್ತಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆಯೆ (ಹೌದು/ಇಲ್ಲ)
6. ಬರಬೇಕಾದ ಎಲ್ಲ ವಸೂಲಾತಿಗಳನ್ನೂ ಮಾಡಲಾಗಿದೆಯೇ ಮತ್ತು ಅದಕ್ಕೆ ಕ್ರಮಬದ್ದ ರಶೀತಿ ಕೊಡಲಾಗಿದೆಯೆ (ಹೌದು/ಇಲ್ಲ)
7. ಆಸ್ತಿ ಜವಾಬ್ದಾರಿಯನ್ನು ಚುಕ್ತ ಮಾಡಲಾಗಿದೆಯೆ (ಹೌದು/ಇಲ್ಲ)
8. ಸದಸ್ಯರಿಂದ, ಮಾಜಿ ಸದಸ್ಯರಿಂದ, ಕಾನೂನು ವಾರಸುದಾರರಿಂದ, ಅಧಿಕಾರಿಯಿಂದ, ಹಿಂದಿನ ಅಧಿಕಾರಿಯಿಂದ ಎಷ್ಟು ಹಣ ಭರ್ತಿ ಮಾಡಬೇಕೆಂದು ನಿರ್ಧರಿಸಲಾಗಿದೆಯೆ (ಹೌದು/ಇಲ್ಲ)
9. ನಿಧಿಗಳನ್ನು ಟ್ರೆಜರಿ, ಪೋಸ್ಟ್ ಆಫೀಸ್, ಸಹಕಾರಿ ಬ್ಯಾಂಕ್, ಮತ್ತಿತರ ನಿಬಂಧಕರಿಂದ ಒಪ್ಪಿಗೆ ಪಡೆದ ಸಂಸ್ಥೆಯಲ್ಲಿ ಠೇವಣಿಯನ್ನು ಹೂಡಲಾಗಿದೆಯೆ (ಹೌದು/ಇಲ್ಲ)
10. ಅಗತ್ಯ ಬಿದ್ದಲ್ಲಿ ಸರ್ವ ಸದಸ್ಯರ ಸಭೆ ಕರೆಯಲಾಗಿದೆಯೆ (ಹೌದು/ಇಲ್ಲ)
11. ನಿಬಂಧಕರಿಗೆ ತ್ರೈಮಾಸಿಕ ವರದಿಯನ್ನು ಸಲ್ಲಿಸಲಾಗುತ್ತಿದೆಯೆ (ಹೌದು/ಇಲ್ಲ)
12. ಸಮಾಪನಾಧಿಕಾರಿಯು ಸಂಬಂಧಪಟ್ಟ ಲೆಕ್ಕ ಪುಸ್ತಕ ಹಾಗೂ ದಾಖಲೆಗಳನ್ನು ನಿಗಧಿಪಡಿಸಿದ ನಮೂನೆಯಲ್ಲಿ ಬರೆದಿಡುತ್ತಿದ್ದಾರೆಯೆ (ಹೌದು/ಇಲ್ಲ)
13. ಸಮಾಪನಾ ಹಂತ ಮುಗಿದ ನಂತರ ಅಂತಿಮವಾಗಿ ಮಹಾಸಭೆಯನ್ನು ಕರೆದು ಸಹಕಾರಿ ನೋಂದಣಿ ರದ್ದುಪಡಿಸಲು ಒಪ್ಪಿಗೆ ಪಡೆಯಲಾಗಿದೆಯೆ (ಹೌದು/ಇಲ್ಲ)
14. ಈ ಸಭೆಯ ನಂತರ ಅಂತಿಮ ಆರ್ಥಿಕ ತಃಖ್ತೆಗಳನ್ನು ಸಲ್ಲಿಸಿ ಠರಾವಿನ ಮೂಲಕ ಲೆಕ್ಕಪತ್ರಗಳ ಜೊತೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆ (ಹೌದು/ಇಲ್ಲ)
15. ಹೆಚ್ಚುವರಿ ಸಂಪನ್ಮೂಲವನ್ನು ಮತ್ತು ಬೇಡಿಕೆ ಇಲ್ಲದಂತ ಹಣವನ್ನು ಬ್ಯಾಂಕಿನಲ್ಲಿ ಹೂಡಲಾಗಿದೆಯೆ (ಹೌದು/ಇಲ್ಲ)

**ತೀರ್ಪುಗಳು:**

1. ಒಂದು ಸಹಕಾರ ಸಂಘವನ್ನು ಕಲಂ.72ರಲ್ಲಿ ಸಮಾಪನೆಗೆ ಆದೇಶಿದ ನಂತರ, ಅದರ ನೋಂದಣಿಯನ್ನು ರದ್ದು ಪಡಿಸಲಾಯಿತು. ಆದಾದ ನಂತರ ಒಬ್ಬ ಅಧಿಕಾರಿ, ಮಂಡಳಿಗೆ ಚುನಾವಣೆ ಮಾಡಿ, ಸಮಿತಿ ರಚಿಸುವ ಅಧಿಕಾರ ಇಲ್ಲದೇ ಇದ್ದರೂ ಅದನ್ನು ಚಲಾಯಿಸಿದಾಗ ಅದಕ್ಕೆ

ಕಾನೂನಿನ ಮನ್ನಣೆ ಇಲ್ಲ. ಪದಾಧಿಕಾರಿಗಳು, ನೋಂದಣಿ ರದ್ದತಿಯನ್ನು ಪ್ರಶ್ನಿಸಿದೆ, ಬೇರಾವುದೇ ಪರಿಹಾರ ಪಡೆಯಲು ಅರ್ಹರಲ್ಲ. ಆದ್ದರಿಂದ ಅಂತಹ ನಿರ್ದೇಶಕರನ್ನು ಅನರ್ಹತೆಗೊಳಿಸಿ ಮಾಡಿದ ಸಂಯುಕ್ತ ನಿಬಂಧಕರ ಆದೇಶ ಊರ್ಜಿತ ಎಂದು ತೀರ್ಮಾನಿಸಿ ರಿಟ್ ವಿಲೇವಾರಿ ಮಾಡಿತು. **(2017 Indlaw KAR 5779)**

2. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಪೂರ್ವದಲ್ಲಿ ಆ ಸಂಘವು ಆರ್ಥಿಕವಾಗಿ ಸಬಲವಾಗಿ, ಸದಸ್ಯರ ಅನುಕೂಲಕ್ಕೆ ಮುಂದುವರಿಯಬೇಕೆ ಬೇಡವೆ ಎಂಬುದನ್ನು ತೀರ್ಮಾನಿಸುವಾಗ ಆ ಸಂಘದ ಕಾಯವ್ಯಾಪ್ತಿಯಲ್ಲಿ ಸದಸ್ಯರಿಗೆ ಅನುಕೂಲ ಕಲ್ಪಿಸಲು ಅಥವಾ ಮುಂದುವರಿಯಲು ಸಾಧ್ಯವೆ ಎಂದು ಪರಿಶೀಲಿಸಬೇಕು. ಆ ರೀತಿ ಮಾಡುವಾಗ ಆ ಸಂಘದ ಕಾರ್ಯವ್ಯಾಪ್ತಿಯಲ್ಲಿರುವ ಜಮೀನನ್ನು ಕೃಷಿಯೇತರ ಉದ್ದೇಶಗಳಿಗಾಗಿ ವರ್ಗಾವಣೆ ಮಾಡಿದ ನಂತರ, ವ್ಯವಸಾಯ ಮಾಡಲು ಯಾವುದೆ ಭೂಮಿ ಇಲ್ಲದೆ ಇದ್ದಾಗ, ಅಂತಹ ಸಂಘವನ್ನು ಕೃಷಿ ಪತ್ತಿನ ಸಹಕಾರ ಸಂಘವೆಂದು ಮುಂದುವರೆಸಲು ಅವಶ್ಯಕತೆ ಇಲ್ಲವೆಂಬ ವರದಿ ಆಧಾರದ ಮೇಲೆ ಸಮಾಪನೆಗೊಳಿಸಿರುವುದು ಸಮರ್ಪಕವಾಗಿದ್ದು, ಇದು ಸ್ವಾಭಾವಿಕ ನೀತಿ ನಿಯಮಗಳಿಗೆ ವಿರುದ್ದವಾಗಿರುವುದಿಲ್ಲ. 2004(4) ಕೆಸಿಸಿಅರ್ ಎಸ್ಎನ್ 511/ಐಎಲ್ಆರ್ 2005(1) ಕೆಎಅರ್ 128

3. ಯಾವುದೇ ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಸಂದರ್ಭದಲ್ಲಿ ಆ ಸಂಘದ ಸದಸ್ಯರಿಗೆ ಮತ್ತು ಆಡಳಿತ ಮಂಡಳಿಗೆ ನೋಟೀಸ್ ಜಾರಿ ಮಾಡದೆ ಅದೇಶ ಮಾಡುವುದು ನ್ಯಾಯಾಂಗ ಸಂಬಂಧಪಟ್ಟ ನೀತಿಯಲ್ಲ. ವಿಚಾರಣೆ ಮತ್ತು ಪರಿವೀಕ್ಷಣೆ ಮಾಡಲಾಗಿದೆ ಎಂಬ ಆಧಾರದ ಮೇಲೆ ಆ ವರದಿಯಲ್ಲಿ ಕಾಣಸಿರುವ ಅಂಶವನ್ನು ಸದಸ್ಯರಿಗೆ ತಿಳಿಸದೆ ಸಮಾಪನೆಮಾಡಿರುವುದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗಿದೆ. 1968 ಸಿಎಲ್ಜೆ ಎಪಿ 135.

4. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವಾಗ ಸಂಘದ ನೌಕರರನ್ನು ಕೇಳಿ ಸಮಾಪನಾ ಆದೇಶ ಹೊರಡಿಸಬೇಕೆಂಬ ನಿಯಮವಿಲ್ಲ. ಕಂಪನಿ ಕಾಯಿದೆ, ನೀತಿ, ನಿಯಮ ಸಹಕಾರ ಸಂಘಗಳಿಗೆ ಅನ್ವಯಿಸುವುದಿಲ್ಲವೆಂದು ಕಾಯಿದೆ ಕಲಂ 128ರಲ್ಲಿ ಸ್ಪಷ್ಟವಾಗಿ ನಮೂದಿಸಿರುವುದರಿಂದ ಸಹಕಾರ ಸಂಘಗಳನ್ನು ಸಮಾಪನೆ ಮಾಡುವಾಗ ಆ ಸಂಘದ ನೌಕರರನ್ನು ಕೇಳುವ ಅವಶ್ಯಕತೆ ಇಲ್ಲ. ಐಎಲ್ಆರ್ 1987(2)ಕೆಎಆರ್ 1788/1987(2) ಕೆಎಲ್ಜೆ ಎಸ್ಎನ್ 340/1987(1) ಬಿಎಲ್ಜೆ 312

5. ಒಂದು ಸಹಕಾರ ಸಂಘವನ್ನು ಸಮಾಪನೆ ಮಾಡುವ ಸಂದರ್ಭದಲ್ಲಿ ಆ ಸಹಕಾರ ಸಂಘಕ್ಕೆ ಸ್ವಾಭಾವಿಕ ನ್ಯಾಯದನ್ವಯ ನೋಟೀಸ್ ಕೊಡುವುದು ಅವಶ್ಯಕ. ವಿಚಾರಣೆ ಮಾಡುವ ಸಂದರ್ಭದಲ್ಲಿ ಅವಕಾಶ ಕೊಡಲಾಗಿದೆ ಎಂಬ ಆಧಾರದ ಮೇಲೆ ಸಹಕಾರ ಸಂಘವನ್ನು ಸಮಾಪನೆ ಮಾಡುವಾಗ ಅವಕಾಶ ಕೊಡುವ ಅವಶ್ಯಕತೆ ಇಲ್ಲವೆಂದು ತೀರ್ಮಾನಕ್ಕೆ ಬರತಕ್ಕದ್ದಲ್ಲ. ಯಾವ ಸಂದರ್ಭದಲ್ಲಿ ಅವಕಾಶವನ್ನು ಕೊಟ್ಟಿಲ್ಲವೊ ಮೇಲ್ಮನವಿಯಲ್ಲಿ ಆ ಅವಕಾಶ ಕಲ್ಪಿಸಲಾಗಿದೆ ಎಂಬ ಆಧಾರದ ಮೇಲೆ ಆ ತಪ್ಪನ್ನು ಸರಿಪಡಿಸಲಾಗದು. ಅವಕಾಶ ಕೊಡದೇ ಸಮಾಪನೆ ಮಾಡಿರುವುದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ. 1974(1) ಕೆಎಲ್ಜೆ 355.

6. ಸ್ವಾಭಾವಿಕ ನ್ಯಾಯದನ್ವಯ ಒಂದು ಸಹಕಾರ ಸಂಘವನ್ನು ಸ್ವ ಇಚ್ಛೆಯಿಂದ ನಿಬಂಧಕರು ಸಮಾಪನೆ ಮಾಡಬೇಕೆಂದು ಕಲಂ 64, 65ರ ವರದಿಯನ್ನಾಧರಿಸಿ ತೀರ್ಮಾನ ತೆಗೆದುಕೊಳ್ಳಬಹುದು. ಇದು ಕಲಂ 72(1)ರನ್ವಯ ಅವಕಾಶಕ್ಕೆ ಪ್ರತ್ಯೇಕವಾಗಿರತಕ್ಕದ್ದು. ಒಂದು ಸಹಕಾರ ಸಂಘದ ವ್ಯವಹಾರ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ನಿಬಂಧಕರು ತೀರ್ಮಾನಕ್ಕೆ ಬಂದಾಗ ಮತ್ತು ಭಾರತೀಯ ರಿಜರ್ವ್ ಬ್ಯಾಂಕ್ ಈ ಬ್ಯಾಂಕಿನ ವ್ಯವಹಾರ ಸಮರ್ಪಕವಾಗಿಲ್ಲವೆಂದು ವರದಿ ಕೊಡುತ್ತಿರುವ ಸಂದರ್ಭದಲ್ಲಿ ಸ್ವಪ್ರೇರಣೆಯಿಂದ ಸಮಾಪನೆ ಕ್ರಮಜರುಗಿಸಿರುವುದು ಸೂಕ್ತ ಹಾಗೂ ಕ್ರಮಬದ್ದ. 1990(3)ಕೆಎಲ್ಜೆ 16

7. ಒಂದು ಸಹಕಾರ ಸಂಘದ ಆಡಳಿತ ಮಂಡಳಿ, ಮಹಾಸಭೆಯ ಒಪ್ಪಿಗೆ ಪಡೆಯದೆ, ಸಂಘದ ಆಸ್ತಿಯನ್ನು ಮಾರಾಟ ಮತ್ತು ಬಾಡಿಗೆ ಕೊಡುವುದು ಸಮರ್ಥ ಕೆಲಸವಲ್ಲ. ಅಂತಹ ಅಧಿಕಾರವನ್ನು ಕಾನೂನುಬದ್ದ ಅಧಿಕಾರ ಚಲಾವಣೆ ಎಂದು ತಿಳಿಯತಕ್ಕದ್ದು. ಐಎಲ್ಆರ್ 1990(2) ಕೆಎಆರ್ 1785/ಎಐಆರ್ 1991 ಕೆಎನ್ಟಿ ಎನ್ಒಸಿ 15ಎ/

8. ರಿಜಿಸ್ಟ್ರಾರ್ ಎಂಬ ಪದಕ್ಕೆ ಅಪರ ನಿಬಂಧಕರು ಸೇರಿರುತ್ತಾರೆ. ಕೈಗಾರಿಕಾ ಇಲಾಖೆಯ ಅಪರ ನಿಬಂಧಕರು ಸಮಾಪನಾ ಆದೇಶವನ್ನು ಹೊರಡಿಸಿದಾಗ ಆ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಲು ಆ ಅಪರ ನಿಬಂಧಕರನ್ನು ಕಲಂ 2ಎ(5)ರಲ್ಲಿ ನಿಬಂಧಕರಿಗೆ ಕೊಟ್ಟ ಅಧಿಕಾರವನ್ನು ಕಲಂ 72, 73, 75ರಲ್ಲಿ ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಮೇಲ್ಮನವಿಯನ್ನು ನಿಬಂಧಕರ ಮುಂದೆ ಸಲ್ಲಿಸಿದಾಗ ಆ ಪ್ರಕರಣ ವಿಚಾರಣಾರ್ಹ. 1994(4) ಕೆಎಲ್ಜೆ 627/1994(3) ಕೆಎಆರ್ 2703 ಡಿಬಿ.

# ಅಧ್ಯಾಯ – 6.9

# ಅಪರಾಧಗಳು ಮತ್ತು ದಂಡಗಳು

**ಕಲಂ.68 : ಅಪರಾಧಗಳು ಮತ್ತು ದಂಡಗಳು :**

1) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಪದಾಧಿಕಾರಿ ಅಥವಾ ನಿರ್ದೇಶಕ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಥವಾ ಯಾವೊಬ್ಬ ನೌಕರನು ಈ ಅಧಿನಿಯಮದ ಅಥವಾ ಸಹಕಾರಿಯ ಉಪವಿಧಿಗಳ ಅಡಿಯಲ್ಲಿ ಅಗತ್ಯ ಪಡಿಸಲಾದ ನೋಟೀಸನ್ನು ಹೊರಡಿಸಲು, ವಿವರಪಟ್ಟಿಕೆ ಅಥವಾ ದಸ್ತಾವೇಜನ್ನು ಕಳುಹಿಸಲು ಉದ್ದೇಶ ಪೂರ್ವಕವಾಗಿ ತಪ್ಪಿದರೆ ಅಥವಾ ಯಾವುದೇ ಮಾಹಿತಿಯನ್ನು ಒದಗಿಸಲು ನಿರಾಕರಿಸಿದರೆ ಅಥವಾ ಸುಳ್ಳು ಅಥವಾ ಸಾಕಷ್ಟಿಲ್ಲದ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಒದಗಿಸಿದರೆ, ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

2) ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ಪದಾಧಿಕಾರಿ, ಒಬ್ಬ ಮುಖ್ಯ ಕಾರ್ಯನಿರ್ವಾಹಕ, ಒಬ್ಬ ನಿರ್ದೇಶಕ ಅಥವಾ ಯಾವೊಬ್ಬ ನೌಕರನು ಈ ಅಧಿನಿಯಮದಡಿಯಲ್ಲಿ ಅಗತ್ಯ ಪಡಿಸಿದ ಯಾವುದೇ ಕೃತ್ಯವನ್ನು ಮಾಡಲು ವಿಫಲನಾದರೆ ಅಥವಾ ಈ ಅಧಿನಿಯಮ ಅಥವಾ ಉಪವಿಧಿಗಳ ಮೂಲಕ ನಿಷೇಧಿಸಲಾದ ಯಾವುದೇ ಕೃತ್ಯವನ್ನು ಮಾಡಲು ಅನುಮತಿ ನೀಡಿದರೆ ಅಥವಾ ರಚನೆ, ವ್ಯವಸ್ಥಾಪನೆ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನೆರವೇರಿಸಲು ವಿಫಲನಾದರೆ ಅಥವಾ ಮೋಸದ ಚಟುವಟಿಕೆಗಳಲ್ಲಿ ತೊಡಗಿದರೆ ಅಥವಾ ನಿಧಿ ಮತ್ತು ಸ್ವತ್ತುಗಳನ್ನು ದುರುಪಯೋಗ ಪಡಿಸಿಕೊಂಡರೆ ಅಥವಾ ನಿರ್ದೇಶಕ ಮಂಡಳಿಯ ಚುನಾವಣೆಯನ್ನು ನಡೆಸುವಲ್ಲಿ ಜನತಾ ಪ್ರಾತಿನಿಧ್ಯ ಅಧಿನಿಯಮದ (1951ರ ಕೇಂದ್ರ ಅಧಿನಿಯಮ 43) 123ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ ಭ್ರಷ್ಟಾಚಾರ ಚಟುವಟಿಕೆಗಳಲ್ಲಿ ತೊಡಗಿದರೆ ಅಥವಾ 35ನೇ ಮತ್ತು 65ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಯನ್ನು ನಡೆಸುತ್ತಿರುವ ವ್ಯಕ್ತಿಯ ಮುಂದೆ ಮತ್ತು 33ನೇ ಮತ್ತು 64ನೇ ಪ್ರಕರಣದ ಅಡಿಯಲ್ಲಿನ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಅಥವಾ ಪುಸ್ತಕಗಳು ಅಥವಾ ದಾಖಲೆಗಳನ್ನು ಹಾಜರು ಪಡಿಸಲು ಅಥವಾ ನೆರವು ನೀಡಲು ತಪ್ಪಿದರೆ ಅಥವಾ ವೈಯಕ್ತಿಕವಾಗಿ ಹಾಜರಾಗಲು ವಿಫಲನಾದರೆ ಅಥವಾ ಸಂಯುಕ್ತ ಸಹಕಾರಿಯ "ಸಂಯುಕ್ತ ಸಹಕಾರಿ ನಿಧಿಗೆ" ವಂತಿಗೆ ನೀಡಲು ತಪ್ಪಿದರೆ, ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

3) ತನ್ನ ನೌಕರನಿಂದ ಹಣ ಮುರಿದುಕೊಳ್ಳಲು ವಿಫಲನಾದರೆ ಅಥವಾ ಮುರಿದುಕೊಂಡ ಮೊತ್ತವನ್ನು ಅಂತಹ ವ್ಯವಕಲನವನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಸಂಬಂಧಪಟ್ಟ ಸಹಕಾರಿಗೆ ಸಕಾರಣಗಳಿಲ್ಲದೆ ಸಂದಾಯ ಮಾಡಲು ಉದ್ಯೋಗದಾತನು ತಪ್ಪಿದರೆ ಅವನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳುಗಳ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

4) ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಪಧಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ, ಒಬ್ಬ ನಿರ್ದೇಶಕ ಅಥವಾ ಯಾವೊಬ್ಬ ನೌಕರನು ಸಹಕಾರಿಗೆ ಸೇರಿದ ಪುಸ್ತಕಗಳ, ಲೆಕ್ಕಗಳ, ದಸ್ತಾವೇಜುಗಳ, ದಾಖಲೆಗಳ, ನಗದಿನ, ಭದ್ರತೆಗಳ ಮತ್ತು ಇತರ ಸ್ವತ್ತುಗಳ ಸುಪರ್ದನ್ನು ಹೊಂದಿರುವವನು ಅಧಿಕೃತ ವ್ಯಕ್ತಿಗೆ ಅಂತಹ ಸುಪರ್ದನ್ನು ಬುದ್ದಿ ಪೂರ್ವಕವಾಗಿ ಒಪ್ಪಿಸದಿದ್ದಲ್ಲಿ ಅಥವಾ ಅಧಿನಿಯಮದ ಉಪಬಂಧಗಳಡಿ ನೀಡಲಾದ ಸಮನು ಅನ್ನು, ಕೋರಿಕೆಯನ್ನು ಅಥವಾ ಕಾನೂನು ಸಮ್ಮತ ಲಿಖಿತ ಆದೇಶವನ್ನು ಯುಕ್ತ ಕಾರಣವಿಲ್ಲದೆ ಪಾಲಿಸದಿದ್ದಲ್ಲಿ, ಅವನು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

5) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಮತ್ತು ಮುಖ್ಯ ಕಾರ್ಯನಿರ್ವಾಹಕನು 33ನೇ ಪ್ರಕರಣ ಅಥವಾ 64ನೇ ಪ್ರಕರಣದಡಿ, ಪ್ರಸಂಗಾನುಸಾರ, ಹಿಂದಿನ ವರ್ಷದ ತನ್ನ ಲೆಕ್ಕಪತ್ರಗಳನ್ನು ನಿಗದಿ ಪಡಿಸಿದ ಅವಧಿಯೊಳಗೆ ಪರಿಶೋಧನೆ ಮಾಡಿಸಲು ಮತ್ತು ಪರಿಶೋಧಿತ ಆರ್ಥಿಕ ತಃಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

6) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಮತ್ತು ಮುಖ್ಯಕಾರ್ಯನಿರ್ವಾಹಕನು ಸಂದರ್ಭಾನುಸಾರ 34ನೇ ಪ್ರಕರಣ ಅಥವಾ 64ಎ ದ ಪ್ರಕರಣದಡಿ ನಿಗದಿ ಪಡಿಸಿದ ಅವಧಿಯೊಳಗೆ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಹತ್ತುಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

7) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಮತ್ತು ಮುಖ್ಯಕಾರ್ಯ ನಿರ್ವಾಹಕನು ಪ್ರಕರಣ 26 ಮತ್ತು ಪ್ರಕರಣ 58 ರಡಿ ಅಗತ್ಯ ಪಡಿಸಿದಂತೆ ನಿಗದಿತ ಅವಧಿಯೊಳಗೆ ಚುನಾವಣೆಗಳನ್ನು ನಡೆಸಲುಬೇಕಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡಲು ವಿಫಲವಾದರೆ, ಅಂತಹ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯ ನಿರ್ವಾಹಕನು ಹತ್ತುಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳ ಕಾರಾಗೃಹವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

8) ಯಾವೊಬ್ಬ ವ್ಯಕ್ತಿಯು ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಗೆ ಪೂರ್ವದಲ್ಲಿ, ಚುನಾವಣೆ ನಡೆಯುವಾಗ ಅಥವಾ ಚುನಾವಣೆಯ ತರುವಾಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಸಿ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿರುವ ಭ್ರಷ್ಟ ಆಚರಣೆಯನ್ನು ಅಳವಡಿಸಿದರೆ ಅಥವಾ 39ಕ್ಕೆ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿರುವ ಚುನಾವಣಾ ಅಪರಾಧವನ್ನು ಎಸಗಿದರೆ, ಅವನು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾಗೃಹವಾಸದಿಂದ ಅಥವಾ ಇವರೆಡರಿಂದಲೂ ದಂಡಿತನಾಗತಕ್ಕದ್ದು.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ರೂಪಿಸಿದಾಗ, ಸಹಕಾರಿಗಳನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಯಂತ್ರಿಸುವ ಸಂಸ್ಥೆ ಎಂದು ಗುರುತಿಸಿದ್ದು, ನಿಬಂಧಕರ ನಿಯಂತ್ರಣದಿಂದ ಮುಕ್ತಿ ನೀಡುವುದು ಮತ್ತು ಚುನಾಯಿತ ಪ್ರತಿನಿಧಿಗಳೇ ನಿಯಂತ್ರಿಸಲು ಒಂದು ಚುನಾಯಿತ ಪ್ರತಿನಿಧಿಗಳೇ ಇರುವ "ಸಂಯುಕ್ತ ಸಹಕಾರಿ" ಎಂಬ ಶಾಸನಾತ್ಮಕ ಸಂಸ್ಥೆಯನ್ನು ಸೃಷ್ಟಿಸಿ, ನಿಬಂಧಕರು ಅಧಿಕಾರವನ್ನು ನೀಡಲಾಗಿದೆ. ಸ್ವಾಯತ್ತತೆ ಎಂದರೆ ಸ್ವೇಚ್ಚತೆಯಲ್ಲವೆಂದು ನಮೂದಿಸಲು ಕೆಲವು ನಿಯಂತ್ರಣಗಳ ಅವಶ್ಯಕ ಇದೆ ಎಂಬುದನ್ನು ಪರಿಗಣಿಸಿ, ಸಹಕಾರಿಗಳು, ಸಹಕಾರಿಯ ಮಂಡಳಿಗಳು, ಪದಾಧಿಕಾರಿಗಳು ಮತ್ತು ಸಹಕಾರಿ ಸಾಮಾನ್ಯ ಸಭೆಯಲ್ಲಿ ತೆಗೆದುಕೊಳ್ಳುವ ತೀರ್ಮಾನಗಳು, ಈ ಉದಾರೀಕೃತ ಕಾಯಿದೆಯನ್ನು ಸದುಪಯೋಗ ಮಾಡಬೇಕು ಮತ್ತು ಕಾಯಿದೆಯಲ್ಲಿ ನಿಗದಿ ಪಡಿಸಿದ ನೀತಿ ನಿಯಮಗಳನ್ನು ಪಾಲಿಸುವ ಜವಾಬ್ದಾರಿ ನಿಗದಿ ಪಡಿಸಲು ಕಲಂ.68ನ್ನು ಸೇರಿಸಿದೆ. ಕಾಯಿದೆಯಲ್ಲಿ ನಿಗದಿ ಪಡಿಸಿದ ಅವಕಾಶವನ್ನು ಉಲ್ಲಂಘನೆ ಮಾಡಿದರೆ ಅಥವಾ ಪಾಲಿಸದಿದ್ದರೆ ಅಂತಹ ಮಂಡಳಿ, ಪದಾಧಿಕಾರಿಗಳು ಮತ್ತು ನೌಕರರ ಮೇಲೆ ಈ ಕಲಂ ಅನ್ವಯ ಶಿಕ್ಷೆ ಮತ್ತು ದಂಡಗಳನ್ನು ನಿಗದಿ ಪಡಿಸಿದೆ. ಈ ಶಿಕ್ಷೆ ನಿಗದಿ ಪಡಿಸುವಾಗ ಅನುಸರಿಸುವ ನೀತಿ ನಿಯಮಗಳನ್ನು ವಿವರಿಸುವ ಅವಶ್ಯಕವಿದೆ ಎಂದು ತಿಳಿದು ಈ ಕೆಳಕಂಡಂತೆ ವಿವರಿಸಲಾಗಿದೆ.

**ಪ್ರಕರಣ ದಾಖಲಿಸುವುದು ಹೇಗೆ**

ಕಾಯಿದೆಯಡಿ ಮಂಡಳಿ, ಪದಾಧಿಕಾರಿಗಳು ಹಾಗೂ ನೌಕರರಿಗೆ ನಿಗದಿ ಪಡಿಸಿದ ನಿರ್ಬಂದಗಳು ಮುರಿದು ಕಾರ್ಯನಿರ್ವಹಿಸಿದ್ದರೆ, ಅಂತಹ ವ್ಯಕ್ತಿಗಳಿಗೆ ನಿಬಂಧಕರು/ಸಂಯುಕ್ತ ಸಹಕಾರಿ ಕಾರಣ ಕೇಳಿ ನೋಟೀಸ್ ನೀಡಿ, ವಿಚಾರಣೆ ಮಾಡಿ, ಅಪರಾಧವೆಸಗಿದ್ದರೆ, ಅಂತಹ ತೀರ್ಮಾನಕ್ಕೆ ಒಂದು ಅಪರಾಧ ಎಂದು ಆದೇಶಿಸಿ, ಸಂಬಂಧಪಟ್ಟ ವ್ಯಾಪ್ತಿಯ ಕ್ರಿಮಿನಲ್ ನ್ಯಾಯಾಲಯದ ಮುಂದೆ ಪ್ರಕರಣ ದಾಖಲಿಸಲು ಒಬ್ಬ ಅಧಿಕಾರಿಗೆ ಆದೇಶ ನೀಡಬೇಕು. ಅಂತಹ ಅಪರಾಧ, ಅಪರಾಧ ಶಾಸ್ತ್ರದ ನೀತಿ ನಿಯಮಗಳನ್ನು ವಿಚಾರಣೆ ಮಾಡಿ ಶಿಕ್ಷೆ ನೀಡುವ ಅಧಿಕಾರ ಕ್ರಿಮಿನಲ್ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ. ಅಂದರೆ ಯಾವುದೇ ವ್ಯಕ್ತಿ, ಪದಾಧಿಕಾರಿ, ನೌಕರ, ಮಂಡಳಿ ಸದಸ್ಯ ತಪ್ಪೆಸಗಿದ್ದಾನೆಂದು ಪ್ರಾಥಮಿಕ ವಿಚಾರಣೆ ಮಾಡಿ ತೀರ್ಮಾನಿಸುವ ಅಧಿಕಾರ ನಿಬಂಧಕರಿಗೆ ನೀಡಲಾದ ಜವಾಬ್ದಾರಿ.

1) ಪ್ರಥಮವಾಗಿ ಯಾವುದೇ ಒಂದು ಸಹಕಾರಿ/ಸಂಯುಕ್ತ ಸಹಕಾರಿ, ಪದಾಧಿಕಾರಿ, ನಿರ್ದೇಶಕ, ಮುಖ್ಯ ಕಾರ್ಯನಿರ್ವಾಹಕ/ನೌಕರ, ಕಾಯಿದೆ, ನಿಯಮ, ಉಪವಿಧಿ ಅನ್ವಯ ವಿವರ ನೀಡಲು/ದಾಖಲೆ ಸಲ್ಲಿಸಲು ನೋಟೀಸ್ ನೀಡಿದಾಗ, ಅದಕ್ಕೆ ಪೂರಕವಾಗಿ ಸ್ಪಂದಿಸದಿದ್ದರೆ. ಅಂದರೆ ಹಾಜರಾಗಲು, ದಾಖಲೆಸಲ್ಲಿಸಲು, ಸುಳ್ಳು ಮಾಹಿತಿ ನೀಡಿದರೆ, ತಪ್ಪು ಮಾಹಿತಿ ನೀಡಿದರೆ ಅಂತಹ ವ್ಯಕ್ತಿಗೆ ರೂ.5,000/–ರವರೆಗೆ ಜುಲ್ಮಾನೆ ಅಥವಾ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಅಥವಾ ಎರಡನ್ನು ವಿಧಿಸಲು ಅಧಿಕಾರ ನೀಡಲಾಗಿದೆ.

2) ಕಾಯಿದೆ/ನಿಯಮ/ಉಪವಿಧಿ ಅನ್ವಯ ನಿಷೇದಿಸಲಾದ ಕೃತ್ಯವನ್ನು ಮಾಡಲು ಸಹಕಾರಿ/ಸಂಯುಕ್ತ ಸಹಕಾರಿ ಪದಾಧಿಕಾರಿ,

ಮುಖ್ಯಕಾರ್ಯನಿರ್ವಾಹಕ/ನಿರ್ದೇಶಕ ನಿರ್ದೇಶನ ನೀಡಿದರೆ ಅಥವಾ ಮೋಸದ ಚಟುವಟಿಕೆ ಮಾಡಲು ತೊಡಗಿದರೆ, ಸಹಕಾರಿ ಸೊತ್ತನ್ನು ದುರುಪಯೋಗ ಮಾಡಿಕೊಂಡರೆ, ವಂತಿಗೆ ಪಾವತಿಸಲು ವಿಫಲನಾದರೆ ಮತ್ತು ಸಹಕಾರಿ ಆಸ್ತಿಯನ್ನು ದುರುಪಯೋಗ ಮಾಡಿಕೊಂಡರೆ, ಮಂಡಳಿ ಚುನಾವಣೆಯಲ್ಲಿ ಭ್ರಷ್ಟಚಾರ ವೇಸಗಿದರೆ, ಲೆಕ್ಕತಪಾಸಣೆಗೆ ಮಾಹಿತಿ ನೀಡದಿದ್ದರೆ, ಸಹಕಾರಿಯ ರಚನೆ, ವ್ಯವಸ್ಥಾಪನೆ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಕರ್ತವ್ಯ ನಿರ್ವಹಿಸದಿದ್ದರೆ, ರೂ.5000/– ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡು ವರ್ಷಗಳ ಕಾರಾಗೃಹವಾಸ ಅಥವಾ ಎರಡನ್ನು ವಿಧಿಸುವ ಅಧಿಕಾರ ನ್ಯಾಯಕ್ಕೆ ಇರತಕ್ಕದ್ದು.

3) ಯಾವುದೇ ಉದ್ಯೋಗದಾತ, ಸಹಕಾರಿ ನೀಡಿದ ಸಾಲವನ್ನು ಅವನ ಸಂಬಳದಲ್ಲಿ ಕಟಾಯಿಸಿ, ಸಹಕಾರಿಗೆ 14 ದಿನಗಳಲ್ಲಿ ಜಮಾ ಮಾಡದಿದ್ದರೆ, ಅಂತಹ ಉದ್ಯೋಗದಾತನಿಗೆ ರೂ.5,000/– ಜುಲ್ಮಾನೆ ಅಥವಾ ಆರು ತಿಂಗಳು ಸೆರೆವಾಸ ಅಥವಾ ಎರಡನ್ನು ನೀಡಲು ಅವಕಾಶ ಕಲ್ಪಿಸಿದೆ. ಇದರಲ್ಲಿ ಪರಿಗಣಿಸಬೇಕಾದ ಬಹುಮುಖ್ಯ ವಿಷಯವೆಂದರೆ, ಉದ್ಯೋಗದಾತ ಸಹಕಾರಿಯ ಸದಸ್ಯನಲ್ಲದಿದ್ದರೂ, ಅಂತಹ ವ್ಯಕ್ತಿ ಸಹಕಾರಿ ಸದಸ್ಯನಿಗೆ ಸಾಲ ನೀಡುವಾಗ ಸಹಕಾರಿಗೆ ಬರೆದುಕೊಟ್ಟ ಪ್ರಮಾಣ ಪತ್ರದಲ್ಲಿ ಸಂಬಳದಲ್ಲಿ ಮುರಿದು ಪಾವತಿ ಮಾಡುತ್ತೇನೆ ಎಂದು ಬರೆದು ಕೊಟ್ಟಿದ್ದರೆ ಮಾತ್ರ. ಈ ನೀತಿ ಅನ್ವಯವಾಗುತ್ತದೆ. ಅಂದರೆ ಉದ್ಯೋಗದಾತ ಸಹಕಾರಿಗೆ ಸಹಕಾರಿ ಸದಸ್ಯನಿಗೆ ಸಾಲ ನೀಡಿದರೆ, ಅವನ ಸಂಬಳದಲ್ಲಿ ಮುರಿದುಕೊಳ್ಳಲು ಮುಚ್ಚಳಿಕೆ ಬರೆದು ಕೊಟ್ಟಿರಬೇಕು.

4) ಸಹಕಾರಿ/ಸಂಯುಕ್ತ ಸಹಕಾರಿ ಪದಾಧಿಕಾರಿ, ಮುಖ್ಯಕಾರ್ಯನಿರ್ವಾಹಕ, ನಿರ್ದೇಶಕ ಅಥವಾ ನೌಕರ ಸಹಕಾರಿಗೆ ಸಂಬಂಧಪಟ್ಟ ದಾಖಲೆ ಪುಸ್ತಕಗಳು, ನಗದು ಅಥವಾ ಭದ್ರತೆಯನ್ನು ನೋಟೀಸ್/ಸಮನ್ಸ್ ನೀಡಿ ಅದನ್ನು ಬುದ್ಧಿ ಪೂರ್ವಕವಾಗಿ ಹಾಜರ್ ಪಡಿಸಲು ವಿಫಲನಾದರೆ ಅಂತಹ ವ್ಯಕ್ತಿಗೆ ರೂ.5,000/– ಜುಲ್ಮಾನೆ ಅಥವಾ (6) ತಿಂಗಳು ಕಾರಾ ಗೃಹವಾಸ ಅಥವಾ ಎರಡನ್ನು ವಿಧಿಸುವ ಅವಕಾಶ ಕಲ್ಪಿಸಿದೆ.

5) ಸಹಕಾರಿ/ಸಂಯುಕ್ತ ಸಹಕಾರಿ, ಲೆಕ್ಕ ತಪಾಸಣೆ ಮಾಡಿಸಲು ಮತ್ತು ಲೆಕ್ಕ ತಪಾಸಕನಿಂದ ಪ್ರತಿವರ್ಷ ಸೆಪ್ಟೆಂಬರ್ 1ನೇ ತಾರಿಖಿನೊಳಗೆ ವರದಿ ಪಡೆದು, ಅನುಪಾಲನಾ ವರದಿ ಜೊತೆ, ಸಾಮಾನ್ಯ ಸಭೆ ಒಪ್ಪಿಗೆ ಪಡೆಯಲು ವಿಫಲವಾದ ಪ್ರತಿಯೊಬ್ಬ ಮಂಡಳಿ ನಿರ್ದೇಶಕ/ ಮುಖ್ಯಕಾರ್ಯನಿರ್ವಾಹಕನಿಗೆ ರೂ.5,000/– ಜುಲ್ಮಾನೆ ಅಥವಾ ಆರು ತಿಂಗಳು ಜೈಲು ವಾಸ ಅಥವಾ ಎರಡರಿಂದಲೂ ದಂಡಿಸುವ ಅವಕಾಶ ಕಲ್ಪಿಸಿದೆ.

6) ಸಹಕಾರಿ/ಸಂಯುಕ್ತ ಸಹಕಾರಿ ನಿಬಂಧಕರಿಗೆ/ಸಂಯುಕ್ತ ಸಹಕಾರಿಗೆ ಕಲಂ.34 ಮತ್ತು 64ಎ ಅಡಿ ನಿಗದಿ ಪಡಿಸಿದ ವರದಿ ಸಲ್ಲಿಸಲು ವಿಫಲನಾದ ಪ್ರತಿಯೊಬ್ಬ ಮಂಡಳಿ ಸದಸ್ಯನು ಮತ್ತು ಮುಖ್ಯಕಾರ್ಯನಿರ್ವಾಹಕನಿಗೆ ವ್ಯಯಕ್ತಿಕರಾಗಿ ರೂ.10,000/– ಜುಲ್ಮಾನೆ ಅಥವಾ ಎರಡು ವರ್ಷ ಕಾರಾಗೃಹ ವಾಸ ಅಥವಾ ಎರಡರಿಂದಲೂ ದಂಡಿಸುವ ಅವಕಾಶ ಕಲ್ಪಿಸಿದೆ.

7) ಸಹಕಾರಿ/ಸಂಯುಕ್ತ ಸಹಕಾರಿಯ ಮಂಡಳಿ ಸದಸ್ಯರು/ಮುಖ್ಯಕಾರ್ಯನಿರ್ವಾಹಕ ಕಲಂ.26, ಕಲಂ.58 ರಡಿ ಮಂಡಳಿ ಚುನಾವಣೆ ನಡೆಸಲು ಮಾಹಿತಿ, ದಾಖಲೆ, ನೆರವು ನೀಡದಿದ್ದರೆ ಅಂತಹ ಪ್ರತಿಯೊಬ್ಬ ಮಂಡಳಿ ನಿರ್ದೇಶಕ/ಮುಖ್ಯಕಾರ್ಯನಿರ್ವಾಹಕನಿಗೆ ರೂ.10,000/– ಜುಲ್ಮಾನೆ ಅಥವಾ ಆರು ತಿಂಗಳು ಕಾರಾ ಗೃಹವಾಸ ಅಥವಾ ಎರಡನ್ನು ವಿಧಿಸುವ ಅಧಿಕಾರ ನೀಡಲಾಗಿದೆ.

8) ಪ್ರತಿಯೊಬ್ಬ ವ್ಯಕ್ತಿ ಸಹಕಾರಿ/ಸಂಯುಕ್ತ ಸಹಕಾರಿ ಚುನಾವಣೆ ಪೂರ್ವದಲ್ಲಿ, ಚುನಾವಣೆ ಸಮಯದಲ್ಲಿ ಅಥವಾ ಚುನಾವಣೆ ತರುವಾಯ ಭ್ರಷ್ಟಚಾರ ನಡೆಸಿದರೆ ಅಂತಹ ಚುನಾವಣಾ ಅಪರಾಧಕ್ಕೆ ರೂ.10,000/– ಜುಲ್ಮಾನೆ ಅಥವಾ ಎರಡು ವರ್ಷ ಕಾರಾ ಗೃಹವಾಸ ಅಥವಾ ಎರಡನ್ನು ವಿಧಿಸಿ ದಂಡಿಸುವ ಅವಕಾಶ ಕಲ್ಪಿಸಲಾಗಿದೆ.

ಈ ಶಿಸ್ತು ಕ್ರಮಕ್ಕೆ ಪ್ರಮುಖ ಕಾರಣವೆಂದರೆ, ಸಹಕಾರಿ ಮಂಡಳಿಗೆ ಸ್ವಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ನೀಡಿದಾಗ (97ನೇ ಸಂವಿದಾನ ತಿದ್ದುಪಡಿ ನಂತರ (2011) ದಂಡಗಳನ್ನು ವಿಸ್ತರಿಸಲಾಗಿದೆ.) ಸ್ವಾಯತ್ತತೆ ಜೊತೆ ಜವಾಬ್ದಾರಿ ನಿಗದಿ ಪಡಿಸಿದ್ದು. ಪ್ರತಿಯೊಂದು ಮಂಡಳಿ, ಪದಾಧಿಕಾರಿ, ಮುಖ್ಯಕಾರ್ಯಾನಿರ್ವಾಹಕ ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಕಾಯಿದೆ, ನಿಯಮ ಮತ್ತು ಉಪವಿಧಿಗಳಲ್ಲಿ ನಿಗದಿ ಪಡಿಸಿದೆ. ಇದು ಸ್ವಯಂ ನಿಯಂತ್ರಣದ ಭಾಗ. ಆದ್ದರಿಂದ ಪ್ರತಿಯೊಬ್ಬ ನಿರ್ದೇಶಕ, ಪದಾಧಿಕಾರಿ, ಮುಖ್ಯಕಾರ್ಯನಿರ್ವಾಹಕ ಮತ್ತು ಸಹಕಾರಿಯ ನೌಕರರು ತಮ್ಮ ಜವಾಬ್ದಾರಿ ನಿರ್ವಹಿಸದಿದ್ದರೆ, ದಂಡ ಮತ್ತು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿದೆ. (1959ರ ಕಾಯಿದೆ ಕಲಂ.109 ರಡಿ 22 ಉಪ ಕಲಂಗಳಿದ್ದ, ಅವುಗಳಲ್ಲಿ ಕಲಂ.109(1) (1ಎ)(2)(5)(7)(8)(13) ಮತ್ತು (14) ನ ಉಪಕಲಂಗಳ ಅಪರಾದಗಳಿಗೆ ರೂ. ಒಂದು ಸಾವಿರ ರೂ ದಂಡ ನೀಡಿ ರಾಜಿ ಮಾಡಿಕೊಳ್ಳುವ ಅಧಿಕಾರವನ್ನು ಕಲಂ.110ಎ ಅಡಿ ನಿಬಂಧಕರಿಗೆ ನೀಡಿದೆ. ಆದರೆ ಅಂತಹ ರಾಜಿ ಅವಕಾಶವನ್ನು ಸೌಹಾರ್ದ ಕಾಯಿದೆಯಲ್ಲಿ ಸೇರಿಸಲಾಗಿಲ್ಲ.)

ಇದರಿಂದ ಗಮನಿಸಬೇಕಾದ ಪ್ರಮುಖ ವ್ಯತ್ಯಾಸವೆಂದರೆ ಸೌಹಾರ್ದ ಕಾಯಿದೆ ರಚಿಸುವ ವ್ಯಕ್ತಿಗಳು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಾರೆ

ಮತ್ತು ಅವರಿಗೆ ನೀಡಿದ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣವನ್ನು ಸದುಪಯೋಗ ಪಡಿಸಿಕೊಳ್ಳುತ್ತಾರೆಂಬ ನಂಬಿಕೆಯಿಂದ. ಅದಕ್ಕಾಗಿ ಸಹಕಾರಿ/ಸಂಯುಕ್ತ ಸಹಕಾರಿ, ಈ ಉದಾರೀಕೃತ ಸಹಕಾರಿ ಕಾಯಿದೆಯ ಉಪಯೋಗ ಪಡೆಯಲು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕು.

**ಅಪರಾಧಗಳು ಮತ್ತು ದಂಡಗಳಿಗೆ ಸಂಬಂಧಪಟ್ಟ ಪ್ರಕರಣಗಳ ಕ್ರಮಕ್ಕೆ ಚೆಕ್‌ಲಿಸ್ಟ್ :**

1) ಕಾಯಿದೆ/ನಿಯಮ/ಉಪವಿಧಿ ಉಲ್ಲಂಘನೆ ಬಗ್ಗೆ ವರದಿ. --- ಪರಿವೀಕ್ಷಣೆ/ತಪಾಸಣೆ/ಲೆಕ್ಕತಪಾಸಣೆ

2) ಸಂಬಂಧಪಟ್ಟ ವ್ಯಕ್ತಿಗಳ ಹೇಳಿಕೆ ಪಡೆಯಲಾಗಿದೆಯೇ? --- ಹೌದು/ಇಲ್ಲ

3) ವರದಿಯನ್ನು ಸಹಕಾರಿಯ ದಾಖಲೆಗಳನ್ನ ಪೂರಕ ದಾಖಲೆ ಪಡೆಯಲಾಗಿದೆಯೇ? --- ಹೌದು/ಇಲ್ಲ

4) ಮೇನ್ನೋಟಕ್ಕೆ ಅಪರಾದವೆಂದು ಕಂಡು ಬರುತ್ತಿದೆಯೇ? --- ಹೌದು/ಇಲ್ಲ

5) ಅಪರಾದ ಮಾಡಲಾಗಿದೆ ಎಂದು ತೀರ್ಮಾನಕ್ಕೆ ಕಾಯಿದೆ

ಕಲಂ..68ರ ಯಾವ ಉಪಕಲಂ ನಲ್ಲಿ ಅಪರಾದವಾಗಿದೆ. --- 1/2/3/4/5/6/7/8/9

6) ಜವಾಬ್ದಾರರಾದ ವ್ಯಕ್ತಿಗಳ ಹೆಸರು ಮತ್ತು ಹುದ್ದೆ ವಿಳಾಸ ಲಭ್ಯವಿದೆಯೇ? --- ಹೌದು/ಇಲ್ಲ

7) ಪೀಠಾಧಿಕಾರಿಗಳು ನೋಟೀಸ್ ನೀಡಲು ತೀರ್ಮಾನಿಸಿದ್ದಾರೆಯೇ? --- ಹೌದು/ಇಲ್ಲ

**ವಿಚಾರಣೆ ಪ್ರಾರಂಭ :**

1) ವಿಚಾರಣೆಗೆ ದಿನಾಂಕ ವೇಳೆ ನಿಗದಿ ಪಡಿಸಿದ ದಿನಾಂಕ ---

2) ಹಾಜರಿದ್ದ ಕಕ್ಷಿದಾರರಿಗೆ ನೋಟೀಸ್ ಜಾರಿಯಾಗಿದೆಯೇ? --- ಹೌದು/ಇಲ್ಲ

3) ಹಾಜರಿದ್ದ ವ್ಯಕ್ತಿಗಳ ಸಹಿ --- ಹೌದು/ಇಲ್ಲ

4) ದಾಖಲೆ/ಹೇಳಿಕೆ ಸಲ್ಲಿಸಿದ್ದರೆಯೇ? --- ಹೌದು/ಇಲ್ಲ

5) ಪಾಟಿ ಸವಾಲಿನ ಅವಕಾಶ ನೀಡಲಾಗಿದೆಯೇ? --- ಹೌದು/ಇಲ್ಲ

6) ಹೇಳಿಕೆ ಮತ್ತು ದಾಖಲೆಗಳ ಅಪರಾದ ವೆಸಗಿದ್ದನ್ನು ದೃಡೀಕರಿಸುತ್ತದೆಯೇ? --- ಹೌದು/ಇಲ್ಲ

7) ಅಪರಾದ ಮಾಡಲಾಗಿದೆ ಎಂದು ಪೀಠ ತೀರ್ಮಾನಿಸಿದೆಯೇ? --- ಹೌದು/ಇಲ್ಲ

8) ಪೀಠವು ತೀರ್ಮಾನಕ್ಕೆ ಬಂದ ನಂತರ ಕ್ರಿಮಿನಲ್ ನ್ಯಾಯಕ್ಕೆ ವರದಿ

ನೀಡಲು ಆದೇಶಿಸಿದೆಯೇ? --- ಹೌದು/ಇಲ್ಲ

9) ಕ್ರಿಮಿನಲ್ ನ್ಯಾಯಾಲಯದಲ್ಲಿ ತೀರ್ಮಾನವಾಗಿ, ರುಜುವಾತಾದ ವರದಿ

ಬಂದಿದೇಯೇ? --- ಹೌದು/ಇಲ್ಲ

10) ಕ್ರಿಮಿನಲ್ ಪ್ರಕರಣ ರುಜುವಾತಾಗಿಲ್ಲವೆಂದು ಬಿಡುಗಡೆ ಆದೇಶಿಸಿದೆಯೇ? --- ಹೌದು/ಇಲ್ಲ

11) ಆರೋಪ ರುಜುವಾತಾದ ಆದೇಶ ನೀಡಲಾಗಿದೆಯೇ? --- ಹೌದು/ಇಲ್ಲ

12) ದಂಡದ ಪ್ರಮಾಣ ವೇಷ್ಟು?

13) ಕಾರಾಗೃಹ ವಾಸಕ್ಕೆ ಆದೇಶಿಸಲಾಗಿದೆಯೇ? --- ಹೌದು/ಇಲ್ಲ

14) ದಂಡ ಮತ್ತು ಕಾರಾ ಗೃಹವಾಸ, ಎರಡನ್ನು ಆದೇಶಿಸಲಾಗಿದೆಯೇ? --- ಹೌದು/ಇಲ್ಲ

# ಅಧ್ಯಾಯ – 7

# ಸಂಯುಕ್ತ ಸಹಕಾರಿ ರಚನೆ

**ಕಲಂ.53 : ಸಂಯುಕ್ತ ಸಹಕಾರಿಯ ರಚನೆ, ಪ್ರಕಾರ್ಯಗಳು ಹಾಗೂ ನಿರ್ವಹಣೆ.**

(1) ರಾಜ್ಯದಲ್ಲಿ ಒಂದು ಸಂಯುಕ್ತ ಸಹಕಾರಿ ಇರತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಎಲ್ಲ ಸಹಕಾರಿಗಳು ಅಂಥ ಸಂಯುಕ್ತ ಸಹಕಾರಿಯ ಸದಸ್ಯರಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಐವತ್ತು ಸಹಕಾರಿಗಳ ನೋಂದಣಿಯ ತರುವಾಯ ರಿಜಿಸ್ಟ್ರಾರನು ಪ್ರಸ್ತಾವಿತ ಸಂಯುಕ್ತ ಸಹಕಾರಿಯ ಉಪವಿಧಿಗಳನ್ನು ರೂಪಿಸತಕ್ಕದ್ದು ಹಾಗೂ ಸಂಯುಕ್ತ ಸಹಕಾರಿ ಹಾಗೂ ಅದರ ಉಪವಿಧಿಗಳ ನೋಂದಣಿಗೆ ಕ್ರಮಕೈಗೊಳ್ಳತಕ್ಕದ್ದು;

ಪರಂತು, ಮೊದಲನೆಯ ಮಂಡಳಿಯು ಅಧಿಕಾರವನ್ನು ಸ್ವೀಕರಿಸುವವರೆಗೆ ರಿಜಿಸ್ಟ್ರಾರನು ಈ ಅಧಿನಿಯಮದ ಅಡಿಯಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರವನ್ನು ಚಲಾಯಿಸತಕ್ಕದ್ದು ಹಾಗೂ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಸಂಯುಕ್ತ ಸಹಕಾರಿಯು ನೋಂದಾಯಿತವಾದಲ್ಲಿ ರಿಜಿಸ್ಟ್ರಾರನು ತಾನು ಸಹಿ ಮಾಡಿದ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಹಾಗೂ ಅದು ಸಂಯುಕ್ತ ಸಹಕಾರಿಯು ಈ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ನೋಂದಾಯಿತವಾಗಿರುವ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ಸಂಯುಕ್ತ ಸಹಕಾರಿಯು, ಸ್ವತ್ತನ್ನು ಧಾರಣ ಮಾಡುವ, ಕರಾರುಗಳನ್ನು ಮಾಡಿಕೊಳ್ಳುವ, ದಾವೆಗಳನ್ನು ಹಾಗೂ ಇತರ ಕಾನೂನು ವ್ಯವಹರಣೆಗಳನ್ನು ಹೂಡುವ ಹಾಗೂ ಪ್ರತಿವಾದಿಸುವ ಹಾಗೂ ಅದು ರಚಿತವಾದ ಉದ್ದೇಶಗಳಿಗೆ ಅಗತ್ಯವಿರುವ ಎಲ್ಲಾ ಕಾರ್ಯಗಳನ್ನು ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಹಾಗೂ ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು.

(5) ಸಂಯುಕ್ತ ಸಹಕಾರಿಯು, ಅದು ನೋಂದಾಯಿತವಾದೊಡನೆಯೇ, ರಿಜಿಸ್ಟ್ರಾರನು ರಚಿಸಿದ ಉಪವಿಧಿಗಳನ್ನು ಅಳವಡಿಸಿಕೊಳ್ಳತಕ್ಕದ್ದು. ಉಪವಿಧಿಗಳ ಯಾವುದೇ ತಿದ್ದುಪಡಿಗಳು, 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಇರತಕ್ಕದ್ದು ಹಾಗೂ ಉಪವಿಧಿಗಳ ಅಂಥ ತಿದ್ದುಪಡಿಯು, ಅದನ್ನು [ರಿಜಿಸ್ಟ್ರಾರನು ಅನುಮೋದಿಸಿದ] ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು.

(6) *****

(7) ಸಂಯುಕ್ತ ಸಹಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳಿವಳಿಕೆ ನೀಡುವುದು ಮತ್ತು ಸಹಕಾರ ತತ್ತ್ವಗಳನ್ನು ಪ್ರಚಾರ ಮಾಡುವುದು;

(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು;

(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು;

[(ಇ) *****]

(ಎಫ್) ಅಗತ್ಯವಿರುವಾಗ ಮಂಡಳಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;

(ಜಿ) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;

(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;

(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು;

(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;

(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;

(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು;

(ಎಂ) ಸಹಕಾರಿ ವಿಚಾರ ಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

(ಎನ್) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು;

(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್‌ನಂತೆ ವರ್ತಿಸುವುದು;

(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಸುವುದು;

(ಕ್ಯೂ) ಗೊತ್ತು ಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;

(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;

(ಎಸ್) 30ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;

[(ಟಿ) *****]

(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು;

ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(8) ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ 23ನೇ ಪ್ರಕರಣದ ಉಪಬಂಧಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(9) ಸದಸ್ಯ ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿಯು ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯದ [ಡೆಲಿಗೇಟ್] ಆಗಿರತಕ್ಕದ್ದು. ಯಾವುದೇ ಕಾರಣಕ್ಕಾಗಿ ಸಭಾಪತಿ ಅಥವಾ ಅಧ್ಯಕ್ಷನು ಪ್ರತಿನಿಧಿಸಲು ಅಸಮರ್ಥನಾದರೆ, ಆತನು ಮಂಡಳಿಯ ಯಾರೇ ನಿರ್ದೇಶಕನನ್ನು [ಡೆಲಿಗೇಟ್] ಆಗಿರಲು ನಾಮ ನಿರ್ದೇಶಿಸಬಹುದು. ಆ [ಡೆಲಿಗೇಟ್]ನು, ಸದಸ್ಯ ಸಹಕಾರಿಯ ಪದದಲ್ಲಿರುವವರೆಗೂ ಸಂಯುಕ್ತ ಸಹಕಾರಿಯಲ್ಲಿ ಸಹಕಾರಿಯನ್ನು ಪ್ರತಿನಿಧಿಸುವುದು ಮುಂದುವರಿಯತಕ್ಕದ್ದು.

**ಕಲಂ.53ಬಿ : ನಿರ್ದೇಶಕರುಗಳ ಅನರ್ಹತೆ :**

ಸಂಯುಕ್ತ ಸಹಕಾರಿಯು ಅಧಿನಿಯಮ, ನಿಯಮ ಅನುಸಾರವಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಸೂಕ್ತ ವಿಚಾರಣೆಯ ನಂತರ ಅಂಥ ವಿಫಲತೆಗೆ ಕಾರಣರಾದವರಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡಿದ ತರುವಾಯ ರಿಜಿಸ್ಟ್ರಾರನು ಅವರನ್ನು ಅನರ್ಹಗೊಳಿಸತಕ್ಕದ್ದು;

ಪರಂತು, ಶೂನ್ಯಾವಸ್ಥೆವುಂಟಾದಲ್ಲಿ ಅಧಿನಿಯಮದ 38ಎ ಪ್ರಕರಣವನ್ನು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

**ಕಲಂ.54 : ಸಂಯುಕ್ತ ಸಹಕಾರಿಯ ಮಂಡಳಿ :**

(1) ಮಂಡಳಿಯು ಸಂಯುಕ್ತ ಸಹಕಾರಿಯ ವ್ಯವಹಾರ ನಿರ್ವಹಣೆಯ ನಿರ್ದೇಶನ ಮತ್ತು ನಿಯಂತ್ರಣದ ಹೊಣೆ ಹೊಂದಿರತಕ್ಕದ್ದು.

(2) ಸಂಯುಕ್ತ ಸಹಕಾರಿಯ ಮಂಡಳಿಯಲ್ಲಿ ನಿರ್ದೇಶಕರ ಸಂಖ್ಯೆಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತು ಪಡಸಿ ಇಪ್ಪತ್ತೊಂದಕ್ಕೆ

ಮೀರತಕ್ಕದ್ದಲ್ಲ:

ಪರಂತು, ಸಹಕಾರಿಯು ಬ್ಯಾಂಕಿಂಗ್ ವ್ಯವಸ್ಥಾಪನೆ, ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಳಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂಥ ಸದಸ್ಯರ ಅಧಿಕಾರವುಳ್ಳವರಾಗಿ ಸಂಯುಕ್ತ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ;

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು, ಮೇಲೆ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಎರಡಕ್ಕೆ ಮೀರತಕ್ಕದ್ದಲ್ಲ.

ಮತ್ತೂ ಪರಂತು, ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರೂ (Functional Directors) ಸಹ ಆಡಳಿತ ಮಂಡಳಿಯ ಸದಸ್ಯರಾಗಿರತಕ್ಕದ್ದು ಹಾಗೂ ಮೇಲೆ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಸದಸ್ಯರನ್ನು ಹೊರತುಪಡಿಸತಕ್ಕದ್ದು.

(3) ಸಂಯುಕ್ತ ಸಹಕಾರಿಯ ಮಂಡಳಿಯ ಪದಾವಧಿಯು (ಚುನಾವಣೆ ನಡೆದ) ದಿನಾಂಕದಿಂದ ಐದು ವರ್ಷ ಗಳಾಗಿರತಕ್ಕದ್ದು.

(4) ಮುಖ್ಯಕಾರ್ಯನಿರ್ವಾಹಕನು ಮಂಡಳಿಯ ಪದನಿಮಿತ್ತ ನಿರ್ದೇಶಕನಾಗಿರತಕ್ಕದ್ದು ಹಾಗೂ ಪದಾಕಾರಿಗಳ ಚುನಾವಣೆಯಲ್ಲಿ ಮತದಾನದಹಕ್ಕನ್ನು ಹೊಂದಿರತಕ್ಕದ್ದಲ್ಲ.

**ಕಲಂ.55 : ಚುನಾಯಿತನಾಗಲು ಅಥವಾ ನಿರ್ದೇಶಕನಾಗಿ ಮುಂದುವರಿಯಲು ಅನರ್ಹತೆ :**

(1) ಒಬ್ಬ ವ್ಯಕ್ತಿಯು

**(i)** ಯಾವುದೇ ಸಮಯದಲ್ಲಿ ಸದಸ್ಯನಾಗಿ ಮತದಾನ ಮಾಡುವ ಅಥವಾ ಸದಸ್ಯನಾಗಿ ಮುಂದುವರಿಯುವ ಹಕ್ಕು ಕಳೆದುಕೊಂಡಿದ್ದರೆ; ಅಥವಾ

**(ii)** ಚುನಾವಣೆಯ ನಿಕಟಪೂರ್ವದ ಕನಿಷ್ಠ ಎರಡು ವರ್ಷಗಳ ಅವಧಿಯವರೆಗೆ ಸಂಯುಕ್ತ ಸಹಕಾರಿಯ ಮತದಾರ ಸದಸ್ಯನಾಗಿರದಿದ್ದರೆ; ಅಥವಾ

**(iii)** ಸಂಯುಕ್ತ ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾದ ಯಾವುದೇ ಅನರ್ಹತೆಯನ್ನು ಹೊಂದಿದ್ದರೆ; ಅಥವಾ

**(iv)** ಮಂಡಳಿಯ ಅಥವಾ ಸಾಮಾನ್ಯ ಸಭೆಯ ಮೂರು ನಿರಂತರ ಸಭೆಗಳಿಗೆ ಅನಧಿಕೃತವಾಗಿ ಗೈರುಹಾಜರಾದರೆ; ಅಥವಾ

**(v)** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃ ಪತನವನ್ನೊಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದರೆ.

– ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರಿಯಲು ಅನರ್ಹ ನಾಗಿರತಕ್ಕದ್ದು.

(2) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂಥ ಅನರ್ಹತೆಗಳ ಜೊತೆಗೆ ನಿರ್ದೇಶಕರು, ಸಂಯುಕ್ತ ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ನಿರ್ದೇಶಕರಾಗಿ ತಮ್ಮ ಪದಾವಧಿಯಲ್ಲಿ–

(ಎ) ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯು ಮುಕ್ತಾಯವಾಗುವುದರೊಳಗಾಗಿ ಚುನಾವಣೆ ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ;

(ಬಿ) ಪ್ರತಿವರ್ಷ ಸೆಪ್ಟೆಂಬರ್ ತಿಂಗಳಿನ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಅಥವಾ ನಿರ್ದಿಷ್ಟ ಸಮಯದೊಳಗಾಗಿ ಕೋರಲಾದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ;

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯೊಂದಿಗೆ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ;

(ಡಿ) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 64ಎ ಪ್ರಕರಣದಡಿ ರಿಜಿಸ್ಟ್ರಾರನಿಗೆ ವಿಧ್ಯುಕ್ತ ವರದಿಯನ್ನು ಸಲ್ಲಿಸದಿದ್ದರೆ;

(ಇ) ಗುರುತರ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ;

– ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು.

(3) ಮಂಡಳಿಯ ಸದಸ್ಯನು, ಈ ಅಧಿನಿಯಮದಲ್ಲಿ ನಮೂದಿಸಿದ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿದ್ದನೇ ಅಥವಾ ಪಟ್ಟಿರುವನೇ ಎಂಬ ಪ್ರಶ್ನೆ ಉದ್ಭವಿಸಿದಲ್ಲಿ ರಿಜಿಸ್ಟ್ರಾರನು, ಸ್ವಪ್ರೇರಣೆಯಿಂದ ಅಥವಾ ತನಗೆ ಸಲ್ಲಿಸಿದ ವರದಿಯ ಮೇಲೆ, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು.

(4) ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು (2)ನೇ ಉಪಪ್ರಕರಣದ ಖಂಡ (ಎ), (ಬಿ), (ಸಿ), (ಡಿ) ಮತ್ತು (ಇ) ರಲ್ಲಿನ ಯಾವುದೇ ಅನರ್ಹತೆಗೆ ಒಳಗಾದಾಗ. [****], ಯಥೋಚಿತ ವ್ಯತ್ಯಾಸಗಳೊಂದಿಗೆ, ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು.

ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಸಂಸ್ಥೆ. ಅಂದರೆ ಕಾಯಿದೆಯಲ್ಲಿಯೇ ಸೃಷ್ಟಿಯಾದ, ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುವ, ನಿಬಂಧಕರ ಹಲವು ಅಧಿಕಾರಗಳನ್ನು ಜಾರಿ ಮಾಡಲು ಸೃಷ್ಟಿಸಿದ ಒಂದು ಸಂಸ್ಥೆ. (ಈ ಸಂಸ್ಥೆ ಶಾಸನಾತ್ಮಕ ವಾಗಿದ್ದರೂ, ಪ್ರಾರಂಭದಲ್ಲಿ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂನಿಯಂತ್ರಣವನ್ನು ಸ್ವೇಚ್ಛಾಚಾರವೆಂದು ತಿಳಿಯದಂತೆ, ಈ ಸಂಸ್ಥೆಯನ್ನು ಸೌಹಾರ್ದ ಕಾಯಿದೆಯಲ್ಲಿ ನೋಂದಾಯಿಸಲು ಮತ್ತು ಉಪವಿಧಿಗಳನ್ನು ನೋಂದಾಯಿಸಲು ಸೇರಿಸಲಾಗಿದೆ. ಪ್ರಾರಂಭದಲ್ಲಿ ನಿಬಂಧಕರೇ ಈ ಸಂಸ್ಥೆಯ ಮುಖ್ಯಸ್ತರೆಂದು ರೂಪಿಸಿ, ರಚಿಸಿದ ಕಾಯಿದೆ. ಚುನಾಯಿತ ಮಂಡಳಿ ಬರುವ ವರೆವಿಗೆ ಉಪವಿಧಿಗಳು ರಚಿಸಿ, ನೋಂದಾಯಿಸಿದಾಗ, ಅದು ಚುನಾಯಿತ ಪ್ರತಿನಿಧಿಗಳ ರಚಿಸಿದ ಉಪವಿಧಿಗಳಲ್ಲಿ ಹಾಗೂ ಅದು ಅಧಿಕಾರಿಗಳಲ್ಲಿ ರಚಿಸಿದ ಉಪವಿಧಿಗಳನ್ನು, ದೊಡ್ಡ ಪ್ರಮಾಣದ ತಿದ್ದುಪಡಿಗಳನ್ನು ಚುನಾಯಿತ ಪ್ರತಿನಿಧಿಗಳು ಮಾಡದೇ ಇರುವುದರಿಂದ, ನಿಬಂಧಕರು ರಚಿಸಿದ ಉಪವಿಧಿಗಳನ್ನು ಚುನಾಯಿತ ಮಂಡಳಿ ಒಪ್ಪಿದೆ ಎಂದು ಅರ್ಥೈಸಬೇಕು.

ಸಂಯುಕ್ತ ಸಹಕಾರಿಯ ರಚನೆ ಅಭ್ಯಾಸ ಮಾಡುವಾಗ ಕಾಯಿದೆ ಕಲಂ.4ನ್ನು ಉಲ್ಲೇಖಿಸಲೇಬೇಕು. ಅದೇಂದರೆ

ನೋಂದಣಿ ಮಾಡಬಹುದಾದ ಸಹಕಾರಿಗಳು :–

(1) ಯಾವುದೇ ಸಹಕಾರಿಯು –

(ಎ) ತನ್ನ ಕಾರ್ಯಾಚರಣೆ ಪ್ರದೇಶದಲ್ಲಿನ ಸದಸ್ಯರ ಹಿತಾಸಕ್ತಿಗಾಗಿ ದುಡಿಯುವುದೇ ತನ್ನ ಮುಖ್ಯ ಉದ್ದೇಶವಾಗಿದ್ದ ಹೊರತು;

(ಬಿ) ಅದರ ಉಪವಿಧಿಗಳು, ಸಹಕಾರಿ ಮೂಲತತ್ವಗಳಿಗನುಸಾರವಾಗಿ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೂಲಕ ತನ್ನ ಸದಸ್ಯರು ಆರ್ಥಿಕ ಮತ್ತು ಸಾಮಾಜಿಕ ಪುರೋಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸುತ್ತಿದ್ದ ಹೊರತು, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು –

(ಎ) ಬೇರೆ ಬೇರೆ ಕುಟುಂಬಗಳಿಗೆ ಸೇರಿದ ಹತ್ತು ಜನರಿಗಿಂತ ಕಡಿಮೆಯಲ್ಲದ ವ್ಯಕ್ತಿಗಳು ಸಹಕಾರಿಯನ್ನು ರಚಿಸಲು ಉದ್ದೇಶಿಸಿದರೆ; ಅಥವಾ

(ಬಿ) ಒಂದು ಸಹಕಾರಿ ಸಂಘವು ಈ ಅಧಿನಿಯಮದ ಅಡಿ ಸಹಕಾರಿಯಾಗಿ ಪರಿವರ್ತಿತವಾಗಲು, ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಉದ್ದೇಶಿಸಿದರೆ; ಅಥವಾ

(ಸಿ) ಈ ಅಧಿನಿಯಮದ ಅಡಿ ನೋಂದಾಯಿತವಾದ (ಇಪ್ಪತ್ತು ಅಥವಾ ಅದಕ್ಕೂ ಹೆಚ್ಚಿನ ಸಹಕಾರಿಗಳು) ಒಂದು ಒಕ್ಕೂಟ ಸಹಕಾರಿಯಾಗಲು ಈ ಸಂಬಂಧದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಉದ್ದೇಶಿಸಿದರೆ,

– ಅಂಥವುಗಳನ್ನು [ಬೇರೆ ಬೇರೆ ಸಹಕಾರಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಪ್ಪಿಸುವ ಸಲುವಾಗಿ ಸಹಕಾರಿಯ ನೋಂದಣಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರನು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನ, ಸುತ್ತೋಲೆಗಳಿಗೊಳಪಟ್ಟು] ಈ ಅಧಿನಿಯಮದ ಅಡಿ ಸಹಕಾರಿಯೆಂಬುದಾಗಿ ನೋಂದಾಯಿಸಬಹುದು.

ಪರಂತು, ಯಾವುದೇ ಸಹಕಾರಿಯು ಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ ಅಥವಾ ಅದನ್ನು ನೋಂದಣಿ ಮಾಡುವುದರಿಂದ ಸಹಕಾರಿ ಚಳುವಳಿಯ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಕಂಡು ಬಂದರೆ ಅದು ನೋಂದಾಯಿತವಾಗತಕ್ಕದ್ದಲ್ಲ;

ಮತ್ತು ಪರಂತು, ಯಾವುದೇ ಸಹಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಒಂದು ಗೃಹ ನಿರ್ಮಾಣ ಸಹಕಾರಿಯಾಗಿ ನೋಂದಾಯಿತವಾಗತಕ್ಕದ್ದಲ್ಲ ಮತ್ತು ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವು ಗೃಹ ನಿರ್ಮಾಣ ಸಹಕಾರಿಯಾಗಿ ಪರಿವರ್ತಿತವಾಗತಕ್ಕದ್ದಲ್ಲ.

ಇದರ ಜೊತೆಗೆ ಕಲಂ.53(1) ರನ್ವಯ, ನೋಂದಾಯಿತ ಪ್ರತಿಯೊಂದು ಸಹಕಾರಿ, ಸಂಯುಕ್ತ ಸಹಕಾರಿ ಸದಸ್ಯತ್ವನ್ನು ನೋಂದಾಯಿತ ದಿನಾಂಕದಂದೇ ಪಡೆಯುತ್ತಿದೆ. ಇದು ಸಂಯುಕ್ತ ಸಹಕಾರಿ ಅಧಿಕಾರ ವ್ಯಾಪ್ತಿಗೆ ಸೇರಬೇಕಿದ್ದರೂ, ಈ ಕಾಯಿದೆ ರೂಪಿಸುವಾಗ ಪ್ರತಿಯೊಂದು ನೊಂದಾಯಿತ ಸದಸ್ಯ ಸಹಕಾರಿ ಎಂದು ಪರಿಗಣಿಸಲು ತಾತ್ವಿಕ ತೀರ್ಮಾನ ವಿಧಾನ ಮಂಡಳಗಳು ಒಪ್ಪಿಗೆ ನೀಡಿದೆ. ಅಂದರೆ, ಸಂಯುಕ್ತ ಸಹಕಾರಿಗೆ ಸದಸ್ಯತ್ವ ನಿರಾಕರಿಸುವ ಅಧಿಕಾರ ನೀಡಲಾಗಿಲ್ಲ. ಇದರ ಮೂಲ ಉದ್ದೇಶ 1959ರ ಕಾಯಿದೆಯೂ ಜಿಲ್ಲಾ ಸಹಕಾರಿ ಒಕ್ಕೂಟಗಳು ಸದಸ್ಯತ್ವಕ್ಕೆ ಸದಸ್ಯತ್ವ ಪಡೆದ ಸಹಕಾರಿ ಸಂಸ್ಥೆಗಳ ಸಂಖ್ಯೆ ನೋಂದಾಯಿತ ಸಂಖ್ಯೆಯ ಶೇ.10 ಕ್ಕಿಂತ ಕಡಿಮೆ. ಚುನಾವಣೆ ಮತ್ತು ಮಂಡಳಿ ರಚನೆಗೆ ತೊಡಕಾಗದಂತೆ, ಸದಸ್ಯತ್ವ ಪಡೆಯುವುದು ಅಷ್ಟು ಸುಲಭವಲ್ಲ. ಸಂಯುಕ್ತ ಸಹಕಾರಿ ಮತ್ತು 1959ರ ಕಾಯಿದೆಯಲ್ಲಿನ ಸಹಕಾರಿ ಸಂಸ್ಥೆಗಳ ಒಕ್ಕೂಟ ಮತ್ತು ಮಹಾಮಂಡಳ, ಸಹಕಾರಿ ಆಂದೋಲನದ ಬಗ್ಗೆ, ಮಂಡಳಿ ಸದಸ್ಯರಿಗೆ, ಸಾಮಾನ್ಯ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ, ಸಹಕಾರಿ ಆಂದೋಲನದ ಬಗ್ಗೆ ಪ್ರಚಾರ, ತರಬೇತಿ, ತಿಳುವಳಿಕೆ ನೀಡುವ ಜವಾಬ್ದಾರಿ ನೀಡಿದ್ದು, ಸದಸ್ಯತ್ವ ನಿರಾಕರಿಸಿದರೆ ಅಂತಹ ಮೂಲ ಭೂತ ಸೌಕರ್ಯ ಪಡೆಯಲು ತೊಡಕಾಗುತ್ತದೆ ಎಂಬ ಕಾರಣದಿಂದ, ಸಂಯುಕ್ತ ಸಹಕಾರಿಯಲ್ಲಿನ ಸದಸ್ಯತ್ವ, ನೋಂದಾವಣೆ ಜೊತೆಯಲ್ಲಿಯೇ ಪ್ರಾಪ್ತವಾಗುತ್ತದೆ. ಇದರ ಜೊತೆಗೆ ಹೊಸ ಸಂಸ್ಥೆಗಳನ್ನು ಹುಟ್ಟು ಹಾಕುವ, ಸಂಯೋಜಿಸುವ, ಮತ್ತು ಮಾರ್ಪಡಿಸುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ನೀಡಲಾಗಿದೆ.

ಈ ವ್ಯವಸ್ಥೆಯಿಂದ ಪ್ರತಿಯೊಂದು ನೋಂದಾಯಿತ ಸಂಸ್ಥೆ ಮತ್ತು ಅದರ ಸದಸ್ಯರು ತಮ್ಮ ಸೌಹಾರ್ದ ಸಹಕಾರಿ/ ಸಂಯುಕ್ತ ಸಹಕಾರಿಯಿಂದ ನೀಡುವ ಸೇವೆಗಳು, ತರಬೇತಿ, ಶಿಕ್ಷಣ, ಕಾರ್ಯಾಗಾರ ಸಮಾವೇಶ, ಸಮ್ಮೇಳನ, ಸಾಮಾನ್ಯ ಸಭೆಯಲ್ಲಿ ಸಕ್ರಿಯ ಭಾಗವಹಿಸುವುದನ್ನು ಖಾತ್ರಿ ಪಡಿಸುತ್ತಿದೆ. ಸಂಯುಕ್ತ ಸಹಕಾರಿ ಮಂಡಳಿ ರಚನೆಯಲ್ಲಿ ಪ್ರತಿಯೊಂದು ನೋಂದಾಯಿತ ಸೌಹಾರ್ದ ಸಹಕಾರಿ ಭಾಗವಹಿಸಲು, ಮಂಡಳಿ ಸದಸ್ಯನಾಗಲು, ಮತ್ತು ಸಂಯುಕ್ತ ಸಹಕಾರಿ ಪದಾಧಿಕಾರಿಯಾಗಲು ಅವಕಾಶ ಕಲ್ಪಿಸಿದೆ.

ಸೌಹಾರ್ದ ಕಾಯಿದೆ ರಚನೆ ಮಾಡುವ ಧ್ಯೇಯೋದ್ದೇಶವನ್ನು ಕಾಯಿದೆ ಪೀಠಿಕೆಯಲ್ಲಿ ಈ ಕೆಳಕಂಡಂತೆ ಘೋಷಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತ ವಾಗಿರುವುದರಿಂದ"

ಈ ಮೇಲ್ಕಂಡ ಧ್ಯೇಯೋದ್ದೇಶದೊಂದಿಗೆ ತಂದ ಕರ್ನಾಟಕ ಸೌಹಾರ್ದಾ ಸಹಕಾರಿ ಕಾಯಿದೆ 1997ರ ನಂತರ ರಾಷ್ಟ್ರಮಟ್ಟದಲ್ಲಿ ಈ ಕಾಯಿದೆ ಬಹಳಷ್ಟು ಚರ್ಚೆಯಾಗಿದೆ. ಅದರಲ್ಲಿ ಪ್ರಮುಖವಾಗಿ

1) ಸರ್ಕಾರದಿಂದ ಪ್ರತ್ಯಕ್ಷ/ಪರೋಕ್ಷ ಸಹಾಯಧನ ಪಡೆಯಲು ನಿರ್ಬಂಧ.

2) ನೋಂದಾಯಿತವಾದ ಪ್ರತಿಯೊಂದು ಸಹಕಾರಿ ಸಂಯುಕ್ತ ಸಹಕಾರಿ ಸದಸ್ಯತ್ವ.

3) ಕಾಯಿದೆಯಲ್ಲಿಯೇ ಸೃಷ್ಟಿ ಮಾಡಿದ ಪ್ರಜಾಪ್ರಭುತ್ವದಡಿ ರಚನೆಯಾದ "ಸಂಯುಕ್ತ ಸಹಕಾರಿ" ಎಂಬ ಸಂಸ್ಥೆಗೆ ನಿಬಂಧಕರ ಅಧಿಕಾರ ವರ್ಗಾವಣೆ.

4) ಕಾಯಿದೆ ರಚನೆ ಮಾಡಿದಾಗ, ಸದಸ್ಯ ಸಹಕಾರಿಗಳ ವಿಚಾರಣೆ, ಮಂಡಳಿ ರಚನೆ, ಸಮಾಪನೆ, ಅಧಿಕಾರ ನೀಡಿರುವುದು. (ಇದನ್ನು 2004ರ ತಿದ್ದುಪಡಿ ಮುಖಾಂತರ, ನಿಬಂಧಕರಿಗೆ ವರ್ಗಾವಣೆ ಮಾಡಲಾಗಿದೆ)

5) ನಿಬಂಧಕರಿಗೆ ಇದ್ದ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕನ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿಗೆ ಕಲಂ.53(7) ರಲ್ಲಿ ನೀಡಿದ ಅಧಿಕಾರಗಳು.

6) ನಿಬಂಧಕರು/ಸರ್ಕಾರದ ನಿಯಂತ್ರಣದಲ್ಲಿದ್ದ ಹಲವಾರು ಅಧಿಕಾರಗಳನ್ನು ಸಂಯುಕ್ತ ಸಹಕಾರಿಗೆ ವರ್ಗಾಯಿಸುವುದು.

ಈ ಮೆಲ್ಕಂಡ ಅಧಿಕಾರಗಳನ್ನು ನೀಡಲು ಪ್ರೇರೆಪಿಸಿದ ಪ್ರಮುಖ ಅಂಶಗಳೆಂದರೆ, ಕೇಂದ್ರ ಸರ್ಕಾರ ಯೋಜನಾ ಆಯೋಗದ ಮುಖಾಂತರ ರಾಷ್ಟ್ರಕ್ಕೆ ಒಂದು ಮಾದರಿ ಸಹಕಾರ ಕಾಯಿದೆ ರೂಪಿಸಲು ರಚಿಸಿದ ಶ್ರೀ ಚೌದರಿ ಬ್ರಹ್ಮ ಪ್ರಕಾಶ್ ಸಮಿತಿ. ಇದರಲ್ಲಿ ಸಹಕಾರಿಗಳ ಬಹಳ

ದಶಕಗಳ ಕೂಗಿನ ಫಲವಾಗಿ ಸರ್ಕಾರ/ನಿಬಂಧಕರ ನಿಯಂತ್ರಣದಿಂದ ಬಿಡುಗಡೆಬೇಕೆಂಬ ಕರ್ನಾಟಕ ರಾಜ್ಯ ಈ ಸೌಹಾರ್ದ ಕಾಯಿದೆ 1997ರಲ್ಲಿ ರೂಪಿಸಿದೆ. ಇದರ ಜೊತೆಗೆ 1959ರ ಕಾಯಿದೆಯಲ್ಲಿ ಇದೇ ಉದಾರಿಕೃತ ನೀತಿ ಅಳವಡಿಸಿ, ಸ್ವಾಯತ್ತತೆ, ಸ್ವಾವಲಂಬಿ ಮತ್ತು ಸ್ವಯಂನಿಯಂತ್ರಣ ನೀಡಲು ತಿದ್ದುಪಡಿ ಮಾಡಿದ್ದರೂ, ಅದರಲ್ಲಿ ನಿಬಂಧಕರು/ಸರ್ಕಾರದ ನಿಯಂತ್ರಣ ದಿಂದ ಮುಕ್ತಿ ನೀಡಿರಲಿಲ್ಲ. ಆ ನಂತರದ ಬೆಳವಣಿಗೆಗಳಿಂದ, 1959 ಕಾಯಿದೆ ಮತ್ತು ಮೂಲ ಸ್ಥಾನಕ್ಕೆ ಮರಳಿ, ಸ್ವಾಯತ್ತತೆ ಕಳೆದುಕೊಂಡಿದೆ. ಅಂದರೆ ಬಹಳಷ್ಟು ಸಹಕಾರ ಸಂಸ್ಥೆಗಳು ಸರ್ಕಾರದ/ನಿಬಂಧಕರ ಮದ್ಯಪ್ರವೇಶ ಬಯಸಿ, ತಮ್ಮ ಅನುಕೂಲಕ್ಕೆ ತಕ್ಕಂತೆ, ಫಲಾನುಭವಿಗಳಾಗಿದ್ದಾರೆ. ಅದೇ ಸಮಯದಲ್ಲಿ ಸೌಹಾರ್ದ ಕಾಯಿದೆಯಲ್ಲಿ ಹಲವಾರು ಅಧಿಕಾರಗಳು ಮರಳಿ ಪಡೆಯಲು ಕಾರ್ಯಪ್ರವೃತ್ತರಾಗಿ, ಕೆಲಮಟ್ಟಿನ ಯಶಸ್ವಿಗಳಿಸಿದೆ. ಇದರ ಜೊತೆಗೆ ಹಿರಿಯ/ಕಿರಿಯ ಇಲಾಖಾಧಿಕಾರಿಗಳು ಮಾನಸಿಕವಾಗಿ ನಕರಾತ್ಮಕ ಭಾವನೆಯಿಂದ ಹೊರಬಂದಿಲ್ಲ. ಏಕೆಂದರೆ ಸೌಹಾರ್ದ ಸಹಕಾರಿಗಳ ವ್ಯವಹಾರದಲ್ಲಿ ಮಧ್ಯಪ್ರವೇಶ ಮಾಡಲು ಅವಕಾಶ ಇಲ್ಲದೇ ಇರುವುದರಿಂದ. ಅದಕ್ಕಾಗಿ ಸಂಸ್ಥೆಯನ್ನು ಹುಟ್ಟು ಹಾಕುವಾಗ, ಸ್ಪಷ್ಟ ನಿಯಮಗಳಿದ್ದರೂ ನೋಂದಾಯಿಸಲು ಕೆಲವು ಅಡೆತಡೆಗಳು ಬರುತ್ತಲೇ ಇವೆ. ಅದಕ್ಕಾಗಿ ಇಲಾಖಾಧಿಕಾರಿಗಳ ಮನೋಸ್ಥಿತಿ ಸಕಾರಾತ್ಮಕ ಮಾಡಲು ಸಂಯುಕ್ತ ಸಹಕಾರಿ/ನಿಬಂಧಕರು ಪ್ರಯತ್ನ ಮಾಡಲೇಬೇಕು. ಏಕೆಂದರೆ ಈ ಸಹಕಾರಿ ಸಂಸ್ಥೆಗಳು ಸರ್ಕಾರದ ಸಹಾಯ ಇಲ್ಲದೆ ತಮ್ಮ ಬಂಡವಾಳದಿಂದಲೇ ನಡೆಯುತ್ತಿದ್ದು, ಇವುಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ, ಸಹಕಾರಿ ಸದಸ್ಯರ ಹಿತಾಸಕ್ತಿ ಕಾಪಾಡಲು ಶ್ರಮಿಸುವುದು ಅವಶ್ಯಕ. ಈ ಮಧ್ಯೆ ಕೇಂದ್ರ ಸರ್ಕಾರ ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿನ ಸಕಾರತ್ಮಕ ಅವಕಾಶಗಳನ್ನು ಗಮನಿಸಿ 2011ರಲ್ಲಿ ಸಂವಿಧಾನದ ತಿದ್ದುಪಡಿ ಮಾಡಲು ಕ್ರಮ ಜರುಗಿಸಿದ್ದು, ಸಹಕಾರ ಸಂಸ್ಥೆಗಳ ರಚನೆ ಒಂದು ಮೂಲಭೂತ ಹಕ್ಕೆಂದು, ಹಾಗೂ ಮಂಡಳಿ ರಚನೆ, ಗರಿಷ್ಠ ಮಿತಿ, ಮಂಡಳಿ ರದ್ದತಿ/ ಅಮಾನತ್ತು, ಲೆಕ್ಕ ತಪಾಸಣೆ ಮತ್ತು ಸಾಮಾನ್ಯ ಸಭೆ, ನಿಬಂಧಕರಿಗೆ ತಃಖ್ತೆಗಳ ಸಲ್ಲಿಕೆ, ಚುನಾವಣೆ ಪ್ರತ್ಯೇಕ ಪ್ರಾಧಿಕಾರ ರಚನೆ, ಶಿಕ್ಷೆ ಮತ್ತು ಅಪರಾಧಗಳ ಬಗ್ಗೆ ಅವಕಾಶ ಕಲ್ಪಿಸಿ 97ನೇ ಸಂವಿಧಾನ ತಿದ್ದುಪಡಿಯಲ್ಲಿ ಭಾರತದ ಸಂವಿಧಾನಕ್ಕೆ ಸೇರ್ಪಡೆ ಮಾಡಿದೆ. ಈ ಸಂವಿಧಾನ ತಿದ್ದುಪಡಿಯ ಧ್ಯೇಯೋದ್ದೇಶಗಳನ್ನು ಈ ಕೆಳಕಂಡಂತೆ ರೂಪಿಸಿದೆ.

**ಅನುಚ್ಛೇದ 43 ಬಿ :**

"ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆ/ನಿರ್ವಹಣೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನ ಪಡತಕ್ಕದ್ದು."

**ಅನುಚ್ಛೇದ 243ಝಡ್ಐ :**

" ರಾಜ್ಯದ ವಿಧಾನ ಮಂಡಳವು ಸ್ವಇಚ್ಚಾ ರಚನೆ, ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳ ಸಂಘಟನೆ, ನಿಯಂತ್ರಣ ಮತ್ತು ಸಮಾಪನೆಗೆ ಸಂಬಂಧಪಟ್ಟಂತೆ ಕಾನೂನನ್ನು ರಚಿಸಬಹುದು."

ಸೌಹಾರ್ದ ಕಾಯಿದೆಯಲ್ಲಿ ನಿಗದಿ ಪಡಿಸಿರುವ ಶಾಸನಾತ್ಮಕ ಜವಾಬ್ದಾರಿಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

1) ನಿಬಂಧಕರು – ಸಹಕಾರಿ ನೋಂದಣಿ, ಉಪವಿಧಿಗಳ ತಿದ್ದುಪಡಿ ನೋಂದಣಿ, ಸಹಕಾರಿಗಳ ವಿಚಾರಣೆ, ಅಧಿಭಾರ ಅರ್ಜಿ, ದಾವಾ ಪ್ರಕರಣ ಇತ್ಯರ್ಥ, ಸಹಕಾರಿಗಳ ಸಮಾಪನೆ, ನೋಂದಣಿ ರದ್ದತಿ.

2) ನಿರ್ದೇಶಕರು ಲೆಕ್ಕತಪಾಸಣಾ ಇಲಾಖೆ – ಸನ್ನದ್ದ ಲೆಕ್ಕಗಳ ಪಟ್ಟಿ ತಯಾರಿ, ಸಂಸ್ಥೆಗಳ ಲೆಕ್ಕ ತಪಾಸಣೆ.

3) ಚುನಾವಣಾ ಪ್ರಾಧಿಕಾರ – ಸಹಕಾರಿಗಳ ಮಂಡಳಿ/ಪದಾಧಿಕಾರಿಗಳ ಆಯ್ಕೆ/ಮರು ಚುನಾವಣೆ.

4) ಸಂಯುಕ್ತ ಸಹಕಾರಿ – ಆಡಳಿತಾಧಿಕಾರಿ ನೇಮಕ, ವಿಶೇಷಾಧಿಕಾರಿ ನೇಮಕ, ಪರಿವೀಕ್ಷಣೆ ಹಾಗೂ ಕಲಂ.53(7)ರಲ್ಲಿ ನೀಡಿದ ಸುಮಾರು 19 ವಿಷಯಗಳ ಜವಾಬ್ದಾರಿ.

ನಿಬಂಧಕರು, ಲೆಕ್ಕಪರಿಶೋಧನಾ ನಿರ್ದೇಶಕರು ಮತ್ತು ಚುನಾವಣಾ ಪ್ರಾಧಿಕಾರದ ಅಧಿಕಾರ/ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಪ್ರತ್ಯೇಕವಾಗಿ ಸೇರಿಸಿದೆ.

ಸಂಯುಕ್ತ ಸಹಕಾರಿ ಕಾಯಿದೆ ಕಲಂ.57(7)ರಲ್ಲಿ ಶಾಸನಾತ್ಮಕ ಅಧಿಕಾರಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನಿಗದಿ ಪಡಿಸಿದೆ. ಇವುಗಳ ಜೊತೆಗೆ ಕಾಯಿದೆ ಕಲಂ.25 ರಡಿ ಸದಸ್ಯ ಸಹಕಾರಿ ಚುನಾಯಿತ ನಿರ್ದೇಶಕರ ಅನರ್ಹತೆ, ಕಲಂ.38 ರಡಿ ಸದಸ್ಯ ಸಹಕಾರಿ ಮಂಡಳಿ

ರದ್ದತಿ/ಅಮಾನತ್ತು ಹಾಗೂ ಕಲಂ.38ಎ ಅಡಿ ವಿಶೇಷಾಧಿಕಾರಿ ನೇಮಕಾತಿ ಮಾಡಲು ಸಂಯುಕ್ತ ಸಹಕಾರಿಗೆ ಜವಾಬ್ದಾರಿ ನಿಗದಿ ಪಡಿಸಲಾಗಿದೆ.

ಈ ಅಧಿಕಾರ, ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಂಯುಕ್ತ ಸಹಕಾರಿ ಮಂಡಳಿಯು ಒಂದು ಚುನಾಯಿತ ಮಂಡಳಿಯಾಗಿದ್ದು. ಅರೆನ್ಯಾಯಿಕ ಮತ್ತು ಭಾರತ ಸಂವಿಧಾನದಲ್ಲಿ ನಿಗದಿ ಪಡಿಸಿದ ಸ್ವಾಭಾವಿಕ ನ್ಯಾಯ ನೀತಿಗೆ ಪೂರಕವಾಗಿ ಕೆಲಸ ನಿರ್ವಹಿಸಲು ಮಂಡಳಿ ರಚನೆಯಾದ ಕೂಡಲೇ ಕನಿಷ್ಟ ಒಂದು ವಾರದ ತರಬೇತಿ ಅವಶ್ಯಕ. ಅದಕ್ಕಾಗಿ ನ್ಯಾಯಾಂಗ ಇಲಾಖೆಯ ತರಬೇತಿ ಪರಿಣಿತರಿಂದ, ಸರ್ಕಾರದ ನ್ಯಾಯಾಂಗ ಇಲಾಖೆ, ಸಹಕಾರ ಇಲಾಖಾಧಿಕಾರಿಗಳು ಮತ್ತು ನ್ಯಾಯಾವಾದಿಗಳಿಂದ, ಚರ್ಚೆ, ಕಾರ್ಯಾಗಾರ, ತರಬೇತಿ, ವಿಚಾರ ಸಂಕೀರ್ಣಗಳ ಅವಶ್ಯಕತೆ ಇದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದಲ್ಲಿ ಮಂತ್ರಿ ಮಂಡಳಗಳಿಗೆ ಮಾರ್ಗದರ್ಶನ ನೀಡಲು ಹಲವಾರು ತಜ್ಞ ಇಲಾಖಾ ಮುಖ್ಯಸ್ಥರ ಜೊತೆಗೆ, ಕಾನೂನು ಇಲಾಖೆ, ಪ್ರತಿ ಪ್ರಸ್ತಾಪನೆಯನ್ನು ಪರಿಶೀಲಿಸಿ, ಮಾರ್ಗದರ್ಶನ ನೀಡುತ್ತಿದ್ದು, ಮಂತ್ರಿ ಮಂಡಳಗಳ ಸಮರ್ಪಕ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಸಂಯುಕ್ತ ಸಹಕಾರಿಗೆ ಅಂತಹ ಮಾರ್ಗದರ್ಶನ ನೀಡಲು ನುರಿತ, ತಜ್ಞ ಸಲಹೆಗಾರರು ಲಭ್ಯವಿಲ್ಲದೇ ಇರುವುದರಿಂದ, ಮಂಡಳಿ ಸದಸ್ಯರಿಗೆ ಕನಿಷ್ಟ ಒಂದು ವಾರದ ತರಬೇತಿ ಅತಿ ಅವಶ್ಯಕ. ಇದರ ಜೊತೆಗೆ ಸಂಯುಕ್ತ ಸಹಕಾರಿ ಕಛೇರಿಯಲ್ಲಿ ಕಾನೂನಿಗೆ ಸಂಬಂಧಪಟ್ಟಂತೆ ಒಂದು ವಿಭಾಗ ರಚಿಸಿ, ಆ ವಿಭಾಗದಲ್ಲಿ ನ್ಯಾಯಾವಾದಿಗಳನ್ನು ನೇಮಿಸಿ, ಅವರ ಅಭಿಪ್ರಾಯ ಸಲಹೆಗಳನ್ನು ಪಡೆಯುವುದು ಅತಿ ಅವಶ್ಯಕ. ಸದಸ್ಯ ಸಹಕಾರಿಗಳ ಕಾನೂನು ಸಮಸ್ಯೆಗಳನ್ನು ಪರಿಶೀಲಿಸಿ ಸಲಹೆ ಸೂಚನೆ ಕೊಡಲು ಈ ವಿಭಾಗದ ಬಲವರ್ಧನೆ ಅವಶ್ಯಕ. ಇದರ ಜೊತೆಗೆ ಕಾಯಿದೆಯಲ್ಲಿ ನಿಗದಿ ಪಡಿಸಿದ ಕರ್ತವ್ಯ ನಿರ್ವಹಿಸುವಾಗ, ಪದಗಳನ್ನು ಅರ್ಥೈಸುವುದು ಒಂದು ಕಠಿಣ ಸಮಸ್ಯೆ, ಅದಕ್ಕೆ ತಜ್ಞರ ಸಲಹೆ ಬೇಕು. ಅದಕ್ಕಾಗಿ ಸಂಯುಕ್ತ ಸಹಕಾರಿ, ಹಿರಿಯ ವಕೀಲರ ಒಂದು ಪಟ್ಟಿ ತಯಾರಿಸಿ, (ಅಂತಹ ವಕೀಲರ ಒಪ್ಪಿಗೆ ಪಡೆದು) ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತ ಸಲಹೆ ನೀಡಲು ಮತ್ತು ಆ ಸಲಹೆಯಿಂದ ಸಂಯುಕ್ತ ಸಹಕಾರಿ ತೀರ್ಮಾನ ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

ಒಂದು ಚುನಾಯಿತ ಸದಸ್ಯ ಸಹಕಾರಿ ಮಂಡಳಿಯನ್ನು ರದ್ದು ಪಡಿಸುವುದು/ಅಮಾನತ್ತಿನಲ್ಲಿಡುವುದು ಒಂದು ಶಾಸನಾತ್ಮಕ ಜವಾಬ್ದಾರಿ. ಅದರಂತೆ ಒಂದು ಸದಸ್ಯ ಸಹಕಾರಿ, ರಾಜೀನಾಮೆ, ಮರಣ, ಅನರ್ಹತೆಯಿಂದ ಕಾರ್ಯನಿರ್ವಹಿಸಲಾಗದಿದ್ದಾಗ ನೇಮಕವಾಗುವ ವಿಶೇಷಾಧಿಕಾರಿ, ಸದಸ್ಯ ಸಹಕಾರಿಗಳ ಮಂಡಳಿ ಸದಸ್ಯರನ್ನು ಅನರ್ಹತೆಗೊಳಿಸಲು ಸೂಕ್ತ ಸಹಕಾರಿ ಅಧಿಕಾರ ಹೊಂದಿರುವುದು ಒಂದು ಶಾಸನಾತ್ಮಕ ಜವಾಬ್ದಾರಿ. ಈ ಕೆಲಸ ನಿರ್ವಹಿಸುವಾಗ, ಸ್ವಾಭಾವಿಕ ನ್ಯಾಯಾ ನೀತಿ (principles of natural Justice) ಅನ್ವಯ ಕ್ರಮ ಜರುಗಿಸುವಾಗ ಸಂಬಂಧಪಟ್ಟ ವ್ಯಕ್ತಿಗಳ ಮೇಲೆ ಕ್ರಮ ಜರುಗಿಸುವ ಮೊದಲು, ಅವರಿಗೆ ಅರ್ಥವಾಗುವ ಭಾಷೆಯಲ್ಲಿ, ಆರೋಪ ಪಟ್ಟಿ ತಯಾರಿಸಿ, ವಿವರಣೆ ಪಡೆದು, ದಾಖಲೆಗಳನ್ನು ಪರಿಶೀಲಿಸಿ, ತೀಮಾನ ಮಾಡುವಾಗ ಅಂತಹ ವ್ಯಕ್ತಿಗಳ ಹಕ್ಕನ್ನು ಕಿತ್ತು ಹಾಕುವಾಗ, ಸ್ವಾಭಾವಿಕ ನ್ಯಾಯಾ ನೀತಿ ಅನುಸರಿಸಿ, ಕ್ರಮ ಜರುಗಿಸಬೇಕು. ಏಕೆಂದರೆ ಅಂತಹ ವ್ಯಕ್ತಿಗಳ ಆಯ್ಕೆಯಾಗುವಾಗ ಆ ಸದಸ್ಯ ಸಹಕಾರಿಗಳ ಸದಸ್ಯರಿಂದ ಆಯ್ಕೆಯಾಗಿದ್ದು, ಆ ಹುದ್ದೆಯಿಂದ ಕಿತ್ತುಹಾಕಬೇಕಾದರೆ, ಅಂತಹ ವ್ಯಕ್ತಿಗೆ, ಏತಕ್ಕಾಗಿ ತೆಗೆದು ಹಾಕಲಾಗುತ್ತಿದೆ, ಕಾನೂನು, ಉಪವಿಧಿಗಳನ್ನು ವಿಧಿಸಿರುವ ಷರತ್ತುಗಳನ್ನು, ಆ ಸದಸ್ಯನಿಗೆ ಮನದಟ್ಟು ಮಾಡಿ, ಅವನ ಮಂಡಳಿ ಸದಸ್ಯತ್ವದಿಂದ ಕಿತ್ತು ಹಾಕಬೇಕು, ಹಾಗೂ ಮಂಡಳಿ ಸದಸ್ಯತನದಿಂದ ತೆಗೆದು ಹಾಕಲು ಆದೇಶಿಸಬೇಕು. ಆದ್ದರಿಂದ ಸಂಯುಕ್ತ ಸಹಕಾರಿ ಮಂಡಳಿ ಸದಸ್ಯರಿಗೆ, ಅವಶ್ಯಕವಾಗಿ ಕಾನೂನು ತಜ್ಞರಿಂದ ತರಬೇತಿ ನೀಡುವುದು ಅತಿ ಅವಶ್ಯಕ. ಇದನ್ನು ಚುನಾಯಿತ ಮಂಡಳಿ ಅವಮಾನವೆಂದು ತಿಳಿಯತಕ್ಕದ್ದಲ್ಲ. ಇದರ ಜೊತೆಗೆ ಯಾವುದೇ ಆದೇಶ ಮಾಡುವಾಗ ಪಾರದರ್ಶಕ ನೀತಿಯನ್ನು ಅನುಸರಿಸಬೇಕು. ಅಂದರೆ ಒಬ್ಬ ವ್ಯಕ್ತಿ ಹಕ್ಕನ್ನು ತೆಗೆದು ಹಾಕುವಾಗ/ಕಿತ್ತು ಹಾಕಿದಾಗ, ಅದಕ್ಕೆ ಪೂರಕವಾದ ಎಲ್ಲಾ ವಿಧಿವಿಧಾನಗಳನ್ನು ಅನುಸರಿಸಲಾಗಿದೆ ಎಂದು ದಾಖಲೆಗಳಿಂದ ಮನದಟ್ಟಾಗಬೇಕು. ಯಾವುದೇ ಮೂರನೇ ವ್ಯಕ್ತಿ ಅಥವಾ ನ್ಯಾಯಾಲಯ, ಸಂಯುಕ್ತ ಸಹಕಾರಿ ಮಂಡಳಿ ಆದೇಶವನ್ನು ಪ್ರಶ್ನಿಸಿದಾಗ, ಆದೇಶ ಮಾಡುವಾಗ ನ್ಯಾಯ ನೀತಿ ಜೊತೆ ಪಾರದರ್ಶಕ ನೀತಿಯನ್ನು ಅನುಸರಿಸಲಾಗಿದೆ ಎಂದು ನ್ಯಾಯಾಲಯಗಳ ಗಮನಕ್ಕೆ ಬಂದಾಗ – ಅಂತಹ ಆದೇಶಗಳ ಮೇಲೆ ನ್ಯಾಯಾಲಯ ಸಾಮಾನ್ಯವಾಗಿ ಮಧ್ಯ ಪ್ರವೇಶ ಮಾಡುವುದಿಲ್ಲ.

“ಯಾವುದೇ ಕ್ಷೇತ್ರದಲ್ಲಾದರೂ ಯಾರೇ ವ್ಯಕ್ತಿಯಾದರೂ, ಯಾವುದೇ ತರಬೇತಿ ಇಲ್ಲದೆ ಕಾರ್ಯ ಮಾಡಬಹುದು. ಆದರೆ ಸೂಕ್ತ ತರಬೇತಿ ಇಲ್ಲದೆ ಸಹಕಾರಿ ಕ್ಷೇತ್ರದಲ್ಲಿ ಕಾರ್ಯ ಮಾಡಲು ಸಾಧ್ಯವಾಗದು.” ಭಾರತದ ಮೊದಲ ಪ್ರಧಾನ ಮಂತ್ರಿಗಳಾಗಿದ್ದ ಜವಹರಲಾಲ್ ನೆಹರು ಹೇಳಿದ ಮಾತುಗಳನ್ನು ಸ್ಮರಿಸಬೇಕು. ಏಕೆಂದರೆ ನಮ್ಮ ಸಹಕಾರಿಗಳು ಯಾವುದೇ ಅನುಭವವಿಲ್ಲದೇ ತರಬೇತಿ ಇಲ್ಲದೆ ಸಹಕಾರಿ ಸಂಸ್ಥೆ ನಡೆಸಿಕೊಂಡು ಹೋಗಬಹುದು ಎಂಬ ಭಾವನೆ ಇದೆ. ಆದರೆ ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿರುವ ಕೆಲಸಗಳಿಗೆ ವಿಶೇಷವಾದ ತರಬೇತಿ ಅವಶ್ಯಕ ಎಂಬುದನ್ನು ನಿರ್ಲಕ್ಷಿಸುತ್ತಾರೆ.

ಸಂಯುಕ್ತ ಸಹಕಾರಿಯ ಮಂಡಳಿ ನಿರ್ದೇಶಕರ ಕರ್ತವ್ಯ ನಿರ್ವಹಿಸುವಾಗ, ಅರೆ ನ್ಯಾಯಿಕ ಮತ್ತು ಸ್ವಾಭಾವಿಕ ನ್ಯಾಯಾ ನೀತಿಗನುಗುಣವಾಗಿ ಕಾರ್ಯ ರೂಪಿಸಬೇಕಾಗಿರುವುದರಿಂದ ಕಾಯಿದೆ ಕಲಂ.53(7) ರಡಿ ನಿಗದಿ ಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಈ ಕೆಳಕಂಡಂತೆ

ವಿಮರ್ಶಿಸಲಾಗಿದೆ.

(1) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

ಸೌಹಾರ್ದ ಕಾಯಿದೆಯನ್ನು ರಚನೆ ಮಾಡುವ ಸಂದರ್ಭದಲ್ಲಿ, ಹೊಸ ಸಂಸ್ಥೆಗಳನ್ನು ಹುಟ್ಟು ಹಾಕುವುದರ ಜೊತೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರಡಿ ನೋಂದಾವಣೆಯಾದ ಸಂಘಗಳನ್ನು ಸೌಹಾರ್ದ ಸಹಕಾರಿಗಳಾಗಿ ಪರಿವರ್ತನೆ ಮಾಡುವ ಒಂದು ಪ್ರಮುಖ ಉದ್ದೇಶವಾಗಿತ್ತು. ಪ್ರಾರಂಭಿಕ ಹಂತದಲ್ಲಿ ಆ ಕಾಯಿದೆಯ ಕನಿಷ್ಠ ಶೇ.25 ರಿಂದ ಶೇ.50 ರವರೆವಿಗೆ ಪರಿವರ್ತನೆ ಮಾಡಬಹುದೆಂದು ಅಂದಾಜಿಡಲಾಗಿತ್ತು. ಏಕೆಂದರೆ ಸಹಕಾರಿಗಳು ಎಲ್ಲಾ ವೇದಿಕೆಗಳಲ್ಲಿ ನಿಬಂಧಕರ ಮತ್ತು ಸರ್ಕಾರದ ನಿಯಂತ್ರಣಕ್ಕೆ ಪ್ರತಿರೋಧ ವ್ಯಕ್ತ ಪಡಿಸುತ್ತಾ, ಸಹಕಾರಿ ಸಂಸ್ಥೆಗಳು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಯತ್ರಿತ ಸಂಸ್ಥೆಗಳಾಗಿ ಕೆಲಸ ನಿರ್ವಹಿಸುವುದನ್ನು ನಿಯಂತ್ರಿಸಲಾಗುತ್ತಿತ್ತು. ಈ ಉದ್ದೇಶದಿಂದ ಸೌಹಾರ್ದ ಕಾಯಿದೆಯಡಿ ನೋಂದಣಿಯಾದ ಪ್ರತಿಯೊಂದು ಸಹಕಾರಿಗೆ ತನ್ನ ಕಾರ್ಯನಿರ್ವಹಣೆಯಲ್ಲಿ ಸರ್ಕಾರದ ಮತ್ತು ನಿಬಂಧಕರ ನಿಯಂತ್ರಣವನ್ನು ಮೊಟಕುಗೊಳಿಸಿ, ಕಾಯಿದೆಯಲ್ಲಿಯೇ ರೂಪಿಸಿದ/ಸೃಷ್ಟಿಸಿದ ಸಂಯುಕ್ತ ಸಹಕಾರಿಗೆ ನಿಬಂಧಕರ ಅಧಿಕಾರವನ್ನು ವರ್ಗಾಹಿಸಿರುವುದರಿಂದ ಆರ್ಥಿಕ ಮತ್ತು ಆಡಳಿತ ಸ್ವಾಯತ್ತತೆಯಿಂದ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಿದ್ದು, ಇದನ್ನು ಸಹಕಾರಿಗಳು ಉಪಯೋಗಿಸಿಕೊಂಡು ದೊಡ್ಡ ಪ್ರಮಾಣದಲ್ಲಿ ಹಳೆ ಕಾಯಿದೆಯಿಂದ ಹೊಸ ಕಾಯಿದೆಗೆ ವರ್ಗಾವಣೆಯಿಂದ ಹೆಚ್ಚು ಸಹಕಾರಿಗಳು ಹೊಸ ಕಾಯಿದೆಗೆ ಬರುವುದರ ಬದಲು, ಬಹಳಷ್ಟು ಕಡಿಮೆ ಸಂಖ್ಯೆಯ ಸಂಘಗಳು ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದಿದ್ದವು. ಹೊಸ ಸಹಕಾರಿ ನೋಂದಣಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯ ಸಂಖ್ಯೆ ಸಮರ್ಪಕವಿಲ್ಲದೆ ಇರುವುದರಿಂದ ಹೆಚ್ಚು ಸಂಖ್ಯೆಯಲ್ಲಿ ನೋಂದಣಿ ಮಾಡಲು ಸಾಧ್ಯವಾಗಲಿಲ್ಲ. ಸಂಯುಕ್ತ ಸಹಕಾರಿ ಪ್ರಾರಂಭಿಕ ಹಂತದಲ್ಲಿ ತನ್ನ ಕಾರ್ಯನಿರ್ವಹಣೆ ಬಗ್ಗೆ ಮತ್ತು ಸದಸ್ಯರ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಸಮರ್ಪಕ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು ಸಾಧ್ಯವಾಗದೆ ಇದ್ದುದರಿಂದ ಸದಸ್ಯರ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಕೆಲವು ನ್ಯೂನತೆಗಳನ್ನು ಗಮನಿಸಬಹುದಾಗಿತ್ತು.

ಸಂಯುಕ್ತ ಸಹಕಾರಿ ಸಿಬ್ಬಂದಿ, ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕಾರ್ಯನಿರ್ವಹಣೆ ಮಾಡಲು ಸಾಕಷ್ಟು ಸಿಬ್ಬಂದಿ ಇಲ್ಲದೆ ಇದ್ದುದರಿಂದ, ಹೊಸ ಸಂಸ್ಥೆಗಳನ್ನು ಹುಟ್ಟು ಹಾಕಲು ಸಾಕಷ್ಟು ಸಮಯ ಹಿಡಿಸಿತು. ಇದರ ಜೊತೆಗೆ ಸಹಕಾರ ಇಲಾಖಾಧಿಕಾರಿಗಳೇ ನೋಂದಣೆ ಪ್ರಕ್ರಿಯೆಗೆ ಸಹಕರಿಸಬೇಕಾಗಿರುವುದರಿಂದ ಮತ್ತು ಇಲಾಖಾಧಿಕಾರಿಗಳಿಗೆ ಸೌಹಾರ್ದ ಕಾಯಿದೆಯ ದ್ಧೋಯೋದ್ದೇಶಗಳನ್ನು ಮನವರಿಕೆ ಮಾಡಿಕೊಡಲು ಸಂಯುಕ್ತ ಸಹಕಾರಿ ಅಷ್ಟು ದೊಡ್ಡ ಪ್ರಮಾಣದ ಶ್ರಮ ವಹಿಸದೆ ಇದ್ದುದರಿಂದ ಹೊಸ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಲು ತೊಡಕು ಉಂಟಾಯಿತು. ಪ್ರಾರಂಭಿಕ ಹಂತದಲ್ಲಿ ಹೊಸ ಸಹಕಾರಿಗಳನ್ನು ಪ್ರಚೋದನೆ ಮಾಡಿ ಸಂಸ್ಥೆಗಳನ್ನು ಹುಟ್ಟು ಹಾಕುವ ಪ್ರಯತ್ನದಲ್ಲಿ ಕಾರ್ಯಾಗಾರಗಳು, ಸೆಮಿನಾರ್‌ಗಳು ಮತ್ತಿತ್ತರ ಕ್ರಮಗಳನ್ನು ರೂಪಿಸಿದರೂ, ದೊಡ್ಡ ಸಂಖ್ಯೆಯಲ್ಲಿ ಆಕರ್ಶಿಸಲು ಸಾಧ್ಯವಾಗಲಿಲ್ಲ. ಪ್ರಾರಂಭಿಕ ಹಂತದಲ್ಲಿ ಸಂಘ ಪರಿವಾರದ ಪ್ರಮುಖರು ಪ್ರಬಲವಾಗಿರುವ ಜಿಲ್ಲೆಗಳಲ್ಲಿ ಹೆಚ್ಚು ಸಂಖ್ಯೆಯ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕಲು ಸಾಧ್ಯವಾಗಿತ್ತು. ಇದರ ಪರಿಣಾಮ ಸಂಘ ಪರಿವಾರದಿಂದ ಪ್ರಚೋದನೆ ಪಡೆದ ದೊಡ್ಡ ಸಂಖ್ಯೆ ಸಹಕಾರಿಗಳು ನೋಂದಣಿ ಆಗುವುದರ ಜೊತೆಗೆ ಲೇವಾದೇವಿದಾರರು ಹೆಚ್ಚು ಸಂಖ್ಯೆಯಲ್ಲಿ ಸೌಹಾರ್ದ ಸಹಕಾರಿಗಳನ್ನು ನೋಂದಾಯಿಸಿಕೊಂಡ ಅನಧೀಕೃತ ವ್ಯವಹಾರಗಳನ್ನು ಅಧಿಕೃತಗೊಳಿಸಿಕೊಂಡ ಸಂಖ್ಯೆಯೂ ಕಡಿಮೆ ಏನೂ ಇಲ್ಲ.

ಸಂಯುಕ್ತ ಸಹಕಾರಿ ಮಂಡಳಿ ಮಾದರಿ ಉಪನಿಯಮಗಳನ್ನು ರಚಿಸಲು ಅಧಿಕಾರವಿದ್ದರೂ ಪತ್ತಿನ ಸಹಕಾರಿ ಸಂಘಗಳಿಗೆ ಮಾತ್ರ ಮಾದರಿ ಉಪವಿಧಿಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದರು. ಇತರೆ ವರ್ಗದ ಸಹಕಾರಿಗಳ ಕಾರ್ಯನಿರ್ವಹಣೆಗೆ ಮಾದರಿ ಉಪವಿಧಿಗಳನ್ನು ರೂಪಿಸಲಿಲ್ಲ. ಪ್ರಾರಂಭಿಕ ಹಂತದಲ್ಲಿ ನೋಂದಣೆ ಯಾದ ನಂತರ, ಸಹಕಾರಿ ಕಾರ್ಯನಿರ್ವಹಣೆ ಬಗ್ಗೆ ಆಗಿದ್ದಾಂಗೆ ಮಾರ್ಗದರ್ಶನ ನೀಡಲು ಸಿಬ್ಬಂದಿ ಕೊರತೆ ಇದ್ದುದರಿಂದ, ಆ ಸಂಸ್ಥೆಗಳು ಪ್ರಾರಂಭದಿಂದಲ್ಲೇ ಸರಿ ದಾರಿ ನಡೆಯಲು ಸಾಧ್ಯವಾಗಲಿಲ್ಲ. ಇದಕ್ಕೆ ಪೂರಕವಾಗಿ ಹೊಸದಾಗಿ ನೋಂದಣಿಯಾದ ಸಂಸ್ಥೆಗಳು ಹಳೆ ಕಾಯಿದೆಯಲ್ಲಿ ನೋಂದಾವಣೆಯಾದ ಸಂಘಗಳ ನೀತಿ ನಿಯಮಗಳನ್ನು ಅನುಸರಿಸುವಂತೆ ಬಂತು. ಇದರಿಂದ ಆ ಸಂಸ್ಥೆಗಳನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಯಂತ್ರಿತ. ಸಂಸ್ಥೆಯನ್ನು ಕಾರ್ಯನಿರ್ವಹಣೆ ಮಾಡಲು ಸಾಧ್ಯವಾಗಲೇ ಇಲ್ಲ.

ಪ್ರಥಮ ಬಾರಿಗೆ ಸೌಹಾರ್ದ ಕಾಯಿದೆಯಲ್ಲಿ ಅಂತರ ರಾಷ್ಟ್ರೀಯ ಒಕ್ಕೂಟ ರೂಪಿಸಿದ 7 ಸಹಕಾರಿ ತತ್ವಗಳನ್ನು ಸೇರಿಸಿರುವುದು ಒಂದು ವೈಶಿಷ್ಟ. (ಅಧ್ಯಾಯ X) ಈ ತತ್ವಗಳನ್ನು ಕಾಯಿದೆ ರೂಪಿಸುವಾಗ ಮತ್ತು ಉಪವಿಧಿಗಳನ್ನು ರೂಪಿಸುವಾಗ ಅಳವಡಿಸಿಕೊಳ್ಳಬೇಕು. ಈ ಸಹಕಾರಿ ತತ್ವಗಳ ಆಧಾರದ ಮೇಲೆಯೇ ಸಂಯುಕ್ತ ಸಹಕಾರಿ ಮತ್ತು ಸದಸ್ಯ ಸಹಕಾರಿಗಳು ಕಾರ್ಯನಿರ್ವಹಿಸಬೇಕು. ಈ 7 ಸಹಕಾರಿ ತತ್ವಗಳು :–

1) ಸ್ವಯಂ ಪ್ರೇರಿತ ಹಾಗೂ ಮುಕ್ತ ಸದಸ್ಯತ್ವ.

2) ಪ್ರಜಾಸತ್ತಾತ್ಮಕ ಸದಸ್ಯ ಹತ್ತೋಟಿ.

3) ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು.

4) ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ.

5) ಸಹಕಾರಿ ಶಿಕ್ಷಣ, ತರಬೇತಿ ಮತ್ತು ಪ್ರಚಾರ.

6) ಸಹಕಾರಿಗಳಲ್ಲಿ ಕ್ರಿಯಾತ್ಮಕ ಪರಸ್ಪರ ಸಹಕಾರ.

7) ಸಾಮಾಜಿಕ ಕಳಕಳಿ.

ಈ ಮೂಲ ಉದ್ದೇಶಗಳ ಸಹಕಾರಿ ತತ್ವಗಳ ರಚನೆಯಾದ ಪ್ರಥಮ ಕಾಯಿದೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997. ಈ ಕಾಯಿದೆ ರಚನೆಯಾದ ನಂತರ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಮಂಡಳಿ ಶಾಸತ್ಮಾಕ ಅಧಿಕಾರವನ್ನು ನೀಡಿರುವುದು ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯಲ್ಲಿ ಮಾತ್ರ. ರಾಷ್ಟ್ರದ ಬೇರೆ ರಾಜ್ಯಗಳು ಉದ್ದಾರಿಕೃತ ಕಾಯಿದೆ ರೂಪಿಸಿದ್ದರೂ, ಅದರಲ್ಲಿ ನಿಬಂಧಕರೇ ಶಾಸನಾತ್ಮಕ ಅಧಿಕಾರವನ್ನು ಚಲಾಯಿಸಲು ಅಧಿಕಾರ ಇದೆ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ರಚನೆಯಾದ ನಂತರ, ರಾಷ್ಟ್ರ ಮಟ್ಟದಲ್ಲಿ ಈ ಕಾಯಿದೆ ಚರ್ಚೆಯಾಗಿ 2011ರಲ್ಲಿ ರಾಷ್ಟ್ರ ಮಟ್ಟದಲ್ಲಿ ಉದಾರಿಕೃತ ಸಹಕಾರಿ ಕಾಯಿದೆ ರೂಪಿಸಲು ಭಾರತದ ಸಂವಿಧಾನಕ್ಕೆ 97ನೇ ತಿದ್ದುಪಡಿಯ ನಂತರ ರಾಜ್ಯ ಸಹಕಾರಿ ಕಾಯಿದೆಯಲ್ಲಿಯೂ ಕೆಲವು ನೀತಿ ನಿಯಮಗಳನ್ನು ರೂಡಿಸಿತು.

**(2) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು.**

ಕರ್ನಾಟಕ ಸೌಹಾರ್ದ ಕಾಯಿದೆ ಅಡಿ ನೋಂದಾವಣೆ ಯಾಗುವ ಪೂರ್ವದಲ್ಲಿ ಮತ್ತು ಆ ನಂತರದ ದಿನಗಳಲ್ಲಿ ಮಂಡಳಿ ಸದಸ್ಯರಿಗೆ ಮತ್ತು ಸಹಕಾರಿ ಸದಸ್ಯರಿಗೆ ಶಿಕ್ಷಣ ಮತ್ತು ತರಬೇತಿ ನೀಡುವುದಕ್ಕಾಗಿ ಕಾಯಿದೆ ಕಲಂ.10 (XXI)(ಎ–ಎ) ಮತ್ತು (ಬಿ) ರಡಿ ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ಲಾಭಂಶದ ಶೇ.2 ನ್ನು ಮತ್ತು ಸಹಕಾರ ಅಕಾಡಮಿಗೆ ಶೇ.0.50 ನೀಡಲು ಅವಕಾಶ ಕಲ್ಪಿಸಿದೆ. ಈ ನಿಧಿಯನ್ನು ಉಪಯೋಗಿಸಿ ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳ ಮಂಡಳಿ ಸದಸ್ಯರಿಗೆ ಮತ್ತು ಸದಸ್ಯ ಸಹಕಾರಿಗಳಿಗೆ ತರಬೇತಿ/ಕಾರ್ಯಗಾರ, ಸೇವಿನಾರ್‌ಗಳ ಮುಖಾಂತರ ಶಿಕ್ಷಣ ಮತ್ತು ತರಬೇತಿ ಕೊಡುವ ವ್ಯವಸ್ಥೆ ಮಾಡುತ್ತಿದೆ. ಈ ವ್ಯವಸ್ಥೆಗೆ ಕಾರ್ಯ ಸೂಚಿಯನ್ನು ರೂಪಿಸಲು ಒಂದು ಸಲಹಾ ಸಮಿತಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 10ಬಿ ಅನ್ವಯ ರಚನೆ ಮಾಡಿ ಕಾರ್ಯಕ್ರಮ ರೂಪಿಸಲು ಅವಕಾಶ ಕಲ್ಪಿಸಿದೆ. ಅದರಂತೆ ಈ ಸಮಿತಿಯು ವಿಷಯಗಳು, ಭಾಗವಹಿಸುವ ಪ್ರತಿನಿಧಿಗಳು, ಸಂಖ್ಯೆ, ವಿಷಯತಜ್ಞರು, ತರಬೇತಿ ಅವಧಿ, ಸಂಪನ್ಮೂಲಗಳ ವ್ಯಕ್ತಿಗಳ ಪಟ್ಟಿ ಹಾಗೂ ಸಂಭಾವನೆ ಬಗ್ಗೆ ನಿಗದಿ ಪಡಿಸಲು ಅವಕಾಶ ಕಲ್ಪಿಸಿದೆ. ಈಗ ನೀಡುತ್ತಿರುವ ತರಬೇತಿ ರಾಜ್ಯದ ವಿವಿಧ ಮಹಾಮಂಡಳಗಳು ನಡೆಸುತ್ತಿರುವ ತರಬೇತಿಗಿಂತ ಗುಣಮಟ್ಟದ ಶಿಕ್ಷಣ ಮತ್ತು ತರಬೇತಿ ನೀಡಲಾಗುತ್ತಿದೆ. ಭಾಗವಹಿಸುವ ಸಂಖ್ಯೆ ಮಿತಿಗೊಳಿಸಿ ಹೆಚ್ಚು ತರಬೇತಿ ಕಾರ್ಯಕ್ರಮಗಳನ್ನು ಮತ್ತು ವಿವಿಧ ವಿಷಯಗಳನ್ನು ಆಯ್ಕೆ ಮಾಡಲು ಪ್ರಕ್ರಿಯೆಯಲ್ಲಿ ಸದಸ್ಯ ಸಹಕಾರಿಗಳ ಅನಿಸಿಕೆಗಳು ಮತ್ತು ಭಾವನೆಗಳನ್ನು ಆಧರಿಸಿ, ಮುಂದಿನ ತರಬೇತಿ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ಅಳವಡಿಸುತ್ತಿದೆ. ಇದರ ಜೊತೆ ಯುವಕರನ್ನು ಸಹಕಾರಿ ಆಂದೋಲನಕ್ಕೆ ಆಕರ್ಶಿಸಲು ವಿಶ್ವವಿದ್ಯಾಲಯಗಳ ಮುಖಾಂತರ ಕಾರ್ಯಗಾರಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಆಕರ್ಶಿಸಲಾಗುತ್ತಿದೆ. ಇದರ ಜೊತೆ ಸಹಕಾರಿ ತತ್ವಗಳು, ಸಹಕಾರಿ ಬೆಳವಣಿಗೆಗೆ ಪೂರಕವಾಗಿ ಅಳವಡಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಹಕಾರಿ ಆಂದೋಲನದ ಪ್ರಚಾರಕ್ಕಾಗಿ ಮಾಸಿಕ ಪತ್ರಿಕೆ "ಸ್ವಾಭಿಮಾನಿ ಸಹಕಾರಿ" ಪತ್ರಿಕೆ ತರುತ್ತಿದ್ದು, ಗುಣಾತ್ಮ ಬರವಣಿಗೆ ಅವಶ್ಯಕ. ಇದರ ಜೊತೆಗೆ ಶ್ರೇಷ್ಠ ಸದಸ್ಯ ಸಹಕಾರಿ ಸಂಸ್ಥೆಗಳ ಯಶಸ್ಸಿನ ಬಗ್ಗೆ ಸಂಶೋದನೆ, ಸಮರ್ಪಕ ಕೆಲಸ ನಿರ್ವಹಿಸದ ಸದಸ್ಯ ಸಹಕಾರಿಗಳ ಪುನಃಶ್ಚೇತನ ಕಾರ್ಯಕ್ರಮ ರೂಪಿಸುವುದರ ಜೊತೆಗೆ ಪ್ರಕಟಣೆ ಬರಬೇಕು.

**(3) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಾಥಾದೃಷ್ಟ ಅಭಿವೃದ್ದಿ ಯೋಜನೆಗಳನ್ನು ಸಿದ್ದಪಡಿಸಲು ನೆರವಾಗುವುದು;**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ನೋಂದಣಿಯಾದ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಆಗಿಂದಾಗ್ಗೆ ವಿಮರ್ಶೆ

ಮಾಡುವುದು ಅತಿ ಅವಶ್ಯಕ. ಸೌಹಾರ್ದ ಕಾಯಿದೆ ಒಂದು ಹೊಸ ಪ್ರಯೋಗ. ಇದರಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಶಾಸನಾತ್ಮಕ ಅಧಿಕಾರವನ್ನು ನೀಡಿದ್ದು ಕರ್ನಾಟಕ ಸೌಹಾರ್ದ ಕಾಯಿದೆಯಡಿ ಮಾತ್ರ. ಇದು ಒಂದು ಹೊಸ ಪ್ರಯೋಗ. ಅಂದರೆ ಸಹಕಾರಿ ಆಂದೋಲನದಲ್ಲಿ ಸದಸ್ಯರೇ ಆಯ್ಕೆ ಮಾಡಿದ ಒಂದು ಚುನಾಯಿತ ಮಂಡಳಿಗೆ ನಿಬಂಧಕರು ನಿರ್ವಹಿಸುತ್ತಿದ್ದ ಶಾಸನಾತ್ಮಕ ಅಧಿಕಾರವನ್ನು ವರ್ಗಾಹಿಸಿದರೆ, ಅದರಿಂದಾಗುವ ಪರಿಣಾಮಗಳನ್ನು ಆಗಿಂದಾಗ್ಗೆ ವಿಮರ್ಶೆ ಮಾಡುವುದು ಅತಿ ಅವಶ್ಯಕ.

ಸೌಹಾರ್ದ ಕಾಯಿದೆ ರೂಪಿಸಿದ ನಂತರ ಸಹಕಾರಿ ಸದಸ್ಯರು, ಮಂಡಳಿ ಸದಸ್ಯರು ಮತ್ತು ಸಂಯುಕ್ತ ಸಹಕಾರಿ ಮಂಡಳಿ ಸ್ವಾಯತ್ತತೆಯನ್ನು, ಸ್ವೇಚ್ಚತೆ ಎಂದು ವಿವೇಚನಾರಹಿತ ಕಾರ್ಯನಿರ್ವಹಿಸಿದಾಗ ಆಗುವ ಪರಿಣಾಮಗಳನ್ನು ವಿಮರ್ಶೆ ಮಾಡುವುದು ಅವಶ್ಯಕ. ಅದಕ್ಕಾಗಿ ಸಂಯುಕ್ತ ಸಹಕಾರಿ ಮಂಡಳಿ ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಸೌಹಾರ್ದ ಕಾಯಿದೆ ಬಗ್ಗೆ ಮತ್ತು ಸದಸ್ಯ ಸಹಕಾರಿಗಳ ಕಾರ್ಯ ನಿರ್ವಹಣೆ ಬಗ್ಗೆ ಸಂಶೋಧನಾ ವರದಿಯನ್ನು ಪಡೆದು ಕಾರ್ಯ ರೂಪಕ್ಕೆ ತರುತ್ತಿದೆ. ಇದೇ ರೀತಿ ಸಂಯುಕ್ತ ಸಹಕಾರಿಗಳು ಮುಖಾಂತರ ಪರಿವೀಕ್ಷಣಾ ಸಮಯದಲ್ಲಿ ಅಥವಾ ಪ್ರತ್ಯೇಕವಾಗಿ ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಆಗಿಂದಾಗ್ಗೆ ವಿಮರ್ಶಾತ್ಮಕ ವರದಿಯನ್ನು ಪಡೆದು ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶನ ಸಂಯುಕ್ತ ಸಹಕಾರ ನೀಡುತ್ತಿದೆ. ಇದರ ಜೊತೆಗೆ ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಆದ ಶಾಸನಾತ್ಮಕ ನ್ಯೂನತೆಗಳನ್ನು ಆಗಿಂದಾಗ್ಗೆ ಪರಿಶೀಲಿಸಿ ತಪ್ಪೆಸಗಿದ ಸಹಕಾರಿಗಳ ಮೇಲೆ ಶಾಸನ ಬದ್ದ ಅಧಿಕಾರವನ್ನು ಚಲಾಹಿಸಿ, ಆಡಳಿತಾಧಿಕಾರಿ ಅಥವಾ ವಿಶೇಷಾಧಿಕಾರಿ ನೇಮಿಸಿ ಹಾಗೂ ಚುನಾಯಿತ ಮಂಡಳಿ ಸದಸ್ಯರನ್ನು ಅನರ್ಹತೆಗೊಳಿಸುವ ಮೂಲಕ ಮತ್ತು ಕಾರ್ಯನಿರ್ವಹಿಸದ ಸದಸ್ಯ ಸಹಕಾರಿಗಳ ಮೇಲೆ ಸಮಾಪನ ಪ್ರಕ್ರಿಯೇ ಪ್ರಾರಂಭಿಸಲು ಸೂಕ್ತ ಕ್ರಮಕೈಗೊಳ್ಳುತ್ತಿದೆ. ಇದರ ಜೊತೆಗೆ ಸದಸ್ಯ ಸಹಕಾರಿಗಳು ನಿಗದಿತ ಅವಧಿಯಲ್ಲಿ ಲೆಕ್ಕಪರಿಶೋಧಕರನ್ನು ನೇಮಿಸಿ, ಲೆಕ್ಕಪರಿಶೋಧನಾ ವರದಿಯನ್ನು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆದು, ಸೆಪ್ಟೆಂಬರ್ 25ನೇ ತಾರೀಖಿನೊಳಗಾಗಿ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯುವ, ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 25ರೊಳಗಾಗಿ ನಡೆಸುವುದನ್ನು, ಮಂಡಳಿ ಚುನಾವಣೆಯನ್ನು ಅವಧಿಗೆ ಪೂರ್ವದಲ್ಲಿ ರಚಿಸುವ ಬಗ್ಗೆ ಕ್ರಮಕೈಗೊಳ್ಳುವುದನ್ನು ಮತ್ತು ನಿಬಂಧಕರು/ಸಂಯುಕ್ತ ಸಹಕಾರಿಗೆ ನಿಗದಿ ಪಡಿಸಿದ ತಃಖ್ತೆಗಳನ್ನು ಸಲ್ಲಿಸಿದ ಬಗ್ಗೆ ದೃಡೀಕರಣ ಮಾಡಿಕೊಳ್ಳುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ವಿಹಿತವಾಗಿದೆ. ಇದರ ಜೊತೆಗೆ ಮೇಲ್ಕಂಡ ಕ್ರಮವನ್ನು ಜರುಗಿಸದೆ ಇದ್ದಾಗ ಸದಸ್ಯ ಸಹಕಾರಿಗಳ ಮೇಲೆ ಶಾಸನಾತ್ಮಕ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ಹೊಂದಿದೆ.

ಸದಸ್ಯ ಸಹಕಾರಿಗಳಿಗೆ ಹೊಸ ಯೋಜನೆಗಳನ್ನು ರೂಪಿಸಿ ಮಾರ್ಗದರ್ಶನ ನೀಡುವ ಜವಾಬ್ದಾರಿಯೂ ಸಂಯುಕ್ತ ಸಹಕಾರಿಗೆ ಇದೆ. ಇದಕ್ಕಾಗಿ ಸಂಯುಕ್ತ ಸಹಕಾರಿಯು ಆರ್ಥಿಕ ಮತ್ತು ಆಡಳಿತ ಕಾರ್ಯನಿರ್ವಹಣೆ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ ಸದಸ್ಯ ಸಹಕಾರಿಗಳಿಗೆ ಸೂಚಿಸಿ, ಇದರಲ್ಲಿ ಸದಸ್ಯ ಸಹಕಾರಿಗಳ ಆರ್ಥಿಕ ಸಬಲತೆ ಬಗ್ಗೆ ಮತ್ತು ಸಹಕಾರಿಗಳ ಪ್ರಾರಂಭಿಕ ಹಂತದಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳ ಬಗ್ಗೆ ಕಾರ್ಯಗಾರಗಳ ಮುಖಾಂತರ ಯೋಜನೆಗಳನ್ನು ಜಾರಿಗೆ ತರುತ್ತಿದೆ.

**(4) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ನೋಂದಣಿಯಾದ ಪ್ರತಿಯೊಂದು ಸದಸ್ಯ ಸಹಕಾರಿಯೂ ಸಂಯುಕ್ತ ಸಹಕಾರಿ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿ ತತ್ವಗಳಲ್ಲಿ ಒಂದು ಪ್ರಮುಖವಾದ ತತ್ವವೆಂದರೆ "ಸಹಕಾರಿಗಳಲ್ಲಿ ಸಹಕಾರ". ಸಹಕಾರಿ ಆಂದೋಲನ ವ್ಯಕ್ತಿಗಳಿಂದ ಕೂಡಿದ ಒಂದು ಸಂಘಟನೆ. ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವಾಗ ಸಮಾನ ಮನಸ್ಕರು ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಡೀಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚನೆ ಮಾಡಿಕೊಳ್ಳುತ್ತಾರೆ. ಇದರ ಮೂಲ ತತ್ವ "ಎಲ್ಲರಿಗಾಗಿ ನಾನು – ನನಗಾಗಿ ಎಲ್ಲರೂ". ಪರಸ್ಪರ ಸಂಬಂಧ ಸಹಕಾರಿ ಆಂದೋಲನದ ಮೂಲ ತತ್ವ. ಇದಕ್ಕಾಗಿ ಸೌಹಾರ್ದ ಕಾಯಿದೆಯಲ್ಲಿ ನೋಂದಣಿಯಾದ ಪ್ರತಿಯೊಂದು ಸಹಕಾರಿಯ ಜೊತೆ ಸಹಕಾರ ನೀಡುವುದೇ ಈ ಸಹಕಾರಿ ಉದ್ದೇಶ. ಸಂಯುಕ್ತ ಸಹಕಾರಿ ರೂಪಿಸಿದ ಮಾರ್ಗದರ್ಶಿ ಸೂತ್ರಗಳನ್ವಯ ಕಾರ್ಯನಿರ್ವಹಣೆ ಮಾಡುವಾಗ ಬರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ಸದಸ್ಯ ಸಹಕಾರಿಗಳು ಸಂಘಟಿತರಾಗಿ ಸಂಯುಕ್ತ ಸಹಕಾರಿ ಜೊತೆ ವ್ಯವಹರಿಸಿ, ಪರಿಹಾರ ಕಂಡುಕೊಳ್ಳುವ ಒಂದು ವೇದಿಕೆಯಾಗಬೇಕು. ಒಂದು ಸದಸ್ಯ ಸಹಕಾರಿ ಮತ್ತೊಂದು ಸಹಕಾರಿಯ ಸದಸ್ಯತ್ವ ಪಡೆಯಲು ಅರ್ಹನಿಲ್ಲದೆ ಇದ್ದರೂ, ವ್ಯವಹಾರಿಕವಾಗಿ ಆರ್ಥಿಕ ಮತ್ತು ಆಡಳಿತ ನ್ಯೂನತೆಗಳನ್ನು ಪರಿಹಾರ ಪಡೆದುಕೊಳ್ಳಲು ಅವಶ್ಯಕ.

**(5) ಅಗತ್ಯವಿರುವಾಗ ಮಂಡಳಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳ ಹಿತಾಸಕ್ತಿಗೆ ಪೂರಕವಾಗಿ ಕಾರ್ಯನಿರ್ವಹಣೆ ಮಾಡುವುದು ಅವಶ್ಯಕ. ಸದಸ್ಯ ಸಹಕಾರಿಗಳು ಸ್ವಾಯತ್ತ ಸಂಸ್ಥೆಗಳಾಗಿದ್ದರೂ, ಸಂಯುಕ್ತ ಸಹಕಾರಿಯ ಮಾರ್ಗದರ್ಶನ ಅವಶ್ಯಕ. ಸದಸ್ಯರ ಸಹಕಾರಿಗಳ ಮಂಡಳಿ

ಕಾರ್ಯನಿರ್ವಹಣೆ ಬಗ್ಗೆ ಸಂಯುಕ್ತ ಸಹಕಾರಿಯೇ ತನ್ನ ನೌಕರ/ಅಧಿಕಾರಿಗಳ ಮುಖಾಂತರ ಮಂಡಳಿ ರಚನೆಯಲ್ಲಿ, ಕಾರ್ಯನಿರ್ವಹಣೆಯಲ್ಲಿ, ಲೆಕ್ಕಪತ್ರಗಳ ನಿರ್ವಹಣೆಯಲ್ಲಿ. ಆರ್ಥಿಕ ತಃಖ್ತೆಗಳ ಬಗ್ಗೆ, ಆಡಳಿತ ತೀರ್ಮಾನಗಳ ಬಗ್ಗೆ, ನಡವಳಿಕೆಗಳ ದಾಖಲಿಸುವ ಬಗ್ಗೆ, ತೀರ್ಮಾನಗಳನ್ನು ಜಾರಿ ಮಾಡುವ ಬಗ್ಗೆ, ಸಂಯುಕ್ತ ಸಹಕಾರಿ ನೌಕರ/ಅಧಿಕಾರಿ ಮಾರ್ಗದರ್ಶನ ನೀಡಲು ನಿಯುಕ್ತಿ ಮಾಡಬಹುದು. ಅಂತಹ ಪ್ರತಿನಿಧಿ ಸಂಯುಕ್ತ ಸಹಕಾರಿ ಪರವಾಗಿ ಮಾರ್ಗದರ್ಶನ ನೀಡಲು, ಸಲಹೆ ಸೂಚನೆ ನೀಡಲು, ಅಧಿಕಾರ ಹೊಂದಿರುತ್ತಾನೆ. ನೀಡಿದ ಸೂಚನೆಗಳ ಮಾಹಿತಿಯನ್ನು ಸಂಬಂಧಪಟ್ಟ ನೌಕರ/ಅಧಿಕಾರಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ನೀಡತಕ್ಕದ್ದು. ಈ ಅಧಿಕಾರಿಯು ಸಹಕಾರಿಯ ಕಾರ್ಯನಿರ್ವಹಣೆ ಬಗ್ಗೆ ಸಂಯುಕ್ತ ಸಹಕಾರಿಯ ಮಾರ್ಗದರ್ಶಿ ಸೂತ್ರಗಳ ಪೂರಕವಾಗಿ ಸಲಹೆ ಸೂಚನೆಗಳನ್ನು ಕೊಡಲು ಅಧಿಕಾರ ಹೊಂದಿರುತ್ತಾನೆ. ಆ ಸೂಚನೆಗಳು ಸಂಯುಕ್ತ ಸಹಕಾರಿ ನೀತಿಗೆ ಪೂರಕವಾಗಿರತಕ್ಕದ್ದು. ಇದಲ್ಲದೆ ಸದಸ್ಯ ಸಹಕಾರಿ ಕಾರ್ಯನಿರ್ವಹಣೆಗಳಲ್ಲಿ ಹೊಸ ಯೋಜನೆಗಳನ್ನು ರೂಪಿಸಲು ಸಲಹೆ ಸೂಚನೆ ಕೊಡುವ ಜವಾಬ್ದಾರಿ ಇರತಕ್ಕದ್ದು.

**(6) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಸಂಯುಕ್ತ ಸಹಕಾರಿಯ ಮಂಡಳಿ ತನ್ನ ಮಂಡಳಿಯ ಪದಾಧಿಕಾರಿಗಳಿಗೆ, ಮಂಡಳಿ ಸದಸ್ಯರಿಗೆ ಮತ್ತು ನೌಕರರಿಗೆ ನೀತಿ ಸಂಹಿತೆಯನ್ನು ರೂಪಿಸಿ ಸಾಮಾನ್ಯ ಸಭೆಯ ಒಪ್ಪಿಗೆ ಪಡೆದು ಜಾರಿ ಮಾಡುವ ಜವಾಬ್ದಾರಿ ಇದೆ. ಸದಸ್ಯ ಸಹಕಾರಿಗಳಿಗೆ ಈ ಮೇಲ್ಕಂಡ ನೀತಿ ಸಂಹಿತೆಯಂತೆಯೇ ಸದಸ್ಯ ಸಹಕಾರಿಗಳ ಪದಾಧಿಕಾರಿಗಳಿಗೆ ಮಂಡಳಿ ಸದಸ್ಯರಿಗೆ ಮತ್ತು ಸಹಕಾರಿ ನೌಕರರಿಗೆ ನೀತಿ ಸಂಹಿತೆಯನ್ನು ರೂಪಿಸಿ ಅಳವಡಿಸಿಕೊಳ್ಳುವಂತೆ ನಿರ್ದೇಶನ/ಸೂಚನೆ ನೀಡಬೇಕು ಇದು ಸಂಯುಕ್ತ ಸಹಕಾರಿಯ ಜವಾಬ್ದಾರಿ. ಈ ನೀತಿ ಸಂಹಿತೆಯಲ್ಲಿ ಅಳವಡಿಸಿಕೊಳ್ಳಬೇಕಾದ ನೀತಿಗಳೆಂದರೆ, ಪದಾಧಿಕಾರಿಗಳು, ಮಂಡಳಿ ಸದಸ್ಯರು ಮತ್ತು ನೌಕರರು ತಮ್ಮ ಕೆಲಸವನ್ನು ನಿಷ್ಠೆಯಿಂದ, ನಿಸ್ವಾರ್ಥತೆಯಿಂದ ಮತ್ತು ಸದಸ್ಯ ಹಿತಾಕ್ತಿಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತೀವೆಂದು ಪ್ರಮಾಣೀಕರಿಸುವುದರ ಜೊತೆಗೆ ಕಾಯಿದೆ, ನಿಯಮ ಮತ್ತು ಉಪವಿಧಿಗಳನ್ನು ಪಾಲಿಸುವುದಾಗಿಯೂ ಮತ್ತು ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ತೊಡಕಾಗದಂತೆ ಪ್ರಮಾಣಿಕರಿಸತಕ್ಕದ್ದು. ಈ ರೀತಿ ರೂಪಿಸಿದ ನೀತಿ ಸಂಹಿತೆಯನ್ನು ಸದಸ್ಯ ಸಹಕಾರಿಗಳು ಅಳವಡಿಸಿಕೊಂಡು ಅವರ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆದು ಸಂಬಂಧಪಟ್ಟ ಎಲ್ಲರಿಗೂ ಅದನ್ನು ಜಾರಿಮಾಡಿ, ಉಲ್ಲಂಖಿಸಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಅಧಿಕಾರ ಮಂಡಳಿ/ಸಾಮಾನ್ಯ ಸಭೆಗೆ ವಿಹಿತವಾಗಿರತಕ್ಕದ್ದು. ಸದಸ್ಯ ಸಹಕಾರಿಗಳಿಗೆ ನೀತಿ ಸಂಹಿತೆ ರೂಪಿಸುವ ಮೊದಲು, ಸಂಯುಕ್ತ ಸಹಕಾರಿಯೇ ತನ್ನ ಪದಾಧಿಕಾರಿಗಳು, ನಿರ್ದೇಶಕರು ಮತ್ತು ನೌಕರರಿಗೆ ನೀತಿ ಸಂಹಿತೆ ಅಳವಡಿಸಿಕೊಳ್ಳದೇ, ಇರುವುದು ಒಂದು ಆಭಾಸ. ಏಕೆಂದರೆ, ಬೇರೆಯವರಿಗೆ ಮಾಡಬೇಕೆಂದು ಹೇಳುವಾಗ, ಅದನ್ನು ತಾವೇ ಅಳವಡಿಸಿಕೊಳ್ಳದಿದ್ದರೆ, ಸಂಯುಕ್ತ ಸಹಕಾರಿ ಮಾದರಿ ಹೇಗಾಗುತ್ತದೆ.

**(7) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ನೋಂದಾವಣೆ ಪೂರ್ವದಲ್ಲಿ ಸಂಗ್ರಹಿಸಬೇಕಾದ ಆರ್ಥಿಕ ನಿರ್ಬಂದಗಳನ್ನು ನಿಬಂಧಕರು ರೂಪಿಸಿದ್ದಾರೆ. ನೋಂದಾವಣೆ ಪೂರ್ವದಲ್ಲಿ ಸದಸ್ಯರ ಸಂಖ್ಯೆ ಮತ್ತು ಪಾಲು ಬಂಡವಾಳದ ಮಿತಿಗಳನ್ನು ನಿಗದಿ ಪಡಿಸಿದ್ದಾರೆ. ಸಂಯುಕ್ತ ಸಹಕಾರಿ ಸದಸ್ಯರ ಸಹಕಾರಿ ನೋಂದಾವಣೆ ನಂತರ ಆರ್ಥಿಕ ಸಬಲತೆ ಬಗ್ಗೆ, ಆರ್ಥಿಕ ಮತ್ತು ಆಡಳಿತ ನಿರ್ವಹಣೆ ಬಗ್ಗೆ ಮಾನದಂಡಗಳನ್ನು ನಿಗದಿ ಪಡಿಸುವ ಜವಾಬ್ದಾರಿ ಹೊಂದಿದೆ. ಅಂದರೆ ಸದಸ್ಯ ಸಹಕಾರಿ ನಿರ್ವಹಿಸುವ ವ್ಯವಹಾರದ ಬಗ್ಗೆ ಮಾನದಂಡಗಳನ್ನು ನಿರ್ವಹಿಸಬೇಕು. ಠೇವಣಿ ಸಂಗ್ರಹಿಸುವಾಗ, ಸಾಲ ನೀಡುವಾಗ, ಸುಸ್ತಿಯಾದ ಸಾಲದ ಮೇಲೆ ಕ್ರಮ ಜರುಗಿಸುವಾಗ, ವಸುಲಾತಿ ಬಗ್ಗೆ ಮಾರ್ಗದರ್ಶನ ನೀಡುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ಇರತಕ್ಕದ್ದು. ಠೇವಣಿ ಸಂಗ್ರಹಣೆ ಮೇಲಿನ ಬಡ್ಡಿ, ಸಾಲ ನೀಡುವ ಬಡ್ಡಿ ದರ ಮತ್ತು ಅದರ ಮದ್ಯೆ ಇರುವ ಅಂತರದ ಬಗ್ಗೆ, ಸಂಯುಕ್ತ ಸಹಕಾರಿ ಆ ಸದಸ್ಯ ಸಹಕಾರಿ ಆಡಳಿತ ವೆಚ್ಚ ಮತ್ತು ಸಿಬ್ಬಂದಿ ವೆಚ್ಚ ಪರಿಗಣಿಸಿ, ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ಜವಾಬ್ದಾರಿ ಹೊಂದಿದೆ. ಇದರ ಜೊತೆಗೆ ಮಂಡಳಿಯ ಸದಸ್ಯರು ಪ್ರಯಾಣ ಭತ್ಯೆ, ಸಭಾ ಭತ್ಯೆ ಮತ್ತಿತ್ತರ ಭತ್ಯೆಗಳ ಬಗ್ಗೆ ಮಿತಿಗಳನ್ನು ರೂಪಿಸುವ ಜವಾಬ್ದಾರಿ ಹೊಂದಿದೆ. ಸದಸ್ಯರ ಸಹಕಾರಿಗಳು ಸ್ವಾಯತ್ತತೆಯನ್ನು ಸ್ವೇಚ್ಚತೆ ಎಂದು ಅರ್ಥೈಸಿಕೊಳ್ಳದ ರೀತಿ ಮಾರ್ಗದರ್ಶನ ನೀಡತಕ್ಕದ್ದು. ಇತ್ತೀಚೆಗೆ ಸಂಯುಕ್ತ ಸಹಕಾರಿ, ಸಾಮಾನ್ಯ ಸಭೆ ಒಪ್ಪಿಗೆ ಪಡೆದು, ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ ಜಾರಿಗೆ ತಂದಿದೆ. ಅದನ್ನು ಅಳವಡಿಸಿಕೊಂಡ ಬಗ್ಗೆ ಅಗಿಂದಾಗ್ಗೆ ವಿಮರ್ಷೆ ಮಾಡಬೇಕು.

**(8) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆ ಒಂದು ಹೊಸ ಕಾಯಿದೆಯಾಗಿದ್ದು ಈ ಕಾಯಿದೆಯಲ್ಲಿ ಉದಾರೀಕರಣ ನೀತಿಯನ್ನು ಅಳವಡಿಸಿಕೊಂಡಿದ್ದು ಸದಸ್ಯ ಸಹಕಾರಿಗಳು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಿದ್ದರೂ, ಇವುಗಳನ್ನು ಅರ್ಥೈಸುವಾಗ ಸ್ವೇಚ್ಚತೆ

ಅಲ್ಲವೆಂದು ಸದಸ್ಯರ ಸಹಕಾರಿಗಳಿಗೆ ಅರ್ಥೈಸುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ವಿಹಿತವಾಗಿದೆ. ಸದಸ್ಯ ಸಹಕಾರಿಗಳು ತನ್ನ ಉಪವಿಧಿಗಳನ್ನು ಅಳವಡಿಸಿಕೊಳ್ಳುವಾಗ, ಮಾರ್ಪಾಡಿಸುವಾಗ, ಸೌಹಾರ್ದ ಕಾಯಿದೆ ಮತ್ತು ನಿಯಮಗಳಿಗೆ ಪೂರಕವಾಗಿ ಉಪವಿಧಿಗಳನ್ನು ರಚಿಸಿಕ್ಕೊಳ್ಳುವಂತೆ ಸಲಹೆ ಸೂಚನೆಗಳನ್ನು ನೀಡತಕ್ಕದ್ದು. ಸದಸ್ಯರ ಸಹಕಾರಿಗಳ ಮಾದರಿ ಉಪವಿಧಿಗಳನ್ನು ರೂಪಿಸಿ ಅಳವಡಿಸಿಕೊಳ್ಳಲು ಸೂಚಿಸಬಹುದು. ಸದಸ್ಯರ ಸಹಕಾರಿಗಳಿಗೆ ಕಾನೂನು ಮತ್ತು ನಿಯಮಗಳನ್ನು ಜಾರಿ ಮಾಡುವಾಗ ಸದಸ್ಯರ ಸಹಕಾರಿಗಳಿಗೆ ಅರ್ಥೈಸಿಕೊಳ್ಳಲಾಗದ ವಿಷಯಗಳ ಬಗ್ಗೆ ಸಂಯುಕ್ತ ಸಹಕಾರಿ ಕಾನೂನು ಕೋಶದಿಂದ ಸಲಹೆ ಸೂಚನೆಯನ್ನು ನೀಡತಕ್ಕದ್ದು. ಕಾಯಿದೆಯಲ್ಲಿನ ಅಂಶಗಳನ್ನು ಜಾರಿ ಮಾಡಲು ಸಾಧ್ಯವಿಲ್ಲದೆ ಇದ್ದಾಗ ಅಥವಾ ಜಾರಿ ಮಾಡಲು ಇರುವ ತೊಡಕುಗಳನ್ನು ಪರಿಹರಿಸಲು ಕಾಯಿದೆಯ ತಿದ್ದುಪಡಿಗಳ ಅವಶ್ಯಕತೆ ಎಂದು ಸರ್ಕಾರದ ಜೊತೆ ವ್ಯವಹರಿಸಿ, ಕಾನೂನು ಮತ್ತು ನಿಯಮಗಳಿಗೆ ಸದಸ್ಯರ ಸಹಕಾರಿಗಳ ಪರವಾಗಿ ಪತ್ರ ವ್ಯವಹಾರ ನಡೆಸತಕ್ಕದ್ದು.

**(9) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ನೋಂದಾವಣಿಯಾದ ಬಹಳಷ್ಟು ಸದಸ್ಯ ಸಹಕಾರಿಗಳು ಪತ್ತಿನ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಇತರ ಸೇವೆ ಮತ್ತು ಸೌಲಭ್ಯಗಳ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಯಾಗಿಲ್ಲ. ಹಾಲಿ ಸದಸ್ಯ ಸಹಕಾರಿಗಳ ಧ್ಯೇಯೋದ್ದೇಶಗಳನ್ನು ಮಾರ್ಪಾಡು ಮಾಡಿ ಸದಸ್ಯರ ಅವಶ್ಯಕತೆಗನುಗುಣವಾಗಿ ಹೊಸ ಸೇವೆ ಮತ್ತು ಸೌವಲತ್ತುಗಳನ್ನು ಅಳವಡಿಸಿಕೊಳ್ಳಬಹುದು. ಬಹಳಷ್ಟು ವರ್ಷಗಳಿಂದ ಇ–ಸ್ಟಾಂಪಿಂಗ್ ಸೇವೆಯನ್ನು ಹಲವಾರು ಸದಸ್ಯ ಸಹಕಾರಿಗಳು ಅಳವಡಿಸಿಕೊಂಡಿದ್ದರೂ, ಇನ್ನೂ ಸಾಕಷ್ಟು ಸದಸ್ಯ ಸಹಕಾರಿಗಳು ವ್ಯವಹಾರಗಳನ್ನು ವೈವಿದ್ಯಮಯ ಗೊಳಿಸಿಲ್ಲ. ಉದಾಹರಣೆಗೆ ವಿಮಾನದ ಟಿಕೆಟ್ ಕಾದಿರಿಸುವುಕೆ, ರೈಲು ಮತ್ತು ಬಸ್ ಟಿಕೆಟ್ ಕಾದಿರಿಸುವುಕೆ, ಕೋರಿಯರ್ ಸರ್ವಿಸ್ ಮತ್ತಿತ್ತರ ಸೇವೆಗಳನ್ನು ಪ್ರಾರಂಭಿಸಲು ಪ್ರೇರೆಪಿಸುವ ಜವಾಬ್ದಾರಿ ಸಂಯುಕ್ತ ಸಹಕಾರಿ ಇರತ್ತಕ್ಕದ್ದು.

**(10) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು.**

ಮೇಲೆ ಹೇಳಿದಂತೆ ಬಹಳಷ್ಟು ಸಹಕಾರಿಗಳು ಪತ್ತಿನ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಸದಸ್ಯರ ಅವಶ್ಯಕತೆಗನುಗುಣವಾಗಿ ವಿವಿಧ ರೀತಿಯ ಸಹಕಾರಿಗಳನ್ನು ನೋಂದಾಯಿಸಲು ಕ್ರಮ ಜರುಗಿಸಬೇಕು. ಕರ್ನಾಟಕದಲ್ಲಿ ಪ್ರವಾಸೋಧ್ಯಮಕ್ಕೆ ಅವಕಾಶಗಳು ಇದ್ದು, ಅಂತಹ ಸಂಸ್ಥೆಗಳನ್ನು ಹುಟ್ಟು ಹಾಕಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ರೆಸಾರ್ಟ್‌ಗಳನ್ನು ಪ್ರಾರಂಭಿಸಿರುವುದು ಒಂದು ಉದಾಹರಣೆ. ಅದೇ ರೀತಿ ವ್ಯವಹಾರಗಳನ್ನು ವೈವಿದ್ಯಮಯಗೊಳಿಸಿ ಸಂಸ್ಥೆಗಳನ್ನು ಹುಟ್ಟು ಹಾಕಬೇಕು. ಕಾಯಿದೆ ಕಲಂ.14, 15 ಮತ್ತು 16 ರನ್ವಯ ಕಲ್ಪಿಸಿರುವ ಅವಕಾಶವನ್ನು ಉಪಯೋಗಿಸಿಕೊಂಡು ಸದಸ್ಯ ಸಹಕಾರಿಯನ್ನು ಪ್ರಚೋದಿಸಿ ಹೊಸ ರೀತಿಯ ಸಂಸ್ಥೆಗಳನ್ನು ಹುಟ್ಟು ಹಾಕಲು ಸಂಯುಕ್ತ ಸಹಕಾರಿ ಪ್ರಯತ್ನಿಸಬೇಕು.

**(11) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಕಲಂ.10 ಉಪಕಲಂ.(XXI)(ಎ–ಎ)ಮತ್ತು(ಬಿ) ಅನ್ವಯ ಲಾಭಗಳಿಸಿದ ಪ್ರತಿಯೊಂದು ಸದಸ್ಯ ಸಹಕಾರಿಯು ಶಿಕ್ಷಣ ನಿಧಿಗೆ ಲಾಭಾಂಶದ ಶೇ.2 ನ್ನು ಪಾವತಿಸಲು ಷರತ್ತು ವಿದಿಸಿದೆ. ಇದರ ಜೊತೆಗೆ ಸಹಕಾರ ಅಕಾಡಮಿಗೆ ಲಾಭಾಂಶದ ಶೇ.0.50 ಶಿಕ್ಷಣ ನಿಧಿ ಪಾವತಿಸಲು ಅವಕಾಶ ಕಲ್ಪಿಸಿದೆ – ಈ ಸಂಸ್ಥೆ ಇನ್ನೂ ಕಾರ್ಯ ರೂಪಕ್ಕೆ ಬಂದಿಲ್ಲ. ಈ ಶಿಕ್ಷಣ ನಿಧಿ ಪಾವತಿಸುವ ಜೊತೆಗೆ ಸದಸ್ಯ ಸಹಕಾರಿಗಳೇ, ಅದರಲ್ಲೂ ಪ್ರಮುಖವಾಗಿ ಜಿಲ್ಲಾ ಮಟ್ಟದ ಸಹಕಾರಿಯ ಒಕ್ಕೂಟಗಳು, ಸದಸ್ಯ ಸಹಕಾರಿಗಳ ಅವಶ್ಯಕತೆ ಅನುಗುಣವಾಗಿ ತರಬೇತಿ ವ್ಯವಸ್ಥೆ ಮಾಡಬೇಕಾಗಿರುವುದರಿಂದ ಪ್ರತಿ ಸದಸ್ಯ ಸಹಕಾರಿಯು ಶಾಸನಾತ್ಮಕ ಶಿಕ್ಷಣ ನಿಧಿಗೆ ಪೂರಕವಾಗಿ, ಸದಸ್ಯರ ಅವಶ್ಯಕತೆಗೆ ತಕ್ಕಂತೆ ಹೆಚ್ಚುವರಿಯಾಗಿ ಲಾಭಾಂಶದಲ್ಲಿ ನಿಗದಿ ಪಡಿಸಿದ ಒಂದು ನಿಧಿಯನ್ನು ಸೃಷ್ಟಿಸಿ ಸದಸ್ಯರಿಗೆ ಅಗತ್ಯವಾದ ತರಬೇತಿ ನೀಡುವುದರ ಜೊತೆಗೆ ಯಶಸ್ವಿಯಾದ ಸೌಹಾರ್ದ ಸಹಕಾರಿಗಳಿಗೆ ಸಂದರ್ಶನ ಮತ್ತು ಅಭ್ಯಾಸ ಮಾಡಲು ಆ ಹೆಚ್ಚುವರಿ ಶಿಕ್ಷಣ ನಿಧಿಯನ್ನು ಉಪಯೋಗಿಸಬಹುದು.

**(12) ಸಹಕಾರಿ ವಿಚಾರ ಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು.**

ಸಹಕಾರಿ ಆಂದೋಲನ ಸದಸ್ಯರ ಆರ್ಥಿಕ ಬೆಳವಣಿಗೆಗಾಗಿ ರಚನೆಯಾಗಿದ್ದು ಸಾರ್ವಜನಿಕವಾಗಿ ಈ ವಿಚಾರದಾರೆಯನ್ನು ಸಮಾಜಕ್ಕೆ ತಿಳುವಳಿಕೆ ನೀಡುವುದರ ಜೊತೆಗೆ ಸಮಾಜದ ಎಲ್ಲಾ ವರ್ಗದ ಸದಸ್ಯರನ್ನು ಸಹಕಾರಿ ಆಂದೋಲನದ ಕಕ್ಷೇಗೆ ತರುವ ಪ್ರಯತ್ನ ಪಡುವುದೇ ಸಹಕಾರಿಯ ಧ್ಯೇಯೋದ್ದೇಶ. ಇದಕ್ಕಾಗಿ ಸಂಯುಕ್ತ ಸಹಕಾರಿಯ ಮುಖಂಡತ್ವದಲ್ಲಿ ಈಗಾಗಲೆ ಜರುಗಿಸುತ್ತಿರುವ ಸಂಪರ್ಕ ಸಭೆಗಳ ರೂಪದಲ್ಲಿ ಸದಸ್ಯರಲ್ಲದವರನ್ನು ಪ್ರಚೋದಿಸಿ ಸಹಕಾರಿ ಆಂದೋಲನಕ್ಕೆ ಪ್ರವೇಶ ಮಾಡುವುದರ ಬಗ್ಗೆ ಯೋಜನೆಗಳನ್ನು ರೂಪಿಸಿ ಜಿಲ್ಲಾ ಒಕ್ಕೂಟಗಳು ಮತ್ತು ಸಂಯುಕ್ತ ಸಹಕಾರಿ ಕಾರ್ಯಕ್ರಮ ರೂಪಿಸುವುದು ಅವಶ್ಯಕ.

**(13 ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು.**

ಸಹಕಾರಿಗಳಲ್ಲಿ ಸಹಕಾರ ಎಂಬುದು ಸಹಕಾರಿ ತತ್ವಗಳಲ್ಲಿ 6ನೇ ತತ್ವ. ಇದಕ್ಕೆ ಪೂರಕವಾಗಿ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳನ್ನು ವರ್ಗೀಕರಣ ಮಾಡಿ ಅವರಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿ ವಿಮರ್ಶಿಸಿ ಪರಿಹಾರ ಕಂಡುಕೊಳ್ಳುವ ಒಂದು ವೇದಿಕೆಯನ್ನು ಸೃಷ್ಟಿ ಮಾಡುವ ಜವಾಬ್ದಾರಿ ಸಂಯುಕ್ತ ಸಹಕಾರಿ ಹೊಂದಿದೆ. ಇದರ ಜೊತೆಗೆ ಹೊಸ ಯೋಜನೆಗಳನ್ನು ರೂಪಿಸಿದಾಗ ಅವುಗಳನ್ನು ಜಾರಿ ಮಾಡಲು ಇರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ಒಂದು ವೇದಿಕೆಯನ್ನು ಸೃಷ್ಟಿ ಮಾಡಿ ಚರ್ಚೆಗೆ ಅವಕಾಶ ಕಲ್ಪಿಸಿ ಅವಶ್ಯವಿದ್ದರೆ' ಕಾಯಿದೆ ತಿದ್ದುಪಡಿ/ ಮಾರ್ಪಾಡು ಮಾಡಲು ಪ್ರಯತ್ನಿಸಬೇಕು.

**(14) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್‌ನಂತೆ ವರ್ತಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆ ಒಂದು ಹೊಸ ಪ್ರಯೋಗವಾಗಿದ್ದು ಇದರ ಯಶಸನ್ನು ಸರ್ಕಾರ ಮತ್ತು ಸಾರ್ವಜನಿಕರಿಗೆ ಪ್ರಚುರ ಪಡಿಸಲು ಒಂದು ವೇದಿಕೆ ಎಂದರೆ ಸಂಯುಕ್ತ ಸಹಕಾರಿ. ಸದಸ್ಯ ಸಹಕಾರಿಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ ಅವುಗಳನ್ನು ಪ್ರಕಟಪಡಿಸಿದಾಗ ಮತ್ತು ಯಶಸ್ವಿ ಸಹಕಾರಿಗಳ ಬಗ್ಗೆ ಪ್ರಚಾರ ಮಾಡಲು ಸದಸ್ಯ ಸಹಕಾರಿಗಳ ಪೂರ್ಣ ಪ್ರಮಾಣದ ಮಾಹಿತಿಯನ್ನು, ಅವುಗಳ ವಾರ್ಷಿಕ ವರದಿಗಳು ಮತ್ತು ಲೆಕ್ಕ ತಪಾಸಣಾ ವರದಿಗಳ ಅಂಕಿ ಅಂಶಗಳ ಆಧಾರದ ಮೇಲೆ ಕ್ರೋಢೀಕರಿಸಿ ಕನಿಷ್ಠ ವರ್ಷಕೊಮ್ಮೆಯಾದರು ಪ್ರಕಟಿಸುವ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ನಿರ್ವಹಿಸಲೇಬೇಕು. ಈ ಕಾಯಿದೆ ಹೊಸ ಪ್ರಯೋಗವಾಗಿದ್ದು ಈ ಪ್ರಯೋಗದಿಂದ ಸಹಕಾರಿ ಆಂದೋಲನದ ಬೆಳವಣಿಗೆಗೆ ಪೂರಕವಾಗಿದೆ ಎಂದು ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ, ಪ್ರಚಾರ ಮತ್ತು ಪ್ರಕಟಣೆ ಮಾಡುವುದರಿಂದ, ಸಾರ್ವಜನಿಕವಾಗಿ ಸೌಹಾರ್ದ ಸಹಕಾರಿ ಬಗ್ಗೆ ಸಕಾರಾತ್ಮಕ ಪ್ರತಿಕ್ರಿಯೇ ಬಂದಾಗ, ಅದು ಈ ಕಾಯಿದೆಯ ಯಶಸ್ಸನ್ನು ಗುರುತಿಸದಂತಾಗುತ್ತದೆ. ಸಂಯುಕ್ತ ಸಹಕಾರಿ ಇದನ್ನು ಕರ್ತವ್ಯ ಮತ್ತು ಜವಾಬ್ದಾರಿ ಎಂದು ಕನಿಷ್ಠ ವರ್ಷಕ್ಕೊಮ್ಮೆಯಾದರೂ ಕನಿಷ್ಠ ಪ್ರಮಾಣದ ಅಂಕಿ ಅಂಶಗಳನ್ನು ಪ್ರಕಟಿಸುವುದು ಅತಿ ಅವಶ್ಯಕ.

**(15) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಸಂಯುಕ್ತ ಸಹಕಾರಿ, ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿಪಾದಿಸುವುದು ಅವಶ್ಯಕ. ಕಾಯಿದೆ, ನಿಯಮ ಮತ್ತು ಉಪವಿಧಿಗಳನ್ನು ಜಾರಿ ಮಾಡುವಾಗ ವ್ಯವಹಾರಿಕ ತೊಡಕುಗಳನ್ನು ಪರಿಹಾರ ಕಂಡುಕೊಳ್ಳುವಾಗ ನ್ಯೂನತೆ ಇದ್ದರೆ, ಅದನ್ನು ಸರ್ಕಾರದ ಜೊತೆ ಪರಿಹಾರ ಕಂಡು ಕೊಳ್ಳುವಲ್ಲಿ ಸಂಯುಕ್ತ ಸಹಕಾರಿ ಮುಖಂಡತ್ವ ವಹಿಸುವುದು ಅವಶ್ಯಕ. ಇದಕ್ಕೆ ಪೂರಕವಾಗಿ ಇತ್ತೀಚೆಗೆ ಆದಾಯ ತೆರಿಗೆ ಕಾಯಿದೆಯಡಿ ಸದಸ್ಯ ಸಹಕಾರಿಗೆ, ಆದಾಯ ತೆರಿಗೆ ಇಲಾಖಾಧಿಕಾರಿಗಳು ನೀಡುತ್ತಿರುವ ನೋಟೀಸ್‌ಗಳನ್ನು ಪರಿಗಣಿಸಿ, ಉಚ್ಚನ್ಯಾಯಾಲಯದಲ್ಲಿ ಸದಸ್ಯ ಸಹಕಾರಿಗಳ ಪರವಾಗಿ ತೀರ್ಮಾನ ಬಂದಿದ್ದರೂ, ನೋಟೀಸ್ ಜಾರಿ ಮಾಡುವುದನ್ನು ಕ್ರೋಢೀಕರಿಸಿ ಸದಸ್ಯ ಸಹಕಾರಿಗಳ ಹಿತಾಸಕ್ತಿ ಕಾಪಾಡಲು ಸಂಯುಕ್ತ ಸಹಕಾರಿಯ ಜವಾಬ್ದಾರಿ. ಇದೇ ರೀತಿ ಚೆಕ್ ಡಿಸ್‌ಕೌಂಟಿಂಗ್ ವ್ಯವಸ್ಥೆಯಡಿ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ವಿನಾಯಿತ ಪಡೆಯುವ ಬಗ್ಗೆ ಕ್ರೊಢೀಕೃತ ಪ್ರಯತ್ನ ಸಂಯುಕ್ತ ಸಹಕಾರಿಯ ಜವಾಬ್ದಾರಿ.

**(16) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು.**

97ನೇ ಸಂವಿಧಾನ ತಿದ್ದುಪಡಿಯ ನಂತರ ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ರಾಜ್ಯ ಕಾಯಿದೆಯಲ್ಲಿ ನಿಗದಿ ಪಡಿಸಿಬೇಕಾದ ಜವಾಬ್ದಾರಿಗಳು ಮತ್ತು ಮಿತಿಗಳನ್ನು ನಿಗದಿ ಪಡಿಸಿದೆ. ಅದರಲ್ಲಿ ಪ್ರಮುಖವಾಗಿ ಪ್ರತಿಯೊಂದು ಸದಸ್ಯ ಸಹಕಾರಿಗಳು ಪ್ರತಿ ವರ್ಷ ಲೆಕ್ಕ ತಪಸಾಣೆಯನ್ನು, ನಿಗದಿ ಪಡಿಸಿದ ಲೆಕ್ಕ ತಪಾಸಕರಿಂದ ಲೆಕ್ಕ ತಪಾಸಣೆ ಮಾಡಿಸಿ, ಸೆಪ್ಟೆಂಬರ್ 1ನೇ ತಾರೀಖಿನೊಳಗೆ ವರದಿ ಪಡೆದು, ಸೆಪ್ಟೆಂಬರ್ 25 ರೊಳಗಾಗಿ ನಡೆಯುವ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯುವುದು. ಪ್ರತಿ ಸಹಕಾರಿ ವರ್ಷದ ಸೆಪ್ಟೆಂಬರ್ 25 ರೊಳಗಾಗಿ ಸಾಮಾನ್ಯ ಸಭೆ ನಡೆಸತಕ್ಕದ್ದು. ಪ್ರತಿ ಮಂಡಳಿ ಅವಧಿ ಮುಗಿಯುವ 6 ತಿಂಗಳ ಮೊದಲು ಹೊಸ ಮಂಡಳಿ ರಚನೆಗೆ ಕಾರ್ಯಪ್ರವೃತ್ತರಾಗುವುದು ಮತ್ತು ಸೆಪ್ಟೆಂಬರ್ 30 ರೊಳಗಾಗಿ ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗಳಿಗೆ ವರದಿಯನ್ನು ಸಲ್ಲಿಸುವುದು. ಈ ನಾಲ್ಕು ಪ್ರಕ್ರಿಯೆಗಳನ್ನು ಸೆಪ್ಟೆಂಬರ್ 30 ರೊಳಗಾಗಿ ಸದಸ್ಯ ಸಹಕಾರಿಗಳು ನಿರ್ವಹಿಸಿದ್ದಾರೆಂದು ದೃಢೀಕರಿಸಿಕೊಳ್ಳುವುದು, ಸಂಯುಕ್ತ ಸಹಕಾರಿಯ ಜವಾಬ್ದಾರಿ ಮತ್ತು ಕರ್ತವ್ಯ. ಈ ಮೇಲ್ಕಂಡ ಷರತ್ತುಗಳನ್ನು ಭಾರತದ ಸಂವಿಧಾನದಲ್ಲಿಯೇ ನಿರ್ದೇಶಿಸಿರುವುದರಿಂದ, ಇದರಲ್ಲಿ ಯಾವುದೇ ವಿನಾಯಿತಿ ನೀಡಲಾರದೆ ಕಾಯಿದೆ ಕಲಂ.25, 55 ಮತ್ತು 68 ರಡಿ ಕ್ರಮ ಜರುಗಿಸುವುದು ಸಂಯುಕ್ತ ಸಹಕಾರಿಯ ಜವಾಬ್ದಾರಿ. ಈ ವಿಷಯದ ಬಗ್ಗೆ ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ಅಷ್ಟು ದೊಡ್ಡ ಪ್ರಮಾಣದ ಯಶಸ್ವಿಗಳಿಸಿಲ್ಲ. ಅದಕ್ಕೆ ವಿವರಣೆ ಎಂದರೆ, ಲೆಕ್ಕತಪಾಸಣೆ ಮಾಡಿಸದ ಸದಸ್ಯ ಸಹಕಾರಿಗಳ ಮೇಲೆ ಕ್ರಮ ಜರುಗಿಸುವುದೆಂದರೆ, ಆ ಸದಸ್ಯ ಸಹಕಾರ ಮಂಡಳಿ ಸದಸ್ಯರನ್ನು ಅನರ್ಹತೆಗೊಳಿಸುವುದು ಮತ್ತು ಕಲಂ.68 ರಡಿ ಕ್ರಿಮಿನಲ್ ಪ್ರಕರಣ

ದಾಖಲಿಸುವುದು. ಇದನ್ನು ಮಾಡಿದರೆ, ಸಂಯುಕ್ತ ಸಹಕಾರಿ ಈ ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆಗೆ, ಆಡಳಿತಾಧಿಕಾರಿ/ವಿಶೇಷಾಧಿಕಾರಿ ನೇಮಿಸಲು, ಸಾಕಷ್ಟು ಸಂಸ್ಥೆಯ ಅಧಿಕಾರಿಗಳು ಇಲ್ಲವೆಂದು ಕಾರಣ ನೀಡಲಾಗದು. ಏಕೆಂದರೆ ಇದು ಶಾಸನಾತ್ಮಕ ಜವಾಬ್ದಾರಿ ಮತ್ತು ಕರ್ತವ್ಯ. ಅಂದರೆ ಒಂದು ಸದಸ್ಯ ಸಹಕಾರಿ ಮಂಡಳಿ ತನ್ನ ಕರ್ತವ್ಯ ನಿರ್ವಹಿಸದಿದ್ದರೆ, ಆ ಮಂಡಳಿ ಮೇಲೆ ಕ್ರಮ ಜರುಗಿಸಬೇಕು. ಇಲ್ಲವಾದರೆ ಆ ಸದಸ್ಯ ಸಹಕಾರಿಗಳು ನಿರ್ಭೀತಿಯಿಂದ ಇರುತ್ತವೆ. ಕ್ರಮ ಜರುಗಿಸದಿದ್ದರೆ ಅದನ್ನು ಸಂಯುಕ್ತ ಸಹಕಾರಿಯ ನಿಶ್ಕ್ರಿಯನ್ನು ದುರುಪಯೋಗ ಪಡಿಸಿಕೊಂಡು ಅಕ್ರಮಗಳನ್ನು ಮುಂದುವರಿಸುತ್ತವೆ. ಆ ನೀತಿಯಿಂದ ಸೌಹಾರ್ದ ಕಾಯಿದೆ, ಜಾರಿಗೆ ತೊಡಕಾಗುವುದರ ಜೊತೆಗೆ ಸಂಯುಕ್ತ ಸಹಕಾರಿ, ಮಂಡಳಿ ಬಗ್ಗೆ ಸದಸ್ಯ ಸಹಕಾರಿ ಸಂಸ್ಥೆಗಳು ಮತ್ತು ಸರ್ಕಾರ/ನಿಬಂಧಕರು, ಈ ಅಧಿಕಾರವನ್ನು ಇಲಾಖೆಗೆ ಮರಳಿಸುವಂತೆ ಪ್ರಯತ್ನಿಸಬಹುದು. ಅದಕ್ಕಾಗಿ ಸಂಯುಕ್ತ ಸಹಕಾರಿ ಮಂಡಳಿ, ಸದಸ್ಯ ಸಹಕಾರಿಗಳ ಪ್ರತಿಯೊಂದು ಅಕ್ರಮಗಳ ಮೇಲೆ ಕ್ರಮ ಜರುಗಿಸಲೇಬೇಕು.

**(17) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಪ್ರತಿಯೊಂದು ನೋಂದಾಯಿತ ಸಹಕಾರಿಯು ಸಂಯುಕ್ತ ಸಹಕಾರಿಯ ಸದಸ್ಯತ್ವವನ್ನು ನೋಂದಾಯಿತ ದಿನಾಂಕದಂದೆ ಪಡೆಯುತ್ತದೆ. ಈ ಅವಕಾಶ ಮತ್ತಾವುದೇ ಸಹಕಾರಿ ಕಾಯಿದೆಯಲ್ಲಿ ಅವಕಾಶ ಕಲ್ಪಿಸಿಲ್ಲ. ಯಾವುದೇ ಒಂದು ಸಂಸ್ಥೆ ಮತ್ತೊಂದು ಸಂಸ್ಥೆಯ ವ್ಯವಹಾರದಲ್ಲಿ ಭಾಗಿಯಾಗಬೇಕಾದರೆ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲೇಬೇಕು. ಅರ್ಜಿ ಸ್ವೀಕರಿಸಿದ ನಂತರ ಸದಸ್ಯತ್ವ ನೀಡುವ ಹಕ್ಕು, ಆ ಸಂಸ್ಥೆಯ ಕಾರ್ಯವ್ಯಾಪ್ತಿಗೆ ಬರುತ್ತವೆ. ಕರ್ನಾಟಕ ಸೌಹಾರ್ದ ಕಾಯಿದೆಯಡಿ ಮಾತ್ರ ಒಂದು ಸಹಕಾರಿ ನೋಂದಾವಣೆ ದಿನಾಂಕದಂದೆ ಸಂಯುಕ್ತ ಸಹಕಾರಿ ಸದಸ್ಯತ್ವ ಪಡೆಯುತ್ತದೆ. ಆದ್ದರಿಂದ ಸದಸ್ಯರ ಎಲ್ಲಾ ಹಾಗೂ ಮತ್ತು ಹೋಗುಗಳಿಗೆ ಜವಾಬ್ದಾರರಾಗಿರತಕ್ಕದ್ದು. ಸದಸ್ಯ ಸಹಕಾರಿಗಳ ಪರವಾಗಿ ವಿವಿಧ ವ್ಯವಹಾರಿ ಸಂಸ್ಥೆಗಳು ಮತ್ತು ಸೇವೆ ನೀಡುವ ಸಂಸ್ಥೆಗಳ ಜೊತೆ ಸಂಪರ್ಕ ಪಡೆದು ಸದಸ್ಯರ ಸಹಕಾರಿಗಳ ಹಿತಾಸಕ್ತಿಗಳ ಪೂರ್ವಕವಾಗಿ ಕ್ರೋಡೀಕೃತ ವ್ಯವಹಾರಗಳನ್ನು ನಡೆಸುವುದು ಹಾಗೂ ಪರಿಹಾರ ಕಂಡುಕೊಳ್ಳುವುದು ಸಂಯುಕ್ತ ಸಹಕಾರಿಯ ಜವಾಬ್ದಾರಿ. ಆದರೆ ಸಂಯುಕ್ತ ಸಹಕಾರಿ ಯಾವುದೇ ವ್ಯವಹಾರ ಮಾಡಬಾರದು.

**(18) 30ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಪ್ರತಿಯೊಂದು ಸದಸ್ಯ ಸಹಕಾರಿಯು ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 25 ರೊಳಗಾಗಿ ಕರೆಯತಕ್ಕದ್ದು ಎಂದು ಭಾರತ ಸಂವಿಧಾನ ಮತ್ತು ಸೌಹಾರ್ದ ಕಾಯಿದೆಯಡಿ ನಿಗದಿ ಪಡಿಸಿದೆ. ಇದರ ಜೊತೆಗೆ ಪ್ರತಿಯೊಂದು ಸದಸ್ಯ ಸಹಕಾರಿಯು ಸದಸ್ಯರ ಪೈಕಿ 1/10 ರಷ್ಟು ಸದಸ್ಯರು ಲಿಖಿತ ಮನವಿ ಸಲ್ಲಿಸಿ ವಿಶೇಷ ಸಾಮಾನ್ಯ ಸಭೆ ಕರೆಯಲು ವಿನಂತಿಸಿದಾಗ, ಅದನ್ನು ಕರೆಯುವ ಜವಾಬ್ದಾರಿ ಹಾಗೂ ಕರ್ತವ್ಯ, ಸಂಯುಕ್ತ ಸಹಕಾರಿಯದ್ದು. ಅಂತಹ ಸದಸ್ಯ ಸಹಕಾರಿ ಮನವಿ ಸ್ವೀಕರಿಸಿದ 30 ದಿವಸದೊಳಗಾಗಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯದೆ ಇದ್ದಾಗ ಹಾಗೂ 1/10 ರಷ್ಟು ಸದಸ್ಯರು ಲಿಖಿತ ಮನವಿಯನ್ನು ಸ್ವೀಕರಿಸಿದ 30 ದಿಸವದೊಳಗಾಗಿ ಸಂಯುಕ್ತ ಸಹಕಾರಿ, ಅಂತಹ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಅಂದರೆ ಸದಸ್ಯ ಸಹಕಾರಿಗಳು ಮನವಿಯನ್ನು ಪುರಸ್ಕರಿಸದಿದ್ದರೆ ಮಾತ್ರ ಸಂಯುಕ್ತ ಸಹಕಾರಿಯು ಮಧ್ಯ ಪ್ರವೇಶ ಮಾಡತಕ್ಕದ್ದು. ಈ ಬಗ್ಗೆ ಹೆಚ್ಚು ಸಂಖ್ಯೆಯಲ್ಲಿ ಮನವಿ ಬರದೇ ಇದ್ದರೂ, ಸಂಯುಕ್ತ ಸಹಕಾರಿ ಒಂದು ಪ್ರಸ್ತಾವನೆಗೆ ತುರ್ತು ಕ್ರಮ ಜರುಗಿಸುವುದು ಅವಶ್ಯಕ.

**(19) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು. ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.**

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಸದಸ್ಯ ಸಹಕಾರಿಗಳ ಪರಿವೀಕ್ಷಣೆ ಮಾಡುವ ಅಧಿಕಾರವನ್ನು ಸಂಯುಕ್ತ ಸಹಕಾರಿ ನಿರ್ವಹಿಸತಕ್ಕದ್ದು. ಪರಿವೀಕ್ಷಣೆಗೆ ಸಂಬಂಧಪಟ್ಟಂತೆ ಈ ಕೈಪಿಡಿಯ ಮತ್ತೊಂದು ಅಧ್ಯಾಯದಲ್ಲಿ ವಿವರಗಳೊಂದಿಗೆ ಚರ್ಚಿಸಲಾಗಿದೆ. ಇಲ್ಲಿ ಪ್ರಸ್ತಾವಿಸಬೇಕಾದ ಅಂಶವೇಂದರೆ ಪ್ರತಿಯೊಂದು ಸದಸ್ಯ ಸಹಕಾರಿಯನ್ನು ಸಂಯುಕ್ತ ಸಹಕಾರಿ ವರ್ಷಕ್ಕೊಮ್ಮೆಯಾದರೂ, ಆ ಸಹಕಾರಿಗೆ ಮಾರ್ಗದರ್ಶನ ನೀಡಲಿಕ್ಕಾದರೂ ಒಮ್ಮೆ ಅನದಿಕೃತ (ಅನಧಿಕೃತ ಎಂದರೆ ಶಾಸನಬದ್ದ ಪರಿವೀಕ್ಷಣೆಗೆ ಆದೇಶಿಸುವ ಹೊರತಾಗಿ) ಪರಿವೀಕ್ಷಣೆ ಕೈಗೊಂಡು ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶನ ನೀಡಬೇಕು. ಈ ಪರಿವೀಕ್ಷಣೆಯ ಉದ್ದೇಶ ಸದಸ್ಯ ಸಹಕಾರಿಗಳು ತನ್ನ ದಿನನಿತ್ಯದ ಕಾರ್ಯನಿರ್ವಹಣೆಯಲ್ಲಿ ಮಾಡುತ್ತಿರುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಅಥವಾ ದಾಖಲೆಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಲು, ಮಂಡಳಿ ಮತ್ತು ಸಾಮಾನ್ಯ ಸಭೆ ನಡವಳಿಕೆಗಳನ್ನು ವಿಧಿವಿದಾನಗಳನ್ನು ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶನ ನೀಡಲು ಈ ವಾರ್ಷಿಕ ಪರಿವೀಕ್ಷಣ ಕಾರ್ಯವನ್ನು ಸಂಯುಕ್ತ ಸಹಕಾರಿಯ ಕ್ಷೇತ್ರ ಸಿಬ್ಬಂದಿಗೆ ನಿಗದಿ ಪಡಿಸಿದ ಸಂಖ್ಯೆಯ ಪರಿವೀಕ್ಷಣೆ ಕೈಗೊಳ್ಳಲು ನಿಗದಿ ಪಡಿಸಬೇಕು. ಇದನ್ನು ಶಾಸನಬದ್ದ ಪರಿವೀಕ್ಷಣೆ ಎಂದು ಪರಿಗಣಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಜಿ**

ಸಂಖ್ಯೆ : ಸಂಸ/ಆ/ಕ.ಆ–1/2015–16 ದಿನಾಂಕ 02.12.2015

**ಪೀಠಿಕೆ**

ಸಂಯುಕ್ತ ಸಹಕಾರಿಯು 2002 ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಕೇಂದ್ರ ಕಛೇರಿಯಲ್ಲಿ 7 ವಿಭಾಗಗಳು, ಹಾಗೂ 4 ವಿಭಾಗೀಯ ಕಛೇರಿಗಳು ಇರುತ್ತದೆ. ಪ್ರಸ್ತುತ 60ಕ್ಕೂ ಹೆಚ್ಚು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವಿಭಾಗದಲ್ಲಿ ಕಿರಿಯ ಅಧಿಕಾರಿ ಅಥವಾ ಅದಕ್ಕಿಂತ ಮೇಲ್ಪಟ್ಟ ಅಧಿಕಾಋಇಗಳು ಕಾರ್ಯನಿರ್ವಹಿಸುತ್ತಿದ್ದು, ಎಲ್ಲ ಅಧಿಕಾರಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಶಕ್ತರಾಗಿರುತ್ತಾರೆ. ಪ್ರಸ್ತುತ 3400ಕ್ಕೂ ಹೆಚ್ಚು ಸದಸ್ಯ ಸಹಕಾರಿಗಳಿದ್ದು ಪ್ರತಿನಿತ್ಯ ನೂರಾರು ಪತ್ರ ವ್ಯವಹಾರ ನಡೆಸಬೇಕಾಗುತ್ತಿದೆ. ಎಲ್ಲಾ ಪತ್ರ ವ್ಯವಹಾರವನ್ನು ವ್ಯವಸ್ಥಾಪಕ ನಿರ್ದೇಶಕರೇ ನಿರ್ವಹಿಸುವುದು ಕಷ್ಟ ಹಾಗೂ ಇದರಿಂದ ಕೆಲಸಗಳು ವಿಳಂಬವಾಗುತ್ತದೆ. ವ್ಯವಸ್ಥಾಪಕ ನಿರ್ದೇಶಕರ ಕೆಲವು ಕರ್ತವ್ಯಗಳನ್ನು ಅಧೀನ ಅಧಿಕಾರಿಗಳಿಗೆ ಪ್ರತ್ಯಾಯೋಜಿಸುವುದರಿಂದ ಕಛೇರಿ ಕೆಲಸಗಳು, ವೇಗವಾಗಿ, ಸುಲಲಿತವಾಗಿ ನಡೆಯುತ್ತವೆ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 6ಜೆ(16)(vi) ರ ಅಡಿಯಲ್ಲಿ ಪದತ್ತವಾದ ಅಧಿಕಾರಗಳನು ಚಲಾಯಿಸಿ ಈ ಕೆಳಕಂಡ ವಿಭಾಗವಾರು ಕೋಷ್ಟಕದ ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಗಳನ್ನು ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳ ಪ್ರವರ್ಗ (ನೌಕರ/ಸಿಬ್ಬಂದಿ/ಅಧಿಕಾರಿ)ಗಳಿಗೆ ಪ್ರತ್ಯಾಯೋಜಿಸಲಾಗುತ್ತದೆ. ಅಂದರೆ

ಕೋಷ್ಟಕ

**ಆಡಳಿತ ವಿಭಾಗ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | ಸರ್ಕಾರಿ/ಅರೆ ಸರ್ಕಾರಿ ಪತ್ರಗಳು ಸೇರಿದಂತೆ ತುರ್ತು ಕ್ರಮವಿಡುವ ಪತ್ರಗಳನ್ನು ಹೊರತುಪಡಿಸಿ ಕಛೇರಿಗೆ ಬರುವ ಪತ್ರಗಳನ್ನು ಪರಿಶೀಲಿಸಿ ಸಂಬಂಧಿಸಿದ ವಿಭಾಗಕ್ಕೆ ರವಾನೆಗೆ ಕ್ರಮವಿಡುವುದು. | ಉಪ ಪ್ರಧಾನ ವ್ಯವಸ್ಥಾಪಕ (ಆಡಳಿತ ) (ಇವರ ಅನುಪಸ್ಥಿತಿಯಲ್ಲಿ ಸಹ ಪ್ರಧಾನ ವ್ಯವಸ್ಥಾಪಕ (ಆಡಳಿತ) ಇವರು ನಿರ್ವಹಿಸುವುದು) |
| 2 | ಹೆಸರಿನ ಲಭ್ಯತೆಯ ಕುರಿತಂತೆ ಸಹಕಾರಿಗಳ ನಿಬಂಧಕರ ಕಛೇರಿಗಳಿಗೆ ಪತ್ರ ಕಳುಹಿಸುವುದು. | ಉಪ ಪ್ರಧಾನ ವ್ಯವಸ್ಥಾಪಕ (ಆಡಳಿತ ) |
| 3 | ನಾಮಮಾತ್ರ ಸದಸ್ಯರ ಕುರಿತಂತೆ ಪತ್ರ ವ್ಯವಹಾರ ಮಾಡುವುದು | ಉಪ ಪ್ರಧಾನ ವ್ಯವಸ್ಥಾಪಕ (ಆಡಳಿತ ) |
| 4 | ಕಛೇರಿಯ ದೈನಂದಿನ ಕಾರ್ಯಚಟುವಟಿಕೆಗೆ ಸಂಬಂಧಿಸಿದ ಖರೀದಿ ಆದೇಶ ಮಾಡುವುದು. | ಉಪ ಪ್ರಧಾನ ವ್ಯವಸ್ಥಾಪಕ (ಆಡಳಿತ ) |
| 5 | ಕೇಂದ್ರ ಕಛೇರಿಯಿಂದ ಆಯೋಜಿಸುವ ಎಲ್ಲಾ ರೀತಿಯ ಶಾಸನಬದ್ಧ ಸಭೆಗಲ ಸಂಬಂಧ ಅಗತ್ಯ ಮಾಹಿತಿ ಸಂಗ್ರಹಿಸುವುದು. | ಉಪ ಪ್ರಧಾನ ವ್ಯವಸ್ಥಾಪಕ (ಆಡಳಿತ ) |
| 6 | ಸಂಯುಕ್ತ ಸಹಕಾರಿಯ ಪ್ರತಿ ವಿಭಾಘವಾರು ಪ್ರತಿ ಮಾಹೆಯ ವರದಿಯನ್ನು ಪಡೆಯುವುದು. | ಉಪ ಪ್ರಧಾನ ವ್ಯವಸ್ಥಾಪಕ (ಆಡಳಿತ ) |
| 7 | ಸ್ವೀಕೃತಿ ಪತ್ರಗಳನ್ನು ಕಳುಹಿಸುವುದು. | ಸಹಾಯಕರು/ಕಿರಿಯ ಸಹಾಯಕರು (ಆಡಳಿತ) |

**ನಿಯಂತ್ರಣ ವಿಭಾಗ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | ಪರಿವೀಕ್ಷಣಾ ವರಿದಯ ಆಧಾರದಲ್ಲಿ ಸದಸ್ಯ ಸಹಕಾರಿಯಿಂದ ಸ್ಪಷ್ಟನೆ /ವಿವರಣೆಯನ್ನು ಪಡೆಯುವುದು | ಉಪ ಪ್ರಧಾನ ವ್ಯವಸ್ಥಾಪಕ (ನಿಯಂತ್ರಣ) |
| 2 | ದೂರು/ಕಂದುಕೊರತೆ ವಿಭಾಗಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳು | ಉಪ ಪ್ರಧಾನ ವ್ಯವಸ್ಥಾಪಕ (ನಿಯಂತ್ರಣ) |
| 3 | ಎಲ್ಲಾ ರೀತಿಯ ಕಾನೂನಾತ್ಮಕ ಅಭಿಪ್ರಾಯವನ್ನು ನೀಡುವುದು ( ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಿಸಿದ ಕಾರ್ಯಗಳು ಸೇರಿದಂತೆ | ಉಪ ಪ್ರಧಾನ ವ್ಯವಸ್ಥಾಪಕ (ನಿಯಂತ್ರಣ) |

**ಸಂಸ್ಥಾಪನಾ ವಿಭಾಗ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | 2 | 3 |
| 1 | ಆಂತರಿಕ ಮಾಹಿತಿ ರವಾನಿಸುವುದು. | ಉಪ ಪ್ರಧಾನ ವ್ಯವಸ್ಥಾಪಕ (ಸಂಸ್ಥಾಪನಾ) |

**ಹಣಕಾಸು ವಿಭಾಗ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | 2 | 3 |
| 1 | ಸುಸ್ಥಿದಾರ ಸದಸ್ಯ ಸಹಕಾರಿಗಳೀಗೆ ಮಧ್ಯಂತರ ನೋಟಿಸ್ ಕಳುಹಿಸುವುದು (ಪ್ರಾರಂಭಿಕ ಮತ್ತು ಅಂತಿಮ ನೋಟಿಸ್‌ನ್ನು ಹೊರಡುಪಡಿಸಿ) | ಉಪ ಪ್ರಧಾನ ವ್ಯವಸ್ಥಾಪಕ (ಹಣಕಾಸು) |
| 2 | ಸುಸ್ತಿದಾರ ಸದಸ್ಯ ಸಹಕರಿಗಳಿಗೆ ಪ್ರಾರಂಭಿಕ ನೋಟಿಸ್ ಕಳುಹಿಸುವುದು (ಮಧ್ಯಂತರ ಮತ್ತು ಅಂತಿಮ ನೋಟಿಸ್‌ನ್ನು ಹೊರತುಪಡಿಸಿ) | ಉಪ ಪ್ರಧಾನ ವ್ಯವಸ್ಥಾಪಕ (ಹಣಕಾಸು) |
| 3 | ಎಲ್ಲಾ ರೀತಿಯ ಸ್ಪಷ್ಟೀಕರಣಗಳು ಕುರಿತು | ಉಪ ಪ್ರಧಾನ ವ್ಯವಸ್ಥಾಪಕ (ಹಣಕಾಸು) |
| 4 | ಸುಸ್ಥಿದಾರ ಸದಸ್ಯ ಸಹಕಾರಿಗಳಿಗೆ ನೆನಪಿನ ಪತ್ರಗಳನ್ನು ಕಳುಹಿಸುವುದು. | ಆಯಾ ವಿಭಾಗೀಯ ಅಧಿಕಾರಿಗಳು |

**ಸೇವಾವಿಭಾಗ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | 2 | 3 |
| 1 | ಇ–ಸ್ಟಾಂಪಿಂಗ್ ಕೇಂದ್ರಗಳಿಗೆ ಅನುಮತಿ ನೀಡುವುದು. (ಆಡಳಿತ ಮಂಡಲಿಯು ರೂಪಿಸಿರುವ ನಿಯಾವಳಿಯಂತೆ ಇದ್ದಲ್ಲಿ) | ಉಪ ಪ್ರಧಾನ ವ್ಯವಸ್ಥಾಪಕ (ಸೇವೆ) |
| 2 | ಇತರೆ ಪತ್ರ ವ್ಯವಹಾರಗಳು | ಉಪ ಪ್ರಧಾನ ವ್ಯವಸ್ಥಾಪಕ (ಸೇವೆ) |

**ಶಿಕ್ಷಣ ವಿಭಾಗ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | 2 | 3 |
| 1 | ತರಬೇತಿಗಳು ವ್ಯವಸ್ಥೆಗಳ ಸಂಬಂಧಿತ ಎಲ್ಲಾ ಪತ್ರಗಳು | ಉಪ ಪ್ರಧಾನ ವ್ಯವಸ್ಥಾಪಕ (ಶಿಕ್ಷಣ) ಅಥವಾ ಅದಕ್ಕಿಂತ ಮೇಲ್ಪಟ್ಟ ಅಧಿಕಾರಿ |

| | | |
|---|---|---|
| 2 | ಸಂಪನ್ಮೂಲ ವ್ಯಕ್ತಿಗಳಿಗೆ ಪತ್ರ ವ್ಯವಹಾರ | ಉಪ ಪ್ರಧಾನ ವ್ಯವಸ್ಥಾಪಕ (ಶಿಕ್ಷಣ) ಅಥವಾ ಅದಕ್ಕಿಂತ ಮೇಲ್ಪಟ್ಟ ಅಧಿಕಾರಿ |

**ವಿಭಾಗೀಯ ಕಛೇರಿಗಳು :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | 2 | 3 |
| 1 | ವಿಭಾಗೀಯ ಕಛೇರಿಗೆ ಹಂಚಿಕೆ ಮಾಡಿರುವ ಎಲ್ಲಾ ಕಾರ್ಯಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳು | ಆಯಾ ವಿಭಾಗೀಯ ಅಧಿಕಾರಿಗಳು |

**ಮೇಲ್ಕಂಡ ಪ್ರತಿ ವಿಭಾಗಗಳು ಮತ್ತು ವಿಭಾಗೀಯ ಕಛೇರಿಗಳಿಗೆ ಸಂಬಂಧಿಸಿದಂತೆ :**

| ಕ್ರ.ಸಂ | ಪ್ರತ್ಯಾಯೋಜನೆ ಮಾಡಲಾದ ಅಧಿಕಾರಗಳು | ಅಧಿಕಾರಿಗಳ ಪ್ರವರ್ಗ |
|---|---|---|
| 1 | 2 | 3 |
| 1 | ಸದಸ್ಯ ಸಹಕಾರಿಯಿಂದ ಮಾಹಿತಿ ಮತ್ತು ದಾಖಲೆ ಕೋರಿ ಪತ್ರ ವ್ಯವಹಾರ ಮಾಡುವುದು | ಅಧಿಕಾರಿ (ಆಯಾ ವಿಭಾಗವಾರು) ಅಥವಾ ಅದಕ್ಕಿಂತ ಮೇಲ್ಪಟ್ಟ ಅಧಿಕಾರಿಗಳು, ವಿಭಾಗೀಯ ಕಛೇರಿಗಳಲ್ಲಿ ಆಯಾ ವಿಭಾಗೀಯ ಅಧಿಕಾರಿಗಲು |
| 2 | ಲಗತ್ತು ಪತ್ರ **(coverging letter)** ಗಳನ್ನು ಕಳುಹಿಸುವುದು. | ಆಯಾ ವಿಷಯ ನಿರ್ವಾಹಕರು, ಕಿರಿಯ ಸಹಾಯಕರು (ಆಯಾ ವಿಭಾಗವಾರು) ಅಥವಾ ಅದಕ್ಕಿಂತ ಮೇಲ್ಪಟ್ಟ ಸಿಬ್ಬಂದಿಗಳು |

ಮೇಲ್ಕಂಡ ಅಧಿಕಾರ ಪ್ರತ್ಯಾಯೋಜನೆಯ ಆದೇಶದಲ್ಲಿ ಉಲ್ಲೇಖಿಸಿರುವ ಕೆಲಸ/ಕಾರ್ಯಗಳನು ಸಂಬಂಧಪಟ್ಟ ವಿಭಾಗದ ಮೇಲಾಧಿಕಾರಿಗಲ (ಆಯಾ ವಿಭಾಗವಾರು) ಗಮನಕ್ಕೆ ತಂದು ನಿರ್ವಹಿಸಲು ಸೂಚಿಸಿದೆ.

ಮೇಲ್ಕಂಡ ಅಧಿಕಾರ ಪ್ರತ್ಯಾಯೋಜನೆ ಆದೇಶದಲ್ಲಿ ಉಲ್ಲೇಖಿಸಿರುವ ನೌಕರ/ಸಿಬ್ಬಂದಿ/ ಅಧಿಕಾರಿಗಳು ಕಛೇರಿ ಆಡಳೀತ ಸುಗಮವಾಗುವ ದೃಷ್ಟಿಯಿಂದ ಹೊರಡಿಸಲಾಗಿದೆ. ಆದ್ದರಿಂದ ಈ ಕೂಡಲೇ ಕಾರ್ಯಪ್ರವೃತರಾಗಲು ಮತ್ತು ಈ ಕುರಿತಾದ ವರದಿಯನ್ನು ಪ್ರತಿ ಮಾಹೆಯ ಅಂತ್ಯದಲ್ಲಿ ವಿವರಗಳನ್ನು ಅಧಿಕೃತ ವಿದ್ಯುನ್ಮಾನ ಅಂಚೆ (ಇ–ಮೇಲ್) ಮೂಲಕ ಸಲ್ಲಿಸಲು ಸೂಚಿಸಿದೆ. ಈ ಅಧಿಕಾಋ ಪ್ರತ್ಯಾಯೋಜನೆ ಆದೇಶವು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಮೊಹರಿನೊಂದಿಗೆ ಇಂದು ಅಂದರೆ 02 ಡಿಸೆಂಬರ್ 2015 ರಂದು ಹೊರಡಿಸಲಾಗಿದೆ.

**ಸಹಿ/–**

**ಶರಣಗೌಡ ಜಿ. ಪಾಟೀಲ**

**ವ್ಯವಸ್ಥಾಪಕ ನಿರ್ದೇಶಕ**

ಪ್ರತಿಯನ್ನು :

1. ಸೂಚಿತ ಅಧಿಕಾರಿಗಳಿಗೆ ಅಗತ್ಯ ಕ್ರಮಗಳನ್ನು ಶೀಘ್ರವಾಗಿ ಕಾರ್ಯಗತಗೊಳಿಸುವ ಸೂಚನೆಯೊಂದಿಗೆ
2. ಎಲ್ಲಾ ಸಿಬ್ಬಂದಿಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಹೆಚ್**

## ಸುತ್ತೋಲೆ

ವಿಷಯ: ಸೌಹಾರ್ದ ಸಹಕಾರಿಗಳು "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳನ್ನು ಬಳಕೆ ಮಾಡದಿರುವುದು ಹಾಗೂ ಮೂರನೇ ವ್ಯಕ್ತಿ ಚೆಕ್ ನಗದೀಕರಣದ ಕುರಿತು.

ಉಲ್ಲೇಖ: ದಿನಾಂಕ: 15.02.2017ರ ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳೊಂದಿಗಿನ ಸಭೆ.

ಸಂಸ/ಶಾ–368/ಶಾ/ಆರ್‌ಬಿಐ/2017–18 ದಿನಾಂಕ: 27.04.2017

ಭಾರತೀಯ ರಿಸರ್ವ್ ಬ್ಯಾಂಕ್‌ನ ಸಹಕಾರ ಬ್ಯಾಂಕ್ ಮೇಲ್ವಿಚಾರಣೆ ಇಲಾಖೆಯ ಪ್ರಧಾನ ವ್ಯವಸ್ಥಾಪಕರು ದಿನಾಂಕ: 15.02.2017ರಂದು ಸಂಯುಕ್ತ ಸಹಕಾರಿಯ ಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಿ ರಾಜ್ಯದ ಕೆಲವೊಂದು ಸೌಹಾರ್ದ ಸಹಕಾರಿಗಳು ತಮ್ಮ ನಾಮಫಲಕ/ಪ್ರಚಾರ ಸಾಮಾಗ್ರಿ/ವೆಬ್‌ಸೈಟ್‌ಗಳಲ್ಲಿ "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳ ಬಳಕೆ ಮಾಡುತ್ತಿರುವ ಕುರಿತಂತೆ ತಿಳಿಸಿ, ಸಂಯುಕ್ತ ಸಹಕಾರಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ನಿರ್ದೇಶನ ನೀಡಲು ತಿಳಿಸಿರುತ್ತಾರೆ. ಈ ಕುರಿತಂತೆ ದಿನಾಂಕ: 17.02.2017ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಗೆ ವಿಷಯವನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಈ ಕುರಿತಂತೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸುತ್ತೋಲೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಬ್ಯಾಂಕಿಂಗ್ ಲೈಸನ್ಸ್ ಪಡೆಯದ ಸಂಸ್ಥೆಗಳು ತಮ್ಮ ನಾಮಫಲಕ/ಪ್ರಚಾರ ಸಾಮಾಗ್ರಿ/ವೆಬ್‌ಸೈಟ್‌ಗಳಲ್ಲಿ "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳ ಬಳಕೆ ಮಾಡುವುದು ಬ್ಯಾಂಕಿಂಗ್ ರೆಗ್ಯೂಲೇಶನ್ ಅಧಿನಿಯಮ, 1949 **(Banking Regulation Act, 1949(AACS)**ರ ಕಲಂ 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ದಿನಾಂಕ: 17.02.2017ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ತೀರ್ಮಾನದಂತೆ ಆರ್.ಬಿ.ಐನಿಂದ ಬ್ಯಾಂಕಿಂಗ್ ಲೈಸನ್ಸ್ ಪಡೆದಿರುವ 18 ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿ ವ್ಯವಹರಿಸಲು ಸೂಚಿಸಿದೆ. ಅವುಗಳೆಂದರೆ;

1. ಸೌಹಾರ್ದ ಸಹಕಾರಿಗಳು ತಮ್ಮ ನಾಮಫಲಕ/ಪ್ರಚಾರ ಸಾಮಾಗ್ರಿ/ವೆಬ್‌ಸೈಟ್‌ಗಳಲ್ಲಿ ಅಥವಾ ಇನ್ಯಾವುದೇ ರೂಪದಲ್ಲಿ "ಬ್ಯಾಂಕ್"(Bank) "ಬ್ಯಾಂಕಿಂಗ್"**(Banking)** ಅಥವಾ "ಸಹಕಾರಿ ಬ್ಯಾಂಕಿಂಗ್" **(Cooperative Banking)** ಎಂಬ ಪದಗಳ ಬಳಕೆ ಮಾಡತಕ್ಕದ್ದಲ್ಲ.
2. ಸೌಹಾರ್ದ ಸಹಕಾರಿಗಳು ಸದಸ್ಯರ ಉಪಯೋಗಕ್ಕಾಗಿ ನಿರ್ವಹಿಸುವ ಉಳಿತಾಯ ಖಾತೆಗಳಿಗೆ ಉಳಿತಾಯ ಬ್ಯಾಂಕ್ ಅಕೌಂಟ್ (Saving Bank Account) ಎಂಬ ಹೆಸರಿನಲ್ಲಿ ಕರೆಯುವಂತಿಲ್ಲ. ಅಂತಹ ಖಾತೆಗಳು "ಸದಸ್ಯರ ಉಳಿತಾಯ ಖಾತೆ" (Members Saving Account)ಗಳಾಗಿರುತ್ತವೆ.
3. ಸೌಹಾರ್ದ ಸಹಕಾರಿಗಳು ಬ್ಯಾಂಕ್ ಮಾದರಿಯ ಚೆಕ್**(Cheque)** ಅಥವಾ ಅದನ್ನು ಹೋಲುವ ಇನ್ಯಾವುದೇ ಮಾದರಿಗಳನ್ನು ಮುದ್ರಿಸಿ ಸದಸ್ಯರಿಗೆ ವಿತರಿಸತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಮುದ್ರಿತ ವಿತ್ ಡ್ರಾ ಸ್ಲೀಪ್ **((Withdraw Slip)**ಗಳನ್ನು ಉಪಯೋಗಿಸುತ್ತಿದ್ದಲ್ಲಿ, ಅಂತಹ ವಿತ್ ಡ್ರಾ ಸ್ಲೀಪ್‌ಗಳಲ್ಲಿ "ಸ್ವಂತಕ್ಕೆ" **(Self)** ಎಂಬ ಪದವನ್ನು ಉಪಯೋಗಿಸತಕ್ಕದ್ದು.
5. ಸೌಹಾರ್ದ ಸಹಕಾರಿಗಳು ತಮ್ಮ ನಾಮಫಲಕ/ಪ್ರಚಾರ ಸಾಮಾಗ್ರಿ/ವೆಬ್‌ಸೈಟ್‌ಗಳಲ್ಲಿ ಎನ್‌ಇಎಫ್‌ಟಿ**(NEFT)**, ಆರ್‌ಟಿಜಿಎಸ್**(RTGS)** ಮತ್ತು ಡಿ.ಡಿ **(DD)** ಸೌಲಭ್ಯವನ್ನು ಒದಗಿಸಲಾಗುವುದು ಎಂಬುದನ್ನು ಪ್ರಚಾರಪಡಿಸತಕ್ಕದ್ದಲ್ಲ.
6. ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಂದ ಮಾತ್ರ ಠೇವಣಿಯನ್ನು ಸಂಗ್ರಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಸದಸ್ಯೇತರರಿಂದ

ಠೇವಣಿಗಳನ್ನು ಸಂಗ್ರಹಿಸತಕ್ಕದ್ದಲ್ಲ. ಠೇವಣಿ ಸಂಗ್ರಹಣೆಗೆ ಸಾರ್ವಜನಿಕ ಮೇಳಗಳನ್ನು ಆಯೋಜಿಸತಕ್ಕದ್ದಲ್ಲ.

7. ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆಯಂತೆ ರೂ. 50,000/–ಕ್ಕಿಂತ ಕಡಿಮೆ ಮೊತ್ತದ ಸದಸ್ಯರ ಚೆಕ್‌ಗಳನ್ನು ಮಾತ್ರ ನಗದೀಕರಣಗೊಳಿಸತಕ್ಕದ್ದು.

8. ಚೆಕ್ ನಗದೀಕರಣ ನಡೆಸುವ ಸಂದರ್ಭದಲ್ಲಿ ಸದಸ್ಯರ ಕುರಿತಾದ ವಿಳಾಸದ ದೃಡೀಕರಣದ ದಾಖಲೆ, ಗುರುತಿನ ದೃಡೀಕರಣದ ದಾಖಲೆ ಒಳಗೊಂಡ ಸಂಪೂರ್ಣ ವಿವರದ(ಕೆ.ವೈ.ಸಿ ನಾರ್ಮ್ಸ್‌ನಂತೆ) ದಾಖಲೆಯನ್ನು ಪಡೆಯಲು ಕಟ್ಟುನಿಟ್ಟಿನ ಕ್ರಮವಿಡಬೇಕು ಮತ್ತು ಸದರಿ ದಾಖಲೆಯನ್ನು ಸಂರಕ್ಷಿಸಲು ಕ್ರಮವಿಡಬೇಕು.

9. ಸೌಹಾರ್ದ ಸಹಕಾರಿಗಳು ಸದಸ್ಯೇತರರೊಂದಿಗೆ ವ್ಯವಹರಿಸುವ ವ್ಯವಹಾರ/ಸೇವೆಗಳಾದ ಇ–ಸ್ಟಾಂಪಿಂಗ್, ಬಸ್ ಟಿಕೆಟ್, ಸಕಾಲ, ಜನೌಷದ ಕೇಂದ್ರ, ಪಾನ್ ಕಾರ್ಡ್ ವಿತರಣೆ ಮೊದಲಾದ ಸೇವಾ ರೂಪದ ಸೌಲಭ್ಯಗಳನ್ನು ಸದಸ್ಯೇತರರಿಗೆ ಒದಗಿಸುತ್ತಿದ್ದಲ್ಲಿ, ಅಂತಹ ಸೇವೆಗಳ ಕುರಿತು ತಮ್ಮ ಉಪವಿಧಿಗಳಲ್ಲಿ ಪ್ರಾವಧಾನ ಕಲ್ಪಿಸಿರಕೊಂಡಿರಬೇಕು.

ರಾಜ್ಯದ ಪ್ರತಿಯೊಂದು ಸೌಹಾರ್ದ ಸಹಕಾರಿಯು ಮೇಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು, ತಪ್ಪಿದಲ್ಲಿ ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯನ್ನು ವೈಯಕ್ತಿಕವಾಗಿ ಜವಾಬ್ದಾರಿಯನ್ನಾಗಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

–ಸಹಿ–

(ಶರಣಗೌಡ ಜಿ. ಪಾಟೀಲ್)

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಐ**

ಸಂ:ಸಂಸ/ಸೂ/1/2017–18 ದಿನಾಂಕ:27.04.2017

ಇವರಿಗೆ:

ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು,

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು,

**ಆತ್ಮೀಯ ಸಹಕಾರಿ ಬಂಧುಗಳೇ,**

ಭಾರತ ಸರ್ಕಾರವು ಇತ್ತೀಚಿಗೆ ಸಂಸತ್ತಿನಲ್ಲಿ ಹಣಕಾಸು ಮಸೂದೆಯನ್ನು ಮಂಡಿಸಿ ಅನುಮೋದನೆ ಪಡೆದಿರುತ್ತದೆ. ಇದಕ್ಕೆ ರಾಷ್ಟ್ರಧ್ಯಕ್ಷರು ಸಹಮತಿ ಸೂಚಿಸಿ ಅನುಮೋದಿಸಿರುತ್ತಾರೆ. ಈ ಅಧಿನಿಯಮವು ದಿನಾಂಕ: 01.04.2017ರಿಂದ ದೇಶದ್ಯಾಂತ ಜಾರಿಗೆ ಬಂದಿದೆ. ಈ ಅಧಿನಿಯಮದಲ್ಲಿ ಆದಾಯ ತೆರಿಗೆ ಸಂಬಂಧಪಟ್ಟಂತೆ ಪ್ರಕರಣ 269STನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. ಈ ಸೇರ್ಪಡೆಯ ತತ್ಪರಿಣಾಮವಾಗಿ ದೈನಂದಿನ ವ್ಯವಹಾರದಲ್ಲಿ ದಿನವೊಂದಕ್ಕೆ ರೂ.2 ಲಕ್ಷಗಳಿಗಿಂತ ಹೆಚ್ಚಿನ ನಗದು ವ್ಯವಹಾರದ ಮೇಲೆ ನಿರ್ಬಂಧ ವಿಧಿಸಲಾಗಿದೆ.

ಈ ನಿರ್ಬಂಧಕ್ಕೆ ಸಂಬಂಧಪಟ್ಟಂತೆ ರಾಜ್ಯದಲ್ಲಿನ ಸೌಹಾರ್ದ ಸಹಕಾರಿಗಳಲ್ಲಿ ಗೊಂದಲ ಹಾಗೂ ಜಿಜ್ಞಾಸೆಗಳು ಉಂಟಾಗಿರುವುದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಸ್ಪಷ್ಟವಾದ ತಿಳುವಳಿಕೆ ನೀಡುವ ದೃಷ್ಟಿಯಿಂದ ತಿದ್ದುಪಡಿ ಕಾಯ್ದೆಯಲ್ಲಿರುವ ಜಿಜ್ಞಾಸೆಗಳನ್ನು ತಿಳಿದುಕೊಳ್ಳಲು ಕೇಂದ್ರ ಸರ್ಕಾರದ ವಿತ್ತ ಸಚಿವರನ್ನು, ಸಿ.ಬಿ.ಡಿ.ಟಿ., ಹಾಗೂ ನುರಿತ ತಜ್ಞರನ್ನು ಸಂಪರ್ಕಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯದ ಬಗ್ಗೆ ಸಲಹೆ ರೂಪದಲ್ಲಿ ಕೆಳಕಂಡ ಸ್ಪಷ್ಟೀಕರಣ ನೀಡಲಾಗಿದೆ. ಅವುಗಳೆಂದರೆ;

1. ಆದಾಯ ತೆರಿಗೆ ಕಾಯ್ದೆ(Income Tax Act) ಕಲಂ 269ST ರನ್ವಯ ಸೌಹಾರ್ದ ಸಹಕಾರಿಗಳು ತನ್ನ ಸದಸ್ಯನಿಂದ ಯಾವುದೇ ರೀತಿಯ ಉಳಿತಾಯ/ಠೇವಣಿ/ಸಾಲದ ಖಾತೆಗಳು ಸೇರಿದಂತೆ ಯಾವುದೇ ಉದ್ದೇಶದ ಖಾತೆಗಳಿಗೆ ರೂ. 2,00,000/–ಕ್ಕಿಂತ ಹೆಚ್ಚಿನ ಮೊತ್ತವನ್ನು ನಗದು ಮೂಲಕ ಪಡೆಯತಕ್ಕದ್ದಲ್ಲ. ರೂ. 2,00,000/–ಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಅಥವಾ ಬ್ಯಾಂಕಿನ ಅಕೌಂಟ್ ಡ್ರಾಫ್ಟ್ ಅಥವಾ ಬ್ಯಾಂಕ್ ಅಕೌಂಟಿನ ಮೂಲಕ ನಡೆಸುವ ಪಾವತಿ ತೀರುವಳಿ ವ್ಯವಸ್ಥೆಯ ಮೂಲಕ ಪಡೆಯಲು ಅವಕಾಶವಿರುತ್ತದೆ.

(ಗಮನಿಸಿ: ಆದಾಯ ತೆರಿಗೆ ಕಾಯ್ದೆ ಕಲಂ 269SS ರನ್ವಯ ಯಾವುದೇ ಸದಸ್ಯನಿಂದ ರೂ. 20,000 ರೂ.ಗಳಿಗೆ ಮೀರಿದ ಸಾಲ ಅಥವಾ ಠೇವಣಿಯನ್ನು ನಗದು ರೂಪದಲ್ಲಿ ಸ್ವೀಕರಿಸುವಂತಿಲ್ಲ. ಆದಾಯ ತೆರಿಗೆ ಕಾಯ್ದೆ ಕಲಂ 269ಖ ರನ್ವಯ ರೂ. 20,000 ಗಳಿಗೆ ಮೀರಿದ ಸಾಲ ಅಥವಾ ಠೇವಣಿಯನ್ನು ನಗದು ರೂಪದಲ್ಲಿ ಮರುಪಾವತಿ ಮಾಡುವಂತಿಲ್ಲ ಎಂಬ ಆದಾಯ ತೆರಿಗೆ ಕಾಯ್ದೆಯ ಪ್ರಾವಧಾನದಲ್ಲಿ ಯಾವುದೇ ಮಾರ್ಪಾಡುಗಳು ಆಗಿರುವುದಿಲ್ಲ. ಸದರಿ ಪ್ರಾವಧಾನಗಳು ಯಥಾವತ್ತಾಗಿ ಮುಂದುವರಿಯುವುದು.)

2. ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಂದ ಸಂಗ್ರಹಿಸುವ ಹಣವನ್ನು ತನ್ನ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲು ಅವಕಾಶ ನೀಡಿರುತ್ತದೆ. ಆದಾಯ ತೆರಿಗೆ ಕಾಯ್ದೆ(Income Tax Act)ಗೆ ಕಲಂ 269ST ರಲ್ಲಿ ಸರ್ಕಾರ, ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಯಾವುದೇ ಬ್ಯಾಂಕು, ಅಂಚೆ ಕಛೇರಿ ಉಳಿತಾಯ ಬ್ಯಾಂಕ್‌ಗಳಿಗೆ ರೂ. 2,00,000/–ಕ್ಕಿಂತ ಹೆಚ್ಚಿನ ಮೊತ್ತವನ್ನು ಜಮಾ ಮಾಡಲು ವಿನಾಯಿತಿ ನೀಡಲಾಗಿರುತ್ತದೆ.

3. ಸೌಹಾರ್ದ ಸಹಕಾರಿಯು ತನ್ನ ಖಾತೆ ಹೊಂದಿರುವ ಬ್ಯಾಂಕ್‌ನಿಂದ ಹಣ ಹಿಂಪಡೆಯಲು ಯಾವುದೇ ನಿರ್ಬಂಧಗಳಿರುವುದಿಲ್ಲ. ಈ ಕುರಿತಂತೆ ದಿನಾಂಕ: 05.04.2017ರಂದು ಆಯುಕ್ತರು, ಆದಾಯ ತೆರಿಗೆ ಇಲಾಖೆ (CBDT) ಇವರು ಪತ್ರಿಕಾ ಪ್ರಕಟನೆಯನ್ನು ನೀಡಿರುತ್ತಾರೆ.

4. ಆದಾಯ ತೆರಿಗೆ ಕಾಯ್ದೆ(Income Tax Act) ಕಲಂ 40ಎ(3)ರನ್ವಯ ಖರ್ಚುಗಳನ್ನು ಪಾವತಿಸುವ ಸಂದರ್ಭದಲ್ಲಿ ನಗದು ಮೂಲಕ ಪಾವತಿಸುವ ಮಿತಿಯನ್ನು ರೂ. 10,000/– ನಿಗದಿಪಡಿಸಿರುತ್ತಾರೆ. (ತಿದ್ದುಪಡಿಗೂ ಪೂರ್ವದಲ್ಲಿ ಸದರಿ ಮಿತಿಯು ರೂ.20,000/– ಆಗಿತ್ತು) ಆದ್ದರಿಂದ ಸೌಹಾರ್ದ ಸಹಕಾರಿಗಳು ರೂ.10,000/–ಕ್ಕಿಂತ ಹೆಚ್ಚಿನ ವೆಚ್ಚಗಳನ್ನು ನಗದು ಮೂಲಕ ಪಾವತಿಸತಕ್ಕದ್ದಲ್ಲ.

ಈ ಮೇಲಿನ ಅಂಶಗಳನ್ನು ಅನುಸರಿಸಿ ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಮಾಡುವುದು. ಅಲ್ಲದೆ ದಿನನಿತ್ಯದ ವ್ಯವಹಾರದಲ್ಲಿ ಎದುರಾಗುವ ಪ್ರಶ್ನೆಗಳಿಗೆ ತಜ್ಞರಿಂದ ಉತ್ತರವನ್ನು ಪಡೆದು ಸ್ವಾಬಿಮಾನಿ ಸಹಕಾರಿಯಲ್ಲಿ ಪ್ರಕಟಿಸಲಾಗುವುದು. ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ಅಧಿಕೃತ ಸಂಸ್ಥೆಯಾಗಿದ್ದು, ಯಾವುದೇ ವಿಷಯದ ಕುರಿತು ಸಂಯುಕ್ತ ಸಹಕಾರಿಯು ನೀಡುವ ಮಾಹಿತಿಯು ಅಧಿಕೃತವಾಗುತ್ತದೆ.

ಈ ಕುರಿತು ಹೆಚ್ಚಿನ ತಿಳುವಳಿಕೆಗಾಗಿ ರಾಜ್ಯದ 14 ಕಡೆಗಳಲ್ಲಿ ಜಾಗೃತಿ/ತಿಳುವಳಿಕೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ನುರಿತ ಆರ್ಥಿಕ ತಜ್ಞರಿಂದ, ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ಅಧಿಕೃತ ಮಾಹಿತಿಯನ್ನು ನೀಡಲಾಗುವುದು. ಈ ನಿಟ್ಟಿನಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯು ಆಯೋಜಿಸುವ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಕೋರಿದೆ.

**ವಂದನೆಗಳೊಂದಿಗೆ,**

–ಸಹಿ–

(ಶರಣಗೌಡ ಜಿ. ಪಾಟೀಲ)

ವ್ಯವಸ್ಥಾಪಕ ನಿರ್ದೇಶಕ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಜೆ**

ಸಂಖ್ಯೆ : ಕರಾಸೌಸಂಸನಿ/ಆಡಳಿತ ವಿಭಾಗ/ಸುತ್ತೋಲೆ–2/2018–19 ದಿನಾಂಕ:21.05.2018

**ಸುತ್ತೋಲೆ –02**

ಇವರಿಗೆ :

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ
ಮುಖ್ಯಕಾರ್ಯನಿರ್ವಾಹಕರುಗಳಿಗೆ,

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿಯಲ್ಲಿ ಅಳವಡಿಸಿರುವ ತಂತ್ರಜ್ಞಾನದ ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳ ಮಾಹಿತಿ ಸಲ್ಲಿಸುವ ಕುರಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದಿಂದ, ಸೌಹಾರ್ದ ಸಹಕಾರಿಯಲ್ಲಿ ಅಳವಡಿಸಿರುವ ತಂತ್ರಜ್ಞಾನದ ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳ ಕೇಂದ್ರೀಕೃತ ಮಾಹಿತಿಯನ್ನು ಹೊಂದಲು ಉದ್ದೇಶಿಸಲಾಗಿದ್ದು, ಸಂಬಂಧಿಸಿದ ನಮೂನೆಗಳಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಕಳುಹಿಸುವ ಮೂಲಕ ಈ ಕಾರ್ಯಕ್ಕೆ ಸಹಕರಿಸಲು ಕೋರಿದೆ.

ತಂತ್ರಜ್ಞಾನ ಅಳವಡಿಕೆ : ಪ್ರಸಕ್ತ ಸನ್ನಿವೇಶದಲ್ಲಿ ಬಹುತೇಕ ಆರ್ಥಿಕ ಸಂಸ್ಥೆಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಗತಿ ಹೊಂದುತ್ತಿರುವುದು ತಮಗೆ ತಿಳಿದಿದೆ. ಸಹಕಾರ ಕ್ಷೇತ್ರದಲ್ಲಿ ಬದಲಾವಣೆಯ ಶಕೆಯನ್ನು ಆರಂಭಿಸಿರುವ ಶ್ರೇಯಸ್ಸು ಸೌಹಾರ್ದ ಸಹಕಾರಿಗಳದ್ದಾಗಿದ್ದು, ತಂತ್ರಜ್ಞಾನ ಅಳವಡಿಕೆಯಲ್ಲಿ ಕೂಡ ಸೌಹಾರ್ದ ಸಹಕಾರಿಗಳು ಮುಂದೆ ಇರುವುದನ್ನು ಗಮನಿಸಲಾಗಿದೆ. ತಂತ್ರಜ್ಞಾನ ಅಳವಡಿಕೆಯ ಕುರಿತಂತೆ ಸಂಯುಕ್ತ ಸಹಕಾರಿ ಕೂಡ ತಂತ್ರಜ್ಞಾನ ಮೇಳ, ತರಬೇತಿಯಲ್ಲಿ ವಿಷಯ ಅಳವಡಿಕೆ, ಕಾಮನ್ ಸಾಫ್ಟ್‌ವೇರ್, ವೆಬ್ ಪೇಜ್ ಇತ್ಯಾದಿಗಳ ಮೂಲಕ ಸೌಹಾರ್ದ ಸಹಕಾರಿಗಳಲ್ಲಿ ಅರಿವನ್ನು ಬೆಳೆಸುವ ಕಾರ್ಯ ಮಾಡುತ್ತಿದೆ. ಪ್ರಸ್ತುತ ಸೌಹಾರ್ದ ಸಹಕಾರಿಗಳು ಅಳವಡಿಸಿಕೊಂಡಿರುವ ತಂತ್ರಜ್ಞಾನಗಳ ಮಾಹಿತಿಯನ್ನು ಹೊಂದುವ ಉದ್ದೇಶದಿಂದ ನಮೂನೆನ್ನು ತಮಗೆ ಕಳುಹಿಸಲಾಗುತ್ತಿದ್ದು, ಸದರಿ ನಮೂನೆಯನ್ನು ದಿನಾಂಕ: 30–04–2019 ರೊಳಗಾಗಿ ಭರ್ತಿ ಮಾಡಿ ಕಳುಹಿಸಲು ಕೋರಿದೆ.

ಸಾಮಾಜಿಕ ಕಾರ್ಯಚಟುವಟಿಕೆಗಳು : ಸೌಹಾರ್ದ ಸಹಕಾರಿಗಳು ಕೇವಲ ಆರ್ಥಿಕ ಉದ್ದಿಮೆಗಳಾಗದೆ, ಸಹಕಾರ ತತ್ವದ ಏಳನೆ ಅಂಶವಾದ ಸಾಮಾಜಿಕ ಬದ್ಧತೆಯನ್ನು ಕೂಡ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ಆದರೆ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳು ಪ್ರಚಾರದ ಕೊರತೆಯಿಂದಾಗಿ ಸಮಾಜದ, ಸರ್ಕಾರದ ಗಮನ ಸೆಳೆಯಲು ಸಾಧ್ಯವಾಗುತ್ತಿಲ್ಲ. ಸೌಹಾರ್ದ ಸಹಕಾರಿಗಳು ತಮ್ಮ ಹಣಕಾಸಿನ ವ್ಯವಹಾರಗಳ ನಡುವೆಯು ಮಾಡಿರಬಹುದಾದ – ರಕ್ತದಾನ ಶಿಬಿರ, ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ, ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು, ನೆರೆ ಸಂತ್ರಸ್ಥರಿಗೆ ಪರಿಹಾರ, ಯೋಧರಿಗೆ ಸನ್ಮಾನಿಸುವುದು, ಸ್ವಂತ ಉದ್ಯೋಗಕ್ಕೆ ಪ್ರೋತ್ಸಾಹ, ಸ್ವಚ್ಛತಾ ಅಭಿಯಾನಗಳಂತಹ ಇನ್ನೂ ಅನೇಕ ಸಮಾಜಮುಖಿ ಕಾರ್ಯಗಳ ಕೇಂದ್ರೀಕೃತ ಮಾಹಿತಿ ಲಭ್ಯವಿಲ್ಲ. ಇಂತಹ ಅನೇಕ ಸಾಮಾಜಿಕ ಕಾರ್ಯಚಟುವಟಿಕೆಗಳ ಕೇಂದ್ರೀಕೃತ ಮಾಹಿತಿಯನ್ನು ಹೊಂದಲು ಸಂಯುಕ್ತ ಸಹಕಾರಿಯು ಉದ್ದೇಶಿಸಿದ್ದು, ನಮೂನೆನ್ನು ತಮಗೆ ಕಳುಹಿಸಲಾಗುತ್ತಿದೆ. ಸದರಿ ನಮೂನೆಯನ್ನು ದಿನಾಂಕ: 30–04–2019 ರೊಳಗಾಗಿ ಭರ್ತಿ ಮಾಡಿ ಕಳುಹಿಸಲು ಕೋರಿದೆ.

ವಿವಿಧ ತಂತ್ರಜ್ಞಾನ ಸಂಬಂಧಿತ ಸೇವಾ ಸಂಸ್ಥೆಗಳು ನಿರಂತರವಾಗಿ ಸಂಯುಕ್ತ ಸಹಕಾರಿಯನ್ನು ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಸಂಪರ್ಕಿಸುತ್ತಿರುತ್ತವೆ. ಅಲ್ಲದೆ, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಪರವಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಮಟ್ಟದಲ್ಲಿ ಹಾಗೂ ಬೇರೆ ಬೇರೆ ಸಂಸ್ಥೆಗಳು, ಇಲಾಖೆಗಳೊಂದಿಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯವಹರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದಿಂದಾದ ಸಾಮಾಜಿಕ ಕಾರ್ಯಗಳ ಮಾಹಿತಿ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ತಂತ್ರಜ್ಞಾನ ಅಳವಡಿಕೆಯ ಮಾಹಿತಿಗಳು ಉಪಯುಕ್ತವೆನಿಸುತ್ತವೆ. ಆದಕಾರಣ, ಸಂಬಂಧಿಸಿದ ನಮೂನೆಗಳನ್ನು ಭರ್ತಿ ಮಾಡಿ ಕಳುಹಿಸುವ ಮೂಲಕ ಮಾಹಿತಿ ಒದಗಿಸಲು ಕೋರಿದೆ.

ವಂದನೆಗಳೊಂದಿಗೆ,

ಸಹಿ/–

(ಶರಣಗೌಡ ಜಿ ಪಾಟೀಲ)

ವ್ಯವಸ್ಥಾಪಕ ನಿರ್ದೇಶಕ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಕೆ**

ಸಂಖ್ಯೆ : ಕರಾಸೌಸಂಸನಿ/ಆಡಳಿತ ವಿಭಾಗ/ಸುತ್ತೋಲೆ–2/2018–19 ದಿನಾಂಕ:21.05.2018

**ಸುತ್ತೋಲೆ–03**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ

ಮುಖ್ಯಕಾರ್ಯನಿರ್ವಾಹಕರುಗಳಿಗೆ,

ಮಾನ್ಯರೇ,

ವಿಷಯ : ನಾಮಮಾತ್ರ ಸದಸ್ಯರು ಮತ್ತು ಸದಸ್ಯೇತರರಿಂದ ಠೇವಣಿ ಸ್ವೀಕರಿಸದಿರುವ ಕುರಿತು.

ಉಲ್ಲೇಖ ; 1. ಸಂಯುಕ್ತ ಸಹಕಾರಿಯ ದಿನಾಂಕ 27–04–2017ರ ಪತ್ರ ಸಂಖ್ಯೆ: ಸಂಸ/ಶಾ–368/ಶಾ/ಆರ್‌ಬಿಐ/2017–18.

2. ದಿನಾಂಕ 19 ಫೆಬ್ರುವರಿ 2018ರ ಭಾರತೀಯ ರಿಸರ್ವ್ ಬ್ಯಾಂಕಿನ ಪತ್ರ ಸಂಖ್ಯೆ: DCBS.BL.(Ret) No. 2252/06.02.322/2017–18.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಪತ್ರದ ಮೂಲಕ ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಂದ ಮಾತ್ರ ಠೇವಣಿಯನ್ನು ಸಂಗ್ರಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಸದಸ್ಯೇತರರಿಂದ ಠೇವಣಿಗಳನ್ನು ಸಂಗ್ರಹಿಸತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಣೆಗೆ ಸಾರ್ವಜನಿಕ ಮೇಳಗಳನ್ನು ಆಯೋಜಿಸತಕ್ಕದ್ದಲ್ಲ ಎಂದು ಸುತ್ತೋಲೆಯನ್ನು ನೀಡಲಾಗಿತ್ತು. ಮುಂದುವರೆದು ಉಲ್ಲೇಖ 2ರ ಪತ್ರದ ಮೂಲಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 22ರ ಪ್ರಕಾರ "ಭಾರತೀಯ ರಿಸರ್ವ್ ಬ್ಯಾಂಕಿನಿಂದ, ಬ್ಯಾಂಕಿಂಗ್ ವ್ಯವಹಾರ ನಡೆಸಲು ಪರವಾನಗಿ ಪಡೆದಿರುವ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ಇತರೆ ಯಾವುದೇ ಸೌಹಾರ್ದ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಸದಸ್ಯೇತರರಿಂದ ಸಾರ್ವಜನಿಕರಿಂದ ಠೇವಣಿಯನ್ನು ಸಂಗ್ರಹಿಸತಕ್ಕದಲ್ಲ" ಎಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ಯಾವುದೇ ಸೌಹಾರ್ದ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಇತರೆ ಯಾವುದೇ ಸದಸ್ಯೇತರರಿಂದ ಠೇವಣಿಗಳನ್ನು ಸ್ವೀಕರಿಸದಿರಲು ಸೂಚಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಬೆಂಗಳೂರು ಇವರು, ಸಂಯುಕ್ತ ಸಹಕಾರಿಗೆ ಪತ್ರವನ್ನು ಬರೆದಿರುತ್ತಾರೆ.

ಆದ್ದರಿಂದ ಸೌಹಾರ್ದ ಸಹಕಾರಿಗಳು ನಾಮಮಾತ್ರ ಸದಸ್ಯರು ಸೇರಿದಂತೆ ಇತರೆ ಯಾವುದೇ ಸದಸ್ಯೇತರರಿಂದ ಠೇವಣಿಗಳನ್ನು ಸ್ವೀಕರಿಸಿದ್ದಲ್ಲಿ ಅಂತಹ ನಾಮಮಾತ್ರ ಸದಸ್ಯರನ್ನು ಹಾಗೂ ಸದಸ್ಯೇತರರನ್ನು ತಕ್ಷಣದಿಂದ ಸಹಕಾರಿಯ ಸದಸ್ಯರನ್ನಾಗಿ ಸೇರಿಸಿಕೊಳ್ಳತಕ್ಕದ್ದು. ಕಾಯ್ದೆಯನ್ನು ಉಲ್ಲಂಘಿಸಿ, ನಾಮಮಾತ್ರ ಸದಸ್ಯರು ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಿದರೆ ಅಂತಹ ಸಹಕಾರಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲು ಅಗತ್ಯ ಕ್ರಮವಿಡಲು ಆರ್.ಬಿ.ಐ ಸೂಚಿಸಿದೆ. ಅದರಂತೆ ಎಲ್ಲ ಸೌಹಾರ್ದ ಸಹಕಾರಿಗಳು ಈ ಕುರಿತು ಅಗತ್ಯ ಕ್ರಮವಿಟ್ಟು ಕ್ರಮದ ವರದಿಯನ್ನು kssfcladmin@souharda.coop email id ಗೆ ಆದ್ಯತೆ ಮೇರೆಗೆ ಕಳುಹಿಸಲು ಸೂಚಿಸಿದೆ. ಒಂದು ವೇಳೆ ಯಾವುದೇ ಸೌಹಾರ್ದ ಸಹಕಾರಿಯು ಸದರಿ ಕ್ರಮವನ್ನು ವಹಿಸುವಲ್ಲಿ ವಿಫಲವಾದಲ್ಲಿ ಆಯಾ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಹಾಗೂ ಆಡಳಿತ ಮಂಡಲಿ ಸದಸ್ಯರನ್ನು ಹೊಣೆಗಾರರನ್ನಾಗಿ ಮಾಡಿ ಅಗತ್ಯ ಕ್ರಮವಹಿಸಲಾಗುವುದು ಎಂಬುದನ್ನು ಈ ಮೂಲಕ ತಿಳಿಸಿದೆ.

**ವಂದನೆಗಳೊಂದಿಗೆ,**

ಸಹಿ/–

(ಶರಣಗೌಡ ಜಿ ಪಾಟೀಲ)

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಎಂ**

ಸಂಖ್ಯೆ : ಸುತ್ತೋಲೆ/05/ನಿ.ಹೂ/2018–19 ದಿನಾಂಕ:25.05.2018

**ಸುತ್ತೋಲೆ–05**

**ವಿಷಯ : ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆಯ ಕುರಿತಾದ ಮಾರ್ಗಸೂಚಿಗಳು.**

**ಪ್ರಸ್ತಾವನೆ**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ 18 ರಲ್ಲಿ ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆ ಕುರಿತಂತೆ ಸ್ಪಷ್ಟ ಪ್ರಾವಧಾನವಿರುತ್ತದೆ. ಆದರೂ ಸೌಹಾರ್ದ ಸಹಕಾರಿಗಳು ಸಲ್ಲಿಸಿರುವ ಲೆಕ್ಕಪರಿಶೋಧನಾ ವರದಿ, ಪರಿವೀಕ್ಷಣೆಯ ಸಂದರ್ಭದಲ್ಲಿ ಕೆಲವೊಂದು ಸೌಹಾರ್ದ ಸಹಕಾರಿಗಳು ಕಲಂ18ರ ವ್ಯತಿರಿಕ್ತವಾಗಿ ಹೂಡಿಕೆ ಮಾಡುತ್ತಿರುವುದು ಸಂಯುಕ್ತ ಸಹಕಾರಿ ಗಮನಕ್ಕೆ ಬಂದಿರುತ್ತದೆ. ಅವುಗಳಲ್ಲಿ ಉದಾಹರಿಸಬಹುದಾದ ಉಲ್ಲಂಘನೆಗಳು ಕೆಲವೊಂದು ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ ಸಹಕಾರ ಸಂಘ/ಸಕ್ಕರೆ ಕಾರ್ಖಾನೆಗಳಲ್ಲಿ ಹೂಡಿಕೆ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಕೆಲವೊಂದು ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ, ಮ್ಯುಚುವಲ್ ಫಂಡ್, ಯುಲಿಫ್ ಲಿಂಕ್ಡ್ ಯೋಜನೆಗಳಲ್ಲಿ ಹೂಡಿಕೆ ಮಾಡಿರುವುದು ಗಮನಿಸಲಾಗಿದೆ. ಇನ್ನೂ ಕೆಲವೊಂದು ಸೌಹಾರ್ದ ಸಹಕಾರಿಗಳು ನಿಧಿಯನ್ನು ಹೂಡಿಕೆ ಮಾಡಿ ಬಂದಿರುವ ಲಾಭ/ನಷ್ಟವನ್ನು /ಆದಾಯ/ಜಮಾ ತಖ್ತೆಯಲ್ಲಿ ಪ್ರತ್ಯೇಕವಾಗಿ ಕಮೆ ಮಾಡದೆ ಇರುವುದನ್ನು ಗಮನಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆ ಕುರಿತಂತೆ ಮಾರ್ಗಸೂಚಿಯನ್ನು ರೂಪಿಸಿ ಈ ಸುತ್ತೊಲೆ ಹೊರಡಿಸಿದೆ.

**ಸೌಹಾರ್ದ ಸಹಕಾರಿಗಳ ನಿಧಿಗಳ ಹೂಡಿಕೆಗಳ ಕುರಿತಾದ ಮಾರ್ಗಸೂಚಿಗಳು**

**(ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 53 (7)(ಎ) ಅಡಿ)**

**ಮಾರ್ಗಸೂಚಿಗಳು :**

1. ಸೌಹಾರ್ದ ಸಹಕಾರಿಗಳ ನಿಧಿಗಳನ್ನು ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳನ್ನು ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಅಥವಾ ಇತರೆ ಯಾವುದೇ ಸಂಸೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
3. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ / ಮ್ಯೂಚುವಲ್ ಫಂಡ್ / ಬಿಟ್ ಕಾಯಿನ್ / ಕ್ರಿಪ್ಟೋ ಕರೆನ್ಸ್/ ಯುಲಿಫ್ ಲಿಂಕ್‌ಡ್ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಹೂಡಿಕೆಯಿಂದ ಬಂದಿರುವ ಲಾಭ/ನಷ್ಟವನ್ನು ಆದಾಯ/ ನಷ್ಟವನ್ನು ಆದಾಯ/ವೆಚ್ಚ ತಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.
5. ಮೇಲ್ಕಂಡ ಮಾರ್ಗಸೂಚಿಗಳು ಕ.ಸೌ.ಸ ಅಧಿನಿಯಮ 1997ರಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಲ್ಲಿ ಅನ್ವಯಿಸತಕ್ಕದ್ದಲ್ಲ.

ಈ ಮಾರ್ಗಸೂಚಿಗಳನ್ನು ಸಂಯುಕ್ತ ಸಹಕಾರಿಯ ಪರವಾಗಿ ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ 25 ಮೇ 2018 ರಂದು ನೀಡಲಾಗಿದೆ.

ಸಹಿ/–

(ಶರಣಗೌಡ ಜಿ. ಪಾಟೀಲ)

ವ್ಯವಸ್ಥಾಪಕ ನಿರ್ದೇಶಕರು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಎನ್**

ಸಂಖ್ಯೆ : ಸಂಸ/ಆರ್&ಡಿ/ಶಾಪ್ರಪ–01/2017–18 ದಿನಾಂಕ: 30.01.2018

**ಸುತ್ತೋಲೆ–07**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರುಗಳಿಗೆ,

ಮಾನ್ಯರೇ,

ವಿಷಯ : ಸೌಹಾರ್ದ ಸಹಕಾರಿಗಳ ಶಾಖೆಗಳಿಗೆ ಸಂಯುಕ್ತ ಸಹಕಾರಿಯಿಂದ ಅನುಮತಿ ಪತ್ರ/ಪ್ರಮಾಣ ಪತ್ರವನ್ನು ನೀಡುವ ಕುರಿತು.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯಲ್ಲಿ ನೋಂದಾಯಿತವಾದ ಸೌಹಾರ್ದ ಸಹಕಾರಿಗಳು, ಕಾಯ್ದೆ ಹಾಗೂ ನಿಯಮಗಳಿಗನುಗುಣವಾಗಿ ಸಂಯುಕ್ತ ಸಹಕಾರಿಯ ಹಾಗೂ ಸಹಕಾರಿಯ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ತೆರೆದಿರುವ ಶಾಖೆಗಳಿಗೆ, ಶಾಖೆಗಳಲ್ಲಿ ಪ್ರದರ್ಶಿಸಲು "ಅನುಮತಿ ಪತ್ರ/ಪ್ರಮಾಣ ಪತ್ರ"ವನ್ನು ಸಂಯುಕ್ತ ಸಹಕಾರಿಯು ಒದಗಿಸಬೇಕು ಎನ್ನುವುದು ಸೌಹಾರ್ದ ಸಹಕಾರಿಗಳ ಅಪೇಕ್ಷೆಯಾಗಿತ್ತು. ಅದರಂತೆ, ಡಿಜಿಟಲೀಕರಣದತ್ತ ಸೌಹಾರ್ದ ಸಹಕಾರಿಗಳು ಹೆಜ್ಜೆಯಿಡುವ ಉದ್ದೇಶದಿಂದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಶಾಖೆಗಳಿಗೆ ಸಂಬಂಧಿಸಿದಂತೆ ತಂತ್ರಜ್ಞಾನ ಆಧಾರಿತ ಅನುಮತಿ ಪತ್ರ/ಪ್ರಮಾಣ ಪತ್ರವನ್ನು ನೀಡಲು ತೀರ್ಮಾನಿಸಿರುತ್ತದೆ. ಈ ಕುರಿತು ಕೆಳಕಂಡ ಅಂಶಗಳನ್ನು ಗಮನಿಸಿ ಅಗತ್ಯ ಕ್ರಮವಿಡಲು ಕೋರಿದೆ.

1. 11 ಫೆಬ್ರವರಿ 2013ರಲ್ಲಿ ಕಾಯ್ದೆಯಲ್ಲಾದ ತಿದ್ದುಪಡಿಯ ಅನ್ವಯ, ಕಾಯ್ದೆ ಕಲಂ. 23ಎ ರಂತೆ ಸಂಯುಕ್ತ ಸಹಕಾರಿಯ ಹಾಗೂ ಸಹಕಾರಿಯ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಶಾಖೆ ತೆರೆಯಬಹುದಾಗಿದ್ದು, ಈ ತಿದ್ದುಪಡಿಯ ನಂತರದಲ್ಲಿ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ಶಾಖೆ ತೆರೆಯುವ ಕುರಿತ ಮಾನದಂಡಗಳ ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ–5/2013–14, ದಿನಾಂಕ:28.06.2013ರಂತೆ ಶಾಖೆಗಳನ್ನು ತೆರೆದಿರುವ ಸಹಕಾರಿಗಳು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಶಾಖೆಯ ವಿವರಗಳನ್ನು ಕಳುಹಿಸಿದಲ್ಲಿ ಅಂತಹ ಶಾಖೆಗಳಿಗೆ ಸಂಯುಕ್ತ ಸಹಕಾರಿಯಿಂದ ತಂತ್ರಜ್ಞಾನ ಅಳವಡಿಸಿರುವ "ಅನುಮತಿ ಪತ್ರ" ನೀಡಲಾಗುವುದು.

2. 11 ಫೆಬ್ರವರಿ 2013ರ ತಿದ್ದುಪಡಿಯ ಪೂರ್ವದಲ್ಲಿ ತೆರೆಯಲಾದ ಶಾಖೆಗಳಿಗೆ ಸಂಬಂಧಿಸಿದಂತೆ, ಲಗತ್ತಿಸಿರುವ ನಮೂನೆಯಲ್ಲಿ ಶಾಖೆಯ ವಿವರಗಳನ್ನು ನೀಡುವುದರ ಜೊತೆಗೆ, ಸೌಹಾರ್ದ ಸಹಕಾರಿಯು ಶಾಖೆ ತೆರಯುವ ಕುರಿತು ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದ ಬಗ್ಗೆ ನಡವಳಿಯ ಪ್ರತಿಯನ್ನು ಒದಗಿಸಬೇಕು. ಇಂತಹ ಶಾಖೆಗಳಿಗೆ, ಸಂಯುಕ್ತ ಸಹಕಾರಿಯಿಂದ ತಂತ್ರಜ್ಞಾನ ಅಳವಡಿಸಿರುವ "ಪ್ರಮಾಣ ಪತ್ರ" ನೀಡಲಾಗುವುದು.

ಈ ತಂತ್ರಜ್ಞಾನ ಅಳವಡಿಸಿರುವ ಪ್ರತಿಯೊಂದು ಪ್ರಮಾಣ ಪತ್ರಕ್ಕೆ ರೂ. 500/– ನಿಗದಿಪಡಿಸಲಾಗಿದ್ದು, ಸದರಿ ಪ್ರಮಾಣ ಪತ್ರವು ಈ ಕೆಳಕಂಡ ತಾಂತ್ರಿಕ ಅಂಶಗಳನ್ನು ಒಳಗೊಂಡಿರುತ್ತದೆ,

1. **Printed Watermark,**
2. **High Resolution Borders,**
3. **Micro Text,**
4. **QR Code,**
5. **Unique Serial Number,**
6. **Verification Feature,**
7. **Anti-Counterfeit-Electronic Security Feature,**
8. **GID Number,**

ಈ ಪತ್ರದೊಂದಿಗೆ ಲಗತ್ತಿಸಿರುವ ಶಾಖೆಯ ವಿವರಗಳ ನಮೂನೆಯಲ್ಲಿ ಸ್ಥಳಾವಕಾಶವಿರುವ ಸಂಖ್ಯೆಗಿಂತ ಹೆಚ್ಚಿನ ಶಾಖೆಗಳಿದ್ದಲ್ಲಿ, ನಮೂನೆಯಲ್ಲಿನ ಮಾದರಿಯಲ್ಲಿಯೇ ಪ್ರತ್ಯೇಕವಾಗಿ ಶಾಖೆಗಳ ವಿವರ ಸಿದ್ಧಪಡಿಸಿ 15/02/2018ರ ಒಳಗಾಗಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಅಥವಾ branchpermission@souharda.coop ಗೆ ಅಧ್ಯಕ್ಷರ ಹಾಗೂ ಮುಖ್ಯಕಾರ್ಯನಿರ್ವಾಹಕರ ಸಹಿ ಹಾಗೂ ಸಹಕಾರಿಯ ಮೊಹರಿನೊಂದಿಗೆ ಕಳುಹಿಸಲು ತಿಳಿಸಿದೆ. ಸಂಯುಕ್ತ ಸಹಕಾರಿಯಲ್ಲಿ ತಮ್ಮ ಸಂಸ್ಥೆಯ ಶಾಖೆಗಳ ವಿವರ ಸಂಗ್ರಹ ಪ್ರಮುಖ ಕಾರ್ಯವಾಗಿದ್ದು ಆದ್ಯತೆ ಮೇರೆಗೆ ಕಾರ್ಯನಿರ್ವಹಿಸಲು ತಿಳಿಸಿದೆ.

ವಂದನೆಗಳೊಂದಿಗೆ,

(ಶರಣಗೌಡ ಜಿ. ಪಾಟೀಲ್)

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಒ**

ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ತೆ–01/2018–19 ದಿನಾಂಕ:01.12.2018

**ಅತ್ಯಂತ ಮಹತ್ವದ್ದು**

ಇವರಿಗೆ :

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ಮಾನ್ಯರೇ,

ವಿಷಯ : ಜಿಎಸ್‌ಟಿ ನೋಂದಣಿ ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯ ಕುರಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳಿಗೆ ತರಬೇತಿ, ಶಿಕ್ಷಣ ಹಾಗೂ ಪ್ರಚಾರ ಚಟುವಟಿಕೆಗಳ ಮೂಲಕ ಅರಿವನ್ನು ಉಂಟು ಮಾಡುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಲಿದೆ. ಸಂಯುಕ್ತ ಸಹಕಾರಿಯು ಪ್ರತೀ ವರ್ಷ ಆಯೋಜಿಸುವ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯಲ್ಲಿ ಆದಾಯ ತೆರಿಗೆ ವಿಷಯದ ಕುರಿತು ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯ ಕುರಿತು ತರಬೇತಿ/ಮಾಹಿತಿ ನೀಡಲಾಗುತ್ತಿದೆ. ಮೇ 2017ರ ಮಾಹೆಯಲ್ಲಿ ರಾಜ್ಯದ ವಿವಿಧೆಡೆ ಆದಾಯ ತೆರಿಗೆ ಕಾಯ್ದೆ ಹಾಗೂ ಜಿಎಸ್‌ಟಿಯ ಕುರಿತಂತೆ 14 ತರಬೇತಿಗಳನ್ನು ಕೂಡ ಸಂಯುಕ್ತ ಸಹಕಾರಿಯಿಂದ ಆಯೋಜಿಸಲಾಗಿತ್ತು. ನಂತರದಲ್ಲಿ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ (ಜಿಎಸ್‌ಟಿ) ಜಾರಿಗೆ ಬಂದ ನಂತರ ಈ ಕಾಯ್ದೆಯ ಕುರಿತು ಕೂಡ ಸಂಯುಕ್ತ ಸಹಕಾರಿಯಿಂದ 07 ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿತ್ತು. ಅಲ್ಲದೆ, ಜುಲೈ 2017ರ ಸ್ವಾಭಿಮಾನಿ ಸಹಕಾರಿಯಲ್ಲಿ ಜಿಎಸ್‌ಟಿ ನಿರ್ವಹಣೆಯಲ್ಲಿ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಕುರಿತು ಲೇಖನವನ್ನು ಪ್ರಕಟಿಸಲಾಗಿತ್ತು.

ಆದರೆ, ಅನೇಕ ಸೌಹಾರ್ದ ಸಹಕಾರಿಗಳು ಇದುವರೆಗೆ ಜಿಎಸ್‌ಟಿ ನೋಂದಣಿ ಮಾಡಿಕೊಂಡಿರದ ಕುರಿತು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿರುತ್ತದೆ ಹಾಗೂ ನಿಯಮಿತವಾಗಿ ಜಿಎಸ್‌ಟಿ ರಿಟರ್ನ್ ಸಲ್ಲಿಕೆ ಮಾಡುತ್ತಿಲ್ಲದಿರುವುದು ಕಂಡುಬಂದಿರುತ್ತದೆ. ಅನೇಕ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ರಿಟರ್ನ್‌ನ್ನು ನಿಗದಿತ ಸಮಯದೊಳಗೆ ಸಲ್ಲಿಕೆ ಮಾಡುತ್ತಿಲ್ಲವೆಂದು ಸಂಯುಕ್ತ ಸಹಕಾರಿಯ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ಸನ್ನದು ಲೆಕ್ಕಪರಿಶೋಧಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಈ ಕೆಳಕಂಡಂತೆ ಕ್ರಮವಿಡಲು ಸೂಚಿಸಿ ಈ ಸುತ್ತೋಲೆಯನ್ನು ನೀಡಲಾಗಿದೆ.

**1. ಜಿಎಸ್‌ಟಿ ನೋಂದಣಿ ಹಾಗೂ ಜಿಎಸ್‌ಟಿ ರಿಟರ್ನ್ ಸಲ್ಲಿಕೆ :**

- ದಿನಾಂಕ 01 ಜುಲೈ 2017ರಿಂದ ಜಾರಿಗೊಂಡಿರುವ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯು ಸೌಹಾರ್ದ ಸಹಕಾರಿಗಳಿಗೂ ಅನ್ವಯಿಸುತ್ತದೆ. ಯಾವುದೇ ಸಹಕಾರಿಯ ಒಟ್ಟೂ ವಹಿವಾಟು (ಆದಾಯ) ರೂ.20/–ಲಕ್ಷ ಮೀರಿದ್ದರೆ ಅಂತಹ ಸಹಕಾರಿಯು ಸರಕು ಮತ್ತು ಸೇವೆಗಳ ಅಧಿನಿಯಮ,2017ರಡಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ನಿಯಮಿತವಾಗಿ ಜಿಎಸ್‌ಟಿ ರಿಟರ್ನ್ ಸಲ್ಲಿಕೆಯನ್ನು ಮಾಡಬೇಕಾಗುತ್ತದೆ.

- ಗಮನಿಸಿ: ಸರಕು ಮತ್ತು ಸೇವೆಗಳ ಅಧಿನಿಯಮ,2017 ರಲ್ಲಿ ಒಟ್ಟೂ ವಹಿವಾಟು (ಆದಾಯ) ಎಂಬ ಶಬ್ದವನ್ನು ಬಳಸಲಾಗಿರುತ್ತದೆ. ಒಟ್ಟೂ ವಹಿವಾಟಿನಲ್ಲಿ ಸಹಕಾರಿಯು ಬಡ್ಡಿ ರೂಪದಲ್ಲಿ ಪಡೆಯುವ ಆದಾಯವು ಒಳಗೊಂಡಿರುತ್ತದೆ.

- ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸಹಕಾರಿಯು ಗಳಿಸುವ ಬಡ್ಡಿ ರೂಪದ ಆದಾಯಕ್ಕೆ ಸೇವಾ ತೆರಿಗೆ ಪಾವತಿಸಬೇಕಿರುವುದಿಲ್ಲ. ಆದರೆ, ಸರಕು ಮತ್ತು ಸೇವೆಗಳ ಅಧಿನಿಯಮ, 2017ರಡಿ ಬಡ್ಡಿ ಸೇರಿದಂತೆ ಯಾವುದೇ ರೂಪದ ಒಟ್ಟೂ ವಹಿವಾಟು (ಆದಾಯ) ರೂ.20/–

ಲಕ್ಷಗಳಾದಾಗ ಸರಕು ಮತ್ತು ಸೇವೆಗಳ ಅಧಿನಿಯ, 2017ರಡಿ ನೋಂದಣಿ ಮಾಡಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು https://www.gst.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

**2. ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ :**

- ಸಹಕಾರಿಯ ಒಟ್ಟು ವಾರ್ಷಿಕ ಆದಾಯ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇದ್ದಲ್ಲಿ, ಆದಾಯ ತೆರಿಗೆ ಕಾಯ್ದೆ ಕಲಂ 44ಎಬಿ ಅನ್ವಯ ಸನ್ನದು ಲೆಕ್ಕಪರಿಶೋಧಕರಿಂದ ದೃಢೀಕರಿಸಲ್ಪಟ್ಟ ನಮೂನೆ 3ಸಿಎ ಹಾಗೂ ನಮೂನೆ 3ಸಿಡಿಯಲ್ಲಿ ವಿವರವನ್ನು ಇಲಾಖೆಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

- ಪ್ರತಿಯೊಂದು ಸಹಕಾರಿಯು ಆದಾಯ ತೆರಿಗೆ ಕಾಯ್ದೆ ಕಲಂ.139ರ ಅನ್ವಯ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸಹಕಾರಿಯು ಸದಸ್ಯರ ಜೊತೆಗೆ ಮಾಡುವ ಪತ್ತಿನ ವ್ಯವಹಾರದಿಂದ ಬರುವ ಆದಾಯಕ್ಕೆ ತೆರಿಗೆ ಕಡಿತಕ್ಕೆ ಅವಕಾಶ ಇರುತ್ತದೆ. ಆದರೆ ಸೌಹಾರ್ದ ಸಹಕಾರಿಗಳು ನಿಗದಿತ ಸಮಯದೊಳಗೆ ಆದಾಯ ತೆರಿಗೆ ರಿಟರ್ನ್ ಮಾಡಿದಲ್ಲಿ ಮಾತ್ರ ಕಡಿತವನ್ನು ಪಡೆಯಲು ಅರ್ಹರಾಗುತ್ತವೆ. ಮುಂದಿನ ವರ್ಷಗಳಲ್ಲಿ ಆದಾಯ ತೆರಿಗೆ ಇಲಾಖೆಯು ನೋಟೀಸ್ ನೀಡಿದಲ್ಲಿ, ಆದಾಯ ತೆರಿಗೆ ರಿಟರ್ನ್ ಮಾಡದಿದ್ದಲ್ಲಿ ತೆರಿಗೆ ಬಾದ್ಯತೆಗೆ ಒಳಪಡಬೇಕಾಗುತ್ತದೆ. ಆದ್ದರಿಂದ, ಸೌಹಾರ್ದ ಸಹಕಾರಿಗಳು ಪ್ರತೀ ವರ್ಷ ನಿಗದಿತ ಅವಧಿಯೊಳಗೆ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ ಮಾಡುವುದು ಸೂಕ್ತವಾಗಿರುತ್ತದೆ.

**3. ನಾಮಮಾತ್ರ ಸದಸ್ಯರು ಹಾಗೂ ಸಹಸದಸ್ಯರೊಂದಿಗೆ ವ್ಯವಹಾರ :**

- ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರೊಂದಿಗೆ ಮಾಡುವ ಕ್ರೆಡಿಟ್ ಹಾಗೂ ಬ್ಯಾಂಕಿಂಗ್ ವ್ಯವಹಾರದಿಂದ ಗಳಿಸುವ ಆದಾಯಕ್ಕೆ, ಆದಾಯ ತೆರಿಗೆ ಕಲಂ.80ಪಿ(2)(ಎ)(i) ನಡಿಯಲ್ಲಿ ತೆರಿಗೆ ಕಡಿತಕ್ಕೆ ಅವಕಾಶ ಇದೆ. ಆದರೆ, ಸಹಸದಸ್ಯರು ಹಾಗೂ ನಾಮಮಾತ್ರ ಸದಸ್ಯರೊಂದಿಗೆ ವ್ಯವಹಾರ ಮಾಡಿರುವುದನ್ನು ಸದಸ್ಯೇತರರೊಂದಿಗಿನ ವ್ಯವಹಾರವೆಂದು ಪರಿಗಣಿಸಿ ಸಿಟಿಜನ್ ಕೋ ಆಪರೇಟೀವ್ ಸೊಸೈಟಿಯ ಆದಾಯಕ್ಕೆ ಕಲಂ.80ಪಿ(2)(ಎ)(i) ಅಡಿಯಲ್ಲಿ ತೆರಿಗೆ ಕಡಿತಕ್ಕೆ ಅವಕಾಶ ಇಲ್ಲವೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದನ್ನು ಆಧಾರವಾಗಿಟ್ಟುಕೊಂಡು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳಿಗೆ ನೋಟೀಸು ನೀಡಲು ಆರಂಭಿಸಿದ್ದಾರೆ.

- ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರೊಂದಿಗೆ ಮಾತ್ರ ವ್ಯವಹಾರವನ್ನು ಮಾಡಿದಲ್ಲಿ ಆದಾಯ ತೆರಿಗೆ ಕಡಿತ ಲಭ್ಯವಿರುತ್ತದೆ.

- ಒಂದು ವೇಳೆ ಸೌಹಾರ್ದ ಕಾಯ್ದೆಯ ಪ್ರಾವಧಾನದಂತೆ ನಾಮಮಾತ್ರ ಸದಸ್ಯರು, ಸಹಸದಸ್ಯರೊಂದಿಗೆ ಹಾಗೂ ಪ್ಯಾನ್ ಕಾರ್ಡ್ ನೀಡುವುದು, ಇ ಸ್ಟಾಂಪಿಂಗ್ ಸೇವೆ ಸೇರಿದಂತೆ ಸದಸ್ಯೇತರರೊಂದಿಗೆ ವ್ಯವಹಾರಗಳನ್ನು ಮಾಡಿದಲ್ಲಿ, ಆ ಕಾರ್ಯಚಟುವಟಿಕೆಗಳಿಂದ ಬಂದ ಲಾಭಕ್ಕೆ ಆದಾಯ ತೆರಿಗೆ ಕಾಯ್ದೆಯನ್ವಯ ತೆರಿಗೆ ಪಾವತಿಸಬೇಕಾಗುತ್ತದೆ.

- ನಾಮಮಾತ್ರ ಸದಸ್ಯರು ಹಾಗೂ ಸದಸ್ಯೇತರರಿಂದ ಠೇವಣಿ ಸ್ವೀಕರಿಸದಿರುವ ಕುರಿತು ಸಂಯುಕ್ತ ಸಹಕಾರಿಯು ದಿನಾಂಕ:21.05.2018ರಂದು ಪತ್ರ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ-03/2018-19ರ ಮೂಲಕ ಸುತ್ತೋಲೆಯನ್ನು ಕಳುಹಿಸಿದ್ದು ಗಮನಿಸಲು ಕೋರಿದೆ.

ಜಿಎಸ್‌ಟಿ ನೋಂದಣಿ ಮಾಡಿಸದ ಸೌಹಾರ್ದ ಸಹಕಾರಿಗಳು ಜಿಎಸ್‌ಟಿ ಕಾಯ್ದೆಯನ್ವಯ ವಿಧಿಸಬಹುದಾದ ದಂಡನೆಗೆ ಜವಾಬ್ದಾರರಾಗುತ್ತವೆ. ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ ಮಾಡದ ಸೌಹಾರ್ದ ಸಹಕಾರಿಗಳು ಯಾವುದೇ ತೆರಿಗೆ ವಿನಾಯಿತಿಯಲ್ಲಿ ಕಡಿತಗಳನ್ನು ಕ್ಲೈಮ್ ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ಆದಾಯ ತೆರಿಗೆ ಕಾಯ್ದೆಯನ್ವಯ ದಂಡನೆಗೆ ಒಳಪಡುತ್ತವೆ. ಆದಾಯ ತೆರಿಗೆ ಸವಾಲುಗಳನ್ನು ಎದುರಿಸಬೇಕಾದರೆ ಸಹಕಾರ ಸಂಸ್ಥೆಗಳು ಕೂಡ ಆರ್ಥಿಕ ಶಿಸ್ತನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಸದಸ್ಯರೊಂದಿಗಿನ ವ್ಯವಹಾರ, ಸಹಸದಸ್ಯರು, ನಾಮಮಾತ್ರ ಸದಸ್ಯರು ಹಾಗೂ ಸದಸ್ಯೇತರರೊಂದಿಗಿನ ವ್ಯವಹಾರದ ಲೆಕ್ಕಾಚಾರವನ್ನು ಪ್ರತ್ಯೇಕವಾಗಿ ನಿರ್ವಹಿಸುವುದು, ಕೆವೈಸಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು, ನಿಗದಿತ ಸಮಯದಲ್ಲಿ ತೆರಿಗೆ ಸಂಬಂಧಿಸಿದ ರಿಟರ್ನ್ ಸಲ್ಲಿಕೆ ಮಾಡುವುದು, ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಹೊಂದಿರುವುದು ಇವೆಲ್ಲ ಕೂಡ ಸಹಕಾರ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತವೆ. ಆದಕಾರಣ, ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಆಡಳಿತ ಮಂಡಲಿಯವರು ಈ ಮೇಲ್ಕಂಡ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಕ್ರಮವಿಡಲು ಸೂಚಿಸಿದೆ.

ವಂದನೆಗಳೊಂದಿಗೆ,

ಸಹಿ/-

(ಶರಣಗೌಡ ಜಿ ಪಾಟೀಲ)

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಪಿ**

## ಪ್ರಸ್ತಾವನೆ

ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಚರ್ಚೆಗಳು ನಡೆದಿರುತ್ತವೆ. ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸುವ ದೃಷ್ಠಿಯಿಂದ ಸಹಕಾರ ಇಲಾಖೆಯೊಂದಿಗಿನ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದೊಂದಿಗಿನ ಸಭೆಗಳಲ್ಲಿ ಕೂಡ ಸಲಹೆ/ಅಭಿಪ್ರಾಯಗಳನ್ನು ಪಡೆಯಲಾಗಿದೆ. ಸಹಕಾರ ತಜ್ಞರ, ಸನ್ನದು ಲೆಕ್ಕಪರಿಶೋಧಕರ, ಬ್ಯಾಂಕಿಂಗ್ ತಜ್ಞರ, ನ್ಯಾಯವಾದಿಗಳ, ಪ್ರಮುಖ ಸಹಕಾರಿ ಸಂಸ್ಥೆಗಳ ಅಭಿಪ್ರಾಯಗಳನ್ನು ಪಡೆದು ಸೌಹಾರ್ದ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರಚಿಸಲಾಗಿದೆ. ಸಂಯುಕ್ತ ಸಹಕಾರಿಯು ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು – ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಏಕೀಕೃತಗೊಳಿಸಿ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಲಾಗಿದೆ.

ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ಕರಡು ಸಿದ್ಧಪಡಿಸಿ ಸಲಹೆ/ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ಆಗಸ್ಟ್ ಮಾಹೆಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಸಿದ್ಧಪಡಿಸಲಾದ ಅಂತಿಮ ಕರಡನ್ನು ದಿನಾಂಕ: 18 ನವೆಂಬರ್ 2020 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 05ರಲ್ಲಿ ಅನುಮೋದಿಸಿ ನಿರ್ಣಯಿಸಲಾಗಿದೆ. ಹಾಗೂ ದಿನಾಂಕ: 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯನ್ನು ಸಾಮಾನ್ಯ ಸಭೆಯ ವಿಷಯ 19ರಲ್ಲಿ ಅನುಮೋದಿಸಿದ್ದು 01 ಜನವರಿ 2021ರಿಂದ ಅನ್ವಯವಾಗುವಂತೆ ನಿರ್ಣಯಿಸಲಾಗಿದೆ.

## ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ

## ಕಾಯ್ದೆ ಕಲಂ.53(7)(ಹೆಚ್) ರಡಿಯ ಪ್ರಾವಧಾನದಂತೆ

ಸಂಖ್ಯೆ: ಸಂಸ/ಆಸು–01/2020–21 ದಿನಾಂಕ: 01.01.2021

**ಎ. ನಿಧಿಗಳ ಸಂಗ್ರಹ ಮಿತಿ :**

1.ಸಹಕಾರಿಯು ಸ್ವೀಕರಿಸಬಹುದಾದ ಠೇವಣಿ ಮತ್ತು ಸಾಲದ ಮೊತ್ತವು ಸಹಕಾರಿಯ ಪಾವತಿಯಾದ ಶೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳ ಒಟ್ಟು ಮೊತ್ತದ ಐವತ್ತು ಪಟ್ಟು ಮೊತ್ತದಿಂದ ಕ್ರೋಢೀಕೃತ ನಷ್ಟವನ್ನು ಕಳೆದಾಗ ಬರುವ ಮೊತ್ತವನ್ನು ದಾಟುವಂತಿಲ್ಲ. (ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 3(4)(ಸಿ).

**ಬಿ. ದ್ರವ್ಯಾಸ್ತಿ ನಿರ್ವಹಣೆ :**

1. ಸಹಕಾರಿಯ ಸಂಗ್ರಾಹಿತ ಠೇವಣಿಯ ಕನಿಷ್ಠ ಶೇಕಡಾ 20 ಅನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸತಕ್ಕದ್ದು. ಇದರಲ್ಲಿ, ಶಾಸನಬದ್ಧ ಮೀಸಲು ನಿಧಿ ಶೇ.25ನ್ನು ಹೊರತುಪಡಿಸಿ ಹೂಡಿಕೆ ಮಾಡಲಾದ ಉಳಿದೆಲ್ಲ ನಿಧಿಗಳನ್ನು ದ್ರವ್ಯಾಸ್ತಿಯಾಗಿ ಪರಿಗಣಿಸಬಹುದು.

ಪರಂತು, ಸಹಕಾರಿಯ ನೋಂದಣಿಯಾಗಿ ಮೊದಲ ಐದು ವರ್ಷಗಳವರೆಗೆ ಅಥವಾ ಸಹಕಾರಿಯು ಸಂಗ್ರಹಿಸಿದ ಒಟ್ಟೂ ಠೇವಣಿ ಒಂದು ಕೋಟಿ ರೂಪಾಯಿ ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ದ್ರವ್ಯಾಸ್ತಿ ಶೇ.20ರ ಬದಲು ಕನಿಷ್ಠ ಶೆ.10 ರಷ್ಟು ನಿರ್ವಹಿಸತಕ್ಕದ್ದು.

2. ದ್ರವ್ಯಾಸ್ತಿ ಉದ್ದೇಶಕ್ಕೆ ಹಿಂದಿನ ತ್ರೈಮಾಸಿಕದ ಅಂತ್ಯಕ್ಕೆ ಇರುವ ಒಟ್ಟೂ ಠೇವಣಿಯ ಮೊತ್ತವನ್ನು ಪರಿಗಣಿಸಿ ಅಗತ್ಯ ದ್ರವ್ಯಾಸ್ತಿಯನ್ನು ಲೆಕ್ಕಾಚಾರ ಮಾಡಿ ನಿರಂತರ ನಿರ್ವಹಿಸತಕ್ಕದ್ದು.

3. ನಗದನ್ನು ಹೊರತುಪಡಿಸಿ ಉಳಿದ ದ್ರವ್ಯಾಸ್ತಿ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ಅಥವಾ ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18ರ ಪ್ರಾವಧಾನದಡಿ ಪ್ರತ್ಯೇಕವಾಗಿ ತಕ್ಷಣಕ್ಕೆ ನಗದು ಲಭ್ಯತೆಯಾಗುವ ಹೂಡಿಕೆಗಳನ್ನು ಮಾಡತಕ್ಕದ್ದು.

4. ದ್ರವ್ಯಾಸ್ತಿ ಹೂಡಿಕೆಯ ಆಧಾರದಲ್ಲಿ ಯಾವುದೇ ಸಾಲ ಪಡೆಯುವಂತಿಲ್ಲ. ಪರಂತು, ಠೇವಣಿ ಹಿಂಪಾವತಿಗೆ ಅಗತ್ಯ ನಗದು ಲಭ್ಯವಿಲ್ಲದಿದ್ದಲ್ಲಿ ಆರು ತಿಂಗಳ ಅವಧಿ ಮೀರದಂತೆ ದ್ರವ್ಯಾಸ್ತಿ ಹೂಡಿಕೆಯ ಗರಿಷ್ಠ ಶೇ.80ರವರೆಗೆ ಓವರ್ ಡ್ರಾಫ್ಟ್ ಸಾಲವನ್ನು ಪಡೆಯಬಹುದು, ಆದರೆ ಇದನ್ನು ಠೇವಣಿ ಹಿಂಪಾವತಿ ಹೊರತುಪಡಿಸಿ ಉಳಿದ ಕಾರಣಗಳಿಗೆ ಬಳಸತಕ್ಕದ್ದಲ್ಲ. ಆದಾಗ್ಯೂ ಓವರ್ ಡ್ರಾಫ್ಟ್ ಸಾಲವನ್ನು ಆದ್ಯತೆಯ ಮೇರೆಗೆ ಮರುಪಾವತಿ ಮಾಡತಕ್ಕದ್ದು.

5. ಸಹಕಾರಿಯ ಆಡಳಿತ ಮಂಡಲಿಯು ತಮ್ಮ ವ್ಯವಹಾರದ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು, ಶಾಖಾವಾರು ನಗದು ಮಿತಿಯನ್ನು ನಿಗದಿಗೊಳಿಸತಕ್ಕದ್ದು. ಪರಂತು, ಸಹಕಾರಿಯ ಕ್ರೋಢೀಕೃತ ನಗದು ಮಿತಿಯು ದುಡಿಯುವ ಬಂಡವಾಳದ ಶೇಕಡಾ 3ನ್ನು ಮೀರತಕ್ಕದ್ದಲ್ಲ.

6. ಸಹಕಾರಿಯು ಸ್ವೀಕರಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಕಲಂ.18ರಡಿ ಹೂಡಿಕೆ ಅಥವಾ ದ್ರವ್ಯಾಸ್ತಿಯಾಗಿ ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಠೇವಣಿಯ ಶೇ.10ಕ್ಕಿಂತ ಹೆಚ್ಚಿನ ಮೊತ್ತವನ್ನು ಸಹಕಾರಿಯ ಆಸ್ತಿಗಳಲ್ಲಿ ಹೂಡಿಕೆ ಮಾಡುವಂತಿಲ್ಲ ಹಾಗೂ ಪತ್ತೇತರ ಚಟುವಟಿಕೆಗಳಿಗೆ ಬಳಸುವಂತಿಲ್ಲ.

**ಸಿ. ಬಡ್ಡಿದರ, ಠೇವಣಿ ಸ್ವೀಕೃತಿ ಕುರಿತಂತೆ ಮಾರ್ಗದರ್ಶಿಗಳು**

1. ಯಾವುದೇ ಸಹಕಾರಿಯು ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಲು ಅವಕಾಶವಿಲ್ಲ. ಹಾಗು ಠೇವಣಿ ಸಂಗ್ರಹದ ಉದ್ದೇಶಕ್ಕಾಗಿ ಸದಸ್ಯರಲ್ಲಿ ಆಂತರಿಕ ಪ್ರಸಾರ ಹೊರತುಪಡಿಸಿ ಯಾವುದೇ ಸ್ವರೂಪದ ಜಾಹೀರಾತುಗಳನ್ನು ನೀಡತಕ್ಕದ್ದಲ್ಲ.

2. ಯಾವುದೇ ಓರ್ವ ಸದಸ್ಯ, ಓರ್ವ ಸದಸ್ಯನ ಕುಟುಂಬ, ಸದಸ್ಯನ ಹಾಗೂ ಸದಸ್ಯನ ಕುಟುಂಬದ ಮಾಲಿಕತ್ವದಲ್ಲಿರುವ ಸಂಸ್ಥೆಗಳು ಸೇರಿದಂತೆ ಸ್ವೀಕರಿಸಬಹುದಾದ ಒಟ್ಟೂ ಠೇವಣಿಯು, ಸಹಕಾರಿಯ ದುಡಿಯುವ ಬಂಡವಾಳದ ಶೇ.10ನ್ನು ಮೀರುವಂತಿಲ್ಲ.

ಪರಂತು, ಸಹಕಾರಿಯ ನೋಂದಣಿಯಾಗಿ ಮೊದಲ ಐದು ವರ್ಷಗಳವರೆಗೆ ಅಥವಾ ಸಹಕಾರಿಯ ದುಡಿಯುವ ಬಂಡವಾಳ ಒಂದು ಕೋಟಿ ರೂಪಾಯಿ ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಅಂಶ ಅನ್ವಯವಾಗತಕ್ಕದ್ದಲ್ಲ.

– ಸದಸ್ಯನಿಗೆ ಸಂಬಂಧಿಸಿದಂತೆ "ಕುಟುಂಬ" ಎಂದರೆ ಸದಸ್ಯನ/ಳ ಗಂಡ/ಹೆಂಡತಿ, ಮತ್ತು ಅವನ/ಳ ಅವಲಂಬಿತ ಮಕ್ಕಳು, ಅವಲಂಬಿತ ತಂದೆ ಮತ್ತು ತಾಯಿ, ಅವಲಂಬಿತ ಸಹೋದರ/ಸಹೋದರಿಯರನ್ನು ಒಳಗೊಳ್ಳುತ್ತದೆ.

3. ಪಿಗ್ಮಿ ಠೇವಣಿ ಹೊರತುಪಡಿಸಿ, ಯಾವುದೇ ಅವಧಿ ಠೇವಣಿಗಳ ಸಂಗ್ರಹಕ್ಕಾಗಿ ಏಜೆಂಟರುಗಳನ್ನು ನೇಮಕ ಮಾಡತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಿಸಲು ಕಮೀಷನ್/ಇನ್ಸೆಂಟೀವ್/ಗಿಫ್ಟ್/ಇನ್ಯಾವುದೇ ಸ್ವರೂಪದ ಆಮೀಷ ಒಡ್ಡತಕ್ಕದ್ದಲ್ಲ ಹಾಗೂ ವೆಚ್ಚ ಮಾಡತಕ್ಕದ್ದಲ್ಲ. ಪಿಗ್ಮಿ ಸಂಗ್ರಾಹಕರಿಗೆ ನೀಡುವ ಕಮಿಷನ ದರವು ಶೇ.3ನ್ನು ಮೀರತಕ್ಕದ್ದಲ್ಲ.

4. ಯಾವುದೇ ಸಹಕಾರಿಯು 10 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.

5. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಯಾವುದೇ ಅವಧಿ ಠೇವಣಿ ಮರುಪಾವತಿ ಕೋರಿದಲ್ಲಿ, ಸದರಿ ಠೇವಣಿಯ ಮರುಪಾವತಿ ಪೂರ್ವದ ಒಟ್ಟು ಅವಧಿಗೆ ಅನ್ವಯವಾಗುವ ಬಡ್ಡಿದರದಲ್ಲಿ ಗರಿಷ್ಠ ಶೇ.2ನ್ನು ಕಡಿತಗೊಳಿಸಬಹುದು. ಯಾವುದೇ ಕಾರಣಕ್ಕೂ ಠೇವಣಿಯ ಅಸಲನ್ನು ಕಡಿತಗೊಳಿಸತಕ್ಕದ್ದಲ್ಲ. ಪರಂತು, ಮೇಲಿನ ಲೆಕ್ಕಾಚಾರದನುಸಾರ ಪಾವತಿ ಮಾಡಬೇಕಾದ ಬಡ್ಡಿಗಿಂತ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಪಾವತಿಸಿದ್ದಲ್ಲಿ ಅದನ್ನು ಹಿಂಪಡೆಯಬಹುದು. ಆದರೆ ಈ ನಿಯಮ ಪಿಗ್ಮಿ ಠೇವಣಿಗೆ ಅನ್ವಯವಾಗತಕ್ಕದ್ದಲ್ಲ.

**ಡಿ. ನಿವ್ವಳ ಲಾಭ ಗುರುತಿಸುವಿಕೆ.**

1. ಸಹಕಾರಿಯ ನಿವ್ವಳ ಲಾಭವನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡತಕ್ಕದ್ದು –

1) ಠೇವಣಿಗೆ ಪಾವತಿಸಬೇಕಾದ ಬಡ್ಡಿಗೆ ಪೂರ್ಣ ಪ್ರಮಾಣದಲ್ಲಿ ಪ್ರಾವಧಾನ ಮಾಡಿರತಕ್ಕದ್ದು.

2) ಎಲ್ಲಾ ರೀತಿಯ ಸ್ಥಿರಾಸ್ಥಿಗಳಿಗೆ ಆದಾಯ ತೆರಿಗೆ ಕಾಯ್ದೆಯನ್ವಯ ಸವಕಳಿಯನ್ನು ಲೆಕ್ಕಾಚಾರ ಮಾಡಿ ವೆಚ್ಚದ ಬಾಬ್ತಿಗೆ ಸೇರಿಸತಕ್ಕದ್ದು.

3) ಆರ್ಥಿಕ ವರ್ಷದಲ್ಲಿ ವೆಚ್ಚವಾಗಿರುವ ಆದರೆ ಪಾವತಿ ಮಾಡಿರದ ಪ್ರಕರಣಗಳಿಗೆ ಹಾಗೂ ಸದರಿ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವೆಚ್ಚಕ್ಕೆ ಅಗತ್ಯ ಪ್ರಾವಧಾನ ಮಾಡತಕ್ಕದ್ದು.

4) ಬಾಡಿಗೆ, ವೇತನ, ವಿಮೆ ಸೇರಿದಂತೆ ಪಾವತಿಯಾಗಿರದ ಎಲ್ಲ ಆಡಳಿತಾತ್ಮಕ ವೆಚ್ಚಗಳಿಗೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.

5) ಯಾವುದೇ ಶಾಸನಾತ್ಮಕ ಪಾವತಿಗಳಿಗೆ ಸಂಬಂಧಿಸಿದಂತೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.

6) ನೀಡಿರುವ ಸಾಲಗಳಿಗೆ ಸಂಬಂಧಿಸಿದಂತೆ, ಸ್ವೀಕೃತವಾದ ಬಡ್ಡಿಯನ್ನು ಆದಾಯಕ್ಕೆ ಪರಿಗಣಿಸತಕ್ಕದ್ದು.

**ಇ. ಲಾಭಾಂಶ ವಿಲೇವಾರಿ**

1. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 10(2)(xxi) ರಡಿ ನಿಧಿಗಳಿಗೆ ನಿವ್ವಳ ಲಾಭ ವಿಲೇವಾರಿ ಮಾಡುವಾಗ ನೇರ ಪದ್ಧತಿಯಲ್ಲಿಯೇ (Straight Line Method) ಲಾಭ ಹಂಚಿಕೆ ಮಾಡತಕ್ಕದ್ದು. ಇಳಿಕೆ ಪದ್ಧತಿಯನ್ನು (Diminishing Method) ಬಳಸತಕ್ಕದ್ದಲ್ಲ.

2. ನಿವ್ವಳ ಲಾಭದ ಶೇ.2 ರಷ್ಟು ಶಿಕ್ಷಣ ನಿಧಿಯನ್ನು, ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳೊಳಗೆ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು, ಶಿಕ್ಷಣ ನಿಧಿಗೆ ಪಾವತಿ ಮಾಡದೆ ಸದಸ್ಯರಿಗೆ ಲಾಭಾಂಶ (ಡಿವಿಡೆಂಡ್) ಸಂದಾಯ ಮಾಡತಕ್ಕದ್ದಲ್ಲ.

3. ಉಪವಿಧಿ/ಸಾಮಾನ್ಯ ಸಭೆಯಲ್ಲಿ ಇನ್ನಾವುದೇ ನಿಧಿಗಳನ್ನು ರಚಿಸುವ ಸಂದರ್ಭದಲ್ಲಿ, ನಿಧಿಯ ರಚನೆಯ ಉದ್ದೇಶ, ಶೇಕಡಾವಾರು ಹಂಚಿಕೆಯ ಪ್ರಮಾಣ, ನಿಧಿಯ ಅವಧಿ ಹಾಗೂ ನಿಧಿಯ ಬಳಕೆಯ ಬಗ್ಗೆ ಸ್ಪಷ್ಟ ನಿಮಯಮಗಳನ್ನು ರೂಪಿಸಿಕೊಳ್ಳತಕ್ಕದ್ದು.

**ಎಫ್. ಹೂಡಿಕೆ ಕುರಿತ ಮಾರ್ಗಸೂಚಿ :**

1. ಸೌಹಾರ್ದ ಸಹಕಾರಿಗಳು ತಕ್ಷಣದ ಬಳಕೆಗೆ ಅಗತ್ಯವಿರದ ನಿಧಿಗಳನ್ನು ಹಾಗೂ ಮೀಸಲು ನಿಧಿಯನ್ನು ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18 ರಂತೆ, ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳಲ್ಲಿ ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.

2. ಸಹಕಾರಿಗಳು ಹೆಚ್ಚಿನ ಮೊತ್ತವನ್ನು ಒಂದೇ ಬ್ಯಾಂಕ್/ಸರ್ಕಾರಿ ಭದ್ರತೆಯಲ್ಲಿ ಹೂಡಿಕೆ ಮಾಡುವ ಬದಲು ಬೇರೆ ಬೇರೆ ಬ್ಯಾಂಕ್/ಸರ್ಕಾರಿ ಭದ್ರತೆಗಳಲ್ಲಿ ಒಟ್ಟೂ ಹೂಡಿಕೆಯ ಶೇ.20 ಕ್ಕಿಂತ ಕಡಿಮೆ ಮೊತ್ತವನ್ನು ಪ್ರತ್ಯೇಕವಾಗಿ ಹೂಡಿಕೆ ಮಾಡುವುದು ಸೂಕ್ತವಾಗಿರುತ್ತದೆ. ಹೂಡಿಕೆಯ ಬಗ್ಗೆ ಸೂಕ್ತ ನಿಯಮಗಳನ್ನು ಆಡಳಿತ ಮಂಡಳಿಯು ರಚಿಸಿಕೊಂಡು ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಳ್ಳತಕ್ಕದ್ದು.

3. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಸೇರಿದಂತೆ ಅಂತಹ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.

4. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೊ ಕರೆನ್ಸ್/ಯುಲಿಫ್ ಲಿಂಕ್‌ಡ್ ಸೇರಿದಂತೆ, ಅಸಲು ಮತ್ತು ನಿಶ್ಚಿತ ಬಡ್ಡಿಗೆ ಖಾತರಿ ಇಲ್ಲದ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.

5. ಸೌಹಾರ್ದ ಸಹಕಾರಿಗಳ ಹೂಡಿಕೆಯಿಂದ ಆದಾಯ ಅಥವಾ ನಷ್ಟ ಉಂಟಾದಲ್ಲಿ ಅದನ್ನು ಆದಾಯ/ವೆಚ್ಚ ತಃಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

**ಜಿ. ಸಾಲದ ಕುರಿತು ಮಾನದಂಡಗಳು :**

1. ಓರ್ವ ಸದಸ್ಯನಿಗೆ ನೀಡುವ ಸಾಲದ ಒಟ್ಟು ಮೊತ್ತವು ಸಹಕಾರಿಯ ಒಟ್ಟು ದುಡಿಯುವ ಬಂಡವಾಳದ ಶೇಕಡಾ 5 ಅನ್ನು ದಾಟುವಂತಿಲ್ಲ.

2. ಸಹಕಾರಿಯ ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ನೀಡಿದ ಸಾಲದ ಒಟ್ಟು ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10 ಅನ್ನು ದಾಟುವಂತಿಲ್ಲ.

– ‘ಸಂಬಂಧಿ’ ಎಂದರೆ ಗಂಡ/ಹೆಂಡತಿ, ಸಹೋದರ ಮತ್ತು ಸಹೋದರಿ, ಸಹೋದರ/ಸಹೋದರಿಯ ಗಂಡ/ಹೆಂಡತಿ, ತಂದೆ ಮತ್ತು ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು ಇವರನ್ನೆಲ್ಲ ಒಳಗೊಂಡಿರುತ್ತದೆ.

3. ಏಕ ಮಾಲಿಕತ್ವದ ಸಂಸ್ಥೆ ಹೊರತುಪಡಿಸಿ, ಸಹಕಾರಿಯ ನಿರ್ದೇಶಕರು ಪಾಲ್ಗೊಂಡಿರುವ ಸಂಸ್ಥೆಗಳಿಗೆ ಭದ್ರತಾ ಸಾಲವನ್ನು ನೀಡಬಹುದಾಗಿದ್ದು, ಇಂತಹ ಸಾಲದ ಒಟ್ಟೂ ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10ನ್ನು ಮೀರತಕ್ಕದ್ದಲ್ಲ.

4. ಸದಸ್ಯನು ಹೊಂದಿರುವ ಠೇವಣಿ ಅಥವಾ ಬಂಗಾರ ಅಡಮಾನ ಸೇರಿದಂತೆ ತಕ್ಷಣ ನಗದೀಕರಣಗೊಳ್ಳಬಹುದಾದ ಭದ್ರತೆಗಳ ಆಧಾರದ ಮೇಲೆ ನೀಡಿದ ಸಾಲವನ್ನು ಮೇಲಿನ ಮೂರು ಪ್ರಕರಣಗಳಿಗೆ ಪರಿಗಣಿಸತಕ್ಕದ್ದಲ್ಲ.

5. ಯಾವುದೇ ಸದಸ್ಯನು ಪಡೆದ ಅಥವಾ ಜಾಮೀನುದಾರನಾದ ಚಾಲ್ತಿ ಸಾಲ ಸುಸ್ತಿಯಾಗಿದ್ದಲ್ಲಿ ಅದೇ ವ್ಯಕ್ತಿಗೆ ಹೊಸ ಸಾಲ ನೀಡುವಂತಿಲ್ಲ.

6. ಠೇವಣಿ ಆಧಾರದ ಸಾಲ ನೀಡಿಕೆ ಸಂದರ್ಭದಲ್ಲಿ ಸಾಲದ ಮೊತ್ತವು, ಕ್ರೋಢೀಕೃತ ಬಡ್ಡಿಯನ್ನು ಸೇರಿದಂತೆ ಠೇವಣಿ ಮೊತ್ತದ (ಸರೆಂಡರ್ ವ್ಯಾಲ್ಯೂ) ಶೇಕಡಾ 90ನ್ನು ಮೀರುವಂತಿಲ್ಲ. ಯಾವುದೇ ಹಂತದಲ್ಲಿ ಸಾಲ ಮತ್ತು ಸಾಲದ ಬಡ್ಡಿಯ ಮೊತ್ತವು ಠೇವಣಿ ಮೊತ್ತವನ್ನು (ಸರೆಂಡರ್ ವ್ಯಾಲ್ಯೂ) ಮೀರುತ್ತಿದ್ದಲ್ಲಿ, ತಕ್ಷಣ ಅಂತಹ ಸಾಲವನ್ನು ಅಗತ್ಯ ಪ್ರಕಿಯೆ ಮೂಲಕ ಠೇವಣಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುಕ್ತಾಯಗೊಳಿಸತಕ್ಕದ್ದು.

7. ಯಾವುದೇ ಸದಸ್ಯನಿಗೆ ನೀಡುವ ಆಧಾರ ರಹಿತ ಸಾಲದ ಗರಿಷ್ಠ ಮೊತ್ತವು, ಸಹಕಾರಿಯ ಸ್ವಂತ ಬಂಡವಾಳ ಐವತ್ತು ಲಕ್ಷಕ್ಕಿಂತ ಕಡಿಮೆ

ಇದ್ದಲ್ಲಿ ರೂ.50,000/– ಮೀರತಕ್ಕದ್ದಲ್ಲ ಹಾಗೂ ಸಹಕಾರಿಯ ಸ್ವಂತ ಬಂಡವಾಳ ಐವತ್ತು ಲಕ್ಷ ಮೀರಿದ್ದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇ.1 ಅಥವಾ ರೂ.3,00,000/– ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೀರುವಂತಿಲ್ಲ.

ಪರಂತು, ಸಂಪೂರ್ಣವಾಗಿ ವೇತನ ಆಧಾರಿತ ಸಾಲ ನೀಡುತ್ತಿರುವ ನೌಕರರ ಸೌಹಾರ್ದ ಸಹಕಾರಿಗಳಿಗೆ ಈ ನಿಯಮ ಅನ್ವಯವಾಗತಕ್ಕದ್ದಲ್ಲ.

8. ಆಧಾರ ರಹಿತ ಸಾಲ ನೀಡುವಾಗ ಕನಿಷ್ಠ ಇಬ್ಬರ ಜಾಮೀನಿನೊಂದಿಗೆ ಸಾಲ ನೀಡತಕ್ಕದ್ದು, ಯಾವುದೇ ಸದಸ್ಯನು ಮೂರಕ್ಕಿಂತ ಹೆಚ್ಚಿನ ಸದಸ್ಯರಿಗೆ ಜಾಮೀನು ನೀಡುವಂತಿಲ್ಲ.

**ಹೆಚ್. ಆರ್ಥಿಕ ಸಂಕಷ್ಟ ಎಂದು ಪರಿಗಣನೆ :**

1. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇಕಡಾ 50 ಕ್ಕಿಂತ ಹೆಚ್ಚಾದಲ್ಲಿ.

ವಿವರಣೆ : 'ಸ್ವಂತ ಬಂಡವಾಳ' ಎಂದರೆ ಪಾವತಿಯಾದ ಒಟ್ಟೂ ಷೇರು ಬಂಡವಾಳ ಹಾಗೂ ಎಲ್ಲಾ ಮೀಸಲು ನಿಧಿಗಳ ಮೊತ್ತದಲ್ಲಿ ಸಂಚಿತ ನಷ್ಟವನ್ನು ಕಳೆದಾಗ ಬರುವ ಮೊತ್ತ.

2. ಸಹಕಾರಿಯ ಒಟ್ಟು ಠೇವಣಿಗಳ ಶೇಕಡಾ 5 ಕ್ಕಿಂತ ಕಡಿಮೆ ದ್ರವ್ಯಾಸ್ತಿ ಇರುವ ಸಹಕಾರಿ.

3. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಒಟ್ಟು ಸಾಲಕ್ಕೆ ಶೇಕಡಾ 20 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ಆರ್ಥಿಕವಾಗಿ ಸಬಲರಾಗುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಐ. ತೀವ್ರ ನಿಗಾ ಇರಿಸಲಾಗುವ ಸಹಕಾರಿಗಳು :**

1. ಸಹಕಾರಿಯ ನೋಂದಣಿಯ ನಂತರದ ಮೂರು ಸಹಕಾರ ವರ್ಷಗಳ ಅವಧಿಯನ್ನು ಹೊರತುಪಡಿಸಿ, ಸತತ ಮೂರು ವರ್ಷಗಳು ನಷ್ಟದಲ್ಲಿರುವ ಸಹಕಾರಿ

2. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳಕ್ಕಿಂತ ಹೆಚ್ಚಾದಲ್ಲಿ.

3. ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಯು ಸತತ ಮೂರು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.

4. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 40 ದಾಟಿದಲ್ಲಿ.

ಅಂತಹ ಸಹಕಾರಿಗಳನ್ನು ತೀವ್ರ ನಿಗಾದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ತೀವ್ರ ನಿಗಾದಿಂದ ಹೊರಬರುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

– ನೂತನವಾಗಿ ನೋಂದಾಯಿತವಾದ ಸಹಕಾರಿಗಳ ಸಂದರ್ಭದಲ್ಲಿ ಮೊದಲ ಎರಡು ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಹೆಚ್ ಹಾಗೂ ಐ ಕಂಡಿಕೆಗಳು ಅನ್ವಯವಾಗತಕ್ಕದ್ದಲ್ಲ.

**ಜೆ. ದುರ್ಬಲ ಸಹಕಾರಿ**

1. ಅ. ನೂತನ ಸಹಕಾರಿಯು ಐದನೇ ಆರ್ಥಿಕ ವರ್ಷಾಂತ್ಯಕ್ಕೆ ಲಾಭ ಗಳಿಸದಿದ್ದಲ್ಲಿ.

ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಪರಿವರ್ತನೆಯ ನಂತರ ಸತತ ಮೂರು ವರ್ಷ ನಷ್ಟವನ್ನು ಅನುಭವಿಸಿದಲ್ಲಿ.

ಇ. ತೀವ್ರ ನಿಗಾದಲ್ಲಿರುವ ಸಹಕಾರಿಯು ಸತತ ಎರಡು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.

ಈ. ಸಹಕಾರಿಯ ಸುಸ್ತಿ ಸಾಲದ ಪ್ರಮಾಣವು ಶೇಕಡಾ 60 ದಾಟಿದಲ್ಲಿ.

– ಅಂತಹ ಸಹಕಾರಿಗಳನ್ನು ದುರ್ಬಲದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ದುರ್ಬಲ ಸಹಕಾರಿಗಳು ದುರ್ಬಲತೆಯಿಂದ ಹೊರಬರಲು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಕೆ. ಇತರೆ ಅಂಶಗಳು :**

1. ಸಹಕಾರಿಯು ಲಾಭ ಗಳಿಸಿದಾಗ ಸದಸ್ಯರಿಗೆ ನೀಡುವ ಲಾಭಾಂಶವು, ಶೇಕಡಾ 25ನ್ನು ಮೀರುವಂತಿಲ್ಲ.

2. ಸಹಕಾರಿಯ ನೋಂದಣಿಯಾಗಿ ಮೊದಲ ಮೂರು ಸಹಕಾರ ವರ್ಷಗಳನ್ನು ಹೊರತುಪಡಿಸಿ ನಂತರದ ಸಹಕಾರ ವರ್ಷಗಳಲ್ಲಿ ಸಹಕಾರಿಯ ಒಟ್ಟು ಆಡಳಿತಾತ್ಮಕ ವೆಚ್ಚವು ದುಡಿಯುವ ಬಂಡವಾಳದ ಶೇ.3 ಅನ್ನು ದಾಟುವಂತಿಲ್ಲ.

3. ಸಹಕಾರಿಯು ಯಾವುದೇ ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ಸಹಕಾರಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭದ ಶೇ.10ನ್ನು ಮೀರತಕ್ಕದ್ದಲ್ಲ. ಪರಂತು, ಸಹಕಾರಿಯ ಲಾಭ ವಿಂಗಡಣೆಗಾಗಿ ದೇಣಿಗೆ ಉದ್ದೇಶಕ್ಕಾಗಿ ರಚಿಸಲ್ಪಟ್ಟ ನಿಧಿಯಿಂದ ಮಾಡುವ ಪಾವತಿಗಳಿಗೆ ಇದರಿಂದ ವಿನಾಯಿತಿ ಇರುತ್ತದೆ.

4. ಸಹಕಾರಿಯು ಯಾವುದೇ ರಾಜಕೀಯ ಪಕ್ಷಕ್ಕೆ, ಮತೀಯ ನಂಬಿಕೆಯ ಸಂಸ್ಥೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಗದು ಅಥವಾ ವಸ್ತುಗಳ ರೂಪದಲ್ಲಿ ಯಾವುದೇ ವಂತಿಗೆ/ದೇಣಿಗೆಯನ್ನು ನೀಡತಕ್ಕದ್ದಲ್ಲ.

5. ಸಹಕಾರಿಗೆ ಸ್ಥಿರಾಸ್ತಿ(ನಿವೇಶನ/ಕಟ್ಟಡ) ಖರೀದಿಸುವುದಿದ್ದಲ್ಲಿ/ನಿರ್ಮಾಣ ಮಾಡುವುದಾದಲ್ಲಿ ಅದಕ್ಕಾಗಿ ಸಹಕಾರಿಯ ಕಟ್ಟಡ ನಿಧಿಯನ್ನು ಉಪಯೋಗಿಸಬೇಕು. ಅಗತ್ಯವಿದ್ದಲ್ಲಿ, ಮೀಸಲು ನಿಧಿಯ ಶೇಕಡಾ 80 ಅನ್ನು ಮೀರದ ಮೊತ್ತವನ್ನು ಸಾಮಾನ್ಯ ಸಭೆಯ ಅನುಮೋದನೆಯೊಡನೆ ಬಳಸಬಹುದು. ಈ ರೀತಿ ಬಳಸಿದಲ್ಲಿ, ಸದರಿ ಮೊತ್ತವನ್ನು ಮುಂದಿನ ವರ್ಷಗಳ ಲಾಭದಿಂದ ಭರ್ತಿ ಮಾಡತಕ್ಕದ್ದು. ಸಾಮಾನ್ಯ ಸಭೆಯಲ್ಲಿ, ಪ್ರತಿವರ್ಷ ನಿವ್ವಳ ಲಾಭದಲ್ಲಿ ಲಾಭಾಂಶ ವಿಂಗಡಣೆಗೂ ಪೂರ್ವದಲ್ಲಿ ಮೀಸಲು ನಿಧಿಗೆ ವರ್ಗಾಯಿಸಬೇಕಾದ ಮೊತ್ತದ ಕುರಿತು ಸ್ಪಷ್ಟವಾಗಿ ನಿರ್ಣಯಿಸಬೇಕು.

6. ಸೌಹಾರ್ದ ಸಹಕಾರಿಗಳು, ಪ್ರತೀ ಸದಸ್ಯರ ಸದಸ್ಯತ್ವದ ಅರ್ಜಿಯೊಂದಿಗೆ ಕೆವೈಸಿ ದಾಖಲಾತಿಗಳನ್ನು ಅಂದರೆ ವಿಳಾಸದ ದಾಖಲೆ, ಇತ್ತೀಚಿನ ಫೋಟೋ, ಫೋಟೋ ಇರುವ ಗುರುತಿನ ಚೀಟಿಯ ಪ್ರತಿಯನ್ನು ಪಡೆಯತಕ್ಕದ್ದು ಹಾಗೂ ನಿಯಮಿತವಾಗಿ ಇಂದೀಕರಿಸಿಕೊಳ್ಳತಕ್ಕದ್ದು. ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಹೊಂದಿರತಕ್ಕದ್ದು.

– ಈ ಸುತ್ತೋಲೆಗೆ ಸಂಬಂಧಪಟ್ಟಂತೆ, ಯಾವುದೇ ವರ್ಗದ ಸಹಕಾರಿಗಳಿಗೆ ಅಥವಾ ಯಾವುದೇ ಸಹಕಾರಿಗೆ ಸಂಬಂಧಿಸಿದಂತೆ, ಲಿಖಿತದಲ್ಲಿ ಸೂಕ್ತ ಕಾರಣವನ್ನು ದಾಖಲಿಸಿ, ಸುತ್ತೋಲೆಯ ಯಾವುದೇ ಅಂಶಗಳಿಂದ ವಿನಾಯಿತಿ ನೀಡಲು ಅಥವಾ ಅಂಶಗಳನ್ನು ಮಾರ್ಪಡಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

– ಈ ಸುತ್ತೋಲೆಯು ಪತ್ತಿನ ಚಟುವಟಿಕೆ ನಡೆಸುತ್ತಿರುವ ಬ್ಯಾಂಕೇತರ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತದೆ. ಪತ್ತಿನ ಚಟುವಟಿಕೆಗಳೊಂದಿಗೆ ಇನ್ನಿತರ ಪತ್ತೇತರ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳ ಸಂದರ್ಭದಲ್ಲಿ ಪತ್ತಿನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಸುತ್ತೋಲೆಯು ಅನ್ವಯವಾಗುತ್ತದೆ. ಪರಂತು, ಪತ್ತಿನ ಹಾಗೂ ಪತ್ತೇತರ ಚಟುವಟಿಕೆಗಳ ಲೆಕ್ಕಗಳನ್ನು/ಹಣಕಾಸು ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸತಕ್ಕದ್ದು.

– ಸಂಯುಕ್ತ ಸಹಕಾರಿಯಿಂದ ನೀಡಿದ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಈ ಮಾನದಂಡಗಳನ್ನು ಪಾಲಿಸದಿದ್ದಲ್ಲಿ ಅಂತಹ ಸಹಕಾರಿಗಳಿಗೆ ಮೊದಲನೇ ಹಂತದಲ್ಲಿ ಸಂಯುಕ್ತ ಸಹಕಾರಿಯಿಂದ ಅಗತ್ಯ ನಿರ್ದೇಶನ ನೀಡತಕ್ಕದ್ದು ಹಾಗೂ ನಿರ್ದೇಶನವನ್ನು ಪಾಲಿಸದಿದ್ದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನುಸಾರ ಕಾನೂನು ಕ್ರಮ ಅನ್ವಯವಾಗತಕ್ಕದ್ದು.

– ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು – ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಈ ಸುತ್ತೋಲೆಯಲ್ಲಿ ಸೇರ್ಪಡೆ ಮಾಡಲಾಗಿರುವುದರಿಂದ, ಸದರಿ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.

ಈ ಆರ್ಥಿಕ ಸಬಲತೆಯ ಮಾನದಂಡಗಳನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : 01.01.2021 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/–

**(ಶರಣಗೌಡ ಜಿ. ಪಾಟೀಲ)**

**ವ್ಯವಸ್ಥಾಪಕ ನಿರ್ದೇಶಕ**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಶಾಸನಬದ್ಧ ಸಹಕಾರ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080-23378375-80 Email : souharda@souharda.coop

**ಅನುಬಂಧ – 7.3ಕ್ಯೂ**

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿಯಾಗಿದ್ದು, ದಿನಾಂಕ:11.02.2013ರಿಂದ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ಕಲಂ 23ಎರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ನೀಡಿರುವ ಸುತ್ತೋಲೆ ಸಂಖ್ಯೆ:ಕರಾಸೌಸಂಸನಿ/ಸುತ್ತೋಲೆ/ಆ–5/2013–14, ದಿನಾಂಕ:28.06.2013 ಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡಿ ಪರಿಷ್ಕೃತ ಮಾನದಂಡಗಳನ್ನು ಈ ಕೆಳಗಿನಂತೆ ರೂಪಿಸಲಾಗಿದೆ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯ ಕರಡು ಸಿದ್ಧಪಡಿಸಿ ಸಲಹೆ/ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ಆಗಸ್ಟ್ ಮಾಹೆಯ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಸಿದ್ಧಪಡಿಸಲಾದ ಅಂತಿಮ ಕರಡನ್ನು ದಿನಾಂಕ: 18 ನವೆಂಬರ್ 2020 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 05ರಲ್ಲಿ ಅನುಮೋದಿಸಿ ನಿರ್ಣಯಿಸಲಾಗಿದೆ. ಹಾಗೂ ದಿನಾಂಕ: 19 ಡಿಸೆಂಬರ್ 2020ರಂದು ನಡೆದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯ 19ರಲ್ಲಿ ಅನುಮೋದಿಸಿದ್ದು 01 ಜನವರಿ 2021ರಿಂದ ಅನ್ವಯವಾಗುವಂತೆ ನಿರ್ಣಯಿಸಲಾಗಿದೆ.

**ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತ ಸುತ್ತೋಲೆ**

ಕ.ಸೌ.ಸ. ಅಧಿನಿಯಮ, 1997ರ ಕಲಂ 23(ಎ) ಮತ್ತು 53 (7) (ಎ) ಹಾಗೂ (ಎಚ್) ಅಡಿ

ಸಂಖ್ಯೆ : ಸಂಸ/ಆಸು–02/2020–21 ದಿನಾಂಕ: 01.01.2021

**ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು**

1. ಹಿಂದಿನ ಆರ್ಥಿಕ ವರ್ಷದಲ್ಲಿ ಲಾಭ ಗಳಿಸಿದ್ದು, ಪ್ರಸಕ್ತ ಸಾಲಿನ ಸಹಕಾರಿಯ ವ್ಯವಹಾರವು ಹಿಂದಿನ ವರ್ಷದ ವ್ಯವಹಾರಕ್ಕಿಂತ ಹೆಚ್ಚಿರಬೇಕು.
2. ಈಗಾಗಲೇ ಶಾಖೆಗಳಿದ್ದಲ್ಲಿ ಶೇ.20ಕ್ಕಿಂತ ಹೆಚ್ಚು ಶಾಖೆಗಳು ನಷ್ಟದಲ್ಲಿರಬಾರದು.
3. ಸುಸ್ತಿ ಸಾಲದ ಪ್ರಮಾಣವು ನೀಡಿದ ಸಾಲ ಮತ್ತು ಮುಂಗಡಗಳ ಶೇ.15ನ್ನು ಅಥವಾ ಸ್ವಂತ ಬಂಡವಾಳದ ಶೇ.50 ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮೀರತಕ್ಕದ್ದಲ್ಲ.
4. ಪ್ರಸ್ತುತ ಇರುವ ಲಾಭವು ಪ್ರಸ್ತಾವಿತ ಶಾಖೆಯ ವೆಚ್ಚವನ್ನು ಭರಿಸಲು ಶಕ್ತವಾಗಿರಬೇಕು.
5. ಯಾವುದೇ ವಿಚಾರಣೆ ಬಾಕಿ ಇರಬಾರದು.
6. ಶಾಸನಬದ್ಧ ಕರ್ತವ್ಯಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ/ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
7. ಶಾಖೆ ತೆರೆಯುವ ಪ್ರದೇಶದಲ್ಲಿ ಸಹಕಾರಿಯು ಕನಿಷ್ಠ 50 ಸದಸ್ಯರನ್ನು ಹೊಂದಿರತಕ್ಕದ್ದು.

8. ಸಂಯುಕ್ತ ಸಹಕಾರಿ ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳು ಸುತ್ತೋಲೆಯ ದ್ರವ್ಯಾಸ್ತಿ ನಿರ್ವಹಣೆ ಮತ್ತು ಸಾಲದ ಕುರಿತ ಮಾನದಂಡಗಳನ್ನು ಪಾಲಿಸಿರತಕ್ಕದ್ದು.

9. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ ಈ ಕೆಳಗಿನಂತಿರತಕ್ಕದ್ದು.

1) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.20 ಲಕ್ಷ,

2) ಮಹಾನಗರ ಪಾಲಿಕೆ ಹೊರತುಪಡಿಸಿದ ಜಿಲ್ಲಾ ಕೇಂದ್ರಗಳಿಗೆ ರೂ.10 ಲಕ್ಷ,

3) ಇತರೆ ಕೇಂದ್ರಗಳಿಗೆ ರೂ.5 ಲಕ್ಷ

– ಸಹಕಾರಿಯ ಈಗಾಗಲೆ ಇರುವ ಶಾಖೆಗಳಿಗೆ, ಈ ಮೇಲ್ಕಂಡಂತೆ ಸ್ವಂತ ಬಂಡವಾಳ ಹಂಚಿಕೆ ಮಾಡಿದ ನಂತರದಲ್ಲಿ ಉಳಿದ ಸ್ವಂತ ಬಂಡವಾಳವನ್ನು ಉದ್ದೇಶಿತ ಶಾಖೆಗಳಿಗೆ ಲೆಕ್ಕಾಚಾರ ಮಾಡುವುದು.

10. ಮೊದಲ ಐದು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಹಕಾರಿಯ ಲಾಭವನ್ನು ಪರಿಗಣಿಸತಕ್ಕದ್ದಲ್ಲ.

11. ಆರರಿಂದ ಇಪ್ಪತ್ತೈದರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ, ಎಲ್ಲ ನಿಬಂಧನೆಗಳು ಯಥಾವತ್ತಾಗಿ ಅನ್ವಯವಾಗತಕ್ಕದ್ದು.

12. ಇಪ್ಪತ್ತಾರರಿಂದ ಐವತ್ತರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಎಲ್ಲ ಮಾನದಂಡಗಳೊಂದಿಗೆ, ಸಂಯುಕ್ತ ಸಹಕಾರಿಯು ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳನ್ನು ಪೂರ್ಣವಾಗಿ ಪಾಲಿಸಿರತಕ್ಕದ್ದು.

13. ಇ ಸ್ಟಾಂಪಿಂಗ್ ಸೇರಿದಂತೆ ಯಾವುದೇ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಗಳಿಗೆ ಅನುಮತಿ ನೀಡುವಾಗ ಪ್ರಸ್ತಾವಿತ ಸೇವಾ/ಪತ್ತೇತರ ಚಟುವಟಿಕೆ ಹೊರತುಪಡಿಸಿ, ಪತ್ತಿನ ಚಟುವಟಿಕೆ ಸೇರಿದಂತೆ ಸಹಕಾರಿಯ ಇನ್ನಿತರ ಚಟುವಟಿಕೆ ನಡೆಸದಿರುವ ನಿಬಂಧನೆಯೊಂದಿಗೆ ಈ ಮಾನದಂಡಗಳಿಂದ ವಿನಾಯತಿ ಇರತಕ್ಕದ್ದು.

14. ಒಂದು ಸಹಕಾರಿಗೆ ಯಾವುದೇ ಸಹಕಾರ ವರ್ಷದಲ್ಲಿ ಐದಕ್ಕಿಂತ ಹೆಚ್ಚು ಶಾಖೆಗೆ ಅನುಮತಿ ನೀಡತಕ್ಕದ್ದಲ್ಲ ಹಾಗೂ ಸಹಕಾರಿಯ ಒಟ್ಟೂ ಶಾಖೆಗಳ ಸಂಖ್ಯೆಯು ಐವತ್ತನ್ನು ಮೀರತಕ್ಕದ್ದಲ್ಲ.

15. ಯಾವುದೇ ಪ್ರದೇಶದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಅಥವಾ ಸೌಹಾರ್ದ ಸಹಕಾರಿಯ ಶಾಖೆಗಳು ಇಲ್ಲದಿದ್ದಲ್ಲಿ, ಅಂತಹ ಪ್ರದೇಶಗಳಿಗೆ ಸಂಬಂಧಿಸಿದಂತೆ ಮೇಲಿನ ಯಾವುದೇ ನಿಬಂಧನೆಗಳಿಂದ ವಿನಾಯಿತಿ ನೀಡಿ ಶಾಖೆ ತೆರೆಯಲು ಅನುಮತಿ ನೀಡುವ ಅಧಿಕಾರ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಕ್ಷಮವಾಗಿರುತ್ತದೆ.

– 'ಪ್ರದೇಶ' ಎಂದರೆ ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿ ವ್ಯಾಪ್ತಿ.

16. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾರ್ಯಾರಂಭ ಮಾಡದ ಶಾಖೆಗಳ ಅನುಮತಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

17. ಶಾಖಾ ವಿಲೀನ, ಸ್ಥಳಾಂತರ ಹಾಗೂ ಮುಚ್ಚುವಿಕೆಯ ಸಂದರ್ಭದಲ್ಲಿ

1. ಶಾಖಾ ವಿಲೀನ, ಸ್ಥಳಾಂತರ ಹಾಗೂ ಮುಚ್ಚುವಿಕೆಯ ಸ್ಥಿತಿ ನಿರ್ಮಾಣವಾದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸತಕ್ಕದ್ದು ಹಾಗೂ ಸದರಿ ಶಾಖೆಯಲ್ಲಿ ವ್ಯವಹಾರ ಹೊಂದಿರುವವರಿಗೆ ಯಾವ ಶಾಖೆಯಿಂದ ಸೇವೆ ಒದಗಿಸಲಾಗುವುದು ಎನ್ನುವುದನ್ನು ಸ್ಪಷ್ಟವಾಗಿ ನಿರ್ಣಯದಲ್ಲಿ ದಾಖಲಿಸತಕ್ಕದ್ದು.

2. ಶಾಖೆಯಲ್ಲಿ ವ್ಯವಹಾರ ಹೊಂದಿರುವ ಎಲ್ಲಾ ಸದಸ್ಯರಿಗೆ ಲಿಖಿತದಲ್ಲಿ ಪ್ರಸಕ್ತ ಶಾಖೆಯ ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ಮಾಹಿತಿ ನೀಡತಕ್ಕದ್ದು ಹಾಗೂ ಮುಂದಿನ ವ್ಯವಹಾರ ನಿರ್ವಹಿಸಬೇಕಾದ ಶಾಖೆಯ ವಿವರ ಒದಗಿಸತಕ್ಕದ್ದು.

3. ಶಾಖೆಯ ಠೇವಣಿದಾರ ಬೇರೊಂದು ಶಾಖೆಯಿಂದ ವ್ಯವಹಾರ ನಡೆಸಲು ಒಪ್ಪದಿದ್ದಲ್ಲಿ ಅವನ ಠೇವಣಿಯನ್ನು ಯಾವುದೇ ಕಡಿತ ಮಾಡದೆ ಹಿಂತಿರುಗಿಸತಕ್ಕದ್ದು.

4. ಶಾಖೆ ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ಮಾಹಿತಿಯನ್ನು ಆಡಳಿತ ಮಂಡಳಿ ಸಭೆಯ ನಿರ್ಣಯದೊಂದಿಗೆ ಸಂಯುಕ್ತ ಸಹಕಾರಿಗೆ, ವಿಲೀನ/ಸ್ಥಳಾಂತರ/ಮುಚ್ಚುವಿಕೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು ಹಾಗೂ ಸಹಕಾರಿಯ ತಕ್ಷಣದ/ಮುಂಬರುವ ಸಾಮಾನ್ಯ ಸಭೆಗೆ ಮಾಹಿತಿ ನೀಡತಕ್ಕದ್ದು.

ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು

1. ಶಾಖೆ ತೆರೆಯುಲು ಉದ್ದೇಶಿಸಿರುವ ಸ್ಥಳದ ವಿವರ.
2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ, ಪ್ರಸ್ತಾವಿತ ಶಾಖೆಯ ಪ್ರದೇಶದಲ್ಲಿನ ಸದಸ್ಯರ ಸಂಖ್ಯೆ.
3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ಹಾನಿ ತಃಖ್ತೆ ಮತ್ತು ಜಮಾ–ಖರ್ಚು ತಃಖ್ತೆ (ಶೆಡ್ಯೂಲುಗಳ ಸಹಿತ).
4. ಹಿಂದಿನ ಎರಡು ವರ್ಷಗಳಲ್ಲಿ ಸದಸ್ಯರಿಗೆ ಹಂಚಿಕೆ ಮಾಡಿರುವ ಲಾಭಾಂಶ.
5. ಹಿಂದಿನ ಎರಡು ವರ್ಷಗಳ ಸುಸ್ತಿ ಸಾಲದ ಪ್ರಮಾಣ.
6. ಸ್ವಂತ ಬಂಡವಾಳ (ಪಾವತಿಯಾದ ಶೇರು ಬಂಡವಾಳ + ಎಲ್ಲಾ ರೀತಿಯ ಮೀಸಲು ನಿಧಿಗಳು – ಕೂಡಿಬಿದ್ದ ನಷ್ಟಗಳು).
7. ಯಾವುದೇ ರೀತಿಯ ವಿಚಾರಣೆ ನಡೆಯುತ್ತಿದ್ದಲ್ಲಿ ಆದೇಶ ಪತ್ರ, ನಡೆದಿದ್ದಲ್ಲಿ ವಿಚಾರಣ ವರದಿ.
8. ಈಗಿರುವ ಒಟ್ಟು ಶಾಖೆಗಳ ವಿವರ – ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ, ಠೇವಣಿ, ಸಾಲ, ಪತ್ತೇತರ ಚಟುವಟಿಕೆಯ ವಿವರ.
9. ಪ್ರಸ್ತಾವಿತ ಶಾಖೆಯನ್ನು ಆರಂಭಿಸಲು ಅಗತ್ಯ ಬಂಡವಾಳ – ಕಛೇರಿ ಬಾಡಿಗೆ ಠೇವಣಿ, ಪೀಠೋಪಕರಣಗಳು, ಯಂತ್ರೋಪಕರಣಗಳು ಇತ್ಯಾದಿ.
10. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷಗಳ ಅಂದಾಜು ಖರ್ಚು ವೆಚ್ಚಗಳು – ಸಿಬ್ಬಂದಿ ವೆಚ್ಚ, ಬಾಡಿಗೆ, ವಿದ್ಯುತ್, ದೂರವಾಣಿ, ಸ್ಟೇಷನರಿ ಇತ್ಯಾದಿ.
11. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷದ ಅಂದಾಜು ವ್ಯವಹಾರ.
12. ಪ್ರಸ್ತಾವಿತ ಶಾಖೆಯ ಸ್ಥಾನದಿಂದ ಈಗಿರುವ ಹತ್ತಿರದ ಶಾಖೆಗೆ ಇರುವ ದೂರ.
13. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಬೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.
14. ಪತ್ತೇತರ/ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಯ ಸಂದರ್ಭದಲ್ಲಿ, ಪ್ರಸ್ತಾವಿತ ಸೇವಾ ಚಟುವಟಿಕೆ ಹೊರತುಪಡಿಸಿ ಇನ್ನಿತರ ಚಟುವಟಿಕೆ ನಡೆಸದಿರುವ ಕುರಿತು ಆಡಳಿತ ಮಂಡಳಿ ನಿರ್ಣಯದೊಂದಿಗೆ ದೃಢೀಕರಣ ಪತ್ರ.

ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : 01.01.2021 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/–

**(ಶರಣಗೌಡ ಜಿ. ಪಾಟೀಲ)**

**ವ್ಯವಸ್ಥಾಪಕ ನಿರ್ದೇಶಕ**

## ಅನುಬಂಧ – 7.3ಆರ್

### ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರ ಮತ್ತು ಕರ್ತವ್ಯಗಳು :

**ಸೌಹಾರ್ದ ಸಹಕಾರಿ ಕಾಯ್ದೆ ಕಲಂ.61(2) ರಂತೆ**

(ಎ) ಸಂಯುಕ್ತ ಸಹಕಾರಿಯ ದೈನಂದಿನ ವ್ಯವಹಾರಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು;

(ಬಿ) ಸಹಕಾರಿಯ ಪರವಾಗಿ ದಾವೆ ಹೂಡುವ ಮತ್ತು ಸಹಕಾರಿಯ ಪರವಾಗಿ ದಾವೆಗೆ ಗುರಿಯಾಗುವ ವ್ಯಕ್ತಿಯಾಗಿರತಕ್ಕದ್ದು;

(ಸಿ) ಚೆಕ್ಕುಗಳಿಗೆ ಮತ್ತು ಇತರ ವರ್ಗಾವಣೀಯ ಪತ್ರಗಳಿಗೆ ಹಿಂಬರಹ ಮಾಡಲು ಸಹಿ ಮಾಡಲು ಅವುಗಳನ್ನು ವರ್ಗಾಯಿಸಲು ಮತ್ತು ಸಂಯುಕ್ತ ಸಹಕಾರಿಯ ಬ್ಯಾಂಕ್ ಲೆಕ್ಕಗಳನ್ನು ಪ್ರವರ್ತಿಸಲು ಸಂಯುಕ್ತ ಸಹಕಾರಿಯ ಪರವಾಗಿ ಅಧಿಕಾರಗಳನ್ನು ಹೊಂದಿರತಕ್ಕದ್ದು;

(ಡಿ) ನೌಕರರ ನೇಮಕಾತಿಗೆ ಹಾಗೂ ನೌಕರರ ಶಿಸ್ತು, ಕಾರ್ಯನಿರ್ವಹಣೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಜವಾಬ್ದಾರನಾಗಿರತಕ್ಕದ್ದು;

(ಇ) ಸಂಯುಕ್ತ ಸಹಕಾರಿಯ ಪರವಾಗಿ ಒಪ್ಪಂದ ಅಥವಾ ಕರಾರು ಮಾಡಿಕೊಳ್ಳುವ ವ್ಯಕ್ತಿಯಾಗಿರತಕ್ಕದ್ದು;

(ಎಫ್) ಸಂಯುಕ್ತ ಸಹಕಾರಿಯ ದಾಖಲೆ ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವ ವ್ಯವಸ್ಥೆ ಮಾಡತಕ್ಕದ್ದು;

(ಜಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಮಂಡಲಿಯ ಅನುಮೋದನೆಗಾಗಿ ಕರಡುವಾರ್ಷಿಕ ವರದಿ ಮತ್ತು ಆರ್ಥಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು;

(ಹೆಚ್) ಅಧ್ಯಕ್ಷ ಅಥವಾ ಸಭಾಪತಿಯೊಂದಿಗೆ ಸಮಾಲೋಚನೆ ನಡೆಸಿ, ಉಪವಿಧಿಗಳ ಅನುಸಾರ ಮಂಡಲಿಗಳ ಸಭೆಗಳನ್ನು ಮತ್ತು ಸಾಮಾನ್ಯ ನಿಕಾಯದ ಸಭೆಗಳನ್ನು ನಡೆಸತಕ್ಕದ್ದು ಮತ್ತೆ ಅದರ ವ್ಯವಹರಣೆಗಳನ್ನು ದಾಖಲು ಮಾಡತಕ್ಕದ್ದು;

(ಐ) ಕಾರ್ಯನೀತಿಗಳು ಮತ್ತು ಯೋಜನೆಗಳನ್ನು ರೂಪಿಸುವುದಕ್ಕೆ ಮಂಡಲಿಗೆ ಸಹಾಯ ಮಾಡತಕ್ಕದ್ದು;

(ಜೆ) ಮಂಡಲಿಗೆ ಜವಾಬ್ದಾರನಾಗಿರತಕ್ಕದ್ದು;

(ಕೆ)ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೆ ಅಗತ್ಯವಾದ ಮಾಹಿತಿಯನ್ನು ಮಂಡಲಿಗೆ ಒದಗಿಸತಕ್ಕದ್ದು;

1[(ಎಲ್) ಸಂಯುಕ್ತ ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಆರ್ಥಿಕ ತ:ಖ್ತೆಗಳನ್ನು, ಷೆಡ್ಯೂಲುಗಳನ್ನು ಮತ್ತು ಇತರೆ ತ:ಖ್ತೆಗಳನ್ನು ತಯಾರಿಸಿ ಮಂಡಲಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು;

(ಎಲ್–1) ಲೆಕ್ಕಪರಿಶೋಧನಾ ವರದಿಯಲ್ಲಿ ಪತ್ತೆಹಚ್ಚಲಾದ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

(ಎಲ್–2) ವಿಚಾರಣಾ ವರದಿಯಲ್ಲಿ ಪತ್ತೆಹಚ್ಚಲಾದ ಲೋಪದೋಷಗಳು ಏನಾದರೂ ಇದ್ದರೆ ಅವುಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

(ಎಲ್–3) ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ಸಹಕಾರ ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು;

(ಎಲ್–4) ಪ್ರಕರಣ 64ಎ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು;] ಮತ್ತು

(ಎಂ) ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರ ಯಾವುದೇ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು.

ಸೌಹಾರ್ದ ನಿಯಮ ಸಂಖ್ಯೆ 6ಜೆ ರಂತೆ

ಅಧಿನಿಯಮದ ಪ್ರಕರಣ 31 ಮತ್ತು 61ರ ಉಪಪ್ರಕರಣಗಳಲ್ಲಿ ಉಕ್ತವಾದ ಅಧಿಕಾರಗಳ ಜೊತೆಗೆ, ಮುಖ್ಯ ಕಾರ್ಯನಿರ್ವಾಹಕನು ಈ ಕೆಳಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

(1) ಸಹಕಾರಿಯ ಅಧಿಕೃತ ಮತ್ತು ಸಾಮಾನ್ಯ ವ್ಯವಹಾರಗಳನ್ನು ನಡೆಸತಕ್ಕದ್ದು;

(2) ಸಹಕಾರಿಯ ಎಲ್ಲಾ ದಾಖಲೆಗಳನ್ನು ಮತ್ತು ದಾಸ್ತಾವೇಜುಗಳ ಅಭಿರಕ್ಷಕನಾಗಿರತಕ್ಕದ್ದು ಮತ್ತು ಸಹಕಾರಿಯ ಲೆಕ್ಕಪತ್ರಗಳ, ವಿವಿಧ ಪುಸ್ತಕಗಳ ಮತ್ತು ದಾಖಲೆಗಳ ನಿಖರವಾದ ನಿರ್ವಹಣೆಗೆ ವ್ಯವಸ್ಥೆ ಮಾಡತಕ್ಕದ್ದು, ಅಧಿನಿಯಮದ, ನಿಯಮಗಳ, ಮತ್ತು ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಹಾಗೂ ರಿಜಿಸ್ಟ್ರಾರನು ಅಥವಾ ಸಂಯುಕ್ತ ಸಹಕಾರಿಯು ಅಥವಾ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ದೇಶಿಸಿದಂತೆ ಸಲ್ಲಿಸಬೇಕಾದ ನಿಯತಕಾಲಿಕ ತಃಖ್ತೆಗಳನ್ನು ಮತ್ತು ಅಧಿಕೃತ ವರದಿಗಳನ್ನು ಸರಿಯಾಗಿ ತಯಾರಿಸಿ ಸಕಾಲದಲ್ಲಿ ಸಲ್ಲಿಸತಕ್ಕದ್ದು.

(3) ಸಹಕಾರಿಯ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳ ಗುಣಮಟ್ಟವನ್ನು ನಿರ್ಧರಿಸಲು ಅಗತ್ಯವಾದ ನಿಯತಕಾಲಿಕ ಮಾಹಿತಿಯನ್ನು ಆಡಳಿತ ಮಂಡಳಿಗೆ ಒದಗಿಸತಕ್ಕದ್ದು.

(4) ಸಹಕಾರಿಯ ದಿನನಿತ್ಯದ ನಿರ್ವಹಣೆ ಮತ್ತು ವ್ಯವಹಾರದ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು;

(5) ರಜೆ ಮಂಜೂರಾತಿ ಮಾಡುವುದು ಮತ್ತು ಯಾವುದೇ ಶಿಕ್ಷೆ ವಿಧಿಸುವುದು ಅಥವಾ ಅಮಾನತ್ತಿನಲ್ಲಿಡುವುದು ಸೇರಿದಂತೆ ಸಹಕಾರಿಯ ಎಲ್ಲಾ ನೌಕರರ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರತಕ್ಕದ್ದು;

ಪರಂತು ಸಹಕಾರಿಯ ಉಪವಿಧಿಗಳಲ್ಲಿ ಅಥವಾ ಸೇವಾ ನಿಬಂಧನೆಗಳಲ್ಲಿ ಒಬ್ಬ ನೌಕರನನ್ನು ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡುವ ಅಥವಾ ಯಾವುದೇ ಶಿಕ್ಷೆ ವಿಧಿಸುವ ಅಧಿಕಾರವನ್ನು ಸ್ಪಷ್ಟವಾಗಿ ಕೊಡಮಾಡದಿರುವಲ್ಲಿ, ಅಂಥ ಅಮಾನತ್ತು ಅಥವಾ ಶಿಕ್ಷೆಯನ್ನು ಆಡಳಿತ ಮಂಡಳಿಯ ಅನುಮೋದನೆ ಪಡೆದು ವಿಧಿಸಲು ಜವಾಬ್ದಾರನಾಗಿರತಕ್ಕದ್ದು.

(6) ಸಹಕಾರಿಯ ನಗದು, ದಾಸ್ತಾನು ಮತ್ತು ಇತರ ಆಸ್ತಿಗಳ ಸರಿಯಾದ ನಿರ್ವಹಣೆ ಮತ್ತು ಅಭಿರಕ್ಷೆಗೆ ವ್ಯವಸ್ಥೆ ಮಾಡತಕ್ಕದ್ದು;

(7) ಸಹಕಾರಿಯ ನಿಧಿಗಳಿಂದ ವ್ಯವಸ್ಥಾಪನಾ ಮತ್ತು ಕಾರ್ಯನಿರ್ವಹಣಾ ವೆಚ್ಚಗಳನ್ನು ಪಾವತಿಸತಕ್ಕದ್ದು;

(8) ಅಜೆಂಡಾ ಮತ್ತು ಅದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟೀಸು ನೀಡತಕ್ಕದ್ದು;

(9) ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು ಸದರಿ ಸಭೆಗಳಲ್ಲಿ ಅಗತ್ಯಪಡಿಸುವ ಕಾಗದಪತ್ರಗಳನ್ನು ಹಾಜರುಪಡಿಸತಕ್ಕದ್ದು ಹಾಗೂ ಸಭಾಪತಿಯೊಡನೆ ಅಂಥ ಸಭೆಗಳ ನಡವಳಿಗಳಿಗೆ ಸಹಿ ಮಾಡತಕ್ಕದ್ದು.

(10) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಹಿಂದಿನ ವರ್ಷದ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ತತ್ಸಂಬಂಧದ ಷೆಡ್ಯೂಲುಗಳನ್ನು ಅಧಿಕೃತ ವರದಿಗಳನ್ನು ಮತ್ತು ಇತರ ತಃಖ್ತೆಗಳ ಸಹಿತ, ತಯಾರಿಸಿ ಆಡಳಿತ ಮಂಡಳಿಯ ಅನುಮೋದನೆ ಪಡೆದು ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಮುಂದೆ ಮಂಡಿಸತಕ್ಕದ್ದು;

(11) ಅಧಿನಿಯಮದ ಪ್ರಕರಣ 33 ಅಥವಾ 64ರ ಲೆಕ್ಕಪರಿಶೋಧನಾ ವರದಿಗಳನ್ನು ಪ್ರಕರಣ 35 ಅಥವಾ 65ರ ವಿಚಾರಣಾ ವರದಿಗಳನ್ನು ಅವುಗಳಲ್ಲಿ ಉಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಆಡಳಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು;

(12) ಲೆಕ್ಕಪರಿಶೋಧನಾ ಅಥವಾ ವಿಚಾರಣಾ ವರದಿಗಳಲ್ಲಿ ತಿಳಿಸಲಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡ ಕ್ರಮಗಳನ್ನುಳ್ಳ ಅನುಪಾಲನಾ ವರದಿಗೆ ಆಡಳಿತ ಮಂಡಳಿಯ ಅನುಮೋದನೆ ಪಡೆದು ಪಾಲನಾ ವರದಿ ಕಳುಹಿಸತಕ್ಕದ್ದು. ಸದರಿ ಲೋಪದೋಷಗಳು ಸರಿಪಡಿಸಲ್ಪಡುವವರೆಗೆ ಮತ್ತು ಅಂಥಾ ಅಕ್ರಮಗಳು ನೇರ್ಪಡಿಸಲ್ಪಡುವವರೆಗೆ, ಅಂಥಾ ಪಾಲನಾ ವರದಿಗಳನ್ನು ನಿಯತಕಾಲಿಕವಾಗಿ, ಪ್ರಸಂಗಾನುಸಾರ ರಿಜಿಸ್ಟ್ರಾರನಿಗೆ ಅಥವಾ ಸಂಯುಕ್ತ ಸಹಕಾರಿಗೆ ಅಥವಾ ಲೆಕ್ಕಪರಿಶೋಧನಾ

ನಿರ್ದೇಶಕನಿಗೆ ಸಲ್ಲಿಸುವುದನ್ನು ಮುಂದುವರಿಸತಕ್ಕದ್ದು;

(13) ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟು ಸಹಕಾರಿ ವತಿಯಿಂದ ಅಥವಾ ಸಹಕಾರಿಗೆ ವಿರುದ್ಧವಾಗಿ ಹಾಕಲ್ಪಟ್ಟ ದಾವಾ ಮತ್ತು ಇತರೆ ಕಾನೂನು ಕ್ರಮಗಳನ್ನು ಜರುಗಿಸುವುದು, ಸಮರ್ಥಿಸಿಕೊಳ್ಳುವುದು, ನಡೆಸುವುದು, ಬಗೆಹರಿಸುವುದು ಅಥವಾ ಕೈಬಿಡುವುದು;

(14) ಸಹಕಾರಿಯ ಯಾವುದೇ ನಿರ್ದೇಶಕನು ಕಾಯ್ದೆ, ನಿಯಮ ಅಥವಾ ಉಪವಿಧಿಯನ್ವಯ ತಮ್ಮ ಪದದಲ್ಲಿ ಮುಂದುವರೆಯಲು ಅನರ್ಹರಾದರೆ ಸದರಿ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ವರದಿಸುವುದು.

(15) ಕಾಲಕಾಲಕ್ಕೆ ರಿಜಿಸ್ಟ್ರಾರನು ಅಥವಾ ಸಂಯುಕ್ತ ಸಹಕಾರಿಯು ಅಗತ್ಯಪಡಿಸುವಂತೆ ಸಹಕಾರಿಯ ವ್ಯವಹಾರಕ್ಕೆ ಸಂಬಂಧಪಟ್ಟ ಅಧಿಕೃತ ವರದಿಗಳನ್ನು, ತಃಖ್ತೆಗಳನ್ನು ಮತ್ತು ಮಾಹಿತಿಗಳನ್ನು ಸಲ್ಲಿಸುವುದು;

(16) ಅಪೆಕ್ಸ್ ಸಹಕಾರಿಯ ಸಂಬಂಧದಲ್ಲಿ, ಮುಖ್ಯ ಕಾರ್ಯನಿರ್ವಾಹಕನು:–

(i) ಅಧ್ಯಕ್ಷನೊಡನೆ ಸಮಾಲೋಚಿಸಿ ನೌಕರರನ್ನು ವರ್ಗಾಯಿಸುವ ಅಧಿಕಾರ ಹೊಂದಿರತಕ್ಕದ್ದು;

(ii) ಆತನ ವಿರುದ್ಧ ಶಿಸ್ತಿನ ವಿಚಾರಣೆಯನ್ನು ನಡೆಸಲು ಉದ್ದೇಶಿಸಿರುವ ಅಥವಾ ವಿಚಾರಣೆ ನಡೆಯುತ್ತಿರುವಾಗ, ಅಂಥಾ ನೌಕರನನ್ನು ಅಮಾನತ್ತಿನಲ್ಲಿಡಬಹುದು;

(iii) ಅಧಿನಿಯಮ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಆದರೆ ಆಡಳಿತ ಮಂಡಳಿಯ ಅನುಮೋದನೆ ಪಡೆದು ಅಗತ್ಯವಾದ ಸಿಬ್ಬಂದಿಯನ್ನು ನೇಮಕ ಮಾಡಲು ಅಧಿಕಾರ ಹೊಂದಿರತಕ್ಕದ್ದು;

(iv) ಆಡಳಿತ ಮಂಡಳಿಯು ನೀಡುವ ಮಾರ್ಗಸೂಚಿಗಳಿಗೊಳಪಟ್ಟು ಮಾತುಕತೆ ನಡೆಸಬಹುದು ಮತ್ತು ಒಪ್ಪಂದಗಳನ್ನು ಜಾರಿಗೊಳಿಸಬಹುದು;

(v) ಸಹಕಾರಿಯ ನೌಕರರ ಅಧಿಕಾರ, ಪ್ರಕಾರ್ಯ ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸತಕ್ಕದ್ದು;

(vi) ತನ್ನ ಯಾವುದೇ ಅಧಿಕಾರವನ್ನು ಬೇರೆ ನೌಕರನಿಗೆ ಪ್ರತ್ಯಾಯೋಜಿಸಬಹುದು;

**ಸಂಯುಕ್ತ ಸಹಕಾರಿ ಉಪವಿಧಿ ಸಂಖ್ಯೆ 40 ರಂತೆ –**

ವ್ಯವಸ್ಥಾಪಕ ನಿರ್ದೇಶಕನು ಸಂಯುಕ್ತ ಸಹಕಾರಿಯ ಮುಖ್ಯ ಆಡಳಿತಾಧಿಕಾರಿಯಾಗಿರತಕ್ಕದ್ದು ಮತ್ತು ಮಂಡಳಿಯ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು ಕಾಯ್ದೆಯ 61(2) ನೇ ಕಲಂನಡಿ ನಿಯುಕ್ತವಾದ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಎ) ಸಂಯುಕ್ತ ಸಹಕಾರಿಯ ದೈನಂದಿನ ವ್ಯವಹಾರಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು.

ಬಿ) ಸಂಯುಕ್ತ ಸಹಕಾರಿಯ ಪರವಾಗಿ ದಾವೆ ಹೂಡುವ ಮತ್ತು ದಾವೆಗೆ ಗುರಿಯಾಗುವ ವ್ಯಕ್ತಿಯಾಗಿರತಕ್ಕದ್ದು.

ಸಿ) ಚೆಕ್ಕುಗಳಿಗೆ ಮತ್ತು ಇತರೆ ವರ್ಗಾವಣೀಯ ಪತ್ರಗಳಿಗೆ ಹಿಂಬರಹ ಮಾಡಲು, ಸಹಿ ಮಾಡಲು, ಅವುಗಳನ್ನು ವರ್ಗಾಯಿಸಲು ಮತ್ತು ಸಂಯುಕ್ತ ಸಹಕಾರಿಯ ಬ್ಯಾಂಕಿನ ಲೆಕ್ಕದ ಖಾತೆಗಳನ್ನು ಪ್ರವರ್ತಿಸಲು ಸಂಯುಕ್ತ ಸಹಕಾರಿಯ ಪರವಾಗಿ ಅಧಿಕಾರಗಳನ್ನು ಹೊಂದಿರತಕ್ಕದ್ದು.

ಡಿ) ನೌಕರರ ನೇಮಕಾತಿಗೆ ಹಾಗೂ ನೌಕರರ ಶಿಸ್ತು, ಕಾರ್ಯನಿರ್ವಹಣೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

ಇ) ಸಂಯುಕ್ತ ಸಹಕಾರಿಯ ಪರವಾಗಿ ಒಪ್ಪಂದ ಅಥವಾ ಕರಾರು ಮಾಡಿಕೊಳ್ಳುವ ವ್ಯಕ್ತಿಯಾಗಿರತಕ್ಕದ್ದು.

ಎಫ್) ಸಂಯುಕ್ತ ಸಹಕಾರಿಯ ದಾಖಲೆಗಳ, ಲೆಕ್ಕಪತ್ರಗಳ, ನಗದಿನ, ದಾಸ್ತಾನಿನ ಮತ್ತು ಇತರ ಆಸ್ತಿಗಳ ನಿರ್ವಹಣೆ ಮತ್ತು ಅಭಿರಕ್ಷೆಗೆ ವ್ಯವಸ್ಥೆ ಮಾಡತಕ್ಕದ್ದು.

ಜಿ) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಮಂಡಲಿಯ ಅನುಮೋದನೆಗಾಗಿ ಕರಡು ವಾರ್ಷಿಕ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಸಲ್ಲಿಸತಕ್ಕದ್ದು.

ಹೆಚ್) ಅಧ್ಯಕ್ಷನೊಂದಿಗೆ ಸಮಾಲೋಚನೆ ನಡೆಸಿ, ಉಪವಿಧಿಗಳ ಅನುಸಾರ ಮಂಡಲಿಯ ಸಭೆಗಳನ್ನು ಮತ್ತು ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು ಮತ್ತು ಅದರ ನಡವಳಿಗಳನ್ನು ದಾಖಲು ಮಾಡತಕ್ಕದ್ದು.

ಐ) ಕಾರ್ಯನೀತಿಗಳನ್ನು ಮತ್ತು ಯೋಜನೆಗಳನ್ನು ರೂಪಿಸಲು ಮಂಡಲಿಗೆ ಸಹಾಯ ಮಾಡತಕ್ಕದ್ದು.

ಜೆ) ಮಂಡಲಿಗೆ ಜವಾಬ್ದಾರನಾಗಿರತಕ್ಕದ್ದು.

ಕೆ) ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಡೆಸಲು ಮತ್ತು ವ್ಯವಹಾರಗಳ ಗುಣಮಟ್ಟವನ್ನು ನಿರ್ಧರಿಸಲು ಅಗತ್ಯವಾದ ನಿಯತಕಾಲಿಕ ಮಾಹಿತಿಯನ್ನು ಮಂಡಲಿಗೆ ಒದಗಿಸತಕ್ಕದ್ದು.

ಎಲ್) ಸಂಯುಕ್ತ ಸಹಕಾರಿಯ ನಿಧಿಗಳಿಂದ ವ್ಯವಸ್ಥಾಪನಾ ಮತ್ತು ಕಾರ್ಯನಿರ್ವಹಣಾ ವೆಚ್ಚಗಳನ್ನು ಪಾವತಿಸತಕ್ಕದ್ದು;

ಎಂ) ಸಂಯುಕ್ತ ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಹಿಂದಿನ ವರ್ಷದ ಆರ್ಥಿಕ ತಃಖ್ತೆಗಳನ್ನು, ಅನುಸೂಚಿಗಳನ್ನು, ಅಧಿಕೃತ ವರದಿಗಳನ್ನು ಮತ್ತು ಇತರೆ ತಃಖ್ತೆಗಳನ್ನು ತಯಾರಿಸಿ ಮಂಡಲಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು;

ಎನ್) ಲೆಕ್ಕಪರಿಶೋಧನಾ ವರದಿಗಳನ್ನು, ವಿಚಾರಣಾ ವರದಿಗಳನ್ನು ಅವುಗಳಲ್ಲಿ ಉಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಮಂಡಲಿಯ ಮುಂದೆ ಮಂಡಿಸತಕ್ಕದ್ದು;

ಓ) ಲೆಕ್ಕಪರಿಶೋಧನಾ ಅಥವಾ ವಿಚಾರಣಾ ವರದಿಗಳಲ್ಲಿ ತಿಳಿಸಲಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡ ಕ್ರಮಗಳನ್ನುಳ್ಳ ಅನುಪಾಲನಾ ವರದಿಗೆ ಮಂಡಲಿಯ ಅನುಮೋದನೆ ಪಡೆದು ಪಾಲನಾ ವರದಿ ಕಳುಹಿಸತಕ್ಕದ್ದು. ಸದರಿ ಲೋಪದೋಷಗಳು ಸರಿಪಡಿಸಲ್ಪಡುವವರೆಗೆ ಮತ್ತು ಅಂಥಾ ಅಕ್ರಮಗಳು ನೇರ್ಪಡಿಸಲ್ಪಡುವವರೆಗೆ, ಅಂಥಾ ಪಾಲನಾ ವರದಿಗಳನ್ನು ನಿಯತಕಾಲಿಕವಾಗಿ, ಪ್ರಸಂಗಾನುಸಾರ ರಿಜಿಸ್ಟ್ರಾರನಿಗೆ ಅಥವಾ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಸಲ್ಲಿಸುವುದನ್ನು ಮುಂದುವರಿಸತಕ್ಕದ್ದು;

ಪಿ) ಅಜೆಂಡಾ ಮತ್ತು ಅದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ಸಭೆ, ಮಂಡಲಿ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟೀಸನ್ನು ನೀಡತಕ್ಕದ್ದು;

ಕ್ಯೂ) ಸಾಮಾನ್ಯ ಸಭೆ, ಆಡಳಿತ ಮಂಡಲಿ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು ಸದರಿ ಸಭೆಗಲ್ಲಿ ಅಗತ್ಯಪಡಿಸುವ ಕಾಗದಪತ್ರಗಳನ್ನು ಹಾಜರುಪಡಿಸತಕ್ಕದ್ದು ಹಾಗೂ ಸಭಾಪತಿಯೊಡನೆ ಅಂಥ ಸಭೆಗಳ ನಡವಳಿಗಳಿಗೆ ಸಹಿ ಮಾಡತಕ್ಕದ್ದು.

ಆರ್) ರಜೆ ಮಂಜೂರಾತಿ ಮಾಡುವುದು ಮತ್ತು ಎಲ್ಲಾ ನೌಕರರ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರತಕ್ಕದ್ದು;

ಎಸ್) ಅಧ್ಯಕ್ಷನೊಡನೆ ಸಮಾಲೋಚಿಸಿ ನೌಕರರನ್ನು ವರ್ಗಾಯಿಸುವ ಅಧಿಕಾರ ಹೊಂದಿರತಕ್ಕದ್ದು;

ಟಿ) ನೌಕರನ ವಿರುದ್ಧ ಶಿಸ್ತಿನ ವಿಚಾರಣೆಯನ್ನು ನಡೆಸಲು ಉದ್ದೇಶಿಸಿರುವ ಅಥವಾ ವಿಚಾರಣೆ ನಡೆಯುತ್ತಿರುವಾಗ, ಅಂಥಾ ನೌಕರನನ್ನು ಅಮಾನತ್ತಿನಲ್ಲಿಡಬಹುದು;

ಯು) ಅಧಿನಿಯಮ, ನಿಯಮಗಳ ಮತ್ತು ಈ ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಆದರೆ ಮಂಡಲಿಯ ಅನುಮೋದನೆ ಪಡೆದು ಅಗತ್ಯವಾದ ಸಿಬ್ಬಂದಿಯನ್ನು ನೇಮಕ ಮಾಡಲು ಅಧಿಕಾರ ಹೊಂದಿರತಕ್ಕದ್ದು;

ವಿ) ಮಂಡಲಿಯು ನೀಡುವ ಮಾರ್ಗಸೂಚಿಗಳಿಗೊಳಪಟ್ಟು ಮಾತುಕತೆ ನಡೆಸಬಹುದು ಮತ್ತು ಒಪ್ಪಂದಗಳನ್ನು ಜಾರಿಗೊಳಿಸಬಹುದು;

ಡಬ್ಲ್ಯು)ಸಂಯುಕ್ತ ಸಹಕಾರಿಯ ನೌಕರರ ಅಧಿಕಾರ, ಪ್ರಕಾರ್ಯ ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸತಕ್ಕದ್ದು;

ಎಕ್ಸ್) ತನ್ನ ಯಾವುದೇ ಅಧಿಕಾರವನ್ನು ಬೇರೆ ನೌಕರನಿಗೆ ಪ್ರತ್ಯಾಯೋಜಿಸಬಹುದು;

ವೈ)ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರೆ ಯಾವುದೇ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು.

## ಸಂಯುಕ್ತ ಸಹಕಾರಿಯ ಪ್ರಕಾರ್ಯಗಳು

## ಸೌಹಾರ್ದ ಸಹಕಾರಿ ಕಾಯ್ದೆ ಕಲಂ.53(7) ರಂತೆ

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳಿವಳಿಕೆ ನೀಡುವುದು ಮತ್ತು ಸಹಕಾರ ತತ್ತ್ವಗಳನ್ನು ಪ್ರಚಾರ ಮಾಡುವುದು;

(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು;

(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು;

2[(ಇ) *****]

(ಎಫ್) ಅಗತ್ಯವಿರುವಾಗ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;

(ಜಿ) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;

(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;

(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು;

(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;

(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;

(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು;

(ಎಂ) ಸಹಕಾರಿ ವಿಚಾರ ಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

(ಎನ್) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು;

(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್‌ನಂತೆ ವರ್ತಿಸುವುದು;

(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಸುವುದು;

(ಕ್ಯೂ) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;

(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;

(ಎಸ್) 30ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;

1[(ಟಿ) *****]

2[(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು:

ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.]

ಸಂಯುಕ್ತ ಸಹಕಾರಿ ಉಪವಿಧಿ ಸಂಖ್ಯೆ 05 ರಂತೆ –

ಸಂಯುಕ್ತ ಸಹಕಾರಿಯ ಧ್ಯೇಯ ಮತ್ತು ಉದ್ದೇಶಗಳು ಈ ಕೆಳಗಿನಂತೆ ಇರತಕ್ಕದ್ದು:

1) ಸಂಯುಕ್ತ ಸಹಕಾರಿಯ ಪ್ರಾಥಮಿಕ ಉದ್ದೇಶವು ಕಾಯ್ದೆಯ 53ನೇ ಕಲಂನ (7)ನೇ ಉಪಕಲಂನಲ್ಲಿ ತಿಳಿಸಿರುವ ಈ ಕೆಳಕಂಡ ಅಧಿಕಾರಗಳನ್ನು ಚಲಾಯಿಸುವುದು, ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಕರ್ತವ್ಯಗಳನ್ನು ಮಾಡುವುದು;

ಎ) ಸಹಕಾರಿಗಳನ್ನು ಪ್ರವರ್ತಿಸುವುದು, ಸಂಘಟಿಸುವುದು ಹಾಗೂ ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು, ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಯನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

ಬಿ) ಸಹಕಾರ ತರಬೇತಿ, ಶಿಕ್ಷಣ ಹಾಗೂ ತಿಳಿವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು;

ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು;

ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು;

ಇ) ಅಗತ್ಯವಿರುವಾಗ ಸದಸ್ಯ ಸಹಕಾರಿಗಳ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;

ಎಫ್) ಸದಸ್ಯ ಸಹಕಾರಿಗಳಿಗೆ ನಡತೆ ಸಂಹಿತೆಯನ್ನು ರೂಪಿಸುವುದು;

ಜಿ) ಸದಸ್ಯ ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;

ಹೆಚ್) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಸೂಚನೆ ಒದಗಿಸುವುದು;

ಐ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;

ಜೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;

ಕೆ) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ, ನಿರ್ವಹಿಸುವುದು;

ಎಲ್) ಸಹಕಾರಿ ವಿಚಾರಧಾರೆಯನ್ನು ಅನ್ವಯಿಸುವಂತೆ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

ಎಂ) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು;

ಎನ್) ಸಹಕಾರಿಗಳ ಅಂಕಿ–ಅಂಶಗಳ ಬ್ಯಾಂಕಿನಂತೆ ವರ್ತಿಸುವುದು;

ಒ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವುದು;

ಪಿ) ಗೊತ್ತುಪಡಿಸಿದ ಅವಧಿಯೊಳಗಾಗಿ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;

ಕ್ಯೂ) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;

ಆರ್) ಕಾಯ್ದೆ ಕಲಂ 30(2) ರಡಿಯಲ್ಲಿ ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದಲ್ಲಿ, ಅಂತಹ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;

ಎಸ್) ಸದಸ್ಯ ಸಹಕಾರಿಗಳ ಪರಿವೀಕ್ಷಣೆ ಅಧಿಕಾರ ಹೊಂದಿರುವುದು;

2) ಸದಸ್ಯ ಸಹಕಾರಿಗಳ ಶಾಖೆಗಳನ್ನು ಆರಂಭಿಸುವ ಪ್ರಸ್ತಾವೆಗಳ ಪರಿಶೀಲಿಸಿ, ಆರ್ಥಿಕ ಸದೃಢತೆಯ ಸಾಧ್ಯತೆಯಿದ್ದಲ್ಲಿ, ಅನುಮತಿ ನೀಡುವುದು;

3) ಸದಸ್ಯ ಸಹಕಾರಿಯ ಯಾವುದೇ ನಿರ್ದೇಶಕನು ಹಾಗೆ ಮುಂದುವರೆಯಲು ಯಾವುದೇ ಅನರ್ಹತೆಗೆ ಒಳಪಟ್ಟಿರುವನೇ ಎಂಬುದನ್ನು ನಿರ್ಧರಿಸುವುದು.;

4) ಕಾಯ್ದೆ ಕಲಂ 35 ರಡಿ ವಿಚಾರಣೆಗೆ ಶಿಫಾರಸ್ಸು ಮಾಡುವುದು;

5) ಕಾಯ್ದೆ ಕಲಂ 38 ರಡಿ ಸದಸ್ಯ ಸಹಕಾರಿಯ ಮಂಡಲಿಯನ್ನು ರದ್ದತಿ ಮಾಡಿ ಆಡಳಿತಗಾರನನ್ನು ನೇಮಕ ಮಾಡುವುದು;

6) ಕಾಯ್ದೆ ಕಲಂ 38ಎ ರಡಿ ವಿಶೇಷಾಧಿಕಾರಿಯನ್ನು ನೇಮಕ ಮಾಡುವುದು;

7) ಸಹಕಾರಿ ತತ್ವಗಳನ್ನು ಪ್ರಚುರಪಡಿಸುವುದು ಮತ್ತು ಸದಸ್ಯ ಸಹಕಾರಿಗಳು ಅವುಗಳನ್ನು ಕಾರ್ಯಾಚರಣೆಯಲ್ಲಿ ತರುವಂತೆ ಮಾಡುವುದು;

8) ಕಾಯ್ದೆಯ 62 ಕಲಂನ (2)ನೇ ಉಪಕಲಂನಡಿ ತಿಳಿಸಿರುವ ಸಂಯುಕ್ತ ಸಹಕಾರಿಯ ನಿಧಿಯನ್ನು ರಚಿಸಿ ನಿರ್ವಹಿಸುವುದು;

9) ಇತರೆ ರಾಜ್ಯಗಳಲ್ಲಿರುವ ಮತ್ತು ದೇಶಗಳಲ್ಲಿರುವ ಅಪೆಕ್ಸ್ ಸಹಕಾರಿಗಳೊಂದಿಗೆ ಮತ್ತು ಇತರ ಸಂಸ್ಥೆಗಳೊಂದಿಗೆ ಸಂಪರ್ಕಿಸುವುದು, ಸಹಯೋಗಿಸುವುದು ಮತ್ತು ಸೂಕ್ತ ರೀತಿಯಲ್ಲಿ ಸಹಭಾಗಿತ್ವವನ್ನು ನಿರ್ವಹಿಸುವುದು;

10) ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಶೋಧನೆ, ಚರ್ಚಾಗೋಷ್ಠಿಗಳು, ಪ್ರಕಟಣಾ ಕಾರ್ಯ, ಮುಂತಾದ ಚಟುವಟಿಕೆಗಳಿಗೆ ಸಹಕರಿಸುವುದು ಮತ್ತು ಪಾಲ್ಗೊಳ್ಳುವುದು;

11) ಸದಸ್ಯ ಸಹಕಾರಿಗಳ ಚಟುವಟಿಕೆಗಳ ಮೇಲೆ ನಿಯಂತ್ರಣ ಅಥವಾ ನಿರ್ದೇಶನದ ಅಧಿಕಾರವುಳ್ಳ ಅಧಿಕಾರಿಗಳ ಮತ್ತು ಸಂಸ್ಥೆಗಳೊಡನೆ ಸಂಪರ್ಕಿಸುವುದು ಮತ್ತು ಸಹಯೋಗಿಸುವುದು;

12) ಸದಸ್ಯ ಸಹಕಾರಿಗಳ ಪರವಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಸಲುವಾಗಿ ಇತರೆ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು;

13) ಸಂಯುಕ್ತ ಸಹಕಾರಿಯ ಉದ್ದೇಶಗಳ ಸಾಧನೆಗೆ ಮತ್ತು ಸದಸ್ಯ ಸಹಕಾರಿಗಳ ಶ್ರೇಯೋಭಿವೃದ್ಧಿಗೆ ಅಗತ್ಯವಾದ ಇನ್ನಿತರ ಚಟುವಟಿಕೆಗಳನ್ನು ಕೈಗೊಳ್ಳುವುದು.

| **ಸಂಯುಕ್ತ ಸಹಕಾರಿಯ ಶಾಸನಾತ್ಮಕ ಅಧಿಕಾರಗಳು** | **ಸಹಕಾರಿಗಳ ನಿಬಂಧಕರ ಶಾಸನಾತ್ಮಕ ಅಧಿಕಾರಗಳು** |
|---|---|
| 1. ಪರಿವೀಕ್ಷಣೆ | 1. ನೋಂದಣಿ |
| 2. ನಿರ್ದೇಶಕರ ಅನರ್ಹತೆ | 2. ಉಪವಿಧಿಗಳ ತಿದ್ದುಪಡಿ |
| 3. ಶಾಖಾ ಅನುಮತಿ | 3. ವಿಚಾರಣೆ |
| 4. ವಿಶೇಷಾಧಿಕಾರಿ ನೇಮಕ | 4. ಸಮಾಪನೆ |
| 5. ಆಡಳಿತಾಧಿಕಾರಿ ನೇಮಕ | 5. ನೋಂದಣಿ ರದ್ದಿಯಾತಿ |
| 6. ಅಧಿಭಾರ ಪ್ರಕರಣ | 6. ವಿವಾದಗಳ ವಿಲೆ |
| 7. ಕಲಂ.68ರಂತೆ ಕ್ರಮಿನಲ್ ಪ್ರಕರಣ | |
| 8. ಕಲಂ.53(7)ರಂತೆ –<br>(ಎ) ಮಾರ್ಗದರ್ಶಿ ಸೂತ್ರ ಹೊರಡಿಸುವುದು<br>(ಜಿ) ನಡತೆ ಸಂಹಿತೆ ರೂಪಿಸುವುದು<br>(ಹೆಚ್) ಆರ್ಥಿಕ ಸಬಲತೆಯ ಮಾನದಂಡ ರೂಪಿಸುವುದು.<br>(ಎಸ್) ವಿಶೇಷ ಸಾಮಾನ್ಯ ಸಭೆ ನಡೆಸುವುದು. | |

# ಅಧ್ಯಾಯ – 7.4

# ನಿಬಂಧಕರು ಮತ್ತು ಸಂಯುಕ್ತ ಸಹಕಾರಿಗೆ ಮಾಹಿತಿ ಒದಗಿಸುವುದು

**ಕಲಂ.34 : ಮಾಹಿತಿಯನ್ನು ಒದಗಿಸುವುದು :**

ಪ್ರತಿಯೊಂದು ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ ಈ ಮುಂದಿನ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. [ಮತ್ತು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ರಿಜರ್ವ್ ಬ್ಯಾಂಕಿಗೆ ಸಹ] ಒದಗಿಸತಕ್ಕದ್ದು ಎಂದರೆ –

(ಎ) ಹಿಂದಿನ ಸಹಕಾರಿ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ ಮತ್ತು ಮುಂಬರುವ ಸಹಕಾರಿ ವರ್ಷದ ಬಗ್ಗೆ ಕಾರ್ಯಕ್ರಮ;

(ಬಿ) ಲೆಕ್ಕಪತ್ರಗಳ ಲೆಕ್ಕಪರಿಶೋಧಿತ (ಆರ್ಥಿಕ ತಃಖ್ತೆಗಳು);

(ಸಿ) ಸಾಮಾನ್ಯ ನಿಕಾಯವು ಅನುಮೋದಿಸಿದಂತೆ ಹೆಚ್ಚುವರಿಯನ್ನು ವಿಲೆಮಾಡುವ ಬಗ್ಗೆ ಯೋಜನೆ;

(ಡಿ) ನಿರ್ದೇಶಕರುಗಳ ಪಟ್ಟಿ ಹಾಗೂ ಅವರ ಪದಾವಧಿ;

(ಇ) ಸಹಕಾರಿಯ ಉಪವಿಧಿಗಳ ತಿದ್ದುಪಡಿಗಳ ಪಟ್ಟಿ; ಮತ್ತು

(ಎಫ್) ಸಾಮಾನ್ಯ ನಿಕಾಯದ ಸಭೆಯನ್ನು ಮತ್ತು ಚುನಾವಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ನಡೆಸಿದ ದಿನಾಂಕದ ಬಗ್ಗೆ ಘೋಷಣೆ;

(ಜಿ) ಈ ಅಧಿನಿಯಮದ ಉಪಬಂಧಗಳಡಿ ರಿಜಿಸ್ಟ್ರಾರನು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ರಡಿ ನೋಂದಾವಣೆಯಾದ ಸುಮಾರು 5500 ಸಹಕಾರಿಗಳು ಕೆಲಸ ನಿರ್ವಹಿಸುತ್ತಿವೆ. ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರಡಿ ಸುಮಾರು 35000 ಸಹಕಾರಿಗಳು ನೋಂದಣಿಯಾಗಿ ಸುಮಾರು 25000 ಸಹಕಾರಿ ಸಂಸ್ಥೆಗಳು ಸಕ್ರಿಯವಾಗಿ ಕೆಲಸ ನಿರ್ವಹಿಸುತ್ತಿವೆ. ಈ ಹಿಂದೆ, ಅಂದರೆ, ಸುಮಾರು 40 ವರ್ಷಗಳ ಹಿಂದೆ ಭಾರತೀಯ ರಿಜರ್ವ್ ಬ್ಯಾಂಕ್, ಸಹಕಾರ ಸಂಸ್ಥೆಗಳ ಆರ್ಥಿಕ ತಃಖ್ತೆಗಳು, ಆಡಳಿತ ವ್ಯವಸ್ಥೆ ಬಗ್ಗೆ ವರ್ಷಕ್ಕೊಮ್ಮೆ ಅಂಕಿ ಅಂಶಗಳನ್ನು ಪ್ರಕಟಿಸುತ್ತಿತ್ತು. ಸುಮಾರು 20 ವರ್ಷಗಳಿಂದ ಈ ಪುಸ್ತಕ ಅಷ್ಟು ಪ್ರಾಮುಖ್ಯತೆ ಪಡೆದಿಲ್ಲ. ಏಕೆಂದರೆ ಅದರ ಪ್ರಕಟಣೆ 4–5 ವರ್ಷಗಳ ಹಿಂದಿನ ಮಾಹಿತಿ ಇರುತ್ತಿತ್ತು. ಸಹಕಾರ ಇಲಾಖೆಯಲ್ಲಿ ಈಗಲೂ ವರ್ಷಕ್ಕೊಮ್ಮೆ ಸಹಕಾರ ಸಂಘಗಳ ಆರ್ಥಿಕ ವಿವರಗಳನ್ನು ಸಂಗ್ರಹಿಸುವ ಒಂದು ವಿಭಾಗ ಕೆಲಸ ಮಾಡುತ್ತಿದೆ. ಆದರೆ ಅದರಿಂದ ಸಾರ್ವಜನಿಕರಿಗೆ ಸಹಕಾರಿ ಆಂದೋಲನದ ಬಗ್ಗೆ ಮಾಹಿತಿ ಲಭ್ಯವಾಗುವುದೇ ಇಲ್ಲ.

97ನೇ ಸಂವಿಧಾನ ತಿದ್ದುಪಡಿ 2011 ರಲ್ಲಿ ನಿಗದಿ ಪಡಿಸಿದಂತೆ, ಪ್ರತಿಯೊಂದು ಸಹಕಾರಿ ಸೆಪ್ಟೆಂಬರ್ ಅಂತ್ಯದೊಳಗೆ ನಿಗದಿ ಪಡಿಸಿದ ವರದಿಗಳನ್ನು ಸಲ್ಲಿಸಲೇಬೇಕೆಂಬ ಶರತ್ತುಗಳನ್ನು ಸಂವಿಧಾನದ ಅನುಚ್ಛೇದ 243ಝಡ್‌ಪಿ ಯಲ್ಲಿ ನಿಗದಿ ಪಡಿಸಿದೆ. ಇದರ ಜೊತೆಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ನ್ನು ರಚಿಸಿದಾಗ ಸಂಯುಕ್ತ ಸಹಕಾರಿಯೂ ಶಾಸನಾತ್ಮಕ ಜವಾಬ್ದಾರಿಗಳಲ್ಲಿ ಕಲಂ.53(7)(ಓ) ನಲ್ಲಿ ಈ ಕೆಳಕಂಡಂತೆ ನಿಗದಿ ಪಡಿಸಿದೆ.

“ಸಹಕಾರಿಗಳ ಅಂಕಿ ಅಂಶಗಳು ಬ್ಯಾಂಕಿನಂತೆ ವರ್ತಿಸುವುದು.”

ಇದರ ಜೊತೆಗೆ ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959ರ ಕಲಂ.27ಬಿ ಎಂದು ಈ ಕೆಳಕಂಡಂತೆ ಸೇರಿಸಿದೆ. (97ನೇ ಸಂವಿಧಾನ ತಿದ್ದುಪಡಿ ನಂತರ) ಇದರ ಉದ್ದೇಶವೂ ಸಹ ಪ್ರತಿಯೊಂದು ಸಹಕಾರಿ ಸಂಸ್ಥೆ ನಿಬಂಧಕರಿಗೆ ಸೆಪ್ಟೆಂಬರ್ ಅಂತ್ಯದೊಳಗೆ ನಿಗದಿ ಪಡಿಸಿದ ವರದಿಗಳನ್ನು ಸಲ್ಲಿಸಲೇಬೇಕು.

**ಕಲಂ.27ಬಿ : ನಿಬಂಧಕರಿಗೆ ವಿಧ್ಯುಕ್ತ ವರದಿಗಳನ್ನು ಸಲ್ಲಿಸುವುದು :**

ಪ್ರತಿಯೊಂದು ಸಹಕಾರ ಸಂಘದ ಮಂಡಳಿಯು ಈ ಕೆಳಕಂಡ ವಿಧ್ಯುಕ್ತ ವರದಿಗಳನ್ನು ನಿಬಂಧಕರಿಗೆ, ಪ್ರತಿಯೊಂದು ಸಹಕಾರ ವರ್ಷದ ಮುಕ್ತಾಯದ ಆರು ತಿಂಗಳೊಳಗಾಗಿ.

(ಎ) ಸಂಘದ ಚಟುವಟಿಕೆಗಳ ವಾರ್ಷಿಕ ವರದಿ;

(ಬಿ) ಲೆಕ್ಕಪತ್ರಗಳ ಪರಿಶೋಧಿತ ಆರ್ಥಿಕ ತಃಖ್ತೆಗಳು;

(ಸಿ) ಸಾಮಾನ್ಯ ಸಭೆಯು ಅನುಮೋದಿಸಿದಂಥ ಹೆಚ್ಚುವರಿ ಆದಾಯದ ವಿಲೇವಾರಿಗಾಗಿ ಯೋಜನೆ;

(ಡಿ) ಸಹಕಾರ ಸಂಘದ ಸಾಮಾನ್ಯ ಸಭೆಯು ಅನುಮೋದಿಸಿರುವಂಥ, ಉಪವಿಧಿಯ ತಿದ್ದುಪಡಿಗಳ ಪಟ್ಟಿ;

(ಇ) ಸಾಮಾನ್ಯ ಸಭೆಯನ್ನು ನಡೆಸಿದ ದಿನಾಂಕದ ಬಗ್ಗೆ ಮತ್ತು ಚುನಾವಣೆಗಳು ಬಾಕಿ ಇದ್ದಲ್ಲಿ ಅವುಗಳನ್ನು ನಡೆಸುವ ಬಗ್ಗೆ ಘೋಷಣೆ;

(ಎಫ್) ಹಣದ ದುರುಪಯೋಗ ಅಥವಾ ದುರ್ವಿನಿಯೋಗ, ಯಾವುದಾದರೂ ಇದ್ದರೆ, ಅದು ಮತ್ತು ಸಿವಿಲ್, ಕ್ರಿಮಿನಲ್ ಮತ್ತು ಶಿಸ್ತುಕ್ರಮಗಳು ಸೇರಿದಂತೆ ಆ ಸಂಬಂಧದಲ್ಲಿ ಜವಾಬ್ದಾರರಾಗಿರುವ ವ್ಯಕ್ತಿಗಳ ವಿರುದ್ಧ ಕೈಕೊಂಡ ಕ್ರಮ; ಮತ್ತು

(ಜಿ) ಅಧಿನಿಯಮದ ಯಾವುದೇ ಉಪಬಂಧಗಳಿಗೆ ಅನುಸಾರವಾಗಿ ನಿಬಂಧಕರು ಅಗತ್ಯಪಡಿಸಿದ ಯಾವುದೇ ಇತರ ಮಾಹಿತಿ; – ಸಲ್ಲಿಸತಕ್ಕದ್ದು.

ಇದರ ಉದ್ದೇಶವೂ ಸಹ ನಿಬಂಧಕರಿಗೆ ಸಲ್ಲಿಸಲೇಬೇಕಾದ ವರದಿಗಳ ಬಗ್ಗೆ ಉಲ್ಲೇಖ ಮಾಡಿದೆ.

ಸಹಕಾರಿ ಆಂದೋಲನದಲ್ಲಿ ಭಾಗಿಯಾಗಿರುವ ಜನಸಂಖ್ಯೆ, ಅವರು ಸದಸ್ಯರಾಗಿ ಪಡೆಯುತ್ತಿರುವ ಸೇವೆಗಳು, ಹೂಡಿಕೆ ಮಾಡುತ್ತಿರುವ ಠೇವಣಿಗಳ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಕಟ ಪಡಿಸಿದಾಗ, ಅದರಿಂದ ಪ್ರಚೋದನೆಗೊಂಡು ಸಹಕಾರಿ ಆಂದೋಲನದಲ್ಲಿ ಭಾಗಿಯಾಗಲು ಪ್ರಯತ್ನಿಸುತ್ತಾರೆಂದು. ಕರ್ನಾಟಕದ ಸಹಕಾರಿ ಸಂಸ್ಥೆಗಳು ತಮ್ಮ ಆರ್ಥಿಕ ವ್ಯವಹಾರದ ಬಗ್ಗೆ ಮಾಹಿತಿ ಪಡೆಯಲು ಪ್ರಯತ್ನಿಸಿದರೆ ಅದು ಸಿಗುವುದಿಲ್ಲ.

ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರದ ಒಂದು ಯೋಜನೆಯಾದ “ಆಧಾರ್”ಕಾರ್ಡ್‌ನ್ನು ರಾಷ್ಟ್ರದ ಸುಮಾರು 130 ಕೋಟಿ ಜನರಲ್ಲಿ 120 ಕೋಟಿಯಷ್ಟು ಕಾರ್ಡ್ ನೀಡಲಾಗಿದೆ. ಇದರ ಜೊತೆಗೆ ಭಾರತದ ಪ್ರತಿಯೊಬ್ಬ ಪ್ರಜೆ ತನ್ನ ಎಲ್ಲಾ ಆರ್ಥಿಕ ವ್ಯವಹಾರದಲ್ಲಿ ಮತ್ತು ಸರ್ಕಾರದ ಸೇವೆ ಪಡೆಯಲು ‘ಆಧಾರ್’ಕಾರ್ಡ್‌ನ್ನು ಉಲ್ಲೇಖಿಸಲೇಬೇಕೆಂದು ಶರತ್ತು ವಿಧಿಸಿದೆ. ಇದರ ಜೊತೆಗೆ ಪ್ರತಿಯೊಬ್ಬ ಆದಾಯ ತೆರಿಗೆದಾರ ಪಡೆಯುವ ಪ್ಯಾನ್ ಕಾರ್ಡ್‌ನ್ನು ಲಿಂಕ್ ಮಾಡಲಾಗಿದೆ. ಈ ಎರಡು ರಾಷ್ಟ್ರಮಟ್ಟದ ಕಾರ್ಡ್‌ಗಳಿಂದ ಭಾರತದ ಪ್ರತಿಯೊಬ್ಬ ಪ್ರಜೆ ಮಾಡುವ ಎಲ್ಲಾ ಆರ್ಥಿಕ ವ್ಯವಹಾರಗಳು, ಆರ್ಥಿಕ ಆದಾಯ ತೆರಿಗೆ ಇಲಾಖೆ ಯಾವಾಗಬೇಕೆಂದರೆ ಅದನ್ನು ಪಡೆಯಲು ಸಾಧ್ಯವಾಗದೆ. ಇದರಿಂದ ಆಧಾರ್‌ಕಾರ್ಡ್ ಅಡಿ ಬೆರಳಚ್ಚು ಪಡೆಯುವುದರಿಂದ, ಅಪರಾಧ ಪತ್ತೆ ಹಚ್ಚಲು ಸಾಧ್ಯವಾಗುತ್ತಿದೆ. ಇದೇ ನೀತಿಗೆ ಅನುಗುಣವಾಗಿ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ನಿಗದಿ ಪಡಿಸಿದ ತಃಖ್ತೆಗಳು ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸಿದಾಗ, ಪ್ರತಿಯೊಂದು ಸದಸ್ಯ ಸಹಕಾರಿ ಮಾಡುತ್ತಿರುವ ಆರ್ಥಿಕ ವ್ಯವಹಾರ, ಸಭೆಗಳನ್ನು ನಡೆಸಿದ ಬಗ್ಗೆ ಚುನಾವಣೆ ನಡೆದ ಬಗ್ಗೆ, ಪದಾಧಿಕಾರಿಗಳ ಬಗ್ಗೆ, ಲೆಕ್ಕ ತಪಾಸಣೆ ಮತ್ತು ಅದರ ಬಗ್ಗೆ ತೆಗೆದುಕೊಂಡ ಅನುಪಾಲನಾ ವರದಿಗಳು ಹಾಗೂ ಸಹಕಾರಿಯಲ್ಲಿ ನಡೆದಿರುವ ಹಣ ದುರುಪಯೋಗ, ನಿಯಮದಲ್ಲಿ ನಿರ್ದೇಶನಗಳ ಉಲ್ಲಂಘನೆ ಬಗ್ಗೆ ಮಾಹಿತಿ ನೀಡಲೇಬೇಕು.

97ನೇ ಸಂವಿಧಾನ ತಿದ್ದುಪಡಿ ನಂತರ ಮತ್ತು ಅದಕ್ಕೆ ಪೂರ್ವದಲ್ಲಿ ಭಾರತದ ಯೋಜನಾ ಆಯೋಗದ ಮುಖಾಂತರ ಚೌದರಿ ಬ್ರಹ್ಮಪ್ರಕಾಶ ವರದಿಯಂತೆ ಮಾದರಿ ಉದಾರೀಕೃತ ಕಾಯ್ದೆ ರಚನೆಗೆ ಅವಕಾಶ ಕಲ್ಪಿಸಿದ ನಂತರ, ಸಹಕಾರಿ ಸದಸ್ಯರೂ ಮಂಡಳಿ ಸದಸ್ಯರು ಮತ್ತು ಪದಾಧಿಕಾರಿಗಳಿಗೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂನಿಯಂತ್ರಣ ಕಲ್ಪಿಸಿದ್ದು, ಆರ್ಥಿಕ, ಆಡಳಿತಾತ್ಮಕ ಜವಾಬ್ದಾರಿಯನ್ನು ಹೆಚ್ಚಿಸಿದೆ. ಸದಸ್ಯರು/ಸಹಕಾರಿಗಳು ಜಾಗ್ರುತರಾಗಿದ್ದರೆ ಮತ್ತು ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಹಾಗೂ ಸ್ವಯಂ ನಿಯಂತ್ರಣದ ಜೊತೆ ಕರ್ತವ್ಯ ಮತ್ತು ಜವಾಬ್ದಾರಿಗಳು ನಿಗದಿ ಪಡಿಸಿದ ಉದ್ದೇಶ, ಸ್ವಾಯತ್ತತೆಯನ್ನು ಸ್ವೇಚ್ಛತೆ ಎಂದು ತಪ್ಪು ತಿಳಿಯಲು ಅವಕಾಶ ನೀಡಬಾರದೆಂದು.

ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಮಾಹಿತಿ ಸಲ್ಲಿಸುವ ಜವಾಬ್ದಾರಿಯು ಸಹಕಾರಿ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕನಿಗೆ ನಿಗದಿ ಪಡಿಸಿದೆ. ಯಾರು ಈ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದಿಲ್ಲವೊ ಅಂತಹ ಮಂಡಳಿ ಸದಸ್ಯರು ಕಾಯಿದೆ ಕಲಂ.25 ರಡಿ ಅನರ್ಹತೆಗೊಳಿಸಲೂ ಸಹ ಅವಕಾಶ ಕಲ್ಪಿಸಿದೆ.

**ಕಲಂ.25(2) : ನಿರ್ದೇಶಕರುಗಳೆಲ್ಲರೂ, ಸಹಕಾರಿಯ ನಿರ್ದೇಶಕರ ಹುದ್ದೆಯ ಪದಾವಧಿಯಲ್ಲಿ :**

(ಎ)ಮಂಡಳಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ; ಅಥವಾ

(ಎ–1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ–2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ)ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಲ್ಲಿ ಗೊತ್ತು

ಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ನಡೆಸದಿದ್ದರೆ; ಅಥವಾ

(ಸಿ)ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ;

(ಡಿ)ಸಂಯುಕ್ತ ಸಹಕಾರಿಯು ನೀಡಿದ ಆದೇಶ ಅಥವಾ ನಿರ್ದೇಶನ ಉಲ್ಲಂಘಸಿದರೆ ಅಥವಾ ಯಾವುದೇ ಅರೆ–ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದರೆ;

(ಇ)ಸಂಯುಕ್ತ ಸಹಕಾರಿಯ ಪೂರ್ವಾನುಮೋದನೆಯನ್ನು ಪಡೆಯದೆ ಶಾಖೆಗಳನ್ನು ತೆರೆದರೆ.

– ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ (ಗರಿಷ್ಠ) ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಮತ್ತು ಆ ಸಹಕಾರಿಯ ಅಥವಾ ಇತರ ಯಾವುದೇ ಸಹಕಾರಿಯ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗಿರತಕ್ಕದ್ದು.

ಇದರ ಜೊತೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 29ಸಿ(3) ರಲ್ಲಿ ಮಂಡಳಿ ಸದಸ್ಯರನ್ನು ಮಾಹಿತಿಯನ್ನು ನಿಬಂಧಕರಿಗೆ ಸಲ್ಲಿಸದಿದ್ದರೆ ಐದು ವರ್ಷಗಳ ಅವಧಿಗೆ ಮಂಡಳಿ ಸದಸ್ಯನಾಗಿ ಮರು ಆಯ್ಕೆಯಾಗಲು, ಮುಂದುವರಿಯಲು ಅಥವಾ ನೇಮಕಗೊಳ್ಳಲು ಅನರ್ಹತೆ ಹೊಂದುತ್ತಾನೆ.

**ಕಲಂ.29ಸಿ(3) : ಸಹಕಾರ ಸಂಘದ ಮಂಡಳಿಯು :**

(ಎ) 39ಎ ಪ್ರಕರಣ ಮತ್ತು 29ಎಫ್ ಪ್ರಕರಣದ ಪ್ರಕಾರ ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ನೆರವಾಗಲು ವಿಫಲವಾದರೆ; ಅಥವಾ

(ಬಿ) 27ನೇ ಪ್ರಕರಣದ ಅಡಿಯಲ್ಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ಅಥವಾ ಅಗತ್ಯವಾಗಿರುವಾಗ 28ನೇ ಪ್ರಕರಣದ ಅಡಿಯಲ್ಲಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಲು ವಿಫಲವಾದರೆ; ಅಥವಾ

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪರಿಶೋಧಿತ ಲೆಕ್ಕಪತ್ರಗಳನ್ನು ಮತ್ತು ವಾರ್ಷಿಕ ವರದಿಯನ್ನು ಮಂಡಿಸಲು ವಿಫಲವಾದರೆ;

– ಹಾಗೆ ವಿಫಲವಾದ ಮಂಡಳಿಯ ಪ್ರತಿಯೊಬ್ಬ ಸದಸ್ಯನು, ಅನರ್ಹತೆಯ ಆದೇಶದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಂಘದ ಮಂಡಳಿಯ ಸದಸ್ಯನಾಗಿ ಚುನಾಯಿತನಾಗಲು ಅಥವಾ ನೇಮಕಗೊಳ್ಳಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು.

ಈ ಎಲ್ಲಾ ಆದೇಶಗಳಲ್ಲಿ ಆಡಳಿತಾತ್ಮಕ ಮತ್ತು ಶಾಸನಾತ್ಮಕ ಅನರ್ಹತೆಗೆ ನಿಗದಿ ಪಡಿಸಿದೆ.

ಶಿಕ್ಷೆ ಮತ್ತು ದಂಡಗಳು : ಶಾಸನಾತ್ಮಕ ಅನರ್ಹತೆ ಜೊತೆಗೆ, ಸಂವಿಧಾನವು ಸಹಕಾರ ಸಂಘಗಳ ಕಾಯಿದೆ ಮತ್ತು ಕರ್ನಾಟಕ ಸೌಹಾರ್ದ ಕಾಯಿದೆಯಡಿ, ಈ ತಃಖ್ತೆಗಳನ್ನು ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸದಿದ್ದರೆ ಕಾಯಿದೆ ಕಲಂ.68(5) ರಡಿ 6 ತಿಂಗಳು ಜೈಲು ವಾಸ ಅಥವಾ 5000 ಜುಮ್ಲಾನೆ ಅಥವಾ ಎರಡರಿಂದಲೂ ಶಿಕ್ಷಿಸ ಬಹುದಾದ ಅವಕಾಶ ಕಲ್ಪಿಸಿದೆ.

**ಕಲಂ.68(5) : ಅಪರಾಧಗಳು ಮತ್ತು ದಂಡಗಳು :**

ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಮತ್ತು ಮುಖ್ಯ ಕಾರ್ಯನಿರ್ವಾಹಕನು 33ನೇ ಪ್ರಕರಣ ಅಥವಾ 64ನೇ ಪ್ರಕರಣದಡಿ, ಪ್ರಸಂಗಾನುಸಾರ, ಹಿಂದಿನ ವರ್ಷದ ತನ್ನ ಲೆಕ್ಕ ಪತ್ರಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪರಿಶೋಧನೆ ಮಾಡಿಸಲು ಮತ್ತು ಪರಿಶೋಧಿತ ಆರ್ಥಿಕ ತಃಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

ಇದೇ ರೀತಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ.109(19)ರಲ್ಲಿ ಆರು ತಿಂಗಳ ಜೈಲು ವಾಸ ಅಥವಾ 500 ಜುಲ್ಮಾನೆ ಅಥವಾ ಎರಡರಿಂದಲೂ ಶಿಕ್ಷಿಸಲು ಅವಕಾಶ ಕಲ್ಪಿಸಿದೆ.

**ಕಲಂ.109(19) : ಅಪರಾಧಗಳು :**

27ಬಿ ಪ್ರಕರಣದ ಮೇರೆಗೆ ಮಂಡಳಿಯ ಪ್ರತಿಯೊಬ್ಬ ಸದಸ್ಯ ಮತ್ತು ಮುಖ್ಯಕಾರ್ಯನಿರ್ವಾಹಕನು ನಿಬಂಧಕರವರಿಗೆ ವಾರ್ಷಿಕ ರಿಟರ್ನ್ಸ್‌ಗಳನ್ನು ಸಲ್ಲಿಸಲು ವಿಫಲವಾದಲ್ಲಿ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

ಈ ಎಲ್ಲಾ ಮಾಹಿತಿಯನ್ನು ನೀಡಿದ ನಂತರ ಪರಿಶೀಲನಾಂಶವೆಂದರೆ, ಇಷ್ಟು ದೊಡ್ಡ ಸಂಖ್ಯೆಯ ಸಂಸ್ಥೆಗಳ ಮೇಲೆ ನಿಗಾವಹಿಸಲು ಸಾಧ್ಯವೇ

ಎಂಬುದು. ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಸಹಕಾರಿ ಸಂಸ್ಥೆ ಕಂಪ್ಯೂಟರ್ ಪಡೆದಿದೆ, ಪಡೆಯುತ್ತಿವೆ. ಅದಕ್ಕೆ ಸಂಬಂಧಪಟ್ಟ ತರಬೇತಿಯನ್ನು ನೀಡಲಾಗುತ್ತಿದೆ. ಇದರ ಜೊತೆಗೆ ಡಿಜಿಟಲೀಕರಣ ಒಂದು ಅವಶ್ಯಕತೆಯಾಗಿದೆ ಮತ್ತು ಇದರ ಜೊತೆಗೆ ಸೌಹಾರ್ದ ಕಾಯಿದೆ ಕಲಂ.33(7) ರಲ್ಲಿ ಸಹಕಾರಿ ವರ್ಷ ಮುಗಿದ 30 ದಿವಸದೊಳಗೆ, ಪ್ರತಿ ಸಹಕಾರಿ ತನ್ನ ಆರ್ಥಿಕ ತಃಖ್ತೆಗಳನ್ನು ಅಂತಿಮಗೊಳಿಸಿ ಲೆಕ್ಕಾಧಿಕಾರಿಗೆ ರವಾನಿಸುವ ಜವಾಬ್ದಾರಿಯು ಮಂಡಳಿ ಸದಸ್ಯರಿಗೆ ನಿಗದಿ ಪಡಿಸಿವೆ.

**ಕಲಂ.33(7) : ಸಹಕಾರಿಯ ಲೆಕ್ಕಪರಿಶೋಧನೆ :**

ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ, ಪ್ರತಿ ಸಹಕಾರಿಯ ಆಡಳಿತ ಮಂಡಳಿಯು ಸಹಕಾರ ವರ್ಷದ ಕೊನೆಯಲ್ಲಿದ್ದಂತೆ ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ, ಲಾಭ ಮತ್ತು ನಷ್ಟ ತೋರಿಸುವಂಥ ಆರ್ಥಿಕ ತಃಖ್ತೆಗಳನ್ನು ಮತ್ತು ಆಸ್ತಿ ಹೊಣೆಪಟ್ಟಿಯನ್ನು (ಅಡಾವೆ ಪತ್ರಿಕೆ) ನಿಯಮಿಸ ಬಹುದಾದಂಥ ಅನುಸೂಚಿಗಳು ಮತ್ತು ಇತರ ತಃಖ್ತೆಗಳ ಸಹಿತ ತಯಾರಿಸಿ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಮುಂದೆ ಲೆಕ್ಕಪರಿಶೋಧನೆಗಾಗಿ ಒಪ್ಪಿಸುವುದನ್ನು ಖಚಿತಪಡಿಸತಕ್ಕದ್ದು.

ಇದೇ ರೀತಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ.63(7) ರಲ್ಲಿ ಸಹಕಾರಿ ವರ್ಷ ಮುಗಿದ 30 ದಿವಸಗಳಲ್ಲಿ ಆರ್ಥಿಕ ತಃಖ್ತೆಗಳೂ ಅಂತಿಮಗೊಳಿಸಿ ಲೆಕ್ಕಪರಿಶೋಧಕನಿಗೆ ಸಲ್ಲಿಸಲು ಮಂಡಳಿಗೆ ಜವಾಬ್ದಾರಿ ನಿಗದಿ ಪಡಿಸಿದೆ.

**ಕಲಂ.63(7) : ಲೆಕ್ಕಪರಿಶೋಧನೆ :**

ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ, ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಯು, ಸಹಕಾರ ವರ್ಷದ ಕೊನೆಯಲ್ಲಿ ಇದ್ದಂತೆ, ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ ಲಾಭ ಮತ್ತು ನಷ್ಟ ತೋರಿಸುವಂಥ ಆರ್ಥಿಕ ತಃಖ್ತೆಗಳನ್ನು ಮತ್ತು ಆಸ್ತಿ ಹೊಣೆಪಟ್ಟಿಯನ್ನು ನಿಯಮಿಸಬಹುದಾದಂಥ ಷೆಡ್ಯೂಲಗಳ ಮತ್ತು ಇತರ ತಃಖ್ತೆಗಳ ಸಹಿತ ಸಿದ್ಧಪಡಿಸಿ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧನಾ ಫರ್ಮಿನ ಮುಂದೆ ಲೆಕ್ಕಪರಿಶೋಧನೆಗಾಗಿ ಹಾಜರುಪಡಿಸುವಂತೆ ನೋಡಿಕೊಳ್ಳತಕ್ಕದ್ದು.

ಪ್ರತಿ ಸಹಕಾರಿ ಆರ್ಥಿಕ ವರ್ಷ ಮುಗಿದ 30 ದಿವಸಗಳಲ್ಲಿ ಮೇಲ್ಕಂಡ ಆರ್ಥಿಕ ತಃಖ್ತೆಗಳನ್ನು ಲೆಕ್ಕ ತಪಾಸಣೆ ಮಾಡುವ ಲೆಕ್ಕಾಧಿಕಾರಿಗೆ ಸಲ್ಲಿಸಬೇಕು. ಆ ತಃಖ್ತೆಗಳ ಆಧಾರದ ಮೇಲೆ ಲೆಕ್ಕಾಧಿಕಾರಿ, ಸಹಕಾರಿಯು ಲೆಕ್ಕ ತಪಾಸಣೆ ಮಾಡಿ ಸೆಪ್ಟೆಂಬರ್ 1ನೇ ತಾರೀಖಿನೊಳಗೆ ನೀಡಬೇಕು. ಸಾಮಾನ್ಯ ಸಭೆ ಕರೆಯಲು ಈ ತಪಾಸಣೆ ಮಾಡಿದ ವರದಿ ನೀಡಿದಾಗ, ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 25ರ ತನಕ ಕಾಯುವ ಅವಶ್ಯಕತೆ ಇರುವುದಿಲ್ಲ.

ಇದರ ಜೊತೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ.29ಜಿ(6) ರನ್ನು ವ್ಯಕ್ತಿಗತ ಸದಸ್ಯರೇ ಇರುವ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಂಘದ ಮುಖ್ಯಕಾರ್ಯನಿರ್ವಾಹಕ ಪ್ರತಿ ತಿಂಗಳು ಸಂಘದ ಜಮಾ-ಖರ್ಚು ಲೆಕ್ಕದ ಪ್ರತಿಯನ್ನು ನಿಬಂಧಕರಿಗೆ ಮತ್ತು ಹಣಕಾಸು ಪೂರೈಸುವ ಸಂಸ್ಥೆಗೆ ಪ್ರತಿ ತಿಂಗಳು ಪ್ರಮಾಣಿಕರಿಸಿದ ಪ್ರತಿ ಸಲ್ಲಿಸಬೇಕು.

**ಕಲಂ.29ಜಿ(6) : ಮುಖ್ಯಕಾರ್ಯನಿರ್ವಾಹಕನ ನೇಮಕ :**

ಪ್ರಾಥಮಿಕ ಸಹಕಾರ ಸಂಘಗಳ ಸಂಬಂಧದಲ್ಲಿ ಮುಖ್ಯಕಾರ್ಯನಿರ್ವಾಹಕನು ಪ್ರತಿ ತಿಂಗಳು ಅವನಿಂದ ಪ್ರಮಾಣೀಕೃತವಾಗಿರುವಂಥ ಜಮಾ ಮತ್ತು ಖರ್ಚಿನ ಲೆಕ್ಕದ ಪ್ರತಿಯನ್ನು ಮುಂಬರುವ ತಿಂಗಳಿನ ಹದಿನೈದು ದಿನಗಳೊಳಗಾಗಿ ನಿಬಂಧಕರಿಗೆ ಮತ್ತು ಹಣಕಾಸು ನೀಡುವ ಬ್ಯಾಂಕ್ ಅಥವಾ ಸಾಲದ ಏಜೆನ್ಸಿಗೆ ಕಳುಹಿಸಿಕೊಡತಕ್ಕದ್ದು. ಅವನು ಸಾಮಾನ್ಯ ಸಭೆಗಳ ಮತ್ತು ಮಂಡಳಿಗಳ ಸಭೆಗಳ ನಡಾವಳಿಗಳ ಪ್ರಮಾಣೀಕೃತ ಪ್ರತಿಯನ್ನು ಸಹ ಅಂಥ ಸಭೆಗಳು ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ನಿಬಂಧಕರಿಗೆ ಮತ್ತು ಹಣಕಾಸು ನೀಡುವ ಬ್ಯಾಂಕ್‌ಗೆ ಅಥವಾ ಸಾಲದ ಏಜೆನ್ಸಿಗೆ ಕಳುಹಿಸಿಕೊಡತಕ್ಕದ್ದು.

ಇದರ ಜೊತೆಗೆ ವ್ಯಕ್ತಿಗತ ಸದಸ್ಯರೇ ಇರುವ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕ ಪ್ರತಿ ತಿಂಗಳು ಜಮಾ ಖರ್ಚಿನ ತಃಖ್ತೆ ಸಲ್ಲಿಸದಿದ್ದರೆ ಕಾಯಿದೆ ಕಲಂ.109(12ಬಿ) ಅನ್ವಯ ಆರು ತಿಂಗಳು ಕಾರಾ ಗೃಹ ವಾಸ ಅಥವಾ 3000/- ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಗತಕ್ಕದ್ದು.

ಈ ಅವಕಾಶಗಳ ಉದ್ದೇಶ ಪ್ರತಿಯೊಂದು ಸಹಕಾರಿ ಸಂಘ/ಸಹಕಾರಿ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಬೆಕು. ಸ್ವಾಯತ್ತತೆಯನ್ನು ದುರುಪಯೋಗ ಪಡಿಸಿಕೊಳ್ಳಬಾರದು ಎಂದು.

ಸಂಯುಕ್ತ ಸಹಕಾರಿ ತನ್ನ ಶಾಸನಾತ್ಮಕ ಜವಾಬ್ದಾರಿಗಳಲ್ಲಿ ಅಂಕಿ ಅಂಶಗಳ ಬ್ಯಾಂಕಾಗಿ ಕೆಲಸ ಮಾಡಬೇಕೆಂದರೆ, ಪ್ರತಿಯೊಂದು ಸದಸ್ಯ ಸಹಕಾರಿ ಮೇಲ್ಕಂಡ ಮಾಹಿತಿ ನೀಡಿದಾಗ, ಅದನ್ನು ಕ್ರೋಡೀಕರಿಸಿ, ವರ್ಷಕ್ಕೊಮ್ಮೆ ಪ್ರಕಟ ಪಡಿಸಿದರೆ, ಸಹಕಾರಿ ಕಾರ್ಯನಿರ್ವಹಣೆ ಬಗ್ಗೆ ಸರ್ಕಾರಕ್ಕೆ, ಸದಸ್ಯ ಸಹಕಾರಿಗಳು ಮತ್ತು ಸಾರ್ವಜನಿಕರಿಗೆ, ಸಹಕಾರಿ ಆಂದೋಲನದ ಮಾಹಿತಿ ಸಿಗಲೆಂದು. ಆದ್ದರಿಂದ ಇದನ್ನು ನಿರ್ವಹಿಸುವ ಜವಾಬ್ದಾರಿ ಸೌಹಾರ್ದ ಕಾಯಿದೆಯ "ಸಂಯುಕ್ತ ಸಹಕಾರಿ" ನಿರ್ವಹಿಸಬೇಕು.

# ಅಧ್ಯಾಯ – 7.5

# ಸಹಕಾರಿಯ ಮುಖ್ಯಕಾರ್ಯನಿರ್ವಾಹಕ

**ಕಲಂ.61(2) : ಸಂಯುಕ್ತ ಸಹಕಾರಿಯ ನೌಕರರು :–**

ಮುಖ್ಯಕಾರ್ಯನಿರ್ವಾಹಕನು ಉಪವಿಧಿಗಳ ಅನುಸಾರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು

(ಎ) ಸಂಯುಕ್ತ ಸಹಕಾರಿಯ ದೈನಂದಿನ ವ್ಯವಹಾರಗಳ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು;

(ಬಿ) ಸಹಕಾರಿಯ ಪರವಾಗಿ ದಾವೆ ಹೂಡುವ ಮತ್ತು ಸಹಕಾರಿಯ ಪರವಾಗಿ ದಾವೆಗೆ ಗುರಿಯಾಗುವ ವ್ಯಕ್ತಿಯಾಗಿರತಕ್ಕದ್ದು;

(ಸಿ) ಚೆಕ್ಕುಗಳಿಗೆ ಮತ್ತು ಇತರ ವರ್ಗಾವಣೀಯ ಪತ್ರಗಳಿಗೆ ಹಿಂಬರಹ ಮಾಡಲು ಸಹಿ ಮಾಡಲು ಅವುಗಳನ್ನು ವರ್ಗಾಯಿಸಲು ಮತ್ತು ಸಂಯುಕ್ತ ಸಹಕಾರಿಯ ಬ್ಯಾಂಕ್ ಲೆಕ್ಕಗಳನ್ನು ಪ್ರವರ್ತಿಸಲು ಸಂಯುಕ್ತ ಸಹಕಾರಿಯ ಪರವಾಗಿ ಅಧಿಕಾರಗಳನ್ನು ಹೊಂದಿರತಕ್ಕದ್ದು;

(ಡಿ) ನೌಕರರ ನೇಮಕಾತಿಗೆ ಹಾಗೂ ನೌಕರರ ಶಿಸ್ತು, ಕಾರ್ಯನಿರ್ವಹಣೆ ಮತ್ತು ಕಲ್ಯಾಣವನ್ನು ಖಚಿತ ಪಡಿಸಿ ಕೊಳ್ಳುವುದಕ್ಕೆ ಜವಾಬ್ದಾರನಾಗಿರತಕ್ಕದ್ದು;

(ಇ) ಸಂಯುಕ್ತ ಸಹಕಾರಿಯ ಪರವಾಗಿ ಒಪ್ಪಂದ ಅಥವಾ ಕರಾರು ಮಾಡಿಕೊಳ್ಳುವ ವ್ಯಕ್ತಿಯಾಗಿರತಕ್ಕದ್ದು;

(ಎಫ್) ಸಂಯುಕ್ತ ಸಹಕಾರಿಯ ದಾಖಲೆ ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವ ವ್ಯವಸ್ಥೆ ಮಾಡತಕ್ಕದ್ದು;

(ಜಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ಸಮಯದೊಳಗೆ ಮಂಡಳಿಯ ಅನುಮೋದನೆಗಾಗಿ ಕರಡು ವಾರ್ಷಿಕ ವರದಿ ಮತ್ತು ಆರ್ಥಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು;

(ಹೆಚ್) ಅಧ್ಯಕ್ಷ ಅಥವಾ ಸಭಾಪತಿಯೊಂದಿಗೆ ಸಮಾಲೋಚನೆ ನಡೆಸಿ, ಉಪವಿಧಿಗಳ ಅನುಸಾರ ಮಂಡಳಿಗಳ ಸಭೆಗಳನ್ನು ಮತ್ತು ಸಾಮಾನ್ಯ ನಿಕಾಯದ ಸಭೆಗಳನ್ನು ನಡೆಸತಕ್ಕದ್ದು ಮತ್ತೆ ಅದರ ವ್ಯವಹರಣೆಗಳನ್ನು ದಾಖಲು ಮಾಡತಕ್ಕದ್ದು;

(ಐ) ಕಾರ್ಯನೀತಿಗಳು ಮತ್ತು ಯೋಜನೆಗಳನ್ನು ರೂಪಿಸುವುದಕ್ಕೆ ಮಂಡಳಿಗೆ ಸಹಾಯ ಮಾಡತಕ್ಕದ್ದು;

(ಜೆ) ಮಂಡಳಿಗೆ ಜವಾಬ್ದಾರನಾಗಿರತಕ್ಕದ್ದು;

(ಕೆ) ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೆ ಅಗತ್ಯವಾದ ಮಾಹಿತಿಯನ್ನು ಮಂಡಳಿಗೆ ಒದಗಿಸತಕ್ಕದ್ದು;

[(ಎಲ್) ಸಂಯುಕ್ತ ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಆರ್ಥಿಕ ತಃಖ್ತೆಗಳನ್ನು, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ತಯಾರಿಸಿ ಮಂಡಳಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಗಳೆ ಲೆಕ್ಕ ಪರಿಶೋಧಕರಿಗೆ ಒದಗಿಸತಕ್ಕದ್ದು;

(ಎಲ್–1) ಲೆಕ್ಕಪರಿಶೋಧನಾ ವರದಿಯಲ್ಲಿ ಪತ್ತೆ ಹಚ್ಚಲಾದ ಲೋಪದೋಷಗಳನ್ನು ಸರಿಪಡಿಸಲು ತೆಗೆದು ಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮಕೈಗೊಳ್ಳತಕ್ಕದ್ದು;

(ಎಲ್–2) ವಿಚಾರಣಾ ವರದಿಯಲ್ಲಿ ಪತ್ತೆ ಹಚ್ಚಲಾದ ಲೋಪದೋಷಗಳು ಏನಾದರೂ ಇದ್ದರೆ ಅವುಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮಕೈಗೊಳ್ಳತಕ್ಕದ್ದು;

(ಎಲ್–3) ಮಂಡಳಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ಸಹಕಾರ ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು;

(ಎಲ್–4) ಪ್ರಕರಣ 64ಎ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು;] ಮತ್ತು

(ಎಂ) ಮಂಡಳಿಯ ಮತ್ತು ಸಾಮಾನ್ಯ ನಿಕಾಯದ ನಿರ್ಣಯದ ಮೂಲಕ ಪ್ರಾಧಿಕೃತವಾದ ಇತರ ಯಾವುದೇ ಪ್ರಕಾರ್ಯವನ್ನು

ನೆರವೇರಿಸತಕ್ಕದ್ದು.

**ನಿಯಮ 6ಜೆ : ಮುಖ್ಯಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು :–**

ಅಧಿನಿಯಮದ ಪ್ರಕರಣ 31 ಮತ್ತು 61ರ ಉಪಪ್ರಕರಣಗಳಲ್ಲಿ ಉಕ್ತವಾದ ಅಧಿಕಾರಗಳ ಜೊತೆಗೆ, ಮುಖ್ಯ ಕಾರ್ಯನಿರ್ವಾಹಕನು ಈ ಕೆಳಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

1) ಸಹಕಾರಿಯ ಅಧಿಕೃತ ಮತ್ತು ಸಾಮಾನ್ಯ ವ್ಯವಹಾರಗಳನ್ನು ನಡೆಸತಕ್ಕದ್ದು;

2) ಸಹಕಾರಿಯ ಎಲ್ಲಾ ದಾಖಲೆಗಳನ್ನು ಮತ್ತು ದಾಸ್ತಾವೇಜುಗಳ ಅಭಿರಕ್ಷಕನಾಗಿರತಕ್ಕದ್ದು ಮತ್ತು ಸಹಕಾರಿಯ ಲೆಕ್ಕಪತ್ರಗಳ, ವಿವಿಧ ಪುಸ್ತಕಗಳ ಮತ್ತು ದಾಖಲೆಗಳ ನಿಖರವಾದ ನಿರ್ವಹಣೆಗೆ ವ್ಯವಸ್ಥೆ ಮಾಡತಕ್ಕದ್ದು, ಅಧಿನಿಯಮದ, ನಿಯಮಗಳ, ಮತ್ತು ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಹಾಗೂ ರಿಜಿಸ್ಟ್ರಾರನು ಅಥವಾ ಸಂಯುಕ್ತ ಸಹಕಾರಿಯು ಅಥವಾ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ದೇಶಿಸಿದಂತೆ ಸಲ್ಲಿಸಬೇಕಾದ ನಿಯತಕಾಲಿಕ ತಃಖ್ತೆಗಳನ್ನು ಮತ್ತು ಅಧಿಕೃತ ವರದಿಗಳನ್ನು ಸರಿಯಾಗಿ ತಯಾರಿಸಿ ಸಕಾಲದಲ್ಲಿ ಸಲ್ಲಿಸತಕ್ಕದ್ದು.

3) ಸಹಕಾರಿಯ ಕಾರ್ಯನಿರ್ವಹಣೆ ಮತ್ತು ವ್ಯವಹಾರಗಳ ಗುಣಮಟ್ಟವನ್ನು ನಿರ್ಧರಿಸಲು ಅಗತ್ಯವಾದ ನಿಯತಕಾಲಿಕ ಮಾಹಿತಿಯನ್ನು ಆಡಳಿತ ಮಂಡಳಿಗೆ ಒದಗಿಸತಕ್ಕದ್ದು.

4) ಸಹಕಾರಿಯ ದಿನನಿತ್ಯದ ನಿರ್ವಹಣೆ ಮತ್ತು ವ್ಯವಹಾರದ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು;

5) ರಜೆ ಮಂಜೂರಾತಿ ಮಾಡುವುದು ಮತ್ತು ಯಾವುದೇ ಶಿಕ್ಷೆ ವಿಧಿಸುವುದು ಅಥವಾ ಅಮಾನತ್ತಿನಲ್ಲಿಡುವುದು ಸೇರಿದಂತೆ ಸಹಕಾರಿಯ ಎಲ್ಲಾ ನೌಕರರ ಮೇಲೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರತಕ್ಕದ್ದು;

ಪರಂತು ಸಹಕಾರಿಯ ಉಪವಿಧಿಗಳಲ್ಲಿ ಅಥವಾ ಸೇವಾ ನಿಬಂಧನೆಗಳಲ್ಲಿ ಒಬ್ಬ ನೌಕರನನ್ನು ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡುವ ಅಥವಾ ಯಾವುದೇ ಶಿಕ್ಷೆ ವಿಧಿಸುವ ಅಧಿಕಾರವನ್ನು ಸ್ಪಷ್ಟವಾಗಿ ಕೊಡಮಾಡದಿರುವಲ್ಲಿ, ಅಂಥ ಅಮಾನತ್ತು ಅಥವಾ ಶಿಕ್ಷೆಯನ್ನು ಆಡಳಿತ ಮಂಡಳಿಯ ಅನುಮೋದನೆ ಪಡೆದು ವಿಧಿಸಲು ಜವಾಬ್ದಾರನಾಗಿರತಕ್ಕದ್ದು.

6) ಸಹಕಾರಿಯ ನಗದು, ದಾಸ್ತಾನು ಮತ್ತು ಇತರ ಆಸ್ತಿಗಳ ಸರಿಯಾದ ನಿರ್ವಹಣೆ ಮತ್ತು ಅಭಿರಕ್ಷೆಗೆ ವ್ಯವಸ್ಥೆ ಮಾಡತಕ್ಕದ್ದು;

7) ಸಹಕಾರಿಯ ನಿಧಿಗಳಿಂದ ವ್ಯವಸ್ಥಾಪನಾ ಮತ್ತು ಕಾರ್ಯನಿರ್ವಹಣಾ ವೆಚ್ಚಗಳನ್ನು ಪಾವತಿಸತಕ್ಕದ್ದು;

8) ಅಜೆಂಡಾ ಮತ್ತು ಸದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟೀಸು ನೀಡತಕ್ಕದ್ದು;

9) ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು ಸದರಿ ಸಭೆಗಳಲ್ಲಿ ಅಗತ್ಯ ಪಡಿಸುವ ಕಾಗದ ಪತ್ರಗಳನ್ನು ಹಾಜರುಪಡಿಸತಕ್ಕದ್ದು ಹಾಗೂ ಸಭಾಪತಿಯೊಡನೆ ಅಂಥ ಸಭೆಗಳ ನಡವಳಿಗಳಿಗೆ ಸಹಿ ಮಾಡತಕ್ಕದ್ದು.

10) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಹಿಂದಿನ ವರ್ಷದ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ತತ್ಸಂಬಂಧದ ಷೆಡ್ಯೂಲುಗಳನ್ನು ಅಧಿಕೃತ ವರದಿಗಳನ್ನು ಮತ್ತು ಇತರ ತಃಖ್ತೆಗಳ ಸಹಿತ, ತಯಾರಿಸಿ ಆಡಳಿತ ಮಂಡಳಿಯ ಅನುಮೋದನೆ ಪಡೆದು ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಮುಂದೆ ಮಂಡಿಸತಕ್ಕದ್ದು;

11) ಅಧಿನಿಯಮದ ಪ್ರಕರಣ 33 ಅಥವಾ 64ರ ಲೆಕ್ಕಪರಿಶೋಧನಾ ವರದಿಗಳನ್ನು ಪ್ರಕರಣ 35 ಅಥವಾ 65ರ ವಿಚಾರಣಾ ವರದಿಗಳನ್ನು ಅವುಗಳಲ್ಲಿ ಉಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಆಡಳಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು;

12) ಲೆಕ್ಕಪರಿಶೋಧನಾ ಅಥವಾ ವಿಚಾರಣಾ ವರದಿಗಳಲ್ಲಿ ತಿಳಿಸಲಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡ ಕ್ರಮಗಳನ್ನುಳ್ಳ ಅನುಪಾಲನಾ ವರದಿಗೆ ಆಡಳಿತ ಮಂಡಳಿಯ ಅನುಮೋದನೆ ಪಡೆದು ಪಾಲನಾ ವರದಿ ಕಳುಹಿಸತಕ್ಕದ್ದು. ಸದರಿ ಲೋಪದೋಷಗಳು ಸರಿಪಡಿಸಲ್ಪಡುವವರೆಗೆ ಮತ್ತು ಅಂಥಾ ಅಕ್ರಮಗಳು ನೇರ್ಪಡಿಸಲ್ಪಡುವವರೆಗೆ, ಅಂಥಾ ಪಾಲನಾ ವರದಿಗಳನ್ನು ನಿಯತಕಾಲಿಕವಾಗಿ, ಪ್ರಸಂಗಾನುಸಾರ ರಿಜಿಸ್ಟ್ರಾರನಿಗೆ ಅಥವಾ ಸಂಯುಕ್ತ ಸಹಕಾರಿಗೆ ಅಥವಾ ಲೆಕ್ಕಪರಿಶೋಧನಾ ನಿರ್ದೇಶಕನಿಗೆ

ಸಲ್ಲಿಸುವುದನ್ನು ಮುಂದುವರಿಸತಕ್ಕದ್ದು;

13) ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟು ಸಹಕಾರಿ ವತಿಯಿಂದ ಅಥವಾ ಸಹಕಾರಿಗೆ ವಿರುದ್ಧವಾಗಿ ಹಾಕಲ್ಪಟ್ಟ ದಾವಾ ಮತ್ತು ಇತರೆ ಕಾನೂನು ಕ್ರಮಗಳನ್ನು ಜರುಗಿಸುವುದು, ಸಮರ್ಥಿಸಿಕೊಳ್ಳುವುದು, ನಡೆಸುವುದು, ಬಗೆಹರಿಸುವುದು ಅಥವಾ ಕೈಬಿಡುವುದು;

14) ಸಹಕಾರಿಯ ಯಾವುದೇ ನಿರ್ದೇಶಕನು ಕಾಯ್ದೆ, ನಿಯಮ ಅಥವಾ ಉಪವಿಧಿಯನ್ವಯ ತಮ್ಮ ಪದದಲ್ಲಿ ಮುಂದುವರೆಯಲು ಅನರ್ಹರಾದರೆ ಸದರಿ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ವರದಿಸುವುದು.

15) ಕಾಲಕಾಲಕ್ಕೆ ರಿಜಿಸ್ಟ್ರಾರನು ಅಥವಾ ಸಂಯುಕ್ತ ಸಹಕಾರಿಯು ಅಗತ್ಯ ಪಡಿಸುವಂತೆ ಸಹಕಾರಿಯ ವ್ಯವಹಾರಕ್ಕೆ ಸಂಬಂಧಪಟ್ಟ ಅಧಿಕೃತ ವರದಿಗಳನ್ನು, ತಃಖ್ತೆಗಳನ್ನು ಮತ್ತು ಮಾಹಿತಿಗಳನ್ನು ಸಲ್ಲಿಸುವುದು;

16) ಅಪೆಕ್ಸ್ ಸಹಕಾರಿಯ ಸಂಬಂಧದಲ್ಲಿ, ಮುಖ್ಯಕಾರ್ಯನಿರ್ವಾಹಕನು:–

**(i)** ಅಧ್ಯಕ್ಷನೊಡನೆ ಸಮಾಲೋಚಿಸಿ ನೌಕರರನ್ನು ವರ್ಗಾಯಿಸುವ ಅಧಿಕಾರ ಹೊಂದಿರತಕ್ಕದ್ದು;

**(ii)** ಆತನ ವಿರುದ್ಧ ಶಿಸ್ತಿನ ವಿಚಾರಣೆಯನ್ನು ನಡೆಸಲು ಉದ್ದೇಶಿಸಿರುವ ಅಥವಾ ವಿಚಾರಣೆ ನಡೆಯುತ್ತಿರುವಾಗ, ಅಂಥಾ ನೌಕರನನ್ನು ಅಮಾನತ್ತಿನಲ್ಲಿಡಬಹುದು;

**(iii)** ಅಧಿನಿಯಮ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಆದರೆ ಆಡಳಿತ ಮಂಡಳಿಯ ಅನುಮೋದನೆ ಪಡೆದು ಅಗತ್ಯವಾದ ಸಿಬ್ಬಂದಿಯನ್ನು ನೇಮಕ ಮಾಡಲು ಅಧಿಕಾರ ಹೊಂದಿರತಕ್ಕದ್ದು;

**(iv)** ಆಡಳಿತ ಮಂಡಳಿಯು ನೀಡುವ ಮಾರ್ಗಸೂಚಿಗಳಿಗೊಳಪಟ್ಟು ಮಾತುಕತೆ ನಡೆಸಬಹುದು ಮತ್ತು ಒಪ್ಪಂದಗಳನ್ನು ಜಾರಿಗೊಳಿಸಬಹುದು;

**(v)** ಸಹಕಾರಿಯ ನೌಕರರ ಅಧಿಕಾರ, ಪ್ರಕಾರ್ಯ ಮತ್ತು ಕರ್ತವ್ಯಗಳನ್ನು ನಿರ್ದಿಷ್ಟ ಪಡಿಸತಕ್ಕದ್ದು;

**(vi)** ತನ್ನ ಯಾವುದೇ ಅಧಿಕಾರವನ್ನು ಬೇರೆ ನೌಕರನಿಗೆ ಪ್ರತ್ಯಾಯೋಜಿಸಬಹುದು;

ಒಂದು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಸಹಕಾರಿಗೆ ಅತಿ ಪ್ರಮುಖವಾದ ವ್ಯಕ್ತಿ. ಏಕೆಂದರೆ ಸಹಕಾರಿ ಮತ್ತು ಸಂಯುಕ್ತ ಸಹಕಾರಿಯ ಮಂಡಳಿ ಕಾಯಿದೆ ಕಲಂ.23, 27 ರಲ್ಲಿನ ಸಾಮಾನ್ಯ ಸಭೆ ಮತ್ತು ಮಂಡಳಿ ತೆಗೆದುಕೊಂಡ ತೀರ್ಮಾನಗಳನ್ನು ಜಾರಿ ಮಾಡುವ ಪ್ರಮುಖ ಜವಾಬ್ದಾರಿ ಇದೆ. ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ಸಂಯುಕ್ತ ಸಹಕಾರಿ ಕಲಂ.53(7) ರಡಿ ತೆಗೆದುಕೊಂಡ ಶಾಸನಾತ್ಮಕ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಮತ್ತು ಕಲಂ.56ರಲ್ಲಿ ತೆಗೆದುಕೊಂಡ ಮಂಡಳಿ ತೀರ್ಮಾನಗಳನ್ನು ಜಾರಿ ಮಾಡುವ ಜವಾಬ್ದಾರಿ ವಿಹಿತವಾಗಿದೆ.

ಒಂದು ಸಹಕಾರಿ/ಸಂಯುಕ್ತ ಸಹಕಾರಿ ಮುಖ್ಯಕಾರ್ಯನಿರ್ವಾಹಕನನ್ನು ನೇಮಿಸಿಕೊಳ್ಳುವಾಗ, ಸಾಮಾನ್ಯ ಸಭೆ ಮತ್ತೆ ಮಂಡಳಿ ಸಭೆಯ ಸದಸ್ಯರಿಗೆ ತೀರ್ಮಾನ ತೆಗೆದುಕೊಳ್ಳಲು ಅವಶ್ಯಕ/ಸಮರ್ಪಕ/ವೃತ್ತಿಪರ/ಪಾರದರ್ಶಕ/ ಟಿಪ್ಪಣಿ/ ಸಲಹೆ ಕೊಡಲು ಶಕ್ತನಾಗಿದ್ದಾನೆಂದು ನೇಮಿಸಿಕೊಳ್ಳುತ್ತದೆ. ಕಾಯಿದೆ ಮತ್ತು ನಿಯಮಗಳಲ್ಲಿ ಮುಖ್ಯಕಾರ್ಯನಿರ್ವಾಹಕನಿಗೆ ಅಗತ್ಯವಾದ ವಿದ್ಯಾರ್ಹತೆ ಮತ್ತು ಅನುಭವದ ಬಗ್ಗೆ ಶರತ್ತುಗಳನ್ನು ವಿಧಿಸಿಲ್ಲ. ಇದರ ಮೂಲ ಉದ್ದೇಶ ಸೌಹಾರ್ದ ಕಾಯಿದೆಯಡಿ ನೋಂದಾವಣೆ ಮಾಡುವ ಸಹಕಾರಿಗಳ ಪ್ರಭುದ್ದರು, ಜ್ಞಾನವುಳ್ಳವರು ಮತ್ತು ಸ್ವಯಂ ಆಡಳಿತ ನಡೆಸಲು ಶಕ್ತರಿದ್ದಾರೆಂದು ಸರ್ಕಾರ ಗುರುತಿಸಿದ್ದು. ಒಂದು ಸಹಕಾರಿ ನಡೆಸಿಕೊಂಡು ಸ್ವತಂತ್ರವಾಗಿ ನಿರ್ವಹಿಸಲು ಶಕ್ತರು ಮತ್ತು ಸಹಕಾರಿ ನೌಕರರನ್ನು ನೇಮಿಸುವಾಗ ಸಹಕಾರಿಯೂ ಅದರ ಹಿತಾಸಕ್ತಿಗೆ ಪೂರಕವಾಗಿ ಆಯ್ಕೆಯನ್ನು ಮಾಡುತ್ತಾರೆಂಬ ನಂಬಿಕೆಯಿಂದ.

ಸಹಕಾರಿಯ ಮಂಡಳಿ ತನ್ನ ಸದಸ್ಯರ ಅವಶ್ಯಕತೆಗಳನ್ನು ಪೂರೈಸಲು ತೆಗೆದುಕ್ಕೊಳ್ಳುವ ತಾತ್ವಿಕ ತೀರ್ಮಾನಗಳಲ್ಲಿ, ಸಮರ್ಪಕ ಮಾಹಿತಿಯನ್ನು, ಅಂದರೆ ವಿಷಯ ಮಂಡನೆಯಿಂದ, ಸಭೆಗೆ ಅವಶ್ಯಕ ಮಾಹಿತಿ, ಹಾಗೂ ಟಿಪ್ಪಣಿ ನೀಡುವ ಸಾಮರ್ಥ್ಯವನ್ನು ಗಮನಿಸಿ ನೇಮಕ ಮಾಡಿಕ್ಕೊಳ್ಳಬೇಕು. ಚುನಾಯಿತ ಪ್ರತಿನಿಧಿಗಳು ಸಹಕಾರಿ ನಿರ್ವಹಿಸುವ ಪ್ರತಿಯೊಂದು ಸೇವೆಗಳಲ್ಲಿ ಪರಿಣಿತಿ ಹೊಂದಿರಬೇಕೆಂದಿಲ್ಲ. ಆದರೆ ಸದಸ್ಯರಿಗೆ ಅವಶ್ಯಕವಾದ ಎಲ್ಲಾ ಸೇವೆ ನೀಡಲು ಮನೋಬಲ ಇದ್ದರೆ, ಅದನ್ನು ಕಾರ್ಯರೂಪಕ್ಕೆ ತರಲು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಸೇವೆ ಅವಶ್ಯಕ. ಅದಕ್ಕಾಗಿ, ಅವನ ನೇಮಕಾತಿ ಸಂದರ್ಭದಲ್ಲಿ ಅವಶ್ಯಕ ವಿದ್ಯಾರ್ಹತೆ, ಅನುಭವ, ಮನಃ ಶಕ್ತಿ, ನಿಸ್ವಾರ್ಥ ಮನೋಭಾವ, ಜವಾಬ್ದಾರಿ ತೆಗೆದುಕ್ಕೊಳ್ಳುವ ಶಕ್ತಿ ಮತ್ತು ಸೂಕ್ತ ಮಾರ್ಗದರ್ಶನ ನೀಡುವ ಜ್ಞಾನ ಇದೆ ಎಂದು ಪರಿಗಣಿಸಿದ ನಂತರವೇ, ಮುಖ್ಯ ಕಾರ್ಯನಿರ್ವಾಹಕನ ಆಯ್ಕೆ ನಡೆಯಬೇಕು. ಈ ಆಯ್ಕೆಯಲ್ಲಿ ಪಾರದರ್ಶಕ ನೀತಿ ಅನುಸರಿಸಿ ವೃತ್ತಿಪರ ವ್ಯಕ್ತಿ ಆಯ್ಕೆ ಮಾಡಲು ನಿಯಮ 6ಎಲ್ ನಲ್ಲಿ ಒಂದು ಆಯ್ಕೆ ಸಮಿತಿ ರಚನೆ

ಮಾಡಲಾಗಿದೆ. ಈ ಸಮಿತಿಯಲ್ಲಿ ಬಾಹ್ಯ ತಜ್ಞರು ಇರುವುದರಿಂದ ಮುಖ್ಯಕಾರ್ಯನಿರ್ವಾಹಕನ ಆಯ್ಕೆ ಪಾರದರ್ಶಕವಾಗಿ ನಡೆಯುತ್ತದೆಂಬ ಭಾವನೆ. ಆಯ್ಕೆ ಸಮಯದಲ್ಲಿ ಸಮಿತಿ ಸದಸ್ಯರು ಜಾತಿ/ಮತದ ಆಧಾರದ ಆಯ್ಕೆಗೆ ಬದಲಾಗಿ, ಅರ್ಹ ವ್ಯಕ್ತಿ ಆಯ್ಕೆ ಮಾಡುವ ಜವಾಬ್ದಾರಿ ಇದೆ.

**ಮುಖ್ಯಕಾರ್ಯನಿರ್ವಾಹಕ ಅಂದರೆ ಯಾರು?**

ಒಂದು ಸಹಕಾರಿಯನ್ನು ಪ್ರತಿನಿಧಿಸುವ ಕಾರ್ಯಾಂಗದ ಮುಖ್ಯಸ್ತ, ಸಹಕಾರಿಯ ಮಂಡಳಿ ಸಾಮಾನ್ಯ ಸಭೆ ತೆಗೆದುಕ್ಕೊಳ್ಳುವ ಎಲ್ಲಾ ತೀರ್ಮಾನಗಳನ್ನು ಜಾರಿ ಮಾಡುವ ಜವಾಬ್ದಾರಿ ಇರುವ ವ್ಯಕ್ತಿ. ಸಹಕಾರಿಗೆ ತೀರ್ಮಾನ ತೆಗೆದುಕ್ಕೊಳ್ಳಲು ಅಗತ್ಯವಾದ ಟಿಪ್ಪಣಿಗಳನ್ನು ನೀಡಿ, ಸಹಕಾರ ನೀಡುವ ಪ್ರಮುಖ ವ್ಯಕ್ತಿ. ಸೌಹಾರ್ದ ಕಾಯಿದೆಯಡಿ ನಿಗದಿ ಪಡಿಸಿದ ಸಭೆಗಳನ್ನು ಕರೆಯುವ ಜವಾಬ್ದಾರಿ ಹೊಂದಿರುವ ವ್ಯಕ್ತಿ, ಸಭೆಗಳಲ್ಲಿ ತೆಗೆದುಕ್ಕೊಳ್ಳುವ ಎಲ್ಲಾ ನಡವಳಿಕೆಗಳನ್ನು ಹಾಗೂ ತೀರ್ಮಾನಗಳನ್ನು ದಾಖಲೆ ಮಾಡುವ ಜವಾಬ್ದಾರಿ ಇರುವ ವ್ಯಕ್ತಿ. ಮಂಡಳಿ ಮತ್ತು ಸಾಮಾನ್ಯ ಸಭಾ ಸದಸ್ಯರಿಗೆ ಸೌಹಾರ್ದ ಕಾಯಿದೆ ಮತ್ತು ನಿಯಮಗಳನ್ನು ಗೊತ್ತು ಪಡಿಸಿದ ನಿಬಂಧನೆ, ನಿರ್ಬಂಧಗಳು ಮತ್ತು ಶರತ್ತುಗಳನ್ನು ಸಭಾ ಗಮನಕ್ಕೆ ತರುವ ವ್ಯಕ್ತಿ. ಕಾಯಿದೆಯಲ್ಲಿ ನಿಗದಿ ಪಡಿಸಿದಂತೆ ನಡೆಯದಿದ್ದರೆ/ಪಾಲಿಸದಿದ್ದರೆ ಆಗುವ ಪರಿಣಾಮಗಳನ್ನು ಸಭಾ ಗಮನಕ್ಕೆ ತರುವ ವ್ಯಕ್ತಿ. ಕಾಯಿದೆ ಮತ್ತು ನಿಯಮಗಳಲ್ಲಿ ನಿರ್ಬಂಧಿಸಿದ ವಿಷಯಗಳ ಮೇಲೆ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಸಂಯುಕ್ತ ಸಹಕಾರಿ ಮತ್ತು ನಿಬಂಧಕರ ಗಮನಕ್ಕೆ ತರುವ ವ್ಯಕ್ತಿ. ಸಹಕಾರಿಯ ದಿನ ನಿತ್ಯದ ವ್ಯವಹಾರ ಮತ್ತು ಆಡಳಿತ ನಿರ್ವಹಿಸುವ ವ್ಯಕ್ತಿ. [ಕಲಂ.31(2)] ಸಹಕಾರಿಯು ಸಮಸ್ತ ಚರ ಮತ್ತು ಸ್ಥಿರಾಸ್ತಿಯನ್ನು ಸುಸ್ತಿರವಾಗಿ ನಿರ್ವಹಿಸುವ ವ್ಯಕ್ತಿ. ಇದರ ಜೊತೆಗೆ ಕಾಯಿದೆಯಲ್ಲಿ ನಿಗದಿ ಪಡಿಸಿದ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲೇಬೇಕಾದ ವ್ಯಕ್ತಿ.

**ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿಗಳು :**

ಕಾಯಿದೆ ಕಲಂ.31(7) ರಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಹಿಸಬೇಕಾದ ವಿವರಗಳನ್ನು ನೀಡಲಾಗಿದೆ. ಸಹಕಾರಿಯ ಸದಸ್ಯರಿಗೆ ಅವಶ್ಯಕವಾದ ಸೇವೆಗಳನ್ನು ಪಟ್ಟಿ ಮಾಡಿ, ಅದಕ್ಕೆ ಸಹಕಾರಿ ನಿರ್ವಹಿಸಬೇಕಾದ ಕಾರ್ಯಗಳನ್ನು ಗುರುತಿಸಿ, ಮಂಡಳಿ ಮತ್ತು ಸಾಮಾನ್ಯ ಸಭೆಗೆ ಮಂಡಿಸಿ, ತಾತ್ವಿಕ ನೀತಿಗಳನ್ನು ರೂಪಿಸಲು ಕ್ರಮ ವಿಡಬೇಕು. ತೀರ್ಮಾನ ತೆಗೆದುಕ್ಕೊಳ್ಳುವಾಗ ಸದಸ್ಯರಿಗೆ ಅವಶ್ಯಕವಾದ ಮಾಹಿತಿಯನ್ನು ನೀಡುವುದು ಮತ್ತು ಆ ನೀತಿ ರೂಪಿಸಿದ ನಂತರ, ಅವುಗಳನ್ನು ಜಾರಿ ಮಾಡಲು ಕಾರ್ಯಾಂಗಕ್ಕೆ ನಿಯಮಗಳನ್ನು ರೂಪಿಸಿಕೊಡಲು ಅವಶ್ಯಕ ಮಾಹಿತಿ ನೀಡಬೇಕು.

ಸಹಕಾರಿಗೆ ಅವಶ್ಯಕವಾದ ನೌಕರರನ್ನು ನೇಮಕ ಮಾಡಲು ಮತ್ತು ಅಂತಹ ವ್ಯಕ್ತಿಗಳಿಗೆ ನಿಗದಿ ಪಡಿಸಬೇಕಾದ ವಿದ್ಯಾರ್ಹತೆ ಮತ್ತು ಅನುಭವ ನಿಗದಿ ಪಡಿಸಲು ಸಹಕರಿಸಬೇಕು ಮತ್ತು ನೇಮಕಾತಿ ಸಮಿತಿ ಲಿಖಿತ ಮತ್ತು ಮೌಖಿಕ ಪರೀಕ್ಷೆಗಳನ್ನು ನಡೆಸಲು, ಅದರ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಬೇಕು. ನೇಮಕಾತಿಗೆ ಬೇಕಾದ ನೀತಿ ನಿಯಮಗಳನ್ನು ರೂಪಿಸಲು ಸಹಕರಿಸಬೇಕು. ಲಿಖಿತ ಪರೀಕ್ಷೆಯನ್ನು ಯಾರಿಂದ ನಡೆಸಬೇಕು ಮತ್ತು ಆಯ್ಕೆ ಪಾರದರ್ಶಕ ವಾಗಿರುವಂತೆ ನೋಡಿಕ್ಕೊಳ್ಳಬೇಕು. ನೌಕರರ ನೇಮಕ ಮಾಡಲು ಸಹಕಾರಿಗೆ ಅವಶ್ಯಕವಾದ ಸಂಪನ್ಮೂಲ ಇದೆ ಎಂಬುದನ್ನು ಮತ್ತು ಸಿಬ್ಬಂದಿ ವೆಚ್ಚ ಸಹಕಾರಿಯ ಲಾಭಾಂಶದಿಂದ ಡಿವಿಡೆಂಡ್ ಹಂಚಿದ ನಂತರದ ಸಂಪನ್ಮೂಲದಿಂದ ನಿರ್ವಹಿಸಲು ಸಾದ್ಯ ಎಂಬುದನ್ನು ಮಂಡಳಿ ಮತ್ತು ಸಾಮಾನ್ಯ ಸಭೆಗೆ ಮನವರಿಕೆ ಮಾಡಬೇಕು.

ಇದೇ ರೀತಿ ಸಹಕಾರಿಯ ದಿನ ನಿತ್ಯದ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಹಣಕಾಸು ವ್ಯವಹಾರದ ದಾಖಲೆಗಳನ್ನು ಬರೆಯುವ/ಬರೆಸುವ ವ್ಯವಸ್ಥೆ ಮಾಡಬೇಕು. ಸಹಕಾರಿಯ ಲೆಕ್ಕ ಪತ್ರಗಳ ಆಧಾರದ ಮೇಲೆ ಸಹಕಾರಿ ವರ್ಷ ಮುಗಿದ ಒಂದು ತಿಂಗಳಲ್ಲಿ, ಆರ್ಥಿಕ ತಃಖ್ತೆಗಳನ್ನು ಅಂತಿಮಗೊಳಿಸಿ, ಮಂಡಳಿ ಒಪ್ಪಿಗೆ ಪಡೆದು, ಸಾಮಾನ್ಯ ಸಭೆ ನೇಮಿಸಿದ ಲೆಕ್ಕಾಧಿಕಾರಿಗೆ, ಸಂಯುಕ್ತ ಸಹಕಾರಿಗೆ ಮತ್ತು ನಿಬಂಧಕರಿಗೆ ಸಲ್ಲಿಸುವ ಜವಾಬ್ದಾರಿ ಇರತಕ್ಕದ್ದು. ಲೆಕ್ಕ ತಪಾಸಣಾ ವರದಿ ಪಡೆದು (ಸೆಪ್ಟೆಂಬರ್ 1ನೇ ತಾರೀಖಿನೊಳಗೆ) ಅನುಪಾಲನಾ ವರದಿ ಜೊತೆ ಆಡಳಿತ ಮಂಡಳಿ ಒಪ್ಪಿಗೆ ಪಡೆಯತಕ್ಕದ್ದು. ವಾರ್ಷಿಕ ಸಾಮಾನ್ಯ ಸಭೆಯು ಸೆಪ್ಟೆಂಬರ್ 25 ರೊಳಗೆ ಕರೆದು, ಅದಕ್ಕೆ ಪೂರಕವಾಗಿ, ಸುಸ್ತಿದಾರರು ಮತ್ತು ಅರ್ಹ ಮತದಾರರ ಪಟ್ಟಿ ತಯಾರಿಸಿ ಸಾಮಾನ್ಯ ಸಭೆಯಲ್ಲಿ ವಿಷಯಗಳ ಚರ್ಚೆ ನಂತರ ತೆಗೆದುಕ್ಕೊಳ್ಳುವ ತೀರ್ಮಾನಗಳಲ್ಲಿ ಅರ್ಹ ಮತದಾರರು ಮಾತ್ರ ಮತ ಚಲಾಯಿಸಿದ್ದಾರೆಂದು ನೋಡಿಕ್ಕೊಳ್ಳುವ ಜವಾಬ್ದಾರಿ. ಸಾಮಾನ್ಯ ಸಭೆಯನ್ನು ನಿಗದಿ ಪಡಿಸಿದ ಅವಧಿಯ ನೋಟೀಸ್, ಅದಕ್ಕೆ ಪೂರಕವಾದ ಮಾಹಿತಿ ಮತ್ತು ಕಲಂ.23 ರಲ್ಲಿ ನಿಗದಿ ಪಡಿಸಿದ ಎಲ್ಲಾ ವಿಷಯಗಳ ಮತ್ತು ಅದಕ್ಕೆ ಪೂರಕ ಮಾಹಿತಿ (ಟಿಪ್ಪಣಿ) ನೀಡಿ ಕರೆಯತಕ್ಕದ್ದು. ಸಾಮಾನ್ಯ ಸಭೆಗೆ ದಿನಾಂಕ ನಿಗದಿ ಪಡಿಸುವಾಗ, ಜುಲೈ ಅಥವಾ ಆಗಸ್ಟ್ ತಿಂಗಳಲ್ಲಿಯೇ ದಿನಾಂಕ ನಿಗದಿ ಪಡಿಸುವ ಜವಾಬ್ದಾರಿ

ಮತ್ತು ಸಾಮಾನ್ಯ ಸಭೆ ದಿನಾಂಕಕ್ಕೆ 45 ದಿವಸಗಳ ಪೂರ್ವದಲ್ಲಿ ಬಾಕಿ ತೀರುವಳಿ ನೋಟೀಸ್ ನೀಡುವ ಕ್ರಮ, ಅಂತಿಮ ಮತದಾರರ ಹಕ್ಕುಳ್ಳ ಸದಸ್ಯರ ಪಟ್ಟಿ ತಯಾರಿಸಿ, ಮಂಡಳಿ ಒಪ್ಪಿಗೆ ಪಡೆದು ಅಂತಿಮ ಪ್ರಕಟಣೆ ಹೊರಡಿಸತಕ್ಕದ್ದು. ಸಾಮಾನ್ಯ ಸಭೆ ನಡಾವಳಿಗಳನ್ನು ಯಥಾವತ್ತಾಗಿ, ನೈಜ್ಯವಾಗಿ ಮತ್ತು ಸತ್ಯವಾಗಿ ದಾಖಲಿಸುವುದು ನಡವಳಿಕೆಗಳಿಗೆ ಸಹಿ ಮಾಡಿ, ಸಭಾಧ್ಯಕ್ಷರ ಸಹಿ ಪಡೆಯುವುದು. ಸಭಾ ನಡವಳಿಗಳನ್ನು ಅಂತಿಮಗೊಳಿಸಿ ಮೂವತ್ತು ದಿವಸಗಳೊಳಗೆ ಸಂಯುಕ್ತ ಸಹಕಾರಿ ಮತ್ತು ನಿಬಂಧಕರಿಗೆ ರವಾನಿಸುವುದು. ಆದರೆ ಕಲಂ.34ರಲ್ಲಿ ನಿಬಂಧಕರಿಗೆ ಸೆಪ್ಟೆಂಬರ್ 30 ರೊಳಗೆ ಸಲ್ಲಿಸುವ ಮಾಹಿತಿಯಲ್ಲಿ ಆರ್ಥಿಕ ತಃಖ್ತೆಗಳನ್ನು ರವಾನಿಸಬೇಕೆಂದಿದೆ. ಸಾಮಾನ್ಯ ಸಭೆಯಲ್ಲಿ ಲೆಕ್ಕ ತಪಾಸಣಾ ವರದಿ, ಅನುಪಾಲನಾ ವರದಿ ಸಲ್ಲಿಸಲೇಬೇಕಿದ್ದು, ಮುವತ್ತು ದಿನಗಳೊಳಗೆ ಎಂದಿರುವುದಕ್ಕೆ ವಿರೋದಾ ಭಾಸವಾಗಬಹುದು. ಸಹಕಾರಿಯ ಚುನಾವಣೆ ಬಾಕಿಯಾಗುವ ಆರು ತಿಂಗಳ ಮೊದಲು ಸಹಕಾರ ಚುನಾವಣೆ ಪ್ರಾಧಿಕಾರದ ಜೊತೆ ಪತ್ರ ವ್ಯವಹಾರ ಮಾಡುವುದು ಮತ್ತು ಅದಕ್ಕೆ ಅವಶ್ಯಕವಾದ ಮಾಹಿತಿ ನೀಡುವುದು ಸಂಯುಕ್ತ ಸಹಕಾರಿ ಮತ್ತು ನಿಬಂಧಕರಿಗೆ ಕಲಂ.34 ರಡಿ ಏಳು ತಃಖ್ತೆಗಳನ್ನು ಸೆಪ್ಟೆಂಬರ್ 30 ರೊಳಗೆ ಸಲ್ಲಿಸುವುದು. ಸಹಕಾರಿ ನೌಕರರಿಗೆ ಕೆಲಸ ಹಂಚಿಕೆ ಮಾಡುವುದು ಮತ್ತಿತರೆ ಸಭೆಗಳು ಮತ್ತು ನಡಾವಳಿಗಳನ್ನು ನಿಯಮ 6ಸಿ, ಅಡಿ ಮತ್ತು 6ಇ ನಲ್ಲಿ ನಿಗದಿ ಪಡಿಸಿದ ನೀತಿ ನಿಯಮಗಳನ್ನು ಪಾಲಿಸುವುದು. ಕಾಯಿದೆ, ನಿಯಮ ಮತ್ತು ಉಪವಿಧಿಗಳನ್ನು ಮಂಡಳಿ ಸದಸ್ಯರಿಗೆ, ವಿಷಯ ಮಂಡಿಸಿದಾಗ, ಅದರಿಂದಾಗುವ ಪರಿಣಾಮಗಳ ಬಗ್ಗೆ ಮಾಹಿತಿ ನೀಡುವುದು ಒಂದು ಪ್ರಮುಖ ಜವಾಬ್ದಾರಿ. ಸೌಹಾರ್ದ ಕಾಯಿದೆ ಮತ್ತು ನಿಯಮ 6ಸಿ, 6ಡಿ ಮತ್ತು 6ಇ ಗಳಲ್ಲಿ ನಿಗದಿ ಪಡಿಸಿದ ನೀತಿ ನಿಯಮಗಳನ್ನು ಅನುಸರಿಸಿ ಮಂಡಳಿ, ಸಾಮಾನ್ಯ ಸಭೆ ಸದಸ್ಯರಿಗೆ ಪೂರ್ಣ ಪ್ರಮಾಣದ ಮಾಹಿತಿ ನೀಡುವುದು ಅವಶ್ಯಕ ಮತ್ತು ಅದು ಅವನ ಕರ್ತವ್ಯ.

ಸೌಹಾರ್ದ ಕಾಯಿದೆಯಲ್ಲಿ ಮುಖ್ಯಕಾರ್ಯನಿರ್ವಾಹಕ ಮತ್ತಿತರ ಸಿಬ್ಬಂದಿಗೆ ವಿದ್ಯಾರ್ಹತೆ ಮತ್ತು ಅನುಭವದ ಬಗ್ಗೆ ಯಾವುದೇ ನೀತಿ ರೂಪಿಸದೇ ಇರುವುದಕ್ಕೆ ಕಾರಣ ಸಹಕಾರಿ/ಸಂಯುಕ್ತ ಸಹಕಾರಿ ಮಂಡಳಿ ಸದಸ್ಯರು ತಮ್ಮ ವಿಮೋಚನೆಯೊಳಗೆ ಸೂಕ್ತ, ಅರ್ಹ, ಜವಾಬ್ದಾರಿಯುತ್ತ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಾರೆಂಬ ಭಾವನೆಯಿಂದ. ಅಂದರೆ ಮಂಡಳಿ ಸದಸ್ಯರು ಜಾಗ್ರತರಾಗಿದ್ದು ಸಹಕಾರಿಯಲ್ಲಿ ಅವಶ್ಯಕ ಸೇವೆ ನೀಡಲು ಅರ್ಹ ಅಭ್ಯರ್ತಿಗಳನ್ನು ಆಯ್ಕೆ ಮಾಡುತ್ತಾರೆ ಎಂಬ ಅಂಶವನ್ನು ಪರಿಗಣಿಸಿ.

**ಸಿಬ್ಬಂದಿ ಆಯ್ಕೆಗೆ ನಿಗದಿ ಪಡಿಸುವ ಮಾನದಂಡಗಳ ಚೆಕ್‌ಲಿಸ್ಟ್**

1) ಮುಖ್ಯಕಾರ್ಯನಿರ್ವಾಹಕನ ವಿದ್ಯಾರ್ಹತೆ ನಿಗದಿ ಪಡಿಸಿದೆಯೇ? ಹೌದು/ಇಲ್ಲ

2) ಅನುಭವ ಹೌದು/ಇಲ್ಲ

3) ಹಿಂದಿನ ಸಂಸ್ಥೆಯ ಸೇವೆ ಇದೆಯೇ ಹೌದು/ಇಲ್ಲ

4) ಮಂಡಳಿ ವಯಸ್ಸಿನ ಮಿತಿ ನಿಗದಿ ಪಡಿಸಿದೆಯೇ ಹೌದು/ಇಲ್ಲ

5) ಲಿಖಿತ ಪರೀಕ್ಷೆಗೆ ಸಂಸ್ಥೆ ಗುರುತಿಸಲಾಗಿದೆಯೇ ಹೌದು/ಇಲ್ಲ

6) ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿ ತಯಾರಿಸಿದೆಯೇ ಹೌದು/ಇಲ್ಲ

7) ಮಂಡಳಿ/ಕಾಯಿದೆ/ನಿಯಮದಲ್ಲಿ ಆಯ್ಕೆ ಸಮಿತಿ ರಚನೆಯಾಗಿದೆಯೇ ಹೌದು/ಇಲ್ಲ

8) ಮೌಖಿಕ ಪರೀಕ್ಷೆಗೆ ಅಂಕಗಳನ್ನು ನಿಗದಿ ಪಡಿಸಿದೆಯೇ ಹೌದು/ಇಲ್ಲ

9) ಆಯ್ಕೆ ಸಮಿತಿಯಲ್ಲಿ ತಃಜ್ಞರನ್ನು ಸೇರಿಸಿಕ್ಕೊಳ್ಳಲಾಗಿದೆಯೇ ಹೌದು/ಇಲ್ಲ

10) ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ನೀಡಲಾಗಿದೆಯೇ ಹೌದು/ಇಲ್ಲ

11) ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆ ಅಂಕಗಳನ್ನು ಕ್ರೋಡಿಕರಿಸಿ ಜೇಷ್ಠತ ಪಟ್ಟಿ ತಯಾರಿಸಿದೆಯೇ ಹೌದು/ಇಲ್ಲ

12) ನೇಮಕ ಸಮಿತಿಯ ಸದಸ್ಯರು ಪ್ರತ್ಯೇಕವಾಗಿ ಅಂಕಗಳನ್ನು ನೀಡಿ ಸಹಿ ಮಾಡಿ ವರದಿ ಸಲ್ಲಿಸಿದ್ದಾರೆಯೇ ಹೌದು/ಇಲ್ಲ

13) ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ನೇಮಕ ಸಮಿತಿ, ಸಹಕಾರಿ ಮಂಡಳಿಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿದೆಯೇ ಹೌದು/ಇಲ್ಲ

14) ಆಡಳಿತ ಮಂಡಳಿ ನೇಮಕಾತಿ ಸಮಿತಿ ಕೊಟ್ಟ ಆಯ್ಕೆ ಪಟ್ಟಿಯಲ್ಲಿ ಪರಿಶೀಲಿಸಿ, ಒಪ್ಪಿಗೆ ನೀಡಿದೆಯೇ ಹೌದು/ಇಲ್ಲ

15) ನೇಮಕಾತಿ ಆದೇಶ ನೀಡುವಾಗ ವಿದಿಸಬಹುದಾದ ಸೇವಾ ಶರತ್ತುಗಳನ್ನು ಸೇರಿಸಿ, ನೇಮಕಾತಿ ಆದೇಶ ನೀಡಲು ಮಂಡಳಿ ಒಪ್ಪಿದೆಯೇ ಹೌದು/ಇಲ್ಲ

16) ನೇಮಕಾತಿ ಆದೇಶದಲ್ಲಿ ಪರೀಕ್ಷಾರ್ಹ ಅವಧಿಯನ್ನು ನಿಗದಿ ಪಡಿಸಿದೆಯೇ ಹೌದು/ಇಲ್ಲ

17) ನೇಮಕಾತಿ ಆದೇಶದಲ್ಲಿ ಅಭ್ಯರ್ಥಿಗೆ ನೀಡಿದ ಅವಧಿಯೊಳಗೆ, ಸೇವೆಗೆ ಸೇರಿದ್ದಾರೆಯೇ ಹೌದು/ಇಲ್ಲ

ಸೂಚನೆ : 1) ನೇಮಕಾತಿ ಸಮಿತಿಯಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಸಮಿತಿ ಸದಸ್ಯ ಕಾರ್ಯದರ್ಶಿ ಯಾಗಿರತಕ್ಕದ್ದು. ಆದರೆ ಅದೇ ಹುದ್ದೆಗೆ ನೇಮಕ ಮಾಡುವಾಗ, ಹಾಲಿ ಪ್ರಭಾರ ಮುಖ್ಯಕಾರ್ಯಾನಿರ್ವಾಹಕ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಬೇಕು.

2) ಮೇಲ್ಕಂಡ ಚೆಕ್‌ಲಿಷ್ಟನ್ನು ಸಹಕಾರಿಯ ಇನ್ನಿತರ ನೌಕರರ ನೇಮಕಾತಿ ಬಗ್ಗೆ ನೀತಿ ಅನುಸರಿಸಬೇಕು ಇದರ ಜೊತೆಗೆ

1) ಮಂಡಳಿ ನೇಮಕಾತಿ ಬಗ್ಗೆ ನೇಮಕಾತಿ ಸಮಿತಿಗೆ ಅಧಿಕಾರ ನೀಡಿದೆಯೇ ಹೌದು/ಇಲ್ಲ

2) ನೇಮಕಾತಿ ಸಭೆಯಲ್ಲಿ, ಪತ್ರಿಕೆಗಳಲ್ಲಿ ಜಾಹಿರಾತು ನೀಡಲು ತೀರ್ಮಾನಿಸಿದೆಯೇ ಹೌದು/ಇಲ್ಲ

3) ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ಜಾಹಿರಾತು ನೀಡಲಾಗಿದೆಯೇ ಹೌದು/ಇಲ್ಲ

4) ಅರ್ಜಿ ಸಲ್ಲಿಸಲು ಕಡೆಯ ದಿನಾಂಕವನ್ನು ನಿಗದಿ ಪಡಿಸಿದೆಯೇ ಹೌದು/ಇಲ್ಲ

5) ನಿಗದಿ ಪಡಿಸಿದ ಅವಧಿಯೊಳಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು? ಸಂಖ್ಯೆ ಸೇರಿಸಿ

6) ನಿಗದಿ ಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳೆಷ್ಟು? ಸಂಖ್ಯೆ ಸೇರಿಸಿ

7) ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲು ತೀರ್ಮಾನ ತೆಗೆದುಕ್ಕೊಳ್ಳಲಾಗಿದೆಯೇ ಹೌದು/ಇಲ್ಲ

8) ಸ್ವೀಕರಿಸಿದ ಅರ್ಜಿಗಳು ಜಾಹಿರಾತಿನಲ್ಲಿ ನಿಗದಿ ಪಡಿಸಿದ ಶರತ್ತುಗಳನ್ನು ಪಾಲಿಸಿದೆಯೇ ಹೌದು/ಇಲ್ಲ

9) ಸಮರ್ಪಕ ಮಾಹಿತಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗಿದೆಯೇ ಹೌದು/ಇಲ್ಲ

10) ಎಷ್ಟು ಅರ್ಜಿಗಳು ತಿರಸ್ಕರಿಸಲಾಗಿದೆ ಸಂಖ್ಯೆ ಸೇರಿಸಿ

11) ಮೌಖಿಕ ಪರೀಕ್ಷೆಗೆ ಹಾಜರಾಗಿದ್ದ ಕನಿಷ್ಟ 15 ದಿವಸಗಳ ಅವಧಿ ನೀಡಲಾಗಿದೆಯೇ ಹೌದು/ಇಲ್ಲ

12) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳು ಎಷ್ಟು (ಸಂಖ್ಯೆ ಸೇರಿಸಿ)

13) ಆಯ್ಕೆ ಸಮಿತಿ ಸದಸ್ಯರು ಆಯ್ಕೆ ಮಾಡಿದ ವ್ಯಕ್ತಿಗಳ ಪಟ್ಟಿ ಅಂತಿಮಗೊಳಗಾಗಿದೆಯೇ ಹೌದು/ಇಲ್ಲ

14) ಹೆಚ್ಚುವರಿ ಪಟ್ಟಿಯನ್ನು ಅಂಗೀಕರಿಸಿದೆಯೇ ಹೌದು/ಇಲ್ಲ

15) ಆಯ್ಕೆ ಪಟ್ಟಿಗೆ ನೇಮಕಾತಿ ಸಮಿತಿ ಸದಸ್ಯರು ಸಹಿ ಮಾಡಿದ್ದಾರೆಯೇ ಹೌದು/ಇಲ್ಲ

ಸೂಚನೆ : ಈ ಮೇಲ್ಕಂಡ ಮಾಹಿತಿಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ತಯಾರಿಸಿ, ಸಮಿತಿ ಸದಸ್ಯರ ಸಹಿ, ಪಡೆದು, ಸಹಕಾರಿಯ ಮಂಡಳಿಗೆ ಮಂಡಿಸಿ, ಒಪ್ಪಿಗೆ ಪಡೆದು ನೇಮಕಾತಿ ಆದೇಶ ಹೊರಡಿಸುವ ಜವಾಬ್ದಾರಿ ನಿರ್ವಹಿಸತಕ್ಕದ್ದು.

ಮುಖ್ಯಕಾರ್ಯನಿರ್ವಾಹಕನ ನೇಮಕಾತಿ ಆದೇಶವನ್ನು ಸಹಕಾರಿಯ ಅಧ್ಯಕ್ಷರು ನೀಡತಕ್ಕದ್ದು.

# ಅಧ್ಯಾಯ – 7.6

# ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ

**ಕಲಂ.25ಎ : ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ :**

(1) ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಆ ಪದಾಧಿಕಾರಿಡಿ ಪದವನ್ನು ವಹಿಸಿಕೊಂಡ ದಿನಾಂಕದಿಂದ ಎರಡು ವರ್ಷಗಳ ತರುವಾಯ ಮಾತ್ರ ಮಂಡಿಸತಕ್ಕದ್ದು. ಒಂದು ವೇಳೆ ಅವಿಶ್ವಾಸ ನಿರ್ಣಯಕ್ಕೆ ಒಮ್ಮೆ ಸೋಲುಂಟಾದಲ್ಲಿ ಹೊಸ ಅವಿಶ್ವಾಸ ನಿರ್ಣಯವನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಮಂಡಿಸತಕ್ಕದ್ದಲ್ಲ. ಸಂಬಂಧಪಟ್ಟ ಸಹಕಾರಿಯ ಮೂರನೇ ಒಂದರಷ್ಟು ಚುನಾಯಿತ ಆಡಳಿತ ಮಂಡಳಿ ಸದಸ್ಯರಿಂದ ಕೋರಿಕೆ ಸಲ್ಲಿಕೆಯಾಗದಿದ್ದಲ್ಲಿ ಅಂಥ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

(2) ಸಹಕಾರಿಯ ಪದಾಧಿಕಾರಿಯ ವಿಶ್ವಾಸವನ್ನು ಕೋರಿ ವ್ಯಕ್ತ ಪಡಿಸಿದ ನಿರ್ಣಯವನ್ನು ಸಹಕಾರಿಯು ಆ ಉದ್ದೇಶಕ್ಕಾಗಿ ನಡೆಸಿದ ವಿಶೇಷ ಸಭೆಯಲ್ಲಿ ಚುನಾಯಿತ ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಬಹುಮತದ ಮೂಲಕ ಅಂಗೀಕರಿಸಿದಲ್ಲಿ, ಆತನು ತನ್ನ ಪದವನ್ನು ತ್ಯಜಿಸಿದ್ದಾನೆಂದು ಭಾವಿಸತಕ್ಕದ್ದು.

(3) ಅವಿಶ್ವಾಸ ನಿರ್ಣಯಕ್ಕಾಗಿನ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

**ಅವಿಶ್ವಾಸ ಎಂದರೇನು?**

ಒಂದು ಸಹಕಾರಿಯು ಮಂಡಳಿ ರಚನೆಯಾದ ನಂತರ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ, ಚುನಾವಣೆ ದಿನಾಂಕದಿಂದ ಹದಿನೈದು ದಿವಸದಲ್ಲಿ ನಡೆಯುತ್ತದೆ. ಮಂಡಳಿ ಸದಸ್ಯರ ಅವಧಿ ಆಯ್ಕೆಯಾದ ದಿನಾಂಕದಿಂದ ಐದು ವರ್ಷಗಳು ಪದಾವದಿಯಾಗಿರುತ್ತದೆ. ಈ ಐದು ವರ್ಷದ ಅವಧಿಗೆ ಸಹಕಾರಿಯನ್ನು ಮುನ್ನಡೆಸಲು, ಉಪವಿಧಿಗಳಲ್ಲಿ ನಿಗದಿ ಪಡಿಸಿದಂತೆ ಸಹಕಾರಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಯ್ಕೆಯಾಗುತ್ತದೆ. ಈ ಪದಾಧಿಕಾರಿಗಳ ಅವಧಿಯೂ ಐದು ವರ್ಷಗಳಾಗಿರುತ್ತದೆ. ಈ ಅವಧಿಯಲ್ಲಿ ಪದಾಧಿಕಾರಿಗಳ ಮಂಡಳಿ ಸದಸ್ಯರ ವಿಶ್ವಾಸಗಳಿಸಿರಬೇಕು. ಅಂದರೆ ಬಹುಮತದ ಸದಸ್ಯರು ಪದಾಧಿಕಾರಿಗಳನ್ನು ಸಮರ್ಥಿಸಬೇಕು ಅದನ್ನು ವಿಶ್ವಾಸ ಎಂದು ಹೆಸರಿಸಬಹುದು. ಆ ವಿಶ್ವಾಸ ಇಲ್ಲದಾಗ ಮಂಡಳಿ ಸದಸ್ಯರು ಯಾವುದೇ ಪದಾಧಿಕಾರಿ ಮೇಲೆ ಅವಿಶ್ವಾಸ ಕರಡು ನಿರ್ಣಯ ಮಂಡಿಸಬಹುದು.

**ಅವಿಶ್ವಾಸ ಮಂಡನೆ ಪ್ರಕ್ರಿಯೆ :**

ಮಂಡಳಿ ರಚನೆಯಾದ ಎರಡು ವರ್ಷಗಳ ವರೆವಿಗೆ ಅವಿಶ್ವಾಸ ಮಂಡಿಸಲು ಅವಕಾಶವಿಲ್ಲ. ಅದಕ್ಕೆ ಕಾರಣ, ಅಧ್ಯಕ್ಷ/ಉಪಾಧ್ಯಕ್ಷನಾಗಿ ಆಯ್ಕೆಯಾದ ವ್ಯಕ್ತಿಗೆ, ಕೆಲಸ ನಿರ್ವಹಿಸಲು ಅವಕಾಶ ನೀಡಿ, ಆ ವ್ಯಕ್ತಿ ತನ್ನ ಕರ್ತವ್ಯದಲ್ಲಿ ಸಫಲನಾಗದಿದ್ದರೆ, ಅಂದರೆ ಮಂಡಳಿ ಸದಸ್ಯರ ವಿಶ್ವಾಸಗಳಿಸದಿದ್ದರೆ, ಮಂಡಳಿಯ 1/3 ಅಂಶದ ನಿರ್ದೇಶಕರು ಮಂಡಳಿ ರಚನೆಯಾದ ಎರಡು ವರ್ಷಗಳ ನಂತರ ಅಧ್ಯಕ್ಷ/ಉಪಾಧ್ಯಕ್ಷರ ಮೇಲೆ ವಿಶ್ವಾಸವಿಲ್ಲವೆಂದು ಅವಿಶ್ವಾಸ ನಿರ್ಣಯ ಮಂಡಿಸಲು ಮತ್ತು ಅಂತಹ ಅರ್ಜಿಯನ್ನು ಚುನಾಯಿತ ಸದಸ್ಯರು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ಹೆಸರಿಸಿ, ಪ್ರಸ್ತಾವನೆ ಸಲ್ಲಿಸಬೇಕು. ಈ ಅವಿಶ್ವಾಸ ಮಂಡಳಿ ಸಹಕಾರಿ ಮಂಡಳಿಯು 1/3 ಅಂಶದ ಸದಸ್ಯರು ಸಹಿ ಮಾಡದಿದ್ದರೆ, ಅದಕ್ಕೆ ಯಾವುದೇ ಪ್ರಾಶಸ್ತ್ಯವಿಲ್ಲ. ಅಂದರೆ ಅರ್ಜಿಗೆ ಮಂಡಳಿಯ 1/3 ಅಂಶದ ಸದಸ್ಯರ ಸಹಿ ಇದ್ದಾಗ ಮಾತ್ರ ಈ ಅವಿಶ್ವಾಸ ಪ್ರಸ್ತಾವನೆ ಪರಿಗಣಿಸಬೇಕು.

**ಅವಿಶ್ವಾಸವನ್ನು ಎಷ್ಟು ಬಾರಿ ಸಲ್ಲಿಸಬಹುದು :**

ಮಂಡಳಿ ರಚನೆಯಾದ ಎರಡು ವರ್ಷಗಳ ವರೆವಿಗೆ ಯಾವುದೇ ಅವಿಶ್ವಾಸ ಮಂಡಿಸಲು ಅವಕಾಶವಿಲ್ಲ. ಎರಡು ವರ್ಷಗಳ ನಂತರ ಮಂಡಳಿಯು 1/3 ಅಂಶದ ನಿರ್ದೇಶಕರು ಅವಿಶ್ವಾಸ ಪ್ರಸ್ತಾವನೆ ಸಲ್ಲಿಸಿದಾಗ, ಆ ಪ್ರಸ್ತಾವನೆ, ಅದೇ ಉದ್ದೇಶಕ್ಕಾಗಿ ಕರೆದ ಮಂಡಳಿ ಸಭೆಯಲ್ಲಿ ತಿರಸ್ಕೃತವಾದರೆ, ಮತ್ತು ಪ್ರಸ್ತಾವನೆ ಸಲ್ಲಿಸಲು ಆ ತಿರಸ್ಕೃತವಾದ ಒಂದು ವರ್ಷದ ನಂತರ ಮತ್ತೆ 1/3 ಅಂಶದ ಮಂಡಳಿ ಸದಸ್ಯರು ಅವಿಶ್ವಾಸ ಪ್ರಸ್ತಾವನೆ ಸಲ್ಲಿಸಬಹುದು. ಈ ಪ್ರಕ್ರಿಯೆ ಅವಧಿ ಮುಗಿಯುವ ತನಕ ಸಲ್ಲಿಸಬಹುದು, ಆದರೆ ಪ್ರತಿ ಪ್ರಸ್ತಾಪಕ್ಕೆ ಒಂದು ವರ್ಷದ ಅವಧಿ ಮುಗಿದಿರಬೇಕು.

**ಅವಿಶ್ವಾಸ ಪ್ರಸ್ತಾವನೆ ಮಂಡನೆ :**

ಅವಿಶ್ವಾಸ ಪ್ರಸ್ತಾವನೆ ಸ್ವೀಕರಿಸಿದ ನಂತರ ಅದೇ ಉದ್ದೇಶಕ್ಕಾಗಿ ಕರೆದ ಸಹಕಾರಿ ಮಂಡಳಿ ಸಭೆಯಲ್ಲಿ, ಮಂಡಳಿ ಸದಸ್ಯರ 2/3 ಅಂಶದ ಸದಸ್ಯರು ಅವಿಶ್ವಾಸ ಮಂಡನೆಗೆ ಸಮರ್ಥನೆ ನೀಡಿದಾಗ, ಅವಿಶ್ವಾಸ ಒಪ್ಪಿಗೆ ಪಡೆದಿದೆ ಎಂದು ತೀರ್ಮಾನಿಸತಕ್ಕದ್ದು ಮತ್ತು ಅಂತಹ ಪದಾಧಿಕಾರಿ ತನ್ನ ಹುದ್ದೆಯನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು. ಕಾಯಿದೆಯಲ್ಲಿ ಕನಿಷ್ಠ ಒಂದು ಸಹಕಾರಿ ಮಂಡಳಿಯ ನಿರ್ದೇಶಕರ ಸಂಖ್ಯೆ ಕಲಂ.24 ರನ್ವಯ 13 ಇರಬೇಕು. ಅದರಂತೆ 1/3 ಅಂಶದ ನಿರ್ದೇಶಕರ ಸಂಖ್ಯೆ ಎಂದರೆ 4.33 ಅಂಕಿಯನ್ನು ಮುಂದಿನ ಸಂಖ್ಯೆಗೆ ಸೇರಿಸಬೇಕು ಅಂದರೆ 5. ಅದೇ ರೀತಿ 2/3 ಅಂಶದ ನಿರ್ದೇಶಕರು ಎಂದರೆ 8.33 ಅಂಶವೆಂದರೆ ಅದು 9 ಎಂದಾಗುತ್ತದೆ. ಈ ಸಂಖ್ಯೆಯು ಮಂಡಳಿ ಸದಸ್ಯರು ಮತ ಚಲಾಯಿಸಿದಾಗ ಮಾತ್ರ ಅವಿಶ್ವಾಸ ಮಂಡನೆ ಒಪ್ಪಿಗೆ ಪಡೆದಿದೆಯೇ ಇಲ್ಲವೊ ಎಂಬುದನ್ನು ನಿರ್ಧರಿಸಬೇಕು ಮತ್ತು ಮತದಾನ ಗುಪ್ತ ಮತದಾನದ ಮೂಲಕ ತೀರ್ಮಾನಿಸತಕ್ಕದ್ದು.

**ಅವಿಶ್ವಾಸ ಮಂಡನೆ ಯಾರ ನೇತೃತ್ವದಲ್ಲಿ ನಡೆಯಬೇಕು?**

ಕಾಯಿದೆ ಕಲಂ.25ಎ ಅಡಿ ಉಪಕಲಂ.(3) ರಲ್ಲಿ ನಿಯಮಗಳನ್ನು ರೂಪಿಸಲು ಅವಕಾಶ ಕಲ್ಪಿಸಿದ್ದರೂ ಆ ನಿಯಮ ರೂಪಿಸಿಲ್ಲವಾದ್ದರಿಂದ ಮತ್ತು ಸೌಹಾರ್ದ ಕಾಯಿದೆ ಕಲಂ.26 ರನ್ವಯ ಸಹಕಾರ ಚುನಾವಣಾ ಪ್ರಾಧಿಕಾರ (ಆಯೋಗ) ಸಹಕಾರ ಸಂಘಗಳ ಕಾಯಿದೆ 1959ರ ಕಲಂ.39ಎಎ ಅನ್ವಯ ರಚನೆಯಾದ ಸಹಕಾರ ಚುನಾವಣಾ ಆಯೋಗ (ಪ್ರಾಧಿಕಾರ) ನಿರ್ವಹಿಸಬೇಕೆಂದಿರುವುದರಿಂದ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟಂತೆ, ಎಲ್ಲಾ ಪ್ರಕ್ರಿಯೆಗಳು ಆ ಪ್ರಾಧಿಕಾರವೇ, ನಡೆಸಬೇಕೆಂಬ ನೀತಿಗೆ ಪೂರಕವಾಗಿ, ಅವಿಶ್ವಾಸ ಮಂಡನೆಯಾದ ಏಳು ದಿವಸಗಳೊಳಗೆ, ಸಹಕಾರಿಯ ಮುಖ್ಯಕಾರ್ಯನಿರ್ವಾಹಕ, ಚುನಾವಣಾ ಆಯೋಗಕ್ಕೆ (ಪ್ರಾಧಿಕಾರಿ) ಪ್ರಸ್ತಾವನೆ ಸಲ್ಲಿಸಬೇಕು ಮತ್ತು ಆ ವಿಶೇಷ ಮಂಡಳಿ ಸಭೆಯನ್ನು ಚುನಾವಣಾ ಆಯೋಗ (ಪ್ರಾಧಿಕಾರ) ನೇಮಿಸಿದ ಚುನಾವಣಾಧಿಕಾರಿ ಸಮ್ಮುಖದಲ್ಲಿ, ಈ ಅವಿಶ್ವಾಸ ಪ್ರಸ್ತಾವನೆಗೆ ಕರೆದ ಸಭೆಯ ನಿರ್ವಾಕವಾಗತಕ್ಕದ್ದು. ಅವನ ಅಧ್ಯಕ್ಷತೆಯಲ್ಲಿ ಗುಪ್ತ ಮತದಾನದ ಮೂಲಕ ತೀರ್ಮಾನವಾದ ನಂತರ ಫಲಿತಾಂಶ ಪ್ರಕಟಣೆ ಮಾಡುವ ಜವಾಬ್ದಾರಿ ಚುನಾವಣಾ ಆಯೋಗ (ಪ್ರಾಧಿಕಾರ)ಕ್ಕೆ ವಿಹಿತವಾಗಿರತಕ್ಕದ್ದು. ಅವಿಶ್ವಾಸ ಬಿದ್ದುಹೊದಾಗ, ನಡಾವಳಿಗಳನ್ನು ಅಂತಿಮಗೊಳಿಸಿ, ಚುನಾವಣಾ ಆಯೋಗ (ಪ್ರಾಧಿಕಾರ) ಮತ್ತು ಸಹಕಾರಿ ಮುಖ್ಯಕಾರ್ಯನಿರ್ವಾಹಕನ ಲಿಖಿತವಾಗಿ ಫಲಿತಾಂಶ ತಿಳಿಸುವ ಜವಾಬ್ದಾರಿ ಚುನಾವಣಾಧಿಕಾರಿಗೆ ಸೇರಿರತಕ್ಕದ್ದು. ಅವಿಶ್ವಾಸ ನಿರ್ಣಯ ಒಪ್ಪಿಗೆಯಾದರೆ, ಅದರಂತೆ ಹೊಸ ಪದಾಧಿಕಾರಿ ಚುನಾವಣೆಗೆ, ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಪತ್ರ ಬರೆಯತಕ್ಕದ್ದು ಮತ್ತು ಹೊಸ ಪದಾಧಿಕಾರಿ ಆಯ್ಕೆ ನಡೆಸಿ ತೀರ್ಮಾನಿಸಬೇಕು.

ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ಸಂಖ್ಯೆ.1760/2019(CS-EL-M) ನಲ್ಲಿ ದಿನಾಂಕ 10.07.2019 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ.29 ಹೆಚ್ ನಲ್ಲಿ ಅವಿಶ್ವಾಸ ಪ್ರಸ್ತಾವನೆ ಬಗ್ಗೆ ಮತ್ತು ಸಹಕಾರ ಸಂಘಗಳ ನಿಯಮ 1960ರ ನಿಯಮ 14 ಎಕೆಕೆ(11)ನ್ನು ತೀರ್ಮಾನಿಸುವಾಗ ಗಮನಿಸಿದ ಅಂಶವೆಂದರೆ, ಕಾಯಿದೆ ಕಲಂನಲ್ಲಿ 1/3 ಮತ್ತು 2/3 ಅಂಶದ ಮಂಡಳಿ ಸದಸ್ಯರು ಎಂದರೆ ಚುನಾಯಿತ ಮಂಡಳಿಯ ಒಟ್ಟು ಸಂಖ್ಯೆಯಲ್ಲಿ ಮತ್ತು ಹಾಜರಿದ್ದ ಮಂಡಳಿ ಸದಸ್ಯರಲ್ಲವೆಂದು ತೀರ್ಮಾನಿಸಿ, ನಿಯಮ 14 ಎಕೆಕೆ(11) ರಲ್ಲಿ ನಿಗದಿ ಪಡಿಸಿದ ಹಾಜರಿದ್ದ ಮಂಡಳಿ ಸದಸ್ಯರ 2/3 ಅಂಶದ ಸದಸ್ಯರು ಎಂದು ನಿಗದಿ ಪಡಿಸಿರುವುದು ಅ ಸಂವಿಧಾನಿಕ ಎಂದು ತೀರ್ಪಿತ್ತಿದೆ.

ಸೌಹಾರ್ದ ಕಾಯಿದೆಯಲ್ಲಿ ಮಂಡಳಿ ರಚನೆಯಾಗುವುದು ಚುನಾವಣೆ ಮುಖಾಂತರ ಮತ್ತು ಸರ್ಕಾರದಿಂದ ಪ್ರತಿನಿಧಿ ಕಳುಹಿಸುವ ಸಾಧ್ಯತೆ ಇಲ್ಲವಾದ್ದರಿಂದ, ಈ ತೀರ್ಮಾನ ನೇರವಾಗಿ ಅನ್ವಯಿಸದೇ ಇದ್ದರೂ ನಿಯಮ ರೂಪಿಸುವಾಗ, ಕಾಯಿದೆ ಕಲಂಗೆ ವಿರುದ್ಧವಾಗಿ ರಚಿಸಿದರೆ, ಅದು ಅಸಂವಿಧಾನಿಕವಾಗುತ್ತದೆ ಎಂದು ಗಮನದಲ್ಲಿರಿಸಿಕೊಳ್ಳಬೇಕು.

**(ಅವಿಶ್ವಾಸ ಬಗ್ಗೆ ಪ್ರತ್ಯೇಕ ಲೇಖನ ಲಗತ್ತಿಸಿದೆ)**

# ಅಧ್ಯಾಯ – 8

## ಮಂಡಳಿಯ ರದ್ದತಿ ಅಥವಾ ಅಮಾನತ್ತು

ಭಾರತ ಸರ್ಕಾರ, ಸಂವಿಧಾನಕ್ಕೆ 97ನೇ ತಿದ್ದುಪಡಿ ಮುಖಾಂತರ ಸಹಕಾರ ವಿಷಯವನ್ನು ಸೇರಿಸಿ, ಒಂದು ಸಹಕಾರಿಯ ಮಂಡಳಿಯನ್ನು ರದ್ದು ಮಾಡಲು ಅಥವಾ ಅಮಾನತ್ತು ಮಾಡಲು ಅನುಚ್ಛೇದ 243 ಝಡ್ ಎಲ್ ನ್ನು ಈ ಕೆಳಕಂಡಂತೆ ಸೇರಿಸಿದೆ.

**243ಝಡ್‌ಎಲ್ : ಮಂಡಳಿಯ ರದ್ದಿಯಾತಿ ಅಥವಾ ಅಮಾನತ್ತು ಮತ್ತು ಮಧ್ಯಂತರ ನಿರ್ವಹಣೆ :**

1) ಸದ್ಯ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನನ್ನೇ ಒಳಗೊಂಡಿರುವಾಗ್ಯೂ ಯಾವುದೇ ಮಂಡಳಿಯನ್ನು ಆರು ತಿಂಗಳಿಗೆ ಮೀರಿದ ಅವಧಿಗಾಗಿ ರದ್ದು ಮಾಡತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿ ಇಡತಕ್ಕದ್ದಲ್ಲ;

ಪರಂತು, ಮಂಡಳಿಯನ್ನು,

ಎ) ಅದರ ಮುಂದುವರೆದ ಕರ್ತವ್ಯಲೋಪಕ್ಕಾಗಿ; ಅಥವಾ

ಬಿ) ತನ್ನ ಕರ್ತವ್ಯಗಳ ಪಾಲನೆಯಲ್ಲಿ ಆದ ನಿರ್ಲಕ್ಷ್ಯಕ್ಕಾಗಿ; ಅಥವಾ

ಸಿ) ಮಂಡಳಿಯು ಸಹಕಾರ ಸಂಘದ ಅಥವಾ ಅದರ ಸದಸ್ಯರ ಹಿತಾಸಕ್ತಿಗೆ ಬಾಧೆಯುಂಟು ಮಾಡುವ ಯಾವುದೇ ಕೃತ್ಯವನ್ನು ಮಾಡಿದಾಗ; ಅಥವಾ

ಡಿ) ಮಂಡಳಿಯ ರಚನೆಯಲ್ಲಿ ಅಥವಾ ಪ್ರಕಾರ್ಯಗಳಲ್ಲಿ ಯಾವುದೇ ಇಕ್ಕಟ್ಟಿನ ಸ್ಥಿತಿ ಉಂಟಾದಾಗ; ಅಥವಾ

ಇ) ಅನುಚ್ಛೇದ 243–ಝಕೆದ (2)ನೇ ವಾಕ್ಯಾವಳಿಯ ಮೇರೆಗೆ ರಾಜ್ಯದ ವಿಧಾನ ಮಂಡಳ ಉಪಬಂಧಿಸಿರುವ ಪ್ರಾಧಿಕಾರ ಅಥವಾ ನಿಕಾಯವು ರಾಜ್ಯದ ಅಧಿನಿಯಮದ ಉಪಬಂಧಗಳ ಮೇರೆಗೆ ಚುನಾವಣೆ ನಡೆಸುವಲ್ಲಿ ವಿಫಲವಾದಾಗ– ಮಂಡಳಿಯನ್ನು ರದ್ದುಪಡಿಸಬಹುದು ಅಥವಾ ಅಮಾನತ್ತಿನಲ್ಲಿಡಬಹುದು;

ಮತ್ತೂ ಪರಂತು, ಅಂಥ ಸಹಕಾರ ಸಂಘದ ಮಂಡಳಿಯು ಸರಕಾರದ ಷೇರ್‌ಹೋಲ್ಡಿಂಗ್ ಇರದಿರುವಾಗ, ಸಾಲ ಇರುವಾಗ ಅಥವಾ ಹಣಕಾಸಿನ ಸಹಾಯ ಇಲ್ಲದಿರುವಾಗ ಅಥವಾ ಸರಕಾರದ ಖಾತರಿ ಇಲ್ಲದಿರುವಾಗ ಅದನ್ನು ರದ್ದು ಪಡಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿ ಇಡತಕ್ಕದ್ದಲ್ಲ;

ಮತ್ತೂ ಪರಂತು, ಸಹಕಾರ ಸಂಘವು ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುತ್ತಿರುವ ಸಂದರ್ಭದಲ್ಲಿ ಬ್ಯಾಂಕಿಂಗ್ ರೇಗ್ಯುಲೇಶನ್ ಅಧಿನಿಯಮ, 1949ರ ಉಪಬಂಧಗಳು ಅನ್ವಯಿಸತಕ್ಕದ್ದು;

ಮತ್ತು ಪರಂತು, ಬಹುರಾಜ್ಯ ಸಹಕಾರ ಸಂಘವಲ್ಲದ ಇತರ ಸಹಕಾರ ಸಂಘದ ಸಂದರ್ಭದಲ್ಲಿ, ಅದು ಬ್ಯಾಂಕಿಂಗ್ ವ್ಯವಹಾರ ಮಾಡುತ್ತಿರುವಲ್ಲಿ, ಈ ವಾಕ್ಯಾವಳಿಯ ಉಪಬಂಧಗಳ "ಆರು ತಿಂಗಳ" ಶಬ್ಧಗಳ ಬದಲಿಗೆ 'ಒಂದು ವರ್ಷ" ಪದವನ್ನು ಸೇರಿಸಿರುವಂತೆ ಪರಿಣಾಮಕಾರಿಯಾಗಿರತಕ್ಕದ್ದು.

2) ಮಂಡಳಿಯನ್ನು ರದ್ದು ಪಡಿಸಿದ ಸಂದರ್ಭದಲ್ಲಿ ಅಂಥ ಸಹಕಾರ ಸಂಘದ ವ್ಯವಹಾರಗಳ ನಿರ್ವಹಣೆಗಾಗಿ ನೇಮಕಗೊಂಡ ಆಡಳಿತಾಧಿಕಾರಿಯು, (1)ನೇ ವಾಕ್ಯಾವಳಿಯಲ್ಲಿ ಗೊತ್ತು ಪಡಿಸಲಾಗಿರುವ ಅವಧಿಯಲ್ಲಿ ಚುನಾವಣೆಗಳನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು ಮತ್ತು ಚುನಾಯಿತ ಮಂಡಳಿಗೆ ಆಡಳಿತವನ್ನು ವಹಿಸಿಕೊಡತಕ್ಕದ್ದು.

3) ಆಡಳಿತಗಾರನ ಸೇವಾ ಷರತ್ತುಗಳ ಬಗ್ಗೆ ರಾಜ್ಯದ ವಿಧಾನ ಸಭೆಯು ಕಾನೂನು ಮೇರೆಗೆ ಉಪಬಂಧಿಸಬಹುದು.

ಈ ಮೇಲ್ಕಂಡ ಸೇರ್ಪಡೆ ನಂತರ ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ ಕಲಂ.38 ಕ್ಕೆ ಮಾರ್ಪಾಡು ಮಾಡಿದೆ.ಅದು ಈ ಕೆಳಗಿನಂತಿದೆ.

1) "ಒಂದು ಸಹಕಾರಿಯ ಮಂಡಳಿಯು

**i)** ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪವಿಧಿಗಳ ಅಡಿಯಲ್ಲಿ ವಿಧಿಸಲಾಗಿರುವ ಕರ್ತವ್ಯಗಳ ನಿರ್ವಹಣೆಯಲ್ಲಿ

ನಿರಂತರವಾಗಿ ತಪ್ಪು ಮಾಡುತ್ತಿದೆ ಅಥವಾ ನಿರ್ಲಕ್ಷ್ಯ ತೋರುತ್ತಿದೆ; ಅಥವಾ

**ii)** ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾದ ಯಾವುದೇ ಕಾರ್ಯವನ್ನು ಮಾಡಿದೆ; ಅಥವಾ

**iii)** ನಿರ್ದೇಶಕರ ಅನರ್ಹತೆ, ರಾಜೀನಾಮೆ, ಮರಣ ಅಥವಾ ಅವರನ್ನು ತೆಗೆದುಹಾಕಿರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆ ಕೋರಂ ಆಗಲು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆ ಯಿದೆಯೆಂಬ ಕಾರಣದಿಂದ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ

**iv)** ಈ ಅಧಿನಿಯಮದ ಉಪಬಂಧಗಳು ಅಥವಾ ನಿಯಮಗಳು ಅಥವಾ (ಉಪವಿಧಿಗಳಿಗೆ) ಅನುಸಾರವಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ

**v)** ಸಹಕಾರ ವರ್ಷವು ಮುಕ್ತಾಯವಾದ ಆರು ತಿಂಗಳೊಳಗೆ ಆದರೆ ಪ್ರತಿ ವರ್ಷ ಸೆಪ್ಟೆಂಬರ್ ಇಪ್ಪತ್ತೆದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ತಪ್ಪಿದೆ; ಅಥವಾ

(**v**–ಎ)ಅದು ಗುರುತರವಾದ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದಿದೆ; ಅಥವಾ

(**v**–ಬಿ) ಅದರ ರಚನೆ ಅಥವಾ ಕೆಲಸ ಕಾರ್ಯಗಳಿಗೆ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ; ಅಥವಾ

(**v**–ಸಿ) ಅದು ಚುನಾವಣೆಯನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯವಾದ ನೆರವನ್ನು ನೀಡಲು ವಿಫಲವಾಗಿದೆ ಮತ್ತು ಯಾವುದೇ ಕಾರಣದಿಂದ ಚುನಾವಣಾ ಪ್ರಾಧಿಕಾರವು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ ಚುನಾವಣೆಯನ್ನು ನಡೆಸಿರುವುದಿಲ್ಲ; ಅಥವಾ

(**v**–ಡಿ) ಅದು ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪತ್ರಗಳ ಪರಿಶೋಧನೆ ಯನ್ನು ಪೂರ್ಣ ಮಾಡಿಸಿ ಲೆಕ್ಕಪರಿಶೋಧನಾ ವರದಿಯನ್ನು ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾಗಿದೆ; ಅಥವಾ

**vi)** ಅನ್ಯಥಾ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ;

– ಎಂದು ಸಂಯುಕ್ತ ಸಹಕಾರಿಯು ಅಭಿಪ್ರಾಯಪಟ್ಟಲ್ಲಿ, ಅದು (ಮಂಡಳಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತ್ತಿನಲ್ಲಿಡಬಹುದು) ಮತ್ತು ಸಂಯುಕ್ತ ಸಹಕಾರಿಯು ನಿರ್ದಿಷ್ಟ ಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದ ಅವಧಿಗೆ ಸಹಕಾರಿಯ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಗಾರರನ್ನು ನೇಮಕ ಮಾಡಬಹುದು;

ಪರಂತು, ಅಹವಾಲು ಹೇಳಿಕೊಳ್ಳಲು ಮಂಡಳಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಸಂಯುಕ್ತ ಸಹಕಾರಿಯು ಅಂಥ ಮಂಡಳಿಯನ್ನು (ರದ್ದುಗೊಳಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ.)

ಮತ್ತು ಪರಂತು ಸರ್ಕಾರದ ಷೇರು ಅಥವಾ ಸಾಲ ಅಥವಾ ಧನ ಸಹಾಯ ಅಥವಾ ಗ್ಯಾರಂಟಿ ಇಲ್ಲದ ಯಾವುದೇ ಸಹಕಾರಿಯ ಆಡಳಿತ ಮಂಡಳಿಯನ್ನು ರದ್ದು ಪಡಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿ ಇಡತಕ್ಕದ್ದಲ್ಲ.

ಮತ್ತೂ ಪರಂತು ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವ ಒಂದು ಸಹಕಾರಿಗೆ 1949ರ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮದ ಉಪಬಂಧಗಳೂ ಸಹ ಅನ್ವಯವಾಗತಕ್ಕದ್ದು ಮತ್ತು ಈ ಖಂಡವು ಆರು ತಿಂಗಳು ಎಂಬ ಪದಗಳಿಗೆ ಬದಲಾಗಿ ಒಂದು ವರ್ಷ ಎಂಬ ಪದಗಳು ಪ್ರತಿಯೋಜಿಸಲ್ಪಟ್ಟಂತೆ ಅನ್ವಯವಾಗತಕ್ಕದ್ದು.

2) (1)ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ ನಂತರ,

(ಎ) ಮಂಡಳಿಯ ನಿರ್ದೇಶಕರು ತಮ್ಮ ಹುದ್ದೆಯನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು; ಮತ್ತು

(ಬಿ) ಆಡಳಿತಗಾರನು ಸಹಕಾರಿಯ ವ್ಯವಹಾರಗಳ ಪ್ರಭಾರವನ್ನು ವಹಿಸಿಕೊಂಡಿದ್ದಾನೆಂದು ಭಾವಿಸತಕ್ಕದ್ದು.

3) ಆಡಳಿತಗಾರನು, ಸಂಯುಕ್ತ ಸಹಕಾರಿಯ ನಿಯಂತ್ರಣಕ್ಕೊಳಪಟ್ಟು ಸಹಕಾರಿಯ ಮಂಡಳಿಯ ಅಥವಾ ಯಾವೊಬ್ಬ ಪದಾಧಿಕಾರಿಯ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು

ಉಪವಿಧಿಗಳ ಅಡಿಯಲ್ಲಿ ಸಹಕಾರಿಯ ಹಿತಾಸಕ್ತಿಯಲ್ಲಿ ಅಗತ್ಯ ಗಬಹುದಾದ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

4) ಸಂಯುಕ್ತ ಸಹಕಾರಿಯು, (1)ನೇ ಉಪಪ್ರಕರಣದ ಅಡಿಯಲ್ಲಿ ಕ್ರಮಕೈಗೊಳ್ಳುವ ಮೊದಲು ಸಹಕಾರಿಯು ಯಾವ ಹಣಕಾಸು ನೆರವು ನೀಡುವ ಏಜೆನ್ಸಿಗೆ ಋಣಿಯಾಗಿರುವುದೋ ಆ ಏಜೆನ್ಸಿಯೊಂದಿಗೆ ಸಮಾಲೋಚಿಸತಕ್ಕದ್ದು. ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ, (ಅದು ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್‌ನೊಂದಿಗೆ) ಸಹ ಸಮಾಲೋಚಿಸತಕ್ಕದ್ದು.

5) ಆಡಳಿತಗಾರನು, ತನ್ನ ಪದಾವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಸಹಕಾರಿಗೆ ಅದರ ಉಪವಿಧಿಗಳಿಗನುಸಾರವಾಗಿ ಹೊಸ ಮಂಡಳಿಯನ್ನು ರಚಿಸಲು ವ್ಯವಸ್ಥೆ ಮಾಡತಕ್ಕದ್ದು.

6) ಈ ಅಧಿನಿಯಮದಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ಏನೇ ಇದ್ದರೂ, ಒಂದು ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ, ಸಾರ್ವಜನಿಕ ಹಿತಾಸಕ್ತಿಗಾಗಿ ಅಥವಾ ಸಹಕಾರಿ ಬ್ಯಾಂಕಿನ ವ್ಯವಹಾರಗಳನ್ನು ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ನಡೆಸುತ್ತಿರುವುದನ್ನು ತಡೆಯುವುದಕ್ಕಾಗಿ ಅಥವಾ ಸಹಕಾರಿ ಬ್ಯಾಂಕಿನ ಸರಿಯಾದ ನಿರ್ವಹಣೆಗಾಗಿ (ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್), ಆ ಸಹಕಾರಿ ಬ್ಯಾಂಕಿನ ಮಂಡಳಿಯನ್ನು ರದ್ದುಗೊಳಿಸಬೇಕೆಂದು ಬರಹದಲ್ಲಿ ಅಗತ್ಯಪಡಿಸಿದರೆ, ಸಂಯುಕ್ತ ಸಹಕಾರಿಯು ಲಿಖಿತ ಆದೇಶದ ಮೂಲಕ ಹಾಗೆ ಮಾಡತಕ್ಕದ್ದು ಮತ್ತು (ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್) ಸಹಮತಿಯೊಂದಿಗೆ, ಸಂಯುಕ್ತ ಸಹಕಾರಿಯು ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗೆ ಸಹಕಾರಿ ಬ್ಯಾಂಕಿನ ವ್ಯವಹಾರಗಳ ನಿರ್ವಹಣೆಗಾಗಿ ಒಬ್ಬ ಆಡಳಿತಗಾರನನ್ನು ನೇಮಕ ಮಾಡತಕ್ಕದ್ದು.

7) ಆಡಳಿತಗಾರನಿಗೆ ಕೊಡಬಹುದಾದ ಸಂಭಾವನೆಯನ್ನು ಸಂಯುಕ್ತ ಸಹಕಾರಿಯು ನಿರ್ಧರಿಸತಕ್ಕದ್ದು. ಅಂಥ ಸಂಭಾವನೆಯ ಮೊತ್ತವನ್ನು ಮತ್ತು ಆಡಳಿತಗಾರನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಮಾಡಿದ ಖರ್ಚುಗಳನ್ನು ಸಹಕಾರಿಯ ನಿಧಿಗಳಿಂದ ಪಾವತಿಸತಕ್ಕದ್ದು. ಸಹಕಾರಿಯ ಆಡಳಿತಗಾರನಾಗಿ ನೇಮಕವಾದ ಅಧಿಕಾರಿ ಅಥವಾ ನೌಕರನಿಗೆ ಅನ್ವಯವಾಗುವ ಸೇವಾ ನಿಯಮಗಳು, ಆತನು ಸಹಕಾರಿಯ ಆಡಳಿತಗಾರನಾಗಿ ಸೇವೆ ಸಲ್ಲಿಸುವಾಗಲೂ ಅನ್ವಯವಾಗತಕ್ಕದ್ದು."

"ಸೂಚನೆ : – ಈ ಮೇಲ್ಕಂಡ ಸಂವಿಧಾನದ ಸೇರ್ಪಡೆ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿಯ ರಚನೆಯಲ್ಲಿ ಸರ್ಕಾರದಿಂದ ಪ್ರತ್ಯಕ್ಷ ಹಾಗೂ ಪರೋಕ್ಷ ಸಹಾಯ ಧನ ಪಡೆಯದೇ ಇದ್ದರೆ ಅಂತಹ ಸಹಕಾರಿಯನ್ನು ರದ್ದು ಪಡಿಸುವುದಾಗಲೀ ಅಥವಾ ಅಮಾನತ್ತು ಮಾಡುವುದನ್ನು ನಿರ್ಬಂದಿಸಿದೆ. ಸೌಹಾರ್ದ ಕಾಯಿದೆ ರಚನೆ ಮತ್ತು ಕಾರ್ಯಾಚರಣೆ ಸಂದರ್ಭದಲ್ಲಿ ಸರ್ಕಾರದಿಂದ ಸಹಾಯ ಧನ ಪಡೆದ ಯಾವುದೇ ಸಹಕಾರಿಯನ್ನು ನೋಂದಣಿ ಮಾಡತಕ್ಕದ್ದಲ್ಲವೆಂದು ಶರತ್ತನ್ನು ವಿಧಿಸಿದೆ. ಇದನ್ನು ಕಲಂ.38(I)(VI)ರ ಎರಡನೇ ಪರಂತುಕದಲ್ಲಿ ಸ್ಪಷ್ಟ ಪಡಿಸಿದೆ."

ಒಂದು ಸಹಕಾರಿಯನ್ನು ಸ್ಥಾಪಿಸುವ ಉದ್ದೇಶ, ಆ ಸಹಕಾರಿಯ ಸದಸ್ಯರಿಗೆ ತನ್ನ ಆರ್ಥಿಕ ಸಾಮಾಜಿಕ ಬೆಳವಣಿಗೆಗೆ ಸಹಕಾರಿಯಾಗಲು ಒಂದು ಸಂಸ್ಥೆಯನ್ನು ಹುಟ್ಟುಹಾಕುವ ಉದ್ದೇಶ. ಅದಕ್ಕಾಗಿ ಸದಸ್ಯರೆಲ್ಲರೂ ಕೂಡಿ ಒಂದು ಆಡಳಿತ ನಡೆಸಿಕೊಂಡು ಹೋಗಲು ಒಂದು ಮಂಡಳಿಯನ್ನು ರಚಿಸಬೇಕು. ಆ ಮಂಡಳಿಯು ಸಹಕಾರಿಯ ಧ್ಯೇಯೋದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಸದಸ್ಯರಿಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಉದ್ದೇಶಕ್ಕಾಗಿ ಸೌಹಾರ್ದ ಸಹಕಾರಿ ಕಾಯಿದೆ, ನಿಯಮ ಮತ್ತು ಉಪವಿಧಿಗಳು ರೂಪಿಸಿರುವ ನೀತಿ ನಿಯಮಗಳಂತೆ ಸೌಲಭ್ಯಗಳನ್ನು ಕೊಡುವುದು ಅಥವಾ ಕೊಡಲು ವ್ಯವಸ್ಥೆ ಮಾಡುವುದು, ಆಡಳಿತ ಮಂಡಳಿಯ ಕರ್ತವ್ಯ ಮತ್ತು ಜವಾಬ್ದಾರಿ.

ಈ ಮೇಲ್ಕಂಡ ಉದ್ದೇಶಗಳನ್ನು ಆಡಳಿತ ಮಂಡಳಿಯು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದಾಗ ಸಂಯುಕ್ತ ಸಹಕಾರಿ ಮಧ್ಯಪ್ರವೇಶ ಮಾಡಬಹುದಾಗಿದೆ.ಒಂದು ಆಡಳಿತ ಮಂಡಳಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಸಮರ್ಪಕ ಕೆಲಸ ಮಾಡುತ್ತಿಲ್ಲವೆಂದು ಮನಗಂಡಾಗ, ಆ ಮಂಡಳಿಯನ್ನು ರದ್ದುಪಡಿಸಿ/ಅಮಾನತ್ತಿನಲ್ಲಿಟ್ಟು ಆಡಳಿತಾಧಿಕಾರಿಯನ್ನು ನೇಮಿಸಬಹುದು. ಈ ಅವಕಾಶಕ್ಕೆ ಪೂರಕವಾಗಿ ಕಲಂ 38ರಲ್ಲಿ ಮಾರ್ಪಾಡುಗಳನ್ನು ಮಾಡಲಾಗಿದೆ. ಬದಲಾವಣೆಯಾದ ಕಲಂ ಅನ್ವಯ ಒಂದು ಸಹಕಾರಿಯ ಆಡಳಿತ ಮಂಡಳಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಪಡಿಸಿ/ಅಮಾನತ್ತಿನಲ್ಲಿಟ್ಟು ಆಡಳಿತಾಧಿಕಾರಿಯನ್ನು ನೇಮಿಸಬಹುದು.

1. ಕಾಯಿದೆ, ನಿಯಮ ಮತ್ತು ಉಪವಿಧಿಗಳ ಮೂಲಕ ವಹಿಸಲ್ಪಟ್ಟ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸತತವಾಗಿ ತಪ್ಪುಗಳನ್ನು ಎಸಗುತ್ತಿದ್ದರೆ ಅಥವಾ ನಿರ್ಲಕ್ಷಿಸುತ್ತಿದ್ದರೆ.

2. ಸಹಕಾರಿಯು ಅಥವಾ ಸದಸ್ಯರ ಹಿತಾಸಕ್ತಿಗೆ ವಿರುದ್ಧವಾಗಿ ಕೃತ್ಯಗಳನ್ನು ಎಸಗಿದ್ದರೆ.

3. ನಿರ್ದೇಶಕರ ಅನರ್ಹತೆ, ರಾಜೀನಾಮೆ ಅಥವಾ ತೆಗೆದು ಹಾಕಿದ ನಂತರ ಕೋರಂ ಅಭಾವವಾದರೆ.
4. ಕಾಯಿದೆ, ನಿಯಮದಲ್ಲಿ ಉಪವಿಧಿಗಳನ್ವಯ ಕಾರ್ಯನಿರ್ವಹಿಸದಿದ್ದರೆ.
5. ಸಹಕಾರಿ ವರ್ಷ ಮುಗಿದ ಆರು ತಿಂಗಳಲ್ಲಿ ವಾರ್ಷಿಕ ಸಾಮಾನ್ಯ ಸಭೆ ನಡೆಸದಿದ್ದರೆ.
6. ಆರ್ಥಿಕ ಅವ್ಯವಹಾರಗಳು ನಡೆದಿದ್ದರೆ.
7. ಸಹಕಾರಿಯ ರಚನೆ ಅಥವಾ ಕೆಲಸ ಇಕ್ಕಟ್ಟಿನ ಸ್ಥಿತಿ ಉಂಟಾದರೆ.
8. ಮಂಡಳಿಯ ಅವಧಿ ಮುಕ್ತಾಯವಾಗುವ ಮೊದಲು ಹೊಸ ಮಂಡಳಿ ರಚನೆಗೆ ಕ್ರಮಕೈಗೊಳ್ಳದಿದ್ದರೆ.
9. ಪ್ರತಿ ವರ್ಷ ಸೆಪ್ಟೆಂಬರ್ 1 ರೊಳಗೆ ಆಡಿಟ್ ವರದಿ ಪಡೆದು ಸಾಮಾನ್ಯ ಸಭೆ ಒಪ್ಪಿಗೆ ಪಡೆಯದಿದ್ದರೆ.
10. ಅಥವಾ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಂಯುಕ್ತ ಸಹಕಾರಿಗೆ ಮನವರಿಕೆಯಾದರೆ.

ಸಂಯುಕ್ತ ಸಹಕಾರಿ ಈ ಮೇಲ್ಕಂಡ ನ್ಯೂನತೆಗಳಿಗೆ ಸಂಬಂಧಪಟ್ಟಂತೆ, ಆಡಳಿತ ಮಂಡಳಿಯ ನಿರ್ದೇಶಕರಿಗೆ ಅವರ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸಿ, ಅವರ ಹೇಳಿಕೆಯನ್ನೇನಾದರೂ ಸಲ್ಲಿಸಿದರೆ, ಪರಿಶೀಲಿಸಿ, ಲಿಖಿತ ಆದೇಶದ ಮೂಲಕ ಸಕಾರಣಗಳೊಂದಿಗೆ ಮಂಡಳಿಯನ್ನು ರದ್ದುಗೊಳಿಸಿ/ಅಮಾನತ್ತಿನಲ್ಲಿಟ್ಟು 6 ತಿಂಗಳ ಅವಧಿ ಮೀರದಂತೆ ಸಹಕಾರಿ ವ್ಯವಹಾರವನ್ನು ನೋಡಿಕೊಳ್ಳಲು ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಬಹುದಾಗಿದೆ. ಈ ಅವಧಿಯನ್ನು ಪ್ರತಿಯೊಂದು ಸಾರಿ 6 ತಿಂಗಳು ವಿಸ್ತರಿಸಿ ಒಂದು ವರ್ಷಕ್ಕೆ ಮೀರದಂತೆ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಬಹುದು. ಯಾವುದೇ ಸಹಕಾರಿ ಆಡಳಿತ ಮಂಡಳಿಯನ್ನು ರದ್ದುಪಡಿಸಿ/ಅಮಾನತ್ತಿನಲ್ಲಿಟ್ಟು ಆಡಳಿತಾಧಿಕಾರಿಯನ್ನು ನೇಮಿಸುವ ಸಂಬಂಧ ಹಣಕಾಸು ನೀಡುವ ಸಂಸ್ಥೆಯ ಜೊತೆ ಸಮಾಲೋಚಿಸಿದ ನಂತರ ಆಡಳಿತಾಧಿಕಾರಿಯನ್ನು ನೇಮಿಸಬಹುದು. ಈ ಮಂಡಳಿ ರದ್ದತಿಯು/ಅಮಾನತ್ತು ಒಂದು ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಿದ್ದರೆ, ಆ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ನಂತರವೇ ಒಂದು ವರ್ಷದ ಅವಧಿಗೆ ಆಡಳಿತಾಧಿಕಾರಿಯನ್ನು ನೇಮಿಸತಕ್ಕದ್ದು. ಆಡಳಿತಾಧಿಕಾರಿಯನ್ನು ನೇಮಿಸಿದ ಆದೇಶದ ನಂತರ, ರದ್ದುಪಡಿಸಲಾದ ಆಡಳಿತ ಮಂಡಳಿಯ ನಿರ್ದೇಶಕರು 4 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ. ಭಾರತೀಯ ರಿಸರ್ವ್ ಬ್ಯಾಂಕಿನಿಂದ ಒಂದು ಸಹಕಾರಿ ಬ್ಯಾಂಕಿನ ಸಂಬಂಧ ಸಾರ್ವಜನಿಕರ ಹಿತದೃಷ್ಟಿಯಿಂದ ಅಥವಾ ಠೇವಣಿದಾರರ ಹಿತಾಸಕ್ತಿಯಿಂದ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಲು ಅಪೇಕ್ಷಿಸಿದಾಗ ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸುವ ಅವಧಿಗೆ ಆಡಳಿತಾಧಿಕಾರಿಯನ್ನು ನೇಮಿಸುವ ಅಧಿಕಾರ ಮತ್ತು ಜವಾಬ್ದಾರಿ ಸಂಯುಕ್ತ ಸಹಕಾರಿಗೆ ಇರತಕ್ಕದ್ದು. 97ನೇ ಸಂವಿಧಾನ ತಿದ್ದುಪಡಿ ನಂತರ ಒಂದು ಸಹಕಾರಿಯ ಆಡಳಿತ ಮಂಡಳಿ ರದ್ದು ಪಡಿಸುವುದರ ಜೊತೆ, ಮಂಡಳಿಯನ್ನು ಅಮಾನತ್ತಿನಲ್ಲಿಡಲೂ ಸಹ ಅವಕಾಶ ಕಲ್ಪಿಸಿದೆ. [ಕಲಂ.38(1)(vi)] ಮತ್ತು ಅಮಾನತ್ತಿನಲ್ಲಿಡಲಾದ ಮಂಡಳಿಗೆ ಆಡಳಿತಾಧಿಕಾರಿ ಅವಧಿ ಮುಗಿದ ನಂತರ ಅದೇ ಮಂಡಳಿಗೆ ಅಧಿಕಾರ ವಾಪಸ್ ನೀಡಬೇಕು.

ಇದರ ಜೊತೆಗೆ 97ನೇ ಸಂವಿಧಾನ ತಿದ್ದುಪಡಿಯಲ್ಲಿ ಸರ್ಕಾರದ ಷೇರು, ಸಾಲ, ಧನ ಸಹಾಯ ಹಾಗೂ ಗ್ಯಾರಂಟಿ ಪಡೆದಿಲ್ಲದ ಮಂಡಳಿಯನ್ನು ರದ್ದು ಪಡಿಸಲು ಅವಕಾಶವಿಲ್ಲವೆಂದು ಸೌಹಾರ್ದ ಕಾಯಿದೇ ಕಲಂ.38(1)(ತು) ರಲ್ಲಿ ಸೇರಿಸಲಾಗಿದೆ. ಅಂದರೆ ತಪ್ಪು ಮಾಡಿದ ಮಂಡಳಿ, ಆಡಳಿತಾಧಿಕಾರಿ ಅವಧಿ ಮುಗಿದ ನಂತರ, ಅದೇ ಮಂಡಳಿ ಮರು ಸ್ಥಾಪನೆಯಾಗುತ್ತಿದೆ. ಸಂಯುಕ್ತ ಸಹಕಾರಿಗೆ ಕಲಂ.25(2) ರನ್ವಯ ಯಾವ ಸಹಕಾರಿಯು ಮಂಡಳಿ, ಅವಧಿಗೆ ಪೂರ್ವದಲ್ಲಿ ಚುನಾವಣೆ ನಡೆಸದಿದ್ದರೆ, ಸೆಪ್ಟೆಂಬರ್ 25 ರೊಳಗೆ ಸಾಮಾನ್ಯ ಸಭೆ ನಡೆಸದಿದ್ದರೆ, ಲೆಕ್ಕ ಪರಿಶೋಧನಾ ವರದಿ ಪಡೆದು ಸಾಮಾನ್ಯ ಸಭೆ ಒಪ್ಪಿಗೆ ಪಡೆಯುದಿದ್ದರೆ, ಸಂಯುಕ್ತ ಸಹಕಾರಿ ಮತ್ತು ನಿಬಂಧಕರಿಗೆ ನಿರ್ಧಿಷ್ಟ ಪಡಿಸಿದ ವರದಿ ಸಲ್ಲಿಸದಿದ್ದರೆ, 5 ವರ್ಷದ ಅವಧಿ ವರೆವಿಗೆ ವ್ಯಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಜವಾಬ್ದಾರರಾಗುತ್ತಾರೆ. ಮತ್ತು ಅನರ್ಹತೆಗೊಳ ಪಡಿಸಲು ಅವಕಾಶ ಇರುವುದರಿಂದ, ರದ್ದು/ಅಮಾನತ್ತು ಮಾಡಿದ ಮಂಡಳಿ ಸದಸ್ಯರನ್ನು ಕಲಂ.25 ರನ್ನು 5 ವರ್ಷಕ್ಕೆ ಮೀರದ ಅವಧಿಗೆ ಅನರ್ಹತೆಗೊಳ ಪಡಿಸಲು ಅವಕಾಶ ಇದೆ. [ಕಲಂ.25(2)]

**ಆಡಳಿತಾಧಿಕಾರಿಯನ್ನು ನೇಮಿಸುವ ಪೂರ್ವದಲ್ಲಿ ಅನುಸರಿಸಬೇಕಾದ ಅಂಶಗಳು (ಚೆಕ್‌ಲಿಸ್ಟ್)**

ಆಡಳಿತ ಮಂಡಳಿಯು ಸಹಕಾರಿಯ ದ್ಯೆಯೋದ್ದೇಶಗಳನ್ನು ಸದಸ್ಯರ ಹಿತಕ್ಕಾಗಿ ಕಾರ್ಯ ನಿರ್ವಹಿಸುವುದು ಅವಶ್ಯಕ.ನಿರ್ವಹಿಸುತ್ತಿಲ್ಲವೆಂದು

ಗಮನಕ್ಕೆ ಬಂದಾಗ, ಸಂಯುಕ್ತ ಸಹಕಾರಿ ಗಮನಿಸಬೇಕಾದ ಅಂಶಗಳು ಈ ಕೆಳಕಂಡಂತೆ ಇರತಕ್ಕದ್ದು.ಆಡಳಿತ ನಿರ್ವಹಣೆಯಲ್ಲಿ ಈ ಕೆಳಕಂಡ ನ್ಯೂನತೆಗಳಿವೆಯೇ?

1. ಕಾಯಿದೆ, ನಿಯಮ ಮತ್ತು ಉಪವಿಧಿಗಳ ಮೂಲಕ ವಹಿಸಲ್ಪಟ್ಟ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸತತವಾಗಿ ತಪ್ಪುಗಳನ್ನು ಎಸಗುತ್ತಿದ್ದರೆ ಅಥವಾ ನಿರ್ಲಕ್ಷಿಸುತ್ತಿದೆಯೇ (ಹೌದು/ಇಲ್ಲ)

2. ಸಹಕಾರಿ ಅಥವಾ ಸದಸ್ಯರ ಹಿತಾಸಕ್ತಿಗೆ ವಿರುದ್ಧವಾಗಿ ಕೃತ್ಯಗಳನ್ನು ಎಸಗುತ್ತಿದೆಯೇ (ಹೌದು/ಇಲ್ಲ)

3. ಗಂಭೀರ ಆರ್ಥಿಕ ಅಕ್ರಮಗಳು ಮತ್ತು ವಂಚನೆಗಳು ಪತ್ತೆಯಾಗಿದೆಯೇ?(ಹೌದು/ಇಲ್ಲ)

4. ಪ್ರತಿ ವರ್ಷಗಳು ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡಿಸಲು ವಿಫಲವಾಗಿದೆಯೇ (ಹೌದು/ಇಲ್ಲ)

5. ಸಹಕಾರಿ ವಿರುದ್ಧ ನ್ಯಾಯಾಂಗದ ನಿರ್ದೇಶನಗಳನ್ನು ಹೊರಡಿಸಲಾಗಿದೆಯೇ? (ಹೌದು/ಇಲ್ಲ)

6. ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೇ? ಅಥವಾ ಇಕ್ಕಟ್ಟಿನ ಸ್ಥಿತಿ ನಿರ್ಮಾಣವಾಗಿದೆಯೇ? (ಹೌದು/ಇಲ್ಲ)

7. ಕಾಯಿದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಕಾಯಿದೆ ಅಡಿ ಹೊರಡಿಸಲಾದ ನಿರ್ದೇಶನಗಳನ್ನು ಒಳಗೊಂಡಂತೆ, ಸಂಯುಕ್ತ ಸಹಕಾರಿ ಅಥವಾ ನಿಬಂಧಕರಿಂದ ಹೊರಡಿಸಲಾದ ಯಾವುದೇ ಆದೇಶ ಮತ್ತು ನಿರ್ದೇಶನಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೇ? (ಹೌದು/ಇಲ್ಲ)

8. ಸಹಕಾರಿ ಗುರುತರವಾದ ಆರ್ಥಿಕ ಅವ್ಯವಹಾರ ಅಥವಾ ವಂಚನೆ ಎಸಗಿದ್ದಾರೆಯೇ? (ಹೌದು/ಇಲ್ಲ)

9. ಈ ಹಿಂದೆ ನ್ಯೂನತೆಗಳ ಬಗ್ಗೆ ಸಹಕಾರಿ ಯಾವುದಾರೂ ಸೂಚನೆ ಅಥವಾ ನಿರ್ದೇಶನಗಳನ್ನು ಕೊಡಲಾಗಿದೆಯೇ? (ಹೌದು/ಇಲ್ಲ)

10. ಕೆಳ ಅಧಿಕಾರಿಯಿಂದ ಬಂದ ಪ್ರಸ್ತಾವನೆಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನೇನಾದರೂ ಪಟ್ಟಿ ಮಾಡಲಾಗಿದೆಯೇ?

ಎ) ಆಡಳಿತದಲ್ಲಿ ಅವ್ಯವಹಾರ

ಬಿ) ಕಾಯಿದೆ, ನಿಯಮ ಮತ್ತು ಉಪವಿಧಿಗಳ ಉಲ್ಲಂಘನೆ

ಸಿ) ಆಡಿಟ್ ವಿಚಾರಣೆಯಲ್ಲಿ ಕಂಡ ನ್ಯೂನತೆಗಳನ್ನು ಸರಿಪಡಿಸದೇ ಇರುವುದು

ಡಿ) ಆರ್ಥಿಕ ಅವ್ಯವಹಾರಗಳು ಮತ್ತು ಸುಸ್ತಿ ಸಾಲದ ವಸೂಲಾತಿ ಬಗ್ಗೆ ಕ್ರಮ ಜರುಗಿಸದೇ ಇರುವುದು

ಇ) ಸತತವಾಗಿ ನಷ್ಟವನ್ನು ಹೊಂದುತ್ತಿರುವುದು.

ಈ) ಸಹಕಾರಿ ನಿಷ್ಕ್ರಿಯಗೊಂಡಿರುವುದು.

ಮೇಲ್ಕಂಡ ವ್ಯವಹಾರಗಳ ಬಗ್ಗೆ ಕೆಳ ಅಧಿಕಾರಿಯು ಸಂಬಂಧಪಟ್ಟ ಸಹಕಾರಿಗೆ ನೋಟೀಸ್ ಅಥವಾ ಸೂಚನೆ ಕಳುಹಿಸಿದ್ದರೆ, ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯ ಸದಸ್ಯರಿಗೆ, ಲಿಖಿತವಾಗಿ ನ್ಯೂನತೆಗಳ ಪಟ್ಟಿಯನ್ನು ಮಾಡಿ, ಆರೋಪವನ್ನು ಹೊರಿಸಿ ನೋಟೀಸ್ ಜಾರಿ ಮಾಡುವುದು.ನೋಟೀಸ್ ಜಾರಿ ಮಾಡಿದ ನಂತರ ಲಿಖಿತವಾಗಿ ಉತ್ತರಗಳನ್ನು ಕೊಡಲು ಅವಕಾಶಗಳನ್ನು ಕಲ್ಪಿಸುವುದು. ಮಂಡಳಿಯ ನಿರ್ದೇಶಕರು ಸಲ್ಲಿಸಿದ ಉತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿ ಸಂಯುಕ್ತ ಸಹಕಾರಿ ಸ್ವತಂತ್ರ ಅಭಿಪ್ರಾಯಕ್ಕೆ ಬಂದು ಮಂಡಳಿಯನ್ನು ಅಮಾನತ್ತು/ರದ್ದುಪಡಿಸಬೇಕೆಂದು ತೀರ್ಮಾನ ತೆಗೆದುಕೊಂಡಾಗ, ಅಂತಹ ತೀರ್ಮಾನಕ್ಕೆ ಸಮರ್ಥ ಕಾರಣಗಳನ್ನು ಕೊಡತಕ್ಕದ್ದು.

ಒಂದು ಸಹಕಾರಿ ಯಾವ ಆರೋಪಗಳೂ ಇಲ್ಲದೇ ಕಾರ್ಯ ನಿರ್ವಹಿಸುತ್ತಿದ್ದು, ಅಂದರೆ ಆಡಿಟ್ ವರದಿಯಲ್ಲಿ, ವಿಚಾರಣಾ ವರದಿಯಲ್ಲಿ, ಪರಿವೀಕ್ಷಣಾ ವರದಿಯಲ್ಲಿ ಅಥವಾ ಭಾರತೀಯ ರಿಸರ್ವ್ ಬ್ಯಾಂಕಿನ ವರದಿಯಲ್ಲಿ ಯಾವುದೇ ನ್ಯೂನತೆಗಳನ್ನು ತಿಳಿಸದೇ ಅಥವಾ ಆರೋಪಗಳಿಲ್ಲದೇ ಮೊದಲನೇ ಬಾರಿಗೆ ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಸೂಕ್ತವಲ್ಲ. ಸಂಯುಕ್ತ ಸಹಕಾರಿ ಯಾವುದೇ ಸಹಕಾರಿ ವ್ಯವಹಾರದಲ್ಲಿ ಮಧ್ಯಪ್ರವೇಶ ಮಾಡಬೇಕಾದರೆ, ಆ ಸಹಕಾರಿಯಲ್ಲಿ ನಡೆದಿರಬಹುದಾದ ನ್ಯೂನತೆಗಳ ಬಗ್ಗೆ ಒಂದೆರಡು ಬಾರಿ ಸೂಚನೆ ಮತ್ತು

ನಿರ್ದೇಶನಗಳನ್ನು ಕೊಡುವುದು ಸೂಕ್ತ. ಆ ಸೂಚನೆಗಳನ್ವಯ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ಅವಕಾಶ ಕಲ್ಪಿಸುವುದು, ಸಂಯುಕ್ತ ಸಹಕಾರಿ ಒಬ್ಬ ದಾರ್ಶನಿಕ ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬುದನ್ನು ನಿರೂಪಿಸುತ್ತದೆ. ಆಡಳಿತಾಧಿಕಾರಿಯನ್ನು ನೇಮಿಸುವುದು ಆ ಸಹಕಾರಿಯ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಜರುಗಿಸದೇ ಇದ್ದ ಸಂದರ್ಭದಲ್ಲಿ ಮಾತ್ರ ಎಂಬುದನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು.

ಆಡಳಿತ ಮಂಡಳಿಯನ್ನು ಅಮಾನತ್ತು/ರದ್ದುಪಡಿಸಬೇಕೆಂದು ತೀರ್ಮಾನಿಸಿದಾಗ ಅನುಸರಿಸಬೇಕಾದ ನೀತಿ ನಿಯಮಗಳು (ಚೆಕ್‌ಲಿಸ್ಟ್)

1. ಸತತವಾಗಿ ತಪ್ಪು ಮಾಡುತ್ತಿದ್ದಾರೆಂಬ ಅಂಶಗಳ ಬಗ್ಗೆ ನಿರ್ದೇಶಕರುಗಳಿಗೆ ನೋಟೀಸ್ ರವಾನಿಸುವುದು. ಆ ನೋಟೀಸಿನಲ್ಲಿ ಯಾವ ಕಾರಣಕ್ಕಾಗಿ ಆಡಳಿತ ಮಂಡಳಿಯನ್ನು ರದ್ದುಪಡಿಸಲು/ಅಮಾನತ್ತು ಮಾಡಲು ನೋಟೀಸ್ ನೀಡಲಾಗಿದೆಯೋ, ಆ ಕಾರಣಗಳು ಸ್ಪಷ್ಟವಾಗಿರಬೇಕು.

2. ಆಡಳಿತ ಮಂಡಳಿ ಮತ್ತು ನಿರ್ದೇಶಕರು ಸಲ್ಲಿಸಿದ ಹೇಳಿಕೆಗಳನ್ನು ಉತ್ತರಗಳನ್ನು ಸಮರ್ಪಕವಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು ಮತ್ತು ಆಡಳಿತ ಮಂಡಳಿಯ ಕರ್ತವ್ಯ ನಿರ್ವಹಣೆಯಲ್ಲಿ ಚ್ಯುತಿ ಮಾಡಲಾಗಿದೆ ಎಂಬ ತೀರ್ಮಾನಕ್ಕೆ ಬರಬೇಕು.

3. ನಿಗಧಿಪಡಿಸಿದ ಅವಧಿಯೊಳಗೆ ಅಭಿಪ್ರಾಯ ತಿಳಿಸದಿದ್ದರೆ ಅಭಿಪ್ರಾಯವೇನೂ ಇಲ್ಲವೆಂದು ತೀರ್ಮಾನಕ್ಕೆ ಬಂದು ಆದೇಶಿಸಬಹುದು.

4. ಆಡಳಿತಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ, ಎಷ್ಟು ಅವಧಿಗಾಗಿ ನೇಮಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.

5. ಕಾಯಿದೆಯಲ್ಲಿ 6 ತಿಂಗಳ ಅವಧಿ ಮೀರದಂತೆ ಎಂದು ನಮೂದಿಸಿದೆ. ಅಂದರೆ ಆದೇಶ ಮಾಡುವಾಗ 6 ತಿಂಗಳನ್ನೇ ನಿಗಧಿಪಡಿಸಬೇಕಾಗಿಲ್ಲ. ಸಾಮಾನ್ಯವಾಗಿ ಆಡಳಿತಾಧಿಕಾರಿಯು ಹೊಸ ಚುನಾವಣೆ ಮಾಡುವುದೇ ಒಂದು ಮುಖ್ಯ ಕರ್ತವ್ಯ. ಆದ್ದರಿಂದ 6 ತಿಂಗಳ ಗರಿಷ್ಠ ಅವಧಿಗೆ ಬದಲಾಗಿ ಹೊಸದಾಗಿ ಚುನಾವಣೆ ನಡೆಸಲು ಬೇಕಾಗುವ ಅವಧಿಗಷ್ಟೆ ಆಡಳಿತಾಧಿಕಾರಿಯನ್ನು ನೇಮಿಸಬಹುದು. ಕಾಯಿದೆಯಲ್ಲಿ ಮತ್ತೆ ಒಂದು ವರ್ಷ ವಿಸ್ತರಿಸುವ ಅವಕಾಶವಿದ್ದರೂ ಆ ಅವಕಾಶವನ್ನು ಸಾಮಾನ್ಯವಾಗಿ ಉಪಯೋಗಿಸತಕ್ಕದ್ದಲ್ಲ. ಅಂದರೆ ಒಂದು ಸಹಕಾರಿ ನಡೆಸಿಕೊಂಡು ಹೋಗುವುದು ಪ್ರಜಾಪ್ರಭುತ್ವದಡಿ ಒಂದು ಆಡಳಿತ ಮಂಡಳಿಗೆ ನಿಹಿತವಾಗಿರತಕ್ಕದ್ದು. ಮತ್ತು ಆ ಆಡಳಿತ ಮಂಡಳಿಯೇ ಸದಸ್ಯರ ಅಗತ್ಯಗಳನ್ನು ಪೂರೈಸಲು ಕ್ರಮ ಜರುಗಿಸಬೇಕು.

**ಆಡಳಿತಾಧಿಕಾರಿಯ ಅಧಿಕಾರಗಳು:**

ಒಂದು ಸಹಕಾರಿ ಆಡಳಿತ ಮಂಡಳಿಯನ್ನು ಅಮಾನತ್ತು/ರದ್ದುಪಡಿಸಿ ಆಡಳಿತಾಧಿಕಾರಿಯನ್ನು ಆದೇಶದಲ್ಲಿ ನಮೂದಿಸಿದ ಅವಧಿಗೆ ನೇಮಕ ಮಾಡಲಾಗುತ್ತದೆ.ಅಂತಹ ಆಡಳಿತಾಧಿಕಾರಿಯು ಆ ಸಹಕಾರಿಯ ಆಡಳಿತವನ್ನು ವಹಿಸಿಕೊಳ್ಳುವುದು ಅವನ ಜವಾಬ್ದಾರಿ.ಅಧಿಕಾರ ವಹಿಸಿಕೊಂಡ ನಂತರ ಆಡಳಿತಾಧಿಕಾರಿ ಮಾಡಲೇಬೇಕಾದ ಕೆಲವು ಕರ್ತವ್ಯಗಳು ಮತ್ತು ಜವಾಬ್ದಾರಿಗಳು.

1. ಸಹಕಾರಿ ಆಡಳಿತವನ್ನು ಒಂದು ಠರಾವಿನ ಮೂಲಕ ಅಧಿಕಾರ ಗ್ರಹಣ ಮಾಡುವುದು.

2. ತನ್ನ ಅಧಿಕಾರಾವಧಿಯೊಳಗೆ ಆಡಳಿತ ಮಂಡಳಿಯನ್ನು ರದ್ದುಪಡಿಸಿದ ಕಾರಣಗಳನ್ನು ಸರಿಪಡಿಸಲು ಸಾಧ್ಯವಾಗುವುದಿದ್ದರೆ ಅವನ ಅವಧಿಯೊಳಗೆ ಸರಿಪಡಿಸುವುದು. ಇಲ್ಲವಾದರೆ ಮುಂದಿನ ಆಡಳಿತ ಮಂಡಳಿಗೆ ನಿರ್ವಹಿಸಲು ಬಿಡುವುದು.

3. ಹೊಸ ಆಡಳಿತ ಮಂಡಳಿಯ ರಚನೆಗೆ ಮತ್ತು ಚುನಾವಣೆ ನಡೆಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು ಅಂದರೆ

ಎ) ಚುನಾವಣೆ ವೇಳೆ, ಸಮಯ, ದಿನಾಂಕವನ್ನು ನಿಗಧಿಪಡಿಸುವುದು.

ಬಿ) ಚುನಾವಣೆ ಅಧಿಕಾರಿ ನೇಮಿಸಲು ಚುನಾವಣಾ ಪ್ರಾಧಿಕಾರಕ್ಕೆ ವಿನಂತಿ ಮಾಡುವುದು

ಸಿ) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಮತದಾರ ಪಟ್ಟಿ ಮತ್ತು ಸುಸ್ತಿದಾರ ಪಟ್ಟಿ ತಯಾರಿಸುವಂತೆ ಕ್ರಮವಿಡುವುದು

ಡಿ) ಚುನಾವಣೆಗೆ ಪೂರ್ವಸಿದ್ದತೆ ಮಾಡಲು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ನಿರ್ದೇಶನ ನೀಡುವುದು

ಇ) ಸಹಕಾರಿ ವ್ಯವಹಾರವನ್ನು ಸಮರ್ಪಕವಾಗಿ ನಿರ್ವಹಿಸಲು ಕಾರ್ಯಾಂಗದ ಮೇಲೆ ನಿಯಂತ್ರಣವನ್ನು ಹೊಂದುವುದು.

ಎಫ್) ಅಗತ್ಯ ಬಿದ್ದರೆ ಕಾರ್ಯಾಂಗದ ವ್ಯಕ್ತಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವುದು.

ಇದರಲ್ಲಿ ಮತ್ತೊಂದು ವಿಶೇಷವೆಂದರೆ, ಮಂಡಳಿಯನ್ನು ಅಮಾನತ್ತಿನಲ್ಲಿಡಲು ಅವಕಾಶವನ್ನು ಪ್ರಥಮ ಬಾರಿಗೆ ಕಲ್ಪಿಸಿದೆ. ಅಮಾನತ್ತಿನಲ್ಲಿಟ್ಟರೆ

ಮಂಡಳಿ ಮತ್ತು ಸದಸ್ಯರು ತಮ್ಮ ಸ್ಥಾನ ಕಳೆದುಕೊಳ್ಳುವುದಿಲ್ಲ ಮತ್ತು 3–6 ತಿಂಗಳ ಅವಧಿಗೆ ಮತ್ತೆ ತಮ್ಮ ಮಂಡಳಿ ಸದಸ್ಯತ್ವ ಪಡೆಯುತ್ತಾರೆ. ಯಾವ ಕಾರಣದಿಂದ ಸಹಕಾರಿಯ ಮಂಡಳಿಯನ್ನು ಅಮಾನತ್ತಿನಲ್ಲಿಡಲಾಗಿತ್ತೊ ಅದನ್ನು ಸರಿಪಡಿಸದೇ ಇದ್ದರೂ ಅಥವಾ ಮಂಡಳಿ ಸದಸ್ಯರು ಅನರ್ಹತೆಗೊಳ ಪಡುತ್ತಿದ್ದರೂ, ಅದೇ ಮಂಡಳಿ ಸದಸ್ಯರು ಮರಳಿ, ಮಂಡಳಿ ಸದಸ್ಯರಾಗಿ ಮುಂದುವರಿಯುತ್ತಾರೆ. ಇದರ ಜೊತೆಗೆ ಕಲಂ.25 ರಡಿ ನಿರ್ದೇಶಕರು ನಿರ್ವಹಿಸಬೇಕಾದ ಕರ್ತವ್ಯ ನಿರ್ವಹಿಸದಿದ್ದರೆ, ವ್ಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಅನರ್ಹತೆಗೊಳ್ಳಪಟ್ಟರೂ, ಮಂಡಳಿಯನ್ನು ಅಮಾನತ್ತಿನಲ್ಲಿ ಇಟ್ಟಾಗ, ಹಾಗೂ ನಿರ್ದೇಶಕರಾಗಲು ಸಾಧ್ಯವಿಲ್ಲವೆಂದಾದರೂ, ಕಲಂ.38 ರಲ್ಲಿ ಅವರನ್ನು ಮರುಸ್ಥಾಪನೆ ಮಾಡಬೇಕಾಗುತ್ತಿದೆ. ಇದನ್ನು ಸರಿಪಡಿಸಲು ಸೌಹಾರ್ದ ಕಾಯಿದೆಗೆ ತಿದ್ದುಪಡಿ ತರಲಾಗದು, ಏಕೆಂದರೆ, ಇದನ್ನು ಸಂವಿಧಾನದಲ್ಲಿ ಸೇರ್ಪಡೆಯಾಗಿದೆ. ಇಲ್ಲವಾದರೆ ಕಲಂ.38ಎ(1) ರನ್ವಯ, ಕಲಂ.25 ರಡಿ ಮಂಡಳಿ ನಿರ್ದೇಶಕರು ಅನರ್ಹತೆಗೊಳಿಸಿ ಹೊಸದಾಗಿ ಮಂಡಳಿ ರಚನೆಗೆ ಚುನಾವಣಾ ಪ್ರಾಧಿಕಾರದ ಮೂಲಕ ಮರು ಚುನಾವಣೆ ನಡೆಸಬೇಕು.

**ಮಂಡಳಿಯನ್ನು ರದ್ದುಪಡಿಸುವುದು ಅಥವಾ ಅಮಾನತ್ತು ಮಾಡುವುದು ಎಂದರೇನು?**

ಕಲಂ.38 ರಲ್ಲಿ ಸೂಚಿಸಿದ ಕಾರಣಗಳ ಆಧಾರದ ಮೇಲೆ ಮತ್ತು ಸಂವಿಧಾನದ ಆಶಯದಂತೆ, ಸಹಕಾರಿಯ ಮಂಡಳಿ ತನ್ನ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ, ಅಂತಹ ಮಂಡಳಿ ಸದಸ್ಯತ್ವ ಮೊಟಕುಗೊಳಿಸಿ ಸಂಯುಕ್ತ ಸಹಕಾರಿ ನೇಮಿಸುವ ಆಡಳಿತಾಧಿಕಾರಿಗೆ ವರ್ಗಾಯಿಸುವುದು. ಅಂದರೆ ಅಂತಹ ಅಧಿಕಾರಿ ಮಂಡಳಿಯ ಸ್ಥಾನದಲ್ಲಿ ಕಾರ್ಯನಿರ್ವಹಿಸಬೇಕು. ಸಹಕಾರಿಯ ಮಂಡಳಿ ನಿರ್ವಹಿಸುತ್ತಿದ್ದ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಆಡಳಿತಾಧಿಕಾರಿ ನಿರ್ವಹಿಸತಕ್ಕದ್ದು. ಮಂಡಳಿ ನಿರ್ವಹಿಸುತ್ತಿದ್ದ ಕೆಲಸಗಳ ಜವಾಬ್ದಾರಿ ಎಂದರೆ, ಸಹಕಾರಿ ಕಾರ್ಯನಿರ್ವಹಣೆ ಮೇಲೆ ಮೇಲುಸ್ತುವಾರಿ ಮಾಡುವುದು. ಸಹಕಾರಿ ಸಿಬ್ಬಂದಿ ಮತ್ತು ಸಹಕಾರಿಯೂ ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ದಾಖಲೆಯನ್ನು ಪರಿಶೀಲಿಸಿ, ಸಹಕಾರಿಯ ದಿನ ನಿತ್ಯದ ಕೆಲಸ ಮುಂದುವರಿಸಿಕೊಂಡು ಹೋಗಲು ಮತ್ತು ಯಾವ ಕಾರಣದಿಂದ ಸಹಕಾರಿಯ ಮಂಡಳಿಯನ್ನು ರದ್ದು ಪಡಿಸಲಾಗಿದೆಯೇ ಅಥವಾ ಅಮಾನತ್ತಿನಲ್ಲಿ ಡಲಾಗಿದೆಯೇ, ಅಂತಹ ವಿಷಯಗಳು ಅನುಪಾಲನೆ ಮಾಡಲು ಕ್ರಮ ವಹಿಸುವುದು. ಇದರಲ್ಲಿ ಆಡಳಿತಾಧಿಕಾರಿ ಅರ್ಥ ಮಾಡಿಕೊಳ್ಳಲೇಬೇಕಾದ ಪ್ರಮುಖ ಅಂಶವೆಂದರೆ, ಯಾವುದೇ ಕಾಲದಲ್ಲಿ ಚುನಾಯಿತ ಮಂಡಳಿಯೇ ಸಹಕಾರಿಯನ್ನು ಮುನ್ನಡೆಸಲು ಜವಾಬ್ದಾರಿ ಇದೆ ಎಂಬುದನ್ನು ತಿಳಿದಿರಬೇಕು.ಅಂದರೆ ಯಾವ ತಪ್ಪಿನ ಆಧಾರದ ಮೇಲೆ ಮಂಡಳಿಯನ್ನು ರದ್ದು ಪಡಿಸಲಾಗಿದೆಯೇ ಅದೇ ಚುನಾಯಿತ ಮಂಡಳಿ ಸರಿಪಡಿಸಬೇಕು ಎಂಬುದು ಪ್ರಜಾಪ್ರಭುತ್ವದ ನೀತಿ ಎಂದು ಆಡಳಿತಾಧಿಕಾರಿ ಭಾವಿಸಬೇಕು.ಆದರೂ ತಪ್ಪುಗಳನ್ನು ಸರಿಪಡಿಸಲು ಆಡಳಿತಾಧಿಕಾರಿ, ಅಧಿಕಾರ ಹೊಂದಿದ್ದಾನೆ.

ಸಹಕಾರಿ ಮಂಡಳಿಯನ್ನು ರದ್ದು ಪಡಿಸುವುದು, ಅಮಾನತ್ತಿನಲ್ಲಿಡುವುದು ಸಂಯುಕ್ತ ಸಹಕಾರಿ ಜವಾಬ್ದಾರಿ ಮತ್ತು ಕರ್ತವ್ಯವೆಂದಾಗ, ಸಂಯುಕ್ತ ಸಹಕಾರಿಯು ಚುನಾಯಿತ ಮಂಡಳಿ ಎಂದು ಅರ್ಥೈಸಬೇಕು. ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಆದೇಶ ಹೊರಡಿಸಿದರೂ, ಅದರ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಚುನಾಯಿತ ಮಂಡಳಿಗೆ ಮಾತ್ರ. ಚುನಾಯಿತ ಮಂಡಳಿ ಎಂದರೆ ಪರ ಮತ್ತು ವಿರೋದಗಳಿರಬಹುದು ಅಂತಹ ಸಂದರ್ಭದಲ್ಲಿ ಸರ್ವಾನುಮತದ ಬದಲು ಬಹುಮತದ ತೀರ್ಮಾನ ಮಾಡಿದರೂ ಅದನ್ನು ಜಾರಿ ಮಾಡುವ ಜವಾಬ್ದಾರಿ ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ವಿಹಿತವಾಗಿದೆ. ಮಂಡಳಿ ತೀರ್ಮಾನದಲ್ಲಿ ಗುಂಪುಗಾರಿಕೆ, ಸ್ವಜನ ಪಕ್ಷಪಾತ, ರಾಜಕೀಯ ಬಿನ್ನಾಭಿಪ್ರಾಯಗಳು ತಲೆ ಎತ್ತಿದರೂ, ಬಹುಮತದ ತೀರ್ಮಾನ ಜಾರಿಯಾಗತಕ್ಕದ್ದು.

97ನೇ ಸಂವಿಧಾನದ 243 ಝಡ್ಎಲ್ ನಲ್ಲಿ (5) ಕಾರಣಗಳ ಮೇಲೆ ಬಂದು ಸಹಕಾರಿ ಮಂಡಳಿಯನ್ನು ರದ್ದು ಅಥವಾ ಅಮಾನತ್ತು ಮಾಡಬಹುದೆಂದಿದ್ದರೂ ಸೌಹಾರ್ದ ಕಾಯಿದೆ ಕಲಂ.38 ರಲ್ಲಿ (10) ವಿಷಯಗಳ ಉಲ್ಲೇಖವಿದೆ. ಅಂದರೆ ಸಂವಿಧಾನದ ಅವಕಾಶಕ್ಕೆ ಹೆಚ್ಚುವರಿಯಾಗಿ (5) ವಿಷಯಗಳನ್ನು ಸೇರಿಸಿ 2013 ರಲ್ಲಿ ತಿದ್ದುಪಡಿ ತಂದಿದೆ. ಸಂವಿಧಾನದಲ್ಲಿ ಸೇರ್ಪಡೆ ಮಾಡಿದ ವಿಷಯಗಳಲ್ಲದೇ ಹೆಚ್ಚುವರಿ ವಿಷಯಗಳು, ಸಂವಿಧಾನದ ವಿರುದ್ದವಾದ ಯಾವುದೇ ಸೇರ್ಪಡೆಯಾಗದೇ ಇದ್ದುದರಿಂದ, ಇದನ್ನು ಸಂವಿಧಾನ ಬಾಹಿರ ಎಂದು ಹೇಳಲಾಗದು. ಆದರೆ ಪೀಠಿಕೆಯಲ್ಲಿ ತಿಳಿಸಿದಂತೆ ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಧನ ಪಡೆಯದೇ ಇದ್ದರೆ, ಅಂತಹ ಸಹಾಕಾರಿಯನ್ನು ರದ್ದು ಪಡಿಸುವುದು ಅಥವಾ ಅಮಾನತ್ತಿನಲ್ಲಿಡಬಾರದೆಂಬ ನೀತಿಗೆ ವಿರುದ್ದವಾಗಿ, ಸೌಹಾರ್ದ ಸಹಕಾರಿ ಮಂಡಳಿಯನ್ನು ರದ್ದು ಅಥವಾ ಅಮಾನತ್ತಿನಲ್ಲಿಡ ಬೇಕು. ಏಕೆಂದರೆ ಸೌಹಾರ್ದ ಕಾಯಿದೆಯಲ್ಲಿ ಸರ್ಕಾರದಿಂದ ಸಹಾಯ ಧನ ಪಡೆಯಲು ಅವಕಾಶವೇ ಇಲ್ಲ. ಈ ಬಗ್ಗೆ ವಿಮರ್ಷೆ ಅವಶ್ಯಕ.

ಇದರ ಜೊತೆಗೆ ಸಂಯುಕ್ತ ಸಹಕಾರಿ ರದ್ದು ಅಥವಾ ಅಮಾನತ್ತಿನಲ್ಲಿಡಲು ತೀರ್ಮಾನ ತೆಗೆದು ಕೊಳ್ಳುವಾಗ ತನ್ನ ಅಭಿಪ್ರಾಯ ಸಂಯುಕ್ತ

ಸಹಕಾರಿಯ ಸ್ವಯಂ ನಂಬಿಕೆ ಪಡೆದಿರಬೇಕು.(Federal Co-operative shall form its own opinion) ಅಂದರೆ ಕಲಂ.38 ನಿಗದಿ ಪಡಿಸಿರುವ ಕಾರಣಗಳ ಮೇಲೆ ತೀರ್ಮಾನ ತೆಗೆದುಕೊಳ್ಳುವಾಗ, ಸಹಕಾರಿಯ ಮಂಡಳಿ ತಪ್ಪು ನಿರ್ದಾರ ತೆಗೆದುಕೊಂಡಿದೆ ಎಂದು ಸ್ಪಷ್ಟವಾಗಿ ಸಂಯುಕ್ತ ಸಹಕಾರಿಗೆ ಮನದಟ್ಟಾದ ನಂತರವೇ ಸಹಕಾರಿಯ ಮಂಡಳಿಗೆ ನೋಟೀಸ್ ನೀಡಲು ತೀರ್ಮಾನಿಸಬೇಕು. ಉದಾಹರಣೆಗೆ ಸೆಪ್ಟೆಂಬರ್ 25 ರೊಳಗೆ ಸಾಮಾನ್ಯ ಸಭೆ ಕರೆದಿಲ್ಲವೆಂಬ ಕಾರಣದಿಂದ ರದ್ದು ಪಡಿಸುತ್ತಿದ್ದರೆ, ಆ ಸದಸ್ಯ ಸಹಕಾರಿಯು ನಡವಳಿ ಪುಸ್ತಕ, ಮಂಡಳಿ ಸಭಾ ನಡಾವಳಿಗಳು, ಚರ್ಚೆಯಾದ ಬಗ್ಗೆ, ಸಾಮಾನ್ಯ ಸಭೆ ನಡೆಸಬಾರದು, ಅಥವಾ ನಡೆಸಿಲ್ಲವೆಂದು ತೀರ್ಮಾನಕ್ಕೆ ಬಂದ ನಂತರವೇ ನೋಟೀಸ್ ನೀಡಲು ತೀರ್ಮಾನಿಸಿರಬೇಕು. ಈ ಮೇಲ್ಕಂಡ ಉದಾಹರಣೆಯನ್ನು ಸರಿಪಡಿಸಲಾಗದ ಕ್ರಮ ಏಕೆಂದರೆ, ಸಂಯುಕ್ತ ಸಹಕಾರಿ ಕ್ರಮ ಜರುಗಿಸುವುದು ಸೆಪ್ಟೆಂಬರ್ ನಂತರವಾದ್ದರಿಂದ, ಆಡಳಿತಾಧಿಕಾರಿ, ಸಭೆ ನಡೆಸಿದರೂ, ಅದು ಸೆಪ್ಟೆಂಬರ್ ನಂತರವೇ ಕರೆಯಬೇಕು ಅಥವಾ ಸಂಯುಕ್ತ ಸಹಕಾರಿ ಕರೆದರೂ ಅದೂ ಸೆಪ್ಟೆಂಬರ್ ನಂತರವೇ.ಆದ್ದರಿಂದ ಇದನ್ನು ಸರಿಪಡಿಸಲಾಗದ ನ್ಯೂನತೆ ಎಂದು ಪರಿಗಣಿಸತಕ್ಕದ್ದು.

ಆರೋಪಗಳು ಸ್ಪಷ್ಟವಾಗಿರಬೇಕು, ಹಾಗೂ ಸದಸ್ಯ ಸಹಕಾರಿಯ ಮಂಡಳಿ ಸದಸ್ಯರಿಗೆ ಅರ್ಥವಾಗುವಂತೆ ಇರಬೇಕು. ಇಂತಹ ಪ್ರಸಂಗದಲ್ಲಿ ರದ್ದು ಅಥವಾ ಅಮಾನತ್ತು ಮಾಡದೇ ಸುಮ್ಮನಿರಲಾಗದು. ಇದರ ಜೊತೆಗೆ ಸಹಕಾರಿಯ ಮಂಡಳಿ ಸದಸ್ಯರ ಮೇಲೆ ಪ್ರತ್ಯೇಕವಾಗಿ ಕಲಂ.25 ರಡಿ ವ್ಯಯಕ್ತಿಕವಾಗಿ ಮತ್ತು ಜಂಟಿಯಾಗಿ ಪ್ರತಿ ಮಂಡಳಿ ನಿರ್ದೇಶಕನನ್ನು ಗರಿಷ್ಠ 5 ವರ್ಷಗಳ ಅವಧಿಗೆ ಅನರ್ಹತೆಗೊಳಿಸಲು ಅವಕಾಶ ಇರುತ್ತದೆ.

ಕಲಂ.38 ರಲ್ಲಿ (I)(V)(V–ಸಿ)(V–ಡಿ) ಅಡಿಯಲ್ಲಿ ಸೂಚಿಸಿರುವ ವಿಷಯಗಳು ಕಲಂ.25(2)(ಎ)(ಎ1)(ಬಿ)(ಸಿ) ಎರಡರಲ್ಲಿಯೇ ಸಾಮಾನ್ಯ ಸಭೆ ನಡೆಸದ, ಲೆಕ್ಕ ತಪಾಸಣೆ ಮಾಡಿಸದ, ಚುನಾವಣೆ ಪ್ರಕ್ರಿಯೆ ಪ್ರಾರಂಭಿಸದ ಮಂಡಳಿ ಸದಸ್ಯರನ್ನು ಎರಡೂ ಕಲಂಗಳಲ್ಲಿ ಕ್ರಮ ಜರುಗಿಸಲು ಅವಕಾಶ ಕಲ್ಪಿಸಿದೆ. ಅಂದರೆ ಒಂದೇ ತಪ್ಪಿಗೆ ಎರಡು ಶಿಕ್ಷೆ ಎಂಬ ನೀತಿಯು ನ್ಯಾಯಾಲಯ ಊರ್ಜಿತಗೊಳಿಸಿಲ್ಲ – ಅಂತಹ ಅವಕಾಶ ಈವರೆವಿಗೂ ಪ್ರಾಪ್ತವಾಗಿಲ್ಲ. ಆದರೆ ಎರಡೂ ಕಲಂಗಳಲ್ಲಿ ಕ್ರಮ ಜರುಗಿಸುವಾಗ ಕಲಂ.38(1) ರಲ್ಲಿ ಮಂಡಳಿ ರದ್ದು ಪಡಿಸಿದಾಗ ಒಂದು ವರ್ಷದ ಅವಧಿಯೊಳಗೆ ಹೊಸ ಚುನಾವಣೆ ನಡೆಸಲು, ಅಥವಾ ಅಮಾನತ್ತು ಮಾಡಲಾದ ಮಂಡಳಿಗೆ ಆರು ತಿಂಗಳ ನಂತರ ಅಧಿಕಾರವನ್ನು ಮತ್ತೆ ವರ್ಗಾಯಿಸಲು ಅವಕಾಶ ಇದೆ. ಆದರೆ ಅದೇ ವ್ಯಕ್ತಿಗಳು ಮತ್ತು ಚುನಾವಣೆಗೆ ಸ್ಪರ್ಧಿಸಲು ಅನರ್ಹತೆ ಇಲ್ಲ. ಆದರೆ ಕಲಂ.25(2)(ಎ)(ಎ–1)(ಬಿ)(ಸಿ) ಅಡಿ ಮಂಡಳಿಯ ಪ್ರತಿಯೊಬ್ಬ ಸದಸ್ಯನನ್ನ ವ್ಯಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ (5) ವರ್ಷಗಳ ಅವಧಿಗೆ ಸ್ಪರ್ಧಿಸಲು, ಮುಂದುವರಿಯಲು ಅಥವಾ ಮರು ಆಯ್ಕೆಯಾಗಲು ಅವಕಾಶವಿಲ್ಲ. ಆದ್ದರಿಂದ ಮಂಡಳಿ ಸದಸ್ಯರನ್ನು ರದ್ದು ಅಥವಾ ಅಮಾನತ್ತು ಮಾಡಿದಾಗ ಕಲಂ.25 ರಡಿ ಪ್ರತ್ಯೇಕ ಆದೇಶ ಮಾಡಿ ಅನರ್ಹತೆ ಗೊಳಿಸಲು ಕಾನೂನು ಅವಕಾಶ ನೀಡುತ್ತಿದೆ.

**ಕಾರಣ ಕೇಳುವ ನೋಟೀಸ್ :**

ಪ್ರತಿಯೊಂದು ಸಹಕಾರಿಯು ಕಾರ್ಯನಿರ್ವಹಣೆಯು ನಡೆದ ನ್ಯೂನತೆಗಳ ಆಧಾರದ ಮೇಲೆ, ವರದಿಗಳನ್ನು ಪಡೆದು, ಆ ವರದಿಗಳ ಅಂಶ ಸಂಯುಕ್ತ ಸಹಕಾರಿ ಮಂಡಳಿಗೆ ಸಮರ್ಪಕವಾಗಿದೆ ಎಂದು ಮನದಟ್ಟಾದಾಗ, ಸಹಕಾರಿಯ ಮಂಡಳಿ ಸದಸ್ಯರಿಗೆ ಸ್ಪಷ್ಟ ಕಾರಣಗಳನ್ನು ನೀಡಿ ಮಂಡಳಿಯನ್ನು ರದ್ದು ಪಡಿಸಬಾರದೇಕೆ ಅಥವಾ ಅಮಾನತ್ತಿನಲ್ಲಿಡಬಾರದೇಕೇ ಎಂದು ಸಂಯುಕ್ತ ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕನ ಮೂಲಕ ಕಾರಣ ಕೇಳುವ 30/45 ದಿವಸಗಳ ನೋಟೀಸ್ ನೀಡಬೇಕು, ಅದನ್ನು ಅಂತಹ ವ್ಯಕ್ತಿಗಳಿಗೆ ಮುಟ್ಟಿಸಿದ ಬಗ್ಗೆ ದೃಡೀಕರಿಸಿಕೊಳ್ಳತಕ್ಕದ್ದು. ನೋಟೀಸಿನ ಒಂದು ಪ್ರತಿಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ರವಾನಿಸಿ, ಸೂಕ್ತ ಕ್ರಮಕೈಗೊಳ್ಳಲು ಸೂಚಿಸಬಹುದು.

ಈ ನೋಟೀಸ್ ಪಡೆದ ನಂತರ ಪ್ರತಿಯೊಬ್ಬ ಮಂಡಳಿ ಸದಸ್ಯ ಆ ನೋಟೀಸ್ ವ್ಯಯಕ್ತಿಕವಾಗಿ ಉತ್ತರ ನೀಡಬೇಕು. ಮಂಡಳಿ ಸದಸ್ಯರು ಹೆಚ್ಚುವರಿ ಅವಕಾಶ ಕೇಳಿದಾಗ, ಮೂಲ ಅವಧಿ ಗಿಂತ ಹೆಚ್ಚಿಲ್ಲದಂತೆ ವಿಸ್ತರಿಸಬಹುದು. ಆದರೆ, ಮಂಡಳಿ ಸದಸ್ಯರ ಉತ್ತರ ಪಡೆದ ನಂತರ ಮೌಖಿಕ ಅವಕಾಶ ನೀಡಬೇಕೆಂದು ಮಂಡಳಿ ಸದಸ್ಯರು ವಿನಂತಿಸಿದರೆ, ನೀಡಬಹುದು.ಆದರೆ ಕಾಲಹರಣ ಮಾಡಲು ವಿಸ್ತರಣೆ ಕೇಳುತ್ತಿದ್ದಾರೆಂದು ಸಂಯುಕ್ತ ಸಹಕಾರಿಗೆ ಮನದಟ್ಟಾದರೆ, ಮನವಿಯನ್ನು ಸಕಾರಣಗಳನ್ನು ನೀಡಿ ತಿರಸ್ಕರಿಸಬಹುದು.ಆದರೆ ಸಂವಿಧಾನದಲ್ಲಿ ನೀಡಿದ ಸ್ವಭಾವಿಕ ನ್ಯಾಯ ನೀತಿ ಅನ್ವಯ ಅವಕಾಶ ನೀಡದೇ ಯಾವುದೇ ಆದೇಶವನ್ನು ಮಾಡಲು ಸಂಯುಕ್ತ ಸಹಕಾರಿ ಮಂಡಳಿಗೆ ಅಧಿಕಾರ ಇರಲಾರದು.

ಸಹಕಾರಿಯ ಮಂಡಳಿ ಸದಸ್ಯರು ನೀಡಿದ ಉತ್ತರಗಳನ್ನು, ವಸ್ತುಸ್ಥಿತಿ ಜೊತೆ ಹೊಂದಾಣಿಕೆ ಮಾಡಿ, ಹಾರಿಕೆ ಉತ್ತರ ನೀಡಿದ್ದರೆ, ಅದನ್ನು ಉಲ್ಲೇಖಿಸಿ ಮಂಡಳಿಯನ್ನು ರದ್ದು ಪಡಿಸಿ/ಅಮಾನತ್ತಿನಲ್ಲಿಟ್ಟ ಆದೇಶ ಮಾಡಬಹುದು. ಲಿಖಿತ ಉತ್ತರವನ್ನು ಪರಿಶೀಲಿಸುವಾಗ, ಯಾವ ಕಾರಣದಿಂದ ಉತ್ತರ ಸಮರ್ಪಕವಾಗಿ ಲ್ಲವೆಂದು ವಿಮರ್ಷಿಸಿ ಆದೇಶಿಸಬೇಕು.

# ಅಧ್ಯಾಯ – 8.1

# ಆಡಳಿತಾಧಿಕಾರಿ ನೇಮಕ

ಸಂಯುಕ್ತ ಸಹಕಾರಿಯ ಮಂಡಳಿ ಒಂದು ಸಹಕಾರಿ ಆಡಳಿತ ಮಂಡಳಿಯನ್ನು ರದ್ದು ಪಡಿಸಿದಾಗ/ ಅಮಾನತ್ತಿನಲ್ಲಿಟ್ಟಾಗ, ಆ ಸಹಕಾರಿಯ ಆಡಳಿತ ಮಂಡಳಿ ಸ್ಥಾನದಲ್ಲಿ ಒಬ್ಬ ಆಡಳಿತಾಧಿಕಾರಿ ನೇಮಿಸತಕ್ಕದ್ದು. ಈ ಆಡಳಿತಾಧಿಕಾರಿ ಕಾಯಿದೆ ಕಲಂ.38(3) ರನ್ವಯ, ಸಂಯುಕ್ತ ಸಹಕಾರಿಯ ನಿಯಂತ್ರಣ ಕ್ಕೊಳಪಟ್ಟು ಸಹಕಾರಿಯ ಮಂಡಳಿ ಅಥವಾ ಪದಾಧಿಕಾರಿಯ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅವನ ಎಲ್ಲಾ ಪ್ರಕಾರ್ಯಗಳು ಸಹಕಾರಿಯ ಹಿತಾಸಕ್ತಿಗೆ ಪೂರಕವಾಗಿರತಕ್ಕದ್ದು. ಇದರ ಜೊತೆಗೆ ಚುನಾವಣಾ ಪ್ರಾಧಿಕಾರದ ಜೊತೆ ಪತ್ರ ವ್ಯವಹಾರ ಮಾಡಿ, ಅಗತ್ಯ ಮಾಹಿತಿಯನ್ನು ತಯಾರಿಸಿ, ಹೊಸದಾಗಿ ಮಂಡಳಿಗೆ ಚುನಾವಣೆ ನಡೆಸಲು ಕ್ರಮ ಜರುಗಿಸತಕ್ಕದ್ದು.

ಅಮಾನತ್ತಿನಲ್ಲಿಟ್ಟ ಸಹಕಾರಿ ಮಂಡಳಿಗೆ ಸಂಬಂಧಪಟ್ಟಂತೆ, ಸಾಧ್ಯವಾದ ಮಟ್ಟಿಗೆ ಕಾರಣ ಕೇಳುವ ನೋಟೀಸ್‌ನಲ್ಲಿ ಸೂಚಿಸಿದ ನ್ಯೂನತೆಗಳನ್ನು ಸರಿಪಡಿಸಲು ಪ್ರಯತ್ನಿಸಬೇಕು. ಆದರೆ ತಪ್ಪು ಮಾಡಿದ ಮಂಡಳಿಯೇ ಅದನ್ನು ಸರಿಪಡಿಸಬೇಕೆಂಬುದು ಒಂದು ತಾತ್ವಿಕ ಅಭಿಪ್ರಾಯ. ಅಂದರೆ ತಪ್ಪನ್ನು ಸರಿ ಪಡಿಸಿ, ಪುನಃ ಅದೇ ಮಂಡಳಿಗೆ ಅಧಿಕಾರ ವಹಿಸಿಕೊಟ್ಟರೆ, ಚುನಾಯಿತ ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ತಿಳಿಯುವುದೇ ಇಲ್ಲ. ಆದ್ದರಿಂದ ಆಡಳಿತಾಧಿಕಾರಿ ಅಮಾನತ್ತಿನಲ್ಲಿಟ್ಟ ಮಂಡಳಿ ಸದಸ್ಯ ಮತ್ತೆ ಅಧಿಕಾರ ಪಡೆದ ನಂತರ ಜರುಗಿಸಬೇಕಾದ ಕ್ರಮಗಳ ಬಗ್ಗೆ ಆಡಳಿತಾಧಿಕಾರಿ ಪ್ರಾರಂಭಿಕ ಕ್ರಮಗಳನ್ನು ಜರುಗಿಸಿರಬೇಕು. ಇಲ್ಲವಾದರೆ ಚುನಾಯಿತ ಮಂಡಳಿ ತನ್ನ ಪ್ರಕಾರ್ಯನಿರ್ವಹಣೆಯಲ್ಲಿ ನಿರ್ಲಕ್ಷ್ಯತೋರಿಸಬಹುದು.

ಆಡಳಿತಾಧಿಕಾರಿ ನೇಮಿಸುವಾಗ ಪ್ರಥಮವಾಗಿ ಮಾಡಬೇಕಾದ ಕೆಲಸವೆಂದರೆ ಸಹಕಾರಿಯ ಅಧಿಕಾರವನ್ನು ವಹಿಸಿಕೊಳ್ಳುವುದು.ಅಂದರೆ ಸಹಕಾರಿಯ ಮಂಡಳಿ/ಪದಾಧಿಕಾರಿಗಳ ಅಧಿಕಾರಗಳನ್ನು ಅಭ್ಯಾಸ ಮಾಡಿ ಅವರು ಮಾಡುತ್ತಿರುವ ಕೆಲಸಗಳನ್ನು ನಿರ್ವಹಿಸಬೇಕು.ಅಂದರೆ ಅಂತಹ ಅಧಿಕಾರಿ ಸಹಕಾರಿಯ ನಡವಳಿಕೆ ಪುಸ್ತಕದಲ್ಲಿ ಅಧಿಕಾರ ವಹಿಸಿಕೊಂಡ ಬಗ್ಗೆ ತೀರ್ಮಾನ ಮಾಡಿ, ಸಂಯುಕ್ತ ಸಹಕಾರಿ/ ನಿಬಂಧಕರಿಗೆ ಲಿಖಿತವಾಗಿ ತಿಳಿಸಬೇಕು. ಸಹಕಾರಿ ಖಾತೆ ಇರುವ ಬ್ಯಾಂಕ್‌ಗಳು ಮತ್ತು ಇತರ ಸಂಸ್ಥೆಗಳಿಗೆ, ಮಂಡಳಿ ಅಸ್ತಿತ್ವದಲ್ಲಿ ಇಲ್ಲ ಎಂಬುದನ್ನು ತಿಳಿಸಬೇಕು. ಸಂಯುಕ್ತ ಸಹಕಾರಿಗೆ ಅಗಿಂದಾಗ್ಗೆ ವರದಿ ಮಾಡಬೇಕು.ಸಹಕಾರಿ ನಗದು ಪುಸ್ತಕ, ಠರಾವು ಪುಸ್ತಕ, ಚರ ಮತ್ತು ಸ್ಥಿರ ಆಸ್ತಿಗಳನ್ನು ವಶಕ್ಕೆ ಪಡೆಯಬೇಕು ಮತ್ತು ಅದನ್ನು ಸಂಯುಕ್ತ ಸಹಕಾರಿಗೆ ವರದಿ ಮಾಡಬೇಕು. ಕೆಲವು ಸಂದರ್ಭದಲ್ಲಿ ಠರಾವು ಪುಸ್ತಕವನ್ನು ಚುನಾಯಿತ ಪ್ರತಿನಿಧಿಗಳ ವಶದಲ್ಲಿದ್ದರೆ (ಕಾನೂನಿನಲ್ಲಿ ಅವಕಾಶ ಇಲ್ಲದೇ ಇದ್ದರೂ) ಅದನ್ನು ವಹಿಸಿಕೊಡದಿದ್ದರೆ, ಕ್ರಿಮಿನಲ್ ಪ್ರಕರಣ ಕಲಂ.68(4) ರಲ್ಲಿ ದಾಖಲಿಸಬೇಕು.

ಆಡಳಿತಾಧಿಕಾರಿ ಅಧಿಕಾರ ವಹಿಸಿಕೊಂಡ ನಂತರ ನ್ಯಾಯಾಲಯದಿಂದ ತಡೆಯಾಜ್ಞೆ ಬಂದರೆ, ಅದು ಯಥಾಸ್ಥಿತಿಯನ್ನು ಕಾಪಾಡುವಂತೆ ಇರುತ್ತದೆ.ಅಥವಾ ನ್ಯಾಯಾಲಯ ಆಡಳಿತಾಧಿಕಾರಿ ನೇಮಿಸುವ ಪೂರ್ವದ ಸ್ಥಿತಿಯಲ್ಲಿ ಅಧಿಕಾರ ವಹಿಸಬೇಕೆಂದಿದ್ದರೆ, ಆಡಳಿತಾಧಿಕಾರಿ, ರದ್ದು/ಅಮಾನತ್ತಿನಲ್ಲಿಡಲಾದ ಮಂಡಳಿಗೆ ಅಧಿಕಾರ ವಹಿಸಿಕೊಡತಕ್ಕದ್ದು.ಇಂತಹ ಸ್ಪಷ್ಟ ಆದೇಶ ಇಲ್ಲದೇ ಇದ್ದರೆ, ಆಡಳಿತಾಧಿಕಾರಿ ತಾತ್ವಿಕ ತೀರ್ಮಾನಗಳನ್ನು ಹೊರತು ಪಡಿಸಿ, ಸಹಕಾರಿಯ ದಿನ ನಿತ್ಯದ ವ್ಯವಹಾರದಲ್ಲಿ ಮಾರ್ಗದರ್ಶನ ನೀಡಲು ಅಧಿಕಾರ ಹೊಂದಿದ್ದಾನೆ.

**ಆಡಳಿತಾಧಿಕಾರಿ ಅವಧಿ :**

ಸಂಯುಕ್ತ ಸಹಕಾರಿ ಒಂದು ಸಹಕಾರಿ ಮಂಡಳಿಯನ್ನು ರದ್ದು/ಅಮಾನತ್ತಿನಲ್ಲಿಡಲು ತೀರ್ಮಾನಿಸಿದಾಗ, ಅವಧಿಯನ್ನು ನಿಗದಿ ಪಡಿಸಬೇಕು. ಆದರೆ ರದ್ದು ಪಡಿಸಲಾದ ಮಂಡಳಿ ಅವಧಿ ಒಂದು ವರ್ಷಕ್ಕೆ ಮೀರತಕ್ಕದ್ದಲ್ಲ ಮತ್ತು ಅಮಾನತ್ತಿನಲ್ಲಿಡಲಾದ ಮಂಡಳಿಗೆ 6 ತಿಂಗಳಿಗೆ ಮೀರದಂತೆ ಅವಧಿ ನಿಗದಿ ಪಡಿಸಬೇಕು.ಏಕೆಂದರೆ ಇದೇ ಅವಧಿಯನ್ನು ಸಂವಿದಾವನ್ನು 97ನೇ ತಿದ್ದುಪಡಿಯ ಅನುಚ್ಛೇದ 243 ಝಡ್‌ಎಲ್ ನಡಿ ನಿಗದಿ ಪಡಿಸಿದೆ ಮತ್ತು ಕಾಯಿದೆ ಕಲಂ.38 ರಲ್ಲಿಯೂ ಇದನ್ನು ಉಲ್ಲೇಖಿಸಿದೆ.

**ಆಡಳಿತಾಧಿಕಾರಿ ಮಾಡಲೇ ಬೇಕಾದ ಪ್ರಕಾರ್ಯ:**

ಆಡಳಿತಾಧಿಕಾರಿ ಅಧಿಕಾರ ವಹಿಸಿಕೊಂಡ ನಂತರ ನಿರ್ವಹಿಸಬೇಕಾದ ಪ್ರಕಾರ್ಯ ಮತ್ತು ಅಧಿಕಾರಗಳನ್ನು ಕಲಂ.27ರಲ್ಲಿ ನಿಗದಿ ಪಡಿಸಿದೆ.

ಅದು ಈ ಕೆಳಕಂಡಂತೆ ಇದೆ.

1) "ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಮಂಡಳಿಯು

(ಎ) ಸದಸ್ಯರುಗಳನ್ನು ಸೇರಿಸಿಕೊಳ್ಳಲು ಮತ್ತು ತೆಗೆದುಹಾಕಲು;

(ಬಿ) ಪದಾಧಿಕಾರಿಗಳನ್ನು ಚುನಾಯಿಸಲು ಮತ್ತು ತೆಗೆದುಹಾಕಲು;

(ಸಿ) ಮುಖ್ಯಕಾರ್ಯನಿರ್ವಾಹಕನನ್ನು ನೇಮಕ ಮಾಡಲು ಮತ್ತು ತೆಗೆದುಹಾಕಲು;

(ಡಿ) ಸಿಬ್ಬಂದಿ ಸಂಖ್ಯೆಯನ್ನು ನಿಗದಿ ಪಡಿಸಲು;

(ಇ) ಸಂಸ್ಥೆಯ ಹಾಗೂ ಸದಸ್ಯರುಗಳ ಸೇವೆಗಳಿಗೆ ಸಂಬಂಧಪಟ್ಟಂತೆ ಕಾರ್ಯನೀತಿಗಳನ್ನು ರೂಪಿಸಲು;

(ಎಫ್) ಈ ಕೆಳಗಿನವುಗಳ ಬಗ್ಗೆ, ಎಂದರೆ, –

(i) ನಿಧಿಗಳ ಅಭಿರಕ್ಷೆ ಮತ್ತು ಹೂಡಿಕೆ;

(ii) ಲೆಕ್ಕಪತ್ರಗಳ ನಿರ್ವಹಣೆ;

(iii) ವಿವಿಧ ನಿಧಿಗಳ ಸಂಗ್ರಹಣೆ, ಬಳಕೆ ಮತ್ತು ಹೂಡಿಕೆ;

(iv) ಶಾಸನಬದ್ಧ ವಿವರ ಪಟ್ಟಿಕೆಯನ್ನು ಸಲ್ಲಿಸುವುದೂ ಸೇರಿದಂತೆ ಸೂಕ್ತ ವ್ಯವಸ್ಥಾಪನ ಮಾಹಿತಿ ವ್ಯವಸ್ಥೆಗಳು;

(v) ಸಹಕಾರಿಯ ಪರಿಣಾಮಕಾರಿ ನಿರ್ವಹಣೆಯ ಸಲುವಾಗಿ ಅವಶ್ಯಕವಾಗಬಹುದಾದಂಥ ಇತರ ವಿಷಯಗಳು;

ಇವುಗಳ ಬಗ್ಗೆ ವಿನಿಯಮಗಳನ್ನು ರಚಿಸಲು;

(ಜಿ) ಸಾಮಾನ್ಯ ನಿಕಾಯದ ಅನುಮೋದನೆಗಾಗಿ ವಾರ್ಷಿಕ ವರದಿ, ವಾರ್ಷಿಕ ಹಣಕಾಸು ವಿವರಪಟ್ಟಿ, ವಾರ್ಷಿಕ ಯೋಜನೆ ಮತ್ತು ಬಜೆಟ್ಟನ್ನು ಮಂಡಿಸಲು;

(ಹೆಚ್) ಲೆಕ್ಕಪರಿಶೋಧನೆ ಮತ್ತು ಪಾಲನಾ ವರದಿಗಳನ್ನು ಪರಿಶೀಲಿಸಲು ಮತ್ತು ಅವುಗಳನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

[(ಹೆಚ್–1) ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಪರಿಶೀಲಿಸಿ, ವಿಚಾರಣೆಯಲ್ಲಿ ತೋರಿಸಲಾದ ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಪರಿಶೀಲಿಸಲು ಮತ್ತು ಅದನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

(ಹೆಚ್–2) ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಒಂದರೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಿಕೊಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪಡೆಯುವಂತೆ ಮಾಡಲು;

(ಹೆಚ್–3) ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–4) ಅಗತ್ಯವಿದ್ದಾಗಲೆಲ್ಲ ಅಥವಾ ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–5) ಪ್ರತಿ ವರ್ಷ ಸೆಪ್ಟೆಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು;]

(ಐ) ಇತರ ಸಹಕಾರಿಗಳ ಸದಸ್ಯತ್ವವನ್ನು ಪರಿಶೀಲಿಸಲು;

(ಜೆ) ಸಾಮಾನ್ಯ ನಿಕಾಯವು ಪ್ರತ್ಯಾಯೋಜಿಸಬಹುದಾದಂಥ ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು

ನಿರ್ವಹಿಸಲು, ಅಧಿಕಾರ ಹೊಂದಿರತಕ್ಕದ್ದು."

ಸೂಚನೆ:– ಸದಸ್ಯರ ಸೇರ್ಪಡೆ/ತೆಗೆದು ಹಾಕುವಿಕೆ ಬಗ್ಗೆ 1959ರ ಕಾಯಿದೆಯಲ್ಲಿ ಶ್ರೇಷ್ಠ ನ್ಯಾಯಾಲಯ ಆಡಳಿತಾಧಿಕಾರಿಗೆ ಇರುವುದಿಲ್ಲವೆಂದು ತೀರ್ಪಿತ್ತಿದೆ.ಇದನ್ನು ಗಮನಿಸಿ.

ಅಧಿಕಾರ ವಹಿಸಿಕೊಂಡ ಕೂಡಲೆ ರದ್ದು ಪಡಿಸಿದ ಸಂದರ್ಭದಲ್ಲಿ ಚುನಾವಣಾ ಪ್ರಾಧಿಕಾರಕ್ಕೆ ಪತ್ರ ವ್ಯವಹಾರ ಮಾಡಿ, ಹೊಸದಾಗಿ ಚುನಾವಣೆ ಮಾಡಲು ಚುನಾವಣಾಧಿಕಾರಿ ನೇಮಿಸಲು, ಸಹಕಾರಿಯು ಅರ್ಹ ಸದಸ್ಯರ ಪಟ್ಟಿ ಲಗತ್ತಿಸಿ, ಪ್ರಸ್ತಾವನೆ ಸಲ್ಲಿಸಬೇಕು. ಆಡಳಿತಾಧಿಕಾರಿ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಆಡಳಿತ ಮಂಡಳಿ ಚುನಾವಣೆ ಮುಕ್ತಾಯವಾಗಿ ಅಧಿಕಾರ ಸ್ವೀಕರಿಸಲು ಅನುವು ಮಾಡಿಕೊಡಬೇಕು, ಏಕೆಂದರೆ ಯಾವುದೇ ಸಮಯದಲ್ಲಿ ಒಂದು ಸಹಕಾರಿಯ ಆಡಳಿತ ಚುನಾಯಿತ ಪ್ರತಿನಿಧಿಗಳಲ್ಲಿಯೇ ವಿಹಿತವಾಗಿರಬೇಕು.

**ಆಡಳಿತಾಧಿಕಾರಿ ಮಾಡಬಾರದ ಕೆಲಸ:**

ಮಂಡಳಿ ಮಾಡಿದ ತಪ್ಪುಗಳನ್ನು ಸರಿಪಡಿಸುವ ಬದಲು, ಅದೇ ನೀತಿ ಮುಂದುವರಿಸುವುದು, ಅಥವಾ ಹೊಸದಾಗಿ ನಿಯಮ ರೂಪಿಸಲುಹೋಗಿ ಹೊಸ ನ್ಯೂನತೆಗಳಿಗೆ ಅವಕಾಶ ನೀಡದಂತೆ ಕಾರ್ಯನಿರ್ವಹಿಸಬೇಕು.ಆತನ ಅವಧಿಯಲ್ಲಿ ಯಾವುದೇ ಅವ್ಯವಹಾರ ನಡೆಯದಂತೆ ನೋಡಿಕೊಳ್ಳಬೇಕು.ಇಲ್ಲವಾದರೆ ಆಡಳಿತಾಧಿಕಾರಿ ಸಂಯುಕ್ತ ಸಹಕಾರಿಯಿಂದ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.

**ಆಡಳಿತಗಾರ ಅಥವಾ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆ**

ಸರ್ಕಾರದ ಅಥವಾ ಒಂದು ಸಹಕಾರಿ ಸಂಸ್ಥೆಯ ಯಾವುದೇ ಅಧಿಕಾರಿ ಅಥವಾ ನೌಕರನನ್ನು ಅಧಿನಿಯಮದ ಪ್ರಕರಣ 38 ಅಥವಾ 57ಎ ಅಡಿ ನೇಮಕ ಮಾಡಲ್ಪಟ್ಟ ಆಡಳಿತಗಾರ ಅಥವಾ ಪ್ರಕರಣ 38ಎ ಅಡಿಯಲ್ಲಿ ನೇಮಕವಾದ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆಯನ್ನು ಕೆಳಗಿನಂತೆ ನಿರ್ದಿಷ್ಟ ಪಡಿಸತಕ್ಕದ್ದು.

(i) ಆತನನ್ನು ಪೂರ್ಣಕಾಲಿಕವಾಗಿ ನೇಮಿಸಿದಲ್ಲಿ ಆತನ ಸಂಬಳ ಮತ್ತು ಭತ್ಯೆಗಳನ್ನು ಸಹಕಾರಿಯು ಭರಿಸತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಅಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು;

(ii) ಆತನನ್ನು ಆತನ ನಿಯತ ಹುದ್ದೆಗೆ ಹೆಚ್ಚುವರಿಯಾಗಿ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ನೇಮಿಸಿದ್ದಲ್ಲಿ, ಆತನಿಗೆ, ಆತನು ಧಾರಣ ಮಾಡಿದ ಹುದ್ದೆಯ ಮೂಲ ವೇತನದ ಗರಿಷ್ಠ ಶೇಕಡಾ ಹತ್ತರಷ್ಟನ್ನು ಸಂಭಾವನೆ ಎಂದು ಸಹಕಾರಿಯ ನಿಧಿಗಳಿಂದ ಕೊಡತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಆಡಳಿತಗಾರ ಅಥವಾ ವಿಶೇಷಾಧಿ ಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು.

ಟಿಪ್ಪಣಿ – ನಿಯಮ6, 6ಬಿ ಯಿಂದ 6ಎ ಮತ್ತು 6ಜೆ ಮತ್ತು 6ಕೆ ನಿಯಮಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸುತ್ತದೆ.

ಈ ಕೆಳಕಂಡ ತೀರ್ಪುಗಳು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 30ಎ ಜಾರಿಯಲ್ಲಿದ್ದಾಗ ಹೊರಡಿಸಿದ್ದವು. ಆದರೂ ತತ್ವಗಳು ಒಂದೇ ಇರುವುದರಿಂದ ಉಲ್ಲೇಖಿಸಲಾಗಿದೆ.

1. ಸಹಕಾರ ಸಂಘಗಳ ಕಾಯಿದೆ ಕಲಂ 30ಎ, ಕಲಂ 30ಕ್ಕಿಂತಲೂ ವಿಭಿನ್ನ ಹಾಗೂ ಕಲಂ 30, 30ಎ ಅನ್ನು ನಿಯಂತ್ರಿಸುವುದಿಲ್ಲ. ಕಲಂ 31ಎ ಅನ್ನು ಚಲಾಯಿಸುವಾಗ ವಿಶೇಷ ಮತ್ತು ಅತಿ ತುರ್ತು ಸಮಯದಲ್ಲಿ ಮತ್ತು 30ರಲ್ಲಿರುವ ದಾಖಲೆಗಳು ಮತ್ತು ಸಾಕ್ಷಿಗಳ ಪರಿಶೀಲನೆ ಮಟ್ಟದಲ್ಲಿ ಪರಿಶೀಲಿಸಿದ ನಂತರವೇ ಆದೇಶಿಸಬೇಕೆಂದಿಲ್ಲ. ಏಕೆಂದರೆ ಕಲಂ 30ರಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಐಎಲ್‌ಆರ್ 1892 ಕರ್ನಾಟಕ 71 ಕೆಎಲ್‌ಜೆ 291.

2. ಕಲಂ 30ಎ ಅನ್ನು ಉಪಯೋಗಿಸುವಾಗ ಒಂದು ಸಹಕಾರ ಸಂಘ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕೆ

ವಿಶೇಷಾಧಿಕಾರಿ ನೇಮಿಸಬಹುದು 1984(1) ಕೆಎಲ್‌ಜೆ 260.

3. ಸರ್ಕಾರವು ವಿಶೇಷಾಧಿಕಾರಿ ನೇಮಿಸುವಾಗ ಅತಿ ವಿರಳವಾಗಿ ಹಾಗೂ ತುರ್ತು ಹಾಗೂ ಅತಿ ಅವಶ್ಯಕ ಕ್ರಮವೆಂದು ಹಾಗೂ ಕಲಂ 30ರನ್ವಯ ಕ್ರಮ ಜರುಗಿಸಲು ಆಗದೇ ಇದ್ದಾಗ ವಿಶೇಷಾಧಿಕಾರಿ ನೇಮಿಸಬೇಕು. ಕಲಂ 30ಎ ಒಂದು ಸ್ವತಂತ್ರ ಕಲಂ. ಅದನ್ನು 30ರ ವಿಸ್ತರಣೆ ಎಂದು ತಿಳಿಯತಕ್ಕದ್ದಲ್ಲ. 1989(8) ಡಿಬಿ.

4. ಕಲಂ 30ಎ ಅನ್ವಯ ಕಲಂ 30ಕ್ಕಿಂತ ಹೆಚ್ಚು ವಿಸ್ತಾರವುಳ್ಳದ್ದು. ಆದರೆ ಅದು ಒಂದು ವಿಶೇಷ ಅಧಿಕಾರ. ಅದು ವಿಶೇಷ ಸಂದರ್ಭ ಹಾಗೂ ತುರ್ತು ಸಂದರ್ಭದಲ್ಲಿ ಕ್ರಮ ಜರುಗಿಸಬೇಕು. ಇದಕ್ಕೆ ಹೆಚ್ಚು ಗಮನಾರ್ಹ ಕಾರಣಗಳು ಹಾಗೂ ದಾಖಲೆಗಳು ಬೇಕು. ಅಂದರೆ ಕಲಂ 30ಕ್ಕಿಂತ ಹೆಚ್ಚು ಗುರುತರವಾದ ಅವಶ್ಯಕವಾದ ತುರ್ತಾದ ಕ್ರಮ ಜರುಗಿಸಲು ಉಪಯೋಗಿಸಬೇಕು. ಐಎಲ್‌ಆರ್ 1989(2) ಕೆಎಲ್‌ಜೆ 295.

**ತೀರ್ಪುಗಳು:**

1. ಸಹಕಾರ ಸಂಘಗಳ ನಿಬಂಧಕರು ಪ್ರತಿಯೊಂದು ಸಹಕಾರ ಸಂಘದ ಆಡಳಿತ ಮಂಡಳಿಯನ್ನು ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ರಚನೆ ಮಾಡಲು ಕ್ರಮ ಕೈಗೊಳ್ಳುವುದು ಒಂದು ಪ್ರಾಥಮಿಕ ಕರ್ತವ್ಯ. ಕಾನೂನುಬದ್ಧವಾಗಿ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವುದು ಜವಾಬ್ದಾರಿ ಮತ್ತು ಕರ್ತವ್ಯ. ಚುನಾವಣಾಧಿಕಾರಿಯನ್ನು ನೇಮಕ ಮಾಡಿದರೆ ತನ್ನ ಕೆಲಸ ಮುಗಿಯಿತೆಂದು ತಿಳಿಯತಕ್ಕದ್ದು. ಚುನಾವಣಾಧಿಕಾರಿ ನೇಮಕ ಮಾಡಿದ ನಂತರ ಚುನಾವಣಾ ವೇಳಾಪಟ್ಟಿ ಪ್ರಕಟಿಸಲು ಆಡಳಿತಾಧಿಕಾರಿ ಅಥವಾ ಆಡಳಿತ ಮಂಡಳಿ ದಿನಾಂಕ, ವೇಳೆ ಮತ್ತು ಸ್ಥಳವನ್ನು ನಿಗಧಿಪಡಿಸಬೇಕು, ಯಾವುದೇ ಒಂದು ಸಂಘ ಇಂತಹ ಕ್ರಮಗಳನ್ನು ಜರುಗಿಸದಿದ್ದರೆ ನಿಬಂಧಕರು ಮಧ್ಯಪ್ರವೇಶ ಮಾಡಿ ದಿನಾಂಕ ನಿಗಧಿಪಡಿಸಲು ಚುನಾವಣಾಧಿಕಾರಿ ಚುನಾವಣಾ ವೇಳಾಪಟ್ಟಿಯನ್ನು ನೀಡಿ, ಚುನಾವಣೆಯನ್ನು ಸಮರ್ಪಕವಾಗಿ ಮುಕ್ತಾಯಗೊಳಿಸಲು ಕ್ರಮ ಜರುಗಿಸಬೇಕು. 2008(4) ಕೆಸಿಸಿಆರ್ 2437. 2009(3) ಕೆಎಲ್‌ಜೆ 380/ಎಐಆರ್ 2009 (ಎನ್‌ಓಸಿ) 114(ಕೆಎಆರ್)

2. ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸುವಾಗ ಅದನ್ನು ಒಂದು ಸಾಮಾನ್ಯ ಪ್ರಕ್ರಿಯೆಯಂತೆ, ಕಛೇರಿಯಲ್ಲಿಯ ನಿರ್ವಹಣೆಯಂತೆ ದಿನನಿತ್ಯದಲ್ಲಿ ನಡೆಸುವ ವ್ಯವಹಾರದಂತೆ ನಡೆಸತಕ್ಕದ್ದಲ್ಲ. ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಪೂರ್ಣ ಸ್ವತಂತ್ರತೆ ಆಗುವುದಿಲ್ಲ. ಮತ್ತು ಅದಕ್ಕೆ ಸಕಾರಣಗಳಿಲ್ಲದಿದ್ದರೆ ಆಡಳಿತ ಮಂಡಳಿಯನ್ನು ರದ್ದುಪಡಿಸತಕ್ಕದ್ದಲ್ಲ. ಅದಕ್ಕೆ ಪೂರಕವಾಗಿ ಆಡಳಿತ ಮಂಡಳಿಯು ಸತತವಾಗಿ ತನ್ನ ಕಾರ್ಯನಿರ್ವಹಣೆಯಲ್ಲಿ ತಪ್ಪು ಮಾಡುತ್ತಿದೆ, ಅಂದರೆ ನಿರ್ದೇಶನಗಳು, ಸೂಚನೆಗಳನ್ನು ಕೊಟ್ಟಿದ್ದರೂ ಅವುಗಳನ್ನು ಪಾಲಿಸದೇ ತಪ್ಪುಗಳನ್ನು ಮಾಡುತ್ತಲೇ ಹೋದಾಗ, ಅಂತಹ ಆಡಳಿತ ಮಂಡಳಿಯನ್ನು ರದ್ದುಪಡಿಸಬೇಕು. ಮೊದಲನೇ ಸಾರಿ ತಪ್ಪುಗಳ ಸೂಚನೆಗಳನ್ನು ಕೊಟ್ಟು ಆಡಳಿತ ಮಂಡಳಿಯನ್ನು ರದ್ದುಪಡಿಸತಕ್ಕದ್ದಲ್ಲ. ಆಡಳಿತ ಮಂಡಳಿಯನ್ನು ರದ್ದುಪಡಿಸುವುದು ಕೊನೆಯ ಅಸ್ತ್ರವಾಗಿರಬೇಕು. ಈ ಅಸ್ತ್ರವನ್ನು ಅತಿ ವಿರಳವಾಗಿ ಪ್ರಯೋಗಿಸಬೇಕು. ಅಂದರೆ ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ, ನಿಬಂಧಕರು ಪೂರ್ಣ ಪ್ರಮಾಣದ ನಂಬಿಕೆಯ ತೀರ್ಮಾನಕ್ಕೆ ಬಂದ ನಂತರವೇ ಸಮಿತಿಯನ್ನು ರದ್ದುಪಡಿಸಬೇಕು. ಈ ಸಂಘದ ಆಡಳಿತ ಮಂಡಳಿಯನ್ನು ಮುಂದುವರಿಸಿಕೊಂಡು ಹೋದರೆ ಸಂಘದ ಧ್ಯೇಯೋದ್ದೇಶಗಳನ್ನು, ಸೇವೆಗಳನ್ನು ಕೊಡಲಾಗುವುದಿಲ್ಲವೆಂಬುದನ್ನು ಮನದಟ್ಟಾಗಬೇಕು. ಈ ರೀತಿಯ ಸಮರ್ಪಕ ಕಾರಣಗಳಿಂದಲೇ ಆಡಳಿತ ಮಂಡಳಿಯನ್ನು ರದ್ದುಪಡಿಸಬೇಕು. 2008(2) ಕೆಸಿಸಿಆರ್ 1203/2009(1) ಕೆಎಲ್‌ಜೆ 201

3. ಒಂದು ಮಾರಾಟ ಸಹಕಾರ ಸಂಘದ ಪ್ರತಿನಿಧಿಯಾಗಿ ಮಾರುಕಟ್ಟೆ ಸಮಿತಿಯ ನಿರ್ದೇಶಕನಾಗಿದ್ದರೆ ಅಂತಹ ಮಾರಾಟ ಸಹಕಾರ ಸಂಘದ ಪ್ರತಿನಿಧಿ, ಆ ಸಂಘದ ನಿರ್ದೇಶಕರಲ್ಲಿ ಒಬ್ಬರಾಗಿ ಮುಂದುವರಿಯದಿದ್ದರೆ, ಅಂತಹ ಸಂದರ್ಭದಲ್ಲಿ ಮಾರುಕಟ್ಟೆ ಸದಸ್ಯತ್ವವನ್ನೂ ಕಳೆದುಕೊಳ್ಳುತ್ತಾರೆ. 2001(1) ಕೆಸಿಸಿಆರ್ ಎಸ್‌ಎನ್ 18/ಐಎಲ್‌ಆರ್ 2001(1) ಕೆಎಆರ್ 1126(ಡಿಬಿ)

4. ಒಬ್ಬ ಉಪ ನಿಬಂಧಕರು ಒಂದು ಸಂಘಕ್ಕೆ ವಿಶೇಷಾಧಿಕಾರಿಯನ್ನು ನೇಮಿಸಿದ ನಂತರ ಉಚ್ಚ ನ್ಯಾಯಾಲಯವು ಆಂತರಿಕ ಅರ್ಜಿಯ ಆಧಾರದ ಮೇಲೆ ಮಧ್ಯಂತರ ಆದೇಶವನ್ನು ಕೊಟ್ಟ ನಂತರ, ಉಪನಿಬಂಧಕರು ವಿಶೇಷಾಧಿಕಾರಿ ಅವಧಿಯನ್ನು 6 ತಿಂಗಳ ಅವಧಿಗೆ ವಿಸ್ತರಿಸಿದರೂ ಆ ಸಮಯದಲ್ಲಿ ವಿಶೇಷಾಧಿಕಾರಿಗೆ ವಿಸ್ತರಿಸಿದ ಅವಧಿಯನ್ನು ಕಿತ್ತುಹಾಕಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಡುವಂತೆ ನಿರ್ದೇಶಿಸಲಾಯಿತು. 2003(4) ಕೆಸಿಸಿಆರ್ ಎಸ್‌ಎನ್ 262/ಐಎಲ್‌ಆರ್ 2003(2) ಕೆಎಆರ್ 1268/2003(3) ಕೆಎಲ್‌ಜೆ 107.

5. ಹಾಲಿ ಇರುವ ಸಮಿತಿ, ಹಿಂದಿನ ಸಮಿತಿ ಮಾಡಿದ ಅವ್ಯವಹಾರಗಳಿಗೆ ಜವಾಬ್ದಾರರಲ್ಲ. ಒಂದು ಸಮಿತಿಯು ಸತತವಾಗಿ ತಪ್ಪು ಮಾಡುತ್ತಿದ್ದರೆ ಅಥವಾ ನಿರ್ಲಕ್ಷತನದಿಂದ ಕೆಲಸ ನಿರ್ವಹಿಸುತ್ತಿದ್ದರೆ ಅದು ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲವೆಂದು ಆಡಳಿತ ಮಂಡಳಿಯನ್ನು ರದ್ದುಪಡಿಸಬಹುದು. 2000(3) ಕೆಸಿಸಿಅರ್ ಎಸ್‌ಎನ್ 82/ಐಎಲ್‌ಆರ್ 2000(3) ಕೆಎಆರ್ 2841/ 2005 ಕೆಎಲ್‌ಜೆ 365.

6. ಭಾರತೀಯ ರಿಸರ್ವ್ ಬ್ಯಾಂಕ್ ಮನವಿಯ ಆಧಾರದ (30(5)) ಮೇಲೆ ಒಂದು ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ವಿಚಾರಣೆ ಮಾಡುವ ಅವಶ್ಯಕತೆ ಇಲ್ಲ. 2008(5) ಕೆಸಿಸಿಆರ್ 2976/2008(2) ಕೆಎಲ್‌ಜೆ 469/2008(1) ಎಸ್‌ಸಿ 137/2008 ಎಐಆರ್ ಎಸ್‌ಸಿಡಬ್ಲ್ಯೂ 540/ಎಐಆರ್ 2008 ಎಸ್‌ಸಿ 994/2008(1) ಎಸ್‌ಸಿಸಿ 770

7. ನಿಬಂಧಕರು ಸಹಕಾರಿಯ ಆಡಳಿತಾಧಿಕಾರಿಯನ್ನೇ ಚುನಾವಣಾಧಿಕಾರಿಯನ್ನಾಗಿ ನೇಮಿಸಿರಬಹುದೇ ಎಂಬುದಕ್ಕೆ ಉಚ್ಚ ನ್ಯಾಯಾಲಯ ಅಧಿಕಾರವಿದೆ ಎಂದು ತೀರ್ಮಾನಿಸಿದೆ. ನಿಬಂಧಕರು ಒಂದು ಸಹಕಾರಿಯ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿಯನ್ನು ನೇಮಿಸಿದಾಗ ಹಾಗೂ ಆಡಳಿತಾಧಿಕಾರಿಗೆ ನಿರ್ದೇಶನವು 3 ತಿಂಗಳಲ್ಲಿ ಚುನಾವಣೆ ಮಾಡಬೇಕೆಂದು ಸೂಚನೆ ಇದ್ದು, ಅಂತಹ ಸಂದರ್ಭದಲ್ಲಿ ಆಡಳಿತಾಧಿಕಾರಿಯನ್ನೇ ಚುನಾವಣಾಧಿಕಾರಿಯನ್ನಾಗಿ ನೇಮಿಸಿದ್ದು, ಅದು ಕಾನೂನಿಗೆ ವಿರೋಧವಲ್ಲ. ಆಡಳಿತಾಧಿಕಾರಿಯನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸತಕ್ಕದ್ದಲ್ಲವೆಂದು ಪ್ರತಿಪಾದಿಸತಕ್ಕದ್ದಲ್ಲ. ನಿಬಂಧಕರು ಚುನಾವಣಾಧಿಕಾರಿಯನ್ನು ನೇಮಿಸುವಾಗ ಕಲಂ 26 ಉಪಕಲಂ (2)ನ್ನು ಪಾಲಿಸಿದ್ದಾರೆ. 2004 ಕೆಸಿಸಿಆರ್ ಎಸ್‌ಎನ್ 510. ಐಎಲ್‌ಆರ್ 2004/(4) ಕೆಎಆರ್ 5106. 2005(1) ಕೆಎಲ್‌ಜೆ 240

8. ಕಾಯಿದೆಯಲ್ಲಿ ಸ್ಪಷ್ಟವಾಗಿ ಮುಖ್ಯ ಕಾರ್ಯನಿರ್ವಾಹಕ ತನಗೆ ಕೊಡಮಾಡಿದ ಅಧಿಕಾರವನ್ನು ಮತ್ತೊಬ್ಬರಿಗೆ ವಹಿಸಿಕೊಡಬಾರದೆಂದಿದ್ದರೂ (ಅಧ್ಯಕ್ಷರಿಗೆ) ಅಂತಹ ಅಧಿಕಾರವನ್ನು ಚಲಾಯಿಸಿ ಪ್ರಕರಣವನ್ನು ದಾಖಲಿಸಿದರೆ ಅದು ಸರಿಯಾದ ಕ್ರಮವಲ್ಲ. ಪ್ರಕರಣವನ್ನು ದಾಖಲಿಸುವ ಅಧಿಕಾರ ಮುಖ್ಯ ಕಾರ್ಯನಿರ್ವಾಹಕನಿಗೆ ಮಾತ್ರ ಇರತಕ್ಕದ್ದು. ಮತ್ತು ಆ ಅಧಿಕಾರವನ್ನು ಅಧ್ಯಕ್ಷರು ದಾಖಲಿಸಿದಾಗ ಅದನ್ನು ವಜಾ ಮಾಡತಕ್ಕದ್ದು. 2009(1) ಕೆಸಿಸಿಆರ್ 749/ 2009(2) ಕೆಎಲ್‌ಜೆ 593/ಎಐಆರ್ 2009 ಎನ್‌ಓಸಿ 1532(ಕೆಎಆರ್)

9. ಸಹಕಾರಿಗೆ ಆಡಳಿತಾಧಿಕಾರಿಯನ್ನು ನೇಮಿಸಬಾರದೇಕೆಂಬ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದಾಗ ಅದಕ್ಕೆ ಉತ್ತರವಾಗಿ ಸಕಾರಣಗಳನ್ನು ಕೊಡದೇ ಇದ್ದರೆ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಿಸಲು ಅಧಿಕಾರ ಹೊಂದಿದೆ. 2009(1) ಕೆಸಿಸಿಆರ್ 749/2009(2) ಕೆಎಲ್‌ಜೆ 593/ಐಎಆರ್ 2009ಎನ್‌ಓಸಿ 1532(ಕೆಎಆರ್)

10. ಸಹಕಾರ ಸಂಘ ಕಾಯಿದೆ 15–8–1998ಕ್ಕೆ ತಿದ್ದುಪಡಿ ಮಾಡುವ ಪೂರ್ವದಲ್ಲಿ ಆಡಳಿತ ಮಂಡಳಿಯ ಅವಧಿ 3 ವರ್ಷವೆಂದು ಹಾಗೂ ಅಧ್ಯಕ್ಷರ ಅವಧಿ ಒಂದು ವರ್ಷವೆಂದು ಇದ್ದು ತಿದ್ದುಪಡಿಯಾದ ನಂತರ ಪದಾಧಿಕಾರಿ ಅವಧಿ ಎರಡೂವರೆ ವರ್ಷವೆಂದು ಆಡಳಿತ ಮಂಡಳಿ 5 ವರ್ಷವೆಂದು ನಮೂದಿಸಿದ್ದರೂ, ತಿದ್ದುಪಡಿಗೆ ಇದ್ದ ಪೂರ್ವದ ಅವಧಿಗೆ ಅಧ್ಯಕ್ಷರಿಗೆ ಅನ್ವಯವಾಗತಕ್ಕದ್ದು. ಏಕೆಂದರೆ ಆಡಳಿತ ಮಂಡಳಿ ಅವಧಿ 3 ವರ್ಷ ಎಂದು ಇದ್ದು, ಆ ಅವಧಿಯ ಮುಕ್ತಾಯದ ಪೂರ್ವದಲ್ಲಿ ಅಧ್ಯಕ್ಷರ ಅವಧಿಯು ಮುಕ್ತಾಯವಾಗತಕ್ಕದ್ದು. ಅಧ್ಯಕ್ಷರ ಅವಧಿಯನ್ನು 2.5 ವರ್ಷಕ್ಕೆ ವಿಸ್ತರಿಸಿದರೆ 3 ವರ್ಷಕ್ಕಿಂತಲೂ ಹೆಚ್ಚು ಆಡಳಿತ ಮಂಡಳಿ ಸಮಿತಿ ಅವಧಿ ವಿಸ್ತರಿಸಿದಂತಾಗುತ್ತದೆ. ಆದ್ದರಿಂದ ಅಧ್ಯಕ್ಷರು ತಿದ್ದುಪಡಿ ಪೂರ್ವದಲ್ಲಿ ಅನುಸರಿಸುತ್ತಿರುವ ನೀತಿಯನ್ನು ಮುಂದುವರೆಸತಕ್ಕದ್ದು. ಐಎಲ್‌ಆರ್ 2000(4) ಕರ್ನಾಟಕ 367/2000(4) ಕೆಸಿಸಿಆರ್ 2524.

11. ಆಡಳಿತ ಮಂಡಳಿ ಚುನಾವಣೆಗೆ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಹಾಗೂ ಮಹಿಳೆಯರಿಗಾಗಿಯೇ ಸ್ಥಾನ ಕಾಯ್ದಿರಿಸಿದಾಗ ಪರಿಶಿಷ್ಟ ಜಾತಿ ಮತ್ತು ಜನಾಂಗಕ್ಕೆ ಸೇರಿದ ಒಬ್ಬ ಅಭ್ಯರ್ಥಿ 1107 ಮತಗಳನ್ನು ಪಡೆದು ಗೆದ್ದ ಅಭ್ಯರ್ಥಿಗಿಂತ 327 ಮತಗಳನ್ನು ಪಡೆದಿದ್ದ. ಆದರೆ ಸೋತ ಪರಿಶಿಷ್ಟ ಜಾತಿ/ಜನಾಂಗದ ಅಭ್ಯರ್ಥಿ ಕಾಯ್ದಿರಿಸಿದ ಸ್ಥಾನದಿಂದ ಸ್ಪರ್ಧಿಸಿ ಸೋತಿದ್ದರೂ, ಅದೇ ಸಂಘದ ಸಾಮಾನ್ಯ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ತನಗೆ ಲಭ್ಯವಾದ ಮತಗಳ ಸಂಖ್ಯೆಗಳಿಗಿಂತಲೂ ಕಡಿಮೆ ಗಳಿಸಿದ ವ್ಯಕ್ತಿಯನ್ನು ಆಯ್ಕೆಯಾದರೆಂದು ಘೋಷಿಸುವುದಕ್ಕೆ ಬದಲಾಗಿ ತಾನು ಕೊನೆಯ 3 ಅಭ್ಯರ್ಥಿಗಳು ಸಾಮಾನ್ಯ ಸ್ಥಾನದಿಂದ ಗೆದ್ದಾಗ 1009, 998 ಮತ್ತು 963 ಮತ ಗಳಿಸಿದ್ದು, ತನ್ನನ್ನು ಆ ವರ್ಗದಿಂದ ಆಯ್ಕೆಯಾದಂತೆ ಘೋಷಿಸಬೇಕೆಂದು ಕೋರಿದ್ದ ಅರ್ಜಿ ಪರಿಶೀಲಿಸಿದ ಉಚ್ಚ ನ್ಯಾಯಾಲಯ ಮೀಸಲು ಸ್ಥಾನದಿಂದ ಸ್ಪರ್ಧಿಸಿದ್ದಾಗಿ, ಅದು ವಿಶೇಷ ಗುಂಪೆಂದು ಹಾಗೂ ಆ ಸ್ಥಾನದಿಂದ ಆಯ್ಕೆಯಾಗಬೇಕೆ ಹೊರತು ಹೆಚ್ಚು ಮತ ಗಳಿಸಿದ್ದರೂ ಮತ್ತೊಂದು ವರ್ಗದ ನಿರ್ದೇಶಕರ

ಆಯ್ಕೆ ಗುಂಪಿನಿಂದ ಆಯ್ಕೆಯಾದಂತರ ಘೋಷಿಸಲಾಗದು. ಅದು ನಿಯಮಬಾಹಿರ. 2004 ಕೆಸಿಸಿಆರ್ ಎಸ್ಎನ್ 151/2004 ಕೆಎಲ್‌ಜೆ 48.

12. ದಿನಾಂಕ: 15–8–1998ಕ್ಕಿಂತ ಪೂರ್ವದಲ್ಲಿ ಇದ್ದ ಆಡಳಿತ ಮಂಡಳಿಯ ಅವಧಿ 3 ವರ್ಷ ಮತ್ತೊಂದು 15–8–1998ರ ನಂತರ ಅದರ ಅವಧಿ 5 ವರ್ಷ ಅಧ್ಯಕ್ಷರ ಅವಧಿ ಒಂದು ವರ್ಷ ಮತ್ತು ತಿದ್ದುಪಡಿಯ ನಂತರ 2.5 ವರ್ಷ. ಈ ನೀತಿಯನ್ನು ವ್ಯತ್ಯಾಸ ಮಾಡುವುದು ಸರಿಯಲ್ಲ. ಇದು ಮುಂದುವರೆಯತಕ್ಕದ್ದು. 2004(4) ಕೆಸಿಸಿಆರ್ ಎಸ್ಎನ್ 150/2004 ಕೆಎಲ್‌ಜೆ 429.

13. ಕರ್ನಾಟಕ ಆರ್ಡಿನೆನ್ಸ್ ಸಂಖ್ಯೆ: 4/89 ರನ್ವಯ ಅಧ್ಯಕ್ಷರ ಚುನಾವಣೆ ನಡೆದು ಆ ಅವಧಿಯಲ್ಲಿ ಆರ್ಡಿನೆನ್ಸ್ ಅನ್ವಯ ನಾಮನಿರ್ದೇಶನ ಮಾಡಿದ ವ್ಯಕ್ತಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದು, ಅದನ್ನು ತಪ್ಪು ಎಂದು ತೀರ್ಮಾನಿಸತಕ್ಕದಲ್ಲ. ಏಕೆಂದರೆ ಈ ಆರ್ಡಿನೆನ್ಸ್ ಅನ್ವಯ ಚುನಾವಣೆ ನಡೆದಿದೆ ಎಂದು ಅರ್ಜಿದಾರನು ಹೇಳಿದಾಗ ಅಂತಹ ಚುನಾವಣೆಯಲ್ಲಿ ನಾಮನಿರ್ದೇಶಕರು ನಾಮನಿರ್ದೇಶನ ತಪ್ಪು ಅಥವಾ ಸ್ಪರ್ಧಿಸುವುದು ತಪ್ಪು ಎಂದು ಹೇಳಲಾಗದು. 2001(3) ಕೆಎಲ್‌ಜೆ 187.

14. ಸರ್ಕಾರದಿಂದ ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಅದೇ ವ್ಯಕ್ತಿಯನ್ನು ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ನಾಮನಿರ್ದೇಶನ ಮಾಡಿ ಕಳುಹಿಸಿರುವುದು ಒಬ್ಬ ವ್ಯಕ್ತಿ ಪ್ರತ್ಯೇಕ ಎರಡು ವಿಭಾಗಗಳಿಂದ ನಾಮನಿರ್ದೇಶನ ಮಾಡಿದಂತಾಗುತ್ತದೆ. ಒಬ್ಬ ವ್ಯಕ್ತಿ ಒಂದು ಗುಂಪಿನಿಂದ ಮಾತ್ರ ಸ್ಥಾನ ಪಡೆಯಬಹುದು. ಆದ್ದರಿಂದ ಜಿಲ್ಲಾ ಬ್ಯಾಂಕಿನಿಂದ ನಾಮನಿರ್ದೇಶನ ಮಾಡಿರುವುದು ಕಾನೂನು ಬಾಹಿರ ಹಾಗೂ ಇದು ಕಾಯಿದೆಯ 28ಎ(2)(3) ಅನ್ವಯ ತಪ್ಪು. 2001(3) ಕೆಎಲ್‌ಜೆ 187.

15. ಒಬ್ಬ ನಾಮ ನಿರ್ದೇಶಿತ ನಿರ್ದೇಶಕನನ್ನು ತೆಗೆದುಹಾಕಲು ನಿಬಂಧಕರಿಗೆ ಅಧಿಕಾರ ಇದೆ. ತೆಗೆದುಹಾಕುವಾಗ ಅವನು ಅನರ್ಹ ಎಂಬ ಕಾರಣಕ್ಕೆ ನಿಯಮಗಳನ್ನು ಪಾಲಿಸಿ ತೆಗೆಯತಕ್ಕದ್ದು. ಈ ನಿಯಮ ಚುನಾಯಿತ ಮತ್ತು ನಾಮನಿರ್ದೇಶಿತ ವ್ಯಕ್ತಿಗಳಿಗೆ ಸಮಾನವಾಗಿ ಅನ್ವಯವಾಗುತ್ತದೆ. 2000(1) ಕೆಎಲ್‌ಜೆ 452/ಐಎಲ್‌ಆರ್ 2001(1) ಕರ್ನಾಟಕ 681.

16. ಆಯ್ಕೆಯಾದ ಸದಸ್ಯರನ್ನು ಅಥವಾ ನಾಮನಿರ್ದೇಶನ ಮಾಡಿದ ಸದಸ್ಯರನ್ನು ತೆಗೆದುಹಾಕುವಾಗ ಮನಸೋಇಚ್ಛೆ ತೆಗೆಯತಕ್ಕದಲ್ಲ. ನಿಯಮದಲ್ಲಿ ಮತ್ತು ಕಾನೂನಿನಲ್ಲಿ ನಿಗಧಿಪಡಿಸಿರುವ ನೀತಿಗೆ ಅನುಸಾರವಾಗಿ ಒಬ್ಬ ಚುನಾಯಿತ ಸದಸ್ಯನನ್ನು ಅಥವಾ ನಾಮ ಮಾತ್ರ ಸದಸ್ಯರ ರದ್ದುಪಡಿಸುವುದನ್ನು ಈ ನೀತಿ ಅನ್ವಯವೇ ತೆಗೆದುಹಾಕಬೇಕು. 2000(1) ಕರ್ನಾಟಕ 542ಐಎಲ್‌ಆರ್ 541.

17. ನಾಮನಿರ್ದೇಶನ ಮಾಡಿದ ನಿರ್ದೇಶಕರು ನಾಮನಿರ್ದೇಶನ ಮಾಡಿದ ಪ್ರಾಧಿಕಾರದ ಅಧಿಕಾರದನ್ವಯ ಸರ್ಕಾರವು ಸೇರಿಸಿದಾಗ ತೆಗೆದುಹಾಕುವ ಮತ್ತು ಯಾವ ಕಾರಣವನ್ನು ಕೇಳದೆ ತೆಗೆದುಹಾಕುವ ಅಧಿಕಾರ ಹೊಂದಿದೆ. 2000(1) ಕರ್ನಾಟಕ 542 ಐಎಲ್‌ಆರ್ 541

18. ಸಹಾಯಧನ ಪಡೆದ ಸಹಕಾರ ಸಂಘಗಳಿಗೆ ನಾಮನಿರ್ದೇಶನ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಕಲಂ 29ರನ್ವಯ ಸರ್ಕಾರ ತೀರ್ಮಾನ ತೆಗೆದುಕೊಂಡಾಗ ನಾಮನಿರ್ದೇಶನ ಮಾಡಬಹುದು. ವಾಪಸ್ಸು ಪಡೆಯಬಹುದು. ಇದಕ್ಕೆ ಯಾವುದೇ ಕಾರಣ ಕೇಳುವ ನೋಟೀಸ್ ನೀಡತಕ್ಕದ್ದಲ್ಲ. ಯಾವ ಕಲಂನನ್ವಯ ನಾಮನಿರ್ದೇಶನ ವಾಪಸ್ ಪಡೆಯಲಾಗಿದೆ ಎಂದು ನಮೂದಿಸದೆ ಇದ್ದರೂ ಆ ಆದೇಶವನ್ನು ತಪ್ಪು ಎಂದು ಹೇಳತಕ್ಕದಲ್ಲ. 2002(1) ಕೆಸಿಸಿಆರ್ 424.

19. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ 5 ವರ್ಷದ ಅವಧಿಗೆ ಸರ್ಕಾರ ನಾಮನಿರ್ದೇಶನ ಮಾಡಿತ್ತು. ಆ ನಾಮನಿರ್ದೇಶನ ಅವಧಿ ಮುಗಿಯುವ ಪೂರ್ವದಲ್ಲಿ ಆ ನಾಮನಿರ್ದೇಶನವನ್ನು ಸರ್ಕಾರ ವಾಪಸ್ ಪಡೆಯಿತು. ಇದಕ್ಕೆ ಉಚ್ಚ ನ್ಯಾಯಾಲಯ ಮಧ್ಯಪ್ರವೇಶ ಮಾಡಲಿಲ್ಲ. ಮೇಲ್ಮನವಿಯಲ್ಲಿ ಇದನ್ನು ಎತ್ತಿಹಿಡಿಯಲಾಯಿತು. 2002(2) ಕೆಸಿಸಿಆರ್ 1115 ಡಿಬಿ.

20. ಆಡಳಿತ ಮಂಡಳಿಯನ್ನು ರದ್ದುಪಡಿಸುವಾಗ ಕಾರಣಗಳು ಕ್ಷುಲ್ಲಕವಾಗಿದ್ದು ಅದು ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟಿದ್ದು, ಆದರೆ ಅಂತಹ ಆರೋಪಗಳನ್ನು ಹೊರಿಸುವಾಗ ಆ ಆರೋಪಗಳು ಗುರುತರವಾಗಿರಬೇಕು, ಬೇಜವಾಬ್ದಾರಿತನದ್ದಾಗಿರಬೇಕು ಹಾಗೂ ತಪ್ಪುಗಳನ್ನು ಸತತವಾಗಿ ಮಾಡುತ್ತಿರಬೇಕು. ಅಂತಹ ಸಂದರ್ಭದಲ್ಲಿ ಅಂತಿಮ ಕ್ರಮವಾಗಿ ಆ. ನೇಮಿಸಬೇಕು. 2003(3) ಕೆಸಿಸಿಆರ್‌ಎಸ್ಎನ್ 82 2841/2000(4) ಕರ್ನಾಟಕ ಎಲ್‌ಜೆ 364.

# ಅಧ್ಯಾಯ – 8.2

# ವಿಶೇಷಾಧಿಕಾರಿ ನೇಮಕ

**ಕಲಂ.38ಎ : ವಿಶೇಷಾಧಿಕಾರಿಯ ನೇಮಕ :**

(1) "ನಿರ್ದೇಶಕರ ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ಅವರನ್ನು ತೆಗೆದು ಹಾಕಿರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆಯು ಅಗತ್ಯವಿರುವ ಕೋರಂ ಸಂಖ್ಯೆಗಿಂತ ಕಡಿಮೆ ಇದೆ ಎಂಬ ಕಾರಣದಿಂದ ಸಹಕಾರಿಯ ಚಟುವಟಿಕೆಗಳು ಈ ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳಿಗೆ ಅನುಸಾರವಾಗಿ ನಡೆಸಲಾಗದಿದ್ದಲ್ಲಿ ಅಥವಾ 25ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿಯ ಯಾವುದೇ ಅನರ್ಹತೆ ಉಂಟಾದಲ್ಲಿ ಅಥವಾ ಎಲ್ಲಾ ನಿರ್ದೇಶಕರು ರಾಜೀನಾಮೆ ಕೊಟ್ಟಲ್ಲಿ [ಅಥವಾ ಮಂಡಳಿಯ ಪದಾವಧಿ ಮುಕ್ತಾಯವಾಗಿದ್ದು, ನೂತನ ಮಂಡಳಿಯು ರಚನೆಯಾಗಿಲ್ಲದಿದ್ದಲ್ಲಿ], ಅಂಥ ಸಹಕಾರಿಗೆ ಸಂಯುಕ್ತ ಸಹಕಾರಿಯು ಆರು ತಿಂಗಳಿಗೆ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಆದೇಶದ ಮೂಲಕ ಬಾಧಿತವಾಗುವ ಸಹಕಾರಿಗೆ ಅಥವಾ ವ್ಯಕ್ತಿಗೆ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಅದನ್ನು ತಿಳಿಸುವ ಅವಕಾಶವನ್ನು ನೀಡುವ ಅವಶ್ಯಕತೆ ಇರುವುದಿಲ್ಲ.

(3) ಮಂಡಳಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಕುರಿತು (ಸಹಕಾರ ಚುನಾವಣಾ ಆಯೋಗ)ಕ್ಕೆ ವಿಶೇಷಾಧಿಕಾರಿಯು ಮಾಹಿತಿ ಒದಗಿಸತಕ್ಕದ್ದು. ಮತ್ತು ಸಹಕಾರಿ ಚುನಾವಣಾ ಪ್ರಾಧಿಕಾರ ಖಾಲಿ ಇರುವ ಸ್ಥಾನಗಳ ಉಳಿದ ಅವಧಿಗೆ ಚುನಾವಣೆಯನ್ನು ನಡೆಸತಕ್ಕದ್ದು.

(4) ಚುನಾವಣೆ ನಡೆದು ಆಡಳಿತ ಮಂಡಳಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆದ ಕೂಡಲೇ ವಿಶೇಷಾಧಿಕಾರಿಯು ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸತಕ್ಕದ್ದು ಮತ್ತು ವಿಶೇಷಾಧಿಕಾರಿಯು ಸ್ಥಾನ ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು."

ಒಂದು ಸಹಕಾರಿಯನ್ನು ನಡೆಸಿಕೊಂಡು ಹೋಗಲು ಒಂದು ಆಡಳಿತ ಮಂಡಳಿ ಅಥವಾ ಯಾವುದೇ ಒಂದು ಹೆಸರಿನಿಂದ ಕರೆದ ಮಂಡಳಿ ಅವಶ್ಯಕತೆ ಇದೆ. ಆ ಮಂಡಳಿ ರಚನೆಯ ವಿಧಿವಿಧಾನಗಳನ್ನು ಕಲಂ.24, 25ಎ, 26, 26ಎ, 27, 28, 30 ರಲ್ಲಿ ಅವಕಾಶಗಳು ಇರುತ್ತವೆ. ಮಂಡಳಿಯನ್ನು ಆಯ್ಕೆ ಮಾಡುವುದು ಸಾಮಾನ್ಯ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿ.ಈ ರೀತಿ ಆಯ್ಕೆಯಾದ ಮಂಡಳಿ ಕಾರಣಾಂತರಗಳಿಂದ ಕಾರ್ಯ ನಿರ್ವಹಿಸಲಾಗದಿದ್ದಾಗ, ಅಂದರೆ ಈ ಕೆಳಕಂಡ ಪ್ರಸಂಗಗಳಲ್ಲಿ ವಿಶೇಷಾಧಿಕಾರಿಯನ್ನು ನೇಮಿಸಬಹುದು.

1. ಆಡಳಿತ ಮಂಡಳಿ ಸದಸ್ಯರನ್ನು ಅನರ್ಹಗೊಳಿಸಿದಾಗ
2. ಆಡಳಿತ ಮಂಡಳಿಯ ನಿರ್ದೇಶಕರು ರಾಜೀನಾಮೆ ಕೊಟ್ಟಾಗ
3. ಮರಣ ಹೊಂದಿದಾಗ ಅಥವಾ ತೆಗೆದುಹಾಕಿದಾಗ
4. ಮಂಡಳಿಯ ಅವಧಿ ಮುಗಿದಿದ್ದು ಹೊಸ ಮಂಡಳಿ ರಚನೆಯಾಗದೆ ಇದ್ದಾಗ
5. ಆಡಳಿತ ಮಂಡಳಿಯ ಸಭೆಗಳನ್ನು ನಡೆಸಲು ಸಭಾವಶ್ಯಕ ಕೋರಂ ಸಂಖ್ಯೆ ಅಗತ್ಯಕ್ಕಿಂತ ಕಡಿಮೆಯಾದ ಕಾರಣದಿಂದ ಕಾರ್ಯನಿರ್ವಹಿಸುತ್ತಿಲ್ಲವೆಂದು ಸಂಯುಕ್ತ ಸಹಕಾರಿ ಅಭಿಪ್ರಾಯಪಟ್ಟಾಗ,

**ಆ ಸಹಕಾರಿಗೆ 6 ತಿಂಗಳ ಅವಧಿ ಮೀರದಂತೆ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು.**

ಈ ಮೇಲ್ಕಂಡ 5 ಕಾರಣಗಳಲ್ಲದೆ ಬೇರೆ ಕಾರಣದ ಆಧಾರದ ಮೇಲೆ ವಿಶೇಷಾಧಿಕಾರಿಯನ್ನು ನೇಮಕ ಮಾಡತಕ್ಕದ್ದಲ್ಲ. ಈ ಕಲಂ ಅಡಿ ವಿಶೇಷಾಧಿಕಾರಿ ನೇಮಿಸುವ ಮಂಡಳಿ ಸದಸ್ಯರಿಗೆ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. ವಿಶೇಷಾಧಿಕಾರಿ ನೇಮಿಸಿದ ನಂತರ ಸಹಕಾರಿಗೆ

ಹೊಸದಾಗಿ ಚುನಾವಣೆ ಮಾಡುವ ಕೆಲಸದ ಜೊತೆ, ಸಹಕಾರಿಯ ದಿನ ನಿತ್ಯದ ವ್ಯವಹಾರದಲ್ಲಿ ಅಧಿಕಾರ ವಹಿಸಿಕೊಂಡ ದಿನದಿಂದ, ಹೊಸ ಮಂಡಳಿ ಅಧಿಕಾರ ವಹಿಸಿಕೊಳ್ಳುವ ತನಕ, ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಇರತಕ್ಕದ್ದು. ಕಾಯಿದೆಯಲ್ಲಿ ಸ್ಪಷ್ಟವಗಿ ಸೂಚಿಸದೇ ಇದ್ದರೂ, ಮಂಡಳಿ ಅಸ್ತಿತ್ವ ಕಳೆದುಕೊಂಡಾಗ, ಅದರ ಜಾಗದಲ್ಲಿ ವಿಶೇಷಾಧಿಕಾರಿ ಕಾಲಿಡುತ್ತಾನೆ. ಏಕೆಂದರೆ, ಆಡಳಿತದಲ್ಲಿ ಶೂನ್ಯತೆ ಇರತಕ್ಕದ್ದಲ್ಲ. ಅಧಿಕಾರ ವಹಿಸಿಕೊಂಡ ವಿಶೇಷಾಧಿಕಾರಿ, ಆ ಸಹಕಾರಿಯ ಅರಾಜಕತೆಗೆ ಕಾರಣನಾಗತಕ್ಕದ್ದಲ್ಲ. ವಿಶೇಷಾಧಿಕಾರಿಯನ್ನು ನೇಮಿಸಿದ ದಿನಾಂಕದಂದು ಸಹಕಾರಿ ಮಂಡಳಿ ಸದಸ್ಯರು ಅವರ ಸ್ಥಾನಗಳನ್ನು ತೆರವು ಮಾಡತಕ್ಕದ್ದು. ಅಥವಾ ತೆರವು ಮಾಡಲಾಗಿದೆಯೆಂದು ಭಾವಿಸತಕ್ಕದ್ದು. ಸಹಕಾರಿಯು ವ್ಯವಹಾರವನ್ನು ವಹಿಸಿಕೊಂಡು ಸಂಯುಕ್ತ ಸಹಕಾರಿ ನಿಯಂತ್ರಣಕ್ಕೊಳಪಟ್ಟು ಮಂಡಳಿಯನ್ನು ಚಲಾಯಿಸುವ ಎಲ್ಲಾ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ವಿಶೇಷಾಧಿಕಾರಿ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಮಂಡಳಿ ರಚನೆಗೆ ಏರ್ಪಾಡು ಮಾಡತಕ್ಕದ್ದು.

**ವಿಶೇಷಾಧಿಕಾರಿಯನ್ನು ನೇಮಕ ಮಾಡುವ ಪೂರ್ವದಲ್ಲಿ ಗಮನಿಸಬೇಕಾದ ಅಂಶಗಳು (ಚೆಕ್‌ಲಿಸ್ಟ್)**

1. ಆಡಳಿತ ಮಂಡಳಿ ರಚನೆಯಾದ ದಿನಾಂಕ ________
2. ಆಯ್ಕೆಯಾದ ಸದಸ್ಯರ ಸಂಖ್ಯೆ ________
3. ಕೋರಂ ಆಗಲು ಅವಶ್ಯಕ ನಿರ್ದೇಶಕರ ಸಂಖ್ಯೆ ______
4. ಸಭೆಗಳನ್ನು ಕರೆಯುವ ಅವಧಿ – 1/2/3/ ತಿಂಗಳು _______
5. ಸಭೆಯನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕರೆದ ದಿನಾಂಕಗಳು _______
6. ಆ ಸಭೆಗಳಲ್ಲಿ ಕೋರಂ ಆಗದೇ ಇದ್ದ ದಿನಾಂಕಗಳು ________
7. ಆಡಳಿತ ಮಂಡಳಿಯ ಸದಸ್ಯರು ಅನರ್ಹತೆಗೊಂಡ ದಿನಾಂಕ ಮತ್ತು ನಿರ್ದೇಶಕರ ಹೆಸರು _____
8. ಆಯ್ಕೆಯಾದ ಸದಸ್ಯರ ಹೆಸರು ಮತ್ತು ರಾಜೀನಾಮೆ ಕೊಟ್ಟ ದಿನಾಂಕ _______
9. ಆಯ್ದೆಯಾದ ನಿರ್ದೇಶಕರ ಹೆಸರು ಮತ್ತು ಮರಣ ಹೊಂದಿದ ದಿನಾಂಕ ________
10. ಆಡಳಿತ ಮಂಡಳಿಯ ನಿರ್ದೇಶಕರನ್ನು ತೆಗೆದುಹಾಕಿದ ದಿನಾಂಕ ಮತ್ತು ಹೆಸರು. __________
11. ಆಡಳಿತ ಮಂಡಳಿಯ ಸಭೆಯನ್ನು ಕರೆದರೂ ಕೋರಂ ಆಗುತ್ತಿಲ್ಲವೆಂಬ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ವರದಿ – ಹೌದು/ ಇಲ್ಲ __________
12. ಸಂಯುಕ್ತ ಸಹಕಾರಿ ಪ್ರತಿನಿಧಿ ಕೊಟ್ಟ ವರದಿ ದಿನಾಂಕ ________

ಈ ಮೇಲ್ಕಂಡ ಅಂಶಗಳ ಪರಿಶೀಲನೆಯ ನಂತರವೇ ಸಭೆಗಳನ್ನು ನಡೆಸಲು ನಿರ್ದೇಶಕರ ಸಂಖ್ಯೆ, ಕೋರಂ ಸಂಖ್ಯೆಗಿಂತ ಕಡಿಮೆ ಇದೆ ಎಂಬುದನ್ನು ಮನದಟ್ಟು ಮಾಡಿಕೊಂಡು ವಿಶೇಷಾಧಿಕಾರಿಯನ್ನು ನೇಮಿಸಬೇಕು. ಅಥವಾ ಆಯ್ಕೆಯಾದ ನಿರ್ದೇಶಕರು ಕೋರಂ ಭರ್ತಿಯಾಗುವ ಸಂಖ್ಯೆಯಲ್ಲಿದ್ದರೂ ಸಭೆಗೆ ಹಾಜರಾಗದೇ ಇದ್ದಾಗ ಮತ್ತು ಕೋರಂ ಆಗುವ ಸಂಭವವಿದ್ದರೂ ಗೈರುಹಾಜರಾದಾಗ, ಸಂಯುಕ್ತ ಸಹಕಾರಿ ಸಭೆ ನಡೆಸಲು ಆಗದೇ ಇದ್ದುದಕ್ಕೆ ಸಕಾರಣಗಳನ್ನು ವಿಮರ್ಶೆ ಮಾಡಿ, ರದ್ದುಪಡಿಸಬೇಕಾದರೆ ಅಥವಾ ವಿಶೇಷಾಧಿಕಾರಿಯನ್ನು ನೇಮಕ ಮಾಡಬೇಕಾದರೆ ಈ ಕಲಂನಡಿ ವಿಶೇಷಾಧಿಕಾರಿ ನೇಮಕ ಮಾಡಬಹುದೇ ಎಂಬುದನ್ನು ನಿರ್ಧರಿಸಬೇಕು. ಏಕೆಂದರೆ ಮೇಲ್ಕಂಡ 5 ಕಾರಣಗಳಲ್ಲದೇ ಬೇರೆ ಕಾರಣಗಳಿಂದ ವಿಶೇಷಾಧಿಕಾರಿಯನ್ನು ನೇಮಕ ಮಾಡಲು ಬರುವುದಿಲ್ಲ.

ಈ ಕೆಳಕಂಡ ತೀರ್ಪುಗಳು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 30ಎ ಜಾರಿಯಲ್ಲಿದ್ದಾಗ ಹೊರಡಿಸಿದ್ದವು. ಆದರೂ ತತ್ವಗಳು

ಒಂದೇ ಇರುವುದರಿಂದ ಉಲ್ಲೇಖಿಸಲಾಗಿದೆ.

1. ಸಹಕಾರ ಸಂಘಗಳ ಕಾಯಿದೆ ಕಲಂ 30ಎ, ಕಲಂ 30ಕ್ಕಿಂತಲೂ ವಿಭಿನ್ನ ಹಾಗೂ ಕಲಂ 30, 30ಎ ಅನ್ನು ನಿಯಂತ್ರಿಸುವುದಿಲ್ಲ. ಕಲಂ 31ಎ ಅನ್ನು ಚಲಾಯಿಸುವಾಗ ವಿಶೇಷ ಮತ್ತು ಅತಿ ತುರ್ತು ಸಮಯದಲ್ಲಿ ಮತ್ತು 30ರಲ್ಲಿರುವ ದಾಖಲೆಗಳು ಮತ್ತು ಸಾಕ್ಷಿಗಳ ಪರಿಶೀಲನೆ ಮಟ್ಟದಲ್ಲಿ ಪರಿಶೀಲಿಸಿದ ನಂತರವೇ ಆದೇಶಿಸಬೇಕೆಂದಿಲ್ಲ. ಏಕೆಂದರೆ ಕಲಂ 30ರಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದ ನಂತರವೇ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಐಎಲ್‌ಆರ್ 1892 ಕರ್ನಾಟಕ 71 ಕೆಎಲ್‌ಜೆ 291.

2. ಕಲಂ 30ಎ ಅನ್ನು ಉಪಯೋಗಿಸುವಾಗ ಒಂದು ಸಹಕಾರ ಸಂಘ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕೆ ವಿಶೇಷಾಧಿಕಾರಿ ನೇಮಿಸಬಹುದು 1984(1) ಕೆಎಲ್‌ಜೆ 260.

3. ಸರ್ಕಾರವು ವಿಶೇಷಾಧಿಕಾರಿ ನೇಮಿಸುವಾಗ ಅತಿ ವಿರಳವಾಗಿ ಹಾಗೂ ತುರ್ತು ಹಾಗೂ ಅತಿ ಅವಶ್ಯಕ ಕ್ರಮವೆಂದು ಹಾಗೂ ಕಲಂ 30ರನ್ವಯ ಕ್ರಮ ಜರುಗಿಸಲು ಆಗದೇ ಇದ್ದಾಗ ವಿಶೇಷಾಧಿಕಾರಿ ನೇಮಿಸಬೇಕು. ಕಲಂ 30ಎ ಒಂದು ಸ್ವತಂತ್ರ ಕಲಂ. ಅದನ್ನು 30ರ ವಿಸ್ತರಣೆ ಎಂದು ತಿಳಿಯತಕ್ಕದ್ದಲ್ಲ. 1989(8) ಡಿಬಿ.

4. ಕಲಂ 30ಎ ಅನ್ವಯ ಕಲಂ 30ಕ್ಕಿಂತ ಹೆಚ್ಚು ವಿಸ್ತಾರವುಳ್ಳದ್ದು. ಆದರೆ ಅದು ಒಂದು ವಿಶೇಷ ಅಧಿಕಾರ. ಅದು ವಿಶೇಷ ಸಂದರ್ಭ ಹಾಗೂ ತುರ್ತು ಸಂದರ್ಭದಲ್ಲಿ ಕ್ರಮ ಜರುಗಿಸಬೇಕು. ಇದಕ್ಕೆ ಹೆಚ್ಚು ಗಮನಾರ್ಹ ಕಾರಣಗಳು ಹಾಗೂ ದಾಖಲೆಗಳು ಬೇಕು. ಅಂದರೆ ಕಲಂ 30ಕ್ಕಿಂತ ಹೆಚ್ಚು ಗುರುತರವಾದ ಅವಶ್ಯಕವಾದ ತುರ್ತಾದ ಕ್ರಮ ಜರುಗಿಸಲು ಉಪಯೋಗಿಸಬೇಕು. ಐಎಲ್‌ಆರ್ 1989(2) ಕೆಎಲ್‌ಜೆ 295.

ಆಡಳಿತಗಾರ ಅಥವಾ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆ

ಸರ್ಕಾರದ ಅಥವಾ ಒಂದು ಸಹಕಾರಿ ಸಂಸ್ಥೆಯ ಯಾವುದೇ ಅಧಿಕಾರಿ ಅಥವಾ ನೌಕರನನ್ನು ಅಧಿನಿಯಮದ ಪ್ರಕರಣ 38 ಅಥವಾ 57ಎ ಅಡಿ ನೇಮಕ ಮಾಡಲ್ಪಟ್ಟ ಆಡಳಿತಗಾರ ಅಥವಾ ಪ್ರಕರಣ 38ಎ ಅಡಿಯಲ್ಲಿ ನೇಮಕವಾದ ವಿಶೇಷಾಧಿಕಾರಿಗೆ ಕೊಡಬಹುದಾದ ಸಂಭಾವನೆಯನ್ನು ಕೆಳಗಿನಂತೆ ನಿರ್ದಿಷ್ಟ ಪಡಿಸತಕ್ಕದ್ದು.

**(i)** ಆತನನ್ನು ಪೂರ್ಣಕಾಲಿಕವಾಗಿ ನೇಮಿಸಿದಲ್ಲಿ ಆತನ ಸಂಬಳ ಮತ್ತು ಭತ್ಯೆಗಳನ್ನು ಸಹಕಾರಿಯು ಭರಿಸತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಅಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು;

**(ii)** ಆತನನ್ನು ಆತನ ನಿಯತ ಹುದ್ದೆಗೆ ಹೆಚ್ಚುವರಿಯಾಗಿ ಆಡಳಿತಗಾರ ಅಥವಾ ವಿಶೇಷಾಧಿಕಾರಿಯಾಗಿ ನೇಮಿಸಿದ್ದಲ್ಲಿ, ಆತನಿಗೆ, ಆತನು ಧಾರಣ ಮಾಡಿದ ಹುದ್ದೆಯ ಮೂಲ ವೇತನದ ಗರಿಷ್ಠ ಶೇಕಡಾ ಹತ್ತರಷ್ಟನ್ನು ಸಂಭಾವನೆ ಎಂದು ಸಹಕಾರಿಯ ನಿಧಿಗಳಿಂದ ಕೊಡತಕ್ಕದ್ದು. ಆತನಿಗೆ ಇಲಾಖೆಯಲ್ಲಿ ಅಥವಾ ಸಂಸ್ಥೆಯಲ್ಲಿ ಅನ್ವಯವಾಗುವ ಸೇವಾ ನಿಯಮಗಳು, ಸಹಕಾರಿಯ ಆಡಳಿತಗಾರ ಅಥವಾ ವಿಶೇಷಾಧಿ ಕಾರಿಯಾಗಿ ಕೆಲಸ ನಿರ್ವಹಿಸುವಾಗಲೂ ಅನ್ವಯಿಸತಕ್ಕದ್ದು.

ಟಿಪ್ಪಣಿ – ನಿಯಮ6, 6ಬಿ ಯಿಂದ 6ಎ ಮತ್ತು 6ಜೆ ಮತ್ತು 6ಕೆ ನಿಯಮಗಳು ಸೌಹಾರ್ದ ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸುತ್ತದೆ.

# ಅಧ್ಯಾಯ – 8.3

## ಪರಿವೀಕ್ಷಣೆ:

ಸಂಯುಕ್ತ ಸಹಕಾರಿ ತನ್ನ ಅಧೀನ ಅಧಿಕಾರಿಗಳಿಗೆ ಆಗಿಂದಾಗ್ಗೆ ಪರಿವೀಕ್ಷಣೆ ಮಾಡುವ ಜವಾಬ್ದಾರಿಯನ್ನು ಮತ್ತು ಸಂಖ್ಯೆಗಳನ್ನು ನಿಗಧಿಪಡಿಸಿ, ನಿರ್ದೇಶನ ಮತ್ತು ಸುತ್ತೋಲೆ ನೀಡಬಹುದು. ಈ ಪರಿವೀಕ್ಷಣೆ ಶಾಸನಬದ್ದ ಪರಿವೀಕ್ಷಣೆ ಅಲ್ಲ. ಸಂಯುಕ್ತ ಸಹಕಾರಿಯ ಮೂಲ ಜವಾಬ್ದಾರಿ, ಸಹಕಾರಿಯ ಮೇಲ್ವಿಚಾರಣೆ ಮಾಡುವುದಾಗಿದ್ದು, ಅದಕ್ಕೆ ಪೂರಕವಾಗಿ ಪ್ರತಿಯೊಂದು ಸಹಕಾರಿ ಕನಿಷ್ಠ 6 ತಿಂಗಳಿಗೆ ಒಮ್ಮೆಯಾದರೂ ಸಂಯುಕ್ತ ಸಹಕಾರಿ ಅಥವಾ ಅವರ ಪ್ರತಿನಿಧಿ ಪರಿವೀಕ್ಷಣೆ ಮಾಡುವ ಅವಶ್ಯಕತೆ ಇದೆಯೆಂದು ಮನಗಂಡು ಈ ಸುತ್ತೋಲೆಯನ್ನು ಕೊಡುತ್ತಿರುತ್ತಾರೆ. ಈ ಪರಿವೀಕ್ಷಣೆಗಳ ಮೂಲ ಉದ್ದೇಶ ಸಹಕಾರಿ ಕಾರ್ಯನಿರ್ವಹಣೆಯಲ್ಲಿ ದಿನನಿತ್ಯದ ವ್ಯವಹಾರ ಮಾಡುವಾಗ ಉದ್ಭವವಾಗುವ ಸಮಸ್ಯೆಗಳಿಗೆ ಸಂದರ್ಭಾನುಸಾರ ಮಾರ್ಗದರ್ಶನ ನೀಡಲು ಸಂಯುಕ್ತ ಸಹಕಾರಿ ಅಥವಾ ಅವರ ಪ್ರತಿನಿಧಿ ಸಹಕಾರಿಗೆ ಲಭ್ಯವಾಗುವಂತೆ ಮಾಡುವ ಒಂದು ಉದ್ದೇಶ. ಸಂಯುಕ್ತ ಸಹಕಾರಿ ಅಥವಾ ಅವರ ಪ್ರತಿನಿಧಿ ಈ ರೀತಿ ಮಾರ್ಗದರ್ಶನ ಮಾಡುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು ಮತ್ತು ಸಹಕಾರಿಗೆ ನಿಯಂತ್ರಿಸುತ್ತೇನೆಂಬ ಭಾವನೆ ಇಟ್ಟುಕೊಳ್ಳದೆ ನ್ಯೂನ್ಯತೆಗಳನ್ನು ಸರಿಪಡಿಸಲು ಅವಕಾಶ ಕಲ್ಪಿಸಿಕೊಡುವುದು ಈ ಪರಿವೀಕ್ಷಣೆಯ ಉದ್ದೇಶ.

ಇದಕ್ಕೆ ಪೂರಕವಾಗಿ ಪ್ರತಿಯೊಬ್ಬ ಪರಿವೀಕ್ಷಣಾಧಿಕಾರಿಯೂ ಆ ಸಹಕಾರಿ ವ್ಯವಹಾರವನ್ನು ಪರಿಶೀಲನೆ ಮಾಡುವ ಸಂದರ್ಭಧಲ್ಲಿ ಆ ಗ್ರಾಮದಲ್ಲಿ ವಾಸ್ತವ್ಯ ಹೂಡಬೇಕು ಮತ್ತು ಸದಸ್ಯರ ಜೊತೆ ಸಂಪರ್ಕವೇರ್ಪಡಿಸಿ ವ್ಯವಹಾರದ ಬಗ್ಗೆ ತಿಳುವಳಿಕೆ ಪಡೆಯಬೇಕು. ಈ ರೀತಿ ಮಾಡುವುದರಿಂದ ಸಹಕಾರಿ ಆಂದೋಲನಕ್ಕೆ ಪೂರಕವಾಗಿ ಸದಸ್ಯರು ಆಂದೋಲನದ ಬಗ್ಗೆ ತಿಳುವಳಿಕೆ ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ.

**ಶಾಸನಬದ್ಧ ಪರಿವೀಕ್ಷಣೆ:**

ಸೌಹಾರ್ದ ಕಾಯಿದೆಯಲ್ಲಿ ಪರಿವೀಕ್ಷಣೆಗಾಗಿ ಪ್ರತ್ಯೇಕ ಕಲಂ ರಚಿಸದೇ ಇದ್ದರೂ, ನಿಬಂಧಕರ ಅಧಿಕಾರವನ್ನು ಸಂಯುಕ್ತ ಸಹಕಾರಿ ಮಂಡಳಿಗೆ ವಹಿಸಿದ್ದು, ಪರಿವೀಕ್ಷಣೆಯನ್ನು ಒಂದು ಪ್ರಕಾರ್ಯವೆಂದು ನಿಗದಿ ಪಡಿಸಿದೆ. ಈ ಪ್ರಕಾರ್ಯವನ್ನು ನಿರ್ವಹಿಸುವಾಗ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಮತ್ತು ಹಣಕಾಸಿನ ಬಗ್ಗೆ ವಿಚಾರಣೆಗೆ ಆದೇಶಿಸಬಹುದು. ಇದರ ಜೊತೆಗೆ ಸಂಯುಕ್ತ ಸಹಕಾರ ತನ್ನ ಕ್ಷೇತ್ರ ಸಿಬ್ಬಂದಿಗೆ ಅವರ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಕನಿಷ್ಟ ವರ್ಷಕ್ಕೆ ಒಮ್ಮೆಯಾದರೂ ಪರಿವೀಕ್ಷಣೆ ಮಾಡಲು ಯೋಜನೆ ರೂಪಿಸಿ ಕಾರ್ಯರೂಪಕ್ಕೆ ಬರತಕ್ಕದ್ದು. ಈ ಪರಿವೀಕ್ಷಣೆ ಶಾಸನಾತ್ಮಕ ಪರಿವೀಕ್ಷಣೆಯಲ್ಲ. (ಸೂಚನೆ : "ವಿಚಾರಣೆ", "ಪರಿವೀಕ್ಷಣೆ" ಮತ್ತು "ಅನ್ವೇಷಣೆ" ಬಗ್ಗೆ ಶಬ್ದಾರ್ಥವನ್ನು ವಿಚಾರಣೆ ಅಧ್ಯಾಯದಲ್ಲಿ ವಿವರಿಸಿರುವುದನ್ನು ಗಮನಿಸುವುದು.)

**"ಪರಿವೀಕ್ಷಣೆ"ಯನ್ನು ಯಾವಾಗ ಆದೇಶಿಸಬೇಕು**

"ವಿಚಾರಣೆ"ಗೆ ಆದೇಶಿಸುವಾಗ (1) ಸಂಯುಕ್ತ ಸಹಕಾರಿ ಮನವಿ (2) ಮಂಡಳಿ ಸದಸ್ಯರ ಮನವಿ (3) ಸಹಕಾರಿ ಸದಸ್ಯರ ಮನವಿ (4) ಸಾಲಗಾರರ/ಠೇವಣಿದಾರರ ಮನವಿ (5) ನಿಬಂಧಕರು ಸ್ವಯಂ ಸ್ಪೂರ್ತಿಯಿಂದ ವಿಚಾರಣೆ ಮಾಡಲು ಅವಕಾಶ ಕಲ್ಪಿಸಿದೆ. ಪರಿವೀಕ್ಷಣೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಕಲಂ ರೂಪಿಸದೇ ಇರುವುದರಿಂದ, ಮೇಲ್ಕಂಡ ನೀತಿಯನ್ನು ಪರಿವೀಕ್ಷಣೆಗೆ ಅನುಸರಿಸಬೇಕು.ಆದರೆ ಪರಿವೀಕ್ಷಣೆ ಆದೇಶ ಮಾಡುವಾಗ ಸಂಯುಕ್ತ ಸಹಕಾರಿ ಸ್ವಯಂ ಸ್ಪೂರ್ತಿಯಿಂದಲೇ ಮಾಡಿದಂತೆ ಆದೇಶಿಸಬಹುದು. ಯಾವುದೇ ರೂಪದಿಂದ ಸಂಯುಕ್ತ ಸಹಕಾರಿಗೆ ಒಂದು ಸದಸ್ಯ ಸಹಕಾರಿ ಬಗ್ಗೆ ಲಿಖಿತ ವರದಿ, ಮನವಿ, ಆರೋಪ ಬಂದಾಗ, ಅದರ ಸತ್ಯಾತ್ತತೆ ಬಗ್ಗೆ ತಿಳಿದುಕೊಳ್ಳುವ ಜವಾಬ್ದಾರಿ ಇದ್ದು ಪರಿವೀಕ್ಷಣೆಗೆ ಆದೇಶ ಮಾಡಬಹುದು.

**ಪರಿವೀಕ್ಷಣೆ ವಿಷಯ**

ಸಾಮಾನ್ಯವಾಗಿ ಯಾವ ವಿಷಯದ ಬಗ್ಗೆ ಸಂಯುಕ್ತ ಸಹಕಾರಿಗೆ ಸತ್ಯಾತತೆ ತಿಳಿಯಬೇಕಿದೆಯೇ, ಆ ಅಂಶಗಳಿಗೆ ಮಾತ್ರ ಪರಿವೀಕ್ಷಣೆ ಮಾಡಲು ತನ್ನ ಸಿಬ್ಬಂದಿಗೆ/ಅಧಿಕಾರಿಗೆ ಆದೇಶಿಸಬಹುದು.ಪರಿವೀಕ್ಷಣೆ ವಿಷಯ ಸ್ಪಷ್ಟವಾಗಿರಬೇಕು ಮತ್ತು ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಮತ್ತು ಹಣಕಾಸು ಎಂದು ಆದೇಶಿಸಬಾರದು.ಯಾವ ವಿಷಯದ ಬಗ್ಗೆ ವಿವರಣೆ ಬೇಕಾಗಿದೆಯೇ ಆ ಅಂಶವನ್ನು ಮಾತ್ರ ಸ್ಪಷ್ಟವಾಗಿ ನಮೂದಿಸಿ ಆದೇಶಿಸಬೇಕು.

**ಪರಿವೀಕ್ಷಣೆಗೆ ಅವಧಿ**

ಯಾವ ವಿಷಯದ ಮೇಲೆ, ಆದೇಶಿಸಲಾಗಿದೆಯೇ, ಅದರ ಕ್ಲಿಷ್ಟತೆಯ ಆಧಾರದ ಮೇಲೆ ಅವಧಿ ನಿಗದಿ ಪಡಿಸುವ ಅಧಿಕಾರ ಸಂಯುಕ್ತ ಸಹಕಾರಿಗೆ ಇರುತ್ತದೆ.ಆದರೆ ಕನಿಷ್ಟ (3) ತಿಂಗಳು ಮತ್ತು ಗರಿಷ್ಠ (12) ತಿಂಗಳು ನಿಗದಿ ಪಡಿಸಬಹುದು.

**ಪರಿವೀಕ್ಷಣೆಗೆ ಯಾರನ್ನು ನೇಮಕ ಮಾಡಬಹುದು**

ಸಂಯುಕ್ತ ಸಹಕಾರಿ ಪರಿವೀಕ್ಷಣೆ ತೀರ್ಮಾನಿಸಿದಾಗ ಸಮಸ್ಯೆಯ ಕ್ಲಿಷ್ಟತೆಯ ಆಧಾರದ ಮೇಲೆ ಸಂಯುಕ್ತ ಸಹಕಾರಿಯ ಹಿರಿಯ ಅಥವಾ ಕಿರಿಯ ಅಧಿಕಾರಿಯನ್ನು ನೇಮಿಸಬಹುದು. ಕ್ಲಿಷ್ಟತೆ ಎಂದರೆ, ಪರಿಶೀಲಿಸಬೇಕಾದ ವಿಷಯಗಳ ಆಳದಿಂದ ಅಭ್ಯಾಸ ಮಾಡಬೇಕಾದರೆ, ಹಣದುರುಪಯೋಗ ಬಹಳ ವರ್ಷಗಳಿಂದ ನಡೆಯುತ್ತದೆ ಎಂದು ಗಮನಕ್ಕೆ ಬಂದರೆ, ಅಥವಾ ಕಾನೂನಿನಲ್ಲಿ ಉಪವಿಧಿಗಳಲ್ಲಿನ ದುರುಪಯೋಗವಾಗುತ್ತಿದ್ದರೆ ಅಥವಾ ಸದಸ್ಯ ಸಹಕಾರಿಯು ನಿರ್ದೇಶಕರು ಅನರ್ಹತೆಗೊಳಗಾಗಿದ್ದಾರೆಯೇ ಎಂಬ ವಿಷಯಗಳಿದ್ದರೆ ಹಿರಿಯ ಅಧಿಕಾರಿಯನ್ನು ಮತ್ತು ಮಂಡಳಿ ಸದಸ್ಯರ ಸಭೆಗಳ ಹಾಜರಾತಿ, ಸಾಮಾನ್ಯ ಸಭೆ ಕರೆಯಲು ಮಾಡಿದ ತಯಾರಿ, ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಿದ ಬಗ್ಗೆ ಪತ್ರ ವ್ಯವಹಾರಗಳ ಬಗ್ಗೆ ಆದರೆ ಒಬ್ಬ ಕಿರಿಯ ಅಧಿಕಾರಿ ನೇಮಿಸಿ ಆದೇಶಿಸಬಹುದು.

**ಪರಿವೀಕ್ಷಣೆ ಮಾಡುವ ವಿಧಿ ವಿಧಾನಗಳು**

ಪರಿವೀಕ್ಷಣೆಯಲ್ಲಿ ಸದಸ್ಯ ಸಹಕಾರಿ ನಿರ್ವಹಿಸುತ್ತಿರುವ ಪುಸ್ತಕಗಳು, ದಾಖಲೆಗಳು, ವಹಿಗಳು ಮತ್ತು ಲೆಡ್ಜರ್‌ಗಳು, ಹೂಡಿಕೆಗಳು, ಠೇವಣಿ ವಹಿಗಳು ಮತ್ತಿತರ ದಾಖಲೆಗಳನ್ನು ನೋಡಿ, ವರದಿ ತಯಾರಿಸಬೇಕು. ಸಂಬಂಧಪಟ್ಟ ವ್ಯಕ್ತಿಗಳಿಗೆ ಶಾಸನಾತ್ಮಕ ನೋಟೀಸ್ ಅಥವಾ ಸಮನ್ಸ್ ನೀಡತಕ್ಕದ್ದಲ್ಲ. ಆದರೆ ಯಾರ ಮೇಲೆ ವರದಿಯಲ್ಲಿ ಜವಾಬ್ದಾರಿ ನಿಗದಿ ಪಡಿಸಬೇಕಾಗುತ್ತಿದೆಯೋ ಅವರಿಂದ ಸ್ಪಷ್ಟೀಕರಣ ಕೇಳಿ ಪತ್ರ ಬರೆದು ಮಾಹಿತಿ ಸಂಗ್ರಹಿಸಬಹುದು. ಅಥವಾ ದಾಖಲೆಗಳನ್ನು ಬರೆದ ವ್ಯಕ್ತಿಗೆ, ಅವುಗಳ ಸ್ಪಷ್ಟತೆ ಬಗ್ಗೆ ವಿವರಣೆ ಕೇಳಬಹುದು.ವಿವರಣೆ ಕೇಳಿದ ವ್ಯಕ್ತಿಗಳು ತಮ್ಮ ವಿವರಣೆ ನೀಡದಿದ್ದರೆ, ಅದನ್ನು ವರದಿಯಲ್ಲಿ ನಮೂದಿಸಬೇಕು?

**ಪರಿವೀಕ್ಷಣೆ ವೆಚ್ಚ**

ಪರಿವೀಕ್ಷಣೆಯನ್ನು ಸಂಯುಕ್ತ ಸಹಕಾರಿ ಆದೇಶಿಸುವುದರಿಂದ, ಮತ್ತು ಅವು ಸದಸ್ಯ ಸಹಕಾರಿಯ ಹಿತಾಸಕ್ತಿಗೆ ಪೂರಕವಾಗಿರುವುದರಿಂದ ಪರಿವೀಕ್ಷಣೆ ವೆಚ್ಚವನ್ನು ಸಂಯುಕ್ತ ಸಹಕಾರಿ, ಭರಿಸತಕ್ಕದ್ದು ಅಥವಾ ಸದಸ್ಯ ಸಹಕಾರಿ ಜೊತೆ ಹಂಚಿಕೊಳ್ಳತಕ್ಕದ್ದು. ಸದಸ್ಯರು ಮತ್ತು ಠೇವಣಿದಾರರ ಸಾಲಗಾರರು ನೀಡಿದ ಮನವಿ ಮೇಲೆ ಆದೇಶಿಸಿದರೆ, ಅವರುಗಳ ಮನವಿ ಸ್ವೀಕರಿಸುವಾಗಲೇ ವೆಚ್ಚ ಭರಿಸುವ ಷರತ್ತಿನ ಮೇಲೆ ಪರಿವೀಕ್ಷಣೆಯಲ್ಲಿ ಆದೇಶಿಸಬಹುದು.

**ವರದಿಯು ಯಾರಿಗೆ ಸಲ್ಲಿಸಬೇಕು**

ಪರಿವೀಕ್ಷಣಾಧಿಕಾರಿ ವರದಿ ತಯಾರಿಸಿದ ನಂತರ ವರದಿಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.ವರದಿ ಬಂದ ನಂತರ ಸಂಯುಕ್ತ ಸಹಕಾರಿ ಯಾರ ಮನವಿಯಂತೆ ಪರಿವೀಕ್ಷಣೆ ಮಾಡಲಾಗಿದೆಯೇ ಅವರಿಗೆ ಒಂದು ಪ್ರತಿ ನೀಡಬೇಕು ಮತ್ತು ಸದಸ್ಯ ಸಹಕಾರಿಗೆ ಒಂದು ಪ್ರತಿ ಕಳುಹಿಸಬೇಕು.

**ಕಲಂ.53(7)(ಯು) : "ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು :**

ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ."

ಕಲಂ 53(7)(ಯು) ರನ್ವಯ ಶಾಸನಬದ್ದ ಪರಿವೀಕ್ಷಣೆ ಮಾಡುವಾಗ ಸಂಯುಕ್ತ ಸಹಕಾರಿ ಪರಿವೀಕ್ಷಣೆ ಆದೇಶವನ್ನು ಲಿಖಿತವಾಗಿ ಹೊರಡಿಸತಕ್ಕದ್ದು. ಈ ಲಿಖಿತ ಆದೇಶದಲ್ಲಿ ಆಡಳಿತ, ಕಾರ್ಯನಿರ್ವಹಣೆ ಮತ್ತು ಹಣಕಾಸು ವ್ಯವಸ್ಥೆ ಬಗ್ಗೆ ಆದೇಶಿಸಬಹುದು. ಅಥವಾ ಸದಸ್ಯರೇ ಅಥವಾ ಸಾಲಗಾರರೇ ಆಗಲಿ ಯಾವುದೇ ಒಂದು ಅಥವಾ ಎರಡು ಉದ್ದೇಶಗಳಿಗೆ ಲಿಖಿತ ಮನವಿ ಸಲ್ಲಿಸಿದಾಗ ಅಂತಹ ವಿಷಯಗಳ ಬಗ್ಗೆ

ಮಾತ್ರ ಪರಿವೀಕ್ಷಣೆ ಮಾಡಲು ಆದೇಶಿಸಬಹುದು. ಅಥವಾ ಸಂಯುಕ್ತ ಸಹಕಾರಿ ಸ್ವಇಚ್ಛೆಯಿಂದಲೇ ಒಂದು ಸಹಕಾರಿಯ ಪುಸ್ತಕಗಳನ್ನು ಪರಿವೀಕ್ಷಣೆ ಮಾಡಲು ಆದೇಶಿಸಬಹುದು.

1. ಪರಿವೀಕ್ಷಣೆ ಮಾಡುವ ಸಂದರ್ಭದಲ್ಲಿ ಸಹಕಾರಿ ನಿರ್ವಹಿಸುತ್ತಿರುವ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ ವರದಿಯನ್ನು ಮಂಡಿಸಬೇಕು.
2. ಪರಿವೀಕ್ಷಣೆ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಸಹಕಾರಿಗೆ ರವಾನಿಸುವ ವ್ಯವಸ್ಥೆ ಮಾಡುವುದರ ಜೊತೆಗೆ ಯಾವ ದಿನಾಂಕಗಳಂದು ಪರಿವೀಕ್ಷಣೆಗಾಗಿ ಅಧಿಕಾರಿ ಭೇಟಿ ಕೊಡುತ್ತಾನೆಂಬುದನ್ನು ಮೊದಲೇ ತಿಳಿಸಿರಬೇಕು.
3. ಯಾವ ದಾಖಲೆಗಳು ಮತ್ತು ವಹಿಗಳನ್ನು ಪರಿಶೀಲಿಸಬೇಕೆಂಬ ಸೂಚನೆಯನ್ನು ಸಹಕಾರಿಗೆ ರವಾನಿಸಬೇಕು.
4. ಭೇಟಿ ಕೊಟ್ಟ ಸಮಯದಲ್ಲಿ ಯಾವ ಅಂಶಗಳ ಬಗ್ಗೆ ಪರಿವೀಕ್ಷಣೆ ನಡೆಸಲಾಗುವುದೋ, ಆ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳು, ನಡವಳಿಕೆಗಳು ಮತ್ತು ವಹಿಗಳ ನಕಲನ್ನು ತೆಗೆದಿರಿಸುವಂತೆ ಸೂಚಿಸಬೇಕು.
5. ಯಾವ ಸಂದರ್ಭದಲ್ಲಿ ಕಛೇರಿಯಲ್ಲಿರುವ ಪುಸ್ತಕಗಳನ್ನು ನಿರ್ವಹಿಸುವ ಅಧಿಕಾರಿಗಳು ಹಾಜರಿರುವಂತೆ ಮತ್ತು ಪದಾಧಿಕಾರಿಗಳು ಹಾಜರಿದ್ದಾಗ ಅವರ ಹೇಳಿಕೆಗಳನ್ನು ಪಡೆಯಬಹುದಾಗಿದೆ.
6. ಯಾವ ವಿಷಯದಲ್ಲಿ ಹೆಚ್ಚು ವಿವರವಾಗಿ ಪರಿಶೀಲನೆ ಮಾಡಬೇಕಾಗಿದೆಯೋ ಅಂತಹ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ಪ್ರಾರಂಭದಿಂದಲೂ ಪರಿಶೀಲನೆ ಮಾಡುವುದು ಅವಶ್ಯಕ.
7. ಸಾಲಗಾರರು ಅಥವಾ ಸಂಯುಕ್ತ ಸಹಕಾರಿ ಲಿಖಿತ ಮನವಿ ಆಧಾರದ ಮೇಲೆ ಪರಿವೀಕ್ಷಣೆಗೆ ಆದೇಶಿಸಿದ್ದರೆ, ಆ ಲೆಕ್ಕಗಳಿಗೆ ಸಂಬಂಧಿಸಿದಂತೆ ಪ್ರಾರಂಭದಿಂದಲೂ ಪರಿಶೀಲನೆ ಮಾಡುವುದು ಅವಶ್ಯಕ.
8. ಯಾವ ವಿಷಯದಲ್ಲಿ ಪರಿವೀಕ್ಷಣೆ ಮಾಡಲಾಗಿದೆಯೋ ಪ್ರತಿಯೊಂದು ವಿಷಯದ ಬಗ್ಗೆಯೂ ವಿಮರ್ಶಾತ್ಮಕ ಪರಿಶೀಲನೆ ನಡೆಸಿ ವಿಷಯದ ಬಗ್ಗೆ ವಿವರವಾದ ವರದಿಯನ್ನು ಕೊಡಬೇಕು.
9. ವರದಿಯನ್ನು ತಯಾರಿಸುವಾಗ ಹೆಚ್ಚುವರಿ ದಾಖಲೆಗಳ ಅವಶ್ಯಕತೆಯಿದೆಯೆಂದು ತೀರ್ಮಾನಿಸಿದರೆ ಆ ಹೆಚ್ಚುವರಿ ದಾಖಲೆಗಳನ್ನು ಪಡೆದ ನಂತರವೇ ವರದಿಯನ್ನು ತಯಾರಿಸುವುದು.

**ಪರಿವೀಕ್ಷಣಾ ವರದಿಯನ್ನು ಸಲ್ಲಿಸುವಾಗ ಈ ಕೆಳಕಂಡ ಅಂಶಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಕೊಡಬೇಕು.**

1. ಸಹಕಾರಿಯು ಕಾಯಿದೆ ಮತ್ತು ನಿಯಮ ಉಲ್ಲಂಘನೆ ಮಾಡಿದ್ದರೆ ಅವುಗಳ ಬಗ್ಗೆ ಸ್ಪಷ್ಟ ಚಿತ್ರಣ
2. ಆಡಳಿತಾತ್ಮಕ ನ್ಯೂನತೆಗಳು ಮತ್ತು ಅವುಗಳಲ್ಲಿ ಪ್ರಮುಖವಾಗಿ ಆಡಳಿತ ಮಂಡಳಿಯ ರಚನೆಯಲ್ಲಿರುವ ನ್ಯೂನತೆಗಳು, ಸದಸ್ಯರ ಸೇರ್ಪಡೆ ಮತ್ತು ತೆಗೆಯುವಿಕೆಯಲ್ಲಿರುವ ನ್ಯೂನತೆಗಳು
3. ಆಡಳಿತ ಮಂಡಳಿ ತೆಗೆದುಕೊಂಡ ತೀರ್ಮಾನಗಳು ಮತ್ತು ಆ ತೀರ್ಮಾನಗಳು ಕಾಯಿದೆ ನಿಯಮಕ್ಕೆ ಪೂರಕವಾಗಿದೆಯೇ ಅಥವಾ ವಿರುದ್ಧವಾಗಿದೆಯೇ
4. ಹಣಕಾಸನ್ನು ನ್ಯಾಯ ಸಮ್ಮತವಲ್ಲದೇ ಪಾವತಿಯಾಗಿದೆಯೇ ಅಥವಾ ಖರ್ಚು ಹಾಕಲಾಗಿದೆಯೇ ಅಥವಾ ಹೂಡಿಕೆ ಮಾಡಲಾಗಿದೆಯೇ ಅಥವಾ ಮುಂಗಡ ಪಾವತಿ ಮಾಡಲಾಗಿದೆಯೇ ಎಂಬುದರ ವಿವರವನ್ನು ಉಲ್ಲೇಖಿಸಬೇಕು.
5. ವಸ್ತುಗಳನ್ನು ಖರೀದಿ ಮಾಡುವಲ್ಲಿ ನ್ಯಾಯಸಮ್ಮತವಾಗಿ ಮಾಡಲಾಗಿದೆಯೇ, ಖರೀದಿ ನೀತಿ ಸಮರ್ಪಕವಾಗಿದೆಯೇ, ಅಗತ್ಯವಿಲ್ಲದ ವಸ್ತುಗಳನ್ನು ಖರೀದಿ ಮಾಡಲಾಗಿದೆಯೇ, ಗೋದಾಮಿನಲ್ಲಿ ಮಾಲಿದ್ದರೂ ಅದನ್ನೇ ಖರೀದಿ ಮಾಡಲಾಗಿದೆಯೇ ಹಾಗೂ ಮಾರಾಟ ಮಾಡುವಾಗ ಅಥವಾ ಹಳೇ ವಸ್ತುಗಳನ್ನು ವಿಲೇವಾರಿ ಮಾಡುವಾಗ, ಸಮರ್ಪಕ ನೀತಿಯನ್ನು ರೂಪಿಸಲಾಗಿದೆಯೇ ಹಾಗೂ ವಸ್ತುಗಳ ದರ ನಿಗಧಿಪಡಿಸುವಾಗ ಯಾವ ನೀತಿ ಅನುಸರಿಸಲಾಗಿದೆ ಎಂಬ ವಿವರವನ್ನು ತಿಳಿಸತಕ್ಕದ್ದು.

6. ವಾರ್ಷಿಕ ಲೆಕ್ಕತಪಾಸಣೆ ವರದಿಯಲ್ಲಿ ಅಥವಾ ವಿಚಾರಣೆಯಾದಾಗ, ವಿಚಾರಣಾ ವರದಿಯಲ್ಲಿ ಕಂಡ ನ್ಯೂನತೆಗಳನ್ನು ಪರಿಹರಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಗಳನ್ನು ಲಗತ್ತಿಸುವುದು.

7. ವ್ಯವಹಾರ ಪರಿವೀಕ್ಷಣೆ ಮಾಡುವ ಸಂದರ್ಭದಲ್ಲಿ, ಸಮರ್ಪಕವಾಗಿದೆಯೇ ಇಲ್ಲವೇ ಎಂಬುದರ ಜೊತೆಗೆ, ಸದಸ್ಯರ ಅಗತ್ಯಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗಿದೆಯೇ, ಸೌಲಭ್ಯಗಳನ್ನು ಕೊಡುವಾಗ ನ್ಯೂನತೆಗಳಾಗಿವೆಯೇ? ಸೌಲಭ್ಯ ಮರುಪಾವತಿ ಮಾಡುವಲ್ಲಿ ನ್ಯೂನತೆಗಳಿವೆಯೇ ಅಥವಾ ಸುಸ್ತಿಯಾಗಿದೆಯೇ, ಸುಸ್ತಿಯಾಗಿದ್ದಲ್ಲಿ ವಸೂಲಾತಿ ಕ್ರಮ ಜರುಗಿಸಲಾಗಿದೆಯೇ ಎಂಬ ಬಗ್ಗೆ ವಿಮರ್ಶಿಸಿ ವರದಿಸತಕ್ಕದ್ದು.

8. ವ್ಯವಹಾರದಲ್ಲಿ ಆದ ನ್ಯೂನತೆಗಳಿಗೆ ಸಂಬಂಧಪಟ್ಟಂತೆ ತೀರ್ಮಾನಗಳು, ನಡವಳಿಕೆಗಳು, ಮತ್ತಿತರ ದಾಖಲೆಗಳ ಪ್ರತಿಯನ್ನು ವರದಿಯಲ್ಲಿ ಲಗತ್ತಿಸಬೇಕು.

9. ಸಾಮಾನ್ಯವಾಗಿ ಪರಿವೀಕ್ಷಣಾ ವರದಿಯು ಸಹಕಾರಿ ವರ್ಷಕ್ಕೆ ಇರತಕ್ಕದ್ದು. ಆದರೆ ಯಾವುದಾದರೂ ಒಂದು ಸ್ಪಷ್ಟ ಪರಿವೀಕ್ಷಣೆ ಮಾಡುವಾಗ ಮೂಲದಿಂದಲೂ ವರದಿ ತಯಾರಿಸುವ ದಿನಾಂಕದ ತನಕ ಆ ವಿಷಯವನ್ನು ವಿಮರ್ಶಾತ್ಮಕ ರೀತಿಯಲ್ಲಿ ಪರಿಶೀಲಿಸಿ ವರದಿಸತಕ್ಕದ್ದು.

**ಪರಿವೀಕ್ಷಣೆ ಮಾಡುವಾಗ ಪರಿವೀಕ್ಷಣಾಧಿಕಾರಿಯು ಈ ಕೆಳಕಂಡ ದಾಖಲೆಗಳನ್ನು ಪರಿಶೀಲಿಸಲೇಬೇಕು.**

1. ಇತ್ತೀಚಿನ ಲೆಕ್ಕತಪಾಸಣಾ ವರದಿಯ ವರ್ಷ, ಸ್ವೀಕರಿಸಿದ ದಿನಾಂಕ, ಅನುಪಾಲನಾ ವರದಿ ಕಳುಹಿಸಿದ ದಿನಾಂಕ ಹಾಗೂ ಅನುಪಾಲನೆ ಮಾಡಬೇಕಾದ ಅಂಶಗಳ ಪಟ್ಟಿ.
2. ಸದಸ್ಯರ ಸಂಖ್ಯೆ, ಹೊಸದಾಗಿ ಸೇರ್ಪಡೆಯಾದ ಸದಸ್ಯರ ಪಟ್ಟಿ, ಸುಸ್ತಿದಾರರ ಪಟ್ಟಿ.
3. ವಾರ್ಷಿಕ ಮಹಾಸಭೆ ನಡೆದ ದಿನಾಂಕ, ಹಾಜರಿದ್ದ ಸದಸ್ಯರ ಸಂಖ್ಯೆ, ವಿಶೇಷ ಮಹಾಸಭೆ ನಡೆಸಿದ್ದರೆ ಅದರ ವಿವರ.
4. ಆಡಳಿತ ಮಂಡಳಿ ಸಭೆ ನಡೆಸಿದ ದಿನಾಂಕಗಳು, ಹಾಜರಿದ್ದ ಸದಸ್ಯರ ವಿವರಗಳು, ಅದೇ ರೀತಿ ಉಪಸಮಿತಿಗಳಿದ್ದರೆ ಅದರ ವಿವರಗಳು.
5. ಸಭೆ ನಡೆಸಲು ಅಗತ್ಯವಾದ ಕೋರಂ ಸಂಖ್ಯೆ, ಹಾಜರಿದ್ದ ಸದಸ್ಯರ ಸಂಖ್ಯೆ ವಿಮರ್ಶಿಸುವುದು.
6. ಆಡಳಿತ ಮಂಡಳಿ ಮತ್ತು ಮಹಾಸಭೆಗೆ ಸಂಬಂಧಪಟ್ಟಂತೆ ವಿಷಯಪಟ್ಟಿಯನ್ನು ರವಾನಿಸಲಾಗಿದೆಯೇ ಮತ್ತು ಅದಕ್ಕೆ ಪೂರಕವಾಗಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಪ್ರತಿ ವಿಷಯದ ಬಗ್ಗೆ ವಿವರವಾದ ಟಿಪ್ಪಣಿಯನ್ನು ಕೊಟ್ಟಿದ್ದಾರೆಯೇ ಎಂಬುದನ್ನು ವಿಮರ್ಶಿಸುವುದು.
7. ಆಡಳಿತ ಮಂಡಳಿ ಮತ್ತು ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರು, ಭಾಗವಹಿಸಿದವರ ಸಂಖ್ಯೆ, ಚರ್ಚಿಸಿದ ವಿಷಯದ ಬಗ್ಗೆ ಟಿಪ್ಪಣಿ.
8. ಆಡಳಿತ ಮಂಡಳಿಯು ಆರ್ಥಿಕ ತಃಖ್ತೆಗಳನ್ನು ಸಹಕಾರಿ ವರ್ಷ ಮುಗಿದ 30 ದಿವಸದಲ್ಲಿ ತಯಾರಿಸಿ ಸಂಯುಕ್ತ ಸಹಕಾರಿ/ನಿಬಂಧಕರಿಗೆ ಮತ್ತು ಲೆಕ್ಕಪರಿಶೋಧನಾ ಇಲಾಖೆಗೆ ರವಾನಿಸಲಾಗಿದೆಯೇ?
9. ಪರಿವೀಕ್ಷಣೆ ಅವಧಿಗೆ ಪ್ರತ್ಯೇಕ ಆರ್ಥಿಕ ತಃಖ್ತೆಗಳನ್ನು ತಯಾರಿಸಿದ್ದಾರೆಯೇ?
10. ತನ್ನ ಹೆಚ್ಚುವರಿ ಸಂಪನ್ಮೂಲವನ್ನು ಎಲ್ಲಿ ಹೂಡಿಕೆ ಮಾಡಿದೆ, ಅದಕ್ಕೆ ಸಾಕಷ್ಟು ಭದ್ರತೆ ಇದೆಯೇ?
11. ಬ್ಯಾಂಕಿನ ಪಾಸ್ ಪುಸ್ತಕ ಮತ್ತು ನಗದು ಪುಸ್ತಕ, ಬ್ಯಾಂಕ್ ಪುಸ್ತಕಗಳ ಹೊಂದಾಣಿಕೆ ಮಾಡಲಾಗಿದೆಯೇ?
12. ನಗದು ಹಣ ಮತ್ತು ಭದ್ರತೆಯನ್ನು ಪರಿಶೀಲಿಸಬೇಕು.
13. ಸಾಲ ಮತ್ತು ಸಾಲೇತರ ವ್ಯವಹಾರದ ಬಗ್ಗೆ ಲೆಕ್ಕಪುಸ್ತಕಗಳನ್ನು ಇಡಲಾಗಿದೆಯೇ?
14. ಸರಕು ಪುಸ್ತಕವನ್ನು ಇಡಲಾಗಿದೆಯೇ ಮತ್ತು ದರ ನಿರ್ಧರಿಸಲು ಮತ್ತು ಹಳೇ ವಸ್ತುಗಳನ್ನು ವಿಲೇವಾರಿ ಮಾಡಲು ನೀತಿ ನಿಯಮವನ್ನು ರೂಪಿಸಿದ್ದಾರೆಯೇ?
15. ಆಸ್ತಿ/ಜವಾಬ್ದಾರಿ ಪುಸ್ತಕ ಇಡಲಾಗಿದೆಯೇ ಮತ್ತು ಚರಾಸ್ತಿಗಳ ಪುಸ್ತಕವನ್ನು ಬರೆದಿಡಲಾಗಿದೆಯೇ?

16. ಸ್ವಂತ ಬಂಡವಾಳದಿಂದ ಕಟ್ಟಡಗಳ ನಿರ್ವಹಣೆಯ ಪ್ರಗತಿ ಪರಿಶೀಲಿಸಲಾಗಿದೆಯೇ ಉದಾ: ಆಡಳಿತ ಕಟ್ಟಡ ನಿರ್ಮಾಣ

17. ನೌಕರರಿಗೆ ಕೆಲಸ ಹಂಚಿಕೆ ಸಮರ್ಪಕವಾಗಿದೆಯೇ?

18. ಹಿಂದೆ ನಡೆಸಿದ ಆಡಿಟ್/ಲೆಕ್ಕತಪಾಸಣೆ, ವಿಚಾರಣೆ ಮತ್ತು ಪರಿವೀಕ್ಷಣಾ ವರದಿಗೆ ಕ್ರಮ ಜರುಗಿಸಲಾಗಿದೆಯೇ?

19. ನಿಧಿಗಳನ್ನು ವ್ಯವಹಾರದಲ್ಲಿ ತೊಡಗಿಸಲಾಗಿದೆಯೇ ಅಥವಾ ಹೊರಗೆ ಹೂಡಿಕೆ ಮಾಡಲಾಗಿದೆಯೇ ಅಥವಾ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲಾಗಿದೆಯೇ?

ಪರಿವೀಕ್ಷಣಾ ಆದೇಶ ಯಾವುದೇ ಒಂದು ಸ್ಪಷ್ಟ ವಿಷಯದ ಬಗ್ಗೆ ನಮೂದಿಸದಿದ್ದರೆ ಸಾಮಾನ್ಯವಾಗಿ ಪರಿವೀಕ್ಷಣಾ ವರದಿಯು ಈ ಕೆಳಕಂಡ ಅಂಶಗಳನ್ನು ಕೂಡಿರತಕ್ಕದ್ದು.

**I. ಸಾಮಾನ್ಯ ವಿಷಯಗಳು**

1. ಸಹಕಾರಿ ಹೆಸರು, ವಿಳಾಸ ಮತ್ತು ನೋಂದಣಿ ಸಂಖ್ಯೆ, ದಿನಾಂಕ
2. ಸಹಕಾರಿ ಕಾರ್ಯವ್ಯಾಪ್ತಿ
3. ಉಪವಿಧಿಗಳ ತಿದ್ದುಪಡಿಯಾಗಿದ್ದರೆ ಆ ತಿದ್ದುಪಡಿಗಳ ವಿವರಗಳು
4. ಇತ್ತೀಚಿನ ಆಡಿಟ್ ನಡೆದ ದಿನಾಂಕ, ಆಡಿಟ್ ಆದ ಅವಧಿ, ಆಡಿಟ್ ಶ್ರೇಣಿ ಮತ್ತು ಕಳೆದ 5 ವರ್ಷಗಳಲ್ಲಿ ಕೊಟ್ಟ ಶ್ರೇಣಿ ಮತ್ತು ಲೆಕ್ಕತಪಾಸಣೆ ಮಾಡಿದ ಅಧಿಕಾರಿ ಹೆಸರು ಮತ್ತು ಆಡಿಟ್ ವರದಿ ಬಂದ ದಿನಾಂಕಗಳನ್ನು ವರದಿಸತಕ್ಕದ್ದು. ಮತ್ತು ಅನುಪಾಲನಾ ವರದಿಯನ್ನು ಸಲ್ಲಿಸಲಾಗಿದೆಯೇ, ಇಲ್ಲವೇ ಎಂಬುದನ್ನು ತಿಳಿಸುವುದು.
5. ಸದಸ್ಯರ ಸಂಖ್ಯೆ, ಹೊಸದಾಗಿ ಸೇರ್ಪಡೆಯಾದ ಸದಸ್ಯರು, ಸದಸ್ಯರ ವರ್ಗಗಳು, ಮತ್ತಿತರೆ

**II ಆಡಳಿತ:**

1. ಮಹಾಸಭೆಯನ್ನು ಕಾಯಿದೆಯಲ್ಲಿ ನಿಗಧಿಪಡಿಸಿದಂತೆ ನಡೆಸಲಾಗಿದೆಯೇ, ಹಿಂದಿನ ಸಾಮಾನ್ಯ ಸಭೆಯ ದಿನಾಂಕ, ವೇಳೆ, ಸ್ಥಳ ಮತ್ತು ನಡವಳಿಗಳ ವಿವರ.
2. ಆಡಳಿತ ಮಂಡಳಿಯ ಸಭೆಗಳನ್ನು ನಡೆಸುವ ಅವಧಿ, ನಡವಳಿಕೆಗಳನ್ನು ದಾಖಲಿಸಿದ ಠರಾವನ್ನು ಪರಿಶೀಲಿಸಿ ಷರಾ ಬರೆಯುವುದು ಮತ್ತು ಉಪಸಮಿತಿಗಳು ರಚನೆಯಾಗಿದ್ದರೆ ಆ ಸಮಿತಿಗಳ ನಡಾವಳಿಗಳನ್ನು ಪರಿಶೀಲಿಸುವುದು.
3. ವಿಶೇಷ ಮಹಾಸಭೆ ಏನಾದರೂ ಜರುಗಿದ್ದರೆ ಅದರ ವಿವರಗಳು
4. ಸಾಮಾನ್ಯ ಸಭೆ, ವಿಶೇಷ ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಮತ್ತು ಚರ್ಚಿಸಿದ ವಿಷಯಗಳ ಬಗ್ಗೆ ವಿವರಿಸುವುದು.
5. ಆಡಳಿತ ಮಂಡಳಿಯ ಸಭೆಗಳ ನಡಾವಳಿಗಳನ್ನು ಪರಿಶೀಲಿಸುವುದರ ಜೊತೆಗೆ ಹಾಜರಿದ್ದ ಸದಸ್ಯರ ಸಂಖ್ಯೆ ಬಗ್ಗೆಯೂ ಟಿಪ್ಪಣಿ ಬರೆಯುವುದು.
6. ಆಡಳಿತ ಮಂಡಳಿಯ ಸಭೆಯಲ್ಲಿ ನಡವಳಿಕೆಗಳನ್ನು ದಾಖಲಿಸುವಾಗ ಕಾಯಿದೆ ಮತ್ತು ನಿಯಮಕ್ಕೆ ವಿರುದ್ಧವಾಗಿ ತೀರ್ಮಾನ ತೆಗೆದುಕೊಂಡಿದ್ದರೆ ಅವುಗಳನ್ನು ದಾಖಲಿಸುವುದು.
7. ನೌಕರರಿಗೆ ಕೆಲಸವನ್ನು ಹಂಚಲಾಗಿದೆಯೇ ಮತ್ತು ಆ ನೌಕರರಿಂದ ಸಾಕಷ್ಟು ಭದ್ರತೆಯನ್ನು ಪಡೆಯಲಾಗಿದೆಯೇ?
8. ಮಂಜೂರು ಮಾಡಿದ ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಪಟ್ಟಂತೆ ಸುಸ್ತಿಯಾಗಿದ್ದರೆ, ವಸೂಲಿ ಕ್ರಮ ಜರುಗಿಸಲಾಗಿದೆಯೇ, ವಸೂಲಾತಿ ಆದೇಶವನ್ನು ಪಡೆದಿದ್ದರೆ ಅವುಗಳನ್ನು ಜಾರಿ ಮಾಡಲಾಗುತ್ತಿದೆಯೇ ಎಂಬುದನ್ನು ದಾಖಲಿಸುವುದು.

**III ಆರ್ಥಿಕ ವಿಷಯಗಳು:**

1. ಸಹಕಾರಿ ವರ್ಷ ಮುಗಿದ 30 ದಿವಸದೊಳಗಾಗಿ ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಸಂಯುಕ್ತ ಸಹಕಾರಿ/ ನಿಬಂಧಕರು ಮತ್ತು

ಆಡಿಟರ್‌ಗೆ ರವಾನಿಸಲಾಗಿದೆಯೇ?

2. ಪರಿವೀಕ್ಷಣೆ ಮಾಡುವ ಅವಧಿಗೆ ಆರ್ಥಿಕ ತಃಖ್ತೆಗಳನ್ನು ಪ್ರತ್ಯೇಕವಾಗಿ ತಯಾರಿಸಲಾಗಿದೆಯೇ

3. ತನ್ನ ಹೆಚ್ಚುವರಿ ಸಂಪನ್ಮೂಲವನ್ನು ಅಥವಾ ನಿಧಿಗಳನ್ನು ಎಲ್ಲಿ ಹೂಡಿಕೆ ಮಾಡಿದ್ದಾರೆ, ಆ ಎಲ್ಲ ಹೂಡಿಕೆಗಳಿಗೂ, ಅವಧಿ ಮುಗಿದ ಕೂಡಲೇ ಬಡ್ಡಿ ಅಥವಾ ಡಿವಿಡೆಂಡ್ ಪಾವತಿಯಾಗುತ್ತಿದೆಯೇ

4. ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಬಾಕಿಗಳನ್ನು ದೃಢೀಕರಿಸುವುದು.

5. ನಗದನ್ನು ಮತ್ತು ಭದ್ರತೆಗಳನ್ನು ಪರಿಶೀಲಿಸುವುದು. ಮತ್ತು ದೃಢೀಕರಿಸುವುದು. ವ್ಯತ್ಯಾಸಗಳಿದ್ದರೆ ಅದನ್ನು ದಾಖಲಿಸುವುದು.

**IV ವ್ಯವಹಾರಿಕ ಪರಿಶೀಲನೆ**

1. ಸಹಕಾರಿ ಮಾಡುವ ಸಾಲ ಮತ್ತು ಸಾಲೇತರ ವ್ಯವಹಾರವನ್ನು ಪರಿಶೀಲಿಸುವುದು.

2. ನಗದು ಪುಸ್ತಕ ಮತ್ತು ಇತರ ವಹಿಗಳನ್ನು ಲೆಕ್ಕಪತ್ರಗಳನ್ನು ಪರಿಶೀಲಿಸಿದ ಬಗ್ಗೆ ನಿರ್ವಹಿಸುವ ವ್ಯವಹಾರದ ಬಗ್ಗೆ ವಹಿಗಳನ್ನು, ಕೊರತೆಗಳನ್ನು, ಮಾರಾಟ ದರ ನಿಗಧಿಪಡಿಸುವುದನ್ನು, ಹಳೇ ನಿಷ್ಕ್ರಿಯ ವಸ್ತುಗಳ ವಿಲೇವಾರಿ, ಇವುಗಳ ಬಗ್ಗೆ, ಸಂಸ್ಕರಣೆ, ವ್ಯವಹಾರದ ಸಾಲ, ಮತ್ತಿತರೆ ಹಣ ಉಪಯೋಗದ ಬಗ್ಗೆ.

V. ಸಹಕಾರಿ ಕಾಯಿದೆ ಮತ್ತು ನಿಯಮ ಮತ್ತು ಉಪವಿಧಿಗಳ ವಿರುದ್ಧ ತೆಗೆದುಕೊಂಡ ತೀರ್ಮಾನಗಳು ಮತ್ತು ಅದರಿಂದಾದ ಆರ್ಥಿಕ ನಷ್ಟಗಳನ್ನು ದಾಖಲಿಸುವುದು.

VI. ಈ ಹಿಂದೆ ಪರಿವೀಕ್ಷಣೆ ಮಾಡಿದ ವರದಿಗೆ ಅನುಪಾಲನಾ ವರದಿ ಕೊಡಲಾಗಿದೆಯೇ, ಲೆಕ್ಕತಪಾಸಣಾ ವರದಿ ಮಾಡಲಾಗಿದೆಯೇ ಹಾಗೂ ಅನುಪಾಲನಾ ವರದಿ ಸಲ್ಲಿಸಲಾಗಿದೆಯೇ? ಮತ್ತು ವಿಚಾರಣಾ ವರದಿ ಮಾಡಲಾಗಿದೆಯೇ ಮತ್ತು ಅದಕ್ಕೆ ಅನುಪಾಲನಾ ವರದಿ ಕೊಡಲಾಗಿದೆಯೋ ಎಂಬುದನ್ನು ಪರಿಶೀಲಿಸುವುದು.

ಈ ಪರಿವೀಕ್ಷಣೆ ವರದಿ ಕೊಡುವ ಪೂರ್ವದಲ್ಲಿ, ಪರಿವೀಕ್ಷಣಾಧಿಕಾರಿಯು ಸಹಕಾರಿಯ ಅಧ್ಯಕ್ಷರು ಮತ್ತು ನಿರ್ದೇಶಕರ ಜೊತೆ ಚರ್ಚಿಸಬಹುದು ಮತ್ತು ನ್ಯೂನತೆಗಳನ್ನು ವಿವರಿಸಬಹುದು. ಆ ನ್ಯೂನತೆಗಳ ಬಗ್ಗೆ ಆಗಿಂದಾಗ್ಗೆ ಸರಿಪಡಿಸಿದ್ದರೆ, ಆ ನ್ಯೂನತೆಗಳನ್ನು ಕೈಬಿಡುವುದು. ಮತ್ತು ನೌಕರರ ಜೊತೆ ಚರ್ಚಿಸಿ, ನಂತರ ವರದಿಯನ್ನು ತಯಾರಿಸುವುದು. ಈ ನೀತಿಯನ್ನು ಅನುಸರಿಸುವುದರಿಂದ ಸಹಕಾರಿ ನಡೆಸುವ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾರ್ಗದರ್ಶನ ನೀಡುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ಇದೆ ಎಂಬುದನ್ನು ಸಾಬೀತು ಪಡಿಸುವುದು. ನ್ಯೂನತೆಗಳನ್ನು ಪರಿವೀಕ್ಷಣೆ ಮಾಡುವ ಸಂದರ್ಭದಲ್ಲಿಯೇ ಆದಷ್ಟು ಸರಿಪಡಿಸಲು ಕ್ರಮ ಜರುಗಿಸಬೇಕು. ಸರಿಪಡಿಸಲಾರದಂತಹ ವಿಷಯಗಳನ್ನು ಪಟ್ಟಿ ಮಾಡಿ ಇಂತಿಷ್ಟು ಅವಧಿಯಲ್ಲಿ ಸರಿಪಡಿಸಬೇಕೆಂದು ವರದಿಯಲ್ಲಿ ಕಾಣಿಸಿ ನಿಬಂಧಕರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

**ಪರಿವೀಕ್ಷಣೆ ವರದಿ ಪಡೆದ ನಂತರ ಪರಿಶೀಲನಾಂಶಗಳು(ಚೆಕ್‌ಲಿಸ್ಟ್)**

1. ಪರಿವೀಕ್ಷಣೆ ವರದಿ ಸಾಲಗಾರರ ಅರ್ಜಿಯ ಆಧಾರದ ಮೇಲೆ ಮಾಡಲಾಗಿದೆಯೇ? (ಹೌದು/ಇಲ್ಲ)
2. ಸ್ವಯಂ ಸ್ಫೂರ್ತಿಯಿಂದ ಸಂಯುಕ್ತ ಸಹಕಾರಿ ಪರಿವೀಕ್ಷಣೆಗೆ ಆದೇಶಿಸಿದ್ದಾರೆಯೇ? (ಹೌದು/ಇಲ್ಲ)
3. ಪರಿವೀಕ್ಷಣೆ ಮಾಡುವ ದಿನಾಂಕಗಳನ್ನು ತಿಳಿಸಲಾಗಿದೆಯೇ? (ಹೌದು/ಇಲ್ಲ)
4. ಪರಿವೀಕ್ಷಣೆ ಮಾಡುವ ಸಂದರ್ಭದಲ್ಲಿ ನಿರ್ವಹಿಸುವ ದಾಖಲೆಗಳು ಮತ್ತು ವಹಿಗಳನ್ನು ಪರಿಶೀಲಿಸಲಾಗಿದೆಯೇ? (ಹೌದು/ಇಲ್ಲ)
5. ಈ ಎಲ್ಲ ದಾಖಲೆಗಳು ಮತ್ತು ವಹಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆಯೇ? (ಹೌದು/ಇಲ್ಲ)
6. ಈ ಪರಿವೀಕ್ಷಣೆಗೆ ಸಂಬಂಧಪಟ್ಟಂತೆ ಎಲ್ಲ ವಿಷಯಗಳ ಬಗ್ಗೆ ಪ್ರಮಾಣೀಕೃತ ಪ್ರತಿಗಳನ್ನು ಪಡೆಯಲಾಗಿದೆಯೇ? (ಹೌದು/ಇಲ್ಲ)
7. ಪರಿವೀಕ್ಷಣೆ ವರದಿ ಕೊಡುವ ಪೂರ್ವದಲ್ಲಿ ಅಧ್ಯಕ್ಷರು ಅಥವಾ ಪದಾಧಿಕಾರಿಗಳ ಜೊತೆ ಮತ್ತು ನೌಕರರ ಜೊತೆ ಚರ್ಚಿಸಲಾಗಿದೆಯೇ ಮತ್ತು ಅವರಿಗೆ ಸೂಚನೆ ಕೊಡಲಾಗಿದೆಯೇ? (ಹೌದು/ಇಲ್ಲ)

# ಅಧ್ಯಾಯ - 8.4

# ಸದಸ್ಯ ಸಹಕಾರಿಯ ನಿರ್ದೇಶಕರ ಅನರ್ಹತೆ

**ಕಲಂ.25 : ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ**

1) "ಒಬ್ಬ ವ್ಯಕ್ತಿಯು

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಇತರ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಸಿ) ಗೈರು ಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ; ಅಥವಾ

(ಇ) ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರು ಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

(ಎಫ್) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಲಾದಂತೆ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ,

– ಅಂಥ ವ್ಯಕ್ತಿಯು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು. [ಹಾಗೂ ಅನರ್ಹತೆಗೆ ಗುರಿಯಾದ ದಿನಾಂಕದಿಂದ (ಗರಿಷ್ಠ) ಐದು ವರ್ಷಗಳ ಅವಧಿಯವರೆಗೆ ಸದರಿ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು.]

**2) ನಿರ್ದೇಶಕರುಗಳೆಲ್ಲರೂ, ಸಹಕಾರಿಯ ನಿರ್ದೇಶಕರ ಹುದ್ದೆಯ ಪದಾವಧಿಯಲ್ಲಿ**

(ಎ) ಮಂಡಳಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ [*****]; ಅಥವಾ

(ಎ–1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ–2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ) [ಪ್ರತಿವರ್ಷ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗೆ] ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಲ್ಲಿ ಗೊತ್ತು ಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ನಡೆಸದಿದ್ದರೆ; ಅಥವಾ

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ವರದಿಯೊಂದಿಗೆ [ಹಿಂದಿನ ಸಹಕಾರ ವರ್ಷದ] ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ,

(ಡಿ) ಸಂಯುಕ್ತ ಸಹಕಾರಿಯು ನೀಡಿದ ಆದೇಶ ಅಥವಾ ನಿರ್ದೇಶನ ಉಲ್ಲಂಘಸಿದರೆ ಅಥವಾ ಯಾವುದೇ ಅರೆ–ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದರೆ;

(ಇ) ಸಂಯುಕ್ತ ಸಹಕಾರಿಯ ಪೂರ್ವಾನುಮೋದನೆಯನ್ನು ಪಡೆಯದೆ ಶಾಖೆಗಳನ್ನು ತೆರೆದರೆ.

– ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ [ಗರಿಷ್ಠ] ಐದು ವರ್ಷಗಳ ಅವಧಿಯವರೆಗೆ

ಒಂದು ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಮತ್ತು ಆ ಸಹಕಾರಿಯ ಅಥವಾ ಇತರ ಯಾವುದೇ ಸಹಕಾರಿಯ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗಿರತಕ್ಕದ್ದು.

3) ಒಬ್ಬ ನಿರ್ದೇಶಕ ಅಥವಾ ನೌಕರನು ದುರುಪಯೋಗ, ವಿಶ್ವಾಸ ದ್ರೋಹ ಅಥವಾ ಸಹಕಾರಿಗೆ ನಷ್ಟವನ್ನುಂಟು ಮಾಡುವಂಥ ಇತರ ಯಾವುದೇ ಕರ್ತವ್ಯ ಲೋಪ ಅಥವಾ ಕೃತ್ಯವನ್ನು ಮಾಡಿದ್ದು, ಹಾಗೆ ತಪ್ಪಿತಸ್ಥನಾಗಿರುವಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಡಿಯಲ್ಲಿ ಯಾವ ಕ್ರಿಮಿನಲ್ ಕ್ರಮಕ್ಕೆ ಆತನು ಗುರಿಯಾಗುವನೋ ಅಂಥ ಕ್ರಿಮಿನಲ್ ಕ್ರಮಕ್ಕೆ ಬಾಧಕವಾಗದಂತೆ ಆ ನಷ್ಟವನ್ನು ಭರ್ತಿ ಮಾಡುವುದಕ್ಕೆ ವೈಯಕ್ತಿವಾಗಿ ಜವಾಬ್ದಾರನಾಗತಕ್ಕದ್ದು.

4) ಮಂಡಳಿಯ ಸದಸ್ಯನು, ಈ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಯಾವುವೇ ಅನರ್ಹತೆಗಳಿಗೆ ಒಪಟ್ಟಿದ್ದನೇ ಅಥವಾ ಒಳಪಟ್ಟಿರುವನೇ ಎಂಬ ಪ್ರಶ್ನೆಯನ್ನು ಸಂಯುಕ್ತ ಸಹಕಾರಿಯು, ಸಂಬಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ತೀರ್ಮಾನಿಸತಕ್ಕದ್ದು.

5) (4)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವೊಬ್ಬ ಸದಸ್ಯನು ಅಂಥ ಆದೇಶದ ವಿರುದ್ದ ಆ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರ್‌ನಲ್ಲಿ ಅಪೀಲು ಮಾಡಿಕೊಳ್ಳಬಹುದು.”

ಚುನಾಯಿತ ಮಂಡಳಿ, ಸದಸ್ಯರು ಆಯ್ಕೆಯಾದ ನಂತರ ತಮ್ಮ ಮಂಡಳಿ ಸದಸ್ಯತ್ವ ಉಳಿಸಿಕೊಳ್ಳಲು ಕೆಲವು ಷರತ್ತುಗಳನ್ನು ಕಾಯಿದೆಯಲ್ಲಿ ನಿಗದಿ ಪಡಿಸಿದೆ.

(1) ಕಲಂ.20(2) ರಲ್ಲಿ ಸದಸ್ಯತ್ವದ ಹಕ್ಕನ್ನು ಕಳೆದುಕೊಂಡಲ್ಲಿ (2) ಮೂರು ಸಭೆಗಳಿಗೆ ಸತತವಾಗಿ ಗೈರು ಹಾಜರಾದರೆ (3) ಅಪರಾಧವೆಸೆದಾಗ (4) ಸಾಲ ಮರು ಪಾವತಿ ಮಾಡದೇ ಇದ್ದಾಗ (5) ಉಪವಿಧಿಗಳಲ್ಲಿ ನಿಗದಿ ಪಡಿಸಿದ ಜವಾಬ್ದಾರಿ ನಿರ್ವಹಿಸದೇ ಇದ್ದಾಗ, ಐದು ವರ್ಷಗಳವರೆವಿಗೆ ನಿರ್ದೇಶಕತನಕ್ಕೆ ಅನರ್ಹತೆ ಹೊಂದುತ್ತಾನೆ.

ನಿರ್ದೇಶಕನಾಗಿ ಶಾಸನಾತ್ಮಕವಾಗಿ ಕಲಂ.27ರಲ್ಲಿ ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ ಅದರಲ್ಲಿ ಪ್ರಮುಖವಾಗಿ (1) ಮಂಡಳಿ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಮಂಡಳಿ ರಚನೆಗೆ ಕ್ರಮ ಜರುಗಿಸದಿದ್ದರೆ (2) ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಕಲಂ.34ರ ವರದಿ ಸಲ್ಲಿಸದಿದ್ದರೆ (3) ವಾರ್ಷಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 25 ರೊಳಗೆ ನಡೆಸದಿದ್ದರೆ (4) ಲೆಕ್ಕಪರಿಶೋದಕ ವರದಿಯನ್ನು ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯದಿದ್ದರೆ (5) ಸಂಯುಕ್ತ ಸಹಕಾರಿ ಅಥವಾ ಪ್ರಾಧಿಕಾರಗಳು ಆದೇಶಗಳನ್ನು ಪಾಲಿಸದಿದ್ದರೆ. ಅಂತಹ ಮಂಡಳಿಯ ಪ್ರತಿಯೊಬ್ಬ ಸದಸ್ಯನ್ನು ಗರಿಷ್ಠ ಐದು ವರ್ಷಗಳ ಅವಧಿವರೆವಿಗೆ ಅನರ್ಹತೆಗೆ ಒಳಗಾಗುತ್ತಾನೆ.ಇದರ ಜೊತೆಗೆ ಸಹಕಾರಿಯೂ ಹಣ ದುರುಪಯೋಗವಾಗಿದ್ದ ಕ್ರಮ ಜರುಗಿಸದಿದ್ದರೆ, ಅಥವಾ ಅಂತಹ ವ್ಯವಹಾರದಲ್ಲಿ ಭಾಗಿಯಾಗಿದ್ದರೆ.ಅಂತಹ ನಿರ್ದೇಶಕರು ಅನರ್ಹತೆಗೊಳ ಪಡಿಸಬೇಕು.

**ಕ್ರಮ ಪ್ರಾರಂಭಿಸುವುದು**

ಸದಸ್ಯ ಸಹಕಾರಿ ಈ ಮೇಲ್ಕಂಡ ಅನರ್ಹತೆಗೆ ಒಳಗಾದ ನಿರ್ದೇಶಕರ ಮೇಲೆ ಕ್ರಮ ಜರುಗಿಸಲು ತನ್ನ ಮಂಡಳಿ ನಿರ್ಣಯದಂತೆ ಸಂಯುಕ್ತ ಸಹಕಾರಿಗೆ ವರದಿ ನೀಡಬೇಕು – ಅದಕ್ಕೆ ಪೂರಕವಾಗಿ ಸಹಕಾರಿಯ ಮಂಡಳಿ ತೀರ್ಮಾನ ತೆಗೆದುಕೊಂಡು ಮನವಿ ಮಾಡಬಹುದು ಅಥವಾ ಆ ಸಹಕಾರಿಯ ಯಾವುದೇ ನಿರ್ದೇಶಕ/ಸದಸ್ಯನ ದಾಖಲೆ ಜೊತೆ ನೀಡಿದ ವರದಿಯನ್ನಾದರಿಸಿ ಸಂಯುಕ್ತ ಸಹಕಾರಿ ಕ್ರಮ ಜರುಗಿಸತಕ್ಕದ್ದು. ಅಥವಾ ಸಂಯುಕ್ತ ಸಹಕಾರಿಯ ಸಿಬ್ಬಂದಿ ತನ್ನ ಪರಿವೀಕ್ಷಣಾ ವರದಿಯನ್ನು ನೀಡಿದ ದಾಖಲೆ ಆಧಾರದ ಮೇಲೆ ಸಂಯುಕ್ತ ಸಹಕಾರಿ ಕ್ರಮ ಜರುಗಿಸತಕ್ಕದ್ದು.

**ಸಂಯುಕ್ತ ಸಹಕಾರಿ ಕ್ರಮ**

ವರದಿ ಸ್ವೀಕರಿಸಿದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕನ ವಿಷಯವನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ವರದಿಯ ಜೊತೆ ವಿಷಯ ಮಂಡಿಸತಕ್ಕದ್ದು.ಈ ಟಿಪ್ಪಣಿಯಲ್ಲಿ ಸಂಯುಕ್ತ ಸಹಕಾರಿ ಅಧಿಕಾರವನ್ನು ಪ್ರಸ್ತಾಪಿಸಿ, ಕ್ರಮಕ್ಕೆ ಇಡತಕ್ಕದ್ದು. ಸಂಯುಕ್ತ ಸಹಕಾರಿ ಮಂಡಳಿ, ಕ್ರಮ ಜರುಗಿಸಲು ತೀರ್ಮಾನಿಸಿದ ನಂತರ ವ್ಯವಸ್ಥಾಪಕ ನಿರ್ದೇಶನ ಮೂಲಕ ನೋಟೀಸ್ ಜಾರಿ ಮಾಡಲು ಸೂಚನೆ ನೀಡಿ,

ವಿಚಾರಣೆ ನಡೆಸಲು ಸೂಚಿಸಬಹುದು, ಅಥವಾ ಸಂಯುಕ್ತ ಸಹಕಾರಿ ತನ್ನ ಮಂಡಳಿಯಲ್ಲಿ ಹಾಜರಾಗಿ ವಿವರಣೆ ನೀಡಲು ತೀರ್ಮಾನಿಸಬಹುದು. ಆದರೆ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ಜಾರಿ ಮಾಡುವ ಅಧಿಕಾರ ವ್ಯವಸ್ಥಾಪಕ ನಿರ್ದೇಶಕನ ಮುಖಾಂತರ ನೀಡತಕ್ಕದ್ದು.ಏಕೆಂದರೆ ಸಂಯುಕ್ತ ಸಹಕಾರಿಯ ಕಾರ್ಯಾಂಗದ ಮುಖ್ಯಸ್ತನಾಗಿ ವ್ಯವಸ್ಥಾಪಕ ನೀರ್ದೇಶಕನ ಕರ್ತವ್ಯ ನಿರ್ವಹಿಸಬೇಕು.

**ಕಾರಣ ಕೇಳುವ ನೋಟೀಸ್**

ಯಾವುದೇ ಕ್ರಮ ಜರುಗಿಸಬೇಕಾದರೆ ಸಂಬಂಧಪಟ್ಟ ವ್ಯಕ್ತಿಗೆ ನೋಟೀಸ್ ಜಾರು ಮಾಡಲೇಬೇಕು.ಏಕೆಂದರೆ ಸ್ವಭಾವಿಕ ನ್ಯಾಯ ನೀತಿ ಅನ್ವಯ ಸಂಬಂಧಪಟ್ಟ ವ್ಯಕ್ತಿಯ ಸ್ಥಾನದ ಅಸ್ತಿತ್ವದ ಬಗ್ಗೆ ವಿಮರ್ಷಿಸುವಾಗ, ಅಂತಹ ವ್ಯಕ್ತಿಗೆ ತನ್ನ ಅವಹಾಲು ಹೇಳಿಕೊಳ್ಳಲು ಅವಕಾಶ ನೀಡಲೇಬೇಕು. ಇದಕ್ಕೆ ಪೂರಕವಾಗಿ ನೋಟೀಸ್ ನೀಡುವಾಗ, ಅಂತಹ ವ್ಯಕ್ತಿಗೆ ಅರ್ಥವಾಗುವಂತೆ ನೋಟೀಸ್‌ನಲ್ಲಿ ಯಾವ ಕಾರಣಕ್ಕಾಗಿ ನೋಟೀಸ್ ನೀಡಲಾಗಿದೆ, ಯಾವ ದಾಖಲೆ ಸಲ್ಲಿಸಬೇಕು ಮತ್ತು ಸಾಕ್ಷಿಗಳನ್ನು ಮಂಡಿಸಬೇಕು ಎಂಬುದನ್ನು ನೋಟೀಸ್‌ನಲ್ಲಿ ಸ್ಪಷ್ಟವಾಗಿ ತಿಳಿಸಬೇಕು. ಹಾಜರಾದ ವ್ಯಕ್ತಿಗೆ ಮೌಖಿಕ ಹೇಳಿಕೆ ನೀಡಲು ಮತ್ತು ದಾಖಲೆಗಳನ್ನು ಅಥವಾ ಲಿಖಿತ ಹೇಳಿಕೆ ನೀಡಲು ಅವಕಾಶ ನೀಡಬೇಕು. ಇಂತಹ ಪ್ರಕರಣಗಳನ್ನು ವಕೀಲರ ಮುಖಾಂತರ ಪ್ರಕರಣ ನಡೆಸಲು ಅವಕಾಶ ಇರುವುದಿಲ್ಲ. ಏಕೆಂದರೆ ಇದು ಒಂದು ಆಂತರಿಕ ವಿಚಾರಣೆ ಮತ್ತು ವ್ಯಕ್ತಿಗತವಾಗಿರುವುದರಿಂದ ಮತ್ತು ಅವನ ಮಂಡಳಿ ಸದಸ್ಯತ್ವದ ಬಗ್ಗೆ ಇರುವುದರಿಂದ, ಅಂತಹ ವ್ಯಕ್ತಿಯೇ ಪ್ರಾಧಿಕಾರಕ್ಕೆ ವಿವರಣೆ ನೀಡಬೇಕು. ವಿಚಾರಣೆ ಮುಕ್ತಾಯವಾದ ನಂತರ ವ್ಯವಸ್ಥಾಪಕ ನಿರ್ದೇಶಕ ಅಥವಾ ಸಂಯುಕ್ತ ಸಹಕಾರಿ ಮಂಡಳಿ, ತೀರ್ಮಾನಕ್ಕೆ ಬಂದು ಎಷ್ಟು ವರ್ಷದ ಅವಧಿಗೆ ಅನರ್ಹತೆಗೊಳ ಪಡಬೇಕೆಂದು ತೀರ್ಮಾನಿಸುವ ಅಧಿಕಾರ ಅಂತಹ ಮಂಡಳಿ ಇರತಕ್ಕದ್ದು.

ಇಂತಹ ಮಂಡಳಿ ಸದಸ್ಯನ ಅನರ್ಹತೆ ಆದೇಶದ ಮೇಲೆ ಆದೇಶ ಹೊರಡಿಸಿದಾಗ ಅಂತಹ ಆದೇಶದ ಮೇಲೆ ಸಂಬಂಧಪಟ್ಟ ನಿರ್ದೇಶಕರ 30 ದಿವಸದೊಳಗೆ ನಿಬಂಧಕರ ಮುಂದೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಅನರ್ಹತೆ ತೀರ್ಮಾನ ತೆಗೆದುಕೊಳ್ಳುವಾಗ ಅನುಸರಿಸಬಹುದಾದ ನೀತಿ ನಿಯಮವನ್ನು ಒಂದು ಉದಾಹರಣೆ ಮೂಲಕ ಉಲ್ಲೇಖಿಸಬಹುದು. ಸತತ ಮೂರು ಮಂಡಳಿ ಸಭೆಗೆ ಗೈರು ಹಾಜರಾದ ಬಗ್ಗೆ ಒಂದು ಸಹಕಾರಿ ಪ್ರಸ್ತಾವನೆಯನ್ನು ಪರಿಶೀಲಿಸುವ ವಿಧಾನ.

1) ಸದಸ್ಯ ಸಹಕಾರಿ ತನ್ನ ಸದಸ್ಯರ/ಮಂಡಳಿ ಸದಸ್ಯನಿಗೆ ನೋಟೀಸ್ ನೀಡುವ ವಿಧಾನ ಅಂದರೆ ಸಾಮಾನ್ಯ ಅಂಚೆ, ನೋಂದಾಯಿತ ಅಂಚೆ, ಇಮೇಲ್, ಎಸ್‌ಎಂಎಸ್ ಎಂದಿದ್ದರೆ, ಅದನ್ನು ಸಭಾ ನೋಟೀಸ್ ನೀಡುವಾಗ ಅನುಸರಿಸಲಾಗಿದೆಯೇ ನೋಡಬೇಕು.

2) ಸಭಾ ನೋಟೀಸ್ ಜೊತೆ ಮಂಡಳಿ ಸಭೆಯಲ್ಲಿ ಚರ್ಚೆಯಾಗುವ ವಿಷಯವನ್ನು, ವಿಷಯದ ಮೇಲೆ ಟಿಪ್ಪಣಿ ನೀಡಿ ನೋಟೀಸ್ ಕಳುಹಿಸಲಾಗಿದೆಯೇ ನೋಡಬೇಕು ಸತತ ಗೈರು ಹಾಜರಾದರೆ, ಅದನ್ನು ಸಹಕಾರಿ ಮಂಡಳಿ ವಿಷಯ ಮಂಡಿಸಬೇಕು.

3) ನೋಟೀಸ್ ಮುಟ್ಟಿದ ಬಗ್ಗೆ ದಢೀಕರಣ ಇರುವುದನ್ನು ಖಾತರಿ ಪಡಿಸಕೊಳ್ಳಬೇಕು

4) ಸಭೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿದ/ಮಾಡದೇ ಇದ್ದ ಬಗ್ಗೆ ದಾಖಲೆ ನೋಡಿ ದೃಢೀಕರಿಸಿಕೊಳ್ಳಬೇಕು.

5) ಸಭೆಗೆ ಗೈರು ಹಾಜರಾಗಲು ಲಿಖಿತವಾಗಿ ಒಪ್ಪಿಗೆ ಕೇಳಿದ್ದರೆ, ಅದರ ಪ್ರತಿಯನ್ನು ಪಡೆಯಬೇಕು. ಅಥವಾ ಅಂತಹ ಮನವಿ ಬಂದಿಲ್ಲವೆಂದು ಸಹಕಾರಿ ತಿಳಿಸಿದರೆ, ಮಂಡಳಿ ಸದಸ್ಯ ಸಲ್ಲಿಸಿದ ಲಿಖಿತ ಮನವಿ ಮತ್ತು ಅಂಚೆ ಇಲಾಖೆ ನೀಡಿದ ದಾಖಲೆ ಸಲ್ಲಿಸಲು ಸೂಚಿಸಿ ಪಡೆಯಬೇಕು.

6) ಗೈರು ಹಾಜರಿ ದೃಢೀಕರಿಸಿಕೊಂಡ ನಂತರ ಗೈರು ಹಾಜರಿಗೆ ಕಾರಣ ದಾಖಲಿಸಿ, ಸಹಕಾರಿಯ ಆಡಳಿತ ಮಂಡಳಿ ತೆಗೆದುಕೊಂಡ ತೀರ್ಮಾನದ ಪ್ರತಿ ದೃಢೀಕರಿಸಿ ಪಡೆಯಬೇಕು.

7) ಅನರ್ಹತೆ ಆದೇಶ ಆಗುವ ತನಕ ಅಂತಹ ಮಂಡಳಿ ಸದಸ್ಯನಿಗೆ ಮುಂದಿನ ಸಭೆಗಳಿಗೆ ನೋಟೀಸ್ ಕಳುಹಿಸಬೇಕೆ ಎಂಬುದನ್ನು ಸಹಕಾರಿ ಮಂಡಳಿ ತೀರ್ಮಾನಿಸಬೇಕು. ಏಕೆಂದರೆ ಅಂತಹ ಸದಸ್ಯನ ಮೇಲೆ ಅನರ್ಹತೆ ಪ್ರಸ್ತಾವನೆ ಸಲ್ಲಿಸಿದ್ದರೂ, ಅನರ್ಹತೆ ಆದೇಶವಾಗುವ ತನಕ, ಅವನ ಮಂಡಳಿ ಸದಸ್ಯತ್ವ ಜಾರಿಯಲ್ಲಿರುತ್ತದೆ.

ಈ ಮೇಲ್ಕಂಡ ಆಧಾರದ ಮೇಲೆ ಒಂದು ಸಹಕಾರಿಯ ಮಂಡಳಿ ಸದಸ್ಯನ್ನು ಎಷ್ಟು ವರ್ಷಗಳ ಅವಧಿಗೆ ಅನರ್ಹತೆಗೊಳಿಸಬೇಕೆಂದು ಸಂಯುಕ್ತ ಸಹಕಾರಿ ಮಂಡಳಿ ತೀರ್ಮಾನಿಸಬೇಕು.ಗರಿಷ್ಠ ಐದು ವರ್ಷ ಎಂದಿರುವುದರಿಂದ, ಇದರ ಪರಿಣಾಮವನ್ನು ಸಹ ಸಂಯುಕ್ತ

ಸಹಕಾರಿ ಗಮನಿಸಬೇಕು.ಮಂಡಳಿ ಪ್ರಕರಣದ ದಾಖಲಿಸಿಕೊಂಡು ವಿಚಾರಣೆ ಪ್ರಾರಂಭವಾಗುವುದು ಸಾಮಾನ್ಯವಾಗಿ ಮಂಡಳಿ ರಚನೆಯಾದ 1–2 ವರ್ಷಗಳ ನಂತರ.ಗರಿಷ್ಠ ಐದು ವರ್ಷಗಳಿಗೆ ಅನರ್ಹತೆ ನಿಗದಿ ಪಡಿಸಿದರೆ, ಅದು ಹತ್ತು ವರ್ಷಗಳ ಅನರ್ಹತೆಗೊಳಗಾದಂತಾಗುತ್ತದೆ. ಏಕೆಂದರೆ ಚುನಾವಣೆ ಐದು ವರ್ಷಕ್ಕೊಮ್ಮೆ ನಡೆಯುತ್ತದೆ. ಈಗಿನ ಪ್ರಕರಣ ಒಂದು ವರ್ಷದ ನಂತರ ಪ್ರಾರಂಭಿಸಿದ್ದರೆ, ಅವನು ಇನ್ನುಳಿದ ಹಾಲಿ ಮಂಡಳಿ ಅವಧಿ 4 ವರ್ಷ ಮಾತ್ರ. ಐದು ವರ್ಷಗಳ ಅನರ್ಹತೆಗೊಳಿಸಿದರೆ, ಮುಂದಿನ ಚುನಾವಣೆಯಲ್ಲಿ ಅವನು ಭಾಗವಹಿಸಲು ಅರ್ಹತೆ ಕಳೆದುಕೊಳ್ಳುತ್ತಾನೆ. ಅಂದರೆ ಅವನು ಮುಂದಿನ 9 ವರ್ಷ ಸಹಕಾರಿಯ ನಿರ್ದೇಶಕನಾಗಿ ಆಯ್ಕೆಯಾಗಲು ಅನರ್ಹತೆಗೊಳಗಾಗುತ್ತಾನೆ. ಆದ್ದರಿಂದ ಸಂಯುಕ್ತ ಸಹಕಾರಿ, ಅನರ್ಹತೆ ಆದೇಶ ಹೊರಡಿಸುವ ಮೊದಲು, ಅಂತಹ ನಿರ್ದೇಶಕನ ಸೇವೆ ಸಹಕಾರಿಗೆ ಅಗತ್ಯವೆಂದು ಮತ್ತು ಆ ಸಹಕಾರಿ ಬೆಳವಣಿಗೆ ಅಂತಹ ನಿರ್ದೇಶಕನ ಮುಖಾಂತರ ನಡೆಯುವ ಸಾಧ್ಯತೆ ಇದೆ ಎಂದು ಮನಗಂಡರೆ, ಅಂತಹ ಪ್ರಸಂಗದಲ್ಲಿ ಅನರ್ಹತೆ ಅವಧಿ ಕಡಿತಗೊಳಿಸಬಹುದು. ಇಂತಹ ಅಭಿಪ್ರಾಯ ನ್ಯಾಯಾಯಿತವಾದ ತೀರ್ಮಾನವಾಗಲಾರದು. ಏಕೆಂದರೆ ದಾಖಲೆಯಲ್ಲಿ ಒಬ್ಬ ನಿರ್ದೇಶಕನು ಆ ಸಹಕಾರಿ ಬೆಳವಣಿಗೆಗೆ ಅವಶ್ಯಕ ಎಂದರೂ ಸಿಗುವುದಿಲ್ಲ. ಅಂದರೆ ಸಂಯುಕ್ತ ಸಹಕಾರಿ ಅನರ್ಹತೆಗೆ ಆದೇಶ ಮಾಡುವಾಗ ವೈಯಕ್ತಿಕ ಹಿತಾಸಕ್ತಿಯಿಂದ ಒಬ್ಬ ನಿರ್ದೇಶಕನ ಅನರ್ಹತೆಯನ್ನು ಅವನ ಅನುಕೂಲಕ್ಕೆ ಬಳಸಬಾರದು. ಏಕೆಂದರೆ ಈ ಆದೇಶ ಮಾಡುವಾಗ ಸಂಯುಕ್ತ ಸಹಕಾರಿ ಅರೆ ನ್ಯಾಯಿಕ ಅಧಿಕಾರ ಚಲಾಯಿಸಿ ಆದೇಶಿಸುವಾಗ ವೈಯಕ್ತಿಕ ಕಾರಣಗಳಿಂದ ಶಿಕ್ಷೆ ಪ್ರಮಾಣವನ್ನು ಇಳಿಸಬಾರದು. ದಾಖಲೆಯಲ್ಲಿ ಅಂತಹ ವ್ಯಕ್ತಿ ಸಕಾರಣಗಳಿಲ್ಲದೆ ಮೂರು ಸಭೆಗಳಿಗೆ ಸತತವಾಗಿ ಗೈರಾಗಿದ್ದರೆ, ಅಂತಹ ವ್ಯಕ್ತಿ ನಿರ್ದೇಶಕನಾಗಿ ಮುಂದುವರಿಯಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಆದೇಶಿಸಬೇಕು.ಅಂತಹ ತೀರ್ಮಾನವನ್ನು ಸಂಯುಕ್ತ ಸಹಕಾರಿ ತೆಗೆದುಕೊಳ್ಳಬೇಕು.

(ಸ್ವಭಾವಿಕ ನ್ಯಾಯಾ ನೀತಿಯಡಿ ನೋಟೀಸ್ ಎಂದರೆ ಯಾರಿಗೆ ನೋಟೀಸ್ ನೀಡಲಾಗಿದೆಯಲ್ಲಿ ಅಂತಹ ವ್ಯಕ್ತಿ ನೋಟೀಸಿನಲ್ಲಿ ನೀಡಿರುವ ಉದ್ದೇಶ ಅರ್ಥವಾಗುವ ಭಾಷೆಯಲ್ಲಿರಬೇಕು. ಸರಳವಾಗಿ ಅರ್ಥವಾಗುವಂತೆ ನೋಟೀಸ್ ನೀಡಬೇಕು.)

**ಅನರ್ಹತೆ ಆದೇಶ ಹೇಗಿರಬೇಕು**

1) ಅನರ್ಹತೆ ಪ್ರಸ್ತಾವನೆ ಯಾರಿಂದ ಬಂದಿದೆ.

2) ಈ ಪ್ರಕರಣವನ್ನು ದಾಖಲೆಗೆ ತೆಗೆದುಕೊಂಡ ಬಗ್ಗೆ ಉಲ್ಲೇಖ.

3) ಪ್ರಸ್ತಾವನೆಗೆ ಪೂರಕ ದಾಖಲೆಗಳನ್ನು ಸಲ್ಲಿಸಿದ ಬಗ್ಗೆ ವಿವರ.

4) ನೋಟೀಸ್ ನೀಡಿದ ಬಗ್ಗೆ.

5) ನೋಟೀಸ್ ಸ್ವೀಕೃತಿ ಬಗ್ಗೆ ದೃಢೀಕರಿಸಿಕೊಳ್ಳುವುದು.

6) ಲಿಖಿತ/ಮೌಖಿಕ ಹೇಳಿಕೆ ಮತ್ತು ದಾಖಲೆ ಸಲ್ಲಿಸಿದ ಬಗ್ಗೆ ವಿವರ.

7) ಸಹಕಾರಿಯನ್ನು ಕಕ್ಷಿದಾರರನ್ನಾಗಿ ಮಾಡಿದ ನಂತರ ಅವರಿಗೂ ನೋಟೀಸ್ ತಯಾರಿಸಿ ದಾಖಲೆಗಳನ್ನು ದೃಢೀಕರಿಸಿಕೊಂಡ ಬಗ್ಗೆ ವಿವರ.

8) ಯಾವ ದಾಖಲೆ ನಂಬಿಕೆಗೆ ಅರ್ಹ ಎಂಬ ಬಗ್ಗೆ ತೀರ್ಮಾನ.

9) ನ್ಯಾಯ ಯಾರ ಪರವಾಗಿದೆ ಎಂಬ ಅಭಿಪ್ರಾಯ.

10) ಆದೇಶದಲ್ಲಿ ಸ್ಪಷ್ಟವಾಗಿ ನಮೂದಿಸಬೇಕಾದ ಅಂಶವೆಂದರೆ, ಯಾವ ದಾಖಲೆ/ಹೇಳಿಕೆ ಆಧಾರದ ಮೇಲೆ ತೀರ್ಮಾನಕ್ಕೆ ಬರಲಾಗಿದೆ ಎಂಬುದನ್ನು ಉಲ್ಲೇಖಿಸಬೇಕು.

11) ಎಷ್ಟು ವರ್ಷದ ಅವಧಿಗೆ ಅನರ್ಹತೆಗೊಳಪಡಿಸಬೇಕು.

12) ಆದೇಶದ ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಮತ್ತು ಸಹಕಾರಿಗೆ ರವಾನಿಸಿ ಆದೇಶವನ್ನು ಪಾಲಿಸಲು ಸೂಚನೆ ಯಾವ ದಿನಾಂಕದಿಂದ ಎಂದು ತಿಳಿಸತಕ್ಕದ್ದು.

13) ಅಥವಾ ಆದೇಶ ಹೊರಡಿಸಿದ ದಿನದಿಂದ ಜಾರಿ ಎಂದು ಅಥವಾ ಮೂರು ಸಭೆಗಳಿಗೆ ಗೈರು ಹಾಜರಾದ ದಿನಾಂಕದಿಂದ ಎಂದು ಅಥವಾ

ಮುಂದಿನ ಸಭೆಗಳಿಗೆ ಹಾಜರಾದ ಬಗ್ಗೆ ದೃಡೀಕರಿಸಿಕೊಂಡು ಆದೇಶಿಸಬೇಕು.

**ತೀರ್ಪುಗಳು :**

1) ಒಂದು ಕೃಷಿಪತ್ತಿನ ಸಹಕಾರ ಸಂಘದ ಕಾರ್ಯನಿರ್ವಹಣೆ ಬಗ್ಗೆ, ಮಂಡಳಿ ಅವಧಿ ಮುಗಿಯುತ್ತಿರುವ ಅವಧಿಯಲ್ಲಿ ಕಲಂ.65ರ ಪರಿವೀಕ್ಷಣೆಗೆ ಆದೇಶಿಸಿ, ವರದಿ ಪಡೆದು, ಕಲಂ.68 ರಡಿ ಅನುಪಾಲನಾ ವರದಿ ಸಲ್ಲಿಸಲು ಸಹಾಯಕ ನಿಬಂಧಕರು ಸೂಚಿಸಿದ್ದರು. ಈ ಪ್ರಕರಣದಲ್ಲಿ ರಿಟ್ ಅರ್ಜಿದಾರರು, ಲಿಖಿತ ಹೇಳಿಕೆ ದಾಖಲಿಸಿದ್ದು ಅದರ ಆಧಾರದ ಮೇಲೆ, ತೀರ್ಮಾನ ಮಾಡಿದ್ದಾರೆ. ರಿಟ್ ಅರ್ಜಿದಾರರಿಗೆ ಹಾಜರಾಗಿ ಹೇಳಿಕೆ ನೀಡಲು ಅವಕಾಶ ನೀಡದೇ ಇರುವುದರಿಂದ, ಇದು ಸ್ವಭಾವಿಕ ನ್ಯಾಯಾ ನೀತಿಗೆ ವಿರುದ್ದವೆಂದು ಸೂಚಿಸಿ, ಸಹಾಯಕ ನಿಬಂಧಕರು ಅವಧಿ ಮುಗಿದ ಮಂಡಳಿ ನಿರ್ದೇಶಕರ ಅನರ್ಹತೆ ಆದೇಶವನ್ನು ರದ್ದು ಪಡಿಸಿ, ಮರು ಪರಿಶೀಲಿಸಲು ಸೂಚಿಸಿ ರಿಟ್ ವಿಲೇವಾರಿ ಮಾಡಿತು.

**(2016 Indlaw KAR 71)**

2) ಒಂದು ಕೃಷಿ ಪತ್ತಿನ ಸಹಕಾರ ಸಂಘ ತನ್ನ ಠೇವಣಿದಾರರ ಹಣ ವಾಪಸ್ ನೀಡಲಿಲ್ಲವೆಂದು ಕಲಂ.29ಸಿ ಅಡಿ ವಿಚಾರಣೆ ಮಾಡಿ ನಿರ್ದೇಶಕರನ್ನು ಅನರ್ಹತೆಗೊಳಿಸಿ ಆದೇಶಿಸಿದ ನಂತರ ಅದನ್ನು ಉಪನಿಬಂಧಕರು, ಸಹಾಯಕ ನಿಬಂಧಕರು ಆದೇಶವನ್ನು ಸಮರ್ಥಿಸಿ ಮೇಲ್ಮನವಿಯನ್ನು ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಈ ರಿಟ್ ದಾಖಲಿಸಿತು. ರಿಟ್ ಅರ್ಜಿಯನ್ನು ಸಲ್ಲಿಸಿದ ನಂತರ ಸಹಾಯಕ ನಿಬಂಧಕರ ಆದೇಶಕ್ಕೆ ತಡೆಯಾಜ್ಞೆ ಕೇಳಿದಾಗ ಏಕ ಸದಸ್ಯ ಪೀಠ ಅದನ್ನು ಪುರಸ್ಕರಿಸಲಿಲ್ಲ ಮತ್ತು ಆಡಳಿತ ಮಂಡಳಿ ಚುನಾವಣೆಗೆ ಕ್ರಮ ಜರುಗಿಸುವಂತೆ ಸೂಚಿಸಿತು. ಇದನ್ನು ಪ್ರಶ್ನಿಸಿ ಈ ರಿಟ್ ಮೇಲ್ಮನವಿ ಸಲ್ಲಿಸಲಾಗದೆ. ವಿಭಾಗೀಯ ಪೀಠ ಏಕ ಸದಸ್ಯತ್ವ ಪೀಠದ ತಡೆಯಾಜ್ಞೆ ನಿರಾಕರಿಸುವ ಆದೇಶವನ್ನು ರದ್ದು ಪಡಿಸಿತು. ಈ ಮಧ್ಯೆ ಮೂರು ಸ್ಥಾನಗಳಿಗೆ ಚುನಾವಣೆ ಮುಕ್ತಾಯವಾಗಿದ್ದು, ಈ ರಿಟ್ ಮೇಲ್ಮನವಿದಾರರು ಸ್ಥಾನಕ್ಕೆ ಚುನಾವಣೆ ನಡೆದಿಲ್ಲವಾದ ಕಾರಣ, ಅವರು ಏಕ ಸದಸ್ಯ ಪೀಠದ ಮೂಲ ರಿಟ್ ಅರ್ಜಿದಾರರು ನಿರ್ದೇಶಕರಾಗಿ ಮುಂದುವರಿಯುತ್ತಾರೆ ಮತ್ತು ಮೂಲ ರಿಟ್ ಅರ್ಜಿ ಆದೇಶದಂತೆ ಮುಂದೆ ಕ್ರಮಜರುಗಿಸಲು ಸೂಚಿಸಿ ರಿಟ್ ಮೇಲ್ಮನವಿ ಪುರಸ್ಕರಿಸಿತು.

**(2016 Indlaw Kar 6252)**

3) ಅರ್ಜಿದಾರನು ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದು ಅವನು ನಿರ್ದೇಶಕನಾಗಲು ಅನರ್ಹ ಎಂದು ತೀರ್ಮಾನವಾಗುವ ತನಕ, ಅವನು ನಿರ್ದೇಶಕನಾಗಿ ಮುಂದುವರಿಯತಕ್ಕದ್ದು. ಅರ್ಜಿದಾರನ ಗೈರು ಹಾಜರೆಂದು (exparte) ಅನರ್ಹತೆ ಆದೇಶ ಹೊರಡಿಸಿರುವುದು ಸರಿಯಲ್ಲ ಅಂತಹ ವ್ಯಕ್ತಿ ಅನರ್ಹತೆಗೊಂಡಿದ್ದಾನೆ ಎಂದು ತೀರ್ಮಾನವಾಗುವ ತನಕ, ನಿರ್ದೇಶಕನಾಗಿ ಮುಂದುವರಿಯತಕ್ಕದ್ದು.

**(2015 Indlaw KAR 8664)**

4) ಒಂದು ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕನು ಸುಸ್ತಿಯಾಗಿದ್ದಾನೆಂದು ಅರ್ಜಿ ಬಂದಾಗ ಸಹಾಯಕ ನಿಬಂಧಕ ಸಂಬಂಧಪಟ್ಟವರಿಗೆ ನೋಟೀಸ್ ನೀಡಿ, ವಿಚಾರಣೆ ಮಾಡಿ, ಆ ನಂತರ ಆದೇಶಿಸುವ ಬದಲು, ಅನರ್ಹತೆ ಬಗ್ಗೆ ಹಿಂಬರಹದ ರೀತಿ ಪತ್ರ ನೀಡಿದ್ದ ಕಾನೂನು ಬಾಹಿರ. ಇದನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕರಣ, ಅವಕಾಶ ನೀಡಿ ಆದೇಶ ಮಾಡಲು ವಾಪಸ್ ಕಳುಹಿಸದೆ ತಪ್ಪು ಮಾಡಿದ್ದರಿಂದ ಈ ರಿಟ್ ದಾಖಲಿಸಿದೆ. ಸಂಬಂಧಪಟ್ಟ ವ್ಯಕ್ತಿ ಅನರ್ಹತೆ ಹಿಂಬರಹ ನೀಡುವ ಮೊದಲೇ ಸಾಲ ತೀರುವಳಿ ಮಾಡಿದ್ದು, ಇದನ್ನು ಅವಕಾಸ ನೀಡಿದ್ದರೆ ಪರಿಶೀಲಿಸಬಹುದಾಗಿತ್ತು. ಆದ್ದರಿಂದ ಸಂಬಂಧಪಟ್ಟ ವ್ಯಕ್ತಿಗೆ ಅವಕಾಶ ನೀತಿ ಶಾಸನ ಬದ್ದ ಆದೇಶ ನೀಡಲು ಸೂಚಿಸಿ ರಿಟ್ ಅರ್ಜಿಯನ್ನು ಊರ್ಜಿತವೆಂದು ತೀರ್ಮಾನಿಸಿತು.

**(2015 Indlaw KAR 4603)**

5) ಒಂದು ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕನ ಅನರ್ಹತೆ ಬಗ್ಗೆ ಹೊರಡಿಸಿದ ಆದೇಶವನ್ನು ಮೇಲೆ ಕಲಂ.106 ರಲ್ಲಿ ಮೇಲ್ಮನವಿ ಸಲ್ಲಿಸಿದಾಗ ಆ ಪ್ರಕರಣದಲ್ಲಿ ಭಾಗವಹಿಸಲು ಮೂವರು ವ್ಯಕ್ತಿಗಳಿಗೆ ಅವಕಾಶ ನೀಡಲು ಆದೇಶಿಸಿದ್ದನ್ನು ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಶ್ನಿಸಲಾಗಿತ್ತು. ಅದನ್ನು ಪುರಸ್ಕರಿಸಿದಾಗ ಅದನ್ನು ಪ್ರಶ್ನಿಸಿ ಈ ರಿಟ್ ದಾಖಲಿಸಲಾಗಿದೆ. ಈ ಪ್ರಕರಣ ಉಚ್ಚನ್ಯಾಯಾಲಯ ತೀರ್ಮಾನಿಸಿದ ಇಂಥದೇ ಪ್ರಕರಣ (WP.12316/2014) ನಲ್ಲಿ ನೀಡಿದ ಆದೇಶದಲ್ಲಿ, ಆರೋಪಿಗಳನ್ನು ಕಕ್ಷಿದಾರನ್ನಾಗಿ ಮಾಡಿದ ಆದೇಶ ರದ್ದು ಪಡಿಸಿ, ದಾಖಲೆಗಳನ್ನು ಪರಿಶೀಲಿಸಿ

ಆದೇಶ ಮಾಡಿ, ಅರ್ಜಿ ಪುರಸ್ಕರಿಸಿತು.

**(2015 Indlaw KAR 2296)**

6) ಒಂದು ಸಹಕಾರ ಸಂಘ ನಿರ್ದೇಶಕನನ್ನು ಸದಸ್ಯತ್ವದಿಂದ ಕಲಂ.29ಸಿ(8)(b) ಅಡಿ ಅನರ್ಹತೆಗೊಳಿಸಿದ್ದನ್ನು ಪ್ರಶ್ನಿಸಿದಾಗ, ಮೇಲ್ಮನವಿ ಪ್ರಾಧಿಕಾರ ತಿರಸ್ಕರಿಸಿದ್ದು ಸಮರ್ಥನಿಯವೇ ಎಂಬುದನ್ನು ಈ ರಿಟ್‌ನಲ್ಲಿ ಪ್ರಶ್ನಿಸಲಾಗಿದೆ. ಒಂದು ಸಹಕಾರ ಸಂಘದ ಚುನಾಯಿತ ನಿರ್ದೇಶಕನನ್ನು ಕಲಂ.29ಸಿ(8)(b) ಅಡಿ ಅನರ್ಹತೆಗೊಳಿಸಲು ಅವಕಾಶ ಇದೆ. ಆದರೆ ಕಲಂ.17 ರಲ್ಲಿ ಸದಸ್ಯತ್ವದ ಅನರ್ಹತೆ ಬಗ್ಗೆ ಉಲ್ಲೇಖಿಸಿದೆ. ಕಲಂ.29ಸಿ(8)(b) ಆದೇಶದಲ್ಲಿಯೇ, ಸದಸ್ಯತ್ವದ ಅನರ್ಹತೆ ಆದೇಶ ಮಾಡಿದ್ದು, ಅಧಿಕಾರಿ ತನ್ನ ಇಚ್ಚಾ ಶಕ್ತಿ ಪ್ರದರ್ಶಿಸದೆ ಮಾಡಿದ ಆದೇಶ ಎಂದು ರಿಟ್ ಅರ್ಜಿ ಪುರಸ್ಕರಿಸಿತು ಮತ್ತು ಆ ಅಂಶ ಮರು ಪರಿಶೀಲಿಸಲು ವಾಪಸ್ ಕಳುಹಿಸಲಾಯಿತು.

**(2015 Indlaw KAR 3263 / 2015 (2) KAR LJ 436)**

7) ಸಹಕಾರ ಸಂಘಗಳ ಅಪರ ನಿಬಂಧಕರು ಕಲಂ.29ಸಿ ಅನ್ವಯ, ನಿರ್ದೇಶಕ ತನಕ್ಕೆ ಅನರ್ಹತೆ ಬಗ್ಗೆ ವಿಚಾರಣೆ ಮಾಡಿ, ಅನರ್ಹತೆ ಅವಧಿ, ಮಂಡಳಿ ಅವಧಿಗೆ ಸೀಮಿತಗೊಳಿಸಿ ಆದೇಶಿಸಿರುವುದು. ಕಲಂ.29ಸಿ(8) ಕ್ಕೆ ವಿರುದ್ದ. ಕಲಂ.29ಸಿ ಅನ್ವಯ ಅನರ್ಹತೆ ಪರಿಶೀಲಿಸಿದಾಗ ಪ್ರಕ್ರಿಯೆ ಪ್ರಾರಂಭಿಸಿ, ವಿಚಾರಣೆ ಮುಕ್ತಾಯವಾದ ನಂತರ 5 ವರ್ಷದ ಅವಧಿಗೆ ಅನರ್ಹತೆಗೊಳಿಸಬಹುದು. ಐದು ವರ್ಷದ ಅನರ್ಹತೆ ಅವಧಿ, ಹಾಲಿ ಆಡಳಿತ ಮಂಡಳಿ ಅವಧಿಗೆ ಸೀಮಿತವಾಗುವುದಿಲ್ಲ. ಆದೇಶ ಹೊರಡಿಸಿ ದಿನಾಂಕದಿಂದ ಐದು ವರ್ಷಗಳೆಂದರೆ, ಅದು ಹಾಲಿ ಆಡಳಿತ ಮಂಡಳಿ ಅವಧಿ ಮುಗಿದ ನಂತರವೂ ಮುಂದುವರಿಯುತ್ತದೆ ಎಂದು ತೀರ್ಮಾನಿಸುವುದರ ಜೊತೆಗೆ, ಎದುರು ಅರ್ಜಿದಾರರು, ಮೇಲ್ಮನವಿಗೆ ಕಾನೂನಿನಲ್ಲಿ ಅವಕಾಶ ಇರುವುದರಿಂದ, ಈ ನ್ಯಾಯಾಲಯದ ಮುಂದೆ ಪರಿಹಾರ ಕೇಳಲಾಗದು ಎಂಬ ವಾದವನ್ನು ತಿರಸ್ಕರಿಸಿ ಪರಿಹಾರ ಹೇಳಿದ ವ್ಯಕ್ತಿಗಳ ಹಣ ದುರುಪಯೋಗವಾಗಿದೆ, ಆದ್ದರಿಂದ ಅವರು ರಿಟ್‌ನಲ್ಲಿ ಪರಿಹಾರಕೇಳಲು ಅರ್ಹರು ಮತ್ತು ಪ್ರಕರಣದಲ್ಲಿ ಕಾನೂನಿನ ವಿಮರ್ಷೆಗಾಗಿ ಪರಿಶೀಲಿಸಿದೆ. ಎರಡೂ ಆಯಾಮದಲ್ಲಿ ಈ ನ್ಯಾಯಾಲಯದ ತೀರ್ಮಾನ ಸೂಕ್ತವಾಗಿದೆ ಎಂದು ಆದೇಶಿಸಿ ರಿಟ್ ತೀರ್ಮಾನಿಸಿತು.

**(2016 Indlaw KAR 1532)**

8) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1954 ರಡಿ (39/1976) 1976ಕ್ಕೆ ಪೂರ್ವದಲ್ಲಿ ಕಲಂ.29ಡಿ ಅನ್ವಯ ಒಬ್ಬ ಚುನಾಯಿತ ಪ್ರತಿನಿಧಿ ಎಷ್ಟೇ ಅವಧಿಗೆ ಬೇಕಾದರೂ ಪದಾಧಿಕಾರಿಯಾಗಲು ಅವಕಾಶ ಇತ್ತು. ಆದರೆ 1976ರ ತಿದ್ದುಪಡಿ ನಂತರ ಯಾವುದೇ ಚುನಾಯಿತ ಪದಾಧಿಕಾರಿ ಅವಧಿಯನ್ನು ಆರು ವರ್ಷಗಳಿಗೆ ಸೀಮಿತಗೊಳಿಸಿದ ನಂತರ, ಆ ವ್ಯಕ್ತಿ ಯಾವುದೇ ಪದಾಧಿಕಾರಿಯಾಗಿ ಆರು ವರ್ಷಗಳ ನಂತರ ಮುಂದುವರಿಯತಕ್ಕದ್ದಲ್ಲ. ಈ ತಿದ್ದುಪಡಿಯ ಉದ್ದೇಶ ಒಬ್ಬ ಶಕ್ತಿಯುತ ವ್ಯಕ್ತಿ ಆ ಸಂಸ್ಥೆಯನ್ನು ನಿಯಂತ್ರಿಸಲು ಅವಕಾಶ ನೀಡಬಾರದೆಂದು ಈ ತಿದ್ದುಪಡಿ ಮಾಡಲಾಗಿದೆ. ಈ ನಿರ್ಬಂಧದಿಂದ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಪದಾಧಿಕಾರಿಯಾಗುವ ಅವಕಾಶ ಕಲ್ಪಿಸಿದೆ ಎಂದು ಕರ್ನಾಟಕ ಉಚ್ಚನ್ಯಾಯಾಲಯ ತೀರ್ಮಾನಿಸಿತು.

**[(1983) 2 Kar LJ 269]**

ಸೂಚನೆ : ಈಗ ಈ ಕಲಂಗೆ ತಿದ್ದುಪಡಿಯಾಗಿದ್ದು ಈ ತೀರ್ಮಾನ ಅನ್ವಯವಾಗುವುದಿಲ್ಲ.

9) ಕರ್ನಾಟಕ ಉಚ್ಚನ್ಯಾಯಾಲಯದ ವಿಭಾಗೀಯ ಪೀಠ, ಪದಾಧಿಕಾರಿಗಳ ಅವಧಿಯನ್ನು ನಿಗದಿ ಪಡಿಸಿರುವುದು ಎಲ್ಲಾ ಚುನಾಯಿತ ಪ್ರತಿನಿಧಿಗಳು ಪದಾಧಿಕಾರಿಯಾಗಲು ಅವಕಾಶ ಕಲ್ಪಿಸುವುದು ಮತ್ತು ಇದು ಸಹಕಾರ ಆಂದೋಲನಕ್ಕೆ ಪೂರಕವಾಗಿದೆ ಎಂದು ತೀರ್ಮಾನಿಸಿತು.

**(ILR 1995 KAR 510/1993 Indlaw SC 1418)**

ಸೂಚನೆ : ಈ ತೀರ್ಮಾನ ಈಗ ಅನ್ವಯವಾಗುವುದಿಲ್ಲ.

10) ಒಂದು ಸಹಕಾರ ಸಂಘದ ನಿರ್ದೇಶಕರ ಮೇಲೆ ಕಲಂ.29ಸಿ ಅನ್ವಯ ನೋಟೀಸ್ ನೀಡಿದಾಗ, ಆ ನೋಟೀಸ್‌ನಲ್ಲಿ ವ್ಯಕ್ತಿಗಳ ಹೆಸರಿನಲ್ಲಿ ಆರೋಪ ಪಟ್ಟಿ ತಯಾರಿಸಿಲ್ಲವೆಂದು. ಇದು ನಿಯಮ ಬಾಹಿರ ಎಂದು ಪ್ರಶ್ನಿಸಿದಾಗ ಉಚ್ಚನ್ಯಾಯಾಲಯ, ಶ್ರೇಷ್ಠ ನ್ಯಾಯಾಲಯದ ಪ್ರಕರಣ

ಸಂಖ್ಯೆ ಮೇಲ್ಮನವಿ (ಸಿವಿಲ್) 5401/2007ರ ತೀರ್ಪಿನಲ್ಲಿ ಕಾರಣ ಕೇಳುವ ನೋಟೀಸ್‌ನ್ನು ಅಧಿಕಾರ ಇಲ್ಲದೆ ಅಥವಾ ಅಧಿಕಾರ ಮೀರಿ ನೀಡಿದಾಗ ನ್ಯಾಯಾಲಯಗಳು ಮದ್ಯ ಪ್ರವೇಶ ಮಾಡಬಹುದು. ಶ್ರೇಷ್ಠ ನ್ಯಾಯಾಲಯದ [(2004) 3 SCC 440/2004 Indlaw SC 1] ವನ್ನು ಉಲ್ಲೇಖಿಸಿ, ಈ ತೀರ್ಪಿನಲ್ಲಿ ಕಾರ್ಯ ವ್ಯಾಪ್ತಿಗೆ ಸಂಬಂಧಪಟ್ಟಿದೆ ಎಂದು ಉಲ್ಲೇಖಿಸದ ಕಾರಣ ಉಚ್ಚನ್ಯಾಯಾಲಯ ತನ್ನ ತೀರ್ಮಾನದಲ್ಲಿ ಕಲಂ.29ಸಿ ಕಲಂ ವ್ಯಕ್ತಿಗಳಿಗೆ ಮಾತ್ರ ನೀಡತಕ್ಕದ್ದು. ಕಾರಣ ಕೇಳುವ ನೋಟೀಸ್‌ಗೆ ಉಚ್ಚನ್ಯಾಯಾಲಯ ಮದ್ಯಪ್ರವೇಶ ಮಾಡದಿರುವುದೆಂದು, ವಿಲೇವಾರಿ ಮಾಡಿತು.

**(2017 Indlaw KAR 910)**

11) ಒಂದು ನೌಕರರ ಸಹಕಾರ ಸಂಘದ ನಿರ್ದೇಶಕನ ಮೇಲೆ ಸಂಯುಕ್ತ ನಿಬಂಧಕರು, ಕಲಂ.29ಸಿ ಅಧಿ ನೋಟೀಸ್ ಜಾರಿ ಮಾಡಿದ್ದಕ್ಕೆ ಉತ್ತರವಾಗಿ, ಸಂಯುಕ್ತ ನಿಬಂಧಕರು ನೋಟೀಸ್ ನೀಡುವ ಅಧಿಕಾರಿದ ಬಗ್ಗೆ ಪ್ರಶ್ನಿಸಿದ್ದರು. ಇದನ್ನು ಪ್ರಶ್ನಿಸಿ ರಿಟ್ ಸಲ್ಲಿಸಿದಾಗ (W.P.47076/2017) ಏಕ ಸದಸ್ಯ ಪೀಠ, 106 ರಲ್ಲಿ ಮೇಲ್ಮನವಿ ಸಲ್ಲಿಸಲು ಸೂಚಿಸಿ ರಿಟ್ ಮೂಲಕ ಪರಿಹಾರ ನೀಡಲಾಗದು ಎಂದು ತೀರ್ಮಾನಿಸಿದ್ದರು. ಇದನ್ನು ಪ್ರಶ್ನಿಸಿ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದಾಗ (ಘ.ಂ.47076/2017) ಏಕ ಸದಸ್ಯ ಪೀಠದ ಆದೇಶವನ್ನು ಸಮರ್ಥಿಸಿದರೂ, ಸಂಯುಕ್ತ ನಿಬಂಧಕರು ನೀಡಿದ್ದ ಅನರ್ಹತೆ ಆದೇಶಕ್ಕೆ ತಡೆಯಾಜ್ಞೆ ನೀಡಬೇಕು ಎಂದು ಆದೇಶ, ಅಮಾನತ್ತಿನಲ್ಲಿಟ್ಟು, ಸಂಯುಕ್ತ ನಿಬಂಧಕರು ಪುನರ್ ಪರಿಶೀಲಿಸಲು ಆದೇಶಿಸಿ ರಿಟ್ ತೀರ್ಮಾನಿಸಿತು.

**(2017 Indlaw KAR 6100)**

ಸೂಚನೆ : – ಮೇಲ್ಕಂಡ ವಿಭಾಗೀಯ ಪೀಠದ ಮೇಲ್ಮನವಿಗೆ ಪೂರ್ವದಲ್ಲಿ ಏಕ ಸದಸ್ಯ ಪೀಠದ ಆದೇಶದಲ್ಲಿ ರಿಟ್ ಅರ್ಜಿದಾರ, ಸಹಕಾರ ಕಾಯಿದೆಯಲ್ಲಿ ಪರಿಹಾರ ಪಡೆಯದೆ ರಿಟ್ ಮೂಲಕ ದಾಖಲಿಸಿ, ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಬಾರದೆಂದು ವಜಾ ಮಾಡಿತ್ತು. ಅದನ್ನು ಪ್ರಶ್ನಿಸಿ ಮೇಲ್ಕಂಡ ಮೇಲ್ಮನವಿ ಸಲ್ಲಿಸಲಾಗಿತು.

**(2017 Indlaw KAR 7411/2018 (2) KAR LJ 259)**

12) ಅರ್ಜಿದಾರ ಒಂದು ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ಆಯ್ಕೆಯಾದ ನಿರ್ದೇಶಕ. ಆ ಸಂಘದ ಒಬ್ಬ ಸದಸ್ಯ, ಸದಸ್ಯನಾಗಿ ಒಂದು ವರ್ಷ ಮುಕ್ತಾಯವಾಗುವ ಮೊದಲೆ, ಈ ಅರ್ಜಿದಾರನ ಮೇಲೆ ಕ್ರಮ ಜರುಗಿಸುವಂತೆ ಅರ್ಜಿ ನೀಡಲು ಕಲಂ.20(2) ನಲ್ಲಿನ ನಿರ್ಬಂಧವನ್ನು ಗಮನಿಸದೇ ಕ್ರಮ ಜರುಗಿಸಿದ್ದನ್ನು ಪ್ರಶ್ನಿಸಿದ್ದರು. ಉಪನಿಬಂಧಕರು ಕಲಂ.29ಸಿ (7) ಮತ್ತು (8)ನ್ನು ತಪ್ಪಾಗಿ ಅರ್ಥೈಸಿ ಆದೇಶಿಸಿರುವುದನ್ನು ಗಮನಿಸಿ, ಉಪನಿಬಂಧಕರ ಆದೇಶವನ್ನು ರದ್ದು ಪಡಿಸಿ, ಮೂಲ ಪ್ರಕರಣವನ್ನು 2 ತಿಂಗಳಲ್ಲಿ ತೀರ್ಮಾನ ಮಾಡಲು ಸೂಚಿಸಿ, ಸಹಾಯಕ ನಿಬಂಧಕರ ಆದೇಶಕ್ಕೆ ತಡೆಯಾಜ್ಞೆ ನೀಡಿ ಆದೇಶಿಸಿತು.

**(2017 Indlaw KAR 5946)**

13) ಒಂದು ಸಹಕಾರ ಸಂಘದ ನಿರ್ದೇಶಕನಲ್ಲಿ ಸಹಾಯಕ ನಿಬಂಧಕರು ಸುಸ್ತಿದಾರನೆಂದು ಕಲಂ.29ಸಿ ಅಡಿ ಅನರ್ಹತೆಗೊಳಪಡಿಸಿ ಆದೇಶಿಸಿದಾಗ ಅದನ್ನು ಮೇಲ್ಮನವಿಯಲ್ಲಿ ಉಪನಿಬಂಧಕರು ದೃಡೀಕರಿಸಿದಾಗ ಈ ರಿಟ್ ಅರ್ಜಿ ದಾಖಲಿಸಲಾಗಿದೆ. ಅರ್ಜಿದಾರನಿಗೆ ಸಾಕಷ್ಟು ಅವಕಾಶಗಳನ್ನು ನೀಡದೆ ಮಾಡಿರುವ ಆದೇಶವನ್ನು ರದ್ದು ಪಡಿಸಲು ರಿಟ್ ದಾಖಲಿಸಿದು ಮೇಲ್ಮನವಿಯಲ್ಲಿ ಉಪನಿಬಂಧಕರು, ಐದು ವರ್ಷದ ಅವಧಿ ಅನರ್ಹತೆಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಿ ಆದೇಶಿಸಿದ್ದರು. ರಿಟ್ ಅರ್ಜಿದಾರ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಸಮರ್ಪಕವಾಗಿ ಪರಿಶೀಲಿಸದೆ ಯಾಂತ್ರಿಕವಾಗಿ ಆದೇಶ ಮಾಡಿದ್ದಾರೆಂದು ಸಲ್ಲಿಸಿದ ಮನವಿ ಪುರಸ್ಕರಿಸಿ, ಚುನಾಯಿತ ಪ್ರತಿನಿಧಿಗಳ ಅನರ್ಹತೆ ಬಗ್ಗೆ ವಿಮರ್ಷಿಸುವಾಗ, ಅದನ್ನು ಹಗುರವಾಗಿ ಪರಿಗಣಿಸದೇ, ಸಮರ್ಪಕ ಅವಕಾಶ ನೀಡಬೇಕೆಂದು ಸೂಚಿಸಿ ಮರು ವಿಚಾರಣೆ ಮಾಡಲು ಸೂಚಿಸಿ ರಿಟ್ ವಿಲೇವಾರಿ ಮಾಡಿತು.

**(2017 Indlaw KAR 3916)**

# ಅಧ್ಯಾಯ – 8.5

## ಸಭೆಗಳು

1) "ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೊಳಪಟ್ಟು ಸಹಕಾರಿಯ ಅಂತಿಮ ಅಧಿಕಾರವು ಸಾಮಾನ್ಯ ನಿಕಾಯದಲ್ಲಿ ನಿಹಿತವಾಗತಕ್ಕದ್ದು.

2) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿರುವಂಥ ರೀತಿಯಲ್ಲಿ ಮತ್ತು ಅಂಥ ಪ್ರಕ್ರಿಯೆಗಳೊಂದಿಗೆ, ಸದಸ್ಯರಿಂದ ಆರಿಸಲಾದ ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಬೇಕೆಂದು ಸಹಕಾರಿಯ ಅಪೇಕ್ಷಿಸಿದಲ್ಲಿ, ಅದರ ಉಪವಿಧಿಗಳಲ್ಲಿ ಅದಕ್ಕೆ ಉಪಬಂಧ ಕಲ್ಪಿಸಬಹುದು. ಈ ಅಧಿನಿಯಮದಲ್ಲಿ ಸಾಮಾನ್ಯ ನಿಕಾಯಕ್ಕೆ ಮಾಡಿದ ಯಾವುದೇ ಉಲ್ಲೇಖವು ಪ್ರಾತಿನಿಧಿಕ ಸಾಮಾನ್ಯ ನಿಕಾಯಕ್ಕೂ ಅನ್ವಯಿಸತಕ್ಕದ್ದು.

3) ಈ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ ಇತರ ಉಪಬಂಧಗಳಿಗೊಳಪಟ್ಟು ಸಾಮಾನ್ಯ ನಿಕಾಯವು ಈ ಮುಂದಿನ ವಿಷಯಗಳ ಬಗ್ಗೆ ವ್ಯವಹರಿಸತಕ್ಕದ್ದು, ಎಂದರೆ

(ಎ) ಮಂಡಳಿಯು ಸಲ್ಲಿಸಿದ ಹಿಂದಿನ ಸಹಕಾರ ವರ್ಷದ ವಾರ್ಷಿಕ ವರದಿಯ ಪರಿಗಣನೆ;

(ಬಿ) ಚಾಲ್ತಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆಗಾಗಿ ಲೆಕ್ಕಪರಿಶೋಧಕನ ಮತ್ತು ಆಂತರಿಕ ಲೆಕ್ಕ ಪರಿಶೋಧಕನ ನೇಮಕ ಮತ್ತು ತೆಗೆದುಹಾಕುವಿಕೆ;

(ಸಿ) ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯ ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳ ಪರಿಗಣನೆ;

(ಡಿ) ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ತೋರಿಸಲಾದ ದೋಷಗಳನ್ನು ಮತ್ತು ಅಕ್ರಮಗಳನ್ನು ಸರಿಪಡಿಸುವ ಸಂಬಂಧದಲ್ಲಿ ಮಂಡಳಿಯು ಸಲ್ಲಿಸಿದ ಪಾಲನಾ ವರದಿಯ ಪರಿಗಣನೆ ಹಾಗೂ ತೀರ್ಮಾನ;

(ಇ) ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ;

(ಎಫ್) ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ;

(ಜಿ) ದೀರ್ಘಾವಧಿ ಯಥಾದೃಷ್ಟ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆಯ ಅನುಮೋದನೆ;

(ಹೆಚ್) ಮುಂದಿನ ಸಹಕಾರ ವರ್ಷದ ವಾರ್ಷಿಕ ಬಜೆಟ್ಟಿನ ಅನುಮೋದನೆ;

(ಐ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ;

(ಜೆ) ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ;

[(ಕೆ) ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ;

(ಕೆ–1) ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ;

(ಕೆ–2) ಒಟ್ಟು ಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ;

(ಕೆ–3) ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ;

(**********)]

(ಎಲ್) ಮಂಡಳಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು [****];

(ಎಂ) 37ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ;

(ಎನ್) ಒಂದು ಸಹಕಾರಿಯು ಇತರ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ;

(ಒ) 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ;

(ಪಿ) ಮಂಡಳಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ [****] ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ;

(ಕ್ಯೂ) ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿ ಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ;

(ಆರ್) ಉಪವಿಧಿಗಳ ತಿದ್ದುಪಡಿ;

(ಎಸ್) ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ;

(ಟಿ) [ಹಿಂದಿನ ಸಹಕಾರ ವರ್ಷದಲ್ಲಿ] ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ;

(ಯು) ಸಹಕಾರಿಯ ಸಮಾಪನ; ಮತ್ತು

(ವಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ಅಂಥ ಇತರ ಪ್ರಕ್ರಿಯೆಗಳು.

ವಿಶೇಷ ಸಾಮಾನ್ಯ ಸಭೆಗಳು (ನಿಯಮ.6ಡಿ) :

1) ಈ ನಿಯಮಗಳ ನಿಯಮ 6ಸಿ ಯ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ವಿಶೇಷ ಸಾಮಾನ್ಯ ಸಭೆಗಳಿಗೆ ಅನ್ವಯವಾಗುತ್ತವೆ.

2) ತುರ್ತು ಪರಿಸ್ಥಿತಿ ಇದ್ದಲ್ಲಿ, ಕನಿಷ್ಠ ಹತ್ತು ಸ್ಪಷ್ಟ ದಿನಗಳ ನೋಟೀಸನ್ನು ನೀಡುವ ಮೂಲಕ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು, ಆದರೆ ಅಂಥ ಸಭೆಯಲ್ಲಿ ಅಜೆಂಡಾದಲ್ಲಿ ನಮೂದಿಸಿರುವ ಕಲಾಪದ ಹೊರತಾಗಿ ಯಾವುದೇ ವಿಷಯಗಳನ್ನು ಚರ್ಚಿಸಿ ನಿರ್ಣಯಿಸತಕ್ಕದ್ದಲ್ಲ."

ಆಡಳಿತ ಮಂಡಳಿಯ ಸಭೆಗಳು (ನಿಯಮ.6ಇ) :

1) "ಅಧಿನಿಯಮದ ಪ್ರಕರಣ 27 ಅಥವಾ ಈ ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ನಮೂದಿಸಿರುವ ಕಲಾಪವನ್ನು ನಿರ್ವಹಿಸಲು ಯಾವುದೇ ಸಹಕಾರಿಯ ಆಡಳಿತ ಮಂಡಳಿಯು ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಸಭೆ ನಡೆಸತಕ್ಕದ್ದು.

ಪರಂತು, ಒಂದು ಆಡಳಿತ ಮಂಡಳಿ ಸಭೆಗೂ ಮತ್ತು ಮುಂದಿನ ಮತ್ತೊಂದು ಆಡಳಿತ ಮಂಡಳಿ ಸಭೆಯ ಕಾಲಾವಧಿ ಯಾವುದೇ ಕಾರಣಕ್ಕೂ ಎರಡು ತಿಂಗಳು ಮೀರತಕ್ಕದ್ದಲ್ಲ.

2) ಮುಖ್ಯಕಾರ್ಯನಿರ್ವಾಹಕನು, ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿಯೊಡನೆ ಸಮಾಲೋಚಿಸಿ, ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ಕನಿಷ್ಠ ಏಳು ಸ್ಪಷ್ಟ ದಿನಗಳ ನೋಟೀಸನ್ನು ನೀಡುವುದರ ಮೂಲಕ ಆಡಳಿತ ಮಂಡಳಿ ಸಭೆಯನ್ನು ಕರೆಯತಕ್ಕದ್ದು. ಆದಾಗ್ಯೂ, ತುರ್ತು ಸಂದರ್ಭಗಳಲ್ಲಿ ಕನಿಷ್ಠ ಪಕ್ಷ ಮೂರು ಸ್ಪಷ್ಟ ದಿನಗಳ ನೋಟೀಸು ನೀಡುವುದರ ಮೂಲಕ ಆಡಳಿತ ಮಂಡಳಿ ಸಭೆಯನ್ನು ಕರೆಯಬಹುದು. ಅಂಥ ನೋಟೀಸನ್ನು ಈ ಕೆಳಗಿನ ವಿಧಾನದ ಮೂಲಕ ಕಳುಹಿಸಬಹುದು.

(ಎ) ಅಂಚೆ ಮತ್ತು ವಿದ್ಯುನ್ಮಾನ ಅಂಚೆ (ಇ–ಮೇಲ್); ಅಥವಾ

(ಬಿ) ತ್ವರಿತ ಅಂಚೆ; ಅಥವಾ

(ಸಿ) ಕೋರಿಯರ್; ಅಥವಾ

(ಸಿ) ಸೂಕ್ತ ಸ್ವೀಕೃತಿಯ ಸಹಿತ ಸ್ಥಳೀಯ ತಲುಪಿಸುವಿಕೆ.

(3) ಸಭಾ ನೋಟೀಸಿನಲ್ಲಿ ಸಭೆಯ ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಮುಖ್ಯಕಾರ್ಯನಿರ್ವಾಹಕನು ಅಜೆಂಡಾದಲ್ಲಿ ಪ್ರತಿ ವಿಷಯದ ಮೇಲೆ ಅದರ ಸಾಧಕ–ಬಾಧಕ, ಅನ್ವಯವಾಗುವ ಕಾನೂನಿನ ಉಪಬಂಧ ಮತ್ತು

ಆರ್ಥಿಕ ಪರಿಣಾಮಗಳನ್ನೊಳಗೊಂಡ ವಿವರವಾದ ಟಿಪ್ಪಣಿಗಳನ್ನು ಅಂಥ ನೋಟೀಸಿನ ಜೊತೆಯಲ್ಲಿ ಕಳುಹಿಸತಕ್ಕದ್ದು.

(4) ಉಪವಿಧಿಗಳಲ್ಲಿ ನಮೂದಿಸಿರುವಂತೆ ಆಡಳಿತ ಮಂಡಳಿಯ ಸಂಖ್ಯಾ ಬಲದ ಶೇಕಡಾ 50ರ ನಂತರದ ಪೂರ್ಣ ಸಂಖ್ಯೆಯು ಆಡಳಿತ ಮಂಡಳಿಯ ಸಭೆಯ ಕೋರಂ ಆಗಿರತಕ್ಕದ್ದು. ಯಾವುದೇ ಆಡಳಿತ ಮಂಡಳಿಯ ಸಭೆಯಲ್ಲಿ ಯಾವುದೇ ಕಲಾಪಗಳ ನಿರ್ವಹಣೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಕಲಾಪವನ್ನು ನಿರ್ವಹಿಸತಕ್ಕದ್ದಲ್ಲ.

(5) ನಿಯಮ 6ಸಿ ಯ ಉಪನಿಯಮ (7) ರಿಂದ (10) ಮತ್ತು ಉಪನಿಯಮ (16)ರ ಉಪಬಂಧಗಳು ಆಡಳಿತ ಮಂಡಳಿಯ ಸಭೆಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(6) ಸಾಮಾನ್ಯವಾಗಿ ಅಜೆಂಡಾದಲ್ಲಿ ನಮೂದಿಸಿರುವ ವಿಷಯಗಳನ್ನು ಹೊರತು ಪಡಿಸಿ ಬೇರೆ ಯಾವುದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ. ಆದಾಗ್ಯೂ ಆಡಳಿತ ಮಂಡಳಿಯ ಮುಂದಿನ ಸಭೆಯಲ್ಲಿ ಯಾವುದೇ ವಿಷಯದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳಲು ಸಾಕಷ್ಟು ಸಮಯವಿಲ್ಲದಿದ್ದ ಪಕ್ಷದಲ್ಲಿ, ಎಲ್ಲಾ ನಿರ್ದೇಶಕರಿಗೆ ಅಂಥ ವಿಷಯದ ಮೇಲೆ ಅವಶ್ಯವಾದ ಟಿಪ್ಪಣಿಗಳನ್ನು ಒದಗಿಸಿದ ನಂತರ, ಹಾಗೂ ಅಜೆಂಡಾದಲ್ಲಿನ ಎಲ್ಲಾ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಿದ ನಂತರ ಸಭಾಪತಿಯ ಅನುಮತಿ ಮೇರೆಗೆ ಅಂಥ ವಿಷಯವನ್ನು ಹೆಚ್ಚುವರಿ ವಿಷಯವನ್ನಾಗಿ ಚರ್ಚೆ ಮತ್ತು ತೀರ್ಮಾನಕ್ಕೆ ತೆಗೆದುಕೊಳ್ಳಬಹುದು.

ಪರಂತು, ಕೆಳಕಂಡ ವಿಷಯಗಳನ್ನು ಹೆಚ್ಚುವರಿ ವಿಷಯವನ್ನಾಗಿ ಚರ್ಚೆಗೆ ಮತ್ತು ತೀರ್ಮಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(ಎ) ನಿರ್ದೇಶಕರುಗಳ ಚುನಾವಣೆ;

(ಬಿ) ಪದಾಧಿಕಾರಿಗಳ ಚುನಾವಣೆ;

(ಸಿ) ವೃತ್ತಿಪರ ನಿರ್ದೇಶಕನ ಹುದ್ದೆಗೆ ಸಹಮತದಿಂದ ಭರ್ತಿ ಮಾಡಿಕೊಳ್ಳುವುದು;

(ಡಿ) ಆಕಸ್ಮಿಕ ಖಾಲಿ ಸ್ಥಾನದ ನಿರ್ದೇಶಕನ ಹುದ್ದೆಗೆ ಸಹಮತದಿಂದ ಭರ್ತಿ ಮಾಡಿಕೊಳ್ಳುವುದು;

(ಇ) ನೌಕರರುಗಳ ವಿರುದ್ಧ ಶಿಸ್ತಿನ ವಿಚಾರಣಾ ವರದಿ ಮೇಲೆ ಕ್ರಮ; ಮತ್ತು

(ಎಫ್) ಆರ್ಥಿಕ ಪರಿಣಾಮಗಳನ್ನೊಳಗೊಂಡ ಯಾವುದೇ ವಿಷಯ;

ಮತ್ತು ಪರಂತು, ಹೆಚ್ಚುವರಿ ವಿಷಯಗಳಿಗೆ ಸೂಕ್ತ ವಿಷಯವಾರು ಟಿಪ್ಪಣಿ ನೀಡದೆ,

ತೀರ್ಮಾನ ಕೈಗೊಳ್ಳಬಾರದು.

(7) ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ವಿರುದ್ದವಾಗಿ ಅಥವಾ ಸಹಕಾರಿಯ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ತೀರ್ಮಾನವನ್ನು ಆಡಳಿತ ಮಂಡಳಿಯು ತೆಗೆದುಕೊಳ್ಳತಕ್ಕದ್ದಲ್ಲ. ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ವಿರುದ್ದವಾಗಿ ಅಥವಾ ಸಹಕಾರಿಯ ಹಿತಾಸಕ್ತಿಗೆ ಧಕ್ಕೆ ತರುವಂತಹ ಯಾವುದೇ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅಂತಹ ತೀರ್ಮಾನಕ್ಕೆ ಆಡಳಿತ ಮಂಡಳಿಯ ನಿರ್ದೇಶಕರುಗಳು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗತಕ್ಕದ್ದು.

(8) ಮುಖ್ಯ ಕಾರ್ಯನಿರ್ವಾಹಕನು ಸಭೆಯ ನಡವಳಿಗಳನ್ನು ಚರ್ಚೆಗಳನುಸಾರ ಸ್ಪಷ್ಟವಾಗಿ ಮತ್ತು ನಿಖರವಾಗಿ ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಯಾವುದೇ ನಿರ್ದೇಶಕನು ಯಾವುದೇ ವಿಷಯದ ಚರ್ಚೆಯಲ್ಲಿ ಭಾಗವಹಿಸಿ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದಾಗ, ಮುಖ್ಯ ಕಾರ್ಯನಿರ್ವಾಹಕನು ಅದನ್ನು ಚರ್ಚೆಯನುಸಾರ ಸ್ಪಷ್ಟವಾಗಿ ಮತ್ತು ನಿಖರವಾಗಿ ನಡವಳಿಗಳಲ್ಲಿ ದಾಖಲಿಸತಕ್ಕದ್ದು. ಸದರಿ ಪುಸ್ತಕದ ಪ್ರತಿ ಪುಟದಲ್ಲಿ ಸಣ್ಣ ರುಜು ಮಾಡತಕ್ಕದ್ದು ಅಥವಾ ಸಹಿ ಮಾಡತಕ್ಕದ್ದು ಮತ್ತು ನಡವಳಿ ಪುಸ್ತಕದಲ್ಲಿ ಪ್ರತಿ ಸಭೆಯ ನಡವಳಿಯನ್ನು ದಾಖಲಿಸಿದ ಕೊನೆಯ ಪುಟದಲ್ಲಿ ದಿನಾಂಕವನ್ನು ನಮೂದಿಸಿ ಮುಖ್ಯಕಾರ್ಯನಿರ್ವಾಹಕನು ಮತ್ತು ಸಭಾಪತಿಯು ಸಹಿ ಮಾಡತಕ್ಕದ್ದು. ಸಭೆಯ ನಡವಳಿಗಳು ಸಭೆಯಲ್ಲಿನ ಚರ್ಚೆಗಳ ನಿಖರವಾಗಿ ಮತ್ತು ಯುಕ್ತವಾದ ಸಂಗ್ರಹವನ್ನು ಒಳಗೊಂಡಿರತಕ್ಕದ್ದು. ಸಭೆಯ ನಡವಳಿಗಳಲ್ಲಿ ಸಭೆಯಲ್ಲಿ ಭಾಗವಹಿಸಿದ್ದ ನಿರ್ದೇಶಕರುಗಳ ಹೆಸರುಗಳನ್ನು ಒಳಗೊಂಡಿರತಕ್ಕದ್ದು ಮತ್ತು ಸಭೆಯಲ್ಲಿ ತೆಗೆದುಕೊಂಡ ಪ್ರತಿ ನಿರ್ಣಯಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿರುವ ನಿರ್ದೇಶಕರುಗಳಿದ್ದಲ್ಲಿ ಅವರ ಹೆಸರುಗಳನ್ನು ಒಳಗೊಂಡಿರತಕ್ಕದ್ದು. ಹಾಗೇ ದಾಖಲಿಸಿ ಸಹಿ ಮಾಡಿದ ನಡವಳಿಗಳನ್ನು ಸಭೆಯು ನಡೆದ ಏಳು ದಿನಗಳೊಳಗೆ ಎಲ್ಲಾ ನಿರ್ದೇಶಕರುಗಳಿಗೆ ಕಳುಹಿಸತಕ್ಕದ್ದು.

(9) ಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ತೆಗೆದುಕೊಂಡಂತೆ ತೀರ್ಮಾನವನ್ನು ದಾಖಲಿಸಿಲ್ಲವೆಂಬ ಅಥವಾ ಸಭೆಯಲ್ಲಿ ಆ ವಿಷಯವನ್ನು ಚರ್ಚಿಸಿಲ್ಲವೆಂಬ ಕಾರಣದ ಮೇಲೆ ಯಾವುದೇ ನಿರ್ದೇಶಕನಿಗೆ ಯಾವುದೇ ವಿಷಯದ ಮೇಲಿನ ತೀರ್ಮಾನವನ್ನು ದಾಖಲಿಸುವ ಸಂಬಂಧದಲ್ಲಿ ಆಕ್ಷೇಪಣೆ ಇದ್ದಲ್ಲಿ, ಆತನು ಸಭೆಯ ನಡವಳಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ದಿವಸಗಳೊಳಗೆ ತನ್ನ ಅಭಿಪ್ರಾಯವನ್ನು ತಿಳಿಸತಕ್ಕದ್ದು. ಯಾವುದೇ ತೀರ್ಮಾನದ ಮೇಲೆ ಬಹುಸಂಖ್ಯಾ ಸದಸ್ಯರು ಅಂಥ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಲ್ಲಿ ಅಂಥ ತೀರ್ಮಾನವನ್ನು ಮುಖ್ಯ ಕಾರ್ಯನಿರ್ವಾಹಕನು ಜಾರಿಗೊಳಿಸತಕ್ಕದ್ದಲ್ಲ. ಆದರೆ ಅದನ್ನು ಆಡಳಿತ ಮಂಡಳಿಯ ತರುವಾಯದ ಸಭೆಯಲ್ಲಿ ಇಡತಕ್ಕದ್ದು.

(10) ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಆಡಳಿತ ಮಂಡಳಿ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿದ್ದ ನಿರ್ದೇಶಕರಿಂದ ಚುನಾಯಿತನಾದ ಆಡಳಿತ ಮಂಡಳಿ ಇತರ ಸದಸ್ಯನೊಬ್ಬನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(11) ಯಾವುದೇ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಅಥವಾ ಆಡಳಿತ ಮಂಡಳಿಯ ಸಭೆಯಲ್ಲಿ ಇನ್ನೊಂದು ಸಹಕಾರಿಯನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಅಂಥ ಇನ್ನೊಂದು ಸಹಕಾರಿಯ ಆಡಳಿತ ಮಂಡಳಿಯ ಪ್ರಾಧಿಕೃತನಾದ ಅದರ ಅಧ್ಯಕ್ಷ ಅಥವಾ ಆಡಳಿತ ಮಂಡಳಿಯ ಸದಸ್ಯನ ಮೂಲಕ ಮಾತ್ರ ಅಂಥ ಸಹಕಾರಿಯು ಪ್ರತಿನಿಧಿಸಲ್ಪಡತಕ್ಕದ್ದು. ಅಂಥ ಇನ್ನೊಂದು ಸಹಕಾರಿಯಲ್ಲಿ ಯಾವುದೇ ಕಾರಣಕ್ಕಾಗಿ ಆಡಳಿತ ಮಂಡಳಿಯು ಇಲ್ಲದಿದ್ದ ಪಕ್ಷದಲ್ಲಿ ಅದರ ಆಡಳಿತಗಾರ ಅಥವಾ ವಿಶೇಷಾಧಿಕಾರಿಯ ಮೂಲಕ ಪ್ರತಿನಿಧಿಸಲ್ಪಡತಕ್ಕದ್ದು."

ಸಾಮಾನ್ಯ ಸಭೆಗಳು (ನಿಯಮ.6ಸಿ) :

1) "ಒಂದು ಸಹಕಾರಿಯ ಆಡಳಿತ ಮಂಡಳಿಯು ಅಧಿನಿಯಮದಲ್ಲಿ ನಿರ್ದಿಷ್ಟ ಪಡಿಸಲಾದ ಸಂದರ್ಭದಲ್ಲಿ ತನ್ನ ಸದಸ್ಯರ ಸಾಮಾನ್ಯ ಸಭೆಯನ್ನು ಕರೆಯಬಹುದು.

ಪರಂತು ಪ್ರಕರಣ 23ರಲ್ಲಿ ಉಕ್ತವಾದ ಕಲಾಪವನ್ನು ನಿರ್ವಹಿಸಲು ಪ್ರತಿ ವರ್ಷ ಸೆಪ್ಟಂಬರ್ ಇಪ್ಪತ್ತೆದನೇ ದಿನಾಂಕದೊಳಗೆ ವಾರ್ಷಿಕ ಸಾಮಾನ್ಯ ಸಭೆ ಎಂದು ಕರೆಯಲ್ಪಡುವ ಒಂದು ಅಂಥ ಸಭೆಯನ್ನು ಕರೆಯತಕ್ಕದ್ದು.

2) ಆಡಳಿತ ಮಂಡಳಿಯು ಸಾಮಾನ್ಯ ಸಭೆಯ ದಿನಾಂಕ ಮತ್ತು ಸಮಯವನ್ನು ನಿರ್ಧರಿಸಿದ ನಂತರ, ಮುಖ್ಯಕಾರ್ಯನಿರ್ವಾಹಕನು ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ ಕನಿಷ್ಠ ಇಪ್ಪತ್ತು ದಿನಗಳ ಮೊದಲು ಅಥವಾ ಇತರ ಸಂದರ್ಭದಲ್ಲಿ ಕನಿಷ್ಠ ಹದಿನೈದು ಸ್ಪಷ್ಟ ದಿನಗಳ ನೋಟೀಸನ್ನು ನೀಡುವುದರ ಮೂಲಕ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಆದಾಗ್ಯೂ, ತುರ್ತು ಸಂದರ್ಭಗಳಲ್ಲಿ ಕನಿಷ್ಠ ಪಕ್ಷ ಹತ್ತು ಸ್ಪಷ್ಟ ದಿನಗಳ ನೋಟೀಸು ನೀಡುವುದರ ಮೂಲಕ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು. ಅಂಥ ನೋಟೀಸನ್ನು ಈ ಕೆಳಗಿನ ವಿಧಾನದ ಮೂಲಕ ಕಳುಹಿಸಬಹುದು.

(i) (ಎ) ಸಾಮಾನ್ಯ ಅಂಚೆ [ಅಥವಾ ಸ್ವೀಕೃತಿಯೊಂದಿಗೆ ಬಹುಪ್ರಮಾಣದ ಅಂಚೆ (Bulk post)]; ಅಥವಾ

(ಬಿ) ವಿದ್ಯುನ್ಮಾನ ಅಂಚೆ (ಇ–ಮೇಲ್); ಅಥವಾ

(ಸಿ) ಸೂಕ್ತ ಸ್ವೀಕೃತಿಯೊಂದಿಗೆ ಸ್ಥಳೀಯವಾಗಿ ತಲುಪಿಸುವ ಮೂಲಕ; ಮತ್ತು

(ii) ಕಾರ್ಯಕ್ಷೇತ್ರದಲ್ಲಿ ಹೆಚ್ಚು ಪರಿಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಸಂಕ್ಷಿಪ್ತವಾಗಿ ಪ್ರಕಟಿಸುವ ಮೂಲಕ.

3) ಪ್ರಕರಣ 30ರ ಉಪಪ್ರಕರಣ (2)ರಡಿ ಸಂಯುಕ್ತ ಸಹಕಾರಿಯು ಒಂದು ವಿಶೇಷ ಸಾಮಾನ್ಯ ಸಭೆಯನ್ನು ಕರೆದಾಗ, ಅದು:–

(i) ಪ್ರಸಂಗಾನುಸಾರ 10 ಸ್ಪಷ್ಟ ದಿನಗಳೊಳಗೆ ಕಡಿಮೆ ಇಲ್ಲದ ಅವಧಿಗೆ ಅಂಥ ಸಭೆಯ ನೋಟೀಸಿನ ಅವಧಿಯನ್ನು;

(ii) ಅಂಥ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ; ಮತ್ತು

(iii) ಅಂಥ ಸಭೆಯಲ್ಲಿ ಪರಿಗಣಿಸಬೇಕಾದ ವಿಷಯಗಳ ಬಗ್ಗೆ ನಿರ್ಧರಿಸಬಹುದು. ಸಂಯುಕ್ತ ಸಹಕಾರಿಯಿಂದ ನಿಯೋಜಿತನಾದ ಒಬ್ಬ ಅಧಿಕಾರಿಯು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಬಹುದು.

4) ಪ್ರಕರಣ 30ರ ಉಪಪ್ರಕರಣ (3)ರಡಿ ರಿಜಿಸ್ಟ್ರಾರನು ಒಂದು ವಿಶೇಷ ಸಾಮಾನ್ಯ ಸಭೆಯನ್ನು ಕರೆದಾಗ, ಆತನು:–

(i) ಪ್ರಸಂಗಾನುಸಾರ ಹತ್ತು ಸ್ಪಷ್ಟ ದಿನಗಳೊಳಗೆ ಕಡಿಮೆ ಇಲ್ಲದ ಅವಧಿಗೆ ಅಂಥ ಸಭೆಯ ನೋಟೀಸಿನ ಅವಧಿಯನ್ನು;

(ii) ಅಂಥ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ; ಮತ್ತು

(iii) ಅಂಥ ಸಭೆಯಲ್ಲಿ ಪರಿಗಣಿಸಬೇಕಾದ ವಿಷಯಗಳ ಬಗ್ಗೆ ನಿರ್ಧರಿಸಬಹುದು. ರಿಜಿಸ್ಟ್ರಾರನು ಅಥವಾ ಅವನಿಂದ ನಿಯೋಜಿತನಾದ ಒಬ್ಬ ಅಧಿಕಾರಿಯು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸಬಹುದು.

5) ಸಾಮಾನ್ಯ ಸಭೆಯ ನೋಟೀಸಿನಲ್ಲಿ ಸಭೆಯ ಸ್ಥಳ, ದಿನಾಂಕ, ಸಮಯ ಮತ್ತು ಅಜೆಂಡಾಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಮುಖ್ಯಕಾರ್ಯನಿರ್ವಾಹಕನು ಅಜೆಂಡಾದಲ್ಲಿ ಪ್ರತಿ ವಿಷಯದ ಮೇಲೆ ಸಂಕ್ಷಿಪ್ತವಾದ ಟಿಪ್ಪಣಿಗಳನ್ನು, ಹಿಂದಿನ ವರ್ಷದ ಲೆಕ್ಕಪರಿಶೋಧಿತ ಆಸ್ತಿ ಹೊಣೆ ಪಟ್ಟಿ, ಲಾಭ-ನಷ್ಟ ತಃಖ್ತೆ ಮತ್ತು ಲೆಕ್ಕ ಪರಿಶೋಧನಾ ವರದಿಯ ಮುಖ್ಯ ಸಾರಾಂಶಗಳನ್ನು, ಅದರ ಮೇಲೆ ಆಡಳಿತ ಮಂಡಳಿಯು ತೆಗೆದುಕೊಂಡ ಕ್ರಮಗಳ ಸಂಕ್ಷಿಪ್ತ ಅನುಸರಣಾ ವರದಿಯ ಸಹಿತ ಸಾಮಾನ್ಯ ಸಭೆಯ ನೋಟೀಸಿನ ಜೊತೆ ಕಳುಹಿಸತಕ್ಕದ್ದು. ಒಂದು ವೇಳೆ ಬೈಲಾ ತಿದ್ದುಪಡಿಯ ಪ್ರಸ್ತಾವವಿದ್ದಲ್ಲಿ, ಅಂತಹ ಪ್ರಸ್ತಾವವನ್ನು ಪ್ರಸ್ತಾಪಿತ ತಿದ್ದುಪಡಿಯ ಪಾಠ ಸಹಿತ ಸಭಾ ನೋಟೀಸಿನ ಜೊತೆ ಕಳುಹಿಸತಕ್ಕದ್ದು. ಆದಾಗ್ಯೂ ಮುಖ್ಯಕಾರ್ಯ ನಿರ್ವಾಹಕನು ಕಛೇರಿಯಲ್ಲಿಯೂ ಸಹ ಅಜೆಂಡಾದಲ್ಲಿನ ಎಲ್ಲಾ ವಿಷಯಗಳ ಮೇಲೆ ವಿವರವಾದ ಟಿಪ್ಪಣಿಗಳನ್ನು ಮತ್ತು ಹಿಂದಿನ ವರ್ಷದ ಪೂರ್ಣ ಲೆಕ್ಕಪರಿಶೋಧನಾ ವರದಿಯನ್ನು ಅಪೇಕ್ಷೆಯುಳ್ಳ ಸದಸ್ಯರಿಗೆ ಒದಗಿಸತಕ್ಕದ್ದು.

6) ಸಹಕಾರಿಯ ಮತದಾನದ ಹಕ್ಕುಳ್ಳ ಒಟ್ಟು ಸದಸ್ಯರ ಐದನೇ ಒಂದು ಭಾಗದಷ್ಟು ಸದಸ್ಯರ ಹಾಜರಾತಿಯು ಸಾಮಾನ್ಯ ಸಭೆಯ ಕೋರಂ ಆಗಿರತಕ್ಕದ್ದು. ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪವನ್ನು ನಿರ್ವಹಿಸುವ ಸಮಯದಲ್ಲಿ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಕಲಾಪವನ್ನು ನಡೆಸತಕ್ಕದ್ದಲ್ಲ.

7) ಸಭೆಗೆ ಗೊತ್ತು ಪಡಿಸಿದ ಸಮಯದಿಂದ ಒಂದು ಗಂಟೆಯೊಳಗೆ ಕೋರಂ ಇಲ್ಲದ ಪಕ್ಷದಲ್ಲಿ ಅಂಥ ಸಭೆಯನ್ನು ಮುಂದೂಡತಕ್ಕದ್ದು.

ಪರಂತು, ಅಂಥ ಸಭೆಯನ್ನು ಸದಸ್ಯರುಗಳ ಕೋರಿಕೆ ಮೇರೆಗೆ ಕರೆದಿದ್ದರೆ ಅದನ್ನು ಮುಂದೂಡತಕ್ಕದ್ದಲ್ಲ ಆದರೆ ವಿಸರ್ಜಿಸತಕ್ಕದ್ದು.

8) ಸಭೆಯಲ್ಲಿ ಕಲಾಪವನ್ನು ನಡೆಸುತ್ತಿರುವಾಗ ಯಾವುದೇ ಸಂದರ್ಭದಲ್ಲಿ ಕೋರಂ ಆಗಲು ಅಗತ್ಯವಿರುವ ಸಾಕಷ್ಟು ಸಂಖ್ಯೆಯ ಸದಸ್ಯರು ಹಾಜರಿಲ್ಲದಿದ್ದಲ್ಲಿ ಅಂಥ ಕಲಾಪವನ್ನು ನಡೆಸತಕ್ಕದ್ದಲ್ಲ. ಅಧ್ಯಕ್ಷನು ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸುವ ವಹಿಸಿರುವ ಸದಸ್ಯನು, ತಾನಾಗಿಯೇ ಅಥವಾ ಈ ಸಂಗತಿಯನ್ನು ಅವನ ಗಮನಕ್ಕೆ ತಂದಾಗ ಸಭೆಯನ್ನು ಮುಂದೂಡತಕ್ಕದ್ದು ಮತ್ತು ಹಾಗೇ ಮುಂದೂಡಲ್ಪಟ್ಟ ಸಭೆಯಲ್ಲಿ ಇತ್ಯರ್ಥವಾಗಲು ಬಾಕಿ ಉಳಿದ ಕಲಾಪವನ್ನು ಮುಂದುವರೆದ ಸಭೆಯಲ್ಲಿ ಸಾಮಾನ್ಯ ರೀತಿಯಲ್ಲಿ ನಿರ್ವಹಿಸತಕ್ಕದ್ದು.

9) ಉಪನಿಯಮ (7) ಅಥವಾ ಉಪನಿಯಮ (8) ರಡಿಯಲ್ಲಾಗಲೀ ಸಭೆಯು ಮುಂದೂಡಲ್ಪಟ್ಟಾಗ, ಮುಂದುವರೆದ ಸಭೆಯು ಅದೇ ದಿನಾಂಕದಂದು ಅಥವಾ ಮುಂದೂಡಿದ ದಿನಾಂಕದಿಂದ ಏಳು ದಿನಗಳೊಳಗೆ ಸಭೆಯ ಅಧ್ಯಕ್ಷನು ಗೊತ್ತು ಪಡಿಸಿದ ಅಂಥ ಸ್ಥಳದಲ್ಲಿ, ಅಂಥ ದಿನಾಂಕ ಮತ್ತು ಸಮಯದಲ್ಲಿ ನಡೆಯತಕ್ಕದ್ದು.

ಅಂಥ ಮುಂದುವರೆದ ಸಭೆಯಲ್ಲಿ ಮುಂದೂಡಲ್ಪಟ್ಟ ಸಭೆಯ ಅಜೆಂಡಾದಲ್ಲಿ ನಮೂದಿಸಿರುವ ವಿಷಯಗಳನ್ನು ಹೊರತು ಪಡಿಸಿ ಬೇರೆ ಯಾವುದೇ ವಿಷಯವನ್ನು ಚರ್ಚಿಸತಕ್ಕದ್ದಲ್ಲ ಮತ್ತು ನಿರ್ಣಯ ತೆಗೆದುಕೊಳ್ಳತಕ್ಕದ್ದಲ್ಲ. ಮುಂದುವರೆದ ಸಭೆಗೂ ಸಹ ವಿಷಯಗಳನ್ನು ಪರಿಗಣಿಸಲು ಅಗತ್ಯವಿರುವ ಕೋರಂ ಇರತಕ್ಕದ್ದು.

10) ಕೋರಂ ಕೊರತೆಯಿಂದ ಹಾಗೆ ಮುಂದೂಡಲ್ಪಟ್ಟ ಸಭೆಯಲ್ಲಿ ಪರಿಗಣಿಸಲಾಗದ ಕಲಾಪವನ್ನು ಕೋರಂವುಳ್ಳ ಮುಂದುವರೆದ ಸಭೆಯಲ್ಲಿ ಅಥವಾ ಯಾವುದೇ ತರುವಾಯದ ಮುಂದುವರೆದ ಸಭೆಯಲ್ಲಿ ಮಂಡಿಸತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು.

11) ಅಧಿನಿಯಮ, ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸದ ಹೊರತು, ಸಾಮಾನ್ಯ ಸಭೆಯಲ್ಲಿ ಎಲ್ಲಾ ತೀರ್ಮಾನಗಳನ್ನು ಸರಳ ಬಹುಮತದ ಹಾಜರಿರುವ ಸದಸ್ಯರು ತೆಗೆದುಕೊಳ್ಳತಕ್ಕದ್ದು. ಚುನಾವಣೆಯನ್ನು ಹೊರತು ಪಡಿಸಿ ಯಾವುದೇ ವಿಷಯದ ಮೇಲೆ ತೀರ್ಮಾನದ ಪರ ಅಥವಾ ವಿರುದ್ಧ ಸಮಾನ ಮತಗಳು ದೊರೆತರೆ ಸಭಾಪತಿಯು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

12) ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಸಾಮಾನ್ಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಉಪಾಧ್ಯಕ್ಷನು ಅಥವಾ ಅವನ ಗೈರು

ಹಾಜರಿಯಲ್ಲಿ ಹಾಜರಿದ್ದ ನಿರ್ದೇಶಕರಿಂದ ಚುನಾಯಿತನಾದ ಆಡಳಿತ ಮಂಡಳಿ ಇತರ ಸದಸ್ಯನೊಬ್ಬನು ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

13) ಮುಖ್ಯಕಾರ್ಯನಿರ್ವಾಹಕನು ಸಭೆಯ ನಡವಳಿಗಳನ್ನು ಚರ್ಚೆಗಳನುಸಾರ ಸ್ಪಷ್ಟವಾಗಿ ಮತ್ತು ನಿಖರವಾಗಿ ಅದೇ ಉದ್ದೇಶಕ್ಕಾಗಿ ಇಡಲ್ಪಟ್ಟ ಮತ್ತು ಅದರ ಪುಟಗಳನ್ನು ಅನುಕ್ರಮವಾಗಿ ಸಂಖ್ಯೀಕರಿಸಿದ ಪುಸ್ತಕದಲ್ಲಿ ದಾಖಲಿಸತಕ್ಕದ್ದು. ಯಾವುದೇ ಸದಸ್ಯನು ಯಾವುದೇ ವಿಷಯದಲ್ಲಿ ಚರ್ಚೆಯಲ್ಲಿ ಭಾಗವಹಿಸಿ ತನ್ನ ಅಸಮ್ಮತಿ ವ್ಯಕ್ತಪಡಿಸಿದಾಗ ಅದನ್ನೂ ಸಹ ಯಥಾವತ್ತಾಗಿ ದಾಖಲಿಸತಕ್ಕದ್ದು. ಸದರಿ ಪುಸ್ತಕದ ಪ್ರತಿ ಪುಟದಲ್ಲಿ ಸಣ್ಣ ರುಜು ಮಾಡತಕ್ಕದ್ದು ಅಥವಾ ಸಹಿ ಮಾಡತಕ್ಕದ್ದು ಮತ್ತು ನಡವಳಿ ಪುಸ್ತಕದಲ್ಲಿ ಪ್ರತಿ ಸಭೆಯ ನಡವಳಿಯನ್ನು ದಾಖಲಿಸಿದ ಕೊನೆಯ ಪುಟದಲ್ಲಿ ದಿನಾಂಕವನ್ನು ನಮೂದಿಸಿ ಮುಖ್ಯ ಕಾರ್ಯನಿರ್ವಾಹಕನು ಮತ್ತು ಸಭಾಪತಿಯು ಸಹಿ ಮಾಡತಕ್ಕದ್ದು. ಸಭೆಯ ನಡವಳಿಗಳು ಸಭೆಯಲ್ಲಿನ ಚರ್ಚೆಗಳ ನಿಖರವಾದ ಮತ್ತು ಯುಕ್ತವಾದ ಸಂಗ್ರಹವನ್ನು ಒಳಗೊಂಡಿರತಕ್ಕದ್ದು.

14) ಮುಖ್ಯಕಾರ್ಯನಿರ್ವಾಹಕನು ಅಂಥ ಸಭೆಯು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಡವಳಿಗಳ ದೃಢೀಕೃತ ಪ್ರತಿಯನ್ನು ರಿಜಿಸ್ಟ್ರಾರನಿಗೆ, ಸಂಯುಕ್ತ ಸಹಕಾರಿಗೆ, ಸಂಬಂಧಪಟ್ಟ ಹಣಕಾಸು ಬ್ಯಾಂಕಿಗೆ, ಸಂಬಂಧಪಟ್ಟ ಕ್ರೆಡಿಟ್ ಏಜೆನ್ಸಿಗೆ ಕಳುಹಿಸತಕ್ಕದ್ದು ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ದೃಢೀಕೃತ ಪ್ರತಿಯನ್ನು ಪ್ರಕಟಿಸತಕ್ಕದ್ದು.

15) ಯಾವುದೇ ಸಭೆಯ ನಡವಳಿಗಳನ್ನುಳ್ಳ ಪುಸ್ತಕಗಳನ್ನು, –

(ಎ) ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಇಡತಕ್ಕದ್ದು;

(ಬಿ) ಸಹಕಾರಿಯ ಕೆಲಸದ ವೇಳೆಯಲ್ಲಿ ಯಾವುದೇ ಸದಸ್ಯನು ಪರಿಶೀಲಿಸಲು ಅವಕಾಶವಿರತಕ್ಕದ್ದು."

ಖ ಆಡಳಿತ ಮಂಡಳಿ ಸಭೆಗಳು

ಪ್ರತಿಯೊಂದು ಸಹಕಾರಿಯ ತನ್ನ ಆಡಳಿತ ಮಂಡಳಿ ಸಭೆಯನ್ನು ಕನಿಷ್ಠ ಎರಡು ತಿಂಗಳಿಗೊಮ್ಮೆ ಯಾದರೂ ಕರೆಯತಕ್ಕದ್ದು.ಅಂದರೆ ವರ್ಷದಲ್ಲಿ ಆರು ಆಡಳಿತ ಮಂಡಳಿ ಸಭೆಯನ್ನು ಕರೆಯತಕ್ಕದ್ದು. ಸಹಕಾರಿಯ ಉಪವಿಧಿಗಳಲ್ಲಿ ತಿಂಗಳಿಗೊಮ್ಮೆ ಮಂಡಳಿ ಸಭೆ ಕರೆಯಬೇಕೆಂದಿದ್ದರೆ. ಆ ಉಪವಿಧಿಗಳಂತೆ ಸಭೆಗಳನ್ನು ಕರೆಯತಕ್ಕದ್ದು.

**ಯಾರು ಕರೆಯಬೇಕು :**

ಸಹಕಾರಿಯ ಉಪವಿಧಿಗಳಲ್ಲಿ ಸಭೆಗಳನ್ನು ಕರೆಯುವ ಅವಧಿ ನಿಗದಿ ಪಡಿಸಿರತಕ್ಕದ್ದು.ಅದರಲ್ಲಿ ತಿಂಗಳಿಗೊಮ್ಮೆ ಎಂದಿದ್ದರೆ, ಅದೇ ಉಪವಿಧಿಗಳನ್ನು ಸಭೆ ಕರೆಯುವ ಅಧಿಕಾರ ಮತ್ತು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ನೀಡಿರಬೇಕು. ಕಾಯಿದೆ ಕಲಂ.31(2) (ಜಿ) ಅಡಿ ಮಂಡಳಿ ಸಭೆಗಳನ್ನು ಕರೆಯುವುದಕ್ಕೆ ನೆರವು ನೀಡತಕ್ಕದ್ದು ಎಂದಿದ್ದರೂ, ಇಂತಹ ಸಭೆ ಕರೆಯುವ ಜವಾಬ್ದಾರಿ ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕನಿಗೆಇರತಕ್ಕದ್ದು. ಆದರೆ ಮಂಡಳಿ ಅಧ್ಯಕ್ಷರ ಜೊತೆ ಸಮಾಲೋಚಿಸಿ ದಿನಾಂಕವನ್ನು ನಿಗದಿ ಪಡಿಸತಕ್ಕದ್ದು. ಆದರೆ ಕೆಲವು ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಸಭೆ ಕರೆಯಲು ದಿನಾಂಕ ನೀಡಲು ನಿರಾಕರಿಸಿದರೂ, ಕಾಯಿದೆ ಕಲಂ.30(1) ರನ್ನು ಒಂದು ಅಥವಾ ಎರಡು ತಿಂಗಳಿಗೊಮ್ಮೆ ಕರೆಯಲೇ ಬೇಕೆಂದಿರುವುದರಿಂದ, ಉಪವಿಧಿಗಳು ತಿಂಗಳಿಗೊಮ್ಮೆ ಎಂದಿದ್ದರೂ, ಕಾಯಿದೆಯನ್ನು ಪಾಲಿಸಲೇ ಬೇಕಾಗಿದ್ದರಿಂದ ಮುಖ್ಯ ಕಾರ್ಯನಿರ್ವಾಹಕ, ಕರೆಯುವ ವ್ಯವಸ್ಥೆ ಮಾಡಬೇಕು.

**ಸಭೆಗಳನ್ನು ಏಕೆ ಕರೆಯಬೇಕು :**

ಸಹಕಾರಿಯ ವ್ಯವಹಾರ ಮಾಡುವಾಗ, ಉಪವಿಧಿಗಳಲ್ಲಿಕಾರ್ಯಾಂಗಕ್ಕೆ ನೀಡಿದ ಅಧಿಕಾರ ಮೀರಿ ಸೇವೆಗಳನ್ನು ನೀಡಬೇಕಾದರೆ, ಮುಖ್ಯಕಾರ್ಯನಿರ್ವಾಹಕ, ಅದಕ್ಕೆ ಪೂರಕವಾದ ವಿಷಯವನ್ನು ಮಂಡಳಿಗೆ ಮಂಡಿಸಿ ನೀತಿ ರೂಪಿಸಲು ವಿಷಯ ಮಂಡಿಸಬೇಕು. ಪ್ರತಿ ಮಂಡಳಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಕಾಯಿದೆ ಕಲಂ.27ರಲ್ಲಿ ನಿಗದಿ ಪಡಿಸಿದೆ.ಈ ಪಟ್ಟಿಯಲ್ಲಿನ ವಿಷಯವನ್ನು ಪ್ರತಿ ಆಡಳಿತ ಮಂಡಳಿಯಲ್ಲಿ ಮಂಡಿಸಬೇಕು ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಉಪವಿಧಿಗಳಲ್ಲಿ ನಿಗದಿ ಪಡಿಸಿದ ಮಂಡಳಿಯ ಕರ್ತವ್ಯ ಮತ್ತು ಜವಾಬ್ದಾರಿಗಳ ವಿಷಯವನ್ನು ಮಂಡಿಸಬೇಕು. ಕೆಲವು ವಿಷಯಗಳು ವಾರ್ಷಿಕವಾಗಿ ನೀತಿ ರೂಪಿಸಿ ಅಳವಡಿಸಿ ಕೊಳ್ಳಲು ತೀರ್ಮಾನಿಸಿದ್ದರೆ, ಅದೇ ವಿಷಯವನ್ನು ಪ್ರತಿ ಸಭೆಯಲ್ಲಿ ಇಡಬೇಕಿಲ್ಲ. ಅಂದರೆ, ಉದಾಹರಣೆಗೆ ವ್ಯಕ್ತಿಗತ ಆದಾರ ರಹಿತ ಸಾಲ ನೀಡುವ ಮಿತಿ ರೂ.50,000/– ಇದ್ದು, ಅದನ್ನು ಹೆಚ್ಚಿಸಿ,

ನೀಡಬೇಕಾದರೆ, ಆಡಳಿತ ಮಂಡಳಿಯಲೇ ತೀರ್ಮಾನಿಸತಕ್ಕದ್ದು. ಆದರೆ ಉಪವಿಧಿಗಳಲ್ಲಿಯೇ ಮಿತಿ ರೂ.50,000/– ಎಂದಿದ್ದರೆ, ಉಪವಿಧಿಗಳ ತಿದ್ದುಪಡಿಗೆ ಮುಂದಿನ ಸಾಮಾನ್ಯ ಸಭೆಯ ವಿಷಯ ಮಂಡಿಸಿ, ತಿದ್ದುಪಡಿ ಮಾಡಿ, ನಿಬಂಧಕರು ನೋಂದಾಯಿಸಿದ ನಂತರ ಜಾರಿಗೆ ಬರುತ್ತಿದೆ. ಆದರೆ ಮಿತಿಯನ್ನು ಮಂಡಳಿಯೇ ನಿರ್ಧರಿಸುವ ಅಧಿಕಾರ ಉಪವಿಧಿಗಳಲ್ಲಿ ನೀಡಿದ್ದರೆ, ಮುಖ್ಯಕಾರ್ಯನಿರ್ವಾಹಕ ಮಿತಿಯನ್ನು ಹೆಚ್ಚಿಸಲು ಮಂಡಳಿಗೆ ವಿಷಯ ಮಂಡಿಸಿ ಒಪ್ಪಿಗೆ ಪಡೆದ ನಂತರ ಜಾರಿ ಮಾಡತಕ್ಕದ್ದು.

ಇದರ ಜೊತೆಗೆ ಮಂಡಳಿ ಸಭೆಗಳಲ್ಲಿ, ಇತರ ವಿಷಯಗಳಲ್ಲಿ ಆರ್ಥಿಕ ಹೊರೆಯಾಗುವ ಯಾವುದೇ ವಿಷಯ ಮಂಡಿಸತಕ್ಕದ್ದಲ್ಲ ಹಾಗೂ ನಿರ್ದೇಶಕರ ಚುನಾವಣೆ, ಪದಾಧಿಕಾರಿಗಳ ಚುನಾವಣೆ, ಸಹಮತದಿಂದ ವೃತ್ತಿಪರ ನಿರ್ದೇಶಕರ ನೇಮಕ, ಖಾಲಿಯಾದ ಮಂಡಳಿ ನಿರ್ದೇಶಕರ ಸ್ಥಾನ ಭರ್ತಿ ಮಾಡುವುದು, ನೌಕರ ಮೇಲೆ ಶಿಸ್ತುಕ್ರಮ ಮತ್ತು ಸಹಕಾರಿಗೆ ಆರ್ಥಿಕ ಹೊರೆಯಾಗುವ ಮತ್ತಾವುದೇ ವಿಷಯ ಇತರ ವಿಷಯಗಳಲ್ಲಿ ಮಂಡಿಸಿ ಒಪ್ಪಿಗೆ ಪಡೆಯತಕ್ಕದ್ದಲ್ಲ.

**ಸಭೆಯ ತೀರ್ಮಾನವನ್ನು ಯಾರು ದಾಖಲು ಮಾಡಬೇಕು :**

ಮಂಡಳಿ ಸಭಾ ನಡವಳಿಕೆಗಳನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ನೈಜವಾಗಿ, ಯಥಾವತ್ತಾಗಿ ದಾಖಲಿಸಿ ತನ್ನ ಸಹಿ ಜೊತೆ ಸಭಾಧ್ಯಕ್ಷರ ಸಹಿ ಪಡೆದರೆ, ಅದು ಅಂತಿಮ ನಡಾವಳಿ ಆಗತಕ್ಕದ್ದು.ಮಂಡಳಿ ಸದಸ್ಯರಲ್ಲಿ ಬಿನ್ನಾಭಿಪ್ರಾಯ ವೇರ್ಪಟ್ಟರೆ ಅದನ್ನು ದಾಖಲಿಸುವ ಜವಾಬ್ದಾರಿ ಮುಖ್ಯಕಾರ್ಯನಿರ್ವಾಹಕನಿಗೆ ಸೇರತಕ್ಕದ್ದು. ಬಹುಮತದ ತೀರ್ಮಾನವಾದರೆ ಅದನ್ನು ಜಾರಿ ಮಾಡುವ ಜವಾಬ್ದಾರಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಕರ್ತವ್ಯ. ಆದರೆ ತೀರ್ಮಾನಕ್ಕೆ ಅಸಮ್ಮತಿ ಸೂಚಿಸಿದ ವ್ಯಕ್ತಿಗಳ ಹೆಸರನ್ನು ದಾಖಲಿಸಿದರೆ, ಅದನ್ನು ದಾಖಲಿಸುವ ಜವಾಬ್ದಾರಿಯೂ ಮುಖ್ಯಕಾರ್ಯನಿರ್ವಾಹಕನದು. ಅಸಮ್ಮತಿ ಸೂಚಿಸಿದ ಮಂಡಳಿ ಸದಸ್ಯ, ಮುಂದೆ ಆ ತೀರ್ಮಾನದಿಂದ ಆದ ನಷ್ಟಕ್ಕೆ ಜವಾಬ್ದಾರಿನಾಗಿರತಕ್ಕದ್ದಲ್ಲ. ಆದರೆ ಬಹುಮತದ ತೀರ್ಮಾನದಿಂದ ಆದ ನಷ್ಟಕ್ಕೆ ಎಲ್ಲಾ ನಿರ್ದೇಶಕರು ಜವಾಬ್ದಾರರಾಗುತ್ತಾರೆ.

**ತೀರ್ಮಾನಗಳನ್ನು ಜಾರಿ ಮಾಡುವುದು :**

ಮಂಡಳಿ ತೆಗೆದುಕೊಂಡ ತೀರ್ಮಾನಗಳನ್ನು ಜಾರಿ ಮಾಡುವ ಜವಾಬ್ದಾರಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಿಗೆ ಇರತಕ್ಕದ್ದು. ಇಂತಹ ಜಾರಿ ಕ್ರಮ ಮುಂದಿನ ಆಡಳಿತ ಮಂಡಳಿ ಸಭೆಗೆ ಮೊದಲೇ ಜಾರಿಯಾಗಿ, ಸಭೆಯಲ್ಲಿ ಜಾರಿಯಾದ ಬಗ್ಗೆ ಮಂಡಳಿಗೆ ಮಾಹಿತಿ ನೀಡಬೇಕು. ಸಾಮಾನ್ಯವಾಗಿ ಹಿಂದಿನ ಮಂಡಳಿ ಸಭಾ ನಡವಳಿಕೆ ಒಪ್ಪಿಗೆ ನೀಡುವುದು ಎಂಬ ವಿಷಯ ಮಂಡಿಸತಕ್ಕದ್ದಲ್ಲ. ಏಕೆಂದರೆ ಮಂಡಳಿ ತೀರ್ಮಾನತೆಗೆದುಕೊಂಡ ನಂತರ ಜಾರಿ ಮಾಡಿದ ಬಗ್ಗೆ ಮುಂದಿನ ಸಭೆಗೆ ಅನುಪಾಲನಾ ವರದಿಯನ್ನು ನೀಡುವ ಜವಾಬ್ದಾರಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಕರ್ತವ್ಯ. ಹಿಂದಿನ ಸಭಾ ನಡಾವಳಿಕೆ ಅನುಮೋದನೆಗಾಗಿ ಮಂಡಿಸಿದರೆ, ಮಂಡಳಿ ಸದಸ್ಯರ ತೀರ್ಮಾನ ಸರಿ ಇಲ್ಲ ಎಂದು, ಪದಗಳನ್ನು ಬದಲಾಯಿಸಲು ಸೂಚಿಸಬಹುದು. ಅದನ್ನು ಈಗಾಗಲೇ ಜಾರಿ ಮಾಡಲಾಗಿದೆಯಾದ್ದರಿಂದ, ಆ ತೀರ್ಮಾನವನ್ನು ಮರು ಪರಿಶೀಲಿಸುವ ಸಲುವಾಗಿ ಮತ್ತೊಮ್ಮೆ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿ, ತೀರ್ಮಾನವನ್ನು ಮಾರ್ಪಡಿಸಬೇಕು.

**ತೀರ್ಮಾನ ಜಾರಿಯಾಗದ ಸಂದರ್ಭಗಳು :**

ಮಂಡಳಿ ತೆಗೆದುಕೊಂಡ ತೀರ್ಮಾನಗಳನ್ನು ಮುಂದಿನ ಆಡಳಿತ ಮಂಡಳಿ ನಡೆಯುವಷ್ಟರಲ್ಲಿ ಜಾರಿ ಮಾಡಲಾಗದ ಪ್ರಸಂಗಳು ಇರುತ್ತವೆ. ಸಾಲ ವಸೂಲಾತಿಗೆ ದಾವಾ ದಾಖಲಿಸಲು ತೀರ್ಮಾನಿಸಿದ್ದರೆ, ಮುಖ್ಯ ಕಾರ್ಯನಿರ್ವಾಹಕ, ದಾವಾ ದಾಖಲಿಸಿದ ನಂತರ ಪ್ರತಿ ಮಂಡಳಿ ಸಭೆಯಲ್ಲಿ ಆ ಪ್ರಕರಣದಲ್ಲಿ ಆದ ಪ್ರಗತಿಯನ್ನು ಪ್ರತಿ ಸಭೆಯಲ್ಲಿಯೂ ಮಂಡಳಿಗೆ ತಿಳಿಸಬೇಕು. ಅಂದರೆ ಡಿಕ್ರಿ ಆಗುವ ತನಕ. ಆ ನಂತರ ಡಿಕ್ರಿ ಜಾರಿಗೆ ತೀರ್ಮಾನ ತೆಗೆದುಕೊಂಡಾಗ, ಹಣ ವಸೂಲಿ ಆಗುವ ತನಕ ಪ್ರತಿ ಸಭೆಯಲ್ಲಿ ವಸೂಲಾತಿ ಪ್ರಗತಿಯನ್ನು ಮಂಡಳಿಗೆ ತಿಳಿಸಲು ಜವಾಬ್ದಾರಿ ಮುಖ್ಯಕಾರ್ಯನಿರ್ವಾಹಕ ವಿಹಿತವಾಗಿದೆ. ಅದೇ ರೀತಿ ಯಾವ ನಿರ್ದೇಶಕರಿಗೆ, ಮತ್ತೊಂದು ಸಹಕಾರಿಯ ಪ್ರತಿನಿಧಿಯಾಗಿ ಆಯ್ಕೆ ಮಾಡಿದ ನಂತರ, ಆ ಪ್ರತಿನಿದಿ ಆ ಪ್ರತಿನಿಧಿ ಯಾಗಿರುವ ಸಹಕಾರಿಯಲ್ಲಿನ ಕಾರ್ಯ ಚಟುವಟಿಕೆಗಳ ವರದಿಯನ್ನು ಸಹಕಾರಿಗೆ ನೀಡಬೇಕು, ಅಂದರೆ ಅಂತಹ ಪ್ರತಿನಿಧಿ, ತನ್ನ ಪ್ರತಿನಿಧಿಯಾಗಿ ನಿರ್ವಹಿಸುತ್ತಿರುವ ಜವಾಬ್ದಾರಿಯನ್ನು ವರದಿ ಮೂಲಕ ಸಲ್ಲಿಸಬೇಕು ಮತ್ತು ಮಂಡಳಿ ಅದನ್ನು ಪಡೆಯಬೇಕು. ಅಂದರೆ ಕೆಲವು ವಿಷಯಗಳಲ್ಲಿ ತೀರ್ಮಾನವನ್ನು ಮುಂದಿನ ಸಭೆಯೊಳಗೆ ಜಾರಿ ಮಾಡಲಾಗದೇ ಇದ್ದ ಪ್ರಸಂಗದಲ್ಲಿ, ಅದು ಜಾರಿಯಾಗುವ ತನಕ ಮಂಡಳಿಗೆ ಪ್ರತಿ ಸಭೆಯಲ್ಲಿ ಮಾಹಿತಿ ನೀಡುತ್ತಿರಬೇಕು.

**ಸಹಕಾರಿಯ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ :**

ಸಹಕಾರಿಯ ಲೆಕ್ಕಪತ್ರಗಳು, ದಾಖಲೆಗಳು, ಭದ್ರತಾ ಪತ್ರಗಳು, ನಗದು, ನಗದು ಪುಸ್ತಕ ಮತ್ತು ನಿರ್ವಹಣೆ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನದು.ಅಂದರೆ, ಅದನ್ನು ಸಹಕಾರಿಯ ಇನ್ನಿತರ ನೌಕರರಿಗೆ ಹಂಚಿಕೆ ಮಾಡಬೇಕು.ಆದರೂ ಅದರ ಮೇಲ್ವಿಚಾರಣೆ ಜವಾಬ್ದಾರಿ ಮುಖ್ಯಕಾರ್ಯನಿರ್ವಾಹಕನಿಗೆ ಇರತಕ್ಕದ್ದು. ಅದೇ ರೀತಿ ಮಂಡಳಿ, ಸಾಮಾನ್ಯ ಸಭೆ, ವಿಶೇಷ ಸಾಮಾನ್ಯ ಸಭೆ, ಉಪಸಮಿತಿಗಳ ಸಭಾ ನಡವಳಿಗಳ ದಾಖಲಿಸುವುದು, ನಿರ್ವಹಿಸುವುದು ಮತ್ತು ವಶದಲ್ಲಿರಿಸಿಕೊಳ್ಳುವುದು ಮುಖ್ಯಕಾರ್ಯನಿರ್ವಾಹಕನ ಕರ್ತವ್ಯ ಮತ್ತು ಜವಾಬ್ದಾರಿ.

**I ಸಾಮಾನ್ಯ ವಾರ್ಷಿಕ ಮಹಾಸಭೆ :**

ಕಾಯಿದೆ ಕಲಂ.30(1) ರನ್ವಯ ಪ್ರತಿ ವರ್ಷ ಸೆಪ್ಟೆಂಬರ್ 25 ರೊಳಗೆ ಸಹಕಾರಿಯ ಸಾಮಾನ್ಯ ಸಭೆ ಕರೆಯುವ ಜವಾಬ್ದಾರಿ ಮಂಡಳಿಗೆ ವಿಹಿತವಾಗಿದೆ. ಅಂದರೆ ಸಾಮಾನ್ಯ ಸಭೆ ಕರೆಯಲು, ಸದಸ್ಯರ ಪಟ್ಟಿ ಪುರಸ್ಕರಣೆ, ಸುಸ್ತಿದಾರರಿಗೆ ನೋಟೀಸ್ ನೀಡುವುದು ಹಾಗೂ ಅಂತಿಮ ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ ತಯಾರಿಸುವುದು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಪೂರ್ವಭಾವಿ ಕೆಲಸ. ಅದಕ್ಕಾಗಿ ಸೆಪ್ಟೆಂಬರ್ ಪೂರ್ವದ ಎರಡು ತಿಂಗಳ ಮೊದಲು ಮಂಡಳಿ ಸಭೆಯಲ್ಲಿ ಸಾಮಾನ್ಯ ಸಭೆಗೆ ದಿನಾಂಕ ನಿಗದಿ ಮಾಡಿಸಿ ಕೊಂಡು ಕ್ರಮ ಜರುಗಿಸಬೇಕು ಚುನಾವಣೆಗೆ ಮಾತ್ರ ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ ಎಂದು ಸಾಮಾನ್ಯ ನಂಬಿಕೆ ಆದರೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿಲು ಎಲ್ಲಾ ಸದಸ್ಯರಿಗೆ ಹಕ್ಕು ಇದ್ದರೂ, ಯಾವುದೇ ವಿಷಯದಲ್ಲಿ ಮತ ಚಲಾವಣೆಯಾಗಬೇಕಾದರೆ, ಮತದಾನದ ಹಕ್ಕುಳ್ಳ ಸದಸ್ಯರು ಮಾತ್ರ ಭಾಗವಹಿಸಬೇಕು. ಉದಾಹರಣೆಗೆ ಉಪವಿಧಿಗಳ ತಿದ್ದುಪಡಿ ಸಂದರ್ಭದಲ್ಲಿ, ಮತದಾನಹಕ್ಕುಳ್ಳ ಸದಸ್ಯರ 2/3 ಸದಸ್ಯರ ಬಹುಮತದಿಂದ ಒಪ್ಪಿಗೆಯಾಗಬೇಕು (ಕಲಂ.11) ಆದ್ದರಿಂದ ಮತದಾನದ ಹಕ್ಕುಳ್ಳ ಸದಸ್ಯರನ್ನು ಪ್ರತ್ಯೇಕಿಸಿ, ಇಂತಹ ವಿಷಯಗಳನ್ನು ಪ್ರತ್ಯೇಕ ನಿರ್ಣಯ ಪಡೆಯಬೇಕು.

**ಸಾಮಾನ್ಯ ಸಭೆಯಲ್ಲಿ ವಿಷಯ ಮಂಡನೆ :**

ಕಾಯಿದೆ ಕಲಂ.23ರಲ್ಲಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಬೇಕಾದ ವಿಷಯ ಪಟ್ಟಿ ನೀಡಿದೆ (25 ವಿಷಯಗಳು).ಈ ಎಲ್ಲಾ ವಿಷಯಗಳನ್ನು ಸಹಕಾರಿ ಸದಸ್ಯರಿಗೆ ಮಾಹಿತಿ ನೀಡಬೇಕು.ಅಂದರೆ ಪ್ರತಿಯೊಂದು ವಿಷಯವನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು.ಇದರ ಜೊತೆಗೆ ಸಹಕಾರಿಯ ಉಪವಿಧಿಗಳಲ್ಲಿ ಹೆಚ್ಚುವರಿ ವಿಷಯಗಳನ್ನು ಸೇರಿಸಿದ್ದರೆ, ಆ ಎಲ್ಲಾ ವಿಷಯಗಳನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಬೇಕು. ಈ ಸುದೀರ್ಘ ವಿಷಯ ಮಂಡನೆ ವಿಶೇಷವೆಂದರೆ ಸದಸ್ಯರಿಗೆ ಸಹಕಾರಿಯ ಪೂರ್ಣ ಪ್ರಮಾಣದ ಮಾಹಿತಿ ನೀಡಬೇಕು ಮತ್ತು ಅರ್ಥ ಪೂರ್ಣ ಚರ್ಚೆಯಾಗಬೇಕು ಮತ್ತು ಸಹಕಾರಿ ಒಂದು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂನಿಂತ್ರಿತ ಸಂಸ್ಥೆ ಎಂದು ಸಂವಿದಾನ ರೂಪಿಸಿರುವುದರಿಂದ ಪೂರ್ಣ ಪ್ರಮಾಣದ ಮಾಹಿತಿಯನ್ನು ಸದಸ್ಯರಿಗೆ ನೀಡಲೇಬೇಕು.

**ಮಾಹಿತಿ ಬಗ್ಗೆ ವಿಮರ್ಷೆ :**

ಸಾಮಾನ್ಯ ಸಭೆಗೆ ನೀಡಿದ ವಿಷಯ ಪಟ್ಟಿಯ ಜೊತೆ, ಸಹಕಾರಿ ಮುಖ್ಯಕಾರ್ಯನಿರ್ವಾಹಕ, ಅಂತಹ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಹಕಾರಿಯಾಗಲು ವಿಸ್ತೃತ ಟಿಪ್ಪಣಿಯ ಪ್ರತಿ ವಿಷಯದ ಬಗ್ಗೆ ಸಾಮಾನ್ಯ ಸಭೆ ನೋಟೀಸ್ ಜೊತೆ ರವಾನಿಸಬೇಕು. ಅಂತಹ ಟಿಪ್ಪಣಿಯಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಹಕಾರಿಯಾಗುವ ಮಾಹಿತಿ ನೀಡಬೇಕು ಮತ್ತು ಆ ತೀರ್ಮಾನದಿಂದ ಸಹಕಾರಿಗೆ ಆಗುವ ಅನುಕೂಲ ಅಥವಾ ಅನಾನುಕೂಲದ ಬಗ್ಗೆ, ಅಥವಾ ಲಾಭ/ನಷ್ಟದ ಬಗ್ಗೆ ಮಾಹಿತಿ ನೀಡಿರಬೇಕು. ಅಂದರೆ ಸದಸ್ಯರಿಗೆ ತೀರ್ಮಾನ ತೆಗೆದುಕೊಳ್ಳಲು ಪೂರಕವಾದ ಟಿಪ್ಪಣಿ ನೀಡಲೇಬೇಕು.

**ನೋಟೀಸ್ ಅವಧಿ :**

ಸಾಮಾನ್ಯ ಸಭೆ ನಿಗದಿಯಾದ ದಿನಾಂಕಕ್ಕೆ 15/20 ದಿವಸಗಳ ಮೊದಲು ಸಭಾ ನೋಟೀಸ್ ನೀಡತಕ್ಕದ್ದು.ಆ ನೋಟೀಸ್ ಜೊತೆ ವಿಷಯಪಟ್ಟಿ, ಟಿಪ್ಪಣಿ, ಆರ್ಥಿಕ ತಃಖ್ತೆ, ಆಡಳಿತ ವರದಿ ಮತ್ತಿತರ ಮಾಹಿತಿ ನೀಡಿರಬೇಕು. ಉಪವಿಧಿಗಳ ತಿದ್ದುಪಡಿ ಇದ್ದರೆ ಕನಿಷ್ಟ 20 ದಿವಸದ ಮೊದಲು ನೋಟೀಸ್ ನೀಡಬೇಕು. ಇಲ್ಲ ವಾರ್ಷಿಕ ಸಾಮಾನ್ಯ ಸಭೆಗೆ 15 ದಿವಸಗಳ ಪೂರ್ವದಲ್ಲಿ ನೋಟೀಸ್ ನೀಡಬೇಕು. ಉಪವಿಧಿಗಳ ತಿದ್ದುಪಡಿಗೆ ವಿಶೇಷ ಸಭೆ ಕರೆದಾಗ 20 ದಿವಸಗಳ ನೋಟೀಸ್ ನೀಡಬೇಕು.

**ವಿಶೇಷ ಸಾಮಾನ್ಯ ಸಭೆ :**

ವಾರ್ಷಿಕ ಸಾಮಾನ್ಯ ಸಭೆಯನ್ನು ಹೊರತು ಪಡಿಸಿ, 1/10 ಸದಸ್ಯರು ನೀಡಿದ ಅರ್ಜಿ ಸ್ವೀಕರಿಸಿದ ಮೂವತ್ತು ದಿನಗಳು ವಿಶೇಷ ಸಾಮಾನ್ಯ ಸಭೆ ಕರೆದು ಮನವಿಯಲ್ಲಿ ಸ್ಪಷ್ಟ ಕಾರಣಗಳನ್ನು ನೀಡಿರಬೇಕು ಮತ್ತು ವಿಷಯ ಸೂಚಿಸಿರಬೇಕು. ಸಹಕಾರಿಯ ಮಂಡಳಿ ನಿಗದಿ ಪಡಿಸಿದ ಅವಧಿಯಲ್ಲಿ ಕರೆಯದೇ ಇದ್ದರೆ, ಸಂಯುಕ್ತ ಸಹಕಾರಿ ಮೂವತ್ತು ದಿನಗಳೊಳಗೆ, ಸಭೆ ಕರೆಯುವ ಅಧಿಕಾರ ಪ್ರಾಪ್ತವಾಗುತ್ತಿದೆ.ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿ ನಿರ್ವಹಿಸದಿದ್ದರೆ, 1/10 ಸದಸ್ಯರ ಮನವಿ ಸ್ವೀಕರಿಸಿದ 45 ದಿವಸಗಳನ್ನು ವಿಶೇಷ ಸಾಮಾನ್ಯ ಸಭೆ ಕರೆಯಲು ನಿಬಂಧಕರ ಜವಾಬ್ದಾರರಾಗುತ್ತಾರೆ. [ಕಲಂ.30(2)(3)]

ಇದರ ಜೊತೆ ಸಹಕಾರಿಯು ಯಾವುದೇ ಸಮಯದಲ್ಲಿ ವಿಶೇಷ ಸಾಮಾನ್ಯ ಸಭೆ ಕರೆಯುವ ಅಧಿಕಾರ ಹೊಂದಿದೆ. ಆದರೆ ವಿಷಯಗಳು ಸ್ಪಷ್ಟ ಮತ್ತು ತುರ್ತು ಎಂದು ತಿಳಿದ ನಂತರ ಕರೆಯತಕ್ಕದ್ದು.

**ಸಾಮಾನ್ಯ ಸಭೆಗೆ ಕೋರಂ :**

ಸದಸ್ಯ ಸಹಕಾರಿಯ ಮತದಾನದ ಹಕ್ಕುಳ್ಳ ಸದಸ್ಯರ ಶೇಕಡ ಹತ್ತು ಅಥವಾ ಒಂದು ಸಾವಿರ, ಇದರಲ್ಲಿ ಯಾವುದು ಕಡಿಮೆಯೋ ಅದು, ಸಾಮಾನ್ಯ ಸಭೆ ನಡೆಸಲು ಕೋರಂ ಆಗಿರತಕ್ಕದ್ದು. ಸಭೆ ನಡೆಸಲು ಯಾವುದೇ ಸಭೆ ನಡೆಯುವ ಸಮಯದಲ್ಲಿ ಕೋರಂ ಇರಲೇಬೇಕು.ಅಂದರೆ ಕೋರಂ ಇಲ್ಲದೆ ಸಭೆ ನಡೆಸತಕ್ಕದ್ದು. ನಿಯಮ 6ಸಿ(6) ರಡಿ ಐದನೇ ಒಂದು ಭಾಗ ಕೋರಂ ಇರಬೇಕೆಂದಿದ್ದರೂ, ಅದು ಅಪ್ರಸ್ತುತ ಏಕೆಂದರೆ ಕಾಯಿದೆಯಲ್ಲಿನ ಅವಕಾಶ ಪಾಲಿಸಬೇಕು.[ಕಲಂ.30(4)] ನಿಗದಿ ಪಡಿಸಿದ ದಿನಾಂಕದಂದು ಕೋರಂ ಆಗದಿದ್ದರೆ, ಅದೇ ದಿನ ಮತ್ತೊಂದು ಸಮಯಕ್ಕೆ ನಿಗದಿ ಪಡಿಸಲು ಅಥವಾ ಮುಂದಿನ ಏಳು ದಿವಸಗಳೊಳಗೆ ನಿಗದಿ ಪಡಿಸಿ ಅಧ್ಯಕ್ಷರು ಪ್ರಕಟಿಸತಕ್ಕದ್ದು. ಆ ಮುಂದೂಡಿದ ಸಭೆಯಲ್ಲಿಯೂ ಕೋರಂ ಇರಲಾರದೆ ಸಭೆ ನಡೆಸತಕ್ಕದ್ದಲ್ಲ. ಮುಂದೂಡಿದ ಸಭೆಯಲ್ಲಿ ಕಾರ್ಯಸೂಚಿಯಲ್ಲಿರುವ ವಿಷಯಗಳನ್ನಲ್ಲದೇ ಮತ್ತಾವುದೇ ವಿಷಯ ಚರ್ಚೆಗೆ ಬರತಕ್ಕದ್ದಲ್ಲ. ಎಲ್ಲಾ ಸಾಮಾನ್ಯ ಸಭೆ ತೀರ್ಮಾನಗಳು ಬಹುಮತದಿಂದ ತೀರ್ಮಾನವಾಗಬೇಕಾಗುತ್ತದೆ. ಆದರೆ ಉಪವಿಧಿಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ ಮತದಾನದ ಹಕ್ಕುಳ್ಳ 2/3 ಅಂಶದ ಸದಸ್ಯರ ಬಹುಮತದಿಂದ ಮಾತ್ರ ಒಪ್ಪಿಗೆ ನೀಡತಕ್ಕದ್ದು.ಇದೇ ನೀತಿ ವಿಶೇಷ ಸಾಮಾನ್ಯ ಸಭೆಗೂ ಅನ್ವಯವಾಗತಕ್ಕದ್ದು.

**ಮತದಾನದ ಹಕ್ಕುಳ್ಳ ಸದಸ್ಯರು :**

ಸಹಕಾರಿ ಸದಸ್ಯನಿಗೆ ಮತದಾನದ ಹಕ್ಕು ಉಪವಿಧಿಗಳ ಮತ್ತು ಕಾಯಿದೆ ಕಲಂ.20(2)ರಡಿ ನಿಗದಿ ಪಡಿಸಿದ ಅರ್ಹತೆಗಳ ಆಧಾರದಲ್ಲಿ ನಿಗದಿ ಪಡಿಸಿರುತ್ತದೆ. ಅಂದರೆ ಸುಸ್ತಿದಾರನಲ್ಲದೆ, ಕನಿಷ್ಠ ವ್ಯವಹಾರ ಮಾಡದ ಮತ್ತು ಸಾಮಾನ್ಯ ಸಭೆಗೆ ಹಾಜರಾಗದ ಸದಸ್ಯನಿಗೆ ಮತದಾನದ ಹಕ್ಕು ಇರುವುದಿಲ್ಲ. ಸಾಮಾನ್ಯ ಸಭೆಯಲ್ಲಿ ಇಂತಹ ಸದಸ್ಯರನ್ನು ಪ್ರತ್ಯೇಕಿಸುವುದು ಕಷ್ಟ ಸಾಧ್ಯವಾದರೂ, ಇದನ್ನು ಪಾಲಿಸಲೇಬೇಕು. ಪ್ರತಿ ಸಹಕಾರಿಯ ಸದಸ್ಯನಿಗೆ ಸಾಮಾನ್ಯ/ವಿಶೇಷ ಸಾಮಾನ್ಯ ಸಭೆಗೆ ಹಾಜರಾಗುವ ಹಕ್ಕಿದ್ದರೂ, ಯಾವುದೇ ವಿಷಯ ಚರ್ಚೆಗೆ ಬಂದಾಗ ಮತದಾನದ ಹಕ್ಕುಳ್ಳ ಸದಸ್ಯರು ಮಾತ್ರ ಮತ ಚಲಾಯಿಸಲು ಅರ್ಹರಾಗುತ್ತಾರೆ.ಆದರೆ ಎಲ್ಲಾ ಸದಸ್ಯರು ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ, ತಮ್ಮ ಅಭಿಪ್ರಾಯ ದಾಖಲಿಸಬಹುದು.

**ಲೆಕ್ಕತಪಾಸಣಾ ವರದಿ ಮತ್ತು ಚುನಾವಣಾ ಪ್ರಕ್ರಿಯೆ ಮಾಡಿಸದಿದ್ದರೆ ಆಗುವ ಪರಿಣಾಮ :**

ಪ್ರತಿಯೊಂದು ಸಹಕಾರಿಯ ತನ್ನ ಹಿಂದಿನ ವರ್ಷದ ಲೆಕ್ಕತಪಾಸಣಾ ವರದಿಯನ್ನು ಸಾಮಾನ್ಯ ಸಭೆ ಒಪ್ಪಿಗೆ ನೀಡಿದ ಲೆಕ್ಕ ತಪಾಸಕರಿಂದ ತಪಾಸಣೆ ಮಾಡಿಸಿ, ವರದಿಯನ್ನು ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯದಿದ್ದರೆ ಅಥವಾ ಆಡಳಿತ ಮಂಡಳಿ ಅವಧಿ ಮುಗಿಯುವ ಆರು ತಿಂಗಳ ಮೊದಲು ಚುನಾವಣೆ ಪ್ರಕ್ರಿಯೆ ಚಾಲನೆ ನೀಡಿ ಚುನಾವಣಾ ಪ್ರಾಧಿಕಾರದಿಂದ ಮಂಡಳಿ ರಚಿಸದಿದ್ದರೆ, ಅಂತಹ ಪ್ರಸಂಗದಲ್ಲಿ ಸಹಕಾರಿಯ ಮಂಡಳಿ ಸದಸ್ಯರು 5 ವರ್ಷಗಳ ಅನರ್ಹತೆಗೊಳಗಾಗುವುದರ ಜೊತೆಗೆ ಕಾಯಿದೆ ಕಲಂ.68(5) ಮತ್ತು (7) ನ್ನು ರೂ.ಐದು ಸಾವಿರ ಜುಲ್ಮಾನೆ/ ಹತ್ತು ಸಾವಿರ ಜುಲ್ಮಾನೆ ಮತ್ತು ಆರು ತಿಂಗಳು/ಎರಡು ವರ್ಷ ಕಾರಾಗೃಹ ವಾಸಕ್ಕೆ ತುತ್ತಾಗುತ್ತಾರೆ.

**ವಾರ್ಷಿಕ ಸಾಮಾನ್ಯ ಸಭೆ ನಡವಳಿಕೆಗಳು :**

ವಾರ್ಷಿಕ ಸಾಮಾನ್ಯ ಸಭಾ ನಡವಳಿಕೆಗಳನ್ನು ಸಭೆ ನಡೆದ ದಿನಾಂಕದಿಂದ 30 ದಿವಸಗಳೊಳಗೆ ಅಂತಿಮಗೊಳಿಸಿ, ನಿಬಂಧಕರಿಗೆ ಒಂದು ಪ್ರತಿ ರವಾನಿಸಬೇಕು.

ಸೂಚನೆ : ಕಲಂ.34 ಮತ್ತು ಕಲಂ.64ಎ ಅನ್ವಯ ನಿಬಂಧಕರಿಗೆ ಸೆಪ್ಟೆಂಬರ್ 30 ರೊಳಗೆ ಮಾಹಿತಿ ಸಲ್ಲಿಸಬೇಕೆಂದಿರುವುದರಿಂದ ಸಹಕಾರಿ ಸಭೆ ನಡೆದ ಕೂಡಲೇ ಅಂತಿಮಗೊಳಿಸಿ, ನಿಬಂಧಕರಿಗೆ ಮಾಹಿತಿ ಸಲ್ಲಿಸಬೇಕು. ಇಲ್ಲವಾದರೆ ಅದು ಕಲಂ.68(6) ರನ್ವಯ ಶಿಕ್ಷಾರ್ಹ ಅಪರಾಧವಾಗುತ್ತದೆ. ಅಂದರದರೆ ಪ್ರತಿಯೊಬ್ಬ ಮಂಡಳಿ ನಿರ್ದೇಶಕ ಮತ್ತು ಮುಖ್ಯಕಾರ್ಯನಿರ್ವಾಹಕ ರೂ.10,000/– ದಂಡ ಅಥವಾ ಎರಡು ವರ್ಷ ಕಾರಾ ಗೃಹವಾಸ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು ಎಂದಿರುವುದರಿಂದ ಮುಖ್ಯಕಾರ್ಯನಿರ್ವಾಹಕ ಮತ್ತು ಸಭಾಧ್ಯಕ್ಷರು ತುರ್ತಾಗಿ ಸಭಾ ನಡವಳಿಕೆಗಳನ್ನು ಅಂತಿಮಗೊಳಿಸಬೇಕು.

**ಆಡಳಿತ ಮಂಡಳಿ ಸಭಾ ನಡವಳಿಕೆಗಳು :**

ಸಭಾ ನಡವಳಿಕೆಗಳು ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ದಾಖಲಿಸತಕ್ಕದ್ದು ಮತ್ತು ಸಭಾಧ್ಯಕ್ಷರ ಸಹಿ ಪಡೆಯತಕ್ಕದ್ದು.ಪ್ರತಿ ನಡವಳಿ ಪುಸ್ತಕದಲ್ಲಿ ಸಹಿ ಇರಬೇಕು. ಸಭಾ ನಡವಳಿಕೆಗಳು ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕ ಸಭಾ ನಡವಳಿಗಳನ್ನು ನಿಖರವಾಗಿ, ಯಥಾವತ್ತಾಗಿ ಮತ್ತು ಯುಕ್ತವಾಗಿ ದಾಖಲಿಸಬೇಕು.ಸದಸ್ಯರು ಅಸಮ್ಮತಿ ಸೂಚಿಸಿದರೆ ಅದನ್ನು ದಾಖಲಿಸಬೇಕು.ಸಭೆ ನಡೆದ ಏಳು ದಿವಸಗಳಲ್ಲಿ ಅಂತಿಮಗೊಳಿಸಿ ಪ್ರತಿ ಮಂಡಳಿ ಸದಸ್ಯನಿಗೆ ರವಾನಿಸಬೇಕು. ನಡಾವಳಿ ಸ್ವೀಕರಿಸಿದ ಮಂಡಳಿ ಸದಸ್ಯ, ಸ್ವೀಕರಿಸಿದ ಮೂರು ದಿವಸಗಳಲ್ಲಿ ದಾಖಲೆ ಸಮರ್ಪಕವಿಲ್ಲವೆಂದು ಆಕ್ಷೇಪಣಾ ಪತ್ರ ನೀಡಿದಾಗ, ಅದು ಬಹು ಸಂಖ್ಯೆಯ ಸದಸ್ಯರಾದರೆ, ಆ ತೀರ್ಮಾನ ಜಾರಿ ಮಾಡತಕ್ಕದ್ದಲ್ಲ. ಅಂತಹ ವಿಷಯವನ್ನು ಮುಂದಿನ ಆಡಳಿತ ಮಂಡಳಿಯಲ್ಲಿ ಮಂಡಿಸಿ ಅಂತಿಮಗೊಳಿಸಬೇಕು.

**ಸಭೆಗೆ ಗೈರು ಹಾಜರಿ :**

ಮಂಡಳಿ ಸದಸ್ಯ ಸಭೆಗೆ ಹಾಜರಾಗಲು ಸಾದ್ಯವಾಗದೇ ಇದ್ದರೆ ಲಿಖಿತವಾಗಿ ಸಭಾಧ್ಯಕ್ಷಕರಿಗೆ/ಮುಖ್ಯ ಕಾರ್ಯನಿರ್ವಾಹಕನಿಗೂ ಪತ್ರ ಮುಖೇನ ಸಭೆಗೆ ಪೂರ್ವದಲ್ಲಿ ಮುಟ್ಟಿಸಿದರೆ, ಅದನ್ನು ಪರಿಶೀಲಿಸಿ, ವಿನಾಯ್ತಿ ನೀಡುವ ಅಧಿಕಾರ ಮಂಡಳಿಗೆ ಇದೆ. ಅಧ್ಯಕ್ಷರು ಗೈರು ಹಾಜರಾದರೆ, ಉಪಾಧ್ಯಕ್ಷರು ಸಭಾಧ್ಯಕ್ಷತೆ ವಹಿಸತಕ್ಕದ್ದು ಅಥವಾ ಅವರೂ ಗೈರು ಹಾಜರಾದರೆ, ಸಭೆಯಲ್ಲಿರುವ ಮಂಡಳಿ ಸದಸ್ಯರಲ್ಲಿ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಭೆ ನಡೆಸತಕ್ಕದ್ದು.

**II ಸಂಯುಕ್ತ ಸಹಕಾರಿ ಸಭೆಗಳು :**

ಮಂಡಳಿ ಸಭೆ, ಸಾಮಾನ್ಯ ವಾರ್ಷಿಕ ಸಭೆ, ವಿಶೇಷ ಸಭೆಗಳ ಬಗ್ಗೆ ಸದಸ್ಯ ಸಹಕಾರಿಗಳ ಸಭೆಗಳಿಗೆ ನಿಗದಿ ಪಡಿಸಿದ ನೀತಿಯೇ ಅನ್ವಯವಾಗುತ್ತಿದೆ.ಅಂದರೆ ಒಂದು ಸಹಕಾರಿ ವರ್ಷದಲ್ಲಿ ಕನಿಷ್ಠ ಆರು (6) ಮಂಡಳಿ ಸಭೆ ಮತ್ತು ಸೆಪ್ಟೆಂಬರ್ 25 ರೊಳಗೆ ವಾರ್ಷಿಕ ಸಾಮಾನ್ಯ ಸಭೆ ಕರೆಯತಕ್ಕದ್ದು. ಇದರ ಜೊತೆಗೆ 1/10 ಸದಸ್ಯರ ಲಿಖಿತ ಮನವಿಯ ಮೇಲೆ ಸ್ಪಷ್ಟ ವಿಷಯಗಳ ಚರ್ಚೆಗೆ ವಿಶೇಷ ಸಾಮಾನ್ಯ ಸಭೆಯನ್ನು ಸಂಯುಕ್ತ ಸಹಕಾರಿ ಮಂಡಳಿ ಮನವಿ ಸ್ವೀಕರಿಸಿದ ಮೂವತ್ತು ದಿನಗಳ ಒಳಗೆ ಕರೆಯತಕ್ಕದ್ದು.ಸಂಯುಕ್ತ ಸಹಕಾರಿ ಇಂತಹ ವಿಶೇಷ ಸಾಮಾನ್ಯ ಸಭೆ ಕರೆಯದೇ ಇದ್ದರೆ.1/10 ಸದಸ್ಯ ಸಹಕಾರಿಗಳ ಮನವಿ ಸ್ವೀಕರಿಸಿದ 60 ದಿವಸದೊಳಗೆ ನಿಬಂಧಕರು ವಿಶೇಷ ಸಾಮಾನ್ಯ ಸಭೆ ಕರೆಯತಕ್ಕದ್ದು. ಮಂಡಳಿ ಸಭೆ ಕರೆಯಲು ನಿಗದಿ ಪಡಿಸಿದ ಕೋರಂ ಸಂಖ್ಯೆ ಮಂಡಳಿ ಸದಸ್ಯರ ಶೇ.50ರ ನಂತರದ ಸಂಖ್ಯೆಯಾಗಿರತಕ್ಕದ್ದು. ಇದರ ಜೊತೆಗೆ ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ/ವ್ಯವಸ್ಥಾಪಕ ನಿರ್ದೇಶಕ ಪ್ರತಿಯೊಂದು ಸಾಮಾನ್ಯ ಸಭೆಯ ವ್ಯವಹರಣೆಗಳ ನಡವಳಿಗಳನ್ನು ದಾಖಲಿಸುವ ಜವಾಬ್ದಾರಿ ನಿರ್ವಹಿಸತಕ್ಕದ್ದು ಹಾಗೂ ಸಭೆ ಮುಕ್ತಾಯವಾದ ಮೂವತ್ತು ದಿನಗಳಲ್ಲಿ, ಸಭಾ ನಡಾವಳಿಗಳನ್ನು ಸದಸ್ಯರಿಗೆ ರವಾನಿಸತಕ್ಕದ್ದು ಹಾಗೂ ಸಂಯುಕ್ತ ಸಹಕಾರಿ ನಾಮಫಲಕದಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಭಾ ನಡವಳಿಕೆಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಸಹಿ ಪಡೆಯುವ ಜವಾಬ್ದಾರಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕನಿಗೆ ವಿಹಿಕವಾಗಿರತಕ್ಕದ್ದು.

**ವಾರ್ಷಿಕ ಸಾಮಾನ್ಯ ಸಭೆ ನಡವಳಿಕೆಗಳು :**

ವಾರ್ಷಿಕ ಸಾಮಾನ್ಯ ಸಭಾ ನಡವಳಿಕೆಗಳನ್ನು ಸಭೆ ನಡೆದ ದಿನಾಂಕದಿಂದ 30 ದಿವಸಗಳೊಳಗೆ ಅಂತಿಮಗೊಳಿಸಿ, ನಿಬಂಧಕರಿಗೆ ಒಂದು ಪ್ರತಿ ರವಾನಿಸಬೇಕು.

**ಸೂಚನೆ :** ಕಲಂ.34 ಮತ್ತು ಕಲಂ.64ಎ ಅನ್ವಯ ನಿಬಂಧಕರಿಗೆ ಸೆಪ್ಟೆಂಬರ್ 30 ರೊಳಗೆ ಮಾಹಿತಿ ಸಲ್ಲಿಸಬೇಕೆಂದಿರುವುದರಿಂದ ಸಹಕಾರಿ ಸಭೆ ನಡೆದ ಕೂಡಲೇ ಅಂತಿಮಗೊಳಿಸಿ, ನಿಬಂಧಕರಿಗೆ ಮಾಹಿತಿ ಸಲ್ಲಿಸಬೇಕು. ಇಲ್ಲವಾದರೆ ಅದು ಕಲಂ.68(6) ರನ್ವಯ ಶಿಕ್ಷಾರ್ಹ

ಅಪರಾಧವಾಗುತ್ತದೆ. ಅಂದರೆ ಪ್ರತಿಯೊಬ್ಬ ಮಂಡಳಿ ನಿರ್ದೇಶಕ ಮತ್ತು ಮುಖ್ಯಕಾರ್ಯನಿರ್ವಾಹಕ ರೂ.10,000/– ದಂಡ ಅಥವಾ ಎರಡು ವರ್ಷ ಕಾರಾ ಗೃಹವಾಸ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು ಎಂದಿರುವುದರಿಂದ ಮುಖ್ಯಕಾರ್ಯನಿರ್ವಾಹಕ ಮತ್ತು ಸಭಾಧ್ಯಕ್ಷರು ತುರ್ತಾಗಿ ಸಭಾ ನಡವಳಿಕೆಗಳನ್ನು ಅಂತಿಮಗೊಳಿಸಬೇಕು.

ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಕಾಯಿದೆ ಕಲಂ.56ರಲ್ಲಿ ನಿಗದಿ ಪಡಿಸಿದ ವಿಷಯಗಳನ್ನು ಪ್ರತಿ ಸಭೆಯಲ್ಲಿ ಟಿಪ್ಪಣಿ ಸಹಿತ ಮಂಡಿಸಿ, ಮಂಡಳಿ ತೀರ್ಮಾನತೆಗೆದುಕೊಳ್ಳುವ ಜವಾಬ್ದಾರಿ ಇರತಕ್ಕದ್ದು. ಯಾವ ವಿಷಯ ವರ್ಷಕ್ಕೊಮ್ಮೆ ಮಾಡಬೇಕೋ, ಆ ವಿಷಯ ಹೊರತು ಪಡಿಸಿ, ಇನ್ನಿತರ ವಿಷಯಗಳ ಪ್ರಕಾರ್ಯ ಮತ್ತು ಅಧಿಕಾರಗಳನ್ನು ಮಂಡಳಿ ಸದಸ್ಯರ ಗಮನಕ್ಕೆ ತರುತ್ತಿರಬೇಕು. ಇದರ ಜೊತೆಗೆ ಕಾಯಿದೆ ಕಲಂ.53(7) ರಲ್ಲಿ ನೀಡಿದ ಶಾಸನಾತ್ಮಕ ಜವಾಬ್ದಾರಿ ಬಗ್ಗೆ ಸಂಯುಕ್ತ ಸಹಕಾರಿ ಪ್ರತಿ ಮಂಡಳಿಯಲ್ಲಿ ಪ್ರಗತಿ ಪರಿಶೀಲಿಸಲು ವಿಷಯ ಮಂಡಿಸಬೇಕು. ಏಕೆಂದರೆ, ಶಾಸನಾತ್ಮಕ ಜವಾಬ್ದಾರಿ ನಿಗದಿ ಪಡಿಸಿದ ಅವಧಿಯೊಳಗೆ ನಿರ್ವಹಿಸಬೇಕು. ಉದಾಹರಣೆಗೆ ಒಂದು ಸದಸ್ಯ ಸಹಕಾರಿ ಮಂಡಳಿ ರದ್ದು/ಅಮಾನತ್ತು ಮಾಡುವಾಗ ಕಾರಣ ಕೇಳುವ ನೋಟೀಸ್ ಕೊಡಲು ಮಂಡಳಿ ತೀರ್ಮಾನ ಮತ್ತು ಆ ಸದಸ್ಯ ಸಹಕಾರಿ ಮಂಡಳಿ ಸದಸ್ಯರು ನೀಡಿದ ಉತ್ತರ ಪರಿಶೀಲಿಸಿ, ರದ್ದು/ಅಮಾನತ್ತು ಮಾಡಲು ತೆಗೆದುಕೊಳ್ಳುವ ತೀರ್ಮಾನ ನಿಗದಿ ಪಡಿಸಿದ ಸಮಯದಲ್ಲಿಯೇ ಆಗಬೇಕು.

ಮಂಡಳಿ ನಡವಳಿಕೆಗಳನ್ನು ಸಭೆ ನಡೆದ ಏಳು ದಿವಸಗಳೊಳಗೆ ಅಂತಿಮಗೊಳಿಸಿ ಪ್ರತಿ ಮಂಡಳಿ ಸದಸ್ಯನಿಗೆ ರವಾನಿಸಬೇಕು. ಈ ನಡವಳಿಕೆಗಳಲ್ಲಿ ವ್ಯತ್ಯಾಸವಿದೆ ಎಂದು ನಡವಳಿಕೆಗಳು ಮುಟ್ಟಿದ ಮೂರು ದಿವಸಗೊಳಗೆ, ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕನಿಗೆ ಲಿಖಿತವಾಗಿ ತಿಳಿಸತಕ್ಕದ್ದು.ಬಹು ಸಂಖ್ಯೆಯ ಮಂಡಳಿ ಸದಸ್ಯರು ಲಿಖಿತ ಆಕ್ಷೇಪ ದಾಖಲಿಸಿದರೆ, ಅಂತಹ ತೀರ್ಮಾನವನ್ನು ಜಾರಿ ಮಾಡದೆ, ಮುಂದಿನ ಮಂಡಳಿ ಸಭೆಯಲ್ಲಿ ಅಂತಿಮಗೊಳಿಸಿ ಜಾರಿ ಮಾಡಬೇಕು.

ಸಂಯುಕ್ತ ಸಹಕಾರಿ, ಸೌಹಾರ್ದ ಕಾಯಿದೆಯಡಿ ಒಂದು ಶಾಸನಾತ್ಮಕ ಸಂಸ್ಥೆಯಾಗಿದ್ದರೂ, ಚುನಾಯಿತ ಪ್ರತಿನಿಧಿಗಳ ಮಂಡಳಿ ಸದಸ್ಯರಿದ್ದು, ಅವರು ಕಾಯಿದೆಯನ್ನು ಸಮರ್ಪಕ ನಿರ್ವಹಣೆ ಜವಾಬ್ದಾರಿ ಇರುತ್ತದೆ. ಅಂದರೆ ನಿಬಂಧಕರು ಚಲಾಯಿಸುತ್ತಿದ್ದ ಅರೆ ನ್ಯಾಯಿಕ ಅಧಿಕಾರಿಗಳು ಚಲಾಯಿಸಲು ಜವಾಬ್ದಾರಿ ನೀಡಿರುವುದರಿಂದ, ಸಂಯುಕ್ತ ಸಹಕಾರಿ ಮಂಡಳಿ, ಸಂಯುಕ್ತ ಸಹಕಾರಿಯು ಜವಾಬ್ದಾರಿಯುತವಾಗಿ ಮತ್ತು ಸದಸ್ಯ ಸಹಕಾರಿಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸಿದಾಗ ಮಾತ್ರ, ಅದು ನೀಡಿದ ಮಾರ್ಗದರ್ಶನ ಸೂತ್ರಗಳನ್ನು ಪಾಲಿಸಲು, ಸದಸ್ಯ ಸಹಕಾರಿಗಳು ಅಳವಡಿಸಿಕೊಳ್ಳಲು ಸಾಧ್ಯ. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ, ಸದಸ್ಯ ಸಹಕಾರಿಗಳಿಗೆ ನೀತಿ ಸಂಹಿತೆ ರೂಪಿಸುವ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿಯ ಮಂಡಳಿಗೆ ನೀಡಿದೆ. ಆದರೆ, ಅಂತಹ ನೀತಿ ರೂಪಿಸುವಾಗ, ಸಂಯುಕ್ತ ಸಹಕಾರಿ ಮಂಡಳಿ ತನ್ನ ಸದಸ್ಯರಿಗೆ, ಪದಾಧಿಕಾರಿಗಳಿಗೆ ಮತ್ತು ನೌಕರರಿಗೆ ನೀತಿ ಸಂಹಿತೆ ರೂಪಿಸದೇ, ಸದಸ್ಯ ಸಹಕಾರಿಗಳಿಗೆ ಸೂಚಿಸಿದರೆ, ಅದು ಒಂದು ಅಭಾಸವಾಗುತ್ತದೆ. ಅದೇ ರೀತ ಸದಸ್ಯ ಸಹಕಾರಿಗಳು ಮಾಡಬೇಕೆಂದು ಸಂಯುಕ್ತ ಸಹಕಾರಿ ಮಂಡಳಿ ಬಯಸುತ್ತಿದೆಯೇ, ಅದೇ ನೀತಿಯನ್ನು ಸಂಯುಕ್ತ ಸಹಕಾರಿ ಮಂಡಳಿ ಪಾಲಿಸಿದ ನಂತರವೇ, ಸದಸ್ಯ ಸಹಕಾರಿಗಳನ್ನು ಅಳವಡಿಸಿಕೊಳ್ಳಲು ನಿರ್ದೇಶಿಸಬೇಕು.

ಸದಸ್ಯ ಸಹಕಾರಿಗಳಿಗೆ ಸಭೆಗಳನ್ನು ನಡೆಸಲು, ವಿಷಯ ಮಂಡಿಸಲು, ವಿಷಯಕ್ಕೆ ಸಂಬಂಧಪಟ್ಟ ಟಿಪ್ಪಣಿ ನೀಡಲು ಮತ್ತು ನಡವಳಿಕೆಗಳನ್ನು ಸ್ಪಷ್ಟವಾಗಿ, ನೈಜವಾಗಿ, ಯಥಾವತ್ತಾಗಿ ದಾಖಲಿಸಲು ಮಾರ್ಗದರ್ಶನ ಸೂತ್ರಗಳನ್ನು ನೀಡಬೇಕು ಮತ್ತು ಅದನ್ನು ಸಂಯುಕ್ತ ಸಹಕಾರಿ ಮೊದಲೇ ಅನುಸರಿಸಬೇಕು.

ಸದಸ್ಯ ಸಹಕಾರಿಗಳು ಮಂಡಳಿ ಮತ್ತು ಸಾಮಾನ್ಯ ಸಭೆ ನಡೆದ ನಂತರ ಎಷ್ಟು ಅವಧಿಯಲ್ಲಿ ಮಂಡಳಿ ಸದಸ್ಯರಿಗೆ ನಡಾವಳಿಗಳನ್ನು ರವಾನಿಸಬೇಕು ಮತ್ತು ನಡಾವಳಿಗಳನ್ನು ದಾಖಲಿಸುವ ವಿಧಿವಿಧಾನಗಳಿಗೆ ಮಾರ್ಗಸೂಚಿ ನೀಡಿ ಮಾದರಿಯಾಗಬೇಕು. ಮಂಡಳಿ ಮತ್ತು ಸಾಮಾನ್ಯ ಸಭೆ ನಡಾವಳಿಗಳೂ, ಠರಾವುಗಳಿಗೂ ಇರುವ ವ್ಯತ್ಯಾಸ ಮತ್ತು ಮನದಟ್ಟು ಮಾಡಿ ಮಾರ್ಗದರ್ಶನ ನೀಡಬೇಕು. ಅಂದರೆ ನಡವಳಿಕೆಗಳಲ್ಲಿ ಸದಸ್ಯರು ಭಾಗವಹಿಸಿ, ಅಭಿಪ್ರಾಯ ವ್ಯಕ್ತ, ಪಡಿಸಿದಾಗ, ಅವಶ್ಯಕವಿರುವ ಭಾಗವನ್ನು ಮಾತ್ರ ದಾಖಲಿಸಬೇಕು ಮತ್ತು ಠರಾವು ಮಾಡುವಾಗ ವಿಷಯ ಚರ್ಚೆ ಮುಗಿದ ನಂತರ ಅಂತಿಮ ತೀರ್ಮಾನವೇ ಠರಾವಿನ ರೂಪ ತಳೆಯುತ್ತದೆ. ಈ ಠರಾವಿನಲ್ಲಿ ಅಸಮ್ಮತ ವ್ಯಕ್ತ ಪಡಿಸಿದ ಸದಸ್ಯರ ಹೆಸರನ್ನು ದಾಖಲಿಸಿದರೇ ಮಾತ್ರ, ಅಂತಹ ಸದಸ್ಯರು ಆ ತೀರ್ಮಾನದಿಂದ ಆಗುವ ನಷ್ಟಕ್ಕೆ ಜವಾಬ್ದಾರರಾಗುವುದಿಲ್ಲ. ಇದನ್ನು ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ಸುತ್ತೋಲೆ ಮುಖಾಂತರ ಖಾತರಿ ಪಡಿಸಿಕೊಳ್ಳುವುದು ಸಂಯುಕ್ತ ಸಹಕಾರಿಯ ಮಂಡಳಿ ಜವಾಬ್ದಾರಿ.

# ಅಧ್ಯಾಯ – 9

# ಲೆಕ್ಕಪರಿಶೋಧನೆ

**ಕಲಂ.32 : ದಾಖಲೆಗಳು, ಲೆಕ್ಕಪತ್ರ ಇತ್ಯಾದಿಗಳನ್ನು ಇಡುವುದು :**

(1) ಪ್ರತಿಯೊಂದು ಸಹಕಾರಿಯು ಅದರ ನೋಂದಾಯಿತ ಕಛೇರಿಯಲ್ಲಿ ಈ ಕೆಳಗಿನವುಗಳನ್ನು ಇಟ್ಟುಕೊಂಡು ಬರತಕ್ಕದ್ದು, ಎಂದರೆ,–

(ಎ) ಇಂದಿನವರೆಗಿನ ತಿದ್ದುಪಡಿಗಳ ಸಹಿತವಾಗಿರುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರತಿ;

(ಬಿ) ನೋಂದಣಿ ಪ್ರಮಾಣ ಪತ್ರ ಮತ್ತು ನೋಂದಾಯಿತ ಉಪವಿಧಿಗಳು ಮತ್ತು ಕಾಲ ಕಾಲಕ್ಕೆ ನೋಂದಣಿಯಾದ ತಿದ್ದುಪಡಿಗಳ ಮೂಲಪ್ರತಿಗಳು;

(ಸಿ) ಸಂಯುಕ್ತ ಸಹಕಾರಿ ಮತ್ತು ಅದರ ಪೂರಕ ಸಂಘಗಳು ಯಾವುದಾದರೂ ಇದ್ದರೆ ಅಂಥ ಪ್ರತಿಯೊಂದು ಸಂಘದ ಉಪವಿಧಿಗಳ ಪ್ರತಿ;

(ಡಿ) [ಸಹಕಾರ ವರ್ಷ ಮುಕ್ತಾಯದ] ಮೂವತ್ತು ದಿನಗಳೊಳಗೆ ಪ್ರಸಕ್ತ ವರ್ಷದಲ್ಲಿ ಮತ ನೀಡುವ ಹಕ್ಕುಗಳ ಮತ್ತು ವಿವಿಧ ಸೇವೆಗಳ ಸದಸ್ಯವಾರು ಬಳಕೆಯ ಬಗ್ಗೆ ಇಂದಿನವರೆಗಿನ ವಿವರಗಳನ್ನುಳ್ಳ ಸದಸ್ಯರುಗಳ ರಿಜಿಸ್ಟರು;

(ಇ) ಸಹಕಾರಿ ಮತ್ತು ಅದರ ಶಾಖೆಯೇನಾದರೂ ಇದ್ದಲ್ಲಿ ಅದು ಸ್ವೀಕರಿಸಲಾದ ಮತ್ತು ಖರ್ಚುಮಾಡಲಾದ ಹಣದ ಎಲ್ಲಾ ಮೊತ್ತಗಳ ಬಗೆಗಿನ ಲೆಕ್ಕಗಳು ಮತ್ತು ಅದರ ಉದ್ದೇಶಗಳು;

(ಎಫ್) ಸಹಕಾರಿಯು ಮಾಡಿದ ಎಲ್ಲಾ ಸರಕುಗಳ ಖರೀದಿ ಮತ್ತು ಮಾರಾಟಗಳ ಲೆಕ್ಕಗಳು;

(ಜಿ) ಸಹಕಾರಿಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಲೆಕ್ಕಗಳು;

(ಹೆಚ್) ನಡವಳಿಕೆಗಳ ಪುಸ್ತಕ;

(ಐ) ಮಂಡಳಿಯ ನಿರ್ಣಯದ ಪ್ರತಿಗಳು; ಮತ್ತು

(ಜೆ) ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಮತ್ತು ಸಹಕಾರಿಯು ಶಾಖಾ ಕಛೇರಿಯನ್ನು ಹೊಂದಿರುವಲ್ಲಿ ಅಂಥ ಶಾಖೆಗೆ ಸಂಬಂಧಪಟ್ಟ ಲೆಕ್ಕಪತ್ರಗಳು ಮತ್ತು ದಾಖಲೆಗಳು.

[(1ಎ) ಪ್ರತಿಯೊಂದು ಸಹಕಾರಿಯ ಪ್ರತಿ ಸದಸ್ಯನಿಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ತತ್ಸಂಬಂಧದ ಮಾಹಿತಿಗಳನ್ನು ನೋಡಲು ಅವಕಾಶ ಕಲ್ಪಿಸತಕ್ಕದ್ದು.]

(2) ಮಂಡಳಿಯ ಮತ್ತು ಸಾಮಾನ್ಯ ಸಭೆಗಳಲ್ಲಿನ ನಿರ್ಣಯಗಳು, ಮತದಾರರ ಪಟ್ಟಿ, ಉಪವಿಧಿಗಳು, ವಾರ್ಷಿಕ ಲೆಕ್ಕಪತ್ರಗಳ ವಿವರಪತ್ರ ಮತ್ತು ಸದಸ್ಯರಿಗೆ ಸಂಬಂಧಪಟ್ಟಂಥ ಲೆಕ್ಕಗಳ ಪ್ರತಿಗಳು, ಸಹಕಾರಿಯು ನಿರ್ಣಯಿಸಬಹುದಾದ ಅವಶ್ಯಕ ಶುಲ್ಕವನ್ನು ಸಂದಾಯ ಮಾಡಿದ ತರುವಾಯ ವ್ಯವಹಾರದ ವೇಳೆಯಲ್ಲಿ ಯಾವನೇ ಸದಸ್ಯನಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(3) ಪ್ರತಿಯೊಂದು ಸಹಕಾರಿಯ ಲೆಕ್ಕಗಳ ಪುಸ್ತಕಗಳನ್ನು ಸಮರ್ಥಿಸುವ ದಾಖಲೆಗಳ ಮತ್ತು ವೋಚರುಗಳ ಜೊತೆಗೆ ಮಂಡಳಿಯು ನಿರ್ಧರಿಸಬಹುದಾದಂಥ ಅವಧಿಯವರೆಗೆ ಸಂರಕ್ಷಿಸತಕ್ಕದ್ದು.

**ಕಲಂ.33 : ಸಹಕಾರಿಯ ಲೆಕ್ಕಪರಿಶೋಧನೆ :**

(1) ಪ್ರತಿಯೊಂದು ಸಹಕಾರಿಯು ಕನಿಷ್ಠ ವರ್ಷಕ್ಕೊಮ್ಮೆಯಾದರು ತನ್ನ ಲೆಕ್ಕಪತ್ರಗಳನ್ನು ಪ್ರತಿ ಸಹಕಾರಿ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು

ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರಿಯ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪರಿಶೋಧನೆ ಮಾಡಿಸತಕ್ಕದ್ದು.

ಪರಂತು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ರಾಜ್ಯದಲ್ಲಿರುವ ಸಹಕಾರಿಗಳ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವಗಳನ್ನು ಹೊಂದಿರುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಲು ಮತ್ತು ನಿರ್ವಹಿಸಲು ಸಕ್ಷಮನಾದ ಪ್ರಾಧಿಕಾರವಾಗಿರತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಸಾಮಾನ್ಯ ನಿಕಾಯವು ತನ್ನ ಸಾಮಾನ್ಯ ಸಭೆಯಲ್ಲಿ ಸದರಿ ಸಹಕಾರಿಯ ಆ ಸಹಕಾರ ವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಲು ಒಬ್ಬ ಲೆಕ್ಕಪರಿಶೋಧಕನನ್ನು ಅಥವಾ ಒಂದು ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸತಕ್ಕದ್ದು.

[ಪರಂತು, ಯಾವ ಸಹಕಾರಿಯು ಸಹಕಾರಿ ವರ್ಷದ ಲೆಕ್ಕಪರಿಶೋಧನೆಯನ್ನು ಮಾಡಿಸಲು ಮಹಾಸಭೆಯಲ್ಲಿ ಲೆಕ್ಕ ಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಲು ಮತ್ತು ನಿಯಮಾನುಸಾರ ತಿಳಿಸಲು ವಿಫಲವಾಗಿದೆಯೆಂದು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮನದಟ್ಟಾದಲ್ಲಿ, ಸಂಬಂಧಿತ ಸಹಕಾರಿಗೆ ಲಿಖಿತ ಹೇಳಿಕೆ ನೀಡಲು ಅವಕಾಶ ನೀಡಿದ ತರುವಾಯ ಹಾಗೂ ನೇಮಕ ಮಾಡಿಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗಳ ಅನುಮೋದಿತ ಪಟ್ಟಿಯೊಳಗಿನಿಂದ ಲೆಕ್ಕಪರಿಶೋಧನೆ ಮಾಡಲು ವಿಫಲವಾದ ಅಂಥ ಸಹಕಾರಿಯ ಸಂಬಂಧಿತ ವರ್ಷದ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸಬಹುದು ಹಾಗೂ ಸದರಿ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ನಿರ್ದಿಷ್ಟ ವರ್ಷಕ್ಕೆ ಆ ಸಹಕಾರಿಯ ಲೆಕ್ಕಪರಿಶೋಧಕರೆಂದು ಪರಿಗಣಿಸತಕ್ಕದ್ದು: ಮತ್ತು ಪರಂತು, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ನಿರ್ವಹಿಸುವ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ನಮೂದಿಸಿರುವ ಸರ್ಕಾರಿ ಲೆಕ್ಕಪರಿಶೋಧಕರ ಸಂದರ್ಭದಲ್ಲಿ ಅವರನ್ನು ಪದನಾಮ ಮಾತ್ರ ದಿಂದಲೇ ನಮೂದಿಸತಕ್ಕದ್ದು. ಮತ್ತು ಸಹಕಾರಿಯು ಇಂತಹ ಲೆಕ್ಕಪರಿಶೋಧಕರ ಪಟ್ಟಿಯಿಂದ ಸರ್ಕಾರಿ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡಲ್ಲಿ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ತಿಳಿಸತಕ್ಕದ್ದು.]

(3) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸುವ ರೀತಿಯು ಹಾಗೂ ಪ್ರತಿ ಸಹಕಾರಿಗೆ ತಂಡದ ಪಟ್ಟಿಯನ್ನು ಕಳುಹಿಸುವ ಕಾರ್ಯವಿಧಾನವು ನಿಯಮಿಸ ಬಹುದಾದಂತೆ ಇರತಕ್ಕದ್ದು.

(4) ಈ ಪ್ರಕರಣದ (1)ನೇ ಉಪಪ್ರಕರಣದಡಿ ಲೆಕ್ಕಪರಿಶೋಧನೆಯು, ಸುಸ್ತಿಯಾದ ಋಣಗಳು ಯಾವುದಾದರೂ ಇದ್ದರೆ ಅವುಗಳ ಪರಿವೀಕ್ಷಣೆ, ಆಸ್ತಿಗಳ ಮತ್ತು ಹೊಣೆಗಳ ಭೌತಿಕ ಪರಿಶೀಲನೆ ಮತ್ತು ಮೌಲ್ಯನಿರ್ಧರಣೆ, ನಗದು ಶಿಲ್ಕಿನ ಮತ್ತು ಭದ್ರತಾ ಪತ್ರಗಳ ಪರಿಶೀಲನೆ, ಲಾಭ ಅಥವಾ ನಷ್ಟದ ದೃಢೀಕರಣ, ಭಾರತೀಯ ರಿಸರ್ವ್ ಬ್ಯಾಂಕಿನ ಅಥವಾ ನಬಾರ್ಡಿನ ಸೂಚನೆಗಳು ಮತ್ತು ನಿರ್ದೇಶಗಳನ್ನೊಳಗೊಂಡಂತೆ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವ ಇತರ ಕಾನೂನುಗಳ ಮತ್ತು ಪಾರದರ್ಶಕತೆ ಕಾನೂನಿನ ಪಾಲನೆ ಹಾಗೂ ಸಹಕಾರಿಯ ಕಾರ್ಯನಿರ್ವಹಣೆ ಮತ್ತು ನಿಯಮಿಸಲಾದ ಇತರ ವಿವರಗಳ ಪರಿವೀಕ್ಷಣೆ ಇವುಗಳನ್ನು ಒಳಗೊಂಡಿರತಕ್ಕದ್ದು.

(5) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಸಹಕಾರಿಗೆ ಸೇರಿದ ಮತ್ತು ಅದರ ಅಭಿರಕ್ಷೆಯಲ್ಲಿರುವ ಅಥವಾ ಸಹಕಾರಿಯ ಆಡಳಿತ ಮಂಡಳಿಯ ಯಾವುದೇ ಸದಸ್ಯರ ಅಥವಾ ಪದಾಧಿಕಾರಿಯ ಅಥವಾ ಮುಖ್ಯ ಕಾರ್ಯನಿರ್ವಾಹಕನ ಅಥವಾ ಇತರ ಯಾವುದೇ ನೌಕರನ ಅಭಿರಕ್ಷೆಯಲ್ಲಿರುವ ಎಲ್ಲಾ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾಪತ್ರಗಳನ್ನು, ನಗದು ಹಣವನ್ನು ಮತ್ತು ಇತರ ಸ್ವತ್ತುಗಳನ್ನು ಎಲ್ಲಾ ಕಾಲಗಳಲ್ಲಿ ಪರಿಶೀಲಿಸುವ ಅವಕಾಶವಿರತಕ್ಕದ್ದು ಹಾಗೂ ಅಂಥಹ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಅಥವಾ ಇತರ ಸ್ವತ್ತುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಅಥವಾ ಅವುಗಳ ಅಭಿರಕ್ಷೆಗೆ ಹೊಣೆಗಾರನಾಗಿರುವ ಯಾರೇ ವ್ಯಕ್ತಿಯನ್ನು ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಹಾಜರುಪಡಿಸುವಂತೆ ಸಮನು ಮಾಡಬಹುದು.

(6) ಸಹಕಾರಿಯ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಯಾವುದೇ ಕಾಲದಲ್ಲಿ ಆಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸಹಕಾರಿಯ ಪ್ರತಿಯೊಬ್ಬ ಸದಸ್ಯನು ಅಥವಾ ಮಾಜಿ ಸದಸ್ಯನು, ಸಹಕಾರಿಯ ವ್ಯವಹಾರ ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಅಗತ್ಯ ಪಡಿಸುವಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(7) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ, ಪ್ರತಿ ಸಹಕಾರಿಯ ಆಡಳಿತ ಮಂಡಳಿಯು ಸಹಕಾರ ವರ್ಷದ ಕೊನೆಯಲ್ಲಿದ್ದಂತೆ ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ, ಲಾಭ ಮತ್ತು ನಷ್ಟ ತೋರಿಸುವಂಥ ಆರ್ಥಿಕ ತಃಖ್ತೆಗಳನ್ನು ಮತ್ತು ಆಸ್ತಿ ಹೊಣೆ ಪಟ್ಟಿಯನ್ನು (ಅಡಾವೆ ಪತ್ರಿಕೆ) ನಿಯಮಿಸಬಹುದಾದಂಥ ಅನುಸೂಚಿಗಳು ಮತ್ತು ಇತರ ತಃಖ್ತೆಗಳ ಸಹಿತ ತಯಾರಿಸಿ ಲೆಕ್ಕಪರಿಶೋಧಕನ ಅಥವಾ ಲೆಕ್ಕ ಪರಿಶೋಧಿಸುವ ಸಂಸ್ಥೆಯ ಮುಂದೆ ಲೆಕ್ಕಪರಿಶೋಧನೆಗಾಗಿ ಒಪ್ಪಿಸುವುದನ್ನು ಖಚಿತಪಡಿಸತಕ್ಕದ್ದು.

(8) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟೆಂಬರ್ ಒಂದರೊಳಗಾಗಿ ಸಹಕಾರಿಗೆ ಮತ್ತು ಅದರ ಪ್ರತಿಗಳನ್ನು ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಮತ್ತು ಸದರಿ ಸಹಕಾರಿಯು ಯಾವುದೇ ಇತರ ಸಹಕಾರಿಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ತಿಳಿಸತಕ್ಕದ್ದು.

(9) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು, ಸಹಕಾರಿಯ ಸಾಮಾನ್ಯ ಸಭೆಗೆ ಸಂಬಂಧಿಸಿದ ಎಲ್ಲಾ ನೋಟೀಸುಗಳನ್ನು ಮತ್ತು ಪ್ರತಿಯೊಂದು ಸಮಾಚಾರವನ್ನು ಸ್ವೀಕರಿಸಲು ಹಾಗೂ ಆ ಸಹಕಾರಿಯ ಖರ್ಚಿನಲ್ಲಿ, ಅಂತಹ ಸಭೆಗೆ ಹಾಜರಾಗಲು ಮತ್ತು ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ತನಗೆ ಸಂಬಂಧಿಸಿದ ವ್ಯವಹಾರದ ಯಾವುದೇ ಅಂಶಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಸಭೆಯಲ್ಲಿ ಆಲಿಸಲ್ಪಡಲು ಹಕ್ಕುಳ್ಳವನಾಗಿರತಕ್ಕದ್ದು.

(10) (1)ನೇ ಉಪಕರಣದ ಮೇರೆಗೆ ನಡೆಸಿದ ಲೆಕ್ಕಪರಿಶೋಧನೆಯ ಫಲಿತವು ಸಹಕಾರಿಯ ಕಾರ್ಯನಿರ್ವಹಣೆಯಲ್ಲಿನ ಯಾವುದೇ ದೋಷಗಳನ್ನು ತಿಳಿಯಪಡಿಸಿದರೆ, ಆಡಳಿತ ಮಂಡಳಿಯು ಲೆಕ್ಕ ಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿದ ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ನೇರ್ಪಡಿಸಲು ಕ್ರಮಕೈಗೊಳ್ಳತಕ್ಕದ್ದು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಕ್ರಮ ತೆಗೆದುಕೊಂಡ ವರದಿ ಸಹಿತ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸದರಿ ದೋಷಗಳನ್ನು ಮತ್ತು ಅಕ್ರಮಗಳನ್ನು ವಿವರಿಸತಕ್ಕದ್ದು. ಆಡಳಿತ ಮಂಡಳಿಯು ಲೆಕ್ಕಪರಿಶೋಧನಾ ವರದಿಯಲ್ಲಿನ ಎಲ್ಲಾ ದೋಷಗಳನ್ನು ಸರಿಪಡಿಸಲು ಮತ್ತು ಎಲ್ಲಾ ಅಕ್ರಮಗಳನ್ನು ನೇರ್ಪಡಿಸಲು ಕ್ರಮಕೈಗೊಳ್ಳುವುದನ್ನು ಮುಂದುವರಿಸತಕ್ಕದ್ದು ಮತ್ತು ವಾರ್ಷಿಕ ಸಾಮಾನ್ಯ ಸಭೆಗೆ ಶ್ರುತಪಡಿಸತಕ್ಕದ್ದು. ಆಡಳಿತ ಮಂಡಳಿಯು ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಸಂಯುಕ್ತ ಸಹಕಾರಿಗೆ ಕ್ರಮ ತೆಗೆದುಕೊಂಡ ವರದಿಯನ್ನು ಸಲ್ಲಿಸತಕ್ಕದ್ದು.

(11) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅಪೆಕ್ಸ್ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ನಿಯಮಿಸಲಾದ ರೀತಿಯಲ್ಲಿ ವಿಧಾನ ಮಂಡಳದಲ್ಲಿ ಮಂಡಿಸಲು ಅನುವಾಗುವಂತೆ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷವೂ ಸಲ್ಲಿಸತಕ್ಕದ್ದು.

(12) ನಿಯತ ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಪತ್ತೆಹಚ್ಚಿರದ ಅಥವಾ ಸರಿಯಾಗಿ ಪರಿಶೀಲನೆ ಮಾಡಿಲ್ಲದ ನಿಧಿಗಳ ವಂಚನೆ ಅಥವಾ ದುರ್ವಿನಿಯೋಗ ಅಥವಾ ದುರುಪಯೋಗ ಆಗಿದೆಯೆಂಬುದು ಸಹಕಾರಿಯ ಸಾಮಾನ್ಯ ನಿಕಾಯಕ್ಕೆ ಕಂಡು ಬಂದರೆ ಅಥವಾ ಲೆಕ್ಕಗಳ ತಪ್ಪು ವರ್ಗೀಕರಣ ಮಾಡಿರುವುದು ಕಂಡುಬಂದರೆ, ಅಂಥ ಸಹಕಾರಿಯ ಸಾಮಾನ್ಯ ಸದಸ್ಯರ ಸಭೆಯು ಸಹಕಾರಿಯ ಹಣಕಾಸು ಪರಿಸ್ಥಿತಿಯನ್ನು ಸತ್ಯವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಯಾವುದೇ ಲೆಕ್ಕಪತ್ರವನ್ನು ಮರುಲೆಕ್ಕಪರಿಶೋಧಿಸಲು ತೀರ್ಮಾನಿಸಬಹುದು.

(13) ಸಹಕಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸಹಕಾರಿಯ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆ

ಮಾಡುವುದು ಅವಶ್ಯಕ ಅಥವಾ ಯುಕ್ತವೆಂದು ಕಂಡುಬಂದರೆ, ರಾಜ್ಯ ಸರ್ಕಾರವು, ಆದೇಶದ ಮೂಲಕ ಅಂಥ ಮರು ಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡಬಹುದು ಮತ್ತು ಲೆಕ್ಕಪರಿಶೋಧನೆಗೆ ಅನ್ವಯವಾಗುವ ಅಧಿನಿಯಮ ಮತ್ತು ನಿಯಮಗಳು, ಉಪಬಂಧಗಳು ಅಂಥ ಮರು ಲೆಕ್ಕಪರಿಶೋಧನೆಗೆ ಅನ್ವಯವಾಗತಕ್ಕದ್ದು;

ಪರಂತು, ನಿಯತ ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಸಂಸ್ಥೆಯು ಪತ್ತೆಹಚ್ಚಿರದ ಅಥವಾ ಸರಿಯಾಗಿ ಪರಿಶೀಲನೆ ಮಾಡಿಲ್ಲದ ಹಣದ ಬಗ್ಗೆ ವಂಚನೆ ಆಗಿದೆಯೆಂದು ಅಥವಾ ದುರ್ವಿನಿ ಯೋಗವಾಗಿದೆಯೆಂಬುದು ಅಥವಾ ದುರುಪಯೋಗವಾಗಿದೆಯೆಂಬುದು ಮೇಲ್ನೋಟಕ್ಕೆ ಕಂಡುಬಂದರೆ ಅಂಥ ಲೆಕ್ಕಪತ್ರಗಳ ತಪ್ಪು ವರ್ಗೀಕರಣ ಮಾಡಿದ್ದರೆ ಅಥವಾ ಸಹಕಾರಿಯ ಹಣಕಾಸು ಪರಿಸ್ಥಿತಿಯನ್ನು ಸತ್ಯವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಯಾವುದೇ ಇತರ ಸಮಂಜಸ ಕಾರಣಗಳಿಗಾಗಿ ಅಂಥ ಮರುಲೆಕ್ಕಪರಿಶೋಧನೆಗೆ ಆದೇಶ ಮಾಡತಕ್ಕದ್ದು.

(14) (4) ರಿಂದ (6)ನೇ ಉಪಪ್ರಕರಣಗಳ ಉಪಬಂಧಗಳಿಗೆ ಭಾಧಕವಾಗದಂತೆ, ಲೆಕ್ಕಪರಿಶೋಧಕನು, –

(ಎ) ಸಹಕಾರಿಯ ಭದ್ರತೆಯ ಆಧಾರದ ಮೇಲೆ ನೀಡಿರುವ ಸಾಲಗಳನ್ನು ಅಥವಾ ಮುಂಗಡಗಳನ್ನು ಸೂಕ್ತವಾಗಿ ಭದ್ರತೆ ಪಡೆದು ನೀಡಲಾಗಿದೆಯೇ ಮತ್ತು ಯಾವ ನಿಬಂಧನೆಗಳ ಮೇಲೆ ಅವುಗಳನ್ನು ನೀಡಲಾಗಿದೆಯೋ ಆ ನಿಬಂಧನೆಗಳು ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಬಿ) ಕೇವಲ ಪುಸ್ತಕ ನಮೂದುಗಳಿಂದ ಪ್ರತಿನಿಧಿಸಲ್ಪಡುವ ಸಹಕಾರಿಯ ವ್ಯವಹಾರಗಳು ಅದರಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಸಿ) ವೈಯಕ್ತಿಕ ವೆಚ್ಚಗಳನ್ನು ರಾಜಸ್ವ ಲೆಕ್ಕಕ್ಕೆ ಖರ್ಚು ಹಾಕಲಾಗಿದೆಯೇ ಎಂಬ ಬಗ್ಗೆ;

(ಡಿ) ಯಾವುದೇ ಷೇರುಗಳನ್ನು ನಗದಿಗಾಗಿ ಹಂಚಿಕೆ ಮಾಡಲಾಗಿದೆ ಎಂದು ಪುಸ್ತಕಗಳಲ್ಲಿ ಮತ್ತು ಕಾಗದ ಪತ್ರಗಳಲ್ಲಿ ನಿರೂಪಿಸುವಲ್ಲಿ, ಅಂಥ ಹಂಚಿಕೆಗೆ ಸಂಬಂಧಪಟ್ಟಂತೆ ನಗದನ್ನು ವಾಸ್ತವಿಕವಾಗಿ ಸ್ವೀಕರಿಸಲಾಗಿದೆಯೇ ಮತ್ತು ಯಾವುದೇ ನಗದನ್ನು ವಾಸ್ತವಿಕವಾಗಿ ಹಾಗೆ ಸ್ವೀಕರಿಸಿಲ್ಲದಿದ್ದರೆ, ಲೆಕ್ಕ ಪುಸ್ತಕಗಳಲ್ಲಿ ಮತ್ತು ಆಸ್ತಿ–ಹೊಣೆ ಪಟ್ಟಿ (ಅಡಾವೆ ಪತ್ರಿಕೆ)ಯಲ್ಲಿ ನಿರೂಪಿಸಲಾದ ಸ್ಥಿತಿಯು ಸರಿಯಾದುದೇ, ಕ್ರಮ ಬದ್ಧವಾದುದೇ ಮತ್ತು ದಾರಿ ತಪ್ಪಿಸುವಂಥದ್ದಲ್ಲವೇ ಎಂಬ ಬಗ್ಗೆ;

(ಇ) ವಿಚಾರಣೆ ಮಾಡುವ ಸಲುವಾಗಿ ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಉಲ್ಲೇಖಿಸಿದ ಯಾವುದೇ ವಿಶೇಷ ವಿವಾದಾಂಶ ಅಥವಾ ವಿಷಯದ ಬಗೆಗಿನ ವರದಿಯನ್ನು ರಿಸರ್ವ್ ಬ್ಯಾಂಕಿಗೆ ಅಥವಾ ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿಗೆ ಸಲ್ಲಿಸಲಾಗಿದೆಯೇ ಎಂಬ ಬಗ್ಗೆ;

**– ವಿಚಾರಣೆ ಮಾಡತಕ್ಕದ್ದು.**

(15) ಲೆಕ್ಕಪರಿಶೋಧಕನು, ತಾನು ಪರಿಶೀಲಿಸಿದ ಲೆಕ್ಕಪತ್ರಗಳ ಬಗ್ಗೆ ಮತ್ತು ತನ್ನ ಪದಾವಧಿಯಲ್ಲಿ, ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಮುಂದೆ ಮಂಡಿಸಿದ ಪ್ರತಿಯೊಂದು ಆಸ್ತಿ–ಹೊಣೆ ಪಟ್ಟಿ (ಅಡಾವೆ ಪತ್ರಿಕೆ)ಯ ಮತ್ತು ಲಾಭ ಮತ್ತು ನಷ್ಟದ ಲೆಕ್ಕದ ಬಗ್ಗೆ ಹಾಗೂ ಆಸ್ತಿ–ಹೊಣೆ ಪಟ್ಟಿ (ಅಡಾವೆ ಪತ್ರಿಕೆ) ಅಥವಾ ಲಾಭ ಮತ್ತು ನಷ್ಟ ಲೆಕ್ಕದ ಒಂದು ಭಾಗವಾಗಿರ ಬೇಕೆಂದು ಅಗತ್ಯಪಡಿಸಲಾದ ಅಥವಾ ಅದಕ್ಕೆ ಲಗತ್ತಿಸಲಾದ ಪ್ರತಿಯೊಂದು ಇತರ ದಸ್ತಾವೇಜುಗಳ ಬಗ್ಗೆ ಸಹಕಾರಿಗೆ ವರದಿ ಮಾಡತಕ್ಕದ್ದು ಮತ್ತು ಆ ವರದಿಯು ಅವನ ಅಭಿಪ್ರಾಯದಲ್ಲಿ ಮತ್ತು ಅವನಿಗೆ ಮಾಹಿತಿ ಇರುವಷ್ಟರಮಟ್ಟಿಗೆ ಮತ್ತು ಅವನಿಗೆ ವಿವರಣೆ ನೀಡಿರುವುದಕ್ಕೆ ಅನುಸಾರವಾಗಿ, ಸದರಿ ಲೆಕ್ಕಗಳು ಈ ಅಧಿನಿಯಮದಲ್ಲಿ ಅಗತ್ಯಪಡಿಸಲಾದ ಮಾಹಿತಿಯನ್ನು ಹಾಗೆ ಅಗತ್ಯಪಡಿಸಿದ ರೀತಿಯಲ್ಲಿ ನೀಡುವುದೇ ಮತ್ತು,–

(ಎ) ಆಸ್ತಿ–ಹೊಣೆ ಪಟ್ಟಿ (ಅಡಾವೆ ಪತ್ರಿಕೆ)ಯ ಸಂದರ್ಭದಲ್ಲಿ, ಸಹಕಾರ ವರ್ಷದ ಅಂತ್ಯದಲ್ಲಿ ಇದ್ದಂತೆ ಸಹಕಾರಿ ವ್ಯವಹಾರಗಳ ಸ್ಥಿತಿಯ ಬಗ್ಗೆ, ಮತ್ತು;

(ಬಿ) ಲಾಭ ಮತ್ತು ನಷ್ಟದ ಲೆಕ್ಕದ ಸಂದರ್ಭದಲ್ಲಿ, ಸಹಕಾರ ವರ್ಷದ ಲಾಭ ಅಥವಾ ನಷ್ಟದ ಬಗ್ಗೆ,

– ನಿಜವಾದ ಮತ್ತು ನ್ಯಾಯ ಸಮ್ಮತವಾದ ಚಿತ್ರಣವನ್ನು ನೀಡುವುದೇ,

– ಎಂಬುದನ್ನು ತಿಳಿಸತಕ್ಕದ್ದು.

(16) ಲೆಕ್ಕಪರಿಶೋಧಕನ ವರದಿಯು, –

(ಎ) ಅವನು, ಲೆಕ್ಕಪರಿಶೋಧನೆ ಮಾಡುವ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ತಿಳಿದಿರುವ ಮತ್ತು ನಂಬಿರುವಷ್ಟರ ಮಟ್ಟಿಗಿನ ಎಲ್ಲಾ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಪಡೆದಿರುವನೇ ಎಂಬುದನ್ನು;

(ಬಿ) ತನ್ನ ಅಭಿಪ್ರಾಯದಲ್ಲಿ, ಆ ಲೆಕ್ಕಪುಸ್ತಕಗಳ ಪರಿಶೀಲನೆಯಿಂದ ಕಂಡು ಬರಬಹುದಾದಷ್ಟರ ಮಟ್ಟಿಗೆ ಸಹಕಾರಿಯು, ಸೂಕ್ತ ಲೆಕ್ಕಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುತ್ತಿದೆಯೇ ಮತ್ತು ಆತನು ಭೇಟಿ ನೀಡದ ಸಹಕಾರಿಯ ಶಾಖೆಗಳಿಂದ ಅಥವಾ ಕಛೇರಿಗಳಿಂದ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸಾಕಷ್ಟಾದ ವಿದ್ಯುಕ್ತ ವರದಿಗಳನ್ನು ಸ್ವೀಕರಿಸಲಾಗಿದೆಯೇ ಎಂಬುದನ್ನು;

(ಸಿ) ಸಹಕಾರಿಯ ಲೆಕ್ಕಪರಿಶೋಧಕನನ್ನು ಹೊರತು ಪಡಿಸಿ ಇತರ ವ್ಯಕ್ತಿಯು ಲೆಕ್ಕಪರಿಶೋಧನೆ ಮಾಡಿರುವ ಯಾವುದೇ ಶಾಖಾ ಕಛೇರಿಯ ಲೆಕ್ಕಪತ್ರಗಳ ಮೇಲಿನ ವರದಿಯನ್ನು ಅವನಿಗೆ ಕಳುಹಿಸಿಕೊಡಲಾಗಿದೆಯೇ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸುವಲ್ಲಿ, ಅವನು ಆ ವರದಿಯನ್ನು ಹೇಗೆ ಪರಿಗಣಿಸಿದ್ದಾನೆ ಎಂಬುದನ್ನು;

(ಡಿ) ವರದಿಯಲ್ಲಿ ಉಲ್ಲೇಖಿಸಲಾಗಿರುವ ಸಹಕಾರಿಯ ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯು ಮತ್ತು ಲಾಭ ಮತ್ತು ನಷ್ಟದ ಲೆಕ್ಕವು, ಲೆಕ್ಕಪುಸ್ತಕಗಳೊಡನೆ ಮತ್ತು ವಿಧ್ಯುಕ್ತ ವರದಿಗಳೊಡನೆ ತಾಳೆಯಾಗುವುದೇ ಎಂಬುದನ್ನು;

– ಸಹ ತಿಳಿಸತಕ್ಕದ್ದು,

(17) (14)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (15)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (16)ನೇ ಉಪಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯದ ಬಗ್ಗೆ ನಕರಾತ್ಮಕವಾಗಿ ಅಥವಾ ಷರತ್ತುಬದ್ಧ ಅವಲೋಕನದೊಂದಿಗೆ ಉತ್ತರಿಸಿದಾಗ, ಲೆಕ್ಕಪರಿಶೋಧಕನ ವರದಿಯಲ್ಲಿ, ಆ ಉತ್ತರಕ್ಕಾಗಿ ಕಾರಣವನ್ನು ತಿಳಿಸತಕ್ಕದ್ದು.

(18) ಲೆಕ್ಕಪರಿಶೋಧನಾ ವರದಿಯು,–

(ಎ) ಲೆಕ್ಕಪರಿಶೋಧನೆಯಲ್ಲಿ ಅವಲೋಕಿಸಿದ ದೋಷಗಳ ಅಥವಾ ಅಕ್ರಮಗಳ ಎಲ್ಲಾ ವಿವರಗಳು ಮತ್ತು ಆರ್ಥಿಕ ಅಕ್ರಮಗಳು ಮತ್ತು ಹಣ ದುರುಪಯೋಗ ಇದ್ದಲ್ಲಿ, ನಿಧಿಗಳ ದುರುಪಯೋಗ ಅಥವಾ ಮೋಸ ಆಗಿರುವಲ್ಲಿ, ಲೆಕ್ಕ ಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ಅವ್ಯವಹಾರದಲ್ಲಿನ ಕಾರ್ಯರೀತಿ, ವಹಿಸಿಕೊಡುವಿಕೆ ಮತ್ತು ಒಳಗೊಂಡಿರುವ ಮೊತ್ತದ ಬಗ್ಗೆ ಪರೀಕ್ಷಿಸಿ ಹಣದ ಅಂತಹ ದುರುಪಯೋಗ ಅಥವಾ ದಾರ್ವಿನಿಯೋಗಕ್ಕೆ ಪ್ರಸಂಗಾನುಸಾರ ಆಡಳಿತ ಮಂಡಳಿಯ ಸದಸ್ಯರ ಅಥವಾ ಸಹಕಾರಿ ನೌಕರರ ಅಥವಾ ಇತರ ಯಾವುದೇ ವ್ಯಕ್ತಿಯ ಮೇಲೆ ಜವಾಬ್ದಾರಿ ನಿಗದಿಪಡಿಸಿ ತತ್ಸಂಬಂಧದ ಎಲ್ಲಾ ಅಗತ್ಯ ಸಾಕ್ಷ್ಯವನ್ನು ನೀಡತಕ್ಕದ್ದು;

(ಬಿ) ಲೆಕ್ಕನಿರ್ವಹಣಾ ಅಕ್ರಮಗಳ ಮತ್ತು ಅವುಗಳಿಂದ ಲಾಭ ನಷ್ಟದ ಮೇಲೆ ಸಂವಾದಿಯಾಗಿ ಆಗುವ ಪರಿಣಾಮವನ್ನು ಒಳಗೊಂಡಂತೆ ಆರ್ಥಿಕ ತಃಖ್ತೆಗಳ ಮೇಲಾಗುವ ಪರಿಣಾಮಗಳ ಎಲ್ಲಾ ವಿವರಗಳು;

(ಸಿ) ಸಹಕಾರಿಯ ಸಾಮಾನ್ಯ ನಿಕಾಯದ, ಆಡಳಿತ ಮಂಡಳಿಯ ಮತ್ತು ಉಪಸಮಿತಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಅದರಲ್ಲಿ ಯಾವುದೇ ಅಕ್ರಮಗಳನ್ನು ಅಥವಾ ಉಲ್ಲಂಘನೆಗಳನ್ನು ಅವಲೋಕಿಸಿದಲ್ಲಿ, ಅಂತಹ ಅಕ್ರಮ ಮತ್ತು ಉಲ್ಲಂಘನೆಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸುವುದು;

(ಡಿ) ನಿಯಮಿಸಬಹುದಾದಂಥ ಎಲ್ಲಾ ಅನುಸೂಚಿಗಳು ಮತ್ತು ಇತರ ತಃಖ್ತೆಗಳು.

– ಇವುಗಳನ್ನು ಹೊಂದಿರತಕ್ಕದ್ದು.

(19) ಯಾವುದೇ ಸಹಕಾರಿಯ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಸಂಭಾವನೆಯನ್ನು, ಸಹಕಾರಿಯ ದುಡಿಯುವ ಬಂಡವಾಳ ಮತ್ತು ವಹಿವಾಟಿನ ಆಧಾರದ ಮೇಲೆ, ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳ ರೀತ್ಯಾ ಅದರ ಸಾಮಾನ್ಯ ನಿಕಾಯವು ನಿಗದಿಪಡಿಸುವ ದರದಲ್ಲಿ ಸಹಕಾರಿಯು ಭರಿಸತಕ್ಕದ್ದು.

(20) ಮೇಲಿನ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು ಸಹಕಾರಿಯ ಹಿಂದಿನ ಮೂರು ವರ್ಷಗಳ ಲೆಕ್ಕಪರಿಶೋಧನಾ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಲೆಕ್ಕಪರಿಶೋಧಿತ ಖಾತೆ ಅಥವಾ ಲೆಕ್ಕಪರಿಶೋಧಿತ ಲೆಕ್ಕಗಳನ್ನು ಮರುಪರಿಶೀಲನೆ ಅಥವಾ ಮರುಸತ್ಯಾಪನೆ ಮಾಡುವ ಅಧಿಕಾರವು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಇರತಕ್ಕದ್ದು. ಹಾಗೂ ಸಂಬಂಧಿತ ಲೆಕ್ಕಪರಿಶೋಧಕರಿಗೆ ಮರುಪರಿಶೀಲನೆ ಅಥವಾ ಮರುಸತ್ಯಾಪನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಮುಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರ್ಪಡೆಗೊಳಿಸಲು ಸೂಚಿಸಬಹುದು.

**ವಿವರಣೆ : ಈ ಪ್ರಕರಣದ ಉದ್ದೇಶಕ್ಕಾಗಿ,–**

(1) 'ಲೆಕ್ಕಪರಿಶೋಧಕ' ಎಂದರೆ, ತನ್ನ ಪದವಿ ಅಥವಾ ಸ್ನಾತಕೋತ್ತರ ಪದವಿಯ ಜೊತೆಗೆ ಸಹಕಾರಿ ವ್ಯವಸ್ಥಾಪನೆಯಲ್ಲಿ ಉನ್ನತ ಡಿಪ್ಲೋಮಾ ಅಥವಾ ಸಹಕಾರಿ ಲೆಕ್ಕಪರಿಶೋಧನೆಯಲ್ಲಿ ಡಿಪ್ಲೋಮಾ ಅಥವಾ ಸಹಕಾರಿ ವ್ಯವಸ್ಥಾಪನೆಯಲ್ಲಿ ಸಾಮಾನ್ಯ ಡಿಪ್ಲೋಮಾದಲ್ಲಿ ತೇರ್ಗಡೆಯಾಗಿರುವ ಮತ್ತು ಪ್ರೊಬೇಷನರಿ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಕನ್ನಡ ಭಾಷೆಯ ವ್ಯವಹಾರ ಜ್ಞಾನವುಳ್ಳ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಒಬ್ಬ ಲೆಕ್ಕಪರಿಶೋಧಕ ಅಥವಾ ಒಬ್ಬ ಅಧಿಕಾರಿ;

ಅಥವಾ ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ, 1949ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬ ಸನ್ನದು ಲೆಕ್ಕಿಗ ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ 1959 ರಲ್ಲಿ ಅರ್ಥೈಸಿರುವಂತೆ, ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ವಿಸ್ತೃತ ಜ್ಞಾನವುಳ್ಳ ಸಹಕಾರಿಯ ಲೆಕ್ಕಪರಿಶೋಧನೆಯಲ್ಲಿ ಪರಿಣಿತನಾಗಿರುವ, ಕನಿಷ್ಠ ಮೂರು ವರ್ಷಗಳ ಲೆಕ್ಕಪರಿಶೋಧನೆ ಅನುಭವವುಳ್ಳ ಮತ್ತು ಕನ್ನಡ ಭಾಷಾಜ್ಞಾನವುಳ್ಳ ವೆಚ್ಚಲೆಕ್ಕಿಗ (Cost Accountant) ಹಾಗೂ ಅಂತಹ ಸನ್ನದು ಲೆಕ್ಕಿಗನು ಅಥವಾ ವೆಚ್ಚ ಲೆಕ್ಕಿಗನು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು.

(2) ಲೆಕ್ಕಪರಿಶೋಧಿಸುವ ಸಂಸ್ಥೆ ಎಂದರೆ, ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆ ಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ 1949ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬರಿಗಿಂತ ಹೆಚ್ಚಿನ ಚಾರ್ಟರ್ಡ್ ಲೆಕ್ಕಿಗರ ಒಂದು ಸಂಸ್ಥೆ ಅಥವಾ ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್ ಅಧಿನಿಯಮ 1959ರಲ್ಲಿ ಅರ್ಥೈಸಿರುವಂತೆ, ಒಂದಕ್ಕಿಂತ ಹೆಚ್ಚಿನ ವೆಚ್ಚ ಲೆಕ್ಕಿಗರನ್ನೊಳಗೊಂಡ ಸಂಸ್ಥೆ ಹಾಗೂ ಅಂತಹ ಚಾರ್ಟರ್ಡ್ ಲೆಕ್ಕಿಗರು ಅಥವಾ ವೆಚ್ಚಲೆಕ್ಕಿಗರು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು.

**ಕಲಂ.64 : ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧನೆ :**

(1) ಸಂಯುಕ್ತ ಸಹಕಾರಿಯು ತನ್ನ ಲೆಕ್ಕಪತ್ರಗಳನ್ನು ಪ್ರತಿ ವರ್ಷದಲ್ಲಿ ಕೊನೇ ಪಕ್ಷ ಒಮ್ಮೆಯಾದರೂ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಅದರ ಸಾಮಾನ್ಯ ಸದಸ್ಯರ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪ್ರತಿ ವರ್ಷ ಸೆಪ್ಟೆಂಬರ್ ಒಂದರೊಳಗಾಗಿ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(2) ಒಂದು ಸಹಕಾರಿಯ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ಪ್ರಕರಣ 33ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು.

**ನಿಯಮ–8 : ಲೆಕ್ಕಪರಿಶೋಧನೆ :**

(1) ಅಧಿನಿಯಮದ ಪ್ರಕರಣ 33 ಅಥವಾ ಪ್ರಕರಣ 64ರ ಉಪಪ್ರಕರಣ (1) ರಡಿಯ ಲೆಕ್ಕಪರಿಶೋಧನೆಯು, ಪ್ರಕರಣ 33ರ ಉಪಪ್ರಕರಣ (4) ಮತ್ತು (14) ರಿಂದ (18) ಗಳಲ್ಲಿ ನಿರ್ದಿಷ್ಟ ಪಡಿಸಿರುವ ವಿಷಯಗಳ ಜೊತೆಗೆ, ಕೆಳಗಿನ ವಿವರಗಳನ್ನು ಒಳಗೊಳ್ಳತಕ್ಕದ್ದು:

(ಎ) ಸಹಕಾರಿಯ ಉಪವಿಧಿಗಳಲ್ಲಿ ತಿಳಿಸಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಸಹಕಾರಿಯು ತೆಗೆದುಕೊಂಡ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಪರೀಕ್ಷಣೆ;

(ಬಿ) ಮೂಲ ರಶೀದಿ ಮತ್ತು ವೋಚರ್‌ಗಳೊಡನೆ ಜಮಾ ಮತ್ತು ಖರ್ಚುಗಳ/ಆದಾಯ ವ್ಯಯಗಳ ನೈಜತೆ ಮತ್ತು ಔಚಿತ್ಯದ ಬಗ್ಗೆ ಪರಿಶೀಲನೆ;

(ಸಿ) ಪ್ರಸಂಗಾನುಸಾರ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್ ನಿರ್ಧರಿಸಿದಂಥ ಪ್ರಮಾಣದ ಸಹಕಾರಿಯ ಸಾಲಗಾರರಿಂದ ಬರಬೇಕಾದ ಬಾಕಿಗಳ ಹಾಗೂ ಠೇವಣಿದಾರರ ಮತ್ತು ಲೇಣಿದಾರರ ಜಮೆಯಲ್ಲಿರುವ ಉಳಿಕೆ ಮೊತ್ತಗಳ ಪರಿಶೀಲನೆ;

(ಡಿ) ಆಡಳಿತ ಮಂಡಳಿಯ ನಿರ್ದೇಶಕರ ವ್ಯವಹಾರಗಳ ಪರೀಕ್ಷಣೆ;

(ಇ) ನೌಕರರ ನೇಮಕ ಮತ್ತು ಪದೋನ್ನತಿ, ಸೇವಾ ಷರತ್ತುಗಳ ಹಾಗೂ ಅವರ ವಿರುದ್ಧ ತೆಗೆದುಕೊಳ್ಳಲಾದ ಶಿಸ್ತಿನ ಕ್ರಮಗಳ ಪರೀಕ್ಷಣೆ;

(ಎಫ್)ಸದಸ್ಯರುಗಳಿಗೆ ಒದಗಿಸಲಾದ ಸೇವೆಗಳ ಹಾಗೂ ಸದಸ್ಯರುಗಳು ಮತ್ತು ನಿರ್ದೇಶಕರು ಸದರಿ ಸೇವೆಗಳನ್ನು ಬಳಕೆ ಮಾಡಿಕೊಂಡ ಪ್ರಮಾಣದ ಪರೀಕ್ಷಣೆ;

(ಜಿ) ಸಹಕಾರಿಯ ಲೆಕ್ಕಪತ್ರಗಳ ನಿರ್ವಹಣೆ ಇಂದೀಕರಣ ಮತ್ತು ಸಮರ್ಪಕತೆ–ವ್ಯವಹಾರಗಳ ಗಣಕೀಕರಣ;

(ಹೆಚ್)ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವಷ್ಟರಮಟ್ಟಿಗೆ ಸಹಕಾರಿಯ ವಿವಿಧ ವ್ಯವಹಾರ ಮತ್ತು ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಇತರ ಸಂಬಂಧಿತ ಕಾನೂನುಗಳ ಪಾಲನೆ;

(ಐ) ಪ್ರಸಂಗಾನುಸಾರ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್ ನಿಗದಿಪಡಿಸಿದಂಥ ನಮೂನೆಯಲ್ಲಿ ಆಡಳಿತ ಮಂಡಳಿಯು ತಯಾರಿಸುವ ಆರ್ಥಿಕ/ಲೆಕ್ಕ ತಃಖ್ತೆಗಳ ಪರೀಕ್ಷಣೆ;

(ಜೆ) ವಾಸ್ತವಾಗಿ ಗಳಿಸಿದ ಲಾಭ ಅಥವಾ ಅನುಭವಿಸಿದ ನಷ್ಟದ ದೃಢೀಕರಣ;

(ಕೆ) ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಂತೆ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ನೀಡಿರುವ ನಿರ್ದೇಶನ, ಮಾರ್ಗದರ್ಶನ ಇತ್ಯಾದಿಗಳ ಪಾಲನೆಯಾಗಿದೆಯೇ ಎಂಬ ಬಗ್ಗೆ ಪರಿಶೀಲನೆ;

(ಎಲ್)ಪ್ರಸಂಗಾನುಸಾರ ರಿಜಿಸ್ಟ್ರಾರನು ಅಥವಾ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್ ಸೂಚಿಸುವ ಇತರ ಯಾವುದೇ ವಿಷಯ.

ಪರಂತು, ಲೆಕ್ಕಪರಿಶೋಧನೆಯು ಆರ್ಥಿಕ ಲೆಕ್ಕಪರಿಶೋಧನೆಯ ಜೊತೆಗೆ ಔಚಿತ್ಯತೆಯ ಲೆಕ್ಕಪರಿಶೋಧನೆಯನ್ನು ಒಳಗೊಂಡಿರತಕ್ಕದ್ದು.

(2) ಪ್ರತಿ ಸಹಕಾರಿಯ ಆಡಳಿತ ಮಂಡಳಿಯ ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಜಮಾ ಖರ್ಚು ತಃಖ್ತೆಗಳು, ಆದಾಯ ವ್ಯಯ ತಃಖ್ತೆಗಳು, ಲಾಭ ನಷ್ಟ ತಃಖ್ತೆಗಳು, ಅದಕ್ಕೆ ಸಂಬಂಧಪಟ್ಟ ಷೆಡ್ಯೂಲುಗಳು ಮತ್ತು ಇತರ ತಃಖ್ತೆಗಳ ಸಹಿತ ಆಸ್ತಿ ಹೊಣೆ ಪಟ್ಟಿ ಇತ್ಯಾದಿ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಹಾಜರುಪಡಿಸುವಂತೆ ಖಾತರಿಪಡಿಸತಕ್ಕದ್ದು.

ಪರಂತು, ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಒದಗಿಸಬೇಕಾದ ಷೆಡ್ಯೂಲುಗಳು ಮತ್ತು ರಿಟರ್ನ್‌ಗಳು ಕೆಳಗಿನವುಗಳನ್ನು

ಒಳಗೊಂಡಿರತಕ್ಕದ್ದು:

(ಎ) ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ;

(ಬಿ) ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಳಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ;

(ಸಿ) ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ;

(ಡಿ) ಸದಸ್ಯತ್ವ ಮತ್ತು ಷೇರು ಷೆಡ್ಯೂಲು;

(ಇ) ಆಡಳಿತ ಮಂಡಳಿಯ ಸದಸ್ಯರ ಮತ್ತು ನೌಕರರಪಟ್ಟಿ;

(ಎಫ್) ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;

(ಜಿ) ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;

(ಹೆಚ್) ತಗಾದೆ ವಸೂಲಿ ಮತ್ತು ಉಳಿಕೆ ತಃಖ್ತೆ;

(ಐ) ಸುಸ್ತಿದಾರರ ಸದಸ್ಯರ ಪಟ್ಟಿ;

(ಜೆ) ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ;

(ಕೆ) ಹೂಡಿಕೆಗಳ ಮತ್ತು ಅವುಗಳ ದೃಡೀಕರಣ ಷೆಡ್ಯೂಲುಗಳು;

(ಎಲ್) ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು;

(ಎಂ) ಸಾಲ ದೃಢೀಕರಣ ತಃಖ್ತೆಗಳು;

(ಎನ್) ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;

(ಒ) ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರುಹಾಜರಾದ ನಿರ್ದೇಶಕರುಗಳ ಷೆಡ್ಯೂಲು;

(ಪಿ) ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರುಹಾಜರಾದ ಸದಸ್ಯರ ಷೆಡ್ಯೂಲು;

(ಕ್ಯೂ) ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸಿದ ಬಗ್ಗೆ ಸದಸ್ಯರ ಷೆಡ್ಯೂಲು;

(ಆರ್) ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ;

(ಎಸ್) ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;

(ಟಿ) ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು;

(ಯು) ಮೀಸಲು ಇತರ ನಿಧಿಗಳ ಷೆಡ್ಯೂಲು;

(ವಿ) ಠೇವಣಿದಾರರ ಷೆಡ್ಯೂಲು;

(ಡಬ್ಲ್ಯೂ) ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು;

(ಎಕ್ಸ್) ಆಖೈರು ದಾಸ್ತಾನಿನ ಷೆಡ್ಯೂಲು;

(ವೈ) ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ

ಎಂಬ ಷೆಡ್ಯೂಲು – ವರ್ಗವಾರು;

(ಜಡ್) ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು;

(3) ಪ್ರಕರಣ 33ರ ಉಪಪ್ರಕರಣ (18)ರ ಖಂಡ (ಎ) ಮತ್ತು (ಬಿ)ನಲ್ಲಿ ತಿಳಿಸಿರುವ ಅವ್ಯವಹಾರಗಳನ್ನು ಪರಿಶೀಲಿಸುವಾಗ, ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಒಬ್ಬ ಸಾಮಾನ್ಯ ಪರಿಜ್ಞಾನವುಳ್ಳ ಪ್ರಾಮಾಣಿಕ, ಬುದ್ಧಿವಂತ ಮತ್ತು ವಿವೇಕಯುತ ವ್ಯವಹಾರ ಜ್ಞಾನವುಳ್ಳ ವ್ಯಕ್ತಿಯು ಸಮಾನವಾದ ಸಂದರ್ಭಗಳಲ್ಲಿ ಚಲಾಯಿಸುವಂಥ ಯುಕ್ತ, ಜಾಗರೂಕತೆ, ಶ್ರದ್ಧೆ ಮತ್ತು ಕೌಶಲ್ಯಗಳನ್ನು ಉಪಯೋಗಿಸತಕ್ಕದ್ದು ಮತ್ತು ಅದರ ಫಲಿತಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸತಕ್ಕದ್ದು.

(4) ಒಂದು ಸಹಕಾರಿಯ ಲೆಕ್ಕಪರಿಶೋಧನೆಯನ್ನು ಮಾಡುವಾಗ, ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು, ಲೆಕ್ಕಪರಿಶೋಧನೆ ಮಾಡುವ ಅವಧಿಯಲ್ಲಿ ಕಾಲಕಾಲಕ್ಕೆ, ಸಹಕಾರಿಯ ಮುಖ್ಯಕಾರ್ಯನಿರ್ವಾಹಕನಿಗೆ ಅಥವಾ ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿಗೆ ಮಧ್ಯಂತರ ಆಕ್ಷೇಪಣೆಗಳನ್ನು ಕಳುಹಿಸಿ ಅಂಥ ಆಕ್ಷೇಪಣೆಗಳಲ್ಲಿ ತೋರಿಸಲಾದ ಲೋಪದೋಷಗಳನ್ನು ಮತ್ತು ಅಕ್ರಮಗಳನ್ನು ಐದು ದಿನಗಳ ಅವಧಿಯೊಳಗೆ ವಿವರಿಸುವಂತೆ ತಿಳಿಸಬಹುದು. ಮುಖ್ಯಕಾರ್ಯನಿರ್ವಾಹಕನು ಮಧ್ಯಂತರ ಆಕ್ಷೇಪಣಾ ಹಾಳೆಗಳನ್ನು ಅದರಲ್ಲಿ ಉತ್ತರ ಅಥವಾ ಪಾಲನೆ ಅನ್ನು ದಾಖಲಿಸಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಹಿಂದುರಿಗಿಸತಕ್ಕದ್ದು. ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಅಂಥ ಪಾಲನಾ ವರದಿಯನ್ನು ಪರಾಮರ್ಶಿಸಿ, ಆತನ ಅಭಿಪ್ರಾಯದಲ್ಲಿ ಯಾವ ಆಕ್ಷೇಪಣೆಗಳಿಗೆ ಸಮರ್ಪಕವಾಗಿ ಉತ್ತರ ನೀಡಲಾಗಿದೆಯೋ ಅಥವಾ ಪಾಲನೆ ಮಾಡಲಾಗಿದೆಯೋ ಅಂತಹ ಆಕ್ಷೇಪಣೆಗಳನ್ನು ಕೈಬಿಡತಕ್ಕದ್ದು. ಮತ್ತು ಉಳಿದ ಆಕ್ಷೇಪಣೆಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸತಕ್ಕದ್ದು.

(5) ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಕೆಲವು ಅರ್ಥವಿವರಣೆಗಳು:–

(1) "ವಾರ್ಷಿಕ ಲೆಕ್ಕಪರಿಶೋಧನೆ" ಎಂದರೆ ಅಧಿನಿಯಮದ ಪ್ರಕರಣ 33 ಮತ್ತು 64ರಡಿ ಯವುದೇ ಸಹಕಾರಿಯ ಒಂದು ಸಹಕಾರಿ ವರ್ಷ ಮುಕ್ತಾಯವಾದ ನಂತರ ಮಾಡುವ ಆ ಸಹಕಾರಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆ. ಅದು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಲೆಕ್ಕಪತ್ರಗಳನ್ನು, ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಪರಿಶೋಧಿಸಿ ಪರಿಶೋಧಿತ ಆರ್ಥಿಕ ತಃಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸುವುದರೊಂದಿಗೆ ಅಂತ್ಯಗೊಳ್ಳುತ್ತದೆ.

(2) "ಔಚಿತ್ಯಪೂರ್ಣ ಲೆಕ್ಕಪರಿಶೋಧನೆ" ಎಂದರೆ ಯಾವುದೇ ಒಂದು ವ್ಯಾಪಾರಿ ಸಂಸ್ಥೆಯು ತಾನು ನಡೆಸುವ ವ್ಯಾಪಾರ ಪದ್ಧತಿಗೆ ಅನುಗುಣವಾಗಿ ಹಾಗೂ ಅಂತಹ ವ್ಯವಹಾರದ ಆರ್ಥಿಕ ಹಿತಾಸಕ್ತಿ ಕಾಪಾಡುವ ಲೆಕ್ಕಪರಿಶೋಧನೆ.

(1) "ಲೆಕ್ಕಪರಿಶೋಧನೆ" : ಪ್ರತಿಯೊಂದು ಸಂಯುಕ್ತ ಸಹಕಾರಿಯು ಸೇರಿದಂತೆ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಅದರ ಲೆಕ್ಕಪತ್ರಗಳನ್ನು ಸಹಕಾರಿ ವರ್ಷಮುಗಿದ ನಂತರ ಮುಂದಿನ ಸೆಪ್ಟೆಂಬರ್ 1ನೇ ತಾರಿಖಿನೊಳಗಾಗಿ, ಲೆಕ್ಕಪರಿಶೋದನಾ ಇಲಾಖಾ ನಿರ್ದೇಶಕರಿಂದ ಒಪ್ಪಿಗೆಯಾದ ಪಟ್ಟಿಯಿಮದ ಸಾಮಾನ್ಯ ಸಭೆ ನೇಮಿಸಿದ ಲೆಕ್ಕಪರಿಶೋಧಕ ಅಥವಾ ಸಂಸ್ಥೆಯಿಂದ ಲೆಕ್ಕ ತಪಾಸಣಾ ವರದಿ ಪಡೆಯತಕ್ಕದ್ದು. ಇದು ಒಂದು ಶಾಸನಾತ್ಮಕ ಜವಾಬ್ದಾರಿ. (ಕಲಂ.33)

(2) ಆರ್ಥಿಕ ತಃಖ್ತೆಗಳು : ಕಾಯಿದೆ ಕಲಂ.33(7) ರಲ್ಲಿ ಸಹಕಾರಿ ವರ್ಷ ಮುಗಿದ ಮೂವತ್ತು ದಿನದೊಳಗಾಗಿ ಸಹಕಾರಿಯ ಆರ್ಥಿಕ ತಃಖ್ತೆಗಳನ್ನು ಅಂತಿಮಗೊಳಿಸಿ, ಒಂದು ಪ್ರತಿಯನ್ನು ಲೆಕ್ಕಪರಿಶೋಧನೆಗೆ ನೇಮಕವಾದ ಲೆಕ್ಕಾಧಿಕಾರಿ/ಸಂಸ್ಥೆಗೆ ರವಾನಿಸತಕ್ಕದ್ದು. ಈ ತಃಖ್ತೆಗಳ ಆಧಾರದಲ್ಲಿಯೇ ಲೆಕ್ಕ ತಪಾಸಣೆ ಮಾಡತಕ್ಕದ್ದು.

(3) ತಃಖ್ತೆಗಳನ್ನು ತಯಾರಿಸುವ ಜವಾಬ್ದಾರಿ : ಆರ್ಥಿಕ ತಃಖ್ತೆಗಳನ್ನು ತಯಾರಿಸುವ ಜವಾಬ್ದಾರಿ ಸಹಕಾರಿಯ ಮಂಡಳಿ ಜವಾಬ್ದಾರಿ. ಅದಕ್ಕೆ ಕಾರ್ಯಾಂಗ ತಃಖ್ತೆಗಳನ್ನು ಅಂತಿಮಗೊಳಿಸಿ ಮಂಡಳಿ ಒಪ್ಪಿಗೆ ಪಡೆದು ರವಾನಿಸಬೇಕು.

(4) ಸಾಮಾನ್ಯ ಸಭೆ ಜವಾಬ್ದಾರಿ : ಪ್ರತಿ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಸಹಕಾರಿಯ ಲೆಕ್ಕ ತಪಾಸಣೆ ಮಾಡುವ

ವ್ಯಕ್ತಿ/ಸಂಸ್ಥೆಯನ್ನು ನೇಮಕ ಮಾಡುವ ಜವಾಬ್ದಾರಿ ಸಾಮಾನ್ಯ ಸಭೆಗೆ ವಿಹಿತವಾಗಿದೆ. ಇದರಲ್ಲಿ ಪ್ರಮುಖವಾಗಿ ಗಮನಿಸ ಬೇಕಾದ ಅಂಶ ವೆಂದರೆ, ವರ್ಷಕ್ಕೊಮ್ಮೆ ಲೆಕ್ಕತಪಾಸಣೆ ಒಂದು ಶಾಸನಾತ್ಮಕ ಜವಾಬ್ದಾರಿ. ಅದನ್ನು ಮಾಡಿಸುವ ಜವಾಬ್ದಾರಿ ಸಾಮಾನ್ಯ ಸಭೆಗೆ ವಿಹಿತವಾಗಿದೆ. ಅದು ಕಾಯಿದೆಯಲ್ಲಿಯೇ ನಿಗದಿ ಪಡಿಸಿದ ಜವಾಬ್ದಾರಿ. ಆ ಅಧಿಕಾರವನ್ನು ಸಾಮಾನ್ಯ ಸಭೆಯೇ ನಿರ್ವಹಿಸಬೇಕು. ಆ ಅಧಿಕಾರವನ್ನು ಮಂಡಳಿಗೆ/ಅಧ್ಯಕ್ಷರಿಗೆ ವರ್ಗಾಯಿಸಲಾಗದು. ಅದಕ್ಕಾಗಿ ಸಹಕಾರಿಯ ಮಂಡಳಿ ಅರ್ಹ ವ್ಯಕ್ತಿ/ಸಂಸ್ಥೆಯಿಂದ ಅರ್ಜಿ ಆಹ್ವಾನಿಸಿ – 2–3 ಹೆಸರಿಗೆ ಅಂತಿಮಗೊಳಿಸಿ, ಸಾಮಾನ್ಯ ಸಭೆಗೆ ಸಲ್ಲಿಸಬೇಕು ಮತ್ತು ಲೆಕ್ಕ ಪರಿಶೋಧನಾ ನಿರ್ದೇಶಕರು ನಿಗದಿ ಪಡಿಸಿದ ಮಾನದಂಡದಂತೆ ಸಂಭಾವನೆ ಬಗ್ಗೆಯೂ ಮಂಡಳಿ ಸಾಮಾನ್ಯ ಸಭೆಗೆ ಶಿಫಾರಸ್ ಮಾಡಬೇಕು. ಸಾಮಾನ್ಯ ಸಭೆಯ ಠರಾವಿನ ಮೂಲಕ ಮಂಡಳಿಗೆ ಅಧಿಕಾರ ನೀಡಲಾಗದು. ಆಯ್ಕೆ ಪಟ್ಟಿಯಲ್ಲಿ 1–2 ಹೆಸರನ್ನು ಸೂಚಿಸಿ ಒಪ್ಪಿಗೆ ಪಡೆಯಬಹುದು. ಸೌಹಾರ್ದ ನಿಯಮ 2004ರ ನಿಯಮ 9ಡಿ ಅಡಿ ಸಂಭಾವನೆಯನ್ನು ಸಹ ಸಾಮಾನ್ಯ ಸಭೆ ನಿಗದಿ ಪಡಿಸಬೇಕು.

(5) ಲೆಕ್ಕಪರಿಶೋಧಕರನ್ನು ಎಷ್ಟು ವರ್ಷ ಒಂದೇ ವ್ಯಕ್ತಿ/ಸಂಸ್ಥೆಗೆ ವಹಿಸಬಹುದು : ಸೌಹಾರ್ದ ನಿಯಮ 2004ರ ನಿಯಮ 8ಬಿ(6) ರನ್ನು ಎರಡು ವರ್ಷಕ್ಕಿಂತ ಹೆಚ್ಚು ಅವಧಿಗೆ ನೇಮಕ ಮಾಡತಕ್ಕದ್ದಲ್ಲ. ಲೆಕ್ಕಪರಿಶೋಧಕ/ಸಂಸ್ಥೆ ನೇಮಕವಾದ ವ್ಯಕ್ತಿ/ಸಂಸ್ಥೆಯೇ ವರದಿಗೆ ಸಹಿ ಮಾಡತಕ್ಕದ್ದು.

(6) ಸಂಯುಕ್ತ ಸಹಕಾರಿಯ ಲೆಕ್ಕ ತಪಾಸಣೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ : ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಅಪೆಕ್ಸ್ ಸಂಸ್ಥೆಯಾಗಿದ್ದು ಆ ಸಂಸ್ಥೆಯ ಆಡಿಟ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಮತ್ತು ಅದನ್ನು ರಾಜ್ಯ ವಿಧಾನ ಮಂಡಳಿಯಲ್ಲಿ ಮಂಡನೆಯಾಗುವ ವ್ಯವಸ್ಥೆ ಮಾಡಲಾಗುತ್ತಿದೆ.

(7) ಲೆಕ್ಕಪರಿಶೋಧನೆಯಲ್ಲಿ ಏನು ಪರಿಶೀಲಿಸಿ ವರದಿ ನೀಡಬೇಕು? : ಸೌಹಾರ್ದ ಕಾಯಿದೆ ಕಲಂ.33(14) ರಿಂದ (20) ರವರೆಗೆ ನಿಗದಿ ಪಡಿಸಿದ ಅಂಶಗಳನ್ನು ಒಳಗೊಂಡಿರಬೇಕು ಹಾಗೂ ಸೌಹಾರ್ದ ನಿಯಮ 2004ರ ನಿಯಮ 8 ರಲ್ಲಿ ನಿಗದಿ ಪಡಿಸಿದ ಅಂಶಗಳ ಬಗ್ಗೆಯೂ ವರದಿಯಲ್ಲಿ ವ್ಯವಹಾರವನ್ನು ವಿಮರ್ಷೆ ಮಾಡಿ ವರದಿ ನೀಡುವ ಜವಾಬ್ದಾರಿ ಲೆಕ್ಕಾಧಿಕಾರಿಗೆ ಇರತಕ್ಕದ್ದು. ಈ ರೀತಿ ವರದಿ ನೀಡದಿದ್ದರೆ ಸಂಬಂಧಪಟ್ಟ ಸಹಕಾರಿ ಸಂಯುಕ್ತ ಸಹಕಾರಿ ಹಾಗೂ ಲೆಕ್ಕ ಪರಿಶೋಧನಾ ಇಲಾಖೆ ನಿರ್ದೇಶಕರ ಗಮನಕ್ಕೆ ತಂದು ಸೂಕ್ತ ಕ್ರಮ ಜರುಗಿಸುವಂತೆ ಪತ್ರ ವ್ಯವಹಾರ ಮಾಡಬೇಕು.

(8) ಲೆಕ್ಕಪರಿಶೋಧನ ವರದಿಯನ್ನು ಮರು ಪರಿಶೀಲಿಸಬಹುದೇ? – ಸೌಹಾರ್ದ ನಿಯಮ 2004ರ ನಿಯಮ 9ಸಿ ಅನ್ವಯ, ಸಹಕಾರಿಯ ಸಾಮಾನ್ಯ ಸಭೆ ತಾನು ಪಡೆದ, ಲೆಕ್ಕಪರಿಶೋಧನಾ ವರದಿಯಲ್ಲಿ ಒಪ್ಪಿಗೆ ನೀಡುವ ಪೂರ್ವದಲ್ಲಿ, ಆ ವರದಿ ಸಮರ್ಪಕವಾಗಿಲ್ಲವೆಂದು ಮನದಟ್ಟಾದರೆ, ಸಾಮಾನ್ಯ ಸಭೆಯ ಒಂದು ತೀರ್ಮಾನ ಮಾಡಿ ಲೆಕ್ಕಪರಿಶೋಧನೆಯನ್ನು ಮರು ಪರಿಶೀಲನೆ ಮಾಡಿ ವರದಿ ಪಡೆಯಲು ಮನವಿ ಸಲ್ಲಿಸಬಹುದು.

(9) ಲೆಕ್ಕಪರಿಶೋಧನೆ ಉದ್ದೇಶ : ಸಹಕಾರಿ ತನ್ನ ಕಾರ್ಯನಿರ್ವಹಣೆಯಲ್ಲಿ ರೂಪಿಸಿದ ನೀತಿ ನಿಯಮಗಳು ಹಾಗೂ ಕಾಯಿದೆ ಮತ್ತು ನಿಯಮದಲ್ಲಿ ನಿಗದಿ ಪಡಿಸಿದ ವಿಷಯಗಳು ಮತ್ತು ಮಾನದಂಡಗಳನ್ನು ಅಳವಡಿಸಿಕೊಂಡ ಬಗ್ಗೆ ಹಾಗೂ ಸಂಯುಕ್ತ ಸಹಕಾರಿ ನೀಡಿದ ಮಾರ್ಗದರ್ಶ ಸೂತ್ರಗಳು ಹಾಗೂ ಆಡಿಟ್ ಇಲಾಖೇ ಮಾರ್ಗಸೂಚಿಯನ್ನು ಪಾಲಿಸಿದ ಬಗ್ಗೆ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸುವ ಜವಾಬ್ದಾರಿ ಲೆಕ್ಕಪರಿಶೋಧಕನಿಗೆ/ಸಂಸ್ಥೆಗೆ ವಿಹಿತವಾಗಿದೆ. ಯಾವ ವಿಷಯಗಳು/ಪುಸ್ತಕ/ದಾಖಲೆ/ಭದ್ರತೆ/ಠೇವಣಿ/ಸಾಲಗರರು ಬಗ್ಗೆ ಪರಿಶೀಲಿಸಿ ವರದಿ ಕೊಡಬೇಕು. ಆ ರೀತಿ ಮಾಡದೇ ಇದ್ದಾಗ, ಸಹಕಾರಿ ಈ ವಿಷಯವನ್ನು ಪರಿಶೀಲಿಸಿ, ಸಾಮಾನ್ಯ ಸಭೆ ತೀರ್ಮಾನದ ಮೂಲಕ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ತಿಳಿಸಿ, ತಪ್ಪು ವರದಿ ನೀಡಿದ್ದರೆ, ಲೆಕ್ಕ ಪರಿಶೋಧಕರ ಮೇಲೆ/ಸಂಸ್ಥೆಯೇ ಶಿಸ್ತು ಕ್ರಮ ಜರುಗಿಸುವಂತೆ ಮನವಿ ಸಲ್ಲಿಸಬಹುದು.

(10) ಲೆಕ್ಕಪತ್ರಗಳ ಪರಿಶೋಧನೆ ಮಾಡಿಸದಿದ್ದರೆ ಆಗುವ ಪರಿಣಾಮ : ಸೌಹಾರ್ದ ಕಾಯಿದೆ ಕಲಂ.68(5) ರಡಿ ಯಾವುದೇ ಸಹಕಾರಿ/ಸಂಯುಕ್ತ ಸಹಕಾರಿ, ತನ್ನ ಲೆಕ್ಕಪತ್ರಗಳನ್ನು ಸಾಮಾನ್ಯ ಸಭೆ ಮುಖಾಂತರ ನೇಮಕವಾದ ಲೆಕ್ಕಪರಿಶೋಧಕರಿಂದ ನೇಮಕವಾದ ಲೆಕ್ಕಪರಿಶೋಧಕರು/ಸಂಸ್ಥೆ

ಯವರು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆದು, ಸೆಪ್ಟೆಂಬರ್ 25 ರೊಳಗೆ ಸಾಮಾನ್ಯ ಸಭೆ ಒಪ್ಪಿಗೆ ಪಡೆದಿದ್ದರೆ ಅಂತಹ ಸಹಕಾರಿ/ಸಂಯುಕ್ತ ಸಹಕಾರಿಯ ಪ್ರತಿಯೊಬ್ಬ ಮಂಡಳಿ ಸದಸ್ಯನ ಮುಖ್ಯಕಾರ್ಯನಿರ್ವಾಹಕನಿಗೆ ವ್ಯಯಕ್ತಿಕವಾಗಿ ರೂ.ಐದು ಸಾವಿರ ದಂಡ/ಜುಮ್ಲಾನೆ ಮತ್ತು ಆರು ತಿಂಗಳ ಕಾರಾಗೃಹವಾಸ ಅಥವಾ ಎರಡನ್ನು ಅನುಭವಿಸಬೇಕು. ಇದರ ಜೊತಗೆ ನಿಬಂಧಕನಿಗೆ ಇದರ ಜೊತೆಗೆ ನಿಬಂಧಕನಿಗೆ. ಇದರ ಜೊತೆಗೆ ಕಾಯಿದೆ ಕಲಂ.34 ಮತ್ತು ಕಲಂ.64ಎ ಅನ್ವಯ ಇತರ ನಿಗದಿ ಪಡಿಸಿದ ವರದಿಗಳ ಮೊತೆ ವಿವರಾಧಿಆರ/ಸಂಯುಕ್ತ ಸಹಕಾರಿ ಸೆಪ್ಟೆಂಬರ್ 30 ರೊಳಗೆ ವರದಿ ಸಲ್ಲಿಸದಿದ್ದರೆ, ಕಾಯಿದೆ ಕಲಂ.68(6) ರಡಿ ಪ್ರತಿಯೊಬ್ಬ ಮಂಡಳಿ ಸದಸ್ಯನು ಮತ್ತು ಮುಖ್ಯಕಾರ್ಯನಿರ್ವಾಹಕನು ರು.10,000/– ದಂಡ/ಜುಮ್ಲಾನೆ ಮತ್ತು ಎರಡು ವರ್ಷಗಳ ಕಾರಾಗೃಹವಾಸ ಅಥವಾ ಎರಡನೂ ಅನುಭವಿಸತಕ್ಕದ್ದು.

1) **"ಲೆಕ್ಕಪರಿಶೋಧನೆ" :** ಪ್ರತಿಯೊಂದು ಸಂಯುಕ್ತ ಸಹಕಾರಿಯೂ ಸೇರಿದಂತೆ ಕನಿಷ್ಟ ವರ್ಷಕ್ಕೊಮ್ಮೆಯಾದರೂ ಅದರ ಲೆಕ್ಕಪತ್ರಗಳನ್ನು ಸಹಕಾರಿ ವರ್ಷ ಮುಗಿದ ನಂತರ ಮುಂದಿನ ಸೆಪ್ಟೆಂಬರ್ 1ನೇ ತಾರೀಖಿನೊಳಗಾಗಿ, ಲೆಕ್ಕಪರಿಶೋಧನಾ ಇಲಾಖಾ ನಿರ್ದೇಶಕರಿಂದ ಒಪ್ಪಿಗೆಯಾದ ಪಟ್ಟಿಯಿಂದ ಸಾಮಾನ್ಯ ಸಭೆ ನೇಮಿಸಿದ ಲೆಕ್ಕಪರಿಶೋಧಕ ಅಥವಾ ಸಂಸ್ಥೆಯಿಂದ ಲೆಕ್ಕತಪಾಸಣಾ ವರದಿ ಪಡೆಯತಕ್ಕದ್ದು. ಇದು ಒಂದು ಶಾಸನಾತ್ಮಕ ಜವಾಬ್ದಾರಿ. (ಕಲಂ.33)

2) **ಆರ್ಥಿಕ ತಃಖ್ತೆಗಳು :** ಕಾಯಿದೆ ಕಲಂ.33(7) ರಲ್ಲಿ ಸಹಕಾರಿ ವರ್ಷ ಮುಗಿದ ಮೂವತ್ತು ದಿನದೊಳಗಾಗಿ ಸಹಕಾರಿಯೂ ಆರ್ಥಿಕ ತಃಖ್ತೆಗಳನ್ನು ಅಂತಿಮಗೊಳಿಸಿ, ಒಂದು ಪ್ರತಿಯನ್ನು ಲೆಕ್ಕಪರಿಶೋಧನೆಗೆ ನೇಮಕವಾದ ಲೆಕ್ಕಾಧಿಕಾರಿ/ಸಂಸ್ಥೆಗೆ ರವಾನಿಸತಕ್ಕದ್ದು. ಈ ತಃಖ್ತೆಗಳ ಆಧಾರದಲ್ಲಿಯೇ ಲೆಕ್ಕ ತಪಾಸಣೆ ಮಾಡತಕ್ಕದ್ದು.

3) **ತಃಖ್ತೆಗಳನ್ನು ತಯಾರಿಸುವ ಜವಾಬ್ದಾರಿ :** ಆರ್ಥಿಕ ತಃಖ್ತೆಗಳನ್ನು ತಯಾರಿಸುವ ಜವಾಬ್ದಾರಿ ಸಹಕಾರಿಯ ಮಂಡಳಿ ಜವಾಬ್ದಾರಿ. ಅದಕ್ಕೆ ಕಾರ್ಯಾಂಗ ತಃಖ್ತೆಗಳನ್ನು ಅಂತಿಮಗೊಳಿಸಿ ಮಂಡಳಿ ಒಪ್ಪಿಗೆ ಪಡೆದು ರವಾನಿಸಬೇಕು.

4) **ಸಾಮಾನ್ಯ ಸಭೆ ಜವಾಬ್ದಾರಿ :** ಪ್ರತಿ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಸಹಕಾರಿಯ ಲೆಕ್ಕ ತಪಾಸಣೆ ಮಾಡಲು ವ್ಯಕ್ತಿ/ಸಂಸ್ಥೆಯನ್ನು ನೇಮಕ ಮಾಡುವ ಜವಾಬ್ದಾರಿ ಸಾಮಾನ್ಯ ಸಭೆಗೆ ವಿಹಿತವಾಗಿದೆ. ಇದರಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ, ವರ್ಷಕ್ಕೊಮ್ಮೆ ಲೆಕ್ಕತಪಾಸಣೆ ಒಂದು ಶಾಸನಾತ್ಮಕ ಜವಾಬ್ದಾರಿ. ಆ ಅಧಿಕಾರವನ್ನು ಮಂಡಳಿಗೆ/ಅಧ್ಯಕ್ಷರಿಗೆ ವರ್ಗಾಯಿಸಲಾಗದು. ಅದಕ್ಕಾಗಿ ಸಹಕಾರಿಯ ಮಂಡಳಿ ಅರ್ಹ ವ್ಯಕ್ತಿ/ಸಂಸ್ಥೆಯಿಂದ ಅರ್ಜಿ ಆಹ್ವಾನಿಸಿ – 2–3 ಹೆಸರು ಅಂತಿಮಗೊಳಿಸಿ, ಸಾಮಾನ್ಯ ಸಭೆಗೆ ಸಲ್ಲಿಸಬೇಕು. ಮತ್ತು ಲೆಕ್ಕ ಪರಿಶೋಧನಾ ನಿರ್ದೇಶಕರು ನಿಗದಿ ಪಡಿಸಿದ ಮಾನದಂಡದಂತೆ ಸಂಭಾವನೆ ಬಗ್ಗೆಯೂ ಮಂಡಳಿ ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡಬೇಕು. ಸಾಮಾನ್ಯ ಸಭೆಯ ಠರಾವಿನ ಮೂಲಕ ಮಂಡಳಿಗೆ ಅಧಿಕಾರ ನೀಡಲಾಗದು. ಆಯ್ಕೆ ಪಟ್ಟಿಯಲ್ಲಿ 1–2 ಹೆಸರನ್ನು ಸೂಚಿಸಿ ಒಪ್ಪಿಗೆ ಪಡೆಯಬಹುದು. ಸೌಹಾರ್ದ ನಿಯಮ 2004 ರ ನಿಯಮ 9ಡಿ ಅಡಿ ಸಂಭಾವನೆಯನ್ನು ಸಹ ಸಾಮಾನ್ಯ ಸಭೆ ನಿಗದಿ ಪಡಿಸಬೇಕು.

5) **ಲೆಕ್ಕಪರಿಶೋಧಕರನ್ನು ಎಷ್ಟು ವರ್ಷ ಒಂದೇ ವ್ಯಕ್ತಿ/ಸಂಸ್ಥೆಗೆ ವಹಿಸಬಹುದು :** ಸೌಹಾರ್ದ ನಿಯಮ 2004ರ ನಿಯಮ 8ಬಿ(6) ರನ್ನು ಎರಡು ವರ್ಷಕ್ಕಿಂತ ಹೆಚ್ಚು ಅವಧಿಗೆ ನೇಮಕ ಮಾಡತಕ್ಕದ್ದಲ್ಲ. ಲೆಕ್ಕಪರಿಶೋಧಕ/ ಸಂಸ್ಥೆ ನೇಮಕವಾದ ವ್ಯಕ್ತಿ/ಸಂಸ್ಥೆಯೇ ವರದಿಗೆ ಸಹಿ ಮಾಡತಕ್ಕದ್ದು.

6) **ಸಂಯುಕ್ತ ಸಹಕಾರಿಯು ಲೆಕ್ಕತಪಾಸಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ :** ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಅಪೆಕ್ಸ್ ಸಂಸ್ಥೆಯಾಗಿದ್ದು ಆ ಸಂಸ್ಥೆಯ ಆಡಿಟ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು ಮತ್ತು ಅದನ್ನು ರಾಜ್ಯ ವಿಧಾನ ಮಂಡಳಿಯಲ್ಲಿ ಮಂಡನೆಯಾಗುವ ವ್ಯವಸ್ಥೆ ಮಾಡಲಾಗುತ್ತಿದೆ.

7) **ಲೆಕ್ಕಪರಿಶೋಧನೆಯಲ್ಲಿ ಏನು ಪರಿಶೀಲಿಸಿ ವರದಿ ನೀಡಬೇಕು**? : ಸೌಹಾರ್ದ ಕಾಯಿದೆ ಕಲಂ.33(14) ರಿಂದ (20) ರವರೆಗೆ ನಿಗದಿ ಪಡಿಸಿದ ಅಂಶಗಳನ್ನು ಒಳಗೊಂಡಿರಬೇಕು ಹಾಗೂ ಸೌಹಾರ್ದ ನಿಯಮ 2004ರ ನಿಯಮ 8ರಲ್ಲಿ ನಿಗದಿ ಪಡಿಸಿದ ಅಂಶಗಳ ಬಗ್ಗೆಯೂ ವರದಿಯಲ್ಲಿ ವ್ಯವಹಾರವನ್ನು ವಿಮರ್ಷೆ ಮಾಡಿ ವರದಿ ನೀಡುವ ಜವಾಬ್ದಾರಿ ಲೆಕ್ಕಾಧಿಕಾರಿಗೆ ಇರತಕ್ಕದ್ದು. ಈ ರೀತಿ ವರದಿ ನೀಡದಿದ್ದರೆ

ಸಂಬಂಧಪಟ್ಟ ಸಹಕಾರಿ, ಸಂಯುಕ್ತ ಸಹಕಾರಿ ಹಾಗೂ ಲೆಕ್ಕಪರಿಶೋಧನಾ ಇಲಾಖೆ ನಿರ್ದೇಶಕರ ಗಮನಕ್ಕೆ ತಂದು ಸೂಕ್ತ ಕ್ರಮ ಜರುಗಿಸುವಂತೆ ಪತ್ರ ವ್ಯವಹಾರ ಮಾಡಬೇಕು.

**8) ಲೆಕ್ಕಪರಿಶೋಧನಾ ವರದಿಯನ್ನು ಮರು ಪರಿಶೀಲಿಸಬಹುದೇ? :** ಸೌಹಾರ್ದ ನಿಯಮ 2004ರ ನಿಯಮ 9ಸಿ ಅನ್ವಯ, ಸಹಕಾರಿಯ ಸಾಮಾನ್ಯ ಸಭೆ ತಾನು ಪಡೆದ, ಲೆಕ್ಕಪರಿಶೋಧನಾ ವರದಿಯನ್ನು ಒಪ್ಪಿಗೆ ನೀಡುವ ಪೂರ್ವದಲ್ಲಿ, ಆ ವರದಿ ಸಮರ್ಪಕವಾಗಿಲ್ಲವೆಂದು ಮನದಟ್ಟಾದರೆ, ಸಾಮಾನ್ಯ ಸಭೆಯ ಒಂದು ತೀರ್ಮಾನ ಮಾಡಿ ಲೆಕ್ಕಪರಿಶೋಧನೆಯನ್ನು ಮರು ಪರಿಶೀಲನೆ ಮಾಡಿ ವರದಿ ಪಡೆಯಲು ಮನವಿ ಸಲ್ಲಿಸಬಹುದು.

**9) ಲೆಕ್ಕಪರಿಶೋಧನೆ ಉದ್ದೇಶ :** ಸಹಕಾರಿ ತನ್ನ ಕಾರ್ಯನಿರ್ವಹಣೆಯಲ್ಲಿ ರೂಪಿಸಿದ ನೀತಿ ನಿಯಮಗಳು ಹಾಗೂ ಕಾಯಿದೆ ಮತ್ತು ನಿಯಮದಲ್ಲಿ ನಿಗದಿ ಪಡಿಸಿದ ವಿಷಯಗಳನ್ನು ಮತ್ತು ಮಾನದಂಡಗಳನ್ನು ಅಳವಡಿಸಿಕೊಂಡ ಬಗ್ಗೆ ಹಾಗೂ ಸಂಯುಕ್ತ ಸಹಕಾರಿ ನೀಡಿದ ಮಾರ್ಗದರ್ಶನ ಸೂತ್ರಗಳು ಹಾಗೂ ಆಡಿಟ್ ಇಲಾಖೆ ಮಾರ್ಗಸೂಚಿಯನ್ನು ಪಾಲಿಸಿದ ಬಗ್ಗೆ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸುವ ಜವಾಬ್ದಾರಿ ಲೆಕ್ಕಪರಿಶೋಧಕನಿಗೆ/ಸಂಸ್ಥೆಗೆ ವಿಹಿತವಾಗಿದೆ. ಯಾವ ವಿಷಯಗಳು/ಪುಸ್ತಕ/ದಾಖಲೆ/ಭದ್ರತೆ/ಠೇವಣಿ/ಸಾಲಗಳ ಬಗ್ಗೆ ಪರಿಶೀಲಿಸಿ ವರದಿ ಕೊಡಬೇಕು. ಆ ರೀತಿ ಮಾಡದೇ ಇದ್ದಾಗ, ಸಹಕಾರಿ ಈ ವಿಷಯನ್ನು ಪರಿಶೀಲಿಸಿ, ಸಾಮಾನ್ಯ ಸಭೆ ತೀರ್ಮಾನದ ಮೂಲಕ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ತಿಳಿಸಿ, ತಪ್ಪು ವರದಿ ನೀಡಿದ್ದರೆ, ಲೆಕ್ಕ ಪರಿಶೋಧಕರ ಮೇಲೆ/ಸಂಸ್ಥೆಯ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಮನವಿ ಸಲ್ಲಿಸಬಹುದು.

**10) ಲೆಕ್ಕಪತ್ರಗಳ ಪರಿಶೋಧನೆ ಮಾಡಿಸದಿದ್ದರೆ ಆಗುವ ಪರಿಣಾಮ :** ಸೌಹಾರ್ದ ಕಾಯಿದೆ ಕಲಂ.68(5) ರಡಿ ಯಾವುದೇ ಸಹಕಾರಿ/ಸಂಯುಕ್ತ ಸಹಕಾರಿ, ತನ್ನ ಲೆಕ್ಕ ಪತ್ರಗಳನ್ನು ಸಾಮಾನ್ಯ ಸಭೆ ಮುಖಾಂತರ ನೇಮಕ ವಾದ ಲೆಕ್ಕಪರಿಶೋಧಕರಿಂದ ನೇಮಕವಾದ ಲೆಕ್ಕಪರಿಶೋಧಕರು/ಸಂಸ್ಥೆಯವರು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆದು, ಸೆಪ್ಟೆಂಬರ್ 25 ರೊಳಗೆ ಸಾಮಾನ್ಯ ಸಭೆ ಒಪ್ಪಿಗೆ ಪಡೆಯದಿದ್ದರೆ ಅಂತಹ ಸಹಕಾರಿ/ಸಂಯುಕ್ತ ಸಹಕಾರಿಯ ಪ್ರತಿಯೊಬ್ಬ ಮಂಡಳಿ ಸದಸ್ಯನಲ್ಲಿ ಮುಖ್ಯಕಾರ್ಯನಿರ್ವಾಹಕನಿಗೆ ವ್ಯಯಕ್ತಿಕವಾಗಿ ರೂ.ಐದು ಸಾವಿರ ದಂಡ/ಜಲ್ಮಾನೆ ಮತ್ತು ಆರು ತಿಂಗಳ ಕಾರಾ ಗೃಹ ವಾಸ ಅಥವಾ ಎರಡನ್ನು ಅನುಭವಿಸಬೇಕು. ಇದರ ಜೊತೆಗೆ ನಿಬಂಧಕನಿಗೆ ಇದರ ಜೊತೆಗೆ ಕಾಯಿದೆ ಕಲಂ.34 ಮತ್ತು ಕಲಂ.64ಎ ಅನ್ವಯ ಇತರ ನಿಗದಿ ಪಡಿಸಿದ ವರದಿಗಳ ಜೊತೆ ನಿಬಂಧಕರಿಗೆ/ಸಂಯುಕ್ತ ಸಹಕಾರಿ ಸೆಪ್ಟೆಂಬರ್ 30 ರೊಳಗೆ ವರದಿ ಸಲ್ಲಿಸದಿದ್ದರೆ. ಕಾಯಿದೆ ಕಲಂ.68(6) ರಡಿ ಪ್ರತಿಯೊಬ್ಬ ಮಂಡಳಿ ಸದಸ್ಯನು ಮತ್ತು ಮುಖ್ಯಕಾರ್ಯನಿರ್ವಾಹಕನು ರೂ.10,000/– ದಂಡ/ಜಲ್ಮಾನೆ ಮತ್ತು ಎರಡು ವರ್ಷಗಳ ಕಾರಾ ಗೃಹ ವಾಸ ಅಥವಾ ಎರಡನೂ ಅನುಭವಿಸತಕ್ಕದ್ದು.

ಸ್ವಾಯತ್ತತೆ ನಂತರ, ಜಾಗೃತ ಸದಸ್ಯರು ಸಹಕಾರಿಯನ್ನು ಪರಾದರ್ಶಕ, ಸ್ಪರ್ಧಾತ್ಮಕ, ವೃತ್ತಿಪರ ಸಂಸ್ಥೆಯೂ ನಿರ್ವಹಿಸುವ ಜವಾಬ್ದಾರಿ ಬರುತ್ತದೆ ಎಂಬ ಭಾವನೆಯಿಂದ ಸ್ವಾಯತ್ತತೆ ನೀಡಿದೆ. ಅದಕ್ಕಾಗಿ ಪ್ರಾರಂಭದಲ್ಲಿ ಸೌಹಾರ್ದ ಸಹಕಾರಿಗೆ ಸನ್ನದ್ದು ಲೆಕ್ಕಿಗರ ಪಟ್ಟಿ ತಯಾರಿಸಲು, ಸದಸ್ಯ ಸಹಕಾರಿಗಳು ಆ ಪಟ್ಟಿಯಿಂದಲೇ ಆಯ್ಕೆ ಮಾಡಿದ ಒಬ್ಬ ಲೆಕ್ಕಾಧಿಕಾರಿಯಿಂದ ಲೆಕ್ಕಪರಿಶೋಧನೆ ನಡೆಸುವ ವ್ಯವಸ್ಥೆ ಮತ್ತು ಕೆಲವು ನ್ಯೂನತೆಗಳಿಂದ, ಈ ಲೆಕ್ಕಪರಿಶೋಧಕರ ಪಟ್ಟಿ ತಯಾರಿಸುವ ಜವಾಬ್ದಾರಿ ತಪ್ಪಿದೆ. 97ನೇ ಸಂವಿಧಾನ ತಿದ್ದುಪಡಿ ನಂತರ ಪ್ರತಿಯೊಂದು ಸಹಕಾರಿ ಸಂಸ್ಥೆಯನ್ನು ಸ್ವತಂತ್ರ ಲೆಕ್ಕಪರಿಶೋಧಕರಿಂದ ಮಾಡಿಸಲು ವ್ಯವಸ್ಥೆಯಾಗುವಂತೆ ತಿದ್ದುಪಡಿ ಮಾಡಿದೆ. ಇದರ ಜೊತೆಗೆ ಪಟ್ಟಿ ತಯಾರಿಸುವ ಜವಾಬ್ದಾರಿಯಲ್ಲಿ ಲೆಕ್ಕಪರಿಶೋಧನಾ ಇಲಾಖೆ ನಿರ್ದೇಶಕರಿಗೆ ನೀಡಲಾಯಿತು. ಈ ಅಧಿಕಾರವನ್ನು ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಸಂಸ್ಥೆಯಾಗಿದ್ದು, ನಿಬಂಧಕರ ಕೆಲಸ ನಿರ್ವಹಿಸುತ್ತಿದ್ದು – ಪಟ್ಟಿ ತಯಾರಿಸುವ ಜವಾಬ್ದಾರಿಯನ್ನು ಮತ್ತು ಪಡೆಯಲು ಪ್ರಯತ್ನಿಸಬೇಕು. ಆದರೆ ಅದನ್ನು ಮತ್ತೆ ಪಡೆದ ನಂತರ ಪಟ್ಟಿ ತಯಾರಿಸುವಾಗ ಪಾರದರ್ಶಕ ನೀತಿ ಅನುಸರಿಸಿ ಅರ್ಹ ಸನ್ನದ್ದು ಲೆಕ್ಕಕೆ ಪಟ್ಟಿ ತಯಾರಿಸಬೇಕು. ಸ್ವಾರ್ಥ, ಸ್ವಜನ ಪಕ್ಷಪಾತವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸಂಯುಕ್ತ ಸಹಕಾರಿಗೆ ಇರಬೇಕು. ಲೆಕ್ಕಪರಿಶೋಧಕನಿಗೆ ಕಾಯಿದೆ ಕಲಂ.32, 33 ಮತ್ತು ನಿಯಮ 8 ರಲ್ಲಿ ನಿಗದಿ ಪಡಿಸಿದ ಜವಾಬ್ದಾರಿಯನ್ನು ನಿರ್ವಹಿಸಲೇಬೇಕು. ಏಕೆಂದರೆ ಸೌಹಾರ್ದ ಸಹಕಾರಿಗಳು ಒಂದು ಹೊಸ ವ್ಯವಸ್ಥೆಯಾಗಿದ್ದು,

ಸ್ಥಾನ ಮತ್ತು ಅಧಿಕಾರ ದುರುಪಯೋಗವಾಗುವ ಸಾಧ್ಯತೆ ಇದೆ. ಏಕೆಂದರೆ, ನಿಬಂಧಕರ ನಿಯಂತ್ರಣದಿಂದ ತೆಗೆದುಹಾಕಿ ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಶಾಸನಾತ್ಮಕ ಸಂಯುಕ್ತ ಸಹಕಾರಿಗೆ ಆ ಅಧಿಕಾರ ನೀಡಿದೆ. ಆದ್ದರಿಂದ ಲೆಕ್ಕತಪಾಸಣೆ ಮಾಡುವ ಅಧಿಕಾರ ನಿಗದಿ ಪಡಿಸಿದ ಎಲ್ಲಾ ಅಂಶಗಳ ಬಗ್ಗೆ ವಿವರ ಸಂಗ್ರಹಿಸಿ, ಪರಿಶೀಲಿಸಿ, ಮಂಡಳಿಗೆ ತಪ್ಪೆಸಗದಂತೆ ಮಾರ್ಗದರ್ಶನ ನೀಡಲು, ಈ ಲೆಕ್ಕಪರಿಶೋಧನಾ ವರದಿ ಒಂದು ಪ್ರಮುಖವಾದ ದಾಖಲೆ. ಇದರ ಜೊತೆಗೆ ಸಹಕಾರಿಯೂ ಸಾಮಾನ್ಯ ಸಭೆಗೆ ಲೆಕ್ಕತಪಾಸಣಾಧಿಕಾರಿ ಹಾಜರಿರಬೇಕು ಮತ್ತು ಸಾಮಾನ್ಯ ಸದಸ್ಯರಿಗೆ ವರದಿ ಪ್ರಮುಖ ಅಂಶಗಳ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಆದ್ದರಿಂದ ಸದಸ್ಯ ಸಹಕಾರಿ, ಲೆಕ್ಕತಪಾಸಣಾಧಿಕಾರಿ ಆಯ್ಕೆಯಿಂದ ಹಿಡಿದು, ಅವನಿಗೆ ಬೇಕಾದ ದಾಖಲೆಗಳು, ದಾಸ್ತಾವೇಜುಗಳೂ, ಪುಸ್ತಕಗಳು, ಭದ್ರತೆಗಳು, ಸಾಲ ನೀಡಿದ, ವಸೂಲಾದ, ವಸೂಲಾಗದ ಕೆಟ್ಟ ಸಾಲಗಳ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿ ನೀಡಬೇಕು. ಸದಸ್ಯರಿಂದ ಸಂಗ್ರಹಿಸಿದ ಠೇವಣಿಯನ್ನು ಸದುಪಯೋಗ ಮಾಡಿಕೊಂಡಿರುವ ಬಗ್ಗೆ ವಿವರಗಳನ್ನು ನೀಡಿ, ಪರಾಮರ್ಷೆ ಮಾಡಿ, ವರದಿ ನೀಡುವಂತೆ ಪ್ರಯತ್ನಿಸಬೇಕು. ಇದರ ಜೊತೆಗೆ ನಿಯಮ 9ಬಿ ಅಡಿ ಲೆಕ್ಕತಪಾಸಣೆಯಾದ ವರದಿ ಮೇಲೆ ಮರು ಲೆಕ್ಕತಪಾಸಣೆ ಮಾಡಿಸುವ ಅಧಿಕಾರ ಸಾಮಾನ್ಯ ಸಭೆಗೆ ಇರುವುದರಿಂದ, ಈ ಬಗ್ಗೆ ಲೆಕ್ಕತಪಾಸಣಾಧಿಕಾರಿ ವರದಿಯನ್ನು ಜಾಗೃತಿಯಿಂದ ನೀಡುವಂತೆ ತಿಳಿಸುವುದರ ಜೊತೆಗೆ – ಲೆಕ್ಕತಪಾಸಣೆಗೆ ಆಯ್ಕೆಯಾದ ವ್ಯಕ್ತಿ ಪ್ರಾಮಾಣಿಕವಾಗಿ ವರದಿ ನೀಡುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಹಕಾರಿ ಮಂಡಳಿ ಮತ್ತು ನೌಕರರಿಗೆ ಇದೆ. ಏಕೆಂದರೆ ಏನೇ ನ್ಯೂನತೆಗಳಿದ್ದರೂ, ಅದರ ಜವಾಬ್ದಾರಿ ಮಂಡಳಿ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರ ಮೇಲೆ ಬರುವುದರಿಂದ, ಅದನ್ನು ಸಮರ್ಥವಾಗಿ ಎದುರಿಸಲು ದಾಖಲೆಗಳು ಸ್ಪಷ್ಟವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿಯು ಮಂಡಳಿ ಸದಸ್ಯರು ಮತ್ತು ನೌಕರಿಗೆ ಇರಬೇಕು. ಸಂಯುಕ್ತ ಸಹಕಾರಿಯ ಆಡಿಟ್ ವರದಿ ಸರ್ಕಾರಕ್ಕೆ ಮಂಡನೆಯಾಗಬೇಕಾದ್ದರಿಂದ, ಲೆಕ್ಕಾಧಿಕಾರಿ ಆಯ್ಕೆ ಪಾರದರ್ಶಕವಾಗಿರಬೇಕು ಮತ್ತು ವರದಿ ಜವಾಬ್ದಾರಿಯುತವಾಗಿರುವಂತೆ ನೋಡಿಕೊಳ್ಳುವುದು ಸಂಯುಕ್ತ ಸಹಕಾರಿ ಜವಾಬ್ದಾರಿ.

ಲೆಕ್ಕಪರಿಶೋಧನೆ, ಒಂದು ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಿ, ಅದರ ಆರೋಗ್ಯದ ಸ್ಥಿತಿಯನ್ನು ವಿವರಿಸುವ ಒಂದು ವರದಿ. ಒಂದು ಸಹಕಾರಿ/ಸಂಯುಕ್ತ ಸಹಕಾರಿ ಲೆಕ್ಕಪರಿಶೋಧನೆಗೆ ನೇಮಕ ಮಾಡಿದ ವ್ಯಕ್ತಿಯೇ ಲೆಕ್ಕಪರಿಶೋಧಕ. ಅವನು ಪ್ರಮುಖವಾಗಿ ಮಾಡಲೇಬೇಕಾದ ಕೆಲಸವೆಂದರೆ, ಒಂದು ಸಹಕಾರಿ ತನ್ನ ಸದಸ್ಯರಿಗೆ ಉಪವಿಧಿಗಳಲ್ಲಿ ನಿಗದಿ ಪಡಿಸಿದ ಸೇವೆಗಳನ್ನು ನೀಡಲು ತೆಗೆದುಕೊಂಡ ಕ್ರಮಗಳು, ಮತ್ತು ಸದಸ್ಯರ ಜೊತೆ ವ್ಯವಹರಿಸುವಾಗ ಪಡೆದ/ನೀಡಿದ ದಾಖಲೆಗಳನ್ನು ನೋಡಿ ಸರಿ ತಪ್ಪುಗಳನ್ನು ಗುರುತಿಸುವ ಒಂದು ಪ್ರಕ್ರಿಯೆ. ಇದರಲ್ಲಿ ಸಹಕಾರಿಯ ಆಡಳಿತ ಮಂಡಳಿ ರಚನೆ, ಸಭೆಗಳ ನಿರ್ವಹಣ, ಸಾಮಾನ್ಯ ಸಭೆ/ವಿಶೇಷ ಸಭೆ ನಡೆಸಿದ ಬಗ್ಗೆ, ಸಹಕಾರಿ ನೀಡಿದ ಆರ್ಥಿಕ ಸೌಲತ್ತುಗಳು, ಸಾಲಗಳು, ಠೇವಣಿಗಳು ಮತ್ತು ಅವುಗಳ ನಿರ್ವಹಣೆ. ನೀಡಿದ ಸಾಲಗಳ ವಸೂಲಾತಿ ಕ್ರಮ ಸಹಕಾರಿಯಲ್ಲಿ ನಿರ್ವಹಿಸಿದ ಲೆಕ್ಕಪತ್ರಗಳ ವಿಮರ್ಷೆ, ಹಣದ ವ್ಯವಹಾರದಲ್ಲಿ ನಿರ್ವಹಿಸಿದ ಲೆಕ್ಕಪತ್ರಗಳ ಪರಿಶೀಲನೆ ಬಗ್ಗೆ ವಿಮರ್ಷೆ ಮಾಡಿ ವರದಿ ನೀಡಬೇಕು. ಇದರಲ್ಲಿ ಸಹಕಾರಿಯಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ/ನೌಕರರ ಸೇವೆ, ನಿಯಮಗಳು, ಶಿಸ್ತುಕ್ರಮ ಇತ್ಯಾದಿಯನ್ನು ಗಮನಿಸಬೇಕು. ಅವಶ್ಯಬಿದ್ದರೆ, ವರದಿ ನೀಡುವ ಮೊದಲು ಸ್ಪಷ್ಟಿಕರಣ ಪಡೆಯಲು ಸಹಕಾರಿ ಮಂಡಳಿ ಸದಸ್ಯರು ಮತ್ತು ಅಧಿಕಾರಿಗಳ ಸಭೆ ಕರೆಯಬಹುದು.

**ಲೆಕ್ಕತಪಾಸಣೆ :** ಪ್ರತಿಯೊಂದು ಸಹಕಾರಿಯನ್ನು ವರ್ಷದಲ್ಲಿ ಒಮ್ಮೆಯಾದರೂ ಲೆಕ್ಕತಪಾಸಣೆ ನಡೆಸುವ ವ್ಯವಸ್ಥೆ ಮಾಡುವ ಜವಾಬ್ದಾರಿ ಸಹಕಾರಿ ಮಂಡಳಿ. 97ನೇ ಸಂವಿಧಾನ ತಿದ್ದುಪಡಿ ನಂತರ ಲೆಕ್ಕತಪಾಸಣಾ ವರದಿಯನ್ನು ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆದು, ಸೆಪ್ಟೆಂಬರ್ 30 ರೊಳಗೆ ನಡೆಸುವ ಸಾಮಾನ್ಯ ಸಭೆಯು, ಅನುಪಾಲನಾ ವರದಿ ಜೊತೆ ಮಂಡಿಸಿ, ಸಾಮಾನ್ಯ ಸಭೆ ಒಪ್ಪಿಗೆ ಪಡೆಯಬೇಕು. ಇದಕ್ಕೆ ಪೂರಕವಾಗಿ ಪ್ರತಿಯೊಂದು ಸಹಕಾರಿ ಆರ್ಥಿಕ ವರ್ಷ ಮುಗಿದ 30 ದಿವಸಗಳೊಳಗಾಗಿ, ಆರ್ಥಿಕ ತಃಖ್ತೆಗಳನ್ನು ಅಂತಿಮಗೊಳಿಸಿ, ಒಂದು ಪ್ರತಿಯನ್ನು ಲೆಕ್ಕಾಧಿಕಾರಿಗೆ ಕಳುಹಿಸಲೇಬೇಕು. ಈ ಆರ್ಥಿಕ ತಃಖ್ತೆಗಳ ಆಧಾರದ ಮೇಲೆ ಲೆಕ್ಕತಪಾಸಕರು, ಲೆಕ್ಕತಪಾಸಣೆ ಮಾಡುತ್ತಾರೆ.

**ಲೆಕ್ಕತಪಾಸಕರ ನೇಮಕ :** ಪ್ರತಿಯೊಂದು ಸಹಕಾರಿ ತನ್ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ, ಲೆಕ್ಕತಪಾಸಣಾ ಇಲಾಖೆ ನಿರ್ದೇಶಕರು ರವಾನಿಸಿದ ಪಟ್ಟಿಯಿಂದ ಒಬ್ಬರನ್ನು ಆಯ್ಕೆ ಮಾಡಿ ನೇಮಕ ಮಾಡಬೇಕು. ಇದಕ್ಕೆ ಪೂರಕವಾಗಿ ಸಹಕಾರಿ ಮಂಡಳಿ, ಆ ಜಿಲ್ಲೆಗೆ ಸಂಬಂಧಪಟ್ಟ ಪಟ್ಟಿಯಿಂದ

ಕೆಲವರನ್ನು ಸಂಪರ್ಕಿಸಿ, ಸಂಭಾವನೆ ಬಗ್ಗೆ ಚರ್ಚೆ ಮಾಡಿ ಹೆಸರನ್ನು ಸಾಮಾನ್ಯ ಸಭೆಗೆ ಸೂಚಿಸಬೇಕು. ಈ ಪಟ್ಟಿಯಿಂದ ಒಬ್ಬರನ್ನು ಆಯ್ಕೆ ಮಾಡಿ ಒಪ್ಪಿಗೆ ನೀಡುವ ಅಧಿಕಾರ ಸಾಮಾನ್ಯ ಸಭೆಗೆ ಇರತಕ್ಕದ್ದು. ಈ ಅಧಿಕಾರವನ್ನು ಸಾಮಾನ್ಯ ಸಭೆಯೇ ತೀರ್ಮಾನಿಸಬೇಕು. ಅಂದರೆ ಸಾಮಾನ್ಯ ಸಭೆ ಈ ಅಧಿಕಾರವನ್ನು ಸಹಕಾರಿ ಮಂಡಳಿಗೆ ನೀಡುವ ಠರಾವಿಗೆ ಒಪ್ಪಿಗೆ ನೀಡುವುದು ತಪ್ಪು. ಏಕೆಂದರೆ ಕಾಯಿದೆಯಲ್ಲಿ ನೀಡಿದ ಹಕ್ಕನ್ನು ಅದೇ ಪ್ರಾಧಿಕಾರ ನಿರ್ವಹಿಸಬೇಕು. ಆದರೆ ಬಹಳಷ್ಟು ಸಹಕಾರಿಗಳು ಮಂಡಳಿಗೆ ಅಧಿಕಾರ ನೀಡುತ್ತವೆ – ಸರಿಯಿಲ್ಲ.

ಸಹಕಾರಿಯು ಮುಖ್ಯಕಾರ್ಯನಿರ್ವಾಹಕ, ತಯಾರಿಸಿದ ಆರ್ಥಿಕ ವರ್ಷದ ತಃಖ್ತೆಗಳನ್ನು ಸಹಕಾರಿ ಮಂಡಳಿಗೆ ಮುಂದಿನ ಒಪ್ಪಿಗೆ ಪಡೆದು ಲೆಕ್ಕಾಧಿಕಾರಿಗೆ ಕಳುಹಿಸಬೇಕು. ಏಕೆಂದರೆ ಈ ಜವಾಬ್ದಾರಿಯನ್ನು ಮಂಡಳಿಗೆ ನೀಡಲಾಗಿದೆ. ಲೆಕ್ಕತಪಾಸಣೆ ನಡೆಸುವಾಗ, ಈ ತಃಖ್ತೆಗಳೇ ಆಧಾರ ಇದನ್ನು ಬದಲಾಯಿಸುವುದು ಸಾಧ್ಯವಿಲ್ಲ – ಆದರೆ ಈ ತಃಖ್ತೆಗಳಲ್ಲಿ ಇರುವ ನ್ಯೂನತೆಗಳನ್ನು ಷರಾ ಮೂಲಕ ಟಿಪ್ಪಣಿ ನೀಡಬೇಕು. ಅಂದರೆ ಸಹಕಾರಿ ತನ್ನ ತಃಖ್ತೆಯಲ್ಲಿ ಲಾಭಾಂಶ ತೋರಿಸುವಾಗ, ತಪ್ಪು ಮಾಡಿದ್ದರೆ, ಅದನ್ನು ಉಲ್ಲೇಖಿಸಿ, ನಿವ್ವಳ ಲಾಭದ ಲೆಕ್ಕ ತಪ್ಪು ಎಂದು ವಿಮರ್ಷಿಸಬೇಕು.

ಲೆಕ್ಕತಪಾಸಕರನ್ನು ಎರಡು ವರ್ಷಕ್ಕಿಂತ ಹೆಚ್ಚು ಅವಧಿಗೆ ನೇಮಕ ಮಾಡತಕ್ಕದ್ದಲ್ಲ ಎಂದು ಮಿತಿಯನ್ನು ನಿಗದಿ ಪಡಿಸಿದೆ, ಇದರ ಉದ್ದೇಶ ಸ್ವಹಿತಾಸಕ್ತಿ ಬೆಳೆಸಲು ಅವಕಾಶ ನೀಡಬಾರದೆಂದು. ಈ ಬಗ್ಗೆ ನಿಗದಿ ಪಡಿಸಿದ್ದರೂ, ಹಲವಾರು ಸಹಕಾರಿಗಳು ಈ ನಿಯಮ ಪಾಲಿಸುತ್ತಿಲ್ಲ. ಇದರ ಜೊತೆಗೆ ಸಹಕಾರಿಗಳು ಲೆಕ್ಕ ತಪಾಸಣಾ ವರದಿ ಅಂತಿಮಗೊಳಿಸುವ ಪೂರ್ವದಲ್ಲಿ, ಆಕ್ಷೇಪಗಳ ಬಗ್ಗೆ ಟಿಪ್ಪಣಿ/ವಿವರಣೆ ನೀಡಲು ಅವಕಾಶ ಪಡೆಯಬಹುದು ಅಥವಾ ಆಡಳಿತ ಮಂಡಳಿ ಸಭೆ ಕರೆದು, ನ್ಯೂನತೆಗಳ ಬಗ್ಗೆ ಸ್ಪಷ್ಟೀಕರಣ ನೀಡಬಹುದು.

**ಲೆಕ್ಕತಪಾಸಣೆ ಅವಧಿ :** ಏಪ್ರಿಲ್ ಅಂತ್ಯಕ್ಕೆ ಆರ್ಥಿಕ ತಃಖ್ತೆಗಳನ್ನು ಸಲ್ಲಿಸಿದರೂ, ಲೆಕ್ಕಾಧಿಕಾರಿ, ವರದಿ ನೀಡಲು ಸೆಪ್ಟೆಂಬರ್ 1ನೇ ತಾರೀಖಿನ ತನಕ ಕಾಯಬೇಕಾಗಿಲ್ಲ. ಲೆಕ್ಕಾಧಿಕಾರಿ ನೇಮಿಸುವಾಗಲೇ ವರದಿ ನೀಡುವ ದಿನಾಮಕವನ್ನು ಚರ್ಚಿಸಿ, ಅಂತಿಮಗೊಳಿಸಿಕೊಳ್ಳಬೇಕು. ವರದಿಯನ್ನು ಜೂನ್, ಜುಲೈನಲ್ಲಿ ನೀಡಿದರೆ, ಸಾಮಾನ್ಯ ಸಭೆಯೂ ಆಗಸ್ಟ್‌ನಲ್ಲಿಯೇ ನಡೆಸಬಹುದು. ಅದಕ್ಕಾಗಿ ಸಹಕಾರಿ ಮಂಡಳಿ, ಲೆಕ್ಕಾಧಿಕಾರಿ ಜೊತೆ ಮಾತುಕತೆ ನಡೆಸಿ, ಜೂನ್ ಅಂತ್ಯಕ್ಕೆ ವರದಿ ಪಡೆದರೆ, ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್‌ಗಾಗಿ ಕಾಯಬೇಕಾಗಿಲ್ಲ. ಲೆಕ್ಕ ತಪಾಸಣಾ ವರದಿ ಪಡೆದ ನಂತರ ಸಾಮಾನ್ಯ ಸಭೆ ದಿನಾಂಕ ನಿಗದಿ ಪಡಿಸಿದರೆ, ವಿಳಂಬವಾಗುವ ಸಾಧ್ಯತೆ ಇದೆ. ಏಕೆಂದರೆ ವರದಿ ಬಂದ ನಂತರ ಮಂಡಳಿಯಲ್ಲಿ ಸಾಮಾನ್ಯ ಸಭೆ ದಿನಾಂಕ ನಿಗದಿ ಪಡಿಸಿದರೆ, ಆನಂತರ 45 ದಿವಸಗಳ ಒಳಗೆ ಕರೆಯಲು ಸಾಧ್ಯವಾಗುತ್ತದೆ. ಅಂದರೆ ಸಾಮಾನ್ಯ ಸಭೆ ದಿನಾಂಕ ನಿಗದಿ ಪಡಿಸಿದಾಗ, ಸದಸ್ಯರಿಗೆ 45 ದಿವಸಗಳ ನೋಟೀಸ್ ನೀಡಿ, ಮತದಾನದ ಹಕ್ಕು ಪ್ರಾಪ್ತ ಮಾಡಿಕೊಳ್ಳಲು ನೋಟೀಸ್ ನೀಡಿ, ಸಾಮಾನ್ಯ ಸಭೆ 15 ದಿವಸಗಳ ಪೂರ್ವದಲ್ಲಿ ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ ಅಂತಿಮಗೊಳಿಸಬೇಕು. ಆದ್ದರಿಂದ, ಸಾಮಾನ್ಯ ಸಭೆ ದಿನಾಂಕವನ್ನು ಜೂನ್ 1 ಅಥವಾ ಜುಲೈ ನಲ್ಲಿ ನಡೆಯುವ ಮಂಡಳಿ ಸಭೆಯಲ್ಲಿ ಅಂತಿಮಗೊಳಿಸಿ, ಆ ಲೆಕ್ಕಾಧಿಕಾರಿಗೆ ತಿಳಿಸಬೇಕು ಮತ್ತು ವರದಿ ಬಂದ ನಂತರ, ಮಂಡಳಿ ಸಭೆಯ ಆ ವರದಿ ಮತ್ತು ಅನುಪಾಲನಾ ವರದಿ ಅಂತಿಮಗೊಳಿಸಿದ ನಂತರ ಸಾಮಾನ್ಯ ಸಭೆ ನೋಟೀಸ್ ನೀಡಬೇಕು. ಅದಕ್ಕಾಗಿ ಮಂಡಳಿ ಜಾಗೃತವಾಗಿರಬೇಕು. ಏಕೆಂದರೆ ಈ ಲೆಕ್ಕತಪಾಸಣ ವರದಿ, ಅನುಪಾಲನಾ ವರದಿಯಲ್ಲಿ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯದಿದ್ದರೆ, ಅದು ಪ್ರತಿ ಮಂಡಳಿ ಸದಸ್ಯನು ಅನರ್ಹತೆಗೊಳಪಡುವುದರ ಜೊತೆಗೆ ಶಿಕ್ಷಾರ್ಹ ಅಪರಾದವಾಗುತ್ತದೆ ಎಂಬುದನ್ನು ಮಂಡಳಿ ತಿಳಿದಿರಬೇಕು.

ಲೆಕ್ಕತಪಾಸಣಾ ವರದಿಯಲ್ಲಿ ಏನಿರಬೇಕು : ಈ ಬಗ್ಗೆ ಕಾಯಿದೆ ಕಲಂ.33 ರಲ್ಲಿ ನಿಯಮ 8 ರಲ್ಲಿ ವಿವರಗಳನ್ನು ಉಲ್ಲೇಖಿಸಿದೆ. ಈ ಎಲ್ಲಾ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ನಂತರವೇ ವರದಿ ನೀಡಬೇಕೆಂದು ಲೆಕ್ಕ ತಪಾಸಣಾಧಿಕಾರಿ ತಿಳಿದಿರಬೇಕು. ಏಕೆಂದರೆ ಒಂದು ಸಹಕಾರಿ ಆರೋಗ್ಯ ಸ್ಥಿತಿ, ಲೆಕ್ಕತಪಾಸಣಾ ವರದಿಯಲ್ಲಿ ಆಧಾರ, ಅದಕ್ಕಾಗಿ ಲೆಕ್ಕತಪಾಸಣಾಧಿಕಾರಿ ಜವಾಬ್ದಾರಿಯುತವಾಗಿ ತಪಾಸಣೆ ನಡೆಸಬೇಕು. ಏಕೆಂದರೆ ಈ ವರದಿಯಲ್ಲಿ ಕಾಣಿಸಿದ ಟಿಪ್ಪಣಿ ಮೇಲೆ ಸಹಕಾರಿ ಮಂಡಳಿ, ಸದಸ್ಯರಿಗೆ ಸೇವೆ ನೀಡುವಲ್ಲಿ ಆದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಅವಕಾಶವಿದೆ.

# ಅಧ್ಯಾಯ – 10

## ಆಡಳಿತ ಮಂಡಳಿಗೆ ಚುನಾವಣೆ – ಸಹಕಾರಿ ಚುನಾವಣಾ ಆಯೋಗ (ಪ್ರಾಧಿಕಾರ)

**ಕಲಂ.24 : ಮಂಡಳಿಯ ರಚನೆ :**

"ಪ್ರತಿಯೊಂದು ಸಹಕಾರಿಯ ಮಂಡಳಿಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತು ಪಡಿಸಿ (ಹದಿಮೂರಕ್ಕಿಂತ) ಕಡಿಮೆಯಿಲ್ಲದ, ಆದರೆ ಕೆಳಗೆ ನಿರ್ದಿಷ್ಟ ಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ (ಚುನಾಯಿತ) ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು –

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹದಿಮೂರು ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿನೈದು ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು;

(ಡಿ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು;

(ಇ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ,

**ಇಪ್ಪತ್ತೊಂದು ಸದಸ್ಯರು;**

ಪರಂತು, ಬಿಡಿ ವ್ಯಕ್ತಿಗಳನಗನ್ನು ಸದಸ್ಯರನ್ನಾಗಿ ಉಳ್ಳಪ್ರತಿಯೊಂದು ಸಹಕಾರಿಯ ಮಂಡಳಿಯಲ್ಲಿ ಅನುಸೂಚಿತ ಜಾತಿಗೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು, ಅಂಥ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ, ಮೀಸಲಿಡತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಳಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿ ಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಲದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ:

ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಅವಶ್ಯವಿದ್ದಲ್ಲಿ ಮಂಡಳಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತು ಪಡಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯ ಪಡಿಸದ ಹೊರತು ಚುನಾಯಿತ ನಿರ್ದೇಶಕರುಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು:

ಪರಂತು, ಸಂಯುಕ್ತ ಸೌಹಾರ್ದ ಸಹಕಾರಿಯ ನಿರ್ದೇಶಕತ್ವದ ಅಧಿಕಾರಾವಧಿಯು ಪ್ರತಿ ನಿಧಿಸಲ್ಪಡುವ ಸಹಕಾರಿಯ ಆಡಳಿತ ಮಂಡಳಿಯ ಅಧಿಕಾರಾವಧಿಯೊಂದಿಗೆ ಅಂತ್ಯವಾಗತಕ್ಕದ್ದು.

(3) ಮುಖ್ಯಕಾರ್ಯನಿರ್ವಾಹಕನು ಆಡಳಿತ ಮಂಡಳಿಯ ಪದನಿಮಿತ ನಿರ್ದೇಶಕನಾಗಿರತಕ್ಕದ್ದು ಹಾಗೂ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ."

**ಕಲಂ.25 : ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ :**

(1) "ಒಬ್ಬ ವ್ಯಕ್ತಿಯು, –

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಇತರ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಸಿ) ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃ ಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ; ಅಥವಾ

(ಇ) ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರು ಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

(ಎಫ್) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಲಾದಂತೆ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ,

– ಅಂಥ ವ್ಯಕ್ತಿಯು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು.[ಹಾಗೂ ಅನರ್ಹತೆಗೆ ಗುರಿಯಾದ ದಿನಾಂಕದಿಂದ [ಗರಿಷ್ಠ] ಐದು ವರ್ಷಗಳ ಅವಧಿಯವರೆಗೆ ಸದರಿ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು.

(2) ನಿರ್ದೇಶಕರುಗಳೆಲ್ಲರೂ, ಸಹಕಾರಿಯ ನಿರ್ದೇಶಕರ ಹುದ್ದೆಯ ಪದಾವಧಿಯಲ್ಲಿ 

(ಎ) ಮಂಡಳಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ [*****]; ಅಥವಾ

(ಎ–1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ–2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ) [ಪ್ರತಿವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗೆ] ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಲ್ಲಿ ಗೊತ್ತುಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ನಡೆಸದಿದ್ದರೆ; ಅಥವಾ

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ವರದಿಯೊಂದಿಗೆ [ಹಿಂದಿನ ಸಹಕಾರ ವರ್ಷದ] ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ,

(ಡಿ) ಸಂಯುಕ್ತ ಸಹಕಾರಿಯು ನೀಡಿದ ಆದೇಶ ಅಥವಾ ನಿರ್ದೇಶನ ಉಲ್ಲಂಘಸಿದರೆ ಅಥವಾ ಯಾವುದೇ ಅರೆ–ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದರೆ;

(ಇ) ಸಂಯುಕ್ತ ಸಹಕಾರಿಯ ಪೂರ್ವಾನುಮೋದನೆಯನ್ನು ಪಡೆಯದೆ ಶಾಖೆಗಳನ್ನು ತೆರೆದರೆ.

– ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ [ಗರಿಷ್ಠ] ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಮತ್ತು ಆ ಸಹಕಾರಿಯ ಅಥವಾ ಇತರ ಯಾವುದೇ ಸಹಕಾರಿಯ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗಿರತಕ್ಕದ್ದು.

(3) ಒಬ್ಬ ನಿರ್ದೇಶಕ ಅಥವಾ ನೌಕರನು ದುರುಪಯೋಗ, ವಿಶ್ವಾಸ ದ್ರೋಹ ಅಥವಾ ಸಹಕಾರಿಗೆ ನಷ್ಟವನ್ನುಂಟು ಮಾಡುವಂಥ ಇತರ ಯಾವುದೇ ಕರ್ತವ್ಯ ಲೋಪ ಅಥವಾ ಕೃತ್ಯವನ್ನು ಮಾಡಿದ್ದು, ಹಾಗೆ ತಪ್ಪಿತಸ್ಥನಾಗಿರುವಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಡಿಯಲ್ಲಿ

ಯಾವ ಕ್ರಿಮಿನಲ್ ಕ್ರಮಕ್ಕೆ ಆತನು ಗುರಿಯಾಗುವನೋ ಅಂಥ ಕ್ರಿಮಿನಲ್ ಕ್ರಮಕ್ಕೆ ಬಾಧಕವಾಗದಂತೆ ಆ ನಷ್ಟವನ್ನು ಭರ್ತಿ ಮಾಡುವುದಕ್ಕೆ ವೈಯಕ್ತಿವಾಗಿ ಜವಾಬ್ದಾರನಾಗತಕ್ಕದ್ದು.

(4) ಮಂಡಳಿಯ ಸದಸ್ಯನು, ಈ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಯಾವುವೇ ಅನರ್ಹತೆಗಳಿಗೆ ಒಪಟ್ಟಿದ್ದನೇ ಅಥವಾ ಒಳಪಟ್ಟಿರುವನೇ ಎಂಬ ಪ್ರಶ್ನೆಯನ್ನು ಸಂಯುಕ್ತ ಸಹಕಾರಿಯು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ತೀರ್ಮಾನಿಸತಕ್ಕದ್ದು.

(5) (4)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವೊಬ್ಬ ಸದಸ್ಯನು ಅಂಥ ಆದೇಶದ ವಿರುದ್ಧ ಆ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರ್‌ನಲ್ಲಿ ಅಪೀಲು ಮಾಡಿಕೊಳ್ಳಬಹುದು."

**ಕಲಂ.25ಎ : ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ :**

(1) "ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಆ ಪದಾಧಿಕಾರಿಡಿ ಪದವನ್ನು ವಹಿಸಿಕೊಂಡ ದಿನಾಂಕದಿಂದ ಎರಡು ವರ್ಷಗಳ ತರುವಾಯ ಮಾತ್ರ ಮಂಡಿಸತಕ್ಕದ್ದು. ಒಂದು ವೇಳೆ ಅವಿಶ್ವಾಸ ನಿರ್ಣಯಕ್ಕೆ ಒಮ್ಮೆ ಸೋಲುಂಟಾದಲ್ಲಿ ಹೊಸ ಅವಿಶ್ವಾಸ ನಿರ್ಣಯವನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಮಂಡಿಸತಕ್ಕದ್ದಲ್ಲ. ಸಂಬಂಧಪಟ್ಟ ಸಹಕಾರಿಯ ಮೂರನೇ ಒಂದರಷ್ಟು ಚುನಾಯಿತ ಆಡಳಿತ ಮಂಡಳಿ ಸದಸ್ಯರಿಂದ ಕೋರಿಕೆ ಸಲ್ಲಿಕೆಯಾಗದಿದ್ದಲ್ಲಿ ಅಂಥ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

(2) ಸಹಕಾರಿಯ ಪದಾಧಿಕಾರಿಯ ವಿಶ್ವಾಸವನ್ನು ಕೋರಿ ವ್ಯಕ್ತಪಡಿಸಿದ ನಿರ್ಣಯವನ್ನು ಸಹಕಾರಿಯು ಆ ಉದ್ದೇಶಕ್ಕಾಗಿ ನಡೆಸಿದ ವಿಶೇಷ ಸಭೆಯಲ್ಲಿ."

**ಕಲಂ.26 : ಮಂಡಳಿಯ ಚುನಾವಣೆ :**

(1) "ಹೊಸದಾಗಿ ಚುನಾಯಿತವಾದ ಮಂಡಳಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಳಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ ನಡೆಸತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗವು ನಿರ್ವಹಿಸತಕ್ಕದ್ದು.

(3) ಹೊಸದಾಗಿ ಚುನಾಯಿತರಾದ ಮಂಡಳಿಯ ನಿರ್ದೇಶಕರು, ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡತಕ್ಕದ್ದು."

**ಕಲಂ.39ಎಎ : ಸಹಕಾರ ಚುನಾವಣಾ ಪ್ರಾಧಿಕಾರ :**

(1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಬ್ಬ ಸಹಕಾರ ಚುನಾವಣಾ ಆಯುಕ್ತ ಮತ್ತು ಒಬ್ಬ ಕಾರ್ಯದರ್ಶಿಯನ್ನು ಒಳಗೊಂಡಿರುವ ಒಂದು ಸಹಕಾರ ಚುನಾವಣಾ ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಸರಕಾರವು, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿಯ ದರ್ಜೆಯ ಅಧಿಕಾರಿಯಾಗಿರುವ ಅಥವಾ ಅಧಿಕಾರಿಯಾಗಿದ್ದ ಒಬ್ಬ ವ್ಯಕ್ತಿಯನ್ನು, ಸಹಕಾರ ಚುನಾವಣಾ ಆಯುಕ್ತರೆಂದು ನೇಮಕ ಮಾಡತಕ್ಕದ್ದು ಮತ್ತು ಅಂಥ ಸಹಕಾರ ಚುನಾವಣಾ ಆಯುಕ್ತರು ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ರಾಜ್ಯ ಸರಕಾರವು, ಸಹಕಾರ ಸಂಘಗಳ ಹೆಚ್ಚುವರಿ ನಿಬಂಧಕರ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯಾಗಿರುವ ಒಬ್ಬ ವ್ಯಕ್ತಿಯನ್ನು ನಿಯಮಿಸಬಹುದಾದಂಥ ಅವಧಿಗಾಗಿ, ಸಹಕಾರ ಚುನಾವಣಾ ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದು.

(5) ಸಹಕಾರ ಚುನಾವಣಾ ಆಯುಕ್ತ ಮತ್ತು ಕಾರ್ಯದರ್ಶಿಯ ಸಂಬಳ ಮತ್ತು ಭತ್ಯೆಗಳೂ ಸೇರಿದಂತೆ ಸೇವಾ ಷರತ್ತುಗಳು

ನಿಯಮಿಸಬಹುದಾದಂತೆ ಇರತಕ್ಕದ್ದು.

(6) (8)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸಹಕಾರ ಚುನಾವಣಾ ಆಯುಕ್ತನನ್ನು, (ಸರಕಾರವು) ಆದೇಶಿಸಿದ ಮತ್ತು ಉಚ್ಚನ್ಯಾಯಾಲಯದ ನ್ಯಾಯಾದೀಶರು ನಡೆಸಿದ ವಿಚಾರಣೆಯ ತರುವಾಯ, ವಿಚಾರಣೆಯಲ್ಲಿ ಅಸಭ್ಯ ವರ್ತನೆ ಅಥವಾ ಅಸಮರ್ಥತೆಯ ಕಾರಣದಿಂದಾಗಿ ಚುನಾವಣಾ ಆಯುಕ್ತನನ್ನು ತೆಗೆದು ಹಾಕಲೇಬೇಕೆಂದು ಸಲ್ಲಿಸಿದ ವರದಿಯ ಆಧಾರದ ಮೇಲೆ, ಸಾಬೀತಾದ ದುರ್ನಡತೆ ಅಥವಾ ಅಸಮರ್ಥತೆಯ ಹಿನ್ನೆಲೆಯಲ್ಲಿ, ರಾಜ್ಯಪಾಲರ ಆದೇಶದ ಮೂಲಕ ಆತನ ಪದದಿಂದ ತೆಗೆದು ಹಾಕತಕ್ಕದ್ದು.

(7) [ಸರಕಾರವು] (6)ನೇ ಉಪಪ್ರಕರಣದ ಮೇರೆಗೆ ಯಾವ ಚುನಾವಣಾ ಆಯುಕ್ತರ ವಿರುದ್ಧ ವಿಚಾರಣೆ ಮಾಡಲು ಆದೇಶಿಸಲಾಗಿದೆಯೋ ಆ ಚುನಾವಣಾ ಆಯುಕ್ತರನ್ನು ಕಚೇರಿಗೆ ಹಾಜರಾಗುವುದರಿಂದ ನಿಷೇಧಿಸುವುದು ಅವಶ್ಯ ಎಂದು ಭಾವಿಸಿದ್ದರೆ, ಉಚ್ಚನ್ಯಾಯಾಲಯದ ನ್ಯಾಯಾಧೀಶರ ವರದಿಯನ್ನು ಸ್ವೀಕರಿಸಿದ ಮೇಲೆ [ಸರಕಾರವು] ಆದೇಶವನ್ನು ಹೊರಡಿಸುವವರೆಗೆ, ಪದದಿಂದ ಅಮಾನತುಗೊಳಿಸಬಹುದು.

(8) (6)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಹಕಾರ ಚುನಾವಣಾ ಆಯುಕ್ತರು, –

(ಎ) ನಿರ್ಣೀತ ದಿವಾಳಿಯಾಗಿದ್ದರೆ; ಅಥವಾ

(ಬಿ) [ಸರಕಾರದ] ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನೊಳಗೊಂಡ ಅಪರಾಧದ ನಿರ್ಣೀತ ಅಪರಾಧಿಯಾಗಿದ್ದರೆ; ಅಥವಾ

(ಸಿ) ಅವನ ಪದಾವಧಿಯಲ್ಲಿ, ಅವನ ಪದದ ಕರ್ತವ್ಯದಿಂದ ಹೊರಗೆ ಹಣ ಸಂದಾಯವಾಗುವ ಉದ್ಯೋಗದಲ್ಲಿ ನಿರತನಾಗಿದ್ದರೆ; ಅಥವಾ

(ಡಿ) [ಸರಕಾರದ] ಅಭಿಪ್ರಾಯದಲ್ಲಿ, ಅವನು ಮಾನಸಿಕ ಅಥವಾ ದೈಹಿಕ ದುರ್ಬಲತೆಯ ಕಾರಣದಿಂದಾಗಿ ಪದದಲ್ಲಿ ಮುಂದುವರೆಯಲು ಸೂಕ್ತನಾಗಿಲ್ಲದಿದ್ದರೆ; ಅಥವಾ

(ಇ) ಆತನು ಚುನಾವಣಾ ಆಯುಕ್ತನಾಗಿ ತನ್ನ ಪ್ರಕಾರ್ಯಗಳ ಮೇಲೆ ಬಾಧಕವನ್ನುಂಟು ಮಾಡುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದಾನೆಂದು, [ಸರಕಾರವು] ಅಭಿಪ್ರಾಯಪಟ್ಟರೆ, ಅವರು ಆದೇಶದ ಮೂಲಕ ಚುನಾವಣಾ ಆಯುಕ್ತರನ್ನು ಪದದಿಂದ ತೆಗೆದು ಹಾಕಬಹುದು.

(9) ಸಹಕಾರ ಚುನಾವಣಾ ಆಯುಕ್ತನು, ಕರ್ನಾಟಕ ಸರ್ಕಾರವು ಮಾಡಿಕೊಂಡ ಅಥವಾ ಅದರ ಪದವಾಗಿ ಮಾಡಿಕೊಳ್ಳಲಾದ ಯಾವುದೇ ಕರಾರಿನಲ್ಲಿ ಅಥವಾ ಒಪ್ಪಂದದಲ್ಲಿ ಸಂಬಂಧಪಟ್ಟವನಾಗಿದ್ದರೆ ಅಥವಾ ಹಿತಾಸಕ್ತಿ ಹೊಂದಿದ್ದರೆ ಅಥವಾ ಸದಸ್ಯನಾಗಿ ಮತ್ತು ನಿಗಮಿತ ಕಂಪನಿಯ ಇತರ ಸದಸ್ಯನಾಗಿ ಅನ್ಯಥಾ ಅದರಿಂದ ದೊರೆಯುವ ಯಾವುದೇ ಲಾಭ ಅಥವಾ ಯಾವುದೇ ಪ್ರಯೋಜನ ಅಥವಾ ಸಂಬಳದಲ್ಲಿ ಯಾವುದೇ ರೀತಿಯಲ್ಲಿ ಪಾಲ್ಗೊಂಡರೆ, ಅವನನ್ನು (6)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ದುರ್ವರ್ತನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

(10) ಸಹಕಾರ ಚುನಾವಣಾ ಪ್ರಾಧಿಕಾರವು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ, ಸಹಕಾರ ಚುನಾವಣಾ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸುವದಕ್ಕಾಗಿ ಅಗತ್ಯವಿರುವ ಅಧಿಕಾರಿಗಳು ಮತ್ತು ಇತರ ನೌಕರರ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು.

(11) (2)ನೇ ಉಪಪ್ರಕರಣದ ಅಡಿಯಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಪ್ರದತ್ತವಾದ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅವಶ್ಯವಾಗಬಹುದಾದಷ್ಟು ಸಿಬ್ಬಂದಿಯನ್ನು, ಸಹಕಾರ ಚುನಾವಣಾ ಪ್ರಾಧಿಕಾರವು ಹಾಗೆ ಕೋರಿದಾಗ, ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರವು ಹಾಗೆ ಒದಗಿಸತಕ್ಕದ್ದು.

(12) ಸಹಕಾರ ಚುನಾವಣಾ [ಪ್ರಾಧಿಕಾರದ] ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆಗಳು, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(13) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಚುನಾವಣೆಯನ್ನು ನಡೆಸುವುದಕ್ಕಾಗಿ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(14) ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ವೆಚ್ಚವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಭರಿಸತಕ್ಕದ್ದು.

(15) ಪ್ರತಿಯೊಂದು ಸಹಕಾರ ಸಂಘದ ಮಂಡಳಿಯು,

(ಎ) ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ ಆರು ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ (ಪ್ರಾಧಿಕಾರಕ್ಕೆ) ತಿಳಿಸತಕ್ಕದ್ದು;

(ಬಿ) ಸಹಕಾರ ಚುನಾವಣಾ ಪ್ರಾಧಿಕಾರವು ನಿಯಮಿಸಬಹುದಾದಂಥ ಕ್ಯಾಲೆಂಡರ್ ಪ್ರಕಾರ (ಪ್ರಾಧಿಕಾರವು) ಅಗತ್ಯ ಪಡಿಸಬಹುದಾದಂಥ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಒದಗಿಸತಕ್ಕದ್ದು; ಮತ್ತು

(ಸಿ) ಸಹಕಾರ ಚುನಾವಣಾ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಎಲ್ಲ ಅವಶ್ಯಕ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

**ಕಲಂ.26ಎ : ಸಹಕಾರ ಚುನಾವಣಾ ಆಯೋಗ (ಪ್ರಾಧಿಕಾರ) :**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 39ಎಎ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟಿರುವ ಚುನಾವಣಾ ಆಯೋಗವು ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲೂ ಸಹ ಚುನಾವಣಾ ಆಯೋಗವಾಗಿರತಕ್ಕದ್ದು. ಮತ್ತು ಈ ಅಧಿನಿಯಮದಡಿಯಲ್ಲಿ ಸಂಯುಕ್ತ ಸಹಕಾರಿಯೂ ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ರೀತಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಸಹಕಾರ ನೊಂದಣಿ ನಂತರ, ಮೊದಲ ಮಂಡಳಿ ಸದಸ್ಯರ ಚುನಾವಣೆಯನ್ನು ಅಥವಾ ಆಕಸ್ಮಿಕ ರಿಕ್ತತೆಯನ್ನು ಹೊರತುಪಡಿಸಿ, ಮಂಡಳಿ ಸದಸ್ಯರನ್ನು ಚುನಾಯಿಸಲು ಪ್ರತಿಯೊಂದು ಚುನಾವಣೆಯನ್ನು ಚುನಾವಣಾ ಪ್ರಾಧಿಕಾರದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದು.

ಯಾವುದೇ ಒಂದು ಮಂಡಳಿ ತನ್ನ ಅವಧಿ ಮೀರಿ ಅಧಿಕಾರದಲ್ಲಿ ಇರತಕ್ಕದ್ದಲ್ಲ. ಈ ನೀತಿಯನ್ನಾಧರಿಸಿ ಚುನಾವಣೆ ಮಾಡುವ ವಿಧಿ ವಿಧಾನಗಳನ್ನು ರೂಪಿಸಬಹುದು.ಪ್ರತಿಯೊಂದು ಆಯ್ಕೆಯಾದ ಮಂಡಳಿ ಅವಧಿ 5 ವರ್ಷಗಳಿರಬೇಕೆಂದರೆ, ಹೊಸ ಮಂಡಳಿ ರಚನೆ, ಹೊರಹೋಗುವ ಮಂಡಳಿ ಪದಾವಧಿ ಮುಕ್ತಾಯ ಒಂದೇ ದಿನ ಮಾಡಬಹುದೇ? ಏಳು ದಿನದಿಂದ ಹದಿನಾಲ್ಕು ದಿವಸಗಳ ನೋಟೀಸು ಜಾರಿ ಮಾಡಿ ಅವಧಿ ಮುಗಿಯುವ ಪೂರ್ವದಲ್ಲಿ ಪದಾಧಿಕಾರಿಗಳ ಆಯ್ಕೆಯಾದರೆ, ಹೊರ ಹೋಗುವ ಮಂಡಳಿ ಅವಧಿ ಮುಕ್ತಾಯಕ್ಕೂ, ಹೊಸ ಮಂಡಳಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಹೊಂದಾಣಿಕೆ ಮಾಡಿಕೊಂಡಾಗ ಮಾತ್ರ. ಈ ಸಮಸ್ಯೆಯನ್ನು ಬಗೆಹರಿಸಬಹುದು.

ಚುನಾವಣೆಗೆ ಸಂಬಂಧಪಟ್ಟಂತೆ ಚುನಾವಣಾಧಿಕಾರಿಯಾಗಲೀ, ನಿಬಂಧಕರಾಗಲೀ ಯಾವುದೇ ಕಾರಣಕ್ಕೂ ಚುನಾವಣೆ ವೇಳಾಪಟ್ಟಿ ಹೊರಡಿಸಿದ ನಂತರ ಮಧ್ಯಪ್ರವೇಶ ಮಾಡಲು ಅಧಿಕಾರ ಹೊಂದಿಲ್ಲ. ಮತ್ತು ಯಾವುದೇ ದಾವಾ ಪ್ರಕರಣವನ್ನು ದಾಖಲಿಸಿಕೊಂಡು ತಡೆಯಾಜ್ಞೆಯನ್ನಾಗಲೀ ಅಥವಾ ಯಾವುದೇ ನಿರ್ದೇಶಕ ಭಾಗವಹಿಸದಂತೆ ನಿರ್ಬಂಧಿಸುವುದಾಗಲೀ ಅಥವಾ ಯಾವುದೇ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯ ನಾಮಪತ್ರದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಅಧಿಕಾರ ಹೊಂದಿಲ್ಲ. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ಪ್ರತಿಯೊಂದು ಸಹಕಾರಿ ಮುಖ್ಯಕಾರ್ಯನಿರ್ವಾಹಕ ಮತದಾರರ ಪಟ್ಟಿಯನ್ನು ಪ್ರಕಟಿಸಿ, ಒಂದು ಪ್ರತಿಯನ್ನು ಚುನಾವಣಾಧಿಕಾರಿಯ ವಶಕ್ಕೆ ವಹಿಸತಕ್ಕದ್ದು. ಆ ಮತದಾರರ ಪಟ್ಟಿಯನ್ನಾಧರಿಸಿಯೇ ಚುನಾವಣಾಧಿಕಾರಿ ಮತದಾನದ ಹಕ್ಕನ್ನು ಸದಸ್ಯರಿಗೆ ಕೊಡತಕ್ಕದ್ದು. ಯಾವುದೇ ಕಾರಣಕ್ಕೂ ಚುನಾವಣಾಧಿಕಾರಿಯಾಗಲೀ, ನಿಬಂಧಕರಾಗಲೀ ಮತದಾರರ ಪಟ್ಟಿಗೆ ಸೇರ್ಪಡೆ, ಕೈಬಿಡುವುದು ಅಥವಾ ಮಾರ್ಪಡಿಸುವುದನ್ನು ಮಾಡತಕ್ಕದ್ದಲ್ಲ ಮತ್ತು ಆ ಅಧಿಕಾರಿಗಳಿಗೆ ಆ ಅಧಿಕಾರ ಇರುವುದಿಲ್ಲ. ಚುನಾವಣಾಧಿಕಾರಿಗೆ ಚುನಾವಣೆ ನಡೆಸುವ ಜವಾಬ್ದಾರಿಯನ್ನು ಹೊಂದಿದ್ದು, ಚುನಾವಣೆ ನಡೆಸುವಾಗ ಉದ್ಭವವಾಗುವ ಯಾವುದೇ ಕಾನೂನು ಅಂಶವನ್ನು ಸಲಹೆಗಾಗಿ ನಿಬಂಧಕರು ಮತ್ತಿತರನ್ನು ಕೇಳತಕ್ಕದ್ದಲ್ಲ. ಮತ್ತು ಅಂತಹ ಅಧಿಕಾರಿಯು ಕೊಡತಕ್ಕದ್ದೂ ಅಲ್ಲ. ಏಕೆಂದರೆ ಈ ಎಲ್ಲ ಅಂಶಗಳು ದಾವಾ ಪ್ರಕರಣ ದಾಖಲಿಸಿದ ಸಂದರ್ಭದಲ್ಲಿ ತೀರ್ಪು ಕೊಡುವಾಗ ಮುಜುಗರವನ್ನುಂಟು ಮಾಡುತ್ತದೆ. ಹಾಗೂ ಅಂತಹ ಅಧಿಕಾರಿ ಪ್ರಕರಣ ತೀರ್ಮಾನಿಸಲು ನಿಶ್ಯಕ್ತನಾಗುತ್ತಾನೆ. ಆದರೆ ಉಚ್ಚ ನ್ಯಾಯಾಲಯ ಮತ್ತು ಶ್ರೇಷ್ಠ ನ್ಯಾಯಾಲಯಗಳು ಯಾವುದೇ ಪ್ರಸಂಗದಲ್ಲಿ ಯಾವುದೇ ಸಮಯದಲ್ಲಿ ಮಧ್ಯ ಪ್ರವೇಶ ಮಾಡುವ ಅಧಿಕಾರ ಹೊಂದಿದ್ದು, ಯಾವುದೇ ರೀತಿಯ ಆದೇಶಗಳನ್ನು ಹೊರಡಿಸಲು ಸಂವಿಧಾನಾತ್ಮಕ ಅಧಿಕಾರ ಹೊಂದಿದೆ. ಆ ಆದೇಶಗಳನ್ನು ಪಾಲಿಸುವುದು ಚುನಾವಣಾಕಾರಿಯ ಕರ್ತವ್ಯ. ಆಕಸ್ಮಾತ್ ಯಾರಾದರೂ ಚುನಾವಣಾಧಿಕಾರಿ ಅಂತಹ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳ ಆದೇಶವನ್ನು ಪಾಲಿಸದೇ ಇದ್ದರೆ ಅದು ನ್ಯಾಯಾಲಯದ ನಿಂದನೆಯಾಗುತ್ತದೆ. ನಿರ್ದೇಶನ ಪಾಲಿಸುವುದು, ಅಂತಹ ಅಧಿಕಾರಿಯ ಜವಾಬ್ದಾರಿ.ಅಂತಹ ನಿರ್ದೇಶನವನ್ನು ಪಾಲಿಸದೇ ಇದ್ದರೆ ಅಧಿಕಾರಿಗಳೂ ಸಹ ನ್ಯಾಯಾಲಯದ ನಿಂದನೆಗೆ ಒಳಗಾಗುತ್ತಾರೆ.

ಆಡಳಿತ ಮಂಡಳಿಗೆ ಚುನಾವಣೆ ನಡೆದ ನಂತರ ಪದಾಧಿಕಾರಿಗಳ ಆಯ್ಕೆಗೆ 7 ದಿವಸಗಳ ಅಂಚೆ ರಿಜಿಸ್ಟರ್ಡ್ ನೋಟೀಸ್ ಕೊಟ್ಟು ಕರೆಯಬೇಕೆಂದು ಕಾಯಿದೆಯಲ್ಲಿ ನಿರ್ದೇಶಿಸಲಾಗಿದೆ.ಇದನ್ನು ಪಾಲಿಸುವುದು ಪ್ರತಿಯೊಂದು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನ ಜವಾಬ್ದಾರಿ. ಪದಾಧಿಕಾರಿಗಳ ಆಯ್ಕೆಯ ಸಂದರ್ಭದಲ್ಲಿ ಯಾವುದೇ ರೀತಿಯ ನಿರ್ದೇಶನ ಕೊಡುವ ಅಧಿಕಾರ ಹೊಂದಿಲ್ಲ. ಉದಾ: ಪದಾಧಿಕಾರಿಗಳ ಆಯ್ಕೆಯ ದಿನಾಂಕವನ್ನು ನಿಗದಿಪಡಿಸಿ ಮುಖ್ಯ ಕಾರ್ಯನಿರ್ವಾಹಕ ನೋಟೀಸ್ ಜಾರಿ ಮಾಡಿದಾಗ, ಈ ಮಧ್ಯೆದಲ್ಲಿ ಯಾರಾದರೂ ಚುನಾವಣೆ ಪ್ರಕ್ರಿಯೆಯನ್ನು ಪ್ರಶ್ನಿಸಿ ದಾವಾ ಪ್ರಕರಣವನ್ನು ದಾಖಲಿಸಿ ಆಯ್ಕೆಯಾದ ಒಬ್ಬ ನಿರ್ದೇಶಕನನ್ನು ಮತದಾನದಲ್ಲಿ ಭಾಗವಹಿಸದಂತೆ ನಿರ್ದೇಶನ ಕೋರಿದಾಗ, ಅಂತಹ ನಿರ್ದೇಶನಕ್ಕೆ ಮನ್ನಣೆ ಕೊಡತಕ್ಕದ್ದಲ್ಲ. ಉಚ್ಛ ಮತ್ತು ಶ್ರೇಷ್ಟ ನ್ಯಾಯಾಲಯಗಳು ತನ್ನ ತೀರ್ಪುಗಳ ಮುಖಾಂತರ ಯಾವನೇ ಆಯ್ಕೆಯಾದ ವ್ಯಕ್ತಿಯನ್ನು ಒಂದು ಕ್ಷಣಕ್ಕಾದರೂ ಅವನು ಅಧಿಕಾರ ಗ್ರಹಣ ಮಾಡದಂತೆ ನಿರ್ಬಂಧಿಸತಕ್ಕದ್ದಲ್ಲವೆಂದು ತೀರ್ಪಿತ್ತಿದೆ. ಅಂತಹ ನಿರ್ದೇಶನಗಳನ್ನು ಪಾಲಿಸುವುದು ಪ್ರತಿಯೊಬ್ಬ ಅಧಿಕಾರಿಯ ಜವಾಬ್ದಾರಿ ಮತ್ತು ಕರ್ತವ್ಯ.ಕೆಲವೊಂದು ಪ್ರಸಂಗದಲ್ಲಿ ಆಯ್ಕೆಯಾದ ನಿರ್ದೇಶಕನನ್ನು ಮತ ಚಲಾಯಿಸದಂತೆ ನಿರ್ಬಂಧಿಸಿ ಆದೇಶಿಸಿರುವ ಅಧಿಕಾರಿಗಳೂ ಇದ್ದಾರೆ.ಇದು ಉಚ್ಛ ಮತ್ತು ಶ್ರೇಷ್ಟ ನ್ಯಾಯಾಲಯಗಳ ಆದೇಶಕ್ಕೆ ವಿರುದ್ಧ.

**ಕಲಂ.54 : ಸಂಯುಕ್ತ ಸಹಕಾರಿಯ ಮಂಡಳಿ :**

(1) "ಮಂಡಳಿಯು ಸಂಯುಕ್ತ ಸಹಕಾರಿಯ ವ್ಯವಹಾರ ನಿರ್ವಹಣೆಯ ನಿರ್ದೇಶನ ಮತ್ತು ನಿಯಂತ್ರಣದ ಹೊಣೆ ಹೊಂದಿರತಕ್ಕದ್ದು.

(2) ಸಂಯುಕ್ತ ಸಹಕಾರಿಯ ಮಂಡಳಿಯಲ್ಲಿ ನಿರ್ದೇಶಕರ ಸಂಖ್ಯೆಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತು ಪಡಿಸಿ ಇಪ್ಪತ್ತೊಂದಕ್ಕೆ ಮೀರತಕ್ಕದ್ದಲ್ಲ :

ಪರಂತು, ಸಹಕಾರಿಯು ಬ್ಯಾಂಕಿಂಗ್ ವ್ಯವಸ್ಥಾಪನೆ, ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಳಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಅಂಥ ಸದಸ್ಯರ ಅಧಿಕಾರವುಳ್ಳವರಾಗಿ ಸಂಯುಕ್ತ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ;

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು, ಮೇಲೆ ನಿರ್ದಿಷ್ಟ ಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಎರಡಕ್ಕೆ ಮೀರತಕ್ಕದ್ದಲ್ಲ.

ಮತ್ತೂ ಪರಂತು, ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರೂ (Functional Directors) ಸಹ ಆಡಳಿತ ಮಂಡಳಿಯ ಸದಸ್ಯರಾಗಿರತಕ್ಕದ್ದು ಹಾಗೂ ಮೇಲೆ ನಿರ್ದಿಷ್ಟ ಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಸದಸ್ಯರನ್ನು ಹೊರತುಪಡಿಸತಕ್ಕದ್ದು.

(3) ಸಂಯುಕ್ತ ಸಹಕಾರಿಯ ಮಂಡಳಿಯ ಪದಾವಧಿಯು (ಚುನಾವಣೆ ನಡೆದ) ದಿನಾಂಕದಿಂದ ಐದು ವರ್ಷಗಳಾ ಗಿರತಕ್ಕದ್ದು.

(4) ಮುಖ್ಯಕಾರ್ಯನಿರ್ವಾಹಕನು ಮಂಡಳಿಯ ಪದನಿಮಿತ್ತ ನಿರ್ದೇಶಕನಾಗಿರತಕ್ಕದ್ದು ಹಾಗೂ ಪದಾಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ."

ಮಂಡಳಿ ಅವಧಿ : ಆಡಳಿತ ಮಂಡಳಿ ಆಯ್ಕೆಯಾದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು. ಪದಾಧಿಕಾರಿಗಳ ಅವಧಿಯೂ ಆಡಳಿತ ಮಂಡಳಿ ಅವಧಿ ಮುಕ್ತಾಯವಾದ ದಿನಾಂಕದಂದು ಮುಕ್ತಾಯವಾಗತಕ್ಕದ್ದು.ಮರು ಚುನಾವಣೆ ಮೂಲಕ ಆಯ್ಕೆಯಾದ ಮಂಡಳಿ ಸದಸ್ಯರ ಅವಧಿಯೂ ಮಂಡಳಿ ಅವಧಿಗೆ ಮುಕ್ತಾಯವಾಗತಕ್ಕದ್ದು.

"ಮಂಡಳಿ" ಎಂದರೆ ಯಾವುದೇ ಹೆಸರಿನಿಂದ ಕರೆಯಲ್ಪಡುವ ಒಂದು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳ ನಿರ್ವಹಣೆ ಮತ್ತು ವ್ಯವಸ್ಥಾಪನೆಯ ನಿಯಂತ್ರಣ ಮತ್ತು ಮಾರ್ಗದರ್ಶನವನ್ನು ವಹಿಸಿಕೊಟ್ಟ ನಿರ್ದೇಶಕರ ಮಂಡಳಿ ಅಥವಾ ಆಡಳಿತ ಮಂಡಳಿ.

ಒಂದು ಸದಸ್ಯ ಸಹಕಾರಿಯ ಮಂಡಳಿ ರಚನೆಯಾಗುವುದು ಕಾಯಿದೆ ಕಲಂ.24 ರಡಿ ಹಾಗೂ ಸಂಯುಕ್ತ ಸಹಕಾರಿಯ ಮಂಡಳಿ ರಚನೆಯಾಗುವುದು ಕಾಯಿದೆ ಕಲಂ.54ರಡಿ. ಸದಸ್ಯ ಸಹಕಾರಿ ಎಂಬ ಪದವನ್ನು ಸತತವಾಗಿ ಉಪಯೋಗಿಸುವ ಉದ್ದೇಶವೆಂದರೆ, ಸೌಹಾರ್ದ ಕಾಯಿದೆಯಲ್ಲಿ ನೋಂದಾಯಿಸಿದ ಪ್ರತಿಯೊಂದು ಸಹಕಾರಿ, ಸಂಯುಕ್ತ ಸಹಕಾರಿಯ ಸದಸ್ಯತ್ವ ಪಡೆಯುತ್ತದೆ. (ಇದರಲ್ಲಿ ಸದಸ್ಯತ್ವ ನಿರಾಕರಿಸುವ

ಅವಕಾಶವನ್ನು ಕಲ್ಪಿಸಿಲ್ಲ. ಇದು ಪ್ರಜಾಪ್ರಭುತ್ವ ನೀತಿಗೆ ವಿರುದ್ದವಾಗಿದ್ದರೂ, ಅಂದರೆ ಯಾವ ಸಂಸ್ಥೆಯೂ ಸದಸ್ಯತ್ವ ಪಡೆಯುವುದು ಅಥವಾ ನಿರಾಕರಿಸುವುದು, ಸದಸ್ಯತ್ವ ನೀಡುವ ಸಂಸ್ಥೆಯ ಒಂದು ಹಕ್ಕು ಆದರೂ ಸೌಹಾರ್ದ ಕಾಯಿದೆಯಲ್ಲಿ ಈ ಹಕ್ಕನ್ನು ಸಂಯುಕ್ತ ಸಹಕಾರಿಗೆ ನೀಡಿಲ್ಲ.) ಒಂದು ಸಹಕಾರಿಯ ಮಂಡಳಿ ರಚನೆಯಾಗುವುದು ಆ ಸಂಸ್ಥೆ ನೋಂದಾವಣೆಯಾದ ಕೂಡಲೇ ಚುನಾವಣಾ ಪ್ರಾಧಿಕಾರದ ಮುಖಾಂತರ ಪ್ರಥಮ ಸಹಕಾರಿ ಮಂಡಳಿ ರಚನೆಯಾಗುತ್ತಿದೆ ಮತ್ತು ಪ್ರತಿ ಐದು ವರ್ಷಕ್ಕೆ ಒಮ್ಮೆ ಮಂಡಳಿಗೆ ಸಹಕಾರ ಚುನಾವಣಾ ಪ್ರಾಧಿಕಾರದ ಮುಖಾಂತರ ಮಂಡಳಿಯ ಪುನರ್ ರಚಿಸಲಾಗುತ್ತದೆ.

ನಿಯಮ : 6ಎ – "ನೋಂದಣಿಯ ನಂತರದ ಪ್ರಥಮ ಆಡಳಿತ ಮಂಡಳಿಗೆ ಚುನಾವಣೆ ನಡೆಸುವುದು:

ಯಾವುದೇ ಸಹಕಾರಿಯು ನೋಂದಣಿಯಾದ ನಂತರ ಪ್ರಥಮ ಆಡಳಿತ ಮಂಡಳಿಗೆ ನಡೆಸುವ ಚುನಾವಣೆಗೆ ನಿಯಮ 5, 5ಎ ಯಿಂದ 5ಎಕೆ ವರೆಗಿನ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು.

ಪರಂತು, ನಿಯಮ 5ಸಿ ಮೇರೆಗೆ ಸುಸ್ತಿದಾರರ ಪಟ್ಟಿಯನ್ನು ಪ್ರಕಟಿಸುವ ಅಗತ್ಯವಿರತಕ್ಕದ್ದಲ್ಲ.

ಟಿಪ್ಪಣಿ : ನಿಯಮ 5, 5ಎ ಯಿಂದ 5ಎಕೆ ವರೆಗಿನ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಸಂಯುಕ್ತ ಸಹಕಾರಿಗೂ ಅನ್ವಯವಾಗತಕ್ಕದ್ದು.

ನಿಯಮ : 6ಬಿ – ಪ್ರಥಮ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆ :

ಸಹಕಾರಿಯ ಪ್ರಥಮ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆಗೆ ನಿಯಮ 6ರ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯವಾಗತಕ್ಕದ್ದು."

ಮಂಡಳಿ ರಚನೆ ಮಾಡುವಾಗ ಮೀಸಲಾತಿ ನಿಯಮ ಪಾಲಿಸಲು ಮತ್ತು ಸಹಕಾರಿಯ ಕಾರ್ಯವ್ಯಾಪ್ತಿಗನುಗುಣವಾಗಿ, ಆ ಸಹಕಾರಿ ನಿರ್ದೇಶಕರ ಸಂಖ್ಯೆಯನ್ನು ಕಲಂ.24 ರ ಉಪಕಲಂ (1) ರಲ್ಲಿ ನಿಗದಿ ಪಡಿಸಿದೆ.ಆದರೆ ಯಾವುದೇ ಸಹಕಾರಿ ತನ್ನ ಮಂಡಳಿ ಸಂಖ್ಯೆಯನ್ನು 13 ಕ್ಕಿಂತ ಕಡಿಮೆ ಮಾಡಿ ನಿಗದಿ ಪಡಿಸುವ ಅಧಿಕಾರ ಪಡೆದಿಲ್ಲ. 2013ರಲ್ಲಿ ನಿಗದಿ ಪಡಿಸಿದ್ದ ಮಂಡಳಿ ಸಂಖ್ಯೆಯನ್ನು 2016ರಲ್ಲಿ 13ಕ್ಕೆ ನಿಗದಿ ಪಡಿಸಿದೆ. (1959ರ ಕಾಯಿದೆಯ ಕಲಂ.12ರಲ್ಲಿ ಕಾಯಿದೆ ಮತ್ತು ನಿಯಮ ತಿದ್ದುಪಡಿಯಿಂದ 90 ದಿವಸದೊಳಗೆ ತನ್ನ ಉಪನಿಯಮಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕು ಎಂದು ಸೇರಿಸಿದೆ.ಇಲ್ಲವಾದರೆ ಅದು ಕಲಂ.109ರ ಉಪಕಲಂ.16 ರಡಿ ಶಿಕ್ಷಾರ್ಹ ಅಪರಾಧ ಎಂದು ತಿಳಿಸಿದೆ.ಆದರೆ ಅಂತಹ ಸೇರ್ಪಡೆ ಸೌಹಾರ್ದ ಕಾಯಿದೆಯಲ್ಲಿ ಸೇರಿಸಿಲ್ಲ.)

ಮಂಡಳಿ ರಚನೆ ಮಾಡುವಾಗ ವ್ಯಕ್ತಿಗತ ಸದಸ್ಯರು ಇದ್ದಾಗ ಮಾತ್ರ ಮಂಡಳಿ ರಚನೆಯಲ್ಲಿ ಮೀಸಲಾತಿಗೆ ಅವಕಾಶ ಕಲ್ಪಿಸಿದೆ. ಮಹಿಳೆಯರಿಗೆ ಎರಡು, ಹಿಂದುಳಿದ ವರ್ಗಕ್ಕೆ ಎರಡು, ಪರಿಶಿಷ್ಟ ಜಾತಿಗೆ ಒಬ್ಬರು ಮತ್ತು ಪರಿಶಿಷ್ಟ ಪಂಗಡಕ್ಕೆ ಒಬ್ಬರಂತೆ ಮೀಸಲಾತಿ ನೀಡಬೇಕು.ಈ ಮೀಸಲಾತಿ ವ್ಯಕ್ತಿಗತ ಸದಸ್ಯರಿರುವ ರಾಜ್ಯ ಮಟ್ಟದ ಸಂಸ್ಥೆಗೂ ಅನ್ವಯವಾಗುತ್ತದೆ. ಸಂಸ್ಥಾ ರೂಪದ ಸಹಕಾರಿಗಳಲ್ಲಿ ಮೀಸಲಾತಿ ಅನ್ವಯವಾಗುವುದಿಲ್ಲ. ಉದಾಹರಣೆಗೆ ಸಂಯುಕ್ತ ಸಹಕಾರಿ, ಜಿಲ್ಲಾ ಒಕ್ಕೂಟಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ.

ಮಂಡಳಿ ರಚನೆಯಾದ ನಂತರ ಪ್ರತಿಯೊಂದು ಸಹಕಾರಿ ಇಬ್ಬರಿಗೆ ಹೆಚ್ಚಿಲ್ಲದ ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು, ನಿರ್ವಹಣೆಯಲ್ಲಿ ಅನುಭವವಿದ್ದ ವ್ಯಕ್ತಿಗಳಿಂದ ವೃತ್ತಿಪರ ನಿರ್ದೇಶಕರೆಂದು ಸೇರಿಸಿಕೊಳ್ಳಲೇಬೇಕು. ಇದನ್ನು ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಸೇರಿಸಿರುವುದರಿಂದ, ಪತ್ರಿಯೊಂದು ಸಹಕಾರಿ ಇಬ್ಬರು ವೃತ್ತಿಪರ ನಿರ್ದೇಶಕರನ್ನು ಹೊರಗಿನಿಂದ ಸಹಮತದ ಮೂಲಕ ಆಯ್ಕೆ ಮಾಡತಕ್ಕದ್ದು. ಇದರಲ್ಲಿ ಅರ್ಥೈಸಿಕೊಳ್ಳಬೇಕಾದ ಅಂಶವೆಂದರೆ, ಮಂಡಳಿ ಚುನಾವಣೆಯಲ್ಲಿ ಆಯ್ಕೆಯಾಗದ, ಅಥವಾ ಮಂಡಳಿಗೆ ಒತ್ತಡ ತಂದು ಸದಸ್ಯರಲ್ಲಿ ಒಬ್ಬರನ್ನು ಅಥವಾ ಸಹಕಾರಿ ಮುಖಂಡರನ್ನು ವೃತ್ತಿಪರ ನಿರ್ದೇಶಕನ್ನಾಗಿ ಆಯ್ಕೆ ಮಾಡತಕ್ಕದ್ದಲ್ಲ. ಈ ವೃತ್ತಿಪರ ನಿರ್ದೇಶಕರು ಆಡಳಿತ ಮಂಡಳಿ ಸಂಖ್ಯೆಯಲ್ಲಿ ಸೇರತಕ್ಕದ್ದಲ್ಲ. ಪದಾಧಿಕಾರಿಯಾಗತಕ್ಕದ್ದಲ್ಲ ಮತ್ತು ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನ ಮಾಡತಕ್ಕದ್ದಲ್ಲ. ಈ ವೃತ್ತಿಪರ ನಿರ್ದೇಶಕರು ಸಹಕಾರಿಗೆ ಅವಶ್ಯಕವಾದ ಮಾಹಿತಿ, ಮಾರ್ಗದರ್ಶನ, ಸಲಹೆ, ಸೂಚನೆ, ನೀಡಬಹುದು ಮತ್ತು ವಿಷಯಗಳ ತೀರ್ಮಾನದಲ್ಲಿ ಭಾಗವಹಿಸಬಹುದು ಮತ್ತು ತಮ್ಮ ಅಸಮ್ಮತಿ ದಾಖಲಿಸಬಹುದು. ಅಂದರೆ ವಿಷಯಗಳ ಚರ್ಚೆಯಲ್ಲಿ ಮತದಾನವೇರ್ಪಟ್ಟಾಗ, ಮತ ಚಲಾಯಿಸುವ ಹಕ್ಕು ಇರತಕ್ಕದ್ದು. ಇದರ ಜೊತೆಗೆ ಕಾಯಿದೆಯಲ್ಲಿ ಮೂವರಿಗೆ ಹೆಚ್ಚಿಲ್ಲದಂತೆ ಕಾರ್ಯಾನುಗುಣ ನಿರ್ದೇಶಕರು ಸೇರಿಸಿಕೊಳ್ಳಬಹುದು. ಅಂದರೆ ಒಂದು ದೊಡ್ಡ ಸಹಕಾರಿಯಲ್ಲಿ, ಅಧಿಕಾರಿ ಮಟ್ಟದಲ್ಲಿ ವಿವಿಧ ಕಾರ್ಯಗಳನ್ನು ನಿರ್ವಹಿಸಲು ನೇಮಿಸಿದ ಹಿರಿಯ ಅಧಿಕಾರಿಗಳು ಇದ್ದಾಗ ಮಾತ್ರ ಈ ಕಾರ್ಯಾನುಗುಣ ನಿರ್ದೇಶಕರ ಸೇರ್ಪಡೆ ಮಾಡಬೇಕು. ಸಂಯುಕ್ತ ಸಹಕಾರಿ, ದೊಡ್ಡ ಮಟ್ಟದಲ್ಲಿ ಬೆಳೆದು, ಆಡಳಿತ ನಡೆಸಲು ನಿರ್ದೇಶಕ

(ಆಡಳಿತ), ನಿರ್ದೇಶಕ (ಹಣಕಾಸು) ನಿರ್ದೇಶಕ (ತಂತ್ರಜ್ಞಾನ), ನಿರ್ದೇಶಕ (ಕಾನೂನು) ನಿರ್ದೇಶಕ (ಶಿಕ್ಷಣ) ಎಂದು ಹುದ್ದೆಗಳು ಸೃಷ್ಟಿಯಾದರೆ ಆ ಅಧಿಕಾರಿಗಳಲ್ಲಿ ಮೂವರಿಗೆ ಹೆಚ್ಚಿಲ್ಲದಂತೆ ಕಾರ್ಯಾನುಗುಣ ನಿರ್ದೇಶಕರನ್ನು ಸಹಮತದಿಂದ ಸೇರಿಸಿಕೊಳ್ಳಬೇಕು. ಇವರು ಆ ಸಂಸ್ಥೆಯ ಸಂಬಳ ಪಡೆಯುವ ಅಧಿಕಾರಿಗಳು.

ಬಹಳಷ್ಟು ಸಹಕಾರಿಗಳು ವೃತ್ತಿಪರ ನಿರ್ದೇಶಕರನ್ನು ಆಯ್ಕೆ ಮಾಡಿಕೊಂಡಿಲ್ಲ. ಅದನ್ನು ಸಂಯುಕ್ತ ಸಹಕಾರಿ ನಿಯಂತ್ರಿಸಬೇಕು.ಸಂವಿಧಾನ ತಿದ್ದುಪಡಿ ನಂತರ ಇವರ ಅವಶ್ಯಕತೆಯನ್ನು ಮನಗಂಡಿದೆ.ಅಂದರೆ ಚುನಾಯಿತ ಪ್ರತಿನಿಧಿಗಳು, ಸಹಕಾರಿ ನಿರ್ವಹಿಸುವ ಎಲ್ಲಾ ವಿಷಯಗಳಲ್ಲಿ ಪರಿಣಿತರಿರಬೇಕಿಲ್ಲ. ಸಹಕಾರಿ ಮುನ್ನಡೆಸಲು, ಹಲವಾರು ತಾಂತ್ರಿಕ ತೀರ್ಮಾನ ತೆಗೆದು ಕೊಳ್ಳಬೇಕಾಗುತ್ತದೆ.ಬಹಳಷ್ಟು ಸಹಕಾರಿಗಳು ಪತ್ತಿನ ವ್ಯವಹಾರ ಮಾಡುತ್ತಿವೆ. ಆ ಸಂಸ್ಥೆಗಳಿಗೆ ಒಬ್ಬ ಬ್ಯಾಂಕಿಂಗ್  ಪರಿಣಿತನನ್ನು ವೃತ್ತಿಪರ ನಿರ್ದೇಶಕನನ್ನಾಗಿ ಆಯ್ಕೆ ಮಾಡಬೇಕು. ಅಂತಹ ವ್ಯಕ್ತಿ ಸರ್ಕಾರಿ, ವಾಣಿಜ್ಯ, ಖಾಸಗಿ ಅಥವಾ ಸಹಕಾರಿ ಬ್ಯಾಂಕ್‌ನಲ್ಲಿ ಸಮರ್ಪಕ ಸೇವೆ ಸಲ್ಲಿಸಿ, ನಿವೃತ್ತಿ ಅಥವಾ ಸ್ವಯಂ ನಿವೃತ್ತಿ ಪಡೆದಿದ್ದರೆ. ಅಂತಹ ವ್ಯಕ್ತಿ ಸಹಕಾರಿ ನೀಡುವ ಸಾಲಗಳ ಬಗ್ಗೆ, ಮಂಜೂರಾತಿ ಬಗ್ಗೆ, ಆಸ್ತಿ ಮೌಲ್ಯಮಾಪನ ಮಾಡುವ ಬಗ್ಗೆ, ಸಾಲ ಉಪಯೋಗಿಸುವ ಬಗ್ಗೆ, ಸುಸ್ತಿಯಾದ ಮೇಲೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ, ಮಾರ್ಗದರ್ಶನ ನೀಡುತ್ತಾನೆ. ಅದೇ ರೀತಿ ಸಂಯುಕ್ತ ಸಹಕಾರಿಗೆ ಕಾನೂನಿನಲ್ಲಿ ಪರಿಣಿತಿ ಹೊಂದಿದ ವ್ಯಕ್ತಿಯನ್ನು ವೃತ್ತಿಪರ ನಿರ್ದೇಶಕನನ್ನಾಗಿ ಮಾಡಿದರೆ, ಆ ವ್ಯಕ್ತಿ, ಸಂಯುಕ್ತ ಸಹಕಾರಿ, ತನ್ನ ಕಾರ್ಯನಿರ್ವಹಣೆಯಲ್ಲಿ ತೊಡಕುಗಳಲ್ಲಿ ಪರಿಹರಿಸಲು, ಕಾಯಿದೆಗೆ ತಿದ್ದುಪಡಿ ತರಲು, ಮಾದರಿ ಉಪವಿಧಿ ರಚಿಸಲು, ಸದಸ್ಯ ಸಹಕಾರಿಗಳಿಗೆ ಕಾನೂನಿನ ಸಲಹೆ/ಸೂಚನೆ ನೀಡಲು, ಸಂಯುಕ್ತ ಸಹಕಾರಿ ಮಂಡಳಿಯಲ್ಲಿ ವೃತ್ತಿಪರ ನಿರ್ದೇಶಕನನ್ನಾಗಿ ಮಾಡಬೇಕು. ಅದೇ ರೀತಿ ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡಲು, ಒಬ್ಬ ಸನ್ನದ್ದು ಲೆಕ್ಕಿಗನನ್ನು ವ್ಯಕ್ತಿಪರ ನಿರ್ದೇಶಕನನ್ನಾಗಿ ಮಾಡಬೇಕು.

ಮಂಡಳಿ ರಚನೆ ಮಾಡುವುದು : ಸಹಕಾರಿ ನೋಂದಾವಣೆ ಪ್ರಮಾಣ ಪತ್ರ ಮತ್ತು ಉಪವಿಧಿಗಳನ್ನು ನೋಂದಾಯಿಸಿದ ನಂತರ, ಇಂತಿಷ್ಟು ದಿನಗಳಲ್ಲಿ ಮಂಡಳಿ ರಚನೆ ಮಾಡಲು, ಚುನಾವಣಾ ಪ್ರಾಧಿಕಾರಕ್ಕೆ ಸೂಚನೆ ನೀಡಿ, ಮಂಡಳಿ ರಚಿಸಲು ಕ್ರಮಕೈಗೊಳ್ಳಬೇಕು, ಆ ಮಂಡಳಿ, ಅವಧಿ ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು. ಐದು ವರ್ಷಗಳ ಅವಧಿ ಮುಗಿಯುವ ಆರು (6) ತಿಂಗಳ ಮೊದಲು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕ, ಮಂಡಳಿ ರಚನೆ ಬಗ್ಗೆ ಚುನಾವಣಾ ಪ್ರಾಧಿಕಾರಕ್ಕೆ ಪತ್ರ ಬರೆದು ತಿಳಿಸಬೇಕು.ಅದಕ್ಕೆ ಆಡಳಿತ ಮಂಡಳಿ ಠರಾವು, ಕರಡು ಮತದಾರರ ಪಟ್ಟಿ, ಮತ್ತು ಅವಧಿ ಮುಗಿಯುವ ಬಗ್ಗೆ ದಾಖಲೆ, ಅಂದರೆ ಹಿಂದಿನ ಮಂಡಳಿ ರಚನೆಯಾದ ಬಗ್ಗೆ ವರದಿ.ಸಹಕಾರಿ ಚುನಾವಣೆ ಬಗ್ಗೆ 1959ರ ಕಾಯಿದೆ ಕಲಂ.39ಎಎ ಅಡಿ ರಚನೆಯಾದ ಚುನಾವಣೆ ಪ್ರಾಧಿಕಾರ ಚುನಾವಣೆ ನಡೆಸತಕ್ಕದ್ದು.

**"ಕಲಂ.26 ಮಂಡಳಿಯ ಚುನಾವಣೆ :**

1) "ಹೊಸದಾಗಿ ಚುನಾಯಿತವಾದ ಮಂಡಳಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಳಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

2) ಪ್ರತಿಯೊಂದು ಸಹಕಾರಿಯ ಚುನಾವಣೆಯನ್ನು ಸಹಕಾರ ಚುನಾವಣಾ ಪ್ರಾಧಿಕಾರ ನಿರ್ವಹಿಸತಕ್ಕದ್ದು.

3) ಹೊಸದಾಗಿ ಚುನಾಯಿತರಾದ ಮಂಡಳಿಯ ನಿರ್ದೇಶಕರು, ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡತಕ್ಕದ್ದು."

**ಕಲಂ.26ಎ ಸಹಕಾರ ಚುನಾವಣಾ ಪ್ರಾಧಿಕಾರ :**

"ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 39ಎಎ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟಿರುವ ಚುನಾವಣಾ ಪ್ರಾಧಿಕಾರ ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲೂ ಸಹ ಚುನಾವಣಾ ಪ್ರಾಧಿಕಾರವಾಗಿರತಕ್ಕದ್ದು. ಮತ್ತು ಈ ಅಧಿನಿಯಮದಡಿಯಲ್ಲಿ ಸಂಯುಕ್ತ ಸಹಕಾರಿಯೂ ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ರೀತಿಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಚುನಾವಣಾ ಪ್ರಾಧಿಕಾರ ಚುನಾವಣೆ ನಡೆಸುವ ನೀತಿಯನ್ನು ಸೌಹಾರ್ದ ಕಾಯಿದೆ ನಿಯಮ 2004ರ ಅಧ್ಯಯ ಖಖಖ ರಲ್ಲಿ ವಿವರಿಸಲಾಗಿದೆ. ಅದರಲ್ಲಿ ಸಾಮಾನ್ಯ ಚುನಾವಣೆ, ಮತದಾರರ ಪಟ್ಟಿ ಹಾಗೂ ಪ್ರಕ್ರಿಯೆ, ಚುನಾವಣಾಧಿಕಾರಿ ನೇಮಕ, ಚುನಾವಣಾ ಸಿಬ್ಬಂದಿ ನೇಮಕ, ಚುನಾವಣಾ ಅಧಿಸೂಚನೆ, ನಾಮ ಪತ್ರ ಸಲ್ಲಿಕೆ, ಪರಿಶೀಲನೆ, ಹಿಂತೆಗೆದುಕೊಳ್ಳುವುದು, ಸ್ಪರ್ಧಿಗಳ ಪಟ್ಟಿ ಪ್ರಕಟಣೆ, ಚಿಹ್ನೆಗಳ ಹಂಚಿಕೆ, ಚುನಾವಣೆಯ

ಅಕ್ರಮಗಳು, ಮರು ಚುನಾವಣೆ, ಮತದಾನ ಕೇಂದ್ರ ಸ್ಥಾಪನೆ, ಮತದಾರರನ್ನು ಗುರುತಿಸುವುದು, ಮತ ಪೆಟ್ಟಿಗೆ ಸಿದ್ದತೆ, ಮತ ಪತ್ರ ನೀಡುವುದು, ಅಶಕ್ತರಿಗೆ ಮತದಾನ, ಚುನಾವಣೆ ಮುಕ್ತಾಯದ ಮತ ಎಣಿಕೆ, ಚುನಾವಣೆ ಫಲಿತಾಂಶ ಘೋಷಣೆ ಕಾಗದ ಪತ್ರಗಳ ವಿಲೇವಾರಿ. ನಿಯಮ 5ಎ ಯಿಂದ 5–ಎ ಕೆ ವರೆವಿಗೆ ವಿವರವಾಗಿ ಮಾರ್ಗಸೂಚಿ ನೀಡಲಾಗಿದೆ.

ಇದರ ಜೊತೆಗೆ ಪದಾಧಿಕಾರಿಗಳ ಆಯ್ಕೆ ಬಗ್ಗೆ ನಿಯಮ 6 ರಲ್ಲಿ ಈ ಕೆಳಕಂಡಂತೆ ನಿಗದಿ ಪಡಿಸಿದೆ.

**ಕಲಂ.28 : ಪದಾಧಿಕಾರಿಗಳನ್ನು ಚುನಾಯಿಸುವುದು**

1) "ಮಂಡಳಿಯ ಚುನಾವಣೆ ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರ ಚುನಾವಣಾ ಪ್ರಾಧಿಕಾರವು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳನ್ನು ಚುನಾಯಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

2) ಅಧ್ಯಕ್ಷ ಅಥವಾ ಸಭಾಪತಿ ಅಥವಾ ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷ ಅಥವಾ ಉಪ–ಸಭಾಪತಿಯು

(ಎ) ಮಂಡಳಿಯ ಮತ್ತು ಸಾಮಾನ್ಯ ನಿಕಾಯದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು;

(ಬಿ) ಪದಾಧಿಕಾರಿಗಳ ಚುನಾವಣೆಯನ್ನು ಬಿಟ್ಟು ಉಳಿದೆಡೆ ಮಂಡಳಿಯು ತೀರ್ಮಾನಿಸಬೇಕಾದ ಯಾವುದೇ ವಿಷಯಗಳ ಮೇಲೆ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಮಾತ್ರ ನಿರ್ಣಾಯಕ ಮತ ಚಲಾಯಿಸತಕ್ಕದ್ದು;

ಪರಂತು, ಪದಾಧಿಕಾರಿಗಳ ಚುನಾವಣೆಯಲ್ಲಿ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಚೀಟಿಯನ್ನು ಎತ್ತುವ ಮೂಲಕ ಚುನಾಯಿಸತಕ್ಕದ್ದು; ಮತ್ತು

(ಸಿ)ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾದಂಥ ಅಥವಾ ಮಂಡಳಿಯು ಪ್ರತ್ಯಾಯೋಜಿಸ ಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಮಂಡಳಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು.

ಪರಂತು, ಸಂಯುಕ್ತ ಸೌಹಾರ್ದ ಸಹಕಾರಿಯ ಪದಾಧಿಕಾರಿಯ ಅಧಿಕಾರಾವಧಿಯು ಪ್ರತಿ ನಿಧಿಸಲ್ಪಡುವ ಸಹಕಾರಿಯ ಆಡಳಿತ ಮಂಡಳಿಯ ಅಧಿಕಾರಾವಧಿಯೊಂದಿಗೆ ಅಂತ್ಯವಾಗತಕ್ಕದ್ದು."

ಸದಸ್ಯ ಸಹಕಾರಿ/ಸಂಯುಕ್ತ ಸಹಕಾರಿ ಮಂಡಳಿ ರಚನೆಯಾದ ನಂತರದ ಹದಿನೈದು ದಿವಸಗಳೊಳಗೆ ಪದಾಧಿಕಾರಿಗಳ ಚುನಾವಣೆಯನ್ನು, ಮಂಡಳಿ ರಚನೆಗೆ ನೇಮಕವಾದ ಚುನಾವಣಾಧಿಕಾರಿ ಅಧ್ಯಕ್ಷತೆಯಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯುತ್ತಿದೆ. ಮತ ಚಲಾವಣೆ ಗುಪ್ತ ಮತದಾನದ ಮುಖಾಂತರ ನಡೆಯತಕ್ಕದ್ದು. ಸಮಮತ ಬಂದಾಗ, ಚೀಟಿ ಎತ್ತುವ ಮೂಲಕ, ಹೆಸರನ್ನು ಅಂತಿಮಗೊಲಿಸಬೇಕು. ಮಂಡಳಿ ರಚನೆಯಾಗುವುದು ಐದು ವರ್ಷಗಳ ಅವಧಿಗೆ, ಯಾವುದೇ ಕಾರಣಕ್ಕೂ ಮಂಡಳಿ ಅವಧಿ ಚುನಾವಣಾ ದಿನಾಂಕದಿಂದ ಐದು ವರ್ಷಗಳಿಗಿಂತ ಹೆಚ್ಚಾಗತಕ್ಕದ್ದಲ್ಲ. ಪದಾಧಿಕಾರಿಗಳ ಅವಧಿಯೂ, ಐದು ವರ್ಷಗಳು ಮತ್ತೆ ಮಂಡಳಿ ಅವಧಿ ಮುಕ್ತಾಯದ ದಿನಾಂಕದಂದೇ ಪದಾಧಿಕಾರಿಗಳ ಅವಧಿಯೂ ಮುಕ್ತಾಯವಾಗತಕ್ಕದ್ದು.

**ಕಲಂ.28ಎ : ಸಹಕಾರಿಯ ಮಂಡಳಿಯ ಸದಸ್ಯ ಅಥವಾ ಪದಾಧಿಕಾರಿಯ ರಾಜೀನಾಮೆ**

"ಸಹಕಾರಿಯ ಮಂಡಳಿ ಸದಸ್ಯನು ಅಥವಾ ಪದಾಧಿಕಾರಿಯು ಮಂಡಳಿಯ ತನ್ನ ಸದಸ್ಯತ್ವಕ್ಕೆ ಅಥವಾ ಸಂದರ್ಭಾನುಸಾರವಾಗಿ ಪದಾಧಿಕಾರಿ ಹುದ್ದೆಗೆ ತನ್ನ ಸ್ವಹಸ್ತ ಬರಹದ ಮೂಲಕ ರಾಜೀನಾಮೆಯನ್ನು ಮುಖ್ಯಕಾರ್ಯನಿರ್ವಾಹಕನಿಗೆ ನೀಡಬಹುದು ಮತ್ತು ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ತನ್ನ ಸ್ವಹಸ್ತಬರಹದ ಮೂಲಕ ಅಂತಹ ರಾಜೀನಾಮೆಯನ್ನು ಮುಖ್ಯಕಾರ್ಯನಿರ್ವಾಹಕನಿಗೆ ಹಿಂಪಡೆಯಲು ಪತ್ರವನ್ನು ನೀಡದ ಹೊರತು, ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಆತನ ಸ್ಥಾನವು ಅಥವಾ ಸಂದರ್ಭಾನುಸಾರವಾಗಿ ಹುದ್ದೆಯು ತೆರವಾಗತಕ್ಕದ್ದು. ಮುಖ್ಯಕಾರ್ಯನಿರ್ವಾಹಕನು ರಾಜೀನಾಮೆ ಪತ್ರ ನೀಡಿದ ನಂತರ ಸಮಾವೇಶಗೊಳ್ಳುವ

ಮಂಡಳಿಯ ಸಭೆಯ ಮುಂದಿಡತಕ್ಕದ್ದು.

**ಕಲಂ.29 :** ಆಕಸ್ಮಿಕ ರಿಕ್ತತೆಗಳನ್ನು ತುಂಬುವುದು – ಮಂಡಳಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ, ಆಡಳಿತ ಮಂಡಳಿಯಲ್ಲಿ ಉಂಟಾಗುವ ಆಕಸ್ಮಿಕ ರಿಕ್ತತೆಗಳನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು.

ಸದಸ್ಯ ಸಹಕಾರಿ/ಸಂಯುಕ್ತ ಸಹಕಾರಿ ಮಂಡಳಿ ರಚನೆಯಾದ ನಂತರ, ಮರಣ ರಾಜೀನಾಮೆ ಅಥವಾ ಅನರ್ಹತೆ ಕಾರಣದಿಂದ ಮಂಡಳಿ ನಿರ್ದೇಶಕನ ಸ್ಥಾನ ಖಾಲಿಯಾದರೆ, ಅದನ್ನು ಭರ್ತಿ ಮಾಡಲು ಚುನಾವಣಾ ಪ್ರಾಧಿಕಾರಕ್ಕೆ ಪತ್ರದ ಮುಖೇನ ತಿಳಿಸುವ ಜವಾಬ್ದಾರಿ ಸಹಕಾರಿಯ/ಸಂಯುಕ್ತ ಸಹಕಾರಿಯೂ ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿ. ರಾಜೀನಾಮೆ ನೀಡಿದ ಸಂದರ್ಭದಲ್ಲಿ, 15 ದಿವಸಗಳಲ್ಲಿ ಸ್ವಾಹಸ್ತದಿಂದ ವಾಪಸ್ ಪಡೆಯದಿದ್ದರೆ, ಅಂಗೀಕಾರವಾಗಿದೆ ಎಂದು ಭಾವಿಸಿ ಮತ್ತು ಮುಂದಿನ ಆಡಳಿತ ಮಂಡಳಿ ಸಭೆಗೆ ಮಾಹಿತಿಗಾಗಿ ಸಲ್ಲಿಸುವುದು.

ರಿಕ್ತತೆ ಉಂಟಾದ ಸಂದರ್ಭದಲ್ಲಿ, ಮಂಡಳಿಯು ಉಳಿದ ಅವಧಿ 2 1/2 ವರ್ಷಕ್ಕಿಂತ ಕಡಿಮೆ ಇದ್ದರೆ, ಸಹಕಾರಿಯು ಮಂಡಳಿ ಅದೇ ಕ್ಷೇತ್ರದಿಂದ ಒಬ್ಬರನ್ನು ಸಹಮತದಿಂದ ಸೇರಿಸಿ ಕೊಳ್ಳಲು ಅಧಿಕಾರ ಹೊಂದಿದೆ ಆದರೆ ಉಳಿದ ಅವಧಿ 2 1/2 ವರ್ಷಕ್ಕಿಂತ ಹೆಚ್ಚಿದ್ದರೆ, ಚುನಾವಣಾ ಪ್ರಾಧಿಕಾರವೇ ಮರು ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು.

**ಮಂಡಳಿ ರಚನೆಯಾಗುವುದು ಯಾವಾಗ :**

ಹೊಸದಾಗಿ ಆಯ್ಕೆಯಾದ ಮಂಡಳಿ ಅವಧಿ ಪ್ರಾರಂಭವಾಗುವ ಬಗ್ಗೆ 1959ರ ಕಾಯಿದೆ ಕಲಂ.29ಎ ನಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ."

**"ಪದಾವಧಿಯ ಪ್ರಾರಂಭ :**

1) ಮಂಡಳಿಯ ಸದಸ್ಯರ ಪದಾವಧಿಯು, ಮಂಡಳಿ ಸದಸ್ಯರ ಪೈಕಿ ಬಹುಮತದ ಸದಸ್ಯರು ಅಧಿಕಾರ ವಹಿಸಿಕೊಳ್ಳುವ ದಿನಾಂಕದಂದು ಅಥವಾ ಬಿಟ್ಟು ಹೋಗುತ್ತಿರುವ ಮಂಡಳಿಯ ಸದಸ್ಯರ ಪದಾವಧಿಯು ಮುಕ್ತಾಯವಾದ ದಿನದಂದು, ಇದರಲ್ಲಿ ಯಾವುದು ನಂತರವೋ ಅಂದು ಪ್ರಾರಂಭವಾಗತಕ್ಕದ್ದು.

2) ಈ ಅಧಿನಿಯಮದಲ್ಲಿ ಅಥವಾ ನಿಯಮಗಳಲ್ಲಿ ಅಥವಾ ಸಹಕಾರಿ ಸಂಘದ ಉಪವಿಧಿಗಳಲ್ಲಿ ಏನೇ ಇದ್ದರೂ, ಆ ಮಂಡಳಿಯನ್ನು ಚುನಾವಣೆಯ ತರುವಾಯ ಮಂಡಳಿಯ ಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಲು ಮಂಡಳಿ ಚುನಾಯಿತ ಸದಸ್ಯರ ಪೈಕಿ ಬಹು ಸಂಖ್ಯೆಯಲ್ಲಿ ಸದಸ್ಯರು ಮಂಡಳಿಯ ಸದಸ್ಯರಾಗಿ ಯುಕ್ತವಾಗಿ ರಚಿಸಲಾಗಿದೆ ಎಂದು ಭಾವಿಸತಕ್ಕದ್ದು.

3) ಉಪಪ್ರಕರಣ (2) ರನ್ವಯ ರಚಿಸಲ್ಪಟ್ಟಿದೆ ಎಂದು ಭಾವಿಸಲ್ಪಡುವ ಮಂಡಳಿಗೆ ಸಹಕಾರಿ ಸಂಘದ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಮತ್ತು ಎಲ್ಲಾ ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮವಾಗಿರತಕ್ಕದ್ದು."

ಈ ಮೇಲ್ಕಂಡಂತೆ ಸೌಹಾರ್ದ ಕಾಯಿದೆಯಲ್ಲಿ ಅವಕಾಶ ಇಲ್ಲದೇ ಇದ್ದರೂ ಇದೇ ನೀತಿ ಅನ್ವಯವಾಗುತ್ತದೆ. ಅಂದರೆ ಬಹುಸಂಖ್ಯೆಯ ಮಂಡಳಿ ಸದಸ್ಯರ ಆಯ್ಕೆಯಾದರೆ, ಮಂಡಳಿ ರಚನೆಯಾದಂತೆ, ಅಂದರೆ ಮಂಡಳಿ ಸಂಖ್ಯೆ 13 ಎಂದಿದ್ದರೂ, ಕೆಲವು ಕ್ಷೇತ್ರಗಳ ಚುನಾವಣೆಗೆ ನಾಮ ಪತ್ರ ಸಲ್ಲಿಕೆಯಾಗದಿದ್ದರೆ, ಮೀಸಲಾತಿ ನೀಡಿದ ವರ್ಗದ ಸದಸ್ಯರು ಸಹಕಾರಿ ಸದಸ್ಯರಿಲ್ಲದಿದ್ದರೂ, ಅಂತಹ ಮಂಡಳಿ ರಚನೆಯಾಗಿದೆ ಎಂದು ಭಾವಿಸತಕ್ಕದ್ದು. ಆದರೆ, ಅಂತಹ ಮೀಸಲು ಸ್ಥಾನಗಳನ್ನು ಬಿಟ್ಟು ಮಂಡಳಿ ಸಂಖ್ಯೆ ನಿಗದಿ ಪಡಿಸತಕ್ಕದ್ದಲ್ಲ. ಹಾಗೂ ಆಯ್ಕೆಯಾದ ಮಂಡಳಿ ಸದಸ್ಯರ ಸಂಖ್ಯೆ ಕೋರಂ ಸಂಖ್ಯೆಗಿಂತ ಹೆಚ್ಚಾದರೆ, ಅಂತಹ ಮಂಡಳಿ ರಚನೆಯಾದಂತೆ ಭಾವಿಸತಕ್ಕದ್ದು. ಮಂಡಳಿ ರಚನೆ ಸಮಯದಲ್ಲಿ ನಾಮಪತ್ರ ಸಲ್ಲಿಸದ/ಸ್ಪರ್ಧಿಸದ ಸ್ಥಾನಗಳ ಮರು ಚುನಾವಣೆಗೆ ಚುನಾವಣಾ ಪ್ರಾಧಿಕಾರದ ಜೊತೆ ಪತ್ರ ವ್ಯವಹಾರ ಮುಂದುವರಿಯತಕ್ಕದ್ದು.ಆದರೆ ಮೀಸಲು ಸ್ಥಾನಗಳನ್ನು ಆ ವರ್ಗದ ಸದಸ್ಯರ ಸೇರ್ಪಡೆ ನಂತರ ಮರು ಚುನಾವಣೆ ನಡೆಸಿ ಭರ್ತಿ ಮಾಡತಕ್ಕದ್ದು.

**(ಸೂಚನೆ : 2024 ಸಹಕಾರಿ ಕಾನೂನು ತಿದ್ದುಪಡಿ ವಿಧೇಯಕದಲ್ಲಿ ಈ ಚುನಾವಣಾ ಪ್ರಾಧಿಕಾರವನ್ನು ರದ್ದುಮಾಡಲಾಗಿದೆ ಮತ್ತು ಚುನಾವಣಾ ಪ್ರಾಧಿಕಾರದ ಎಲ್ಲಾ ಕೆಲಸವನ್ನು ಸಹಕಾರ ಇಲಾಖೆಯಲ್ಲಿ ಒಂದು ಪ್ರತ್ಯೇಕ ವಿಭಾಗವನ್ನಾಗಿ ಮಾಡಿ ನಿರ್ವಹಿಸಲಾಗುವುದು.)**

# ಅಧ್ಯಾಯ – 10.1

## ಸಹಕಾರಿಗಳ ಮಂಡಳಿಯಲ್ಲಿ ಮೀಸಲಾತಿ

ಕರ್ನಾಟಕ ಸೌಹಾರ್ದ ಕಾಯಿದೆಯಡಿ ಮಂಡಳಿ ರಚನೆ ಮಾಡುವಾಗ, ವ್ಯಕ್ತಿಗತ ಸದಸ್ಯರೇ ಇರುವ ಸಹಕಾರಿಗಳು ಕಾರ್ಯವ್ಯಾಪ್ತಿಗನುಗುಣವಾಗಿ ಮಂಡಳಿ ಸಂಖ್ಯೆ ನಿಗದಿ ಪಡಿಸಿದ ನಂತರ, ಆರು ಸ್ಥಾನಗಳು ಮೀಸಲಿಡಲು ಕಾಯಿದೆ ಕಲಂ.24(1) ರ ಪರತುಕದಲ್ಲಿ ಈ ಕೆಳಕಂಡಂತೆ ಸೂಚಿಸಿದೆ.

"ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಪ್ರತಿಯೊಂದು ಸಹಕಾರಿಯ ಮಂಡಳಿಯಲ್ಲಿ ಅನುಸೂಚಿತ ಜೊತೆಗೆ ಸೇರಿದ ಸದಸ್ಯರಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯರಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳು ಮತ್ತು ರಾಜ್ಯ ಸರ್ಕಾರ ಅಧಿಸೂಚಿಸಬಹುದಾದ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು ಅಂಥ ವರ್ಗದ ಅಥವಾ ಗುಂಪಿನ ವ್ಯಕ್ತಿಗಳ ಸದಸ್ಯರಿದ್ದಲ್ಲಿ ಮೀಸಲಿಡತಕ್ಕದ್ದು.

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿ ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂತ ಸಹಕಾರಿಯ ಮಂಡಳಿಯ ಸದಸ್ಯರನ್ನಾಗಿ ಸಹ ಮತದಿಂದ (ಕೊಆಪ್ಟ್) ಸೇರಿಸಿಕೊಳ್ಳತಕ್ಕದ್ದು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಂದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವನಾಗಿರತಕ್ಕದ್ದಲ್ಲ. ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ."

ಮಂಡಳಿಯ ಸದಸ್ಯರನ್ನು ಉಪಕಲಂ.(1) ರಲ್ಲಿ ಸಹಕಾರಿಯ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕನಿಷ್ಟ 13 ಮತ್ತು 21 ಕ್ಕೆ ಸೀಮಿತಗೊಳಿಸಿದೆ. (97ನೇ ಸಂವಿಧಾನ ತಿದ್ದುಪಡಿ ನಂತರ)

ಮೀಸಲಾತಿಯ ಮುಖ್ಯ ಉದ್ದೇಶ, ಸಹಕಾರಿಗಳನ್ನು ಸಾಮಾಜಿಕ ನ್ಯಾಯಕ್ಕೆ ಪೂರಕವಾಗಿ, ಅವರಿಗೆ ಸಾಮಾನ್ಯರಂತೆ ಸ್ಪರ್ಧಿಸಿದರೆ ಆಯ್ಕೆಯಾಗುವ ಸಂಭವ ಇಲ್ಲದೇ ಇರುವುದರಿಂದ ಮತ್ತು ಸಹಕಾರಿಯ ಏಳನೇ ತತ್ವದಡಿ ಸಾಮಾಜಿಕ ಕಳಕಳಿ" ಎಂದರೆ ಎಲ್ಲರನ್ನು ಅಭಿವೃದ್ಧಿ ಮಾಡುವ ಉದ್ದೇಶದಿಂದ, ಈ ಮೀಸಲಾತಿ ನಿಗದಿ ಪಡಿಸಿದೆ. ಸೌಹಾರ್ದ ಕಾಯಿದೆಯಲ್ಲಿನ ಒಂದು ಪ್ರಮುಖ/ವಿಶೇಷತೆ ಎಂದರೆ, ಸರ್ಕಾರದಿಂದ ಪ್ರತ್ಯಕ್ಷ/ಪರೋಕ್ಷ ಸಹಾಯಧನ ಪಡೆಯಲು ನಿರ್ಬಂಧ ವಿಧಿಸಲಾಗಿದೆ. ಕಲಂ.5(2)(ಇ)

"ಒಂದು ಸಹಕಾರಿ ಸಂದರ್ಭದಲ್ಲಿ, ಆ ಸಹಕಾರ ಸರ್ಕಾರದಿಂದ ಯಾವುದೇ ಷೇರು ಬಂಡವಾಳ ಮತ್ತು ಯಾವುದೇ ಸಾಲಗಳು ಅಥವಾ ಖಾತರಿ ಮತ್ತು ಯಾವುದೇ ಸಹಕಾರಿ ಸರ್ಕಾರದಿಂದ ಸಾಲಗಳು ಮತ್ತು ಖಾತರಿಯನ್ನು ಪಡೆದಿಲ್ಲವೆಂಬುದನ್ನು ತೋರಿಸುವ ದಸ್ತಾವೇಜುಗಳು."

ಸೂಚನೆ : ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯಧನ ಪಡೆದಿದ್ದರೆ ಮೀಸಲಾತಿ ನೀಡಬೇಕೆ ಇಲ್ಲವೇ ಎಂಬುದನ್ನು ಈವರೆವಿಗೂ ನ್ಯಾಯಾಲಯದಲ್ಲಿ ಪ್ರಶ್ನಿಸಿದಂತೆ ಕಾಣುತ್ತಿಲ್ಲ.

ಸಹಕಾರಿ ಸ್ಥಾಪನೆಗೆ ಸಹಕಾರಿ ಮೂಲ ತತ್ವದನ್ವಯ ಸಮಾನ ಮನಸ್ಕರು, ಕೂಡಿ ರಚಿಸುವ ಸಹಕಾರಿ ಎಂದಿದ್ದರೂ, ಸಹಕಾರಿ ತನ್ನ ಉಪವಿಧಿಗಳಲ್ಲಿ ನೀಡುವ ಸೌಲಭ್ಯ/ಸೌಲತ್ತುಗಳು ಸದಸ್ಯರಿಗೆ ಮಾತ್ರ ಎಂದಿದ್ದು. ಎಲ್ಲಾ ವರ್ಗದ ವ್ಯಕ್ತಿಗಳು ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಶರತ್ತು ಇಲ್ಲದೇ ಇದ್ದರೂ, ಸಹಕಾರ ಸಂಘಗಳ ಕಾಯಿದೆ 1959ರ ಕಲಂ.20(2) ಈ ಕೆಳಕಂಡಂತೆ ಉಲ್ಲೇಖಿಸಿದೆ.

1959ರ ಕಾಯಿದೆ ಕಲಂ.20(2) :

ಈ ಕೆಳಕಂಡ ವ್ಯಕ್ತಿಗಳು, ತಾವು ಸದಸ್ಯರಾಗಿರುವ ಸಹಕಾರ ಸಂಘದ [ಸಾಮಾನ್ಯ ಸಭೆಯಲ್ಲಿ ಅಥವಾ ಮಂಡಳಿ ಸದಸ್ಯರ ಚುನಾಣೆಯಲ್ಲಿ] ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕದ್ದಲ್ಲ, ಎಂದರೆ

(ಎ) ನಾಮ ಮಾತ್ರ ಸದಸ್ಯ ಅಥವಾ ಸಹಸದಸ್ಯ;

(ಎ-i) ಬಾಕಿದಾರನಾದ ಒಬ್ಬ ಸದಸ್ಯ;

(ಎ-ii) 16ನೇ ಪ್ರಕರಣದ (1) ಉಪಪ್ರಕರಣದ (ಡಿ)(ಇ)(ಎಫ್) ಮತ್ತು (ಜಿ) ಖಂಡಗಳನ್ವಯ ಸೇರಿಸಿಕೊಂಡ ಬಾಕಿದಾರರಾಗಿರುವ ಸದಸ್ಯರು;

(ಎ-iii) ಅಂಥ ಸಭೆಯ ದಿನಾಂಕಕ್ಕೆ [ಅಥವಾ ಚುನಾವಣೆಗೆ] ಮುಂಚಿತವಾಗಿ [ಹನ್ನೆರಡು ತಿಂಗಳ] ಒಳಗೆ ಸಂಘದ ಸದಸ್ಯನಾಗಿರುವ [ಒಬ್ಬ

ವ್ಯಕ್ತಿ];

ಪರಂತು, ಈ ಖಂಡದಲ್ಲಿರುವುದು ಯಾವುದೂ, ನೋಂದಣಿಯಾದ ತರುವಾಯ ತಕ್ಷಣವೇ ನಡೆದ ಅಂಥ ಸಂಘದ ಮೊದಲ ಸಾಮಾನ್ಯ ಸದಸ್ಯರ ಸಭೆಯಲ್ಲಿ ಭಾಗವಹಿಸುವ ಸಂಘದ [ಸದಸ್ಯರಿಗೆ] ಅನ್ವಯಿಸತಕ್ಕದ್ದಲ್ಲ.

ಮತದಾನದ ಹಕ್ಕಿಗೆ ಮತ್ತು ಸಹಕಾರಿ ಸಂಸ್ಥೆ ನೀಡುವ ಸೌಲತ್ತುಗಳನ್ನು ಪಡೆಯಲು ಮೇಲ್ಕಂಡ ಶರತ್ತುಗಳನ್ನು ವಿಧಿಸಿದೆ.

ಒಬ್ಬ ವ್ಯಕ್ತಿಗೆ ಸದಸ್ಯತ್ವ ನೀಡುವ ಅಧಿಕಾರವನ್ನು ಸಹಕಾರಿಯ ಮಂಡಳಿಗೆ ನೀಡಿದೆ. ಸೌಹಾರ್ದ ಕಾಯಿದೆ ಒಂದು ಉದಾರೀಕೃತ ಕಾಯಿದೆಯಾಗಿರುವುದರಿಂದ ಚುನಾಯಿತ ಮಂಡಳಿಗೆ ಆಡಳಿತ ನಿರ್ವಹಣೆಯಲ್ಲಿ ಹೆಚ್ಚು ಸ್ವಾಯತ್ತತೆ ನೀಡಲಾಗಿದೆ. ಇದನ್ನು ಕಾರ್ಯರೂಪದಲ್ಲಿ ಗಮನಿಸಿದಾಗ ಒಂದು ಸಹಕಾರಿ ನೋಂದಣಿ ಸಮಯದಲ್ಲಿ ಸಹಿ ಮಾಡಿದ ವ್ಯಕ್ತಿಗಳು ಸಮಾಜದ ಒಂದು ವರ್ಗಕ್ಕೆ ಸೇರಿದ್ದರೂ, ಅದನ್ನು ತಿರಸ್ಕರಿಸಲು ನಿಬಂಧಕರಿಗೆ ಸಾಧ್ಯವಿಲ್ಲ. ಆದರೆ ಉಪವಿಧಿಗಳ ನಿರ್ಬಂಧ ಇದ್ದರೆ ನೋಂದಾವಣೆ ಮಾಡಲು ನಿಬಂಧಕರು ಮರು ಪರಿಶೀಲಿಸುವ ಅವಶ್ಯಕತೆ ಇದೆ.

**ಮೀಸಲಾತಿಯ ಪರಿಣಾಮ :** ಸಾಮಾಜಿಕ ವ್ಯವಸ್ಥೆಯಲ್ಲಿ ಸಹಕಾರಿ ನೋಂದಣಿಯಾಗುವುದು – ಸಮುದಾಯದ ಒಂದು ಗುಂಪಿನ ವ್ಯಕ್ತಿಗಳು ಸೇರಿ ರಚಿಸುತ್ತಿರುವುದರಿಂದ, ಮೀಸಲಾತಿಯನ್ನು ಜಾರಿಯಾಗುವಂತೆ ಮಾಡಲು ಸಾಧ್ಯವಾಗುತ್ತಿಲ್ಲ. ಸಾಮಾಜಿಕ ತುಳಿತಕ್ಕೆ ಒಳಗಾಗಿ ಸಮಾಜವನ್ನು, ಸಹಕಾರ ಸಂಸ್ಥೆ ಆಡಳಿತದಲ್ಲಿ ಭಾಗಿಯಾಗಲು ಮಾಡುತ್ತಿರುವುದು ಸಮಂಜಸ ಮತ್ತು ಅವಶ್ಯಕ. ಆದರೆ ಭಾವನಾತ್ಮಕವಾಗಿ ತುಳಿತಕೊಳ್ಳಗಾದವರನ್ನು ಸಮಾಜದ ಭಾಗವಾಗಲು ಅವಕಾಶ ಕೊಡುವ ಪ್ರಯತ್ನಕ್ಕೆ ಎಲ್ಲಾ ಸಂಸ್ಥೆಗಳ ಸಹಕಾರ ಅವಶ್ಯಕ. ಆದರೆ ಸಹಕಾರ ತತ್ವದಡಿ, ಸಮಾನ ಮನಸ್ಕರು ಒಟ್ಟು ಗೂಡಿ ರಚಿಸಿದ ಸಂಸ್ಥೆಯೆಂಬ ತತ್ವಕ್ಕೆ ವಿರುದ್ದವಾಗಿ ಮೀಸಲಾತಿ ನೀಡುವುದು ಸಹಕಾರಿಗಳಲ್ಲಿ ಭಾವನೆ ಬೆಳೆಸುವುದು ಅಷ್ಟು ಸುಲಭವಲ್ಲ. ಆದರೆ, ಅವರ ಅಭಿವೃದ್ಧಿಯಾಗದೆ ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಸಹಕಾರಿಗಳು/ಸಹಕಾರಿ ಸಂಸ್ಥೆಗಳು ಅರಿಯಲೇಬೇಕು. ಅದಕ್ಕಾಗಿ ಸಹಕಾರಿಗಳು ಆಡಳಿತ ಮಂಡಳಿಯಲ್ಲಿ ಎರಡು ಸ್ಥಾನ ಮಹಿಳೆಯರು, ಇಬ್ಬರು ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಒಂದೊಂದು ಸ್ಥಾನ ಮಿ ೀಸಲಿಡಲಾಗಿದೆ. 1959 ಕಾಯಿದೆ ಕಲಂ.16(4) ಮತ್ತು ಸೌಹಾರ್ದ ಕಾಯಿದೆ ಕಲಂ.20ಎ ಅಡಿ ಸದಸ್ಯತ್ವ ನೀಡುವ ಬಗ್ಗೆ ಅವಕಾಶ ಕಲ್ಪಿಸಿದ್ದು. ಮಂಡಳಿ 60 ದಿವಸಗಳೊಳಗೆ ಸದಸ್ಯತ್ವದ ಬಗ್ಗೆ ತೀರ್ಮಾನ ತೆಗೆದು ಕೊಳ್ಳದಿದ್ದರೆ ಆಗುವ ಪರಿಣಾಮವನ್ನು ಮತ್ತು ಮೇಲ್ಮನವಿ ಸಲ್ಲಿಸಲು ಇರುವ ಅವಕಾಶವನ್ನು (ಕಲಂ.105ಎ ಮತ್ತು ನಿಬಂಧಕರಿಗೆ) ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದರೂ, ಇದನ್ನು ಉಪಯೋಗಿಸಿಕ್ಕೊಳ್ಳುವ ವ್ಯಕ್ತಿಗಳ ಸಂಖ್ಯೆ ವಿರಳ. ಅಂದರೆ, ಮಂಡಳಿ ಸದಸ್ಯತ್ವ ನೀಡದೇ ಇದ್ದರೂ, ಅದರ ಪ್ರಯೋಜನ ಪಡೆಯಲೂ ಪ್ರಯತ್ನ ಪಡುವ ವ್ಯಕ್ತಿಗಳ ಸಂಖ್ಯೆ ಅತಿ ವಿರಳ. ಅಂದರೆ ಒಂದು ಸಂಘ/ಸಹಕಾರಿಯು ಮಂಡಳಿ ಪ್ರಬಲವಾಗಿದ್ದರೆ ಬೇರೆ ಗುಂಪಿನ ವ್ಯಕ್ತಿಗಳಿಗೆ ಸದಸ್ಯತ್ವ ನೀಡದೆ ಮುಂಡೂಡಬಹುದು; ಬಹು ಸಂಖ್ಯೆಯ ಸಹಕಾರಿಗಳ ತಮ್ಮ ಹಿತಾಸಕ್ತಿ ತೊಡಕಾಗುವ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಸೇರಿಸಿಕ್ಕೊಳ್ಳಲು ಮಾನಸಿಕವಾಗಿ ತಯಾರಿ ಮಾಡಿದಾಗ ಮಾತ್ರ ಮುಕ್ತ ಸದಸ್ಯತ್ವ ಎಂಬ ತತ್ವಕ್ಕೆ ಪೂರಕವಾಗಿ ಸಹಕಾರ ಬೆಳವಣಿಗೆ ಮಾಡಬೇಕೆಂಬ ಮುಕ್ತ ಮನಸ್ಸು ಸಹಕಾರಿಗಳಲ್ಲಿ ಇಲ್ಲ. ಮತ್ತು ಪ್ರಮುಖವಾಗಿ ಮಂಡಳಗಳ ಭಾವನೆ ಮೀಸಲಾತಿಯಿಂದ, ಅದರ ಕಾರ್ಯಕ್ರಮಗಳಿಗೆ ತೊಡಕಾಗುತ್ತದೆ ಎಂಬ ಭಾವನೆಯೇ ಹೆಚ್ಚು. ಅದಕ್ಕಾಗಿಯೇ ಸಹಕಾರಿಗಳು ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಸದಸ್ಯರ ಸಂಖ್ಯೆ ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ. ಇದರ ಜೊತೆಗೆ ಸಮಾಜದ ಶೇ.50 ರಷ್ಟು ಮಹಿಳೆಯರಿದ್ದರೂ ಅವರನ್ನು ಸಹ ಸದಸ್ಯರನ್ನಾಗಿ ಮಾಡಲು ಸಹಕಾರಿಗಳು ಸದಸ್ಯತ್ವ ನೀಡುವುದಿಲ್ಲ. ಮನೋಸ್ಥಿತಿ ಬದಲಾಯಿಸದಿದ್ದರೆ, ಮೀಸಲಾತಿಯನ್ನು ಜಾರಿಗೊಳಿಸುವುದು ಅಷ್ಟು ಸುಲಭವಿಲ್ಲ. ಸದಸ್ಯತ್ವವನೇ ನೀಡದೆ ಇದ್ದರೆ, ಮಂಡಳಿಯಲ್ಲಿ ಮೀಸಲಾತಿ ಮಾಡುವುದು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಸಹಕಾರಿಗಳ, ನಿಷ್ಕ್ರಯ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಿ ಅವರನ್ನು ಮಂಡಳಿಯಲ್ಲಿ ಆಯ್ಕೆ ಮಾಡಿದಾಗ ಅವರು ಆ ಗುಂಪಿನ ಹಿತಾಸಕ್ತಿ ಕಾಪಾಡಲು ಸಾಧ್ಯವಾಗುವುದಿಲ್ಲ.

ಮಂಡಳಿ ಚುನಾವಣೆ : ಮಂಡಳಿ ರಚನೆ ಮಾಡುವಾಗ ಸಹಕಾರಿ ಸದಸ್ಯರು ಮತ ಚಲಾಯಿಸಿ ಆಯ್ಕೆ ಮಾಡಬೇಕು. 1959ರ ಕಾಯಿದೆ ಕಲಂ.

"20(1) : ಸಹಕಾರ ಸಂಘದ ಯಾವನೇ ಸದಸ್ಯನು, ಯಾವನೇ ಪ್ರತಿನಿಧಿಯು ಅಥವಾ ಯಾವನೇ ಡೆಲಿಗೇಟು, ಸಂಘದ ಸಾಮಾನ್ಯ ಸಭೆಯಲ್ಲಿ ಅಥವಾ ಮಂಡಳಿ ಸದಸ್ಯರ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಮತ ವಿರತಕ್ಕದ್ದಲ್ಲ."

ಅದೇ ರೀತಿ 1997ರ ಸೌಹಾರ್ದ ಕಾಯಿದೆ ಕಲಂ.67(2)

"......................... ಪ್ರಾಥಮಿಕ ಸಹಕಾರಿಗಳ ಸದಸ್ಯರು ಸಮನಾದ ಮತ ಚಲಾವಣೆ ಹಕ್ಕನ್ನು ಹೊಂದಿರುತ್ತಾರೆ. (ಒಬ್ಬ ಸದಸ್ಯ ಒಂದು ಮತ)

ಆದರೆ ಈ ತತ್ವವನ್ನು ಜಾರಿ ಮಾಡುವಾಗ ಸಹಕಾರ ಇಲಾಖೆ, ಚುನಾವಣಾ ಪ್ರಾಧಿಕಾರ ಮತ್ತು ಸಹಕಾರಿಗಳು ಪಾಲನೆಯಲ್ಲಿ ಒಂದಕ್ಕಿಂತ ಹೆಚ್ಚು ಮತ ನೀಡಲು ಅವಕಾಶ ಕಲ್ಪಿಸಿತ್ತವೆ. ಅಂದರೆ ಮಂಡಳಿ ಸಂಖ್ಯೆ 13 ಇದ್ದರೆ ಪ್ರತಿಯೊಬ್ಬ ಅರ್ಹ ಸದಸ್ಯ 13 ಮತ ಚಲಾಯಿಸುತ್ತಾನೆ.

ಇದು ಸಹಕಾರಿ ತತ್ವದ ಎರಡನೇ ತತ್ವ ಮತ್ತು 1959ರ ಕಾಯಿದೆ ಕಲಂ.20(1) ಮತ್ತು ಸೌಹಾರ್ದ ಕಾಯಿದೆ ಕಲಂ.67(2)ಕ್ಕೆ ವಿರುದ್ದ. ಇದನ್ನು ತಪ್ಪಿಸಲು ಅನುಸರಿಸಬೇಕಾದ ನೀತಿಯನ್ನು ಈ ಕೆಳಕಂಡಂತೆ ವಿವರಿಸಬಹುದು.

ಒಂದು ಸಹಕಾರಿಯಲ್ಲಿ 500 ಸದಸ್ಯರಿದ್ದು. ಅವರನ್ನು ಮಂಡಳಿ ಆಯ್ಕೆಗೆ ಸಂಬಂಧಪಟ್ಟಂತೆ ವರ್ಗವಾರು ಈ ಕೆಳಕಂಡಂತೆ ವಿವರ ಇದೆ.

| | | |
|---|---|---|
| 1) | ಸಾಮಾನ್ಯ ಸದಸ್ಯರು | : 200 |
| 2) | ಮಹಿಳಾ ಸದಸ್ಯ | : 100 |
| 3) | ಹಿಂದುಳಿದ ವರ್ಗ | : 50 |
| 4) | ಪರಿಶಿಷ್ಟ ಜಾತಿ | : 50 |
| 5) | ಪರಿಶಿಷ್ಟ ಪಂಗಡ | : 50 |
| | | ------ |
| | | 500 |
| | | ------ |

ಕಾಯಿದೆಯಲ್ಲಿ ಮಂಡಳಿಗಳ ಮೀಸಲಾತಿ ನಿಗದಿ ಪಡಿಸುವುದು.

| | | |
|---|---|---|
| 1) | ಸಾಮಾನ್ಯ ವರ್ಗ | : 7 |
| 2) | ಮಹಿಳಾ | : 2 |
| 3) | ಹಿಂದುಳಿದ ವರ್ಗ | : 2 |
| 4) | ಪರಿಶಿಷ್ಟ ಜಾತಿ | : 1 |
| 5) | ಪರಿಶಿಷ್ಟ ಪಂಗಡ | : 1 |
| | | ----- |
| | | 13 |
| | | ----- |

ಇವರನ್ನು ಆಯ್ಕೆ ಮಾಡುವಾಗ ಈ ಮೇಲ್ಕಂಡ 500 ಸದಸ್ಯರಲ್ಲಿ ಶೇ.50 ರಷ್ಟು ಅರ್ಹ ಸದಸ್ಯರಿದ್ದಾರೆಂದು ಭಾವಿಸಿದರೆ. (ಮತದಾನದ ಹಕ್ಕುಳ್ಳ ಸದಸ್ಯರು)

| | | |
|---|---|---|
| 1) | ಸಾಮಾನ್ಯ ವರ್ಗ | : 100 |
| 2) | ಮಹಿಳಾ | : 50 |
| 3) | ಹಿಂದುಳಿದ ವರ್ಗ | : 25 |
| 4) | ಪರಿಶಿಷ್ಟ ಜಾತಿ | : 25 |
| 5) | ಪರಿಶಿಷ್ಟ ಪಂಗಡ | : 25 |

ಮತದಾನದ ಹಕ್ಕುಳ್ಳ ಸದಸ್ಯರು ಒಂದು ಮತ ಮಾತ್ರ ಚಲಾಯಿಸತಕ್ಕದ್ದು ಎಂದರೆ. ಸಾಮಾನ್ಯ ವರ್ಗದ ಏಳು ಮಂಡಳಿ ಸದಸ್ಯರನ್ನು ಆಯ್ಕೆ ಮಾಡುವಾಗ 100 ಸದಸ್ಯರು ಒಂದು ಮತ ಎಂದು ಚಲಾಯಿಸಿದರೆ, ಮತ್ತು ಆ ವರ್ಗದಿಂದ 10 ವ್ಯಕ್ತಿಗಳು ಸ್ಪರ್ಧಿಸಿದ್ದರೆ, ನೂರು ಸದಸ್ಯರು ಮತ ಚಲಾಯಿಸಿದಾಗ ಒಬ್ಬನಿಗೆ 20, 15, 14, 13, 10, 9, 8, 8, 5, 1 ಮತ ಚಲಾವಣೆಯಾಗಿದ್ದರೆ ಮೊದಲನೇ 7 ವ್ಯಕ್ತಿಗಳ ಮಂಡಳಿ ಸದಸ್ಯರಾಗುತ್ತಾರೆ. ಇದರ ಜೊತೆಗೆ ಮತ್ತೊಂದು ನೀತಿ ಅನುಸರಿಸಬೇಕಾದ್ದು ಏನೆಂದರೆ, ಸಾಮಾನ್ಯ ಸದಸ್ಯರು, ಮಹಿಳೆ, ಹಿಂದುಳಿದ ವರ್ಗ,

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಸದಸ್ಯದವರಿಗೆ ಆಯ್ಕೆಯಲ್ಲಿ ಏಕೆ ಭಾಗವಹಿಸಬೇಕು. ಮೀಸಲಾತಿ ನೀಡಿರುವುದು ಆ ವರ್ಗದ ಸದಸ್ಯರ ಹಿತ ಕಾಪಾಡಲು ನೀಡಿದೆ. ಆದ್ದರಿಂದ ಮಹಿಳಾ ಅರ್ಹ ಸದಸ್ಯರು 50 ಇದ್ದು 25, 15, 10 ಮತಗಳ ಚಲಾವಣೆಯಾದರೆ, ಮೊದಲು ಇಬ್ಬರು ಆಯ್ಕೆಯಾಗುತ್ತಾರೆ. ಅದೇ ರೀತಿ ಆಯ್ಕೆಯಾದಾಗ ಮಾತ್ರ ಆ ವರ್ಗದ ಸದಸ್ಯರು ಹಿತ ಕಾಪಾಡಬೇಕೆಂಬ ನೀತಿಗೆ ಪೂರಕ. ಅಂದರೆ ಪರಿಶಿಷ್ಟ ಜಾತಿ ಸದಸ್ಯರು ಅವರ ಪ್ರತಿನಿಧಿ ಒಬ್ಬರನ್ನು ಆಯ್ಕೆ ಮಾಡಬೇಕು. 25 ಅರ್ಹ ಸದಸ್ಯರನ್ನು, ಸ್ಪರ್ಧಿಸಿದವರು ಇಬ್ಬರಿದ್ದರೆ, 15, 10 ಮತ ಚಲಾವಣೆಯಾದರೆ 15 ಮತ ಪಡೆದ ವ್ಯಕ್ತಿ ಮಂಡಳಿ ಸದಸ್ಯನಾಗುತ್ತಾನೆ.

ಈಗ ಮೀಸಲಾತಿ ನೀತಿ ಚುನಾವಣೆ ನಡೆಯುವ ರೀತಿ ಎಲ್ಲಾ 13 ಸದಸ್ಯರನ್ನು ಮಂಡಳಿಗೆ ಆಯ್ಕೆ ಮಾಡಲು ಸಹಕಾರಿಯ ಪ್ರತಿಯೊಬ್ಬ ಅರ್ಹ ಸದಸ್ಯ 13 ಮತ ಚಲಾಯಿಸುತ್ತಾನೆ. ಅಂದರೆ ಸಾಮಾನ್ಯ ವರ್ಗದ (7) ಸದಸ್ಯರಿಗೆ, ಇಬ್ಬರು ಮಹಿಳಾ ಸದಸ್ಯರಿಗೆ, ಇಬ್ಬರು ಹಿಂದುಳಿದ ವರ್ಗದ ಸದಸ್ಯರಿಗೆ ಮತ್ತು ಎರಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸದಸ್ಯರಿಗೆ. ಒಬ್ಬ ಮತ ಚಲಾಯಿಸುವ ಹಕ್ಕುಳ್ಳ ಸದಸ್ಯ ಒಂದು ಮತಕ್ಕೆ ಬದಲಾಗಿ (13) ಮತ ಚಲಾಯಿಸುತ್ತಾನೆ. ಕೆಲವು ಸಂದರ್ಭದಲ್ಲಿ ಸಾಮಾನ್ಯ ಸದಸ್ಯರಿಗೆ ಪ್ರತ್ಯೇಕ ಕ್ಷೇತ್ರ ಎಂದು ಪರಿಗಣಿಸಿ, ಆ ವರ್ಗದ ಎಲ್ಲಾ ಅರ್ಹ ಸದಸ್ಯರು (7) ಮತ ಚಲಾಯಿಸುತ್ತಾರೆ ಮತ್ತು ಮಹಿಳಾ ವರ್ಗದ ಸದಸ್ಯರು ಅವರಲ್ಲಿಯೇ ಇಬ್ಬರು ಪ್ರತಿನಿಧಿ ಆಯ್ಕೆ ಮಾಡುತ್ತಾರೆ. ಅದೇ ರೀತಿ ಹಿಂದುಳಿದ ವರ್ಗದ ಸದಸ್ಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸದಸ್ಯರೂ ಸೇರಿ ಅವರ ಪ್ರತಿನಿಧಿ ಆಯ್ಕೆ ಮಾಡುತ್ತಾರೆ. ಇದು ಸಹಕಾರ ತತ್ವ ಮತ್ತು ಕಲಂ.67(2)ರಲ್ಲಿ ಸೂಚಿಸಿರು ನೀತಿಗೆ ವಿರುದ್ಧ.

1959ರ ಕಾಯಿದೆಯಲ್ಲಿ ರಚನೆಯಾಗುವ ಮಂಡಳಿ ಆಯ್ಕೆ ಸಂದರ್ಭದಲ್ಲಿ ಎಲ್ಲಾ ಅರ್ಹ ಸದಸ್ಯರು ಸೇರಿ 13 ನಿರ್ದೇಶಕರನ್ನು ಆಯ್ಕೆ ಮಾಡುತ್ತಾರೆ. ಒಬ್ಬ ಸದಸ್ಯ (1) 7 ಸಾಮಾನ್ಯ ಸದಸ್ಯ ವರ್ಗದ ಸ್ಪರ್ಧಿಗಳಿಗೆ (2) ಎರಡು ಮಹಿಳಾ ನಿರ್ದೇಶಕರ ಆಯ್ಕೆಗೆ (3) ಇಬ್ಬರು ಹಿಂದುಳಿದ ವರ್ಗದ ಸದಸ್ಯ ಆಯ್ಕೆಗೆ (4) ಒಂದು ಪರಿಶಿಷ್ಟ ಜಾತಿ ವರ್ಗದ ಸದಸ್ಯರ ಆಯ್ಕೆಗೆ ಮತ್ತು (5) ಒಂದು ಪರಿಶಿಷ್ಟ ವರ್ಗದ ಸದಸ್ಯರ ಆಯ್ಕೆಗೆ ಮತ ನೀತಿ ಆಯ್ಕೆ ಮಾಡುತ್ತಾನೆ. ಇದನ್ನು ಸಾಮಾನ್ಯ ಜ್ಞಾನದ ಆಧಾರದಲ್ಲಿ ವಿಮರ್ಷಿಸುವುದಾದರೆ, ಒಬ್ಬ ಸಾಮಾನ್ಯ ವರ್ಗದ ಅರ್ಹ ಸದಸ್ಯ ಸಾಮಾನ್ಯ ವರ್ಗದ ಸದಸ್ಯರನ್ನು ಆಯ್ಕೆ ಮಾಡುವುದು ಸಮಂಜಸ, ಆದರೆ ಅದೇ ವ್ಯಕ್ತಿ ಇಬ್ಬರು ಮಹಿಳಾ, ಇಬ್ಬರು ಹಿಂದುಳಿದ, ಒಂದು ಪರಿಶಿಷ್ಟ ಜಾತಿ ಹಾಗೂ ಮತ್ತೊಂದು ಪರಿಶಿಷ್ಟ ವರ್ಗದ ಮಂಡಳಿ ಸದಸ್ಯನ ಆಯ್ಕೆಗೆ ಮತ ಚಲಾಯಿಸುತ್ತಾನೆ. ಹಾಗಿದ್ದರೆ ಸದಸ್ಯರನ್ನು ವರ್ಗೀಕರಿಸುವ ಅವಶ್ಯಕತೆ ಇಲ್ಲ ಎಂದಾಗುತ್ತಿದೆ. ಅದಕ್ಕಾಗಿ ಅನುಸರಿಸಬೇಕಾದ ನೀತಿ ಎಂದರೆ, ಮತದಾನದಪಟ್ಟಿ ತಯಾರು ಮಾಡುವಾಗ ಪ್ರತಿಯೊಂದು ವರ್ಗದ ಅರ್ಹ ಸದಸ್ಯರ ಪಟ್ಟಿ ಮಾಡಬೇಕು. ಆ ವರ್ಗದ ಸದಸ್ಯರನ್ನು ಆಯ್ಕೆ ಮಾಡಲು, ಆ ವರ್ಗದ ಎಲ್ಲಾ ಸದಸ್ಯರು ಒಂದು ಮತವನ್ನು ಮಾತ್ರ ಚಲಾಯಿಸಬೇಕು. ಅದೇ ರೀತಿ ಪ್ರತಿ ವರ್ಗದ ಅರ್ಹ ಸದಸ್ಯ ಒಂದು ಮತವನ್ನು ಚಲಾಯಿಸಿದಾಗ ಮಾತ್ರ ಸಹಕಾರಿ ತತ್ವದ ಎರಡನೇ ತತ್ವ "ಒಬ್ಬ ಸದಸ್ಯನಿಗೆ ಒಂದು ಮತ" ಎಂಬ ಪಾಲಿಸಿದಂತಾಗುತ್ತದೆ.

"ಒಬ್ಬ ಸದಸ್ಯನಿಗೆ ಒಂದು ಮತ" ಎಂಬ ನೀತಿ ಅನುಸರಿಸಿದರೆ ಸಹಕಾರಿ ಮುಖಂಡರಿಗೆ ಆಗುವ ಅನುಕೂಲಗಳೇನು. ಸಂಯುಕ್ತ ಸಹಕಾರಿಯ ಮೈಸೂರು ವಿಭಾಗದ ಸಹಕಾರಿಗಳಿಂದ ಆಯ್ಕೆಯಾಗಬೇಕಾದ ಪ್ರತಿನಿಧಿಗಳ ಸಂಖ್ಯೆಯನ್ನು ಎರಡು ಸ್ಥಾನಕ್ಕೆ ನಿಗದಿ ಪಡಿಸಿದೆ. ಮೈಸೂರು ವಿಭಾಗದಲ್ಲಿ ಎಂಟು ಜಿಲ್ಲೆಗಳಿದ್ದ ಸಹಕಾರಿ ಸಂಖ್ಯೆ 100 ಇದ್ದರೆ, ಸ್ಪರ್ಧಿಸುವ ವ್ಯಕ್ತಿಗಳು 5 ಇದ್ದರೆ, ಆಯ್ಕೆಗೆ ಬೇಕಾದ ಮತಗಳು ಗರಿಷ್ಠ 51 ಮತ್ತು ಕನಿಷ್ಟ 1 ರಿಂದ 49 ಸಹಕಾರಿಗಳು ಮತ ನೀಡಬೇಕು. ಆ ಸಂದರ್ಭದಲ್ಲಿ ಸ್ಪರ್ಧಿಗಳು ಸಂಪರ್ಕಿಸಬೇಕಾದ ಸದಸ್ಯರು ಎರಡು ಮೂರು ಜಿಲ್ಲೆಯಲ್ಲಿನ ಸಹಕಾರಿಗಳನ್ನು ಸಂಪರ್ಕಿಸಿದರೆ ಆಯ್ಕೆಯಾಗಬಹುದು.

1959ರ ಕಾಯಿದೆಯಲ್ಲಿನಲ್ಲಿ ನೋಂದಾಯಿಸಿದ ರಾಜ್ಯ ಮಟ್ಟದ ಎರಡು ಮಹಾಮಂಡಳಗಳು ಸದಸ್ಯರ ಸಂಖ್ಯೆ ಕಡಿಮೆ ಇರುವುದರಿಂದ ಒಬ್ಬ ಸದಸ್ಯನಿಗೆ ಒಂದು ಮತ ಎಂಬ ನೀತಿ ಜಾರಿಯಲ್ಲಿದೆ. ಉದಾಹರಣೆಗೆ ಹಾಲು ಮಹಾಮಂಡಳದ ಸದಸ್ಯರ ಸಂಖ್ಯೆ 13 ಹಾಲು ಒಕ್ಕೂಟಗಳು. ಒಂದು ಒಕ್ಕೂಟದಿಂದ ಒಬ್ಬನ ಆಯ್ಕೆ ಇರುವುದರಿಂದ, ಪ್ರತಿನಿಧಿಯಾಗಿ ಬಂದ ಒಕ್ಕೂಟದ ಸದಸ್ಯ ತನಗೇ ತನ್ನ ಮತ ಚಲಾಯಿಸಿ ಆಯ್ಕೆಯಾಗುತ್ತಾನೆ. ಅದೇ ರೀತಿ ರಾಜ್ಯ ಅಪೆಕ್ಸ್ ಬ್ಯಾಂಕಿನಲ್ಲಿ 19 ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಿದ್ದು 19 ಪ್ರತಿನಿಧಿಗಳು ಅವರಲ್ಲಿಯೇ ಒಂದು ಮತ ಚಲಾಯಿಸಿ ಆಯ್ಕೆಯಾಗುತ್ತಾರೆ. ಅಂದರೆ ಒಬ್ಬ ಸದಸ್ಯನಿಗೆ ಒಂದು ಮತ ಎಂಬ ನೀತಿ ಈಗ ಜಾರಿಯಲ್ಲಿದೆ.

ಇದರ ಜೊತೆಗೆ ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಜಿಲ್ಲಾ ಸಹಕಾರ ಬ್ಯಾಂಕ್‌ಗಳಲ್ಲಿ ಸಾಮಾನ್ಯವಾಗಿ ತಾಲ್ಲೂಕಿಗೆ ಒಬ್ಬ ಪ್ರತಿನಿಧಿ ಆಯ್ಕೆಯಾಗುತ್ತಾನೆ (ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ) ಅಂತಹ ಸಂದರ್ಭದಲ್ಲಿ ಸ್ಪರ್ಧಿಸಿದ ವ್ಯಕ್ತಿಗಳು ಸಂಪರ್ಕಿಸಬೇಕಾದ ಸದಸ್ಯರ ಸಂಖ್ಯೆ 10 ರಿಂದ 20 ಕೃಷಿ ಪತ್ತಿನ ಸಹಕಾರಿ ಸಂಘಗಳು. ಅದೇ ರೀತಿ ಹಾಲು ಉತ್ಪಾದಕ ಸಹಕಾರಿ ಸಂಘಗಳು ತಾಲ್ಲೂಕಿಗೆ ಒಬ್ಬರಂತೆ ಆಯ್ಕೆಯಾಗಬೇಕಾದರೆ ಸ್ಪರ್ಧಿಸುವ ವ್ಯಕ್ತಿಗಳು ಸಂಪರ್ಕಿಸಬೇಕಾದ ಸದಸ್ಯ ಸಂಘಗಳ ಸಂಖ್ಯೆ 20–25. ಕೆಲವು ಜಿಲ್ಲಾ ಬ್ಯಾಂಕಿನ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘಗಳ ಕ್ಷೇತ್ರದಿಂದ ಅರ್ಹ ಮತದಾರರ ಸಂಖ್ಯೆ 2–3 ಇರುತ್ತದೆ. ಅಂತಹ ಸಂದರ್ಭದಲ್ಲಿ 2 ಮತಗಳಿಸಿದ ಸ್ಪರ್ಧಿ ಆಯ್ಕೆಯಾಗುತ್ತಾನೆ.

ಇದೆಲ್ಲದರ ಪರಿಣಾಮ ಮಂಡಳಿ ರಚನೆಯಲ್ಲಿ ಸ್ಪರ್ಧಿಗಳಿಗೆ ಖರ್ಚ ವೆಚ್ಚಗಳನ್ನು ನಿಯಂತ್ರಿಸಲು ಸಾಧ್ಯ. ಜಿಲ್ಲಾ ಬ್ಯಾಂಕ್ ಮತ್ತು ಹಾಲು ಒಕ್ಕೂಟಗಳಲ್ಲಿ ನಿರ್ದೇಶಕರಾಗಲು ಒಂದು ಮತಕ್ಕೆ ರೂ.25,000/– ದಿಂದ 50,000/– ಸಾವಿರ ಬಂಡವಾಳ ಹೂಡಿ ಖರ್ಚು ಮಾಡುವ ಸಂದರ್ಭದಲ್ಲಿ ಸ್ಪರ್ಧಿಗಳಿಗೆ ಉಳಿತಾಯ ಆಗುವ ಸಂಭವವಿರುತ್ತದೆ.. ಇತ್ತೀಚಿನ ವರ್ಷಗಳಲ್ಲಿ ಹಣ ನೀಡದೆ ಚುನಾವಣೆ ಗೆಲ್ಲುವ ಪ್ರಯತ್ನಗಳು ಫಲ ನೀಡುತ್ತಿಲ್ಲವೆಂದು ಸಾರ್ವಜನಿಕ ತಿಳುವಳಿಕೆ.

ನಮ್ಮ ರಾಜ್ಯದಲ್ಲಿ ಹಲವಾರು ಸಹಕಾರಿಗಳು/ಸಂಘಗಳಲ್ಲಿ ಸದಸ್ಯತ್ವ 25000 ಸದಸ್ಯರಿರುತ್ತಾರೆ. ಕೆಲವು ಸಂಸ್ಥೆಗಳಲ್ಲಿ ಉದಾಹರಣೆಗೆ ಮಂಗಳೂರಿನ ಕ್ಯಾಂಪ್ಕೋ ಸಹಕಾರಿ ಸಂಸ್ಥೆಯಲ್ಲಿ ಸದಸ್ಯರ ಸಂಖ್ಯೆ 1.50 ಲಕ್ಷ (ಈಗ ಹೆಚ್ಚಾಗಿರಬಹುದು.) ಅಂತ ಸಂಸ್ಥೆಗಳಲ್ಲಿ ಮತಯಾಚನೆ ಮಾಡಲು ಸ್ಪರ್ಧಿಗಳಿಗೆ ಅನುಕೂಲವಾಗಲು ಒಬ್ಬ ಸದಸ್ಯನಿಗೆ ಒಂದು ಮತ ಎಂಬ ನೀತಿ ಅಪದ್ಬಾಂಧವನಾಗುತ್ತಾನೆ ಎಂಬುದನ್ನು ಸಹಕಾರಿಗಳು ಮನಗಾಣಬೇಕು.

ಸಂಯುಕ್ತ ಸಹಕಾರಿ ಈ ನೀತಿ ಅಂದರೆ "ಒಬ್ಬ ಸದಸ್ಯನಿಗೆ ಒಂದು ಮತ" ಎಂಬ ನೀತಿಯನ್ನು ತನ್ನ ಮುಖವಾಣಿ ಮುಖಾಂತರ ಪ್ರಚಾರ ಮಾಡಿ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಜಾರಿ ಮಾಡಲು ಕ್ರಮ ಜರುಗಿಸುವುದು ಸೂಕ್ತ. ಏಕೆಂದರೆ, ಅಂತರ ರಾಷ್ಟ್ರೀಯ ಸಹಕಾರ ತತ್ವಗಳಲ್ಲಿ ಒಂದಾಗಿರುವ "ಒಬ್ಬ ಸದಸ್ಯನಿಗೆ ಒಂದು ಮತ" ಎಂದು ಜಾರಿ ಮಾಡಿಸಿದ ಶ್ರೇಯಸ್ಸು ಸಂಯುಕ್ತ ಸಹಕಾರಿಗೆ ಸಲ್ಲಬೇಕು.

ಈ ನೀತಿ ಸೌಹಾರ್ದ ಕಾಯಿದೆ ಕಲಂ.24ರಲ್ಲಿ ರಚನೆಯಾಗುವ ಮಂಡಳಿ ಮತ್ತು 1959 ಕಾಯಿದೆ ಕಲಂ.28ಎ ಅಡಿ ರಚನೆಯಾಗುವ ಮಂಡಳಿಗೆ ಅನ್ವಯಿಸಿದರೆ, ಇದು ಸಹಕಾರಿ ತತ್ವ ಅನುಸರಿಸಿದಂತೆ. ಕರ್ನಾಟಕದಲ್ಲಿ ಈ ನೀತಿ ರೂಪಿಸಿದರೆ, ರಾಷ್ಟ್ರದ ಎಲ್ಲಾ ರಾಜ್ಯಗಳ ಮತ್ತು ಬಹುರಾಜ್ಯ ಸಹಕಾರಿಗಳ ಚುನಾವಣೆಯಲ್ಲಿ ಅಳವಡಿಸಿಕೊಳ್ಳಲು, ಕರ್ನಾಟಕ ರಾಜ್ಯ ಮಾದರಿಯಾಗುತ್ತದೆ. ಅಂದರೆ ಸೌಹಾರ್ದ ಕಾಯಿದೆ **ಕಲಂ.53 ರಲ್ಲಿ ರಾಷ್ಟ್ರಕ್ಕೆ ಮಾದರಿ "ಸಂಯುಕ್ತ ಸಹಕಾರಿ" ರಚನೆ ಮಾಡಿ, ಚುನಾಯಿತ ಪ್ರತಿನಿಧಿಗಳೇ ಶಾಸನಾತ್ಮಕ (ನಿಬಂಧಕರ) ಅಧಿಕಾರಗಳನ್ನು ಚಲಾಯಿಸಲು ನೀಡಿದ ಅವಕಾಶ ಸಾರ್ಥಕತೆಗಳಿಸುತ್ತದೆ.**

ಇದರ ನೀತಿ ಎಂದರೆ, ಮೀಸಲಾತಿ ನೀಡಿದ ವರ್ಗದ ಸದಸ್ಯರೇ ಆ ವರ್ಗದ ಪ್ರತಿನಿಧಿಗೆ ಮತ ಚಲಾಯಿಸಿ, ಆಯ್ಕೆ ಮಾಡಬೇಕು. ಇದು ಮೀಸಲಾತಿ ನೀಡಿದ ಉದ್ದೇಶ ಸ್ವಾರ್ಥವಾಗುತ್ತದೆ. ಈಗ ಚುನಾವಣೆ ನಡೆಯುತ್ತಿರುವುದು ಈ ನೀತಿಗೆ ವಿರುದ್ಧ. ಇದಕ್ಕೆ ವಿರುದ್ಧವಾಗಿ ವಿಧಾನ ಸಭೆ, ವಿಧಾನ ಪರಿಶತ್ತು, ಲೋಕ ಸಭೆ ಮತ್ತು ರಾಜ್ಯ ಸಭೆ ಮತ್ತು ಪಂಚಾಯತ್ ರಾಜ್ಯಗಳಲ್ಲಿ ಮತ ಚಲಾವಣೆ ಮಾಡುವಾಗ ಎಲ್ಲಾ ವರ್ಗದ ಸದಸ್ಯರು ಮತ ಹಾಕುತ್ತಾರೆ. ಆದ್ದರಿಂದ ಅದೇ ನೀತಿ ಅನುಸರಿಸಬೇಕೆಂದು ವಿವರಣೆ ನೀಡುತ್ತಾರೆ. ಆದರೆ ಅದು ಸಂವಿಧಾನಾತ್ಮಕ ಹುದ್ದೆಗಳಿಗೆ ಆಯ್ಕೆ ಮತ್ತು ಅದರಲ್ಲಿ ಭಾರತದ ಪ್ರತಿಯಬ್ಬ ಪ್ರಜೆಯು ಮತ ಚಲಾಯಿಸುತ್ತಾನೆ. ಆದರೆ ಸಹಕಾರಿಯಲ್ಲಿ ಸದಸ್ಯರು ಮಾತ್ರ ಮತ ಚಲಾಯಿಸುತ್ತಾರೆ. ಮತ್ತು ಮಂಡಳಿ ಮೀಸಲಾತಿ ಅನ್ವಯವಾಗುವುದು ವ್ಯಕ್ತಿಗತ ಸದಸ್ಯರಿರುವ ಪ್ರಾಥಮಿಕ ಸಹಕಾರಿಗಳಲ್ಲಿ ಮಾತ್ರ. ಉಳಿದ ಸಹಕಾರಿಗಳಲ್ಲಿ ಮೀಸಲಾತಿ ಇಲ್ಲ. ಸಹಕಾರ ಸಂಸ್ಥೆಗಳಲ್ಲಿ ಮತದಾನದ ಹಕ್ಕು ಭಾರತದ ಪ್ರಜೆಯಾಗಿ ಅಲ್ಲ. ಅದನ್ನು ಒಂದು ಒಪ್ಪಂದದ ಆಧಾರದ ಮೇಲೆ (ಕರಾರಿನಂತೆ) ಸದಸ್ಯತ್ವ ಪಡೆದಾಗ ಅದನ್ನು ಸಂವಿಧಾನಾತ್ಮಕ ಹಕ್ಕು ಎಂದು ತಿಳಿಯತಕ್ಕದ್ದಲ್ಲ.

ವೃತ್ತಿಪರ ನಿರ್ದೇಶಕರು : 97ನೇ ಸಂವಿಧಾನ ತಿದ್ದುಪಡಿಯಲ್ಲಿ ಪ್ರತಿಯೊಂದು ಸಹಕಾರಿ, ಇಬ್ಬರಿಗೆ ಹೆಚ್ಚಿಲ್ಲದಂತೆ ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ಆಡಳಿತ ನಿರ್ವಹಣೆಗೆ ಸಂಬಂಧಪಟ್ಟಂತೆ ಸಹಮತದಿಂದ ಆಯ್ಕೆ ಮಾಡಲು ಅವಕಾಶ ಕಲ್ಪಿಸಿದ್ದರೂ, ಪ್ರತಿಯೊಂದು ಸಹಕಾರಿ ಇದನ್ನು ಪಾಲಿಸುತ್ತಿಲ್ಲ ಮತ್ತು ಇದನ್ನು ಕಾಯಿದೆ ಕಲಂ.24ರಲ್ಲಿ ಮೀಸಲಿಡಲಾಗಿರುವುದರಿಂದ ಪ್ರತಿಯೊಂದು ಸಹಕಾರಿ ತನ್ನ ಮಂಡಳಿಯ ಇಬ್ಬರನ್ನು ಸಹಮತದಿಂದ ವೃತ್ತಿಪರ ನಿರ್ದೇಶಕರನ್ನು ಸೇರಿಸಿಕ್ಕೊಳ್ಳಬೇಕು. ಇದರ ಉದ್ದೇಶ ಚುನಾಯಿತ ಪ್ರತಿನಿಧಿಗಳು, ಸಹಕಾರಿ ನಿರ್ವಹಿಸುವ ಎಲ್ಲಾ ಕೆಲಸದಲ್ಲಿ ಪರಿಣಿತಿ ಹೊಂದಿರಬೇಕಿಲ್ಲ. ಅದಕ್ಕಾಗಿ, ಪರಿಣಿತರನ್ನು ಸೇರಿಸಿಕೊಂಡರೆ, ಅವರು ಮಂಡಳಿ ಕಾರ್ಯ ನಿರ್ವಹಣೆಯಲ್ಲಿ ಮಾರ್ಗದರ್ಶನ ನೀಡುತ್ತಾರೆ. ಈ ಉದ್ದೇಶಕ್ಕಾಗಿ ಪ್ರತಿಯೊಂದು ಸಹಕಾರಿ, ವೃತ್ತಿಪರ ನಿರ್ದೇಶಕರು ಸೇರಿಸಿಕೊಂಡ ಬಗ್ಗೆ ಸಂಯುಕ್ತ ಸಹಕಾರಿ ದೃಢೀಕರಿಸಿಕ್ಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯದ, ರಾಜ್ಯ ಮಟ್ಟದ 2–3 ಮಹಾ ಮಂಡಳಗಳು, ವೃತ್ತಿಪರ ನಿರ್ದೇಶಕರನ್ನು ಸೇರಿಸಿಕ್ಕೊಳ್ಳುವಾಗ ಮಂಡಳಿ ನಿರ್ದೇಶಕನಾಗಲು ಸಾಧ್ಯವಾಗದ, ಸ್ಪರ್ಧಿಸಲು ಅರ್ಹತೆ ಇಲ್ಲದ ಅಥವಾ ಮಂಡಳಿ ರಚನೆಯಲ್ಲಿ ಹೊಂದಾಣಿಕೆ ಮಾಡಿಕ್ಕೊಳ್ಳಲಾಗದಿದ್ದರೆ, ಅಂತಹ ವ್ಯಕ್ತಿಗಳನ್ನು ಸಹಮತದಿಂದ ವೃತ್ತಿಪರ ನಿರ್ದೇಶಕರೆಂದು ಸೇರಿಸಿಕ್ಕೊಳ್ಳುತ್ತಿದ್ದಾರೆ. ಇದು ಸಂವಿಧಾನ ಮತ್ತು ಕಾಯಿದೆಯಲ್ಲಿ ನಿಗದಿ ಪಡಿಸಿದ, ಅರ್ಹತೆಯಿರುವ ವ್ಯಕ್ತಿಗಳಲ್ಲದಿದ್ದರೂ, ಅವರು ವ್ಯಕ್ತಿಪರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## 7 ಸಹಕಾರಿ ತತ್ವಗಳು

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ
3. ಆರ್ಥಿಕ ಚಟುವಟಿಕೆಗಳ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ
6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7. ಸಾಮಾಜಿಕ ಕಳಕಳಿ

## ಸಹಕಾರಿ ಧ್ವಜದಲ್ಲಿನ 7 ಬಣ್ಣಗಳು

- ಸಹಕಾರ ಬೇಸಾಯ
- ಸಹಕಾರಿ ಉದ್ದಿಮೆ
- ಸಹಕಾರಿ ಮಾರಾಟ
- ಸಹಕಾರಿ ಪತ್ತು ಮತ್ತು ಹಣಕಾಸು
- ಸಹಕಾರಿ ಶಿಕ್ಷಣ ಮತ್ತು ಪ್ರಚಾರ
- ಮಾನವನ ಇತರೆ ಸಹಕಾರಿ ಚಟುವಟಿಕೆಗಳು
- ಸಹಕಾರಿ ಆರೋಗ್ಯ

## ಸಹಕಾರ ಗೀತೆ

ಸಮಾಜ ಹೈ ಆರಾಧ್ಯ ಹಮಾರಾ, ಸೇವಾ ಹೈ ಆರಾಧನಾ !
ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!
ಸಹಕಾರಿತಾ ಕೀ ಸಾಧನಾ !!ಪ!!

ಸಮಾಜ ಸೆ ಹೀ ಸಂಸ್ಕೃತಿ ಕೀ ಯಹ್, ಶ್ರೇಷ್ಠ ಧರೋಹರ್ ಹಮೆ ಮಿಲೀ !
ಧನ ಸಾಮರ್ಥ್ಯ, ಜ್ಞಾನ ಕೀ ಪೂಂಜೀ, ಸಮಾಜ ಸೆ ಹೀ ಹಮೆ ಮಿಲೀ !
ಯಹ ಸಮಾಜ್ ಋಣ್ ಪೂರ್ಣ್ ಚುಕಾನೆ, ಜೊ ಪಾಯಾ ಸೊ ಬಾಂಟನಾ !!
ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!
ಸಹಕಾರಿತಾ ಕೀ ಸಾಧನಾ !!ಪ!!

ಸಮಾನ್ ಅವಸರ್ ಮಿಲೆ ಸಭೀ ಕೋ, ಕೊಯಿಭೀ ನ ಉಪೇಕ್ಷಿತ್ ಹೋ !
ಸಭೀ ಸ್ವಸ್ಥ ಶಿಕ್ಷಿತ್, ಸಂಸ್ಕಾರಿತ್, ಸಮರ್ಥ ಔರ್ ಸುರಕ್ಷಿತ್ ಹೋ !
ದಯಾ ನಹೀ, ಉಪಕಾರ ನಹೀ ಯಹ್, ಅಪನೆಪನ್ ಕಿ ಭಾವನಾ !!
ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!
ಸಹಕಾರಿತಾ ಕೀ ಸಾಧನಾ !!ಪ!!

ಭಾಷಾ, ಪ್ರಾಂತ್, ಜಾತಿ ಜೊ ಭೀ ಹೋ, ಭಾರತ ಮಾ ಕೆ ಪುತ್ರ ಸಭೀ !
ಗ್ರಾಮ್, ನಗರ್, ವನವಾಸಿ ಗಿರಿಜನ್, ಅಪನೆ ತೊ ಹೈ ಬಂಧು ಸಭೀ !
ಜನತಾ ಕೆ ಸುಖ ಮೆ ಹೀ ತೊ ಹೈ, ಸಮಾಜ–ಸುಖ್ ಕೀ ಧಾರಣಾ !!
ಭಾರತ ಮಾತಾ ಕೆ ವೈಭವ ಹಿತ, ಸಹಕಾರಿತಾ ಕೀ ಸಾಧನಾ !!
ಸಹಕಾರಿತಾ ಕೀ ಸಾಧನಾ !!ಪ!!

ಶಾಂತಿ ಮಂತ್ರ

ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾ !
ಸರ್ವೇ ಭದ್ರಾಣಿ ಪಶ್ಯಂತು, ಮಾ ಕಶ್ಚಿತ್ ದುಃಖಭಾಗ್ ಭವೆತು !!


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560055, ದೂ : 080-23378375-80, ವೆಬ್ ತಾಣ : www.Souharda.coop